
ದೇಸಿ ದರ್ಶನ ಮಾಲಿಕೆ – ೧

ಕರ್ನಾಟಕ ಸರ್ಕಾರ

ತಿಂತಿಣಿ ಮೌನೇಶ್ವರರ ವಚನಗಳು

(ತಾತ್ಪರ್ಯ ಸಹಿತ)



ಸಂಪಾದಕರು
ಡಾ. ವೀರೇಶ ಬಡಿಗೇರ

ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ದೇಸಿ ದರ್ಶನ ಮಾಲೆ-೧

ತಿಂತಿಣಿ
ಮೌನೇಶ್ವರರ ವಚನಗಳು

(ತಾತ್ಪರ್ಯ ಸಹಿತ)

ಪ್ರಧಾನ ಸಂಪಾದಕರು
ಡಾ. ಬಂಜಗೆರೆ ಜಯಪ್ರಕಾಶ

ಸಂಪಾದಕರು
ಡಾ. ವೀರೇಶ ಬಡಿಗೇರ

ಸಂಪಾದಕ ಮಂಡಳಿ
ಡಾ. ಜಿ. ಜ್ಞಾನಾನಂದ
ಡಾ. ಶಿಲಾಕಾಂತ ಪತ್ತಾರ
ಡಾ. ವಿರೂಪಾಕ್ಷ ಬಡಿಗೇರ
ಶ್ರೀ ವೈ.ಎಮ್. ಬಡಿಗೇರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 2

THINTHINI MOUNESWARARA VACHANGALAU Edited by **Dr. Veeresh Badiger,** Professor of Manscriptology, Kannada University, Hampi, Vidyaranaya 583 276, Hosapet Taluk, Bellary Dist. Published by : **Sri Mahadevaiah,** Administrative Officer, Kannada Pustaka Pradikara, Kannada Bhavana, Bengaluru 560 001.

First Impression : 2016
Page : 62+418
Price : 170/-
Copies : 1000

ತಿಂತಿಣಿ ಮೌನೇಶ್ವರರ ವಚನಗಳು
(ತಾತ್ಪರ್ಯ ಸಹಿತ)

ಗ್ರಂಥ ಸ್ವಾಮ್ಯ	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಕರಡು ತಿದ್ದಿದವರು	ಸಂಪಾದಕರು
ಮೊದಲ ಮುದ್ರಣ	೨೦೧೬
ಪುಟಗಳು	೬೨ + ೪೧೮
ಬೆಲೆ	ರೂ. ೧೭೦/-
ಪ್ರತಿಗಳು	೧೦೦೦
ಪ್ರಕಾಶಕರು	ಮಹದೇವಯ್ಯ, ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ಮುದ್ರಣ	ವಾಗರ್ಥ, ಎನ್. ಆರ್. ಕಾಲೋನಿ, ಬೆಂಗಳೂರು – ೧೯
ಮುಖಪುಟ ವಿನ್ಯಾಸ	: ಮನು ಪ್ರಿಂಟರ್ಸ್, ಗೋಪಾಲ ಮನ್ಯಾಚಾರ

ಮಾಲಿಕೆ ಸಂಪಾದಕರು
ಶ್ರೀ ಸ. ರಘುನಾಥ

ಸಂಚಾಲಕರು
ಶ್ರೀ ಮಹದೇವಯ್ಯ
ಆಡಳಿತಾಧಿಕಾರಿಗಳು

ಸಂಪಾದಕ ಸಲಹಾ ಮಂಡಳಿ
ಶ್ರೀ ಲಕ್ಷ್ಮೀಪತಿ ಕೋಲಾರ
ಡಾ. ಸಿ.ಎಸ್. ರಘುಪತಿ
ಶ್ರೀ ಅರುಣ ಜೋಳದಕೂಡ್ಲಗಿ

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತಕೋದ್ಯಮದ ಅಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಸರ್ಕಾರದ ಅಂಗಸಂಸ್ಥೆ. ಕರ್ನಾಟಕ ಸರ್ಕಾರ ಕನ್ನಡ ಭಾಷೆ, ಸಂಸ್ಕೃತಿಯ ಏಳಿಗೆಗೆ ಹಲವಾರು ಅಕಾಡೆಮಿ, ಪ್ರಾಧಿಕಾರಗಳನ್ನು ರಚಿಸಿ, ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದೆ. ಈ ಸಂಸ್ಥೆಗಳಷ್ಟೇ ಅಲ್ಲದೆ ಕರ್ನಾಟಕದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯಗಳೂ ಸಹ ಕನ್ನಡದಲ್ಲಿ ಜ್ಞಾನ ಪ್ರಸರಣ ಕಾರ್ಯದಲ್ಲಿ ನಿರಂತರವಾಗಿ ತೊಡಗಿದ್ದು, ಸಾಹಿತ್ಯ ವಿಮರ್ಶೆ, ಸಂಸ್ಕೃತಿ, ವಿಜ್ಞಾನ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಅಮೂಲ್ಯ ಕೃತಿಗಳನ್ನು ಪ್ರಕಟಿಸಿ, ಸುಲಭ ದರದಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಕಾರ್ಯವನ್ನು ಕೈಗೊಂಡಿವೆ.

ಕನ್ನಡದ ಲೇಖಕರು, ಪ್ರಕಾಶಕರು ಹಾಗೂ ಓದುಗರ ಅಭಿರುಚಿ ಉತ್ತೇಜನಕ್ಕೆ ಪೂರಕವಾಗಿ ಕಾರ್ಯಕ್ರಮ ಕೈಗೊಳ್ಳುವುದು ಪುಸ್ತಕ ಪ್ರಾಧಿಕಾರದ ಮುಖ್ಯ ಆಶಯ. ಇದಕ್ಕಾಗಿ ಯುವ ಜನತೆಯಲ್ಲಿ ವಾಚನಾಭಿರುಚಿಯನ್ನು ಬೆಳೆಸುವ ದೃಷ್ಟಿಯಿಂದ ವಿವಿಧ ಜಿಲ್ಲೆಗಳ ಪದವಿ ಕಾಲೇಜುಗಳಲ್ಲಿ 2015ರ ಸಾಲಿನಂತೆಯೇ 2016ರಲ್ಲೂ 200 ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗಗಳನ್ನು ಆರಂಭಿಸುವ ಯೋಜನೆ ಕೈಗೊಂಡಿದೆ. ಹೊಸ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಯುವ ಬರಹಗಾರರ ಚೊಚ್ಚಲ ಕೃತಿಗೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಪ್ರತಿ ವರ್ಷವೂ ನಡೆಸುತ್ತಾ ಬಂದಿದೆ. ವಿದ್ಯಾರ್ಥಿ/ ವಿದ್ಯಾರ್ಥಿನಿಯರಲ್ಲಿ ಸಾಹಿತ್ಯದ ರಸಗ್ರಹಣ ಸಾಮರ್ಥ್ಯ ಬೆಳೆಸಲು ಹಾಗೂ ಸಾಹಿತ್ಯ ಕೃತಿಗಳ ಪರಿಚಯ ಹೆಚ್ಚಿಸುವ ದೃಷ್ಟಿಯಿಂದ 'ನನ್ನ ಮೆಚ್ಚಿನ ಪುಸ್ತಕ – ವಿದ್ಯಾರ್ಥಿಗಳ ಅಭಿಪ್ರಾಯ ಮಂಡನೆ' ಸ್ಪರ್ಧೆಗಳನ್ನು ಒಟ್ಟು 200 ಕಾಲೇಜುಗಳಲ್ಲಿ ನಡೆಸಲು 2016ರಲ್ಲೂ ಕ್ರಿಯಾಯೋಜನೆ ಹಾಕಿಕೊಂಡಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕಳೆದ ಎರಡು ದಶಕದ ಅವಧಿಯಲ್ಲಿ 400ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದೆ. ಅಪರೂಪಕ್ಕೆ ಸೃಜನಾತ್ಮಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿರುವುದಿದ್ದರೂ, ಶಾಸ್ತ್ರ, ವೈಚಾರಿಕತೆಗೆ ಸಂಬಂಧಿಸಿದಂತಹ ಕೃತಿಗಳೇ ಹೆಚ್ಚು ಪ್ರಕಾಶನಗೊಂಡಿವೆ ಎನ್ನಬಹುದು. ಈ ರೀತಿ ಪ್ರಕಟಣೆಗಳ ಅಂಗವಾಗಿ 16-17ನೇ ಶತಮಾನದಲ್ಲಿ ಬಾಳಿ ಬದುಕಿದ ಸಂತಶ್ರೇಷ್ಠ ತಿಂತಿಣಿ ಮೌನೇಶ್ವರರ ವಚನಗಳ ಸಂಪುಟವನ್ನು ಪ್ರಕಟಿಸಲಾಗುತ್ತಿದೆ. ವಚನಕಾರರು, ಹರಿದಾಸರು, ಕನ್ನಡದ ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಭದ್ರಪಡಿಸಿರುವಂತೆಯೇ 16-17ನೇ ಶತಮಾನದಲ್ಲಿ ಬಂದ ಸಂತರು, ಅವಧೂತರು, ಆರೂಢರು, ಸೂಫಿ ಪಂಥದವರು ಜನಸಮುದಾಯಗಳ ಚೈತನ್ಯವನ್ನು ಬಲಗೊಳಿಸಿದವರು.

ಅಧಿಕಾರಸ್ಥರ, ಜಾತಿ ಶ್ರೇಣೀಕರಣವಾದಿಗಳ ಅಹಂಕಾರದೆದಿರು ಗ್ರಾಮೀಣ ಕೆಳಸ್ತರದ ಸಮುದಾಯಗಳಿಗೆ ಪ್ರಾಪಂಚಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಮನೋಬಲವನ್ನು ರೂಢಿಸಿದವರು. ಅಂತಹವರ ಸಾಲಿನಲ್ಲಿ ಪಾಂಚಾಲ ಕುಲ ಸಂಜಾತ ಮೋನಪ್ಪ ವಿಶಿಷ್ಟರು. ಏಕ ಕಾಲದಲ್ಲಿ ಅವರ್ಣೀಯ ಜನಪದರಿಂದ ಹಾಗೂ ಸೂಫಿ ಪಂಥಾನುಯಾಯಿ ಮುಸ್ಲಿಂರಿಂದ ಪೂಜೆಗೊಳ್ಳುತ್ತಿರುವ ಮಹಾತ್ಮ. ಈವರೆಗೆ ಒಂದು ಕಡೆ ಕ್ರೋಢೀಕೃತವಾಗದೆ ಬೇರೆ ಬೇರೆ ಸಂಕಲನಗಳಲ್ಲಿ, ಭಕ್ತಾನುಯಾಯಿಗಳ ಸ್ಮೃತಿ ಸಂಪುಟಗಳಲ್ಲಿ ಉಳಿದಿದ್ದ ಮೌನೇಶ್ವರ ವಚನಗಳನ್ನು ವಿದ್ವಾಂಸರಾದ ಡಾ. ವೀರೇಶ ಬಡಿಗೇರ ಸಂಪಾದನೆ ಮಾಡಿಕೊಟ್ಟಿದ್ದಾರೆ. ಅವರಿಗೆ ಹಾಗೂ ಸಂಪಾದಕ ಸಲಹಾ ಮಂಡಳಿಯ ಎಲ್ಲ ಸದಸ್ಯರಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಾನು ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ತಾತ್ವಿಕ ದರ್ಶನಗಳ ಆಸಕ್ತರಿಂದ, ಸಂಸ್ಕೃತಿ ಚಿಂತಕರಿಂದ, ಮೋನಪ್ಪನ ಭಕ್ತಗಣದಿಂದ ಈ ವಚನ ಸಂಪುಟವು ಆದರಾಭಿಮಾನಗಳ ಸ್ವಾಗತ ಪಡೆಯುತ್ತದೆ ಎಂದು ಆಶಿಸುತ್ತಿದ್ದೇನೆ.

ಡಾ. ಬಂಜಗೆರೆ ಜಯಪ್ರಕಾಶ
ಅಧ್ಯಕ್ಷರು

ಪ್ರಸ್ತಾವನೆ

ಸಗರನಾಡು ಎಂದು ಕರೆಸಿಕೊಳ್ಳುತ್ತಿದ್ದ(ದೋಅಬ್)ತಿಂತಿಣಿ ಪ್ರದೇಶವು ಮೌನೇಶ್ವರರು ಹುಟ್ಟಿ ಬರುವ ಹೊತ್ತಿಗೆ ಸೇವುಣರು, ದೆಹಲಿ ಸುಲ್ತಾನರು, ಬಹಮನಿ ಗಳು, ವಿಜಯನಗರದ ಅರಸರು, ಆದಿಲ್‌ಶಾಹಿಗಳು, ಸುರಪುರದ ನಾಯಕರು ಇವರ ರಾಜಕೀಯ ಆಕಾಂಕ್ಷೆ, ಆಕ್ರಮಣ ಮತ್ತು ಯುದ್ಧಗಳಿಂದಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ಅಸ್ಥಿರತೆ ಉಂಟಾಗಿತ್ತು, ಅರಾಜಕತೆ ಇತ್ತು. ಇಂಥ ಸಂಕೀರ್ಣ ಸ್ಥಿತಿಯಲ್ಲಿ ಮೌನೇಶ್ವರರು ಹುಟ್ಟಿ ಬರುತ್ತಾರೆ.

ಮೌನೇಶ್ವರರ ಜನನ

ಪ್ರಕಟಿತ ಮೌನೇಶ್ವರರ ಜೀವನ ಚರಿತ್ರೆಗಳು, ಪುರಾಣಗಳು ಹಾಗೂ ತೋಂಡಿ ಸಂಪ್ರದಾಯಗಳು ಹೇಳುವಂತೆ ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ದೇವರಗೋನಾಳ ಎಂಬ ಗ್ರಾಮದಲ್ಲಿ ವಾಸವಾಗಿದ್ದ ಶೇಷಪ್ಪ ಮತ್ತು ಶೇಷಮ್ಮ ಎನ್ನುವ ಪಂಚಾಳ ಕುಲದ(ಹಾವಪ್ಪ ಮತ್ತು ಹಾವಕ್ಕ ಎಂದು ಕರೆಯಲಾಗಿದೆ) ದಂಪತಿಗಳಿಗೆ ಆದಿಲಿಂಗನ ವರಪ್ರಸಾದದ ರೂಪದಲ್ಲಿ ಸ್ವತಃ ಪರಮಾತ್ಮನೇ ಅಯೋನಿಜನಾಗಿ ಮೌನೇಶ್ವರರ ರೂಪದಲ್ಲಿ ಧರೆಗೆ ಬರುತ್ತಾನೆ.

ಪಾಂಚಾಲಗೀತಾ ವೈಭವದಲ್ಲಿ ಮೌನೇಶ್ವರರ ಜನನ ಕುರಿತು ಈ ರೀತಿ ಹೇಳಲಾಗಿದೆ.

ದೇವಲೋಕದಿಂದಾ ಆದಿಶೇಷನು ಬಂದಾ
ಶಿಶುವಾಗಿ ತಾ ಬಂದಾ ಗೋನಾಲಕೆ
ಶೀಲೆ ಶೇಷಮ್ಮನ ಬಾಲನಾಗಿ ಬಂದಾ (ಪು.೧೦; ೧೯೮೯)

ಸುಶೀಲೆ ಶೇಷಮ್ಮನ ಆರಾಧನೆಯ ಬಲದಿಂದ ಆಕೆಯ ಪುತ್ರನಾಗಿ ಮೌನೇಶ್ವರರು ಭೂಮಿಗೆ ಬಂದರೆಂಬುದು ಇಲ್ಲಿನ ತಾತ್ಪರ್ಯವಾಗಿದೆ.

ತಿಂತಿಣಿಯ ಮೌನೇಶ್ವರರ ಮಹಿಮಾ ಚರಿತೆಯಲ್ಲಿ "…. ಹಾವಕ್ಕ ಶೇಷಕ್ಕ ನೀನು ನನ್ನ ಆಭರಣ…ಅದಕ್ಕೆಂದೆ ಬ್ರಹ್ಮ ನಿನ್ನ ದೈವದಲ್ಲಿ ಸೃಷ್ಟಿ ಬೆಳೆಸುವ ಸಂತಾನ ಫಲವನ್ನಿಡುವ ಸಾಹಸ ಮಾಡಲಿಲ್ಲ….ಅದಕ್ಕಾಗಿ ನಾನೇ ನಿನ್ನ ಮಗನಾಗಿ ಭೂಮಿಗಿಳಿದು ಬರುವೆ. ಮಾಂಸ ಪಿಂಡವಾಗಿ ನಿನ್ನ ಉದರದಲ್ಲಿ ಮೂಡಿ ಬೆಳೆದು ಉಳಿದೆಲ್ಲ ಮಾನವರಂತೆ ಯೋನಿ ಮುಖದಿಂದ ಬರಲಾರದವನಾಗಿದ್ದೇನೆ. ಬ್ರಹ್ಮ ಸಂಕಲ್ಪಕ್ಕೆ ನಾನು ಹೊರತಾಗುವಂತಿಲ್ಲ. ನಾನೇ ನಿನ್ನ ಮಗುವಾಗಿ ನಾಳೆ ಉಷಾ ಕಾಲಕ್ಕೆ ಮಗ್ಗುಲಲ್ಲಿ ಮಲಗಿರುತ್ತೇನೆ…"(ಮಹಾಂತೇಶ ಶಾಸ್ತ್ರಿಗಳು ಹೆಚ್.ಟಿ., ಪು.೧೬; ೧೯೭೬) ಎಂದು ಹೇಳುತ್ತಾರೆ. "ಮೌನೇಶ್ವರರು ಜನಿಸಿದವರಲ್ಲ ಅಯೋನಿಜರು" ಎಂದು ಡಾ.ವಿರೂಪಾಕ್ಷ ಬಡಿಗೇರ ಹೇಳುತ್ತಾರೆ(ಮೌನೇಶ್ವರರ ವಚನ ಸಮೀಕ್ಷೆ, ಪು.೨೨;೧೯೮೦). ದೇವೇಂದ್ರಸ್ವಾಮಿಗಳು ರಚಿಸಿದ ಶ್ರೀ ಮೌನೇಶ್ವರ ಪುರಾಣದಲ್ಲಿ "……..ಭೋಗಗರ್ಭಗಳಿಲ್ಲದಾಗಿಯೆ ನಾನೆ ಮಗನಾಗಿ ಸಾಗಿ ಬರುವೆನು ರಾತ್ರಿ ಸಮಯದಿ"(ಪದ್ಯ.೮೪, ಪು.೪೭;೧೯೮೮), ಚಿನ್ನದಗುಡಿ ಬೋಳಮಲ್ಲ ವಿರಚಿತ ಮೌನೇಶ್ವರ ಬಾಲಲೀಲೆಯಲ್ಲಿಯೂ ಮೌನೇಶ್ವರರು ಭೋಗಗರ್ಭಗಳಿಲ್ಲದೆ ಬಂದವರೆಂಬ ವಿವರವಿದೆ(ಪದ್ಯ.೩೮, ಪು.೧೦;೧೯೯೯) ಹದಿನೇಳನೇ ಶತಮಾನದ ಉತ್ತರಾರ್ಧದಲ್ಲಿ ಬದುಕಿದ ಕೋಳೂರು ಶಂಕರ ಕವಿಯು ೧೬೭೬ರಲ್ಲಿ ಶರಣ ಮೋನಪ್ಪಯ್ಯನ ಚಾರಿತ್ರ್ಯ ಎನ್ನುವ ಕಾವ್ಯ ಬರೆಯುತ್ತಾನೆ. ಇದರಲ್ಲಿ ಮೌನೇಶ್ವರರ ಚರಿತ್ರೆ ಅವರ ದಾಂಪತ್ಯದಿಂದಲೇ ಶುರುವಾಗುತ್ತದೆ. ಇಲ್ಲಿ ಅವರ ಜನನದ ಭಾಗವಿಲ್ಲ. ಈ ಕೃತಿಯಲ್ಲಿ ಮೌನೇಶ್ವರರು ಮಹಾ ಶಿವಭಕ್ತ ಹಾಗೂ ಗೃಹಸ್ಥರಾಗಿ ಚಿತ್ರಿತರಾಗಿದ್ದಾರೆ.

ಹೀಗೆ ಚರಿತ್ರೆ ಮತ್ತು ಪುರಾಣ ಕೃತಿಗಳು ಮೌನೇಶ್ವರರನ್ನು ಅಯೋನಿಜರೆಂದೂ ಆದಿಲಿಂಗನ ಅವತಾರವೆಂದೂ ಅಲೌಕಿಕವಾಗಿ ಚಿತ್ರಿಸುತ್ತವೆ. ಆದರೆ ಮೌನೇಶ್ವರರ ವಚನಗಳಲ್ಲಿ ಕಾಣುವ ಕೆಲವು ಆಂತರಿಕ ಸಂಗತಿಗಳು ಇದಕ್ಕಿಂತ ಭಿನ್ನವಾದ ಚರ್ಚೆಗೆ ನಮ್ಮನ್ನು ಪ್ರೇರೇಪಿಸುತ್ತವೆ.

ಇಂದ್ರಿಯ ಸೂತಕದಿಂದ ಅಂದು ನಾ ಜನಿಸಿದೆನು
ಇಂದು ನಾ ತೊಳೆಯಲೆ ಪ್ರಭುದೇವಾ, ನಾ
ಬಂದಂಥ ಭವಕೆ ಮಿತಿಯಿಲ್ಲ
ಹಂದಿಗಿಂತ ನಾನು ಕಡಿಮೆಯಯ್ಯ ಬಸವಣ್ಣ (೩)

ಎನ್ನುವ ವಚನವಾಗಲಿ 'ಉಚ್ಚಿಯ ಕುಣಿಯೊಳು ಉಚ್ಚಿ ಬಿದ್ದದ್ದು ನಾ ಬಲ್ಲೆ'(೪೩೯) 'ಮೂರು ಹೊಲೆಗಳು ಎನಗೆ ಸೇರಿಕೊಂಡಿಪ್ಪವು'(೪೫೧) 'ಸಾವು ಮರಣಗಳೊಂದೆ ನೋವು ಬ್ಯಾನಿಗಳೊಂದೆ ಜನಿತಗಳೊಂದೆ ಸಕಲರು'(೪೫೫) 'ಇಂದ್ರಿಯ ಸೂತಕವೊಂದೆ ಕಂದನ ಜನಿತ ವೊಂದೆ'(೪೬೦) 'ತುಲ್ಲಾಗ ಬಿದ್ದವರಿಗೆ ಎಲ್ಲಿಯ ಕುಲವಯ್ಯ ಬುಲ್ಲಿಯ ಮಕ್ಕಳು ಜಗವೆಲ್ಲ'(೪೮೪) 'ಜಗವು ಜನಿಸಿದ ಬಗೆಯಲ್ಲ ಬಲ್ಲಿರಿ।

ಅಘಹರನಂತೆ ಶಿವಶರಣರೆಲ್ಲರೂ ಭಗದಲ್ಲಿ ಬಂದದ್ದು ಜಗವೆಲ್ಲ ತಿಗದಲ್ಲಿ ಯಾರೂ ಬರಲಿಲ್ಲ'(೪೮೭). ಮೇಲಿನ ಈ ಎಲ್ಲ ವಚನಗಳ ಸಂಗತಿಗಳನ್ನು ಗಮನಿಸಿದರೆ ಮೌನೇಶ್ವರರಿಗಿದ್ದ ವೈಜ್ಞಾನಿಕ ಮನೋಭಾವ ಅರ್ಥವಾಗುತ್ತದೆ. ಹುಟ್ಟು ಸಹಜವಾದದ್ದೆ ಹೊರತು ಅದು ಅಸಹಜವಲ್ಲ ಎನ್ನುವ ತಾತ್ವಿಕತೆ ಇಲ್ಲಿನದು. ಮೌನೇಶ್ವರರ ಸಮಕಾಲೀನರಾದ ಸಾಲೋಟಗಿ ಶಿವಯೋಗಿಗಳು ಸಹಿತ

ಹಾಟು ಹೊಲೆಯಲಿ ಹುಟ್ಟಿ ಸತ್ಯ ಧರ್ಮದಿ ನಡೆದಾತ
ಹಾಟು ಹೊಲೆ ಹಿಂಗಿ ಮಂತ್ರ ಪಿಂಡವಾದ
ಹಾಟು ಹೊಲೆಯಲ್ಲಿ ಹುಟ್ಟಿ ಭವದ ನಡೆ ನನಗುಂಟು
ಹಾಟು ಹೊಲೆ ಅಹುದಲ್ಲವೋ ತಿಳಿದು ನೋಡಿ(ಪು.೫೮)

ಬಹಳ ಮುಖ್ಯವಾಗಿ ಮೌನೇಶ್ವರರಂತಹ ತತ್ತ್ವಜ್ಞಾನಿಗಳು ಮೂಢ ನಂಬಿಕೆಯಂಥ ಅವಾಸ್ತವವನ್ನು, ಹೆಣ್ಣಿನ ಬಗೆಗಿನ ತಾತ್ಸಾರವನ್ನು ಮೀರಿ ನಿಲ್ಲುವ ಹಾಗೂ ಪರ್ಯಾಯವನ್ನು ಕಟ್ಟುವ ಸಂಗತಿಗಳು ಕುತೂಹಲಕರವಾದಂಥವು. ಹೆಣ್ಣು ಮಾಯೆ ಎಂದು ಗಂಡಿನ ಅಧೀನವಾಗಿ ನೋಡುವ, ಅವಳ ಜೈವಿಕ ಕ್ರಿಯೆಗಳನ್ನು ಹೊಲೆಯೆಂದು ಬಗೆಯುವ ಸಾಂಪ್ರದಾಯಿಕ ಮನಸ್ಸುಗಳಿಗೆ ಹೆಣ್ಣಿನ ಜನನಕ್ರಿಯೆ ಮುಖ್ಯವಾದುದಲ್ಲ. ಯೋನಿ ಮುಖದಲ್ಲಿ ಹುಟ್ಟುವುದೇ ಕೀಳು ಎಂದು ಭಾವಿಸುವ ತಾತ್ವಿಕತೆ ಹೆಣ್ಣು ಮತ್ತು ಅವಳ ಗರ್ಭ ಹಾಗೂ ಜನನ ಕ್ರಿಯೆಗಳನ್ನು ಅವಮಾನಿಸುತ್ತದೆ. ಯೋನಿಯಲ್ಲಿ ಜನಿಸಿದರೂ ಅಯೋನಿಜ ಎನ್ನುವ ಅವಾಸ್ತವವನ್ನು ಮೌನೇಶ್ವರರಂಥವರು ಕಟುವಾಗಿ ಟೀಕಿಸುತ್ತಾರೆ.

ವಿಶ್ವಕರ್ಮ ಧರ್ಮದಲ್ಲಿ ಹೆಣ್ಣಿಗೆ ವಿಶೇಷ ಗೌರವ ದೊರೆತಿದೆ. 'ಪರಮ ಕಲ್ಯಾಣಿ ನಿನ್ನ ಅರುವಿನ ಒಡಲೊಳಗೆ ಪರಬ್ರಹ್ಮಮೂರ್ತಿ ಜನಿಸಿದ'(೩೭೪) ಸೃಷ್ಟಿಯ ಸಮಪಾಲಿನಲ್ಲಿ ಹೆಣ್ಣು ಅನಿವಾರ್ಯ. ಪುರುಷ ಮತ್ತು ಸ್ತ್ರೀತ್ವದ ಸಾಮರಸ್ಯವೇ ವಿಶ್ವಕರ್ಮ ತತ್ತ್ವವಾಗಿದೆ. ಏಕವನ್ನು ಅನೇಕ ಮಾಡುವ ದೃಷ್ಟಿಯಿಂದ ಸಂಕಲ್ಪಶಕ್ತಿಯಾಗಿ ಪ್ರಜನನರೂಪಿಯಾಗಿ ಸ್ತ್ರೀಯನ್ನು ಭಾವಿಸಲಾಗಿದೆ.

ಶಿವ ಮತ್ತು ಶಿವೆಯರ(ಶಿವ+ಶಕ್ತಿ)ಸಂಬಂಧವೇ ಸೃಷ್ಟಿಗೆ ಮೂಲಕಾರಣವೆನ್ನುವುದು ಎಲ್ಲ ಅನುಭಾವಿಗಳ ಮೂಲತತ್ತ್ವ. ಇದು ನಾಥ, ಸಿದ್ಧ, ಶೈವ, ತಾಂತ್ರಿಕ ಪಂಥಗಳಲ್ಲಿ ಕಾಣುತ್ತದೆ. 'ಅವರಿಬ್ಬರ ಶರೀರ ಬೇರೆ ಸವಿಯೊಂದೆ'(೩೭೪)ಎನ್ನುವ ಮೌನೇಶ್ವರರ ಮಾತಿನಲ್ಲಿ ಶಿವಶಕ್ತಿಯರ ಅವಿನಾಭಾವ ಸಂಬಂಧದ ನೆಲೆಯಿದೆ. ಶಕ್ತಿಯೇ ಜಗತ್ಕರ್ತಳು ಎನ್ನುವಲ್ಲಿ ಶಕ್ತಿ ಮತ್ತು ಅವಳ ಸೃಷ್ಟಿಯ ಕ್ರಿಯೆಯ ಆದ್ಯತೆಯನ್ನು ಕಾಣಬಹುದು. 'ನಿಮ್ಮಿಬ್ಬರ ಸಮರತಿಯೇ ನಮಗೆ ಅಖಂಡವೆಂಬ ನಾಮ' ಎನ್ನುವ ಬಾಚಿ ಕಾಯದ ಬಸವಯ್ಯನ ಮಾತಿನಂತೆ ಒಂದು ವಾಸ್ತವ ಇನ್ನೊಂದು ವಾಸ್ತವದಲ್ಲಿ ಲೀನವಾಗುವ ಪರಿಯಲ್ಲೇ ಭಕ್ತಿ ಕಾವ್ಯದ ಶಕ್ತಿಯಿರುವುದು. 'ಉದಕದಿಂದಾದ ವಾರಿದಿಕಲ್ಲು ಕರಗಿ

ಮುನ್ನಿನ ಉದಕವೇ ಆದಂತೆ' ಎನ್ನುವಲ್ಲಿ ರೂಪಭೇದವಿದೆಯೆ ಹೊರತು ಸ್ವರೂಪ ಭೇದವಿಲ್ಲ.

'ಏಳೇಳು ಯುಗದಲ್ಲಿ ಕಾಳಿಯ ಮಗ ನಾನು'(೯೨) ಎನ್ನುವ ಮಾತಿನಲ್ಲಿ ಕಾಳಿ ಮೌನೇಶ್ವರರ ಕುಲದೇವತೆಯಾದಂತೆ ಕರ್ತೃತ್ವ ಶಕ್ತಿಯುಳ್ಳವಳೂ ಆಗಿದ್ದಾಳೆ. ಮೌನೇಶ್ವರರ ಸೃಷ್ಟಿ ಪ್ರಜ್ಞೆಯ ಮತಿಯೂ ಕಾಳಿಯೇ. ತಾಂತ್ರಿಕ ದರ್ಶನಗಳ ಪ್ರಕಾರ ರಸ ದೇವತೆಯಾದ ಕಾಳಿ ಪ್ರಪಂಚದ ಎಲ್ಲ ವಿದ್ಯಮಾನಗಳನ್ನು ಕೇಳಿಸಿಕೊಳ್ಳುವ ಶಕ್ತಿಯನ್ನು ಪಡೆದುಕೊಂಡವಳು. ಈ ಕೇಳಿಸಿಕೊಳ್ಳುವ ಶಕ್ತಿಯೇ ಆಕೆಗೆ ಸೃಷ್ಟಿಶಕ್ತಿಯ ತಾಕತ್ತನ್ನು ನೀಡಿದೆ. ವಿಶ್ವಕರ್ಮನು ಸಂಕಲ್ಪಾತ್ಮಕನು. ಈ ಸಂಕಲ್ಪದ ಫಲವೇ ವಾಕ್. ಸಂಕಲ್ಪವು ಕ್ರಿಯಾರೂಪವನ್ನು ತಾಳಬೇಕಾದರೆ ಈ ವಾಕ್ಕು ಬೇಕೇ ಬೇಕು. ವಾಕ್ಕೆ ಶಬ್ದಬ್ರಹ್ಮ. ಸಂಕಲ್ಪವು ಕ್ರಿಯಾರೂಪವಾಗಿ ಪರಿವರ್ತಿತವಾಗಲು ವಾಕ್ಕಿನ ಸಹಾಯ ಅಗತ್ಯ. ವಾಕ್ಕಿನಿಂದಲೆ ಪ್ರಪಂಚವನ್ನು ಅರಿಯುವುದು ಮತ್ತು ಉಚ್ಚರಿಸುವುದು. ವಾಕ್ ಮಾತ್ರ ತಾಯಿ, ಕ್ರಿಯೆ ಇತ್ಯಾದಿ. ವಾಕ್ಕೇ ಆ ಸ್ತ್ರೀ ಆಗಿದ್ದಾಳೆ. ವಿಶ್ವಕರ್ಮನಿಗೂ ವಾಕ್ಕಿಗೂ ಅಭೇದತ್ವವಿದೆ. ವಿಶ್ವಕರ್ಮನು ಇಚ್ಛಾಶಕ್ತಿ ಸಂಯುತನಾದ ನಂತರವೇ ವಿರಾಟ್ ವಿಶ್ವಕರ್ಮನೆಂದು ಕರೆಸಿಕೊಳ್ಳುತ್ತಾನೆ.

'ವಿಶ್ವಕರ್ಮನ ಶಕ್ತಿಯನ್ನು ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂದು ಐದು ವಿಧವಾಗಿ ವಿಂಗಡಿಸುತ್ತಾರೆ. ವಿಶ್ವಕರ್ಮ ಸಂಜಾತ ಪಂಚ ಬ್ರಹ್ಮರನ್ನು ಕೂಡಿಕೊಂಡು ಸೃಷ್ಟಿಕಾರ್ಯವನ್ನು ಮುಂದುವರಿಸಿದವರು ಇವರು. ಇದು ಸೃಷ್ಟಿಕಾರ್ಯಕ್ಕಾಗಿ ನಿರ್ಮಾಣವಾದ ಸ್ತ್ರೀ ಶಕ್ತಿಯ ಬಗೆಯಾಗಿದೆ. ಲೌಕಿಕತೆಯನ್ನು ಮೀರಿದ ಸಂಕಲನಾನುಸಂಧಾನದಲ್ಲಿ ಪರಾಶಕ್ತಿ ಇಂಥ ಬಿಡಿ ಘಟಕಗಳಿಗೆ ಕ್ರಿಯಾತ್ಮಕ ಗುಣವನ್ನು ಸಾಧ್ಯವಾಗಿಸಿದ್ದಾಳೆ. ಮರ್ತ್ಯದ ಮಿತಿ ಈ ಬಗೆಯ ಸ್ವಾತಂತ್ರ್ಯಹೀನತೆಯಲ್ಲಿದ್ದರೆ ಪರಾಶಕ್ತಿಯ ಪ್ರತಿಭಾ ವಿಲಾಸ ಅದನ್ನು ದಾಟುವುದರಲ್ಲಿದೆ(ಉದ್ಧೃತ: ಡಾ.ವೀರೇಶ ಬಡಿಗೇರ, ಬಾಚಿ ಕಾಯಕದ ಬಸವಯ್ಯ, ವೃತ್ತಿ ಹಾಗೂ ತತ್ತ್ವ ಮೀಮಾಂಸೆ, ಪು.೫೫–೫೬;೨೦೦೩).

ಈ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ಮೌನೇಶ್ವರರು ತಾಯಿ ಗರ್ಭದಲ್ಲಿ ಹುಟ್ಟಿದ ವಿಚಾರವಾದಿಗಳೆಂಬುದು ಸರ್ವವಿದಿತ. ಇದು ವಿಶ್ವಕರ್ಮ ಸೃಷ್ಟಿತತ್ತ್ವದ ನೆಲೆಯೂ ಆಗಿದೆ.

ಲೆಂಡ ಪುಂಡರಿಗಿಕ್ಕಿ ಗಂಡನುಳ್ಳವಳಿಗಿಕ್ಕಿ
ದಂಡವನಿಕ್ಕಿ ಕೆಡಬ್ಯಾಡ ಮನಿಯೊಳಗಿರುವ
ತಂದೆ ತಾಯಿಗಳಿಗೆ ಊಣಲಿಕ್ಕಿ ಮಿಕ್ಕಿದ್ದನ್ನು
ಕೊಂಡೊಯ್ದು ಅಂಧಕರಿಗಿಕ್ಕಿ

ಇದು ಹನ್ನೊಂದು ಕೋಟಿ
ಜಂಗಮರಿಗಿಕ್ಕಿದ ಫಲವು, ಬಸವಣ್ಣ (೨೬೮)

ತಂದೆ ತಾಯಿಗಳನ್ನು ಜೋಪಾನ ಮಾಡಿದರೆ ಹನ್ನೊಂದು ಕೋಟಿ ಜಂಗಮರಿಗೆ ಅನ್ನ ಹಾಕಿದ ಪುಣ್ಯ ಲಭಿಸುವುದೆಂದಿದ್ದಾರೆ. ಮೌನೇಶ್ವರರ ತುಂಬು ಕುಟುಂಬದ ಕಾಳಜಿಯನ್ನಿಲ್ಲಿ ಕಾಣಬಹುದು.

ಅಕ್ಷರಾಭ್ಯಾಸ ಮತ್ತು ಉಪನಯನ

ಮೂರು ವರುಷಕ್ಕೆ ಮುದ್ದು ಆರು ವರುಷಕ್ಕೆ ಆಚಾರ
ಏಳನೆಯ ವರ್ಷಕ್ಕೆ ಪ್ರೌಢನ ಮಾಡದಿದ್ದರೆ
ತಂದೆ ತಾಯಿಗಳು ಹಗೆಗಳು(೧೩೬)

ಎನ್ನುವ ಮಾತಿಗೆ ಅನ್ವಯವಾಗುವಂತೆ ಮೌನೇಶ್ವರರಿಗೆ ವಯೋಧರ್ಮಕ್ಕೆ ಅನುಗುಣವಾಗಿ ತಂದೆ ತಾಯಿಯರು ಅಕ್ಷರಾಭ್ಯಾಸ ಮತ್ತು ಉಪನಯನದ ವಿಧಿ ವಿಧಾನಗಳನ್ನು ಮಾಡಲು ನಿರ್ಧರಿಸುತ್ತಾರೆ. ಉಪನಯನದ ಭಾಗವಾಗಿ ಶರೀರ ಶುದ್ಧಿ ಮಾಡಲು ಮೌನೇಶ್ವರರ ನಾಲಿಗೆ ಸುಡುವುದು. ಆ ಉರಿ ಗುರುವಿನ ಮೈಗೆ ಅಂಟುವುದು ಇವೆಲ್ಲ ಪವಾಡದಂತೆ ಕಂಡರೂ ಅರ್ಥವಿಲ್ಲದ ವ್ಯರ್ಥ ಸಂಪ್ರದಾಯಗಳನ್ನು ನಿರಾಕರಿಸುವ ಮೌನೇಶ್ವರರ ವೈಚಾರಿಕ ಮನೋಧರ್ಮವನ್ನು ಎತ್ತಿ ತೋರಿಸುತ್ತವೆ.

'ಶೀಲವಂತಿಕೆ ಎಂಬ ನೂಲು ಮಾಲೆಗಳೇಕೆ'(೪೬೪), 'ರಾಟಾಣಕೆ ದಾರವ ಹಾಕಿದರೆ ರಂಡೇರ ಸಲಹಿತ್ತು ಭೂಮಂಡಲದ ಅಭಿಮಾನ ಮುಚ್ಚಿತ್ತು ಈ ಪಾಪಿಯ ಕೊರಳಲ್ಲಿ ಹಾಕಿದರೆ ಏತಕ್ಕೆ ಬಂತು (೨೯೮) 'ಯಜ್ಞೋಪವೀತವನೇ ಧರಿಸಿ ಅವಗುಣವನೆ ಕೆತ್ತಿ ಭರ್ಗೋದೇವನ ಭಜಿಸಿ ಬ್ರಾಹ್ಮಣನಾದೆನೆಂದರೆ ಹಗ್ಗವ ಹಾಕಿ ಕೊರಳು ಕೊಯ್ಯೆಂದ'(೨೯೬) ನೇಮ, ನಿತ್ಯ, ಜುಟ್ಟು, ಜನಿವಾರ, ಹೋಮ, ಜಳಕ ಮುಂತಾದ ಬಾಹ್ಯ ಆಚರಣೆಗಳನ್ನು ಮೌನೇಶ್ವರರು ನಿರಾಕರಿಸುತ್ತಾರೆ. ಸಾಮ ಘಾತಕತನದ ಅವಗುಣಗಳನ್ನು ಬಿಡದೆ, ಅಂದರೆ ದೇಹದ ವಿಕಾರಗಳನ್ನು ಕಳೆದು ಕೊಳ್ಳದೆ, ಅಜ್ಞಾನದಿಂದ ಮಾಡುವ ಆಚರಣೆಗಳೆಲ್ಲವೂ ನಿರರ್ಥಕವಾದಂಥವು. ನಡೆ ಹಾಗೂ ನುಡಿ ಶುದ್ಧತೆಗಿಂತ ದೊಡ್ಡ ಒಡವೆ ಮತ್ತೊಂದಿಲ್ಲ ಎನ್ನುವುದು ಮೌನೇಶ್ವರರ ಚಿಂತನೆಯ ಪ್ರಖರ ನೆಲೆಯಾಗಿದೆ.

ಇನ್ನು ಅಕ್ಷರಾಭ್ಯಾಸದ ಸಂದರ್ಭದಲ್ಲಿಯೂ ಗುರುವೆನ್ನುವ ಅಹಂಕಾರದಿಂದ ಮೆರೆಯುವ ಅಜ್ಞಾನಿ ಗುರುವಿನ ಗರ್ವ ಹರಣ ಮಾಡುತ್ತಾರೆ. ಆ ಮೂಲಕ ಗ್ರಾಂಥಿಕ ಜ್ಞಾನದ ಸ್ಥಾಪಿತವಾದ ರಾಜಕೀಯ ಹಾಗೂ ಸಾಂಸ್ಕೃತಿಕ ಮಿತಿಗಳನ್ನು ಮೀರಿ ಬೆಳೆಯುತ್ತಾರೆ ಮೌನೇಶ್ವರರು.

ಒಂದೂ ಅಕ್ಷರದ ಗುರುತ ಎಂದೆಂದು ನಾನರಿಯೆ
ಮುಂದೆ ಲಕ್ಷಣವು ಎನಗೆ ಅಳವಟ್ಟಿಲ್ಲ, ಲೋಕದ
ಛಂದಸ್ಸು ನಿಘಂಟು ಚದುರದ ಮಾತೆಲ್ಲ ನಿಮ್ಮ
ಕಂದನ ತೊದಲ್ನುಡಿಯೆಂದು ಕೇಳಿ, ಬಸವಣ್ಣ (೨)

'ಅಕ್ಷರವೆಂಬ ಲೆಕ್ಕ ನಿಮಗೇತಕಯ್ಯ' ಎನ್ನುವಲ್ಲಿ ಬರೆದಿಟ್ಟ ಹಾಗು ಗಿಳಿ ಪಾಠದ ಜ್ಞಾನದ ನೆಲೆಗಳನ್ನು ಪ್ರಶ್ನಿಸುತ್ತಾರೆ. ಅಕ್ಷರಕ್ಕೆ ಮೊದಲು ಅಜ್ಞಾನದ ಪರಿಹಾರ ಕೇಳುತ್ತಾರೆ. 'ಓಂ ನಮಃ ಶಿವಾಯ' ಎನ್ನುವ ಮಂತ್ರ ಜಪಿಸಲು ಗುರು ಹೇಳಿದಾಗ ಓಂಕಾರದ ಅರ್ಥವೇನೆಂದು ಮೌನೇಶ್ವರರು ಮರು ಪ್ರಶ್ನೆ ಮಾಡುತ್ತಾರೆ.

ಮೌನೇಶ್ವರರು ಎತ್ತುವ ಪ್ರಶ್ನೆಗಳನ್ನು ಶ್ರೀ ಮಹಾಂತೇಶ ಶಾಸ್ತ್ರಿಗಳು ತಮ್ಮ ತಿಂತಿಣಿ ಮೌನೇಶ್ವರರ ಚರಿತ್ರೆಯಲ್ಲಿ ಅರ್ಥಪೂರ್ಣವಾಗಿ ವಿವರಿಸಿದ್ದಾರೆ. 'ಗುರುಗಳೆ ತಲೆ ಸಿಡಿಯುವಷ್ಟು ಜ್ಞಾನ ನಿಮ್ಮಲ್ಲಿದ್ದರೆ ಅಂಥ ಜ್ಞಾನ ನನಗೆ ಬೇಡ. ನೀವು ಕಲಿತಿರುವಂತೆಯೇ ನಮ್ಮೆಲ್ಲರಿಗೂ ಬೋಧಿಸುವ ಕ್ರಮ ಉಚಿತವೇ? ಪ್ರತಿ ಶಬ್ದಕ್ಕೂ ಅಂತರಾರ್ಥ ಅನಂತಾರ್ಥ ಇರಬೇಕಲ್ಲವೆ. ಆ ಅರ್ಥವನ್ನು ಅರಿಯದೆ ವ್ಯರ್ಥವಾಗಿ ಅಕ್ಷರ, ಶಬ್ದ ವಾಕ್ಯಗಳನ್ನು ಗಿಳಿಯಂತೆ ಓದಿಬಿಟ್ಟರಾಯಿತೆ ಜ್ಞಾನ ಸಾಧನೆ'(ಪು.೨೬; ೧೯೭೬). ಜ್ಞಾನವೆಂಬುದು ಯಾರೋ ಒಬ್ಬರಿಗೆ ದಕ್ಕುವ ವಸ್ತುವಲ್ಲ, ಬರೀ ಕೋಪ ತಾಪಗಳನ್ನೇ ಜ್ಞಾನದ ಪ್ರದರ್ಶನವೆಂದು ನಾನು ಭಾವಿಸುವುದಿಲ್ಲ ಎನ್ನುವಲ್ಲಿ ಮೌನೇಶ್ವರರು ಸಾಂಪ್ರದಾಯಿಕ ಜ್ಞಾನ ಹಾಗೂ ಕಲಿಕೆಗಳ ನಿಷ್ಕ್ರಿಯತೆಯನ್ನು ಹಾಗೂ ಅದರ ಶುಷ್ಕ ಪಾಂಡಿತ್ಯವನ್ನು ನಿರಾಕರಿಸುತ್ತಾರೆ.

ಹನ್ನೆರಡು ವರುಷದಲ್ಲಿ ತನ್ನ ಜ್ಞಾನದಲ್ಲಿದ್ದು
ಕುನ್ನಿ ಮಾನವರಿಗೆ ಅಳುಕನು ಪರಬ್ರಹ್ಮ
ನೆಲೆಯಾದ ವರವೀಪುರದಲಿ, ಬಸವಣ್ಣ (೯೦)

ಬಾಲ್ಯದಿಂದಲೇ ಮೌನೇಶ್ವರರು ಸ್ವಾಧ್ಯಾಯಿಗಳಾಗಿದ್ದು ಸ್ವತಂತ್ರವಾಗಿಯೇ ಜ್ಞಾನಾರ್ಜನೆ ಮಾಡಿದರೆನಿಸುತ್ತದೆ. ವೇದ, ಆಗಮ, ಉಪನಿಷತ್ತು, ಷಡ್‌ದರ್ಶನ, ಶೈವಾಗಮ, ವಚನ ಸಾಹಿತ್ಯ ಮುಂತಾದವುಗಳ ಜ್ಞಾನವನ್ನು ಅರಗಿಸಿಕೊಂಡಿದ್ದರು. ಇದಕ್ಕೆ ನಿದರ್ಶನವೆಂದರೆ ವೇದಶಾಸ್ತ್ರಗಳ ಒಳಗೆ ಅಡಗಿದ ಅಜ್ಞಾನ ಮತ್ತು ಲೋಕ ವಿರೋಧಿ ನಡೆಗಳನ್ನು ಅವರು ವಿರೋಧಿಸುವ ರೀತಿ. ಯಾವುದೇ ಸಂಗತಿಯನ್ನು ಸಂಪೂರ್ಣ ತಿಳಿಯದೆ ಅದನ್ನು ಸಮರ್ಥಿಸಿಕೊಳ್ಳಲಿಕ್ಕಾಗಲೀ ನಿರಾಕರಿಸಲಿಕ್ಕಾಗಲೀ ಸಾಧ್ಯವಿಲ್ಲ. ಈ ಅರ್ಥದಲ್ಲಿ ಅವರೊಬ್ಬ ಸೂಕ್ಷ್ಮ ಮನಸ್ಸಿನ ಮಹಾಜ್ಞಾನಿಗಳಾಗಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ.

ಸಂಸಾರಿಕ ಜೀವನ

ಮೌನೇಶ್ವರರ ಸಾಂಸಾರಿಕ ಜೀವನದ ಬಗ್ಗೆ ಇದುವರೆಗೆ ಅವರ ಕುರಿತು ಲಭ್ಯವಾದ ಯಾವುದೇ ಚರಿತ್ರೆ, ಲೀಲೆ ಪುರಾಣಗಳೂ ವಿವರಿಸುವುದಿಲ್ಲ. ಆದರೆ ಮೌನೇಶ್ವರರ ವಚನಗಳ ಆಂತರ್ಯದಲ್ಲಿ ಕಾಣುವ ಕೆಲವು ಸಂಗತಿಗಳು ಅವರು ಸಂಸಾರಸ್ಥರಾಗಿದ್ದಿರಬಹುದೇ? ಎನ್ನುವ ಕುತೂಹಲವನ್ನು ಬೆಳೆಸುತ್ತವೆ. ಇದಕ್ಕೆ ಪೂರಕವೆನ್ನುವಂತೆ ಕೋಳೂರು ಶಂಕರ ಕವಿ ವಿರಚಿತ ಶರಣ ಮೋನಪ್ಪಯ್ಯನ ಚಾರಿತ್ರ್ಯ ಕೃತಿಯಲ್ಲಿ ಮೌನೇಶ್ವರರಿಗೆ ಸುಗ್ಗಳೆಯೆಂಬ ಸತಿ ಇದ್ದು ಅವರಿಬ್ಬರೂ ಆದರ್ಶ ಸತಿಪತಿಗಳಾಗಿದ್ದರು ಎಂಬ ಉಲ್ಲೇಖಗಳು ದೊರಕುತ್ತವೆ.

ಆತನ ರಾಣಿ ಸನ್ಮೈತವಾಣಿ ಅತಿ ಪತಿ
ವ್ರತೆ ಸಜ್ಜನೆಯು ಸನ್ಮಾರ್ಗಿ
ಖ್ಯಾತ ಪುರುಷಭಕ್ತಿಯುತೆ ಪುನ್ನಾಂತಸೂ
ಸಿತೆ ಸುಜ್ಞಾನಿ ವಪ್ಪಿದಳು
(ಶರಣ ಮೋನಪ್ಪಯ್ಯನ ಚಾರಿತ್ರ್ಯ, ಸಂಧಿ ೧–೬೨, ಪು.೧೧).

ಅಂಗಡಿ ಸಾರಿಸಿ ರಂಗವಲ್ಲಿಯನಿಟ್ಟು
ಶೃಂಗರಿಸುತಲಿ ಸುಜ್ಞಾನಿ
ಮಂಗಳ ಹೃದಯಕೆ ಅಂಗವಿಸೆ ಕಾಯಕ
ಹಿಂಗದೆ ಮಾಡೆ ಚಿತ್ತೈಸೆ
(ಶರಣ ಮೋನಪ್ಪಯ್ಯನ ಚಾರಿತ್ರ್ಯ, ಸಂಧಿ ೨–೧೪, ಪು.೧೫)

ಮೌನೇಶ್ವರರು ಚಿನ್ನ, ಬೆಳ್ಳಿ, ಕಂಚುಗಾರಿಕೆ ಕೆಲಸದಲಿ ಅತಿ ಜಾಣರಾಗಿದ್ದರು ಹಾಗೂ ಅವರು ಎದ್ದು ಸ್ನಾನ ಪೂಜೆ ಮುಗಿಸಿಕೊಂಡು ಬರುವಷ್ಟರಲ್ಲಿ ಹೆಂಡತಿ ಸುಗ್ಗಳೆ ಅಂಗಡಿ ಸಾರಿಸಿ ರಂಗವಲ್ಲಿಯಿಟ್ಟು ತಂದು ಗಳೇವುಚೀಲ ಮುಂದಿಟ್ಟು ನಮಿಸುತ್ತಾಳೆ. ಆಗ ಮೌನೇಶ್ವರರು ಕಾಯಕದ ಗುಣದ ಅಗ್ನಿಷ್ಟಿಕೆಯಲಿ ಅಜ್ಞಾನದ ಮಾಯಾ ಚಿನ್ನಿಯ ಇದ್ದಿಲಿಟ್ಟು ಊವಿಯ ಕೋವಿಯಲೂದಿ ಸದ್ಭಕ್ತದಗ್ಗಣಿಯ ಮೇಲಿಟ್ಟು ದೃಢ ಸುತ್ತಿಗೆಯಿಂದ ಮಾಯಾ ಬದ್ದಗಟ್ಟಿಯನ್ನು ಬಡಿದು ಆಭರಣ ವಾಗಿಸುತ್ತಿದ್ದರು.

ದಂಪತಿಗಳೀರ್ವರು ಪುಣ್ಯಮತಿಗಳಿಂ
ದಂ ಪರಮ ಸದ್ಭಕ್ತಿಯಿಂದ
ಇಂಪು ತಂಪುಗಳಿಂದ ನಮ್ಮ ಶರಣಸಂಗ
ಲಂಪಟದೊಳಗಿರ್ದರವರು (ಸಂಧಿ ೨–೩೮ ಪು.೧೯)

ದಂಪತಿಗಳು ಅಂಗಡಿಯಿಟ್ಟು ಹೀಗೆ ಚಂದದ ಕಾಯಕ ಮಾಡುತ್ತಿರಲಾಗಿ ಒಂದು ದಿನ ಶಿವ ಜಂಗಮ ಬಂದು ಮಗನೇ ಈ ಸಂಸಾರ ಬಂಧದೊಳಿಪ್ಪುದು ಛಂದದೋರುವುದಿಲ್ಲ. ಬಾರೋ ದೇಶಾಂತ್ರದಿ ತೋರುವೆ ಪವಾಡ(೪–೯) ಎನ್ನುತ್ತಾರೆ. ಅದಕ್ಕೆ ಮೌನೇಶ್ವರರು

ದೇವ ದೇಶಾಂತ್ರದಿ ಜೀವಕ್ಕೆ ಸುಖವೇನು
ಭಾವೆ ಮಕ್ಕಳು ಮನಿಯೊಳಗೆ
ಸಾವಧಾನದೊಳಿರ್ದು ಭಾವಶುದ್ಧದಿ ಗುರು
ದೇವನ ಧ್ಯಾನವೇ ಸಾಕು (೪–೧೦)

ಎಂದು ವೈರಾಗ್ಯವನ್ನು ನಿರಾಕರಿಸುತ್ತಾರೆ. ನಂತರ ಮಡದಿಯ ಅಕಾಲಿಕ ಮರಣ ದಿಂದ ಮನನೊಂದು ವೈರಾಗ್ಯಪರರಾಗುತ್ತಾರೆ. ಅಲ್ಲಮಪ್ರಭು ಮೌನೇಶ್ವರರಿಗೆ ದರ್ಶನವಿತ್ತು ಕೊಡಲಿಯೊಂದನ್ನು ಕೊಟ್ಟು ಅದೃಶ್ಯರಾಗುತ್ತಾರೆ. ಇದು ಕೋಳೂರು ಶಂಕರ ಕವಿಯ ಶರಣ ಮೋನಪ್ಪಯ್ಯನ ಚಾರಿತ್ರ್ಯದಲ್ಲಿ ಸಿಗುವ ಉಲ್ಲೇಖವಾಗಿದೆ.

ಮೌನೇಶ್ವರರ ವಚನಗಳ ಅಂತರಂಗದಲ್ಲಿಯೂ ಅವರ ಸಂಸಾರಕ್ಕೆ ಸಂಬಂಧಿಸಿದ ಸಂಗತಿಗಳನ್ನು ಬಹಳ ಸೂಕ್ಷ್ಮವಾಗಿ ಗಮನಿಸಬಹುದು.

ಹೆಂಡರು ಮಕ್ಕಳು ಇಲ್ಲದ ತೊಂಡ ತ್ರೋಟಕನಲ್ಲ
ಭಂಡ ತಾನಲ್ಲ ಜಗಕೀತ ತನ್ನಾತ್ಮದಲಿ
ಕಂಡಕಂಡಂತೆ ಸೊಲ್ಲಿಸುತ ಬಂದನು ಅ
ಖಂಡ ಕಾಣೀತ ಪರಿಪೂರ್ಣ, ಬಸವಣ್ಣ (೭೨)

ಅದೇ ರೀತಿ

ಮೂರು ಹೊತ್ತಿನ ಊಟ ಆರು ಹೊತ್ತಿನ ಕೂಟ
ಸೀರೆ ಕುಪ್ಪಸ ಘನವಾಗಿ ನಡೆಸಿದರೆ
ರಾಯರಾಯರಿಗೆ ಅಳವಲ್ಲ ಹೆಣ್ಣೆಂಬ
ಮಾರಿಯನು ಆಳುವವನ ಹೆಸರೇನು, ಬಸವಣ್ಣ (೫೫೭)

'ಒಪ್ಪತ್ತಿನ ಊಟಕ್ಕೆ ಉಪ್ಪಿಲ್ಲದಿದ್ದರೇ ಇಪ್ಪತ್ತು ಮನೆಗೆ ಉಸುರುವಳು...'(೨೭೪) 'ಸತಿಪತಿಯು ಸುಖವಾಗಿರಲು ಪತಿವ್ರತದಿ ಸದ್ಗತಿಯು' (೧೩೭)

ಆಯವಾದಾಭರಣ ಛಾಯವಾದ ಭೂಷಣ
ಆಯವಾಯವಾದ ಮಡದಿಗೆ ಮೋನಯ್ಯ
ಆನೆಯ ಕಳುಹುವ ದಿನಗಳು ಬಂದಾವು, ಬಸವಣ್ಣ (೬೯೩)

ವಚನದ ಈ ಸಾಲುಗಳು ಮೌನೇಶ್ವರರ ಸಂಸಾರಿಕ ಬದುಕಿನ ಚಿತ್ರಣವನ್ನು ಕೊಡುವಂತಿವೆ.

ಮಕ್ಕಳೊಂದಿಗನೆಂಬ ಠಕ್ಕೆಯ ಬಿರುದುಂಟು
ಹೊಕ್ಕಳ ಗಂಟು ತನಗುಂಟು ಭಿಕ್ಷುಕನಲ್ಲ
ಬಿರುದಂಕ ಅಲ್ಲಮರಾಯ
ರಕ್ಷಿಸುವ ರಮಣನು, ಬಸವಣ್ಣ (೬೭)

ಅದೇ ರೀತಿ 'ಮಕ್ಕಳ ಬೇಡಿಕೊಳ್ಳೊ ಮೋನಪ್ಪನೆಂದರೆ ಬೇಡಿಕೊಂಬಾತನೆ, ಹುಟ್ಟಿದ ಮಕ್ಕಳೆಲ್ಲ ತಿಪ್ಪಿಯ ಭಾಜನವಾಗಲಿ ಕೊಟ್ಟ ಸಿರಿಮನೆ ಸಿರಿ ಬಿದ್ದು ಹೋಗಲಿ' ಈ ಸಂಗತಿಗಳು ಹೆಂಡತಿ, ಮಕ್ಕಳು, ಸಂಸಾರ, ಅದಕ್ಕಾಗಿ ಯಾರನ್ನೂ ಕೈಯೊಡ್ಡದೆ ಅಲ್ಲಮನನ್ನು ನೆಚ್ಚಿಕೊಂಡು ಬದುಕುವ ಸಂಗತಿಗಳು, ಮೌನೇಶ್ವರರ ಸ್ವಾಭಿಮಾನಿ ಬದುಕಿಗೆ ಹೊಸ ತಿರುವು ನೀಡುವಂಥವಾಗಿವೆ.

ಪವಾಡಗಳು ಮತ್ತು ಮಾನವೀಯ ನೆಲೆಗಳು

ಮೌನೇಶ್ವರರ ಚರಿತ್ರೆಯಲ್ಲಿ ಕಾಣುವ ಪವಾಡದ ವಿವರಗಳು ಅವರ ವಚನಗಳಲ್ಲಿ ಕಾಣುವುದಿಲ್ಲ. ಪವಾಡಗಳು ಅತಿಮಾನುಷವೆಂದು ತೋರುತ್ತವೆ. ಆದರೆ ಹಾಗಲ್ಲ. ಅವು ಸಮುದಾಯದ ವಾಸ್ತವಗಳು. ಪವಾಡಗಳಲ್ಲಿರುವುದು ಮಾನವೀಯ ಗುಣಧರ್ಮಗಳು ಎನ್ನುವುದು ಬಹುಮುಖ್ಯ. ಸುಮಾರು ೧೯ ರೀತಿಯ ವಿವಿಧ ಪವಾಡಗಳನ್ನು ಅಥವಾ ತೋರಿದ ಲೀಲೆಗಳನ್ನು ಮೌನೇಶ್ವರರ ಜೀವನ ಚರಿತ್ರೆಗಳಲ್ಲಿ ಉಲ್ಲೇಖಿಸಲಾಗುತ್ತದೆ.

೧. ಸತ್ತ ರಾಜಕುಮಾರನನ್ನು ಬದುಕಿಸಿದ್ದು, ೨. ಗಾಣಿಗರ ಪರಪ್ಪನಿಗೆ ಸಂಪತ್ತು ಕರುಣಿಸಿ ಜಂಗಮರ ಗರ್ವಭಂಗ ಮಾಡಿದ್ದು, ೩. ಲಿಂಗನ ಬಂಡಿಯಲ್ಲಿ ಕುರುಬನಿಗೆ ಪ್ರಸಾದ ಕೊಟ್ಟದ್ದು, ೪. ಲಿಂಗನ ಬಂಡಿಯಲ್ಲಿ ಯಾತ್ರಿಕರಿಗೆ ತಿರುಪತಿ ವೆಂಕಟೇಶನ ದರ್ಶನ ಮಾಡಿಸಿದ್ದು, ೫. ಹುರಿದ ಕಾಳನ್ನು ಬಿತ್ತಿ ಬೆಳೆದದ್ದು, ೬. ವಿಜಯಪುರ ಸುಲ್ತಾನನಿಗೆ ಅನುಗ್ರಹಿಸಿದ್ದು, ೭. ದೇವದುರ್ಗದ ದಂಪತಿಗಳಿಗೆ ಸಂತಾನ ಕರುಣಿಸಿದ್ದು, ೮. ಶಿರಸಂಗಿಯಲ್ಲಿ ಕುಲಬಾಂಧವರನ್ನು ಪರೀಕ್ಷಿಸಿದ್ದು, ೯. ಅಲ್ಲಾಯು ವೀರಗೊಲ್ಲಾಳನಿಗೆ ದೀರ್ಘಾಯುಷ್ಯ ಕರುಣಿಸಿದ್ದು, ೧೦. ಕಾಶಿಯಲ್ಲಿ ಲಕ್ಷ್ಮೀನಾರಾಯಣರನ್ನು ಬರಮಾಡಿಕೊಂಡದ್ದು, ೧೧. ಸತ್ತ ಕುರುಬರ ಪಿಡ್ಡವ್ವಗೆ ಪ್ರಾಣದಾನ ಮಾಡಿ ಕದರಿನ ಹಣ ಪಡೆದದ್ದು, ೧೨. ಅಂಕುಶಖಾನನಿಗೆ ತಿಳಿಹೇಳಿದ್ದು, ೧೩. ಲಕ್ಷ್ಮೇಶ್ವರದಲ್ಲಿ ತೋರಿದ ಪವಾಡಗಳು, ೧೪. ಮಹಾರೋಗ ಕಳೆದದ್ದು, ೧೫. ಗಗನಾಪುರ ಗಂಗಪ್ಪಯ್ಯಗೆ ಕೈಲಾಸ ದರ್ಶನ ಮಾಡಿಸಿದ್ದು, ೧೬. ವರವಿಯಲ್ಲಿ ಅಂಬಲಿಹೊಂಡ ನಿರ್ಮಿಸಿದ್ದು, ೧೭. ಉಕ್ಕಲಿ ಮಳೆಯಪ್ಪನ ಜನನಕ್ಕೆ ಅನುಗ್ರಹಿಸಿದ್ದು, ೧೮. ಗಡ್ಡಿಪಿಡ್ಡ ನಾಯಕನಿಗೆ ಕೊಡಲಿಯಿತ್ತು ರಾಜನಾಗಲು ಆಶೀರ್ವದಿಸಿದ್ದು, ೧೯. ತಿಂತಿಣಿಯಲ್ಲಿ ಐಕ್ಯವಾಗಿದ್ದು, ಇತ್ಯಾದಿ.

ಈ ಎಲ್ಲ ಲೀಲೆಗಳಲ್ಲಿ ಕಾಣುವ ಮುಖ್ಯ ಸಂಗತಿಗಳೆಂದರೆ ಜಡವನ್ನು ಜಾಗೃತ ಗೊಳಿಸಿದ್ದು, ದುರಹಂಕಾರವನ್ನು ದೂರಮಾಡಿದ್ದು. ಜಡವನ್ನು ಜಂಗಮವಾಗಿಸುವ ಅಜಾಗೃತೆಯಲ್ಲಿರುವುದನ್ನು ಜಾಗೃತಗೊಳಿಸುವ ಮುಖ್ಯ ತತ್ತ್ವವೇ ವಿಶ್ವಕರ್ಮತತ್ತ್ವ ವಾಗಿದೆ. ಕ್ರಿಯೆ ಮರೆತು ಜ್ಞಾನಹೀನವಾಗುವ, ನಿರ್ವೀರ್ಯವಾಗುವ ಈ ಲೋಕದ ಜನರನ್ನು ಎಚ್ಚರಿಸುವ ವಿಚಾರಗಳು, ಸತ್ತವರನ್ನು ಬದುಕಿಸುವ, ಬಂಜೆಗೆ ಫಲ ನೀಡುವ ಪವಾಡಗಳ ಒಡಲೊಳಗಡಗಿವೆ.

ಕಾಶಿ, ರಾಚೋಟಿ, ಶಿರಸಂಗಿಯಲ್ಲಿ ನಡೆಯುವ ಪಂಕ್ತಿಭೋಜನ ಮತ್ತು ಅಂಗದ ಮೇಲೆ ಲಿಂಗವಿಲ್ಲದ ಭವಿ ಎನ್ನುವ ಸಂದರ್ಭಗಳಲ್ಲಿ ತೋರುವ ಲೀಲೆಗಳು ಬಾಹ್ಯ ಆಚರಣೆಗೆ ಬಲಿಯಾಗಿ ಅಂತಃಸತ್ವವನ್ನು ಕಳೆದುಕೊಂಡು ಅಜ್ಞಾನಿಗಳಾದ, ಕುಲಸ್ಥರೆನ್ನುವ ಮೇಲುವರ್ಗದವರ ದುರಹಂಕಾರವನ್ನು ಮುರಿಯುವ ಸಂಗತಿಯನ್ನು ಗರ್ಭೀಕರಿಸಿಕೊಂಡಿವೆ. ಸಾಮೂಹಿಕ ಊಟದ ಪರಿಕಲ್ಪನೆಯೇ ಗ್ರಾಮ ಸಮಾಜದ ಆಶಯವಾಗಿದೆ. ಅಂಗದ ಮೇಲಿನ ಲಿಂಗ ನಿರಾಕರಣೆಯ ನೆಲೆಗಳು ನಿರ್ದಿಷ್ಟ ಧಾರ್ಮಿಕ ಗುರುತುಗಳನ್ನು ಮೀರಿ ವಿಶ್ವಮಾನವರಾಗಬೇಕೆನ್ನುವ ಸಂದೇಶವುಳ್ಳಂಥ ವಾಗಿವೆ.

ಶ್ರೀಮಂತರೂ ಶಾಸ್ತ್ರ ಪುರಾಣೇತಿಹಾಸ ಸಂಪನ್ನರೆಂದು ಹೇಳುವವರಿಗೆ ಸ್ವಯಂ ಪ್ರಜ್ಞೆ, ಆತ್ಮಾನುಸಂಧಾನ, ಸದ್ವಿವೇಕವಿರಬೇಕು. ವಿವೇಕವಿಲ್ಲದವರು ಎಷ್ಟು ಶಾಸ್ತ್ರ ಗಳನ್ನೋದಿದರೇನು? ಕಣ್ಣಿಲ್ಲದವನ ಕೈಯಲ್ಲಿ ಕನ್ನಡಿ ಕೊಟ್ಟಂತಾಗುತ್ತದೆ. ಸಹೃದಯತೆ, ಸಹಬಾಳ್ವೆ, ಸಹಚಿಂತನೆ, ನಿರಹಂಕಾರ ಇವು ಜ್ಞಾನವಂತ ಸಮ ಸಮಾಜದ ಲಕ್ಷಣ ಗಳೆಂದು ಹೇಳುವ ಆಶಯ ಪವಾಡ ಅಥವಾ ಲೀಲೆಗಳದ್ದಾಗಿದೆ.

ಕಾಲ ನಿರ್ಣಯ

ಮೌನೇಶ್ವರರು ಬದುಕಿ ಬಾಳಿದ ಕಾಲದ ಬಗ್ಗೆ ಹಲವು ಚರ್ಚೆಗಳು ನಡೆದಿರು ವುದನ್ನು ಇಲ್ಲಿ ಗಮನಿಸಬಹುದು. ಮೌನೇಶ್ವರರು ತಾತ್ವಿಕವಾಗಿ ತ್ರಿಕಾಲಜ್ಞಾನಿಗಳಾದರೂ ಚಾರಿತ್ರಿಕ ವ್ಯಕ್ತಿಯಾಗಿ ಕಾಲಕ್ಕೆ ಅಧೀನರು ಎನ್ನುವುದು ಅವರ ಬದುಕಿನ ನೆಲೆಗಳ ಬಗ್ಗೆ ನಡೆದ ಶೋಧಗಳಿಂದ ಗುರುತಿಸಬಹುದು.

'ತಿಂತಿಣಿ ಮೌನೇಶ್ವರರ ಮಹಿಮಾಚರಿತೆ(೧೯೭೬)ಎನ್ನುವ ತಮ್ಮ ಕೃತಿಯಲ್ಲಿ ಶ್ರೀ ಹೆಚ್.ಟಿ.ಮಹಾಂತೇಶ ಶಾಸ್ತ್ರಿಗಳು ತಮ್ಮ ಮೊದಲ ಮಾತಿನಲ್ಲಿ ಮೌನೇಶ್ವರರ ಕಾಲವನ್ನು ಹನ್ನೆರಡನೆಯ ಶತಮಾನವೆಂದು ದಾಖಲಿಸುತ್ತಾರೆ. ಪಾ.ವೆಂ.ಅರಕೇರಿ ಯವರು 'ಶ್ರೀ ಮೌನೇಶ್ವರರು' ಎನ್ನುವ ತಮ್ಮ ಕೃತಿಯಲ್ಲಿ ಕ್ರಿ.ಶ.೧೪೫೦ರಿಂದ ೧೫೬೦ (ಪು.iii) ಎಂದು ಹೇಳುತ್ತಾರೆ. ಡಾ.ವಿರೂಪಾಕ್ಷ ಬಡಿಗೇರ ಅವರು 'ಶಿರಹಟ್ಟಿ ಫಕೀರೇಶ್ವರ ಪುರಾಣದ ಆಧಾರದ ಮೇಲೆ ಇವರ ಜನನ ಕ್ರಿ.ಶ.೧೫೭೦ರ ಸುಮಾರಿಗೆ ಆಗಿರುವಂತಿದೆ ಎನ್ನುತ್ತಾರೆ(ಮಹಾತ್ಮ ಮೌನೇಶ್ವರರು, ಪು.೪;೧೯೮೨).

ಮೌನೇಶ್ವರರ ವಚನಗಳಲ್ಲಿ ಅವರ ಕಾಲದ ಬಗೆಗೆ ಖಚಿತ ಮಾಹಿತಿ ಇರದಿದ್ದರೂ ವಚನಗಳಲ್ಲಿ ಬರುವ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಚಾರಿತ್ರಿಕ ಸಂಗತಿಗಳನ್ನಿಟ್ಟುಕೊಂಡು ಶ್ರೀ ಜೀವಣ್ಣ ಮಸಳಿ, ಶ್ರೀ ಸಿ.ಬಿ.ಕಡಕೋಳ ಮತ್ತು ಡಾ.ಕೆ.ಪಿ.ಈರಣ್ಣನವರು ಮೌನೇಶ್ವರರು ಬಾಳಿದ ಸಂದರ್ಭವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಚಾರಿತ್ರಿಕ ಸಂಗತಿಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ಓರಂಗಲ್ಲಿನ ವೀರಗಣ ಪತಿರಾಯ(ವ.೬೪೪) ಕಾಕತೀಯ ರಾಜನಾದ ಇವನ ಕಾಲ ಕ್ರಿ.ಶ.೧೧೯೯–೧೨೬೯. ದೇವಗಿರಿ ಯಾದವರ ಮಂತ್ರಿಯಾಗಿದ್ದ ಹೇಮಾದ್ರಿ(ಕ್ರಿ.ಶ.೧೨೬೦–೧೨೭೧) ಉಲ್ಲೇಖ ಬರುತ್ತದೆ. ಅದೇ ರೀತಿ 'ವಿಜಯಪುರದ ಸುಲ್ತಾನ ಸಾಹೇಬಗೆ ಪಟ್ಟವಕಟ್ಟಿ ಮೋನಯ್ಯನ ಕೇಳಿದರೆ ಅಯ್ಯ ಉತ್ತವ ಕೊಟ್ಟರು(ವ.೬೪೩) ಯೂಸುಪ್ ಆದಿಲ್ ಖಾನ್‌ನಿಂದ ಕ್ರಿ.ಶ.೧೪೧೯ರಲ್ಲಿ ವಿಜಯಪುರದಲ್ಲಿ ಶಾಹಿ ಸಾಮ್ರಾಜ್ಯ ಸ್ಥಾಪನೆಯಾಗುತ್ತದೆ. ಆದಿಲ್ ಶಾಹಿಯು ಕ್ರಿ.ಶ.೧೫೫೬ರಿಂದ ೧೫೮೦ರ ವರೆಗೆ ವಿಜಾಪುರದಲ್ಲಿ ಆಳ್ವಿಕೆ ಮಾಡುತ್ತಾನೆ. ಇವರು ಮೌನೇಶ್ವರರನ್ನು ಪೈಂಗಬರರೆಂದು ಪೂಜಿಸುತ್ತಿದ್ದರು. ಒಂದನೇ ಆದಿಲ್ ಶಾಹಿಯು ಮೌನೇಶ್ವರರ ಕೃಪಾಕಟಾಕ್ಷಕ್ಕೆ ಪಾತ್ರನಾಗಿದ್ದಲ್ಲದೆ ವರವಿಯಲ್ಲಿ ಒಂದು ಗುಡಿಯನ್ನು ಕಟ್ಟಿಸಿಕೊಡುತ್ತಾನೆ. ಒಂದನೇ ಆದಿಲ್‌ಶಾಹಿಯ ಸುಭೇದಾರನಾಗಿ ಅಂಕುಶಖಾನನು(೧೫೭೦) ಲಕ್ಷ್ಮೇಶ್ವರದಲ್ಲಿ ಆಡಳಿತ ಮಾಡುತ್ತಿದ್ದನು (ಹಿರಿಯ ಅಂಕುಶಖಾನನು ಸತ್ತಂದಿನ ಮಾತು, ಎಮ್ಮೆ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ ಡಂಗುರ ಸಾರಬೇಕೆಂದು...(ವ.೭೧). ಕ್ರಿ.ಶ.೧೬೧೨ರಲ್ಲಿ ಹಿರಿಯ ಅಂಕುಶ ಖಾನನು ಲಕ್ಷ್ಮೇಶ್ವರದಲ್ಲಿ ದೊಡ್ಡಬಾವಿ ತೋಡಿಸುವ ವಿವರ ಶಾಸನ ವೊಂದರಲ್ಲಿದೆ. ಮೌನೇಶ್ವರರ ಪವಾಡದಿಂದ ನೊಗದ ಪಿಂಡ ಸೆಲೆ ಬಿದ್ದು ನೀರು ಪುಟಿದು ಬಂದೀತೆಂಬ ಲೀಲೆಯಿದೆ.

ಕ್ಷಯನಾಮ ಸಂವತ್ಸರದಲ್ಲಿ ಆಡಿದ ಆಟ ಲಕ್ಷ್ಮೇಶ್ವರದಲ್ಲಿ ಭಾವವುಳ್ಳವರು ಭಕ್ತರು (ವ.೬೭೨) ಎನ್ನುವಲ್ಲಿ ಕ್ಷಯನಾಮ ಸಂವತ್ಸರ ಕ್ರಿ.ಶ.೧೫೫೦ ರಿಂದ ಕ್ರಿ.ಶ.೧೬೦೦ರಲ್ಲಿ ಎರಡು ಸಲ ಬರುತ್ತದೆ. ಕ್ಷಯನಾಮ ಸಂವತ್ಸರ ಮತ್ತು ಅಂಕುಶಖಾನನ ಅವಧಿಯನ್ನು ಗಮನಿಸಿ ಕ್ರಿ.ಶ.೧೫೫೬ರಲ್ಲಿ ಮೌನೇಶ್ವರರು ಬದುಕಿರಬಹುದೆಂದು ಭಾವಿಸಲಾಗಿದೆ (ವಿವರಕ್ಕೆ ನೋಡಿ: ತಿಂತಿಣಿ ಮೌನೇಶ್ವರರ ವಚನಗಳು, ಸಂ: ಸಿ.ಬಿ.ಕಡಕೋಳ ಮತ್ತು ಕೆ.ಪಿ.ಈರಣ್ಣ, ಪು.x:೧೯೮೫). ವಚನಗಳಲ್ಲಿ ಬರುವಂತೆ 'ಮಳೆ ತರಿಸಿ ಬೆಳೆ ಬರಸಿ ಕ್ಷಾಮ ಢಾಮರದಂತಹ ತೊಂದರೆಯಿಂದ ಲೋಕವನ್ನು ಪಾರು ಮಾಡಿದ' ಎನ್ನುವಾಗ ೧೬೩೦ರಲ್ಲಿ ಭಾರತದಲ್ಲಿ ಬರಗಾಲ ಬಿದ್ದ ಸಂದರ್ಭವನ್ನು ನೆನಪಿಸಿಕೊಳ್ಳಬೇಕಾಗುತ್ತದೆ. 'ಎಮ್ಮೆ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ ಡಂಗುರವ ಸಾರಬೇಕೆಂದು...ಬಂದ'(ವ.೩೧) ಬಗ್ಗೆ ಮೌನೇಶ್ವರರು ಹೇಳುತ್ತಾರೆ. ಎಮ್ಮೆ ಬಸವಣ್ಣ

ಕ್ರಿ.ಶ.೧೫೪೨ರಲ್ಲಿ ವಿಜಯನಗರದ ಅರಸು ಸದಾಶಿವರಾಯನ(ಕ್ರಿ.ಶ.೧೫೪೩–೧೫೭೦) ಕಾಲದಲ್ಲಿ ಹಂಪೆಯಲ್ಲಿ ಬದುಕಿದ್ದ. ಎಮ್ಮೆ ಬಸವನ ನಂತರ ಎರಡನೆ ಬಸವನಾಗಿ ಹುಟ್ಟಿ ಬಂದ ಮೌನೇಶ್ವರರು ಈ ಅರ್ಥದಲ್ಲಿ ೧೫ನೇ ಶತಮಾನದ ಕೊನೆ ಅಥವಾ ೧೬ನೇ ಶತಮಾನದ ಆರಂಭದಲ್ಲಿ ಬದುಕಿದ್ದರೆಂದು ಗುರುತಿಸಬಹುದು. ಗೊಲ್ಲಾಳನೆಂಬ ಶರಣನು ಕ್ರಿ.ಶ.೧೬ನೆಯ ಶತಮಾನದಲ್ಲಿ ಮೌನೇಶ್ವರರಿಂದ ಆಶೀರ್ವಾದ ಪಡೆದ ವಿವರ ಒಂದು ವಚನದಲ್ಲಿದೆ(ಆಡಿನ ಹಿಕ್ಕಿಯನು ಮಾಡಿದರು ಲಿಂಗವನು.....ವ.೫೩೨) ಇದರಿಂದ ಗೊಲ್ಲಾಳೇಶ್ವರರು ಮೌನೇಶ್ವರರ ಸಮಕಾಲೀನ ರಾಗಿರುವ ಸಾಧ್ಯತೆಗಳಿವೆ. ಇದು ಅಲ್ಲದೆ ಅಂಕಲಗಿ ಅಡವಿಸಿದ್ಧ, ಮುದ್ದೇಬಿಹಾಳ ತಾಲೂಕಿನ ಗಾಳಿಪೂಜೆ ಗ್ರಾಮದ ಗಾಳಿಪೂಜೆ ಸಿದ್ಧರಂತ ಸಮಕಾಲೀನ ಶರಣರನ್ನು ಮೌನೇಶ್ವರರು ಸ್ಮರಿಸುತ್ತಾರೆ.

ಇನ್ನು ಸುರಪುರ ಬೇಡನಾಯಕರ ಕುರಿತು ಉಲ್ಲೇಖಗಳನ್ನು ನೋಡಬಹುದು. ಗಡ್ಡಿಪಿಡ್ಡನಾಯಕನಿಗೆ ಕ್ರಿ.ಶ.೧೬೬೬ರಲ್ಲಿ ಸ್ವತಂತ್ರ ಅರಸೊತ್ತಿಗೆ ಸ್ಥಾಪಿಸಲು ಮೌನೇಶ್ವರರು ಅನುಗ್ರಹಿಸುತ್ತಾರೆ. ಶಿರಹಟ್ಟಿ ಫಕೀರೇಶ(ಕ್ರಿ.ಶ.೧೫೭೦ರಲ್ಲಿ ಜನನ)ಗೆ ಮೌನೇಶ್ವರರು ಗುರುಗಳಾಗಿದ್ದ ಬಗ್ಗೆ ದ್ಯಾಂಪುರ ಚನ್ನಕವಿಯ ಫಕೀರೇಶ್ವರ ಪುರಾಣ(೫ನೇ ಸಂಧಿ ೩೩, ೩೪, ೩೫)ದಲ್ಲಿ ಉಲ್ಲೇಖವಿದೆ. ಒಟ್ಟಿನಲ್ಲಿ ಒಂದನೇ ಅಲಿಆದಿಲ್‌ಶಾಹಿ (೧೫೫೬–೧೫೮೦) ಮತ್ತು ಗಡ್ಡಿಪಿಡ್ಡನಾಯಕ(೧೬೫೯–೧೬೬೬)ನ ವರೆಗಿನ ಎಲ್ಲ ವಿವರಗಳನ್ನು ಗಮನಿಸಿದಾಗ ಮೌನೇಶ್ವರರು ಸುಮಾರು ೧೫೬೦ರಿಂದ ೧೬೭೦ರ ಕೊನೆಯವರೆಗೂ ಬದುಕಿದ್ದರೆಂಬುದನ್ನು ಊಹಿಸಬಹುದು.

ಬಸವಣ್ಣ ವಚನಾಂಕಿತ

'ಬಸವಣ್ಣ' ಎಂಬುದು ಮೌನೇಶ್ವರರ ವಚನಾಂಕಿತವಾಗಿದೆ. ಶರಣರ ಕಾಲ ದಿಂದಲೂ ನಾಮ ನಿರಪೇಕ್ಷ ಮತ್ತು ಸಮಷ್ಟಿ ಪ್ರಜ್ಞೆಯ ಭಾಗವಾಗಿ ವಚನಗಳನ್ನು ವ್ಯಕ್ತಿಗತ ಹೆಸರಿನಲ್ಲಿ ಗುರುತಿಸದೆ ತನ್ನ ಆರಾಧ್ಯ ದೈವ ಅಥವಾ ಗುರುವಿನ ಹೆಸರಲ್ಲಿ ರಚಿಸುವುದು ಸಾಮಾನ್ಯ. ಕಾವ್ಯವೆನ್ನುವುದು ಮನುಷ್ಯ ಸೃಷ್ಟಿಯಲ್ಲ. ಅದು ದೈವಸೃಷ್ಟಿ ಎನ್ನುವ ನೆಲೆಯಿಂದ ಮೂಡಿದ್ದು. 'ವೀರನಾರಾಯಣನೇ ಕವಿ ನಾನು ಲಿಪಿಕಾರ' ಎನ್ನುವ ಕುಮಾರವ್ಯಾಸನ ಮಾತಿನಂತೆ ಕಾವ್ಯ ಅಪೌರುಷೇಯವಾದುದು ಎನ್ನುವ ಧ್ವನಿ ಒಂದಾದರೆ, ಅದು ಸಮೂಹ ಸೃಷ್ಟಿ ಎನ್ನುವುದು ಮತ್ತೊಂದು ಧ್ವನಿ.

ಮೌನೇಶ್ವರರು ಬಳಸಿದ ವಚನಾಂಕಿತದ ಬಗ್ಗೆ ಹಲವು ಚರ್ಚೆಗಳು ನಡೆದಿವೆ. ಬಸವಣ್ಣ ಎನ್ನುವುದು ಹನ್ನೆರಡನೆ ಶತಮಾನದ ಬಸವಣ್ಣನನ್ನು, ಚೆನ್ನಬಸವಣ್ಣನನ್ನು ಸೂಚಿಸುತ್ತದೆ ಎಂದು ಕೆಲವರು ಹೇಳಿದರೆ, ಕೊಡೇಕಲ್ಲ ಬಸವಣ್ಣನನ್ನು ಸೂಚಿಸುತ್ತ ದೆಂದು ಮತ್ತೆ ಕೆಲವರ ವಾದ.

ಡಾ.ವಿ.ಶಿವಾನಂದ ಅವರು 'ಬಸವಣ್ಣ ಎಂಬ ಮುದ್ರಿಕೆಯಲ್ಲಿರುವ ಈತನ ರಚನೆಗಳನ್ನು ಸಾರುವಯ್ಯಗಳು ಅತ್ಯಂತ ಖಂಡಿತವಾದ ಶೈಲಿಯಲ್ಲಿ ನಿರೂಪಿಸುತ್ತಾರೆ. ಚೆನ್ನಯ್ಯನವರ ಪ್ರಸಾದವೇ ಗತಿಯೆಂದು ಬಿನ್ನೈಸಿ ಹೇಳಿದ 'ವಚನ'ವೆನ್ನುವುದರಿಂದ ಇಲ್ಲಿನ ಮುದ್ರಿಕೆ 'ಬಸವಣ್ಣ'ನಾಗಿರದೆ ಚೆನ್ನಬಸವಣ್ಣನಿಗೆ ಸಂಬಂಧಿಸಿದೆ. ಕಾಲಜ್ಞಾನ ನಿರೂಪಣೆಗಳಿಗೆ ಗುರುವಾದ ಚೆನ್ನಬಸವಯ್ಯನೇ ಮೌನೇಶ್ವರರ ಆರಾಧ್ಯ ದೈವವೂ ಆಗಿದ್ದಾನೆ(ಕಾಲಜ್ಞಾನ ಸಾಹಿತ್ಯ, ಪು.೧೮೬; ೧೯೮೬, ಉಧೃತ, ಗೌರವ, ಪ್ರೊ.ಎಸ್. ಎಸ್.ಭೂಸನೂರುಮಠ, ಅಭಿನಂದನ ಗ್ರಂಥ, ಸಂ.ಡಾ.ಬಿ.ವಿ.ಶಿರೂರು).

ಮೌನೇಶ್ವರರು ಅಪವರ್ಗೀಕರಣದ ಮಾದರಿಯಾಗಿ 'ಕಕ್ಕಯ್ಯನ ವರಪ್ರಸಾದಿ' 'ಚೆನ್ನಯ್ಯನವರ ಪ್ರಸಾದವೇ ಗತಿ' ಎಂದು ಬಿನ್ನೈಸಿ ಪೇಳಿದೆ' ಎನ್ನುವಲ್ಲಿ ತನ್ನ ಪೂರ್ವಿಕ ಶಿವಶರಣರನ್ನು ಸ್ಮರಿಸುತ್ತಾರೆ. ಇಲ್ಲಿ ಬಳಕೆಯಾದ ಚೆನ್ನಯ್ಯ, ಮಾದರ ಚೆನ್ನಯ್ಯ ಇರಬೇಕೆ ಹೊರತು ಚೆನ್ನಬಸವಣ್ಣನವರಲ್ಲ. ಯಾಕೆಂದರೆ ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ, ಚೆನ್ನಬಸವಣ್ಣನ 'ಅವತಾರಿ' ಎಂದು ಗೌರವದಿಂದ ಚೆನ್ನಬಸವಣ್ಣನವರನ್ನು ತನ್ನ ತಾತ್ವಿಕ ಚಿಂತನೆಯ ಭಾಗವಾಗಿ ನೆನೆಯುತ್ತಾರೆ. ಆದ್ದರಿಂದ ಡಾ.ವಿ.ಶಿವಾನಂದ ಅವರು ಹೇಳುವಂತೆ ಚೆನ್ನಯ್ಯ ಚೆನ್ನಬಸವಣ್ಣನವರಲ್ಲ, ಮಾದಾರ ಚೆನ್ನಯ್ಯನಾಗಿದ್ದಾನೆ. ಚೆನ್ನಬಸವಣ್ಣನವರೇ ಮೌನೇಶ್ವರರ ವಚನಾಂಕಿತ ಎನ್ನುವ ಅವರ ವಾದ ಈ ಅರ್ಥದಲ್ಲಿ ಸರಿಯೆನಿಸಲಾರದು.

ಶ್ರೀ ಪಾ.ವಿ.ಅರಕೇರಿಯವರು 'ಬಸವಣ್ಣ' ನಾಮಾಂಕಿತ ಕುರಿತು ಬರೆಯುತ್ತ ಕೊಡೇಕಲ್ಲ ಬಸವಣ್ಣನವರೊಂದಿಗೆ ಭೌಗೋಳಿಕವಾಗಿ ಮತ್ತು ಕಾಲದ ಗಣನೆಯನ್ನು ಪರಿಗಣಿಸಿ 'ಮೌನೇಶ್ವರ ವಚನಗಳಲ್ಲಿ ನಾಮಾಂಕಿತಗೊಂಡ ಬಸವಣ್ಣನು ಕೊಡೇಕಲ್ಲ ಬಸವಣ್ಣನೇ ಆಗಿದ್ದಾನೆ' ಎಂದು ಹೇಳುತ್ತಾರೆ(ಶ್ರೀ ಮೌನೇಶ್ವರರು, ಪು.೬೮).

ಡಾ.ವಿರೂಪಾಕ್ಷ ಬಡಿಗೇರ ಅವರು ಮೌನೇಶ್ವರರ ವಚನಗಳ ಅಂಕಿತ 'ಬಸವಣ್ಣ' ಎಂಬುದು ಕೊಡೇಕಲ್ಲ ಬಸವಣ್ಣನನ್ನು ಕುರಿತದ್ದಾಗಿರಬೇಕೆಂದು ಕೆಲವರ ಅಭಿಪ್ರಾಯ. ಆದರೆ ಮೌನೇಶ್ವರರು ತಮ್ಮ ವಚನಗಳಲ್ಲಿ ಎಲ್ಲಿಯೂ ಹಾಗೆ ಹೇಳಿಕೊಂಡಿಲ್ಲ ಎನ್ನುತ್ತಾರೆ(ಮೌನೇಶ್ವರ ವಚನ ಸಮೀಕ್ಷೆ, ಸಂ.೧, ಪು.೯–೧೦; ೧೯೮೦).

ಶ್ರೀ ಸಿ.ಬಿ.ಕಡಕೋಳ ಮತ್ತು ಶ್ರೀ ಕೆ.ಪಿ.ಈರಣ್ಣ ಅವರು 'ಬಸವೇಶ್ವರರ ವಿಶ್ವಮಾನ್ಯ ತತ್ತ್ವಗಳು ಮೌನೇಶ್ವರರಿಗೆ ಬಹು ಪ್ರಭಾವಿಯಾಗಿ ತೋರಿವೆ. ಆದ್ದರಿಂದ ಅವರು ಬಸವೇಶ್ವರರನ್ನು ಪೂಜ್ಯರೆಂದು ಭಾವಿಸಿ ಅವರ(ಬಸವಣ್ಣ) ಹೆಸರನ್ನು ವಚನಾಂಕಿತ ವಾಗಿ ಬಳಸಿದ್ದಾರೆ ಎಂದು ಹೇಳುತ್ತಾರೆ(ತಿಂಥಣಿ ಮೌನೇಶ್ವರರ ವಚನಗಳು, ಪು.XIV-X; ೧೯೮೫).

ಡಾ.ಎಂ.ಎಂ.ಪಡಶೆಟ್ಟಿ ಅವರು '...ವಚನಾಂಕಿತ ಬಸವಣ್ಣ ಎನ್ನುವುದು ಕಲ್ಯಾಣದ ಬಸವಣ್ಣನ ಸೂಚನೆ ಎಂದೇ ಸದ್ಯ ಭಾವಿಸಲಾಗಿದೆ ಎಂದು ಹೇಳುತ್ತಾರೆ(ತಿಂತಿಣಿ ಮೋನಪ್ಪಯ್ಯ: ಒಂದು ಅಧ್ಯಯನ, ಪು.೧೨೮;೧೯೯೨).

ಮೌನೇಶ್ವರರ ವಚನಗಳ ಬಗ್ಗೆ ಅಮೋಘ ಶೋಧ ಮಾಡಿದ ಶ್ರೀ ಜೀವಣ್ಣ ಮಸಳಿಯವರು ಬಸವಣ್ಣ ಅಂಕಿತವು ೧೨ನೇ ಶತಮಾನದ ಶರಣರಾದ ಬಸವಣ್ಣನ ವರದಾಗಿರದೆ ಶಿವನ ವಾಹನವಾದ ಮೂಲ ನಂದಿಯನ್ನು ಕುರಿತು ಸ್ವಾಮಿಗಳು 'ಬಸವಣ್ಣ' ಪದವನ್ನು ತಮ್ಮ ವಚನದ ಅಂಕಿತವಾಗಿ ಬಳಸಿಕೊಂಡಿದ್ದಾರೆ(ಶ್ರೀ ಮೌನೇಶ್ವರ ವಚನ ಸಂಗ್ರಹ, ಪು.೧೮, ೧೯೮೭).

ಶ್ರೀ ಮೌನೇಶ್ವರರು ಬಳಸಿರುವ ವಚನಾಂಕಿತವು ಕ್ರಾಂತಿಕಾರಿ ಐತಿಹಾಸಿಕ ವ್ಯಕ್ತಿ ಬಸವಣ್ಣನಾಗಿರದೆ ಸೃಷ್ಟಿಕರ್ತ ಬಸವಣ್ಣ(ವೃಷಭ)ದೇವನೆಂಬುದು ಡಾ.ಶೀಲಾಕಾಂತ ಪತ್ತಾರ ಅವರ ನಿಲುವಾಗಿದೆ. ಅಲ್ಲಮ, ಚೆನ್ನಬಸವಣ್ಣ, ನುಲಿಯ ಚೆಂದಯ್ಯ, ಬಸವಣ್ಣ ಮೊದಲಾದ ಶಿವಶರಣರ ತತ್ತ್ವ, ಜೀವನ ವಿಧಾನಗಳಿಂದ ಪ್ರಭಾವಿತರಾಗಿದ್ದ ಅವರು ಆ ಶಿವಶರಣರಂತೆ ತಮ್ಮ ಇಷ್ಟದೈವವಾದ ಬಸವಣ್ಣನ ಹೆಸರನ್ನು ವಚನಾಂಕಿತ ವಾಗಿ ಇಟ್ಟುಕೊಂಡಿದ್ದಾರೆ ಎಂಬುದನ್ನು ಡಾ.ಶೀಲಾಕಾಂತ ಪತ್ತಾರರು ಸಾಧಾರವಾಗಿ ವಿವರಿಸಿದ್ದಾರೆ(ನೋಡಿ:The Vision of Mauneshwara, p.33-35, 1994).

ಮೌನೇಶ್ವರರು ಬದುಕಿದ ಹಿಂದು ಮುಂದಿನ ದಿನಗಳಲ್ಲಿ ಹಲವು ಮಂದಿ ಬಸವ ನಾಮಾಂಕಿತ ದಾರ್ಶನಿಕರು ಆಗಿ ಹೋಗಿದ್ದನ್ನು ಮರೆಯಲಾಗದು. ಹಂಪಿಯ ಎಮ್ಮೆಬಸವ(೧೫೪೩) ನಾಗಾವಿಯ ಈರಪ್ಪಯ್ಯ(ಗುರುಗುಂಡ ಬಸವ), ಕೊಡೇಕಲ್ಲು ಬಸವಣ್ಣ, ಗೋಣಿ ಬಸವಣ್ಣ, ಗುತ್ತಿಯ ಚೆನ್ನಬಸವೇಶ್ವರ, ಸಾಲೋಟಗಿ ಚನ್ನಬಸವಣ್ಣ ನವರು ಹೀಗೆ ಹಲವು ಮಂದಿ ಅನುಭಾವಿಗಳೂ ಕಾಲಜ್ಞಾನಿಗಳೂ ಬಸವಣ್ಣ ನಾಮಾಂಕಿತದಲ್ಲಿ ಆಗಿ ಹೋಗಿದ್ದಾರೆ.

ಮೌನೇಶ್ವರರ ವಚನಗಳ ಅಂತರ್ಯದಲ್ಲಿ ಕಾಣುವ ಕೆಲವು ಸಂಗತಿಗಳನ್ನು ಈ ಕುರಿತು ಪರಿಶೀಲಿಸುವುದು ಔಚಿತ್ಯವೆನಿಸುತ್ತದೆ. ಮೌನೇಶ್ವರರ ವಚನಗಳಲ್ಲಿ ಬಸವಣ್ಣ ಎನ್ನುವುದು ಹೆಚ್ಚಿನ ಸಂದರ್ಭದಲ್ಲಿ ಪ್ರಾಣಿ ಪ್ರತೀಕವಾಗಿ ಬಳಕೆಯಾಗಿದ್ದನ್ನು ನೋಡಬಹುದು. 'ಬಸವಣ್ಣನೇ ಎತ್ತಲ್ಲವೆ', 'ಬಸವಯ್ಯನೇ ಕಾಮಧೇನು', 'ಕಟ್ಟೇನೆಂದರೆ ಬಸವನಿಲ್ಲ', 'ಆಡಿಕೊಂಡ ಅಪರಾಧಕ್ಕೆ ಬಸವಣ್ಣ ತೋಡುತಿಹನು ನೆಲನ', 'ಕುರುವತ್ತಿ ಬಸವಣ್ಣ', 'ಮುಂಗಾಲ ಮಣ್ಣ, ಹಿಂಗಾಲಿಗೆ ಹಾಕೂತ ಕೊಂಬೀಲಿ ಮಣ್ಣು ಕೆದರುತ', 'ಸತ್ಯದ ಬೀಜವ ಎತ್ತಿನ ಮೇಲೆ ಹೇರಿಕೊಂಡು', 'ಬಸವಣ್ಣನ ಮಲಕಿನ ಮಾತು ತಿಳಿಯದು', 'ನಾದ ಪರಿಪೂರ್ಣ ಬಸವಣ್ಣನ ಭೇದ' ಎನ್ನುವ ಸಾಲುಗಳು ಗಮನಿಸುವಂಥವು. 'ಗುಂಡಿಗೆಯ ಬಸವಯ್ಯ ಗುರುವಾದದ್ದು ಕಂಡದಿಲ್ಲವೆ, ಏನು

ಕುರುಡರು'(ಮಸಳಿ, ಪ.೨೧೯, ಪು.೭೯) ಶ್ರೀ ಸಿ.ಬಿ.ಕಡಕೋಳ ಮತ್ತು ಡಾ.ಕೆ.ಪಿ.ಈರಣ್ಣ ಅವರು ಸಂಪಾದಿತ ಪ್ರತಿಯಲ್ಲಿ ಗುಂಡಿಗೆಯ ಬಸವಯ್ಯ ಎಂದಿದೆ. ಬಸವಯ್ಯನೆಂದರೆ ಮೌನೇಶ್ವರರ ಸಮಕಾಲೀನರಾದ 'ಗುರುಗುಂಡ ಬಸವ' ಎನ್ನುವ ಅಂಕಿತದಿಂದ ಡಂಗುರ ಪದಗಳನ್ನು ರಚಿಸಿದ ನಾಗಾವಿಯ ಈರಪ್ಪಯ್ಯನಿರಬಹುದೆ? ಎನ್ನುವ ಪ್ರಶ್ನೆಯೂ ಏಳುತ್ತದೆ. ಅದೂ ಅಲ್ಲದೆ 'ಎಮ್ಮೆಯ ಬಸವಣ್ಣನ ತಮ್ಮ ಇಮ್ಮಡಿ ಚೆನ್ನಬಸವ ಡಂಗುರ ಸಾರಲು ಬರತೀನಿ ಕಾಣಿರೋ'(ವ.೭೧) ಎನ್ನುವ ಮಾತುಗಳು ಚರ್ಚಿಸುವಂತವು.

ಇದಲ್ಲದೆ 'ಎತ್ತಿನವರು, ಎಮ್ಮೆಯವರು, ಕತ್ತೆಯವರು, ಕುದುರೆಯವರು ಉತ್ಪೈಸಿ ದಂತಹ ವಚನ ಹೊತ್ತಿಗೆಯೊಳಗೆ ಇದ್ದಾವು' ಎನ್ನುವಲ್ಲಿ ತನ್ನ ಸಮಕಾಲೀನ ವಿವಿಧ ಅನುಭಾವಿ ಪಂಥಗಳನ್ನು ಮೌನೇಶ್ವರರು ನೆನೆಯುತ್ತಾರೆ

೧೨ನೇ ಶತಮಾನದ ಶರಣ ಸಂಕುಲದ ಅಲ್ಲಮ, ಬಸವ, ಚೆನ್ನಬಸವಣ್ಣನವರ ತತ್ತ್ವಭಿತ್ತಿಗಳೊಂದಿಗೆ ಅನುಸಂಧಾನಿಸುತ್ತಲೇ ಮೌನೇಶ್ವರರು ತನ್ನ ತಾತ್ವಿಕ ಅಭಿವ್ಯಕ್ತಿಯನ್ನು ಮಂಡಿಸುತ್ತಾರೆ. ಹೀಗಾಗಿ ವಿಶೇಷವಾಗಿ ಮೌನೇಶ್ವರರು ಯಾವ ಪಂಥ ಪಂಗಡ ಗಳಿಗೂ ಗುರುವಿನೊಂದಿಗೂ ತಮ್ಮನ್ನು ತಾವು ನಿರ್ದಿಷ್ಟವಾಗಿ ಗುರುತಿಸಿಕೊಳ್ಳುವುದಿಲ್ಲ. ಈ ಅರ್ಥದಲ್ಲಿ ಬಸವಣ್ಣ ಅಂಕಿತವು ಹನ್ನೆರಡನೆ ಶತಮಾನದ ಬಸವಣ್ಣನದಾಗಲೀ ಕೊಡೆಕಲ್ಲ ಬಸವಣ್ಣನದಾಗಲೀ ಆಗಿರಲಾರದು.

ಶ್ರೀ ಜೀವಣ್ಣ ಮಸಳಿಯವರು ಚರ್ಚಿಸುವಂತೆ ಶಿವನ ವಾಹನವಾದ ಮೂಲ ನಂದಿಯ ಅಂಕಿತವೇ ಮೌನೇಶ್ವರರ ವಚನಗಳ 'ಬಸವಣ್ಣ' ಅಂಕಿತವಾಗಿದೆ ಎನ್ನುವ ಮಾತು ಉಚಿತವೆನಿಸುತ್ತದೆ.

ಇದಕ್ಕೆ ಪೂರಕವಾಗಿ ಹೇಳುವುದಾದರೆ ಲಿಂಗಪುರಾಣದಲ್ಲಿ 'ತ್ರಿಪುರದಹನದ ಕಾಲದಲ್ಲಿ ವಿಶ್ವಕರ್ಮನು ರುದ್ರನಿಗೆ ದೇವಮಯ ರಥ ನಿರ್ಮಿಸಿಕೊಟ್ಟ ವಿವರವಿದೆ. ಆ ರಥದಲ್ಲಿ ಪ್ರಮುಖ ಯುದ್ಧಾಸ್ತ್ರಗಳೊಂದಿಗೆ ರಥದ ಧ್ವಜದಲ್ಲಿ ನಂದಿಯನ್ನು ಸ್ಥಾಪಿಸಿದ ಉಲ್ಲೇಖ ಬರುತ್ತದೆ. ಇದನ್ನೇ ವೃಷಭಧ್ವಜವೆಂದು ಕರೆಯಲಾಗುತ್ತದೆ. ವಿಶ್ವಕರ್ಮನು ಹಂಸವಾಹನನಾದಂತೆ ವೃಷಭವಾಹನನೂ ಆಗಿದ್ದಾನೆ ಎಂಬುದು ಇಲ್ಲಿ ಮಹತ್ವದ ಸಂಗತಿಯಾಗುತ್ತದೆ. ಮೌನೇಶ್ವರರ ವಚನಗಳಲ್ಲಿಯೂ ಬಸವಣ್ಣ, ಬಸವಯ್ಯ, ವೃಷಭೇಂದ್ರ(೫೯೮) ಅಂಕಿತಗಳೂ ಬಳಕೆಯಾಗಿವೆ. ಈ ಕುರಿತು ಇರುವ ಕೆಲವು ಮೌಖಿಕ ಆಕರಗಳನ್ನೂ ಗಮನಿಸಬಹುದು.

ಹಟ್ಟಿ ಚಿನ್ನದ ಗಣಿಯಲ್ಲಿ ಉದ್ಯೋಗಿಗಳಾಗಿರುವ ಶ್ರೀ ಮಹೇಶ ಆಚಾರಿ, ರಾಮಸಾಗರ ಅವರು ನೆನಪಿಸಿಕೊಳ್ಳುವಂತೆ '...ಮೌನೇಶ್ವರರೊಂದಿಗೆ ಯಾವಾಗಲೂ ಒಂದು ಬಸವಣ್ಣ(ಎತ್ತು) ಇರುತ್ತಿತ್ತಂತೆ. ಅದು ಮೌನೇಶ್ವರರು ಹೇಳಿದಂತೆ ಕೇಳುತ್ತಿತ್ತು. ಎತ್ತು ಅವರ ಪ್ರೀತಿಯ ಪ್ರಾಣಿಯಾಗಿತ್ತು. ಆಧ್ಯಾತ್ಮಿಕ ಒಡನಾಡಿಯಾಗಿತ್ತು. ತಾವು

ಹೇಳುವ ಮಾತುಗಳನ್ನು, ಅಲ್ಲವೇನೋ ಬಸವಣ್ಣ, ಹೌದಲ್ಲೋ ಬಸವಣ್ಣ ಎಂದು ಎತ್ತನ್ನು ಸಂಭೋದಿಸಿ ಹೇಳುತ್ತಿದ್ದರಂತೆ' ಎಂದು ತಮ್ಮ ಹಿರಿಯರು ಹೇಳುತ್ತಿದ್ದರೆಂದು ಮಹೇಶ ಅವರು(೩-೩-೨೦೧೬) ನೆನಪಿಸಿಕೊಳ್ಳುತ್ತಾರೆ.

ಅದಕ್ಕೆ ಪೂರಕವಾಗಿ ಶ್ರೀ ಜೀವಣ್ಣ ಮಸಳಿಯವರು ಮೌನೇಶ್ವರರ ವಚನ ಸಂಗ್ರಹದ ಪ್ರಸ್ತಾವನೆಯಲ್ಲಿ(ಪು.೧೮-೧೯;೧೯೮೭) 'ಸತ್ತ ಹೋರಿಯನ್ನು ಬದುಕಿಸಿದ ಶರತ್ತಿನ ಹಿನ್ನೆಲೆಯಲ್ಲಿ ಆ ಹೋರಿಯನ್ನು ಮೌನೇಶ್ವರರೇ ಕರೆದುಕೊಂಡು ಹೋದರು. ಈ ಹೋರಿ ಹನ್ನೆರಡು ವರುಷಗಳ ಕಾಲ ಅವರ ಜೊತೆಗಿತ್ತೆಂದು ಹೇಳುತ್ತಾರೆ. ಈ ಸಂಗತಿಗಳನ್ನು ಗಮನಿಸಿದರೆ ಮೌನೇಶ್ವರರ ವಚನಾಂಕಿತವು ವ್ಯಕ್ತಿಗಳದ್ದಾಗಿರದೆ, ಪರಶಿವನ ವಾಹನವಾದ ನಂದಿಯದು ಎಂದು ಹೇಳಲವಕಾಶವಿದೆ. ಈ ಅರ್ಥದಲ್ಲಿ 'ಬಸವಣ್ಣ' ಅಂಕಿತವು ಶ್ರಮ ಸಂಸ್ಕೃತಿಯ ಪ್ರತೀಕವಾದ ಶಿವನ ವಾಹನವಾದ ನಂದಿಯ ಹೆಸರೇ ಹೊರತು ಯಾವುದೇ ವ್ಯಕ್ತಿಗಳದಲ್ಲ ಎನ್ನುವುದು ಸರಿಯಾದ ಮಾತಾಗುತ್ತದೆ.

'ಭೂಮಿಯ ಹೊತ್ತು ನಿಲ್ಲಿಸಿದ ಬಸವಯ್ಯನಲ್ಲದೆ ದೇವನೆಲ್ಲಿಹನು ಮರ್ತ್ಯಕ್ಕೆ' (೩೫೯) 'ಪೃಥ್ವಿಗಧಿಪನು ಬಸವ ಪರಶಿವನಹುದಹುದು'(೭೪೭)ಎನ್ನುವ ಹಲವು ಆಂತರಿಕ ಸೂಕ್ಷ್ಮಗಳು ಸೃಷ್ಟಿ ಶಕ್ತಿಯ ರೂಪವು ಕಾಲಚಕ್ರದ ಪ್ರತೀಕವೂ ಆದ ವಿಶ್ವಕರ್ಮ ಪರಮಾತ್ಮನನ್ನೇ ಕುರಿತದ್ದಾಗಿದೆ.

ಬಾಚಿ ಕಾಯಕದ ಬಸವಯ್ಯನೂ ಕೂಡ 'ಬಸವಣ್ಣಪ್ರಿಯ ವಿಶ್ವಕರ್ಮಟಕೆ ಕಾಳಿಕಾವಿಮಲ ರಾಜೇಶ್ವರ ಲಿಂಗವು ನಿರಾಳ ನಿಶ್ಚಿಂತ ನಿರ್ಲೇಪನು' ಎಂದೂ, ಬಸಪ್ಪನ ಹೆಂಡತಿ ಕಾಳವ್ವೆ 'ಕರ್ಮಹರ ಕಾಳೇಶ್ವರ'ವೆಂದು, ಹಾವಿನಹಾಳ ಕಲ್ಲಯ್ಯನು 'ಮಹಾಲಿಂಗ ಕಲ್ಲೇಶ್ವರಾ' ಎಂಬ ಅಂಕಿತವಿಟ್ಟುಕೊಂಡಿರುವುದನ್ನು ನೋಡಿದರೆ ಆದಿಮೂಲದ ವೃಷಭ ಕಲ್ಪನೆಯೇ ಮೌನೇಶ್ವರರ ವಚನದ 'ಬಸವಣ್ಣ' ಅಂಕಿತವಾಗಿದೆ. 'ಬಸವಣ್ಣ ಪ್ರಿಯ' 'ವಿಶ್ವಕರ್ಮಟಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ' ಎನ್ನುವಲ್ಲಿ 'ಬಸವ' ಎನ್ನುವುದು ಅದೊಂದು ಸೃಷ್ಟಿತತ್ತ್ವ ಹಾಗೂ ಶಕ್ತಿತತ್ತ್ವದ ಪ್ರತೀಕವಾಗಿರುವುದನ್ನು ಕಾಣಬಹುದು.

ಕಾಲಜ್ಞಾನ ವಚನಗಳ ಸ್ವರೂಪ

ಅನುಭಾವಿ ಎಷ್ಟೇ ದೊಡ್ಡವನಾದರೂ ಭಾಷೆಯ ಬಳಕೆಯಲ್ಲಿ ಸಾಮಾನ್ಯರಿಗೆ ಹತ್ತಿರವಾಗಿರುತ್ತಾನೆ. ಜಗತ್ತಿನ ಆಗುಹೋಗುಗಳನ್ನು ತನ್ನ ವಿಶಿಷ್ಟ ದೃಷ್ಟಿಕೋನಗಳಿಂದ ವಿವರಿಸುತ್ತಿರುತ್ತಾನೆ. ಮೌನೇಶ್ವರರು ಇಂಥ ವರ್ತಮಾನಗಳಿಗಾಗಿ ದುಡಿಸುವ ಭಾಷೆ ವಿಸ್ತಾರಕ್ಕಿಂತ ಆಳಕ್ಕಿಳಿಯಲು ಪ್ರಯತ್ನಿಸುತ್ತದೆ. ಮೌನೇಶ್ವರರಲ್ಲಿ ಕಾಣುವ ಬೌದ್ಧಿಕ ಮುಗ್ಧತೆ ಮತ್ತು ಮುಕ್ತತೆ ಈ ಲೋಕದ ಸಮಸ್ತವನ್ನು ನಿರೂಪಕ ದೃಷ್ಟಿಯಿಂದ ಮಾತನಾಡಿಸುತ್ತದೆ, ಅರ್ಥೈಸುತ್ತದೆ. ಉಳಿ, ಬಾಚಿ, ಚಮ್ಮಟಿಗೆ, ಚಾಣ, ಇಕ್ಕಳು

ಸುತ್ತಿಗೆ, ಬೊಕ್ಕಸಗೋಲು, ಮಳೆ, ಮೋಡ, ಪ್ರಾಣಿ, ಪಕ್ಷಿ, ಪ್ರಕೃತಿ ಇಂಥ ಪದಾರ್ಥ ಜಗತ್ತು ವಾಸ್ತವದಲ್ಲಿ ಪಡೆದ ಸ್ಥಾನಗಳೇನು ಅವುಗಳ ಬಳಕೆಯ ವಿಧಾನಗಳಾವವು ಎಂಬುದನ್ನು ಸಾಮಾಜಿಕವಾಗಿ ಸಾಮಾನ್ಯನಂತೆ ಗಮನಿಸಿಯೇ ಆಮೇಲೆ ಅವುಗಳಿಗೊಂದು ವಿಶೇಷ ಕ್ರಿಯೆ ಹಾಗೂ ಅರ್ಥವನ್ನು ಕಲ್ಪಿಸುತ್ತಾರೆ. ಅವುಗಳ ಕರ್ತೃತ್ವ ಶಕ್ತಿಯನ್ನು(ಫಂಕ್ಷನ್)ಗುರುತಿಸಿ ಅವನ್ನು ಆಧ್ಯಾತ್ಮಿಕ ಎತ್ತರಕ್ಕೆ ಒಯ್ಯುವುದು ಕನ್ನಡ ಅನುಭಾವಿ ಕಥನದ ವಿಶೇಷ ಲಕ್ಷಣಗಳಲ್ಲೊಂದು.

ಕಾಲಜ್ಞಾನ ಎನ್ನುವಲ್ಲಿ ಕಾಲ ಎನ್ನುವ ಪೂರ್ವಪದ ಕಾಲ, ಸಮಯ, ಹೊತ್ತು ಕಾಲಗಣನೆ ಎಂಬುದನ್ನೂ ಜ್ಞಾನ ಎನ್ನುವ ಉತ್ತರ ಪದ ಅರಿವು, ತಿಳಿವಳಿಕೆ ಎಂಬುದನ್ನು ಸೂಚಿಸುವಂತಿದೆ. ಕಾಲದ ಆಗು ಹೋಗುಗಳನ್ನು ಸೂಚಿಸುವುದನ್ನು ಕಾಲಜ್ಞಾನವೆಂದು ಸಾಮಾನ್ಯವಾಗಿ ಗುರುತಿಸಲಾಗಿದೆ.

ಈ ಕಾಲಗಣನೆಯಲ್ಲಿ ವಿಜ್ಞಾನಿ ಮತ್ತು ಅನುಭಾವಿಗಳ ರೀತಿ ವಿಭಿನ್ನವಾಗಿರುವಂಥದ್ದು. ವಿಜ್ಞಾನಿ ಕಾಲವನ್ನು ಬಾಹ್ಯೇಂದ್ರಿಯದ ಮೂಲಕ ಗ್ರಹಿಸಿದರೆ, ಅನುಭಾವಿ ತನ್ನ ಅಂತಃಸ್ಫುರಣದಿಂದ ಅರಿಯುತ್ತಾನೆ. ಭೂಲೋಕದ ಅಖಂಡ ಅರಿವಿನ ಕಾಲಜ್ಞಾನವನ್ನೇ "ತ್ರಿಕಾಲಜ್ಞಾನ" ಎಂದು ಕರೆಯಲಾಗುತ್ತದೆ. ಪತಂಜಲಿಯಂಥವರು ಯೋಗಮಾರ್ಗದಿಂದ ಇದನ್ನು ಅರಿಯಲು ಸಾಧ್ಯವೆಂದರೆ, ಮೌನೇಶ್ವರರಂಥವರು ಅದನ್ನು ಅನುಭವದ ಮೂಲದಿಂದ ಸಾಧಿಸಿ ತೋರಿಸಿದರು. ಇದು ಸಂತನೊಬ್ಬನ ಅನುಭಾವಿಕತೆಯೆ ಹೊರತು ಜೋತಿಷ್ಯವಲ್ಲ. ಜ್ಯೋತಿಷ್ಯಕ್ಕೂ ಕಾಲಜ್ಞಾನಕ್ಕೂ ವ್ಯತ್ಯಾಸವಿದೆ. ಇದಕ್ಕೆ ಉದಾಹರಣೆಯಾಗಿ ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಬರುವ ಸೂರ್ಯಮಿತ್ರನು ಸುಧರ್ಮಾಚಾರ್ಯರಿಗೆ ಜ್ಯೋತಿಷ್ಯವನ್ನು ಕಲಿಸಬೇಕೆಂದು ಕೇಳಿದಾಗ ಇದು ಜ್ಯೋತಿಷ್ಯವಲ್ಲ, 'ಎಮ್ಮಂತಪ್ಪ ಋಷಿಯರಿಗಲ್ಲದೆ ಪೇಟಲುಂ ಕಲಿಯಲುಂ ಆಗದೆಂದು' ಹೇಳುತ್ತಾರೆ. ಜ್ಯೋತಿಷ್ಯ ಗುರುವಿನಿಂದ ಕಲಿಯುವುದಾದರೆ ಕಾಲಜ್ಞಾನ ಸ್ವಾನುಭವದಿಂದ ತಿಳಿಯುವಂಥದ್ದು. ಪ್ರಕೃತಿಯ ಆಗು ಹೋಗುಗಳೊಂದಿಗಿನ ನಿರಂತರ ಸಂಪರ್ಕ ಮತ್ತು ಸೂಕ್ಷ್ಮಗ್ರಹಿಕೆ(ಅಬ್ಜರವೇಷನ್) ಕಾಲ ಹಾಗೂ ಜ್ಞಾನದ ತಿಳುವಳಿಕೆಯನ್ನು ಮೂಡಿಸುತ್ತದೆ.

ದೂರಶ್ರವಣ, ದೂರದರ್ಶನ, ಶೀಘ್ರಗಾಮಿತ್ವ, ವಾಕ್ಸಿದ್ಧಿ, ಪರಕಾಯಪ್ರವೇಶ ಇವೇ ಮುಂತಾದ ಸಿದ್ಧಿಗಳು ಹತಯೋಗಿಗಳಿಗೆ ಐದನೇ ವರ್ಷದಲ್ಲಿಯೇ ದೊರಕುತ್ತವೆಂದು ಷಣ್ಮುಖ ಶಿವಯೋಗಿಗಳು ಹೇಳುತ್ತಾರೆ(ಅಖಂಡೇಶ್ವರರ ವಚನ, ಪ್ರಾಣಸ್ಥಲ, ೬೩). ಜೈನರಲ್ಲಿ ಅವಧಿಜ್ಞಾನದಿಂದ ಇದು ಹುಟ್ಟುತ್ತದೆ.

ಈ ರೀತಿಯ ಜ್ಞಾನ ಸಂಗತಿಗಳು ಜಗತ್ತಿನ ಎಲ್ಲ ಜನಸಮುದಾಯದ ಚರಿತ್ರೆಯಲ್ಲಿ ಎಲ್ಲ ಮತಧರ್ಮದ ಬೋಧಕರಲ್ಲಿ ಒಂದೊಂದು ವಿಧದಲ್ಲಿ ಕಾಣುತ್ತವೆ. ಗ್ರೀಕರು, ಅರಬ್‌ರು, ರಷಿಯನ್‌ರಲ್ಲಿಯೂ ಕಾಲಜ್ಞಾನದ ರೂಪಗಳಿವೆ. ರಷಿಯನ್‌ರಲ್ಲಿ

ಕಾಲಜ್ಞಾನಿಗಳಿಗೆ 'ಓರಕಲ್' ಎಂದು ಇದನ್ನು ಪ್ರಸಾರ ಮಾಡುವವರನ್ನು ಕನ್ನಡದಲ್ಲಿ ಸಾರು ಅಯ್ಯಗಳೆಂದು ಕರೆಯಲಾಗುತ್ತದೆ. ಮೋತಲೂರು ವೀರಬ್ರಹ್ಮಯ್ಯಂಗಾರರು ಇಲ್ಲಿ ಸೃಷ್ಟಿಸುವಂಥ ಹೆಸರು. ಕಾರಣ ಮೌನೇಶ್ವರರಂತೆ ಬ್ರಹ್ಮಯ್ಯಂಗಾರರು ವಿಶ್ವಕರ್ಮ ಕುಲ ಸಂಜಾತರಾಗಿದ್ದಾರೆ. ತ್ರಿಕಾಲಜ್ಞಾನಿಗಳಾಗಿದ್ದ ಮೌನೇಶ್ವರರು ಲೋಕವನ್ನು ಎಚ್ಚರಿಸಲು ಮತ್ತು ಜಾಗೃತಗೊಳಿಸಲು ಕಾಲಜ್ಞಾನ, ಫರಾಕು, ಡಂಗುರ ಪದಗಳು, ಹುಷಾರ್ ಪದಗಳು, ಸುವ್ವಿ ಪದಗಳು, ಘಾತೆಗಳು ಹೀಗೆ ವಿವಿಧ ವಚನ ರೂಪಗಳನ್ನು ಬಳಸಿದ್ದಾರೆ.

'ಕಾಲಜ್ಞಾನವ ತಂದ ಕಡೆ ಮೊದಲಿಗೆ ಹಾಸ್ಯದ ಮಾತಲ್ಲ, ಹುಚ್ಚ ಮೋನಯ್ಯ ಹೇಳಿದ ಮಾತು ಮೆಚ್ಚುವರುಂಟೆ' 'ಸಾರಿ ಹೇಳಿದವರಿಗೆ ಸೇರಲರಿಯವು ದೋಷ' ಎಂದು ಕಾಲಜ್ಞಾನವನ್ನು ಸಾರಿದರೆ 'ನಿಜಮುಂಡೆ ತಾನು ಮೂಗುತಿಯನಿಟ್ಟಾಳು' (ಡಂಗುರಪದ) 'ಮೋನಯ್ಯನ ವಚನವು ಚಾಣದ ಹದನದಂತೆ ನಾನು ನೀನೆಂಬ ಮಥನವ ಬಿಟ್ಟು ಜ್ಞಾನವುಳ್ಳವರು ಬೆರಕೊಳ್ಳಿ ಸಾಕಾದರೆ ಸರಕೊಳ್ಳಿ ಏಕವಾದರೆ ತಿಳಕೊಳ್ಳಿ...'(ಹುಷಾರ ವಚನ) 'ಆದಿ ಮೂರುತಿ ಅಲ್ಲಮಪ್ರಭು ಮುಲ್ಲ ಮಹಮ್ಮದ ರಸೂಲಲ್ಲ ಬಹುಫರಾಕು'(ಫರಾಕು ವಚನಗಳು). ಹೀಗೆ ಕಾಲಜ್ಞಾನ, ಖಂಡಜ್ಞಾನ ನೀತಿ, ಬೋಧ ಪ್ರಧಾನವಾದ ನಾಲ್ಕು ರೀತಿಯಲ್ಲಿ ವಚನಗಳನ್ನು ರಚಿಸಿದ್ದು ಕಾಣುತ್ತದೆ. ವ್ಯಕ್ತಿ ಮತ್ತು ಸಮಾಜದಲ್ಲಿ ವಿಷಮತೆಗಳನ್ನು ಅದರಿಂದ ಮುಂದಾಗುವ ಪರಿಣಾಮ ಗಳನ್ನು ನೀತಿ ಹಾಗೂ ಜ್ಞಾನಮಾರ್ಗದಲ್ಲಿ ಕಾಲಜ್ಞಾನಗಳ ಮೂಲಕ ಹೇಳಿರುವ ವಚನಗಳು ಗಮನಾರ್ಹವಾದಂಥವು. ಇಂಥ ಪರಂಪರೆಯನ್ನು ಮೌನೇಶ್ವರರಿಗೂ ನಿಕಟ ಪೂರ್ವದ ಕೊಡೆಕಲ್ಲು ಮತ್ತು ಸಾಲೋಟಗಿ ಸಂಪ್ರದಾಯದಲ್ಲಿಯೂ ಕಾಣಬಹುದು.

ಆರು ದರುಶನದ ಮೋರೆ ಮುರಿದಾನೆ

'ಆರು ದರುಶನದಾಟ ತೀರಿ ಹೋದ ಮೇಲೆ ಮೀರಿ ಮಾಡುವುದೆಲ್ಲ ಮರುಳಾಟ ಬಸವಣ್ಣ, ಊರಾಟ ನೋಡಿ ಉಣಬೇಕು ಹಿಂದಿನ ಹೋರಾಟವೆಲ್ಲ ಬಿಡಬೇಕು' ಎನ್ನುವಲ್ಲಿ ಮೌನೇಶ್ವರರು ಬಹುಮುಖ್ಯವಾಗಿ ಪ್ರಭುತ್ವ ಮತ್ತು ಪುರೋಹಿತಶಾಹಿ ಸಂಘಟಿತ ರೂಪಗಳಾಗಿ ಜ್ಞಾನವಲಯಗಳೆಂದು ಗುರುತಿಸಿಕೊಂಡಿದ್ದ ಪ್ರಾಚೀನ ಭಾರತದ ತತ್ತ್ವಶಾಸ್ತ್ರ, ಧರ್ಮಶಾಸ್ತ್ರ, ತರ್ಕ, ಮೀಮಾಂಸೆ, ಶಾಸ್ತ್ರ, ಪುರಾಣಗಳನ್ನು ತೀವ್ರವಾಗಿ ಒರೆಗೆ ಹಚ್ಚುತ್ತಾರೆ. ಅವುಗಳಲ್ಲಿ ಮನೆ ಮಾಡಿದ್ದ ಜಡತ್ವ ಹಾಗೂ ಅಸಮಾನ ನೆಲೆಗಳನ್ನು ಜಾಲಾಡುತ್ತಾರೆ. 'ದರುಶನ ಬಿಡಿಸ್ಯಾರು ಹರುಷವ ತೋರ್ಯಾರು ಮರಸ್ಯಾನು ಹಿಂದನ ಭವಮಾಲೆ' ಎನ್ನುವ ಕೊಡೇಕಲ್ಲ ಬಸವಣ್ಣನವರ ಮಾತಿನಂತೆ

ಈ ಕಾಲದ ಎಲ್ಲ ಆರೂಢರು ಸಾಂಸ್ಥಿಕ ವೀರಶೈವ ಮತ್ತು ವೈದಿಕ ಜ್ಞಾನಪರಂಪರೆಗಳನ್ನು ಕಟು ವಿಮರ್ಶೆಗೆ ಒಡ್ಡುತ್ತಾರೆ. ವಿಶೇಷವಾಗಿ ಷಡ್ದರ್ಶನಗಳನ್ನು ಅದರ ಸಾಂಪ್ರದಾಯಿಕ ಹಾಗೂ ಅಪೌರುಷೇಯ ನೆಲೆಗಳನ್ನು ವಿಸರ್ಜಿಸುತ್ತಾರೆ. 'ಷಡು ದರುಶನ ದಾಟ ಕಡಿಯಾಗಿ ಹೋದ ಮೇಲೆ ಜಡೆಮುಡಿಗಳು ಯಾತಕ್ಕೆ' ಎನ್ನುವಲ್ಲಿಯೇ ವರ್ಣವ್ಯವಸ್ಥೆಯ ವಿರುದ್ಧ ಮೌನೇಶ್ವರರು ಉಗಳುವ ಬೆಂಕಿ ಉಂಡೆಗಳಂಥ ಮಾತುಗಳು ಚಾರಿತ್ರಿಕವಾದಂಥವು.

ಭಾರತೀಯ ದರ್ಶನಗಳ ಕುರಿತು ಅಪೌರುಷೇಯ ಶ್ರೇಷ್ಠ ಮತ್ತು ಪ್ರಶ್ನಾತೀತ ಎನ್ನುವ ಅವಿಮರ್ಶಾತ್ಮಕ ಚರ್ಚೆಗಳೇ ಹೆಚ್ಚು ನಡೆದಿರುವುದು ಚಾರಿತ್ರಿಕ ಸತ್ಯ. ಇದರ ಬಿರುಗಾಳಿಯಲಿ ಸ್ಥಳೀಯ ಅಥವಾ ದೇಶಿ ಎನ್ನಬಹುದಾದ ಜ್ಞಾನ ಪರಂಪರೆಗಳು ತೇಲಾಡಿ ಹೋದವು. ಅವು ಪರಿಶಿಷ್ಟ ಅಥವಾ ಜಾನಪದ ಎಂದು ಅಂಚಿಗೆ ತಳ್ಳಲ್ಪಟ್ಟವು. ಜ್ಞಾನ ಮತ್ತು ಆಧ್ಯಾತ್ಮದ ಚರ್ಚೆಯಿಂದ ವಂಚಿತರಾದ ಜನತೆಯ ಪ್ರತಿನಿಧಿಗಳಾಗಿ ಮೌನೇಶ್ವರರಂಥವರು ವೈದಿಕ ದರ್ಶನ ಹಾಗೂ ನಿರ್ಬಂಧಗಳ ಆಚೆಗೂ ಒಂದು ಆಧ್ಯಾತ್ಮಿಕತೆಯನ್ನು, ಒಂದು ಜೀವನ ಪರಂಪರೆಯನ್ನು ಬೆಳೆಸುವ ಹಾಗೂ ಕಟ್ಟಿಕೊಳ್ಳಬಹುದಾದ ಹಲವು ಸಾಧ್ಯತೆಗಳನ್ನು ಸೃಷ್ಟಿಸಿದರು. ಗೋರಖನಾಥನಿಂದ ಹಿಡಿದು ಕೊಡೇಕಲ್ಲ ಬಸವಣ್ಣ, ಮಂಟೇಸ್ವಾಮಿ, ಮೌನೇಶ್ವರರ ವರೆಗಿನ ಸಿದ್ಧ ಹಾಗೂ ಸಂತರು ಇದನ್ನು ತೋರಿಸಿ ಕೊಟ್ಟರು. 'ಈ ದೇಶದಲ್ಲಿ ಆಧ್ಯಾತ್ಮಿಕತೆ ಯೆಲ್ಲಾ ಬ್ರಾಹ್ಮಣರ ಸೊತ್ತು, ಆದರೆ ಹೆಂಡ, ಮಾಂಸ, ಮಜ ಮಾಡುವುದು ಇದು ಶೂದ್ರರ ಸೊತ್ತು ಎನ್ನುವುದನ್ನು ಸುಳ್ಳು ಮಾಡಿ ದೇಶದಲ್ಲಿ ನಿಜವಾದ ಆಧ್ಯಾತ್ಮಿಕ ಪರಂಪರೆಯನ್ನು ಸೃಷ್ಟಿ ಮಾಡಿದವರು ದುಡಿಯುವ ಜನಗಳು, ಶೂದ್ರರು ಮತ್ತು ದಲಿತರು. ನಿಜವಾದ ಆಧ್ಯಾತ್ಮಿಕ ಪರಂಪರೆ ಎನ್ನುವುದು ಜನರ ಮಧ್ಯದಿಂದ, ದುಡಿಮೆಯ ನೆಲೆಯಿಂದ ಹುಟ್ಟುತ್ತಾ ಬಂದಿತು'(ಡಾ.ಎಚ್.ಎಸ್.ಶಿವಪ್ರಕಾಶ, ಮಂಟೇಸ್ವಾಮಿ: ಸೃಜನಶೀಲ ಅನುಸಂಧಾನ, ಪು.೪೩, ೨೦೦೪). ಹೀಗೆ ವೇದ ವೇದಾಂಗಗಳ ಪರಮೋತ್ಕೃಷ್ಟ ಹಾಗೂ ನಿತ್ಯ ಸತ್ಯಗಳೆಂಬ ಪರಿಕಲ್ಪನೆಗಳನ್ನು ಮುರಿದು ಕಟ್ಟುವ ಕೆಲಸವನ್ನು ಮೌನೇಶ್ವರರಂಥವರೂ ಮಾಡುತ್ತಾರೆ.

ಭಾರತೀಯ ಭಾವನಾವಾದೀ ದರ್ಶನ ಹಾಗೂ ದಾರ್ಶನಿಕರಿಗೆ ಪ್ರಕೃತಿ ಕಲ್ಪಿತ ವಾದದ್ದು. ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಮನುಷ್ಯನನ್ನು ಕರ್ಮ, ಗ್ರಹಚಾರ, ಹಣೆಬರಹಗಳ ಬಂಧನದಲ್ಲಿ ಬಂಧಿಸಿ ಜಡವಾಗಿಸಿತ್ತು. ಇದರಿಂದ ಈ ಜಗತ್ತನ್ನು ತಿಳಿಯುವ ಮತ್ತು ಸಂಕಷ್ಟಗಳಿಂದ ಪಾರಾಗಿ ಮನುಷ್ಯ ಸಾತ್ವಿಕ ಮಾರ್ಗದಲ್ಲಿ ನಡೆಯಬೇಕಾದ ದಾರಿಯನ್ನು ಅದು ಬಹುಮಂದಿಗೆ ತೆರೆದು ತೋರಲಿಲ್ಲ. ಇದರಿಂದ ಕಾಯಕ ಮಾಡುವವನ ತತ್ತ್ವಶಾಸ್ತ್ರದ ಜಾಡಿನಲ್ಲಿ ಶೋಷಕ ವರ್ಗದ ಶ್ರೇಷ್ಠತೆಯನ್ನು

ಸಾರುವ ತಾತ್ತ್ವಿಕತೆ ಹುಟ್ಟಿಕೊಂಡಿತು. ಅದನ್ನೇ ಉನ್ನತವಾದ ತಾತ್ತ್ವಿಕ ಪಂಥವೆಂದು ಕರೆಯಲಾಯಿತು. ಇದನ್ನೇ ಮೌನೇಶ್ವರರು

ಆರು ದರುಶನದ ಬೆರಕಿಯ ಮಾತು ಕೇಳ
ಬಾರದು ಎಂದು ಕಿವಿಗೆ ನೀಲದ ಪೊಗ ಧರಿಸಿದ
ಲೋಕದ ಶೀಲ ಲೀಲೆಗಳ ಬಿಡಬೇಕು
ಕೂಲಿಯ ಮಾಡಿ ಉಣಬೇಕು, ಬಸವಣ್ಣ(೨೭೬)

ವಿರಾಮವಾಗಿ ಕುಳಿತು ಉಣ್ಣುವ ವರ್ಗವೊಂದು ಉದ್ಭವವಾದಾಗ ಅಲ್ಲಿ ಕ್ರಿಯೆ ಮತ್ತು ಅನುಭಾವಕ್ಕಿಂತ ಒಣ ಸಿದ್ಧಾಂತದ ಚರ್ಚೆ ಮುಂಚೂಣಿಗೆ ಬರುತ್ತದೆ. ಚಿಂತನೆಗೂ ವಸ್ತು ಸ್ಥಿತಿಗೂ ಸಂಬಂಧವಿರುವುದಿಲ್ಲ. ಅದನ್ನೇ ಮೌನೇಶ್ವರರು 'ಬೆರಕಿಯ ಮಾತು' ಎಂದು ಕರೆದಿದ್ದಾರೆ. ಬೆಂಜಮಿನ್ ಫ್ಯಾರಿಂಗಟನ್ ಹೇಳುವಂತೆ ಕರಕುಶಲಕಾರನೊಬ್ಬ ಅನುಭವದಿಂದ ವಿಷಯಗಳನ್ನು ಸೈದ್ಧಾಂತಿಕವಾಗಿ ನಿರೂಪಿಸಿದರೆ, ಚಿಂತಕ ಕೇವಲ ತನ್ನ ಮನಬಂದಂತೆ ರೂಪಿಸಿ ತೃಪ್ತಿ ಪಡೆಯಬಹುದು(ಉದ್ಧೃತ: ಜಿ.ರಾಮಕೃಷ್ಣ, ಮುನ್ನೋಟ, ಪು.೨೨, ೨೦೦೬). ಅಂದರೆ ಕ್ರಿಯೆ ಮತ್ತು ಅರಿವಿನ ವಿಚ್ಛೇದನವನ್ನು ಇಂಥ ಸಿದ್ಧಾಂತಗಳಲ್ಲಿ ಕಾಣುತ್ತೇವೆ. ಆದರೆ ಮೌನೇಶ್ವರರಂಥ ಆರೂಢ ಮನೋಭಾವದವರು ಸಿದ್ಧಾಂತಕ್ಕಿಂತ ಕ್ರಿಯೆ ಮತ್ತು ಜ್ಞಾನಕ್ಕೆ ಒತ್ತು ನೀಡುತ್ತಾರೆ.

'ಕಾಯವೇ ಕಾಳಮ್ಮ', 'ಕತ್ತಲೆ ಕಾಳಮ್ಮ', 'ಕತ್ತಲೆಯ ಗರ್ಭದಲ್ಲಿಯೇ ಕತ್ತಲೆ ಹುದುಗಿತ್ತು'(ತಮ್ ಅಸೀತ್ ತಮಾಸಾಗೂಢಂ) ಇಂಥ ಎಲ್ಲೆಗಾನದ ಅನಂತತೆ ಮತ್ತು ಕತ್ತಲು ವ್ಯಕ್ತವಾಗೋದು ಬುದ್ಧಿ ಹಾಗೂ ಸಿದ್ಧಿಯಿಂದ ಮಾತ್ರ. ಅದು ಸ್ವಯಂವೇದ್ಯ. ಕ್ರಿಯೆ ಅದಕ್ಕೆ ಮುಖ್ಯ.

ಸಮಾಜದಲ್ಲಿ ಶೋಷಕರು ತಮ್ಮ ಪ್ರಣಾಲಿಕೆಗೆ ಒಂದು ಸೈದ್ಧಾಂತಿಕ ನೆಲೆಗಟ್ಟು ಕಲ್ಪಿಸಿಕೊಂಡಂತೆ ಶೋಷಿತರು ತಮ್ಮ ಘೋಷಣೆಯನ್ನು ರೂಢಿಸಿಕೊಂಡಿರುತ್ತಾರೆ ಎನ್ನುವುದಕ್ಕೆ ಮೌನೇಶ್ವರರು ಸಾಕ್ಷಿಯಾಗಿದ್ದಾರೆ. ಅವರ ವಚನಗಳಲ್ಲಿ ಕಾಣುವ ರೊಚ್ಚು 'ಶ್ರೇಷ್ಠ' ಸಂಗತಿಗಳನ್ನೆಲ್ಲ ನಡುಗಿಸಿದ್ದು ಸುಳ್ಳಲ್ಲ. 'ಭೂಸುರರು ನಾಶವಾಗಲಿ' 'ಆರು ದರುಶನದವರಿಗೆ ಅಹಂಕಾರವ್ಯಾಕೇ' 'ಹೋರು ರೋಹಿತದ ಹೊಲೆಯೊಳಗೆ ಬಂದವರಿಗೆ ಬೇರೊಂದು ಕುಲವುಂಟೆ', 'ಆರು ದರುಶನವೆಲ್ಲ ತೀರಿಹೋದ ಮೇಲೆ ಮೀರಿ ಮಾಡುವುದೆಲ್ಲ ಮರುಳಾಟ', 'ಲೋಕದ ಹೊಟ್ಟು ಶಾಸ್ತ್ರಗಳ ಬಿಡಬೇಕು', 'ನಿಮ್ಮ ಪಿಸರುಶಾಸ್ತ್ರವ ಬಿಡರ್ಯಾಕೇ', 'ಲೋಕದ ಹಾಳು ಶಾಸ್ತ್ರವ ಬಿಡಬೇಕು' ಎನ್ನುವ ಕೆಂಡದಂತಹ ಮಾತುಗಳು ವೈದಿಕ ಧರ್ಮ ಹಾಗೂ ಆ ಶಾಸ್ತ್ರಗಳು ಹೊಂದಿದ್ದ ಕರ್ಮಠತೆಯನ್ನು ಕಟು ವಿಮರ್ಶೆಗೆ ಒಡ್ಡುತ್ತವೆ.

ಭೌತವಾದದ ಮೂಲತತ್ತ್ವವೆಂದರೇ ನಮ್ಮ ಕಣ್ಣಿಗೆ ಕಾಣುವ ಸುತ್ತಲಿನ ವಿಶ್ವಕ್ಕೆ ಸ್ವತಂತ್ರ ಅಸ್ತಿತ್ವವಿಷೆ ಅದು ಕಲ್ಪಿತವಲ್ಲ ಎಂಬುದು. ಭಾವನಾವಾದ ಈ ತತ್ತ್ವವನ್ನು ತಳ್ಳಿಹಾಕಿ ವಸ್ತುಗಳ ಅಸ್ತಿತ್ವ ಮನುಷ್ಯ ಪ್ರಜ್ಞೆಯನ್ನಾಧರಿಸಿದ್ದು ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ ಎನ್ನುತ್ತದೆ. ಇಂಥ ಅಸಂಗತತೆಗಳನ್ನು ಮೀರಲು ತಾರ್ಕಿಕ ಹಾಗೂ ವೈಜ್ಞಾನಿಕ ಮಾರ್ಗಬೇಕು. ಆದರೆ ಷಡುದರುಶನಗಳಾದ ನ್ಯಾಯ, ವೈಶೇಷಿಕ, ದರ್ಶನಗಳು ಯಾವೊಂದು ಸತ್ಯವೂ ನಿರ್ಧರಿತವಾಗುವುದು ಆಚರಣೆಯಿಂದ ಎಂದು ಹೇಳುತ್ತವೆ. ನೀರು ಕುಡಿದರೆ ಬಾಯಾರಿಕೆ ನೀಗುವುದೋ ಇಲ್ಲವೋ ಎನ್ನುವ ಚರ್ಚೆಯಲ್ಲಿ ಉತ್ತರ ಸಿಗುವುದು ಅನುಭವವೇದ್ಯವಾದ ಸತ್ಯಕ್ಕೆ. ಅನುಭವಜನ್ಯವಾದುದಕ್ಕೆ ಬೇರೆ ಸಾಕ್ಷಿ ಪ್ರಮಾಣಗಳು ಬೇಕಿಲ್ಲ. ತನಗೆ ತಾನೇ ಪ್ರಮಾಣ. 'ಆವ ಪ್ರಮಾಣ ವನ್ನರಿಯದೆ ದೇವ ಪ್ರಮಾಣ ಬಲ್ಲೆ'ನೆಂಬವರ ದರ್ಶನ ಪ್ರಜ್ಞೆಯನ್ನು ಮೌನೇಶ್ವರರು ಅಲ್ಲ ಗಳೆಯುತ್ತಾರೆ.

ವಿಶ್ವವೆಲ್ಲ ಮಿಥ್ಯೆ ಮತ್ತು ಮಾಯೆ ಎಂದರು ಶ್ರೀ ಶಂಕರರು. ಶ್ರಮಿಕ ಹಾಗೂ ಕೃಷಿ ಕರಿಗೆ ವಿಶ್ವ ಸತ್ಯ. ಪ್ರತಿಯೊಂದು ಸತ್ಯವು ದುಡಿಮೆಯ ಸತ್ಯದಿಂದ ಹುಟ್ಟುತ್ತದೆ ಎಂದು ಹೇಳುವ ಮೂಲಕ ಯಜ್ಞಯಾಗಾದಿಗಳಿಂದ ಎಲ್ಲ ಫಲವೂ ದೊರೆಯುತ್ತ ದೆನ್ನುವ ದುಡಿಮೆ ರಹಿತ ತಾತ್ವಿಕ ದರ್ಶನವನ್ನು ಮೌನೇಶ್ವರರು ಜೊಳ್ಳೆಂದು ತೋರಿಸಿದರು. ವಿಚಿತ್ರವೆಂದರೆ ಭಾರತೀಯ ಸಾಮಾಜಿಕ ಮೌಲ್ಯಗಳನ್ನು ದುಡಿಮೆ ರಹಿತ ಧರ್ಮಶಾಸ್ತ್ರಕಾರರು ನಿರ್ಧರಿಸಿದರೆ ಹೊರತು ಮೌನೇಶ್ವರರಂಥ ತತ್ತ್ವಜ್ಞಾನಿಗಳಲ್ಲ.

ಎಲ್ಲರ ಆತ್ಮವೂ ಒಂದೇ ಪರಬ್ರಹ್ಮನ ಸ್ವರೂಪ ಎಂದು ಮೌನೇಶ್ವರರು ಘೋಷಿಸಿದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಹುಟ್ಟಿನಿಂದಲೇ ಶ್ರೇಷ್ಠ, ಕನಿಷ್ಠರಾಗುತ್ತಾರೆಂಬುದನ್ನು ಧರ್ಮಶಾಸ್ತ್ರಕಾರರು ಹೇಳಿದರು. ಋಗ್ವೇದದ ಒಂದು ಮಂತ್ರದಲ್ಲಿ(೧೩೦–೬) ವೇದವನ್ನು ರಚಿಸಿದ ಕವಿಯ ದೃಷ್ಟಿಯಲ್ಲಿ ತನ್ನ ಕವಿತೆ ರಥವನ್ನು ಮಾಡುವ ಬಡಿಗಿಯೊಬ್ಬನ ಕೆಲಸಕ್ಕೆ ಸಮಾನ ಎಂಬ ಉಲ್ಲೇಖವಿದೆ. ಬಡಿಗಿಯನ್ನು ಜ್ಞಾನಿಯೆಂದು ಇಲ್ಲಿ ಪರಿಗಣಿಸಲಾಗಿದೆ. ಉಪನಿಷತ್ತುಗಳ ಕಾಲಕ್ಕೆ ಜ್ಞಾನ ಎಂದರೆ ಬ್ರಹ್ಮಜ್ಞಾನವೆಂದು ಜ್ಞಾನಿ ಎಂದರೆ ಬ್ರಹ್ಮಜ್ಞಾನಿ ಎಂದಾಗಿ ಬಡಿಗಿಯಂಥ ಶ್ರಮಿಕ ಕುಲಗಳ ಜ್ಞಾನ ತುಚ್ಛವಾಯಿತು. ಜ್ಞಾನ ರಹಸ್ಯವಾಗಿ ಕೆಲವರ ಸೊತ್ತಾಯಿತು. ಇದು ಆತ್ಮ ಶ್ರೇಷ್ಠ, ದೇಹವು ಹೀನ ಎನ್ನುವ ಬೌದ್ಧಿಕ ಹಾಗೂ ದೈಹಿಕ ವಿಂಗಡಣೆಗೆ ಮೂಲವಾಯಿತು.

ಮೌನೇಶ್ವರರು ದೇಹದಲ್ಲಿಯೇ ಉಂಟಾದ ಇಂತಹ ಅಪವ್ಯಾಖ್ಯಾನಗಳಿಗೆ ಹೊಸರೂಪ ಕೊಡುವುದು ಗಮನಾರ್ಹ. ಮೌನೇಶ್ವರರ ದೃಷ್ಟಿಯಲ್ಲಿ ಪ್ರಕೃತಿ ವಸ್ತುಸಾಮಗ್ರಿ ಮಾತ್ರವಲ್ಲ ಅದೊಂದು ಚೇತನ. ಸಕಲ ಚರಾಚರಗಳಲ್ಲಿ ಜೀವಂತಿಕೆ ಯನ್ನು ಕಾಣುವುದು ವಿಶ್ವಕರ್ಮ ತಾತ್ವಿಕೆಯ ಮೂಲದ್ರವ್ಯವಾಗಿದೆ. ಲೋಹ, ಕಲ್ಲು,

ಕಟ್ಟಿಗೆ, ಇಕ್ಕಳ, ಸುತ್ತಿಗೆ, ತಿದಿ, ಚಾಣ ಇವೆಲ್ಲ ಪ್ರಜ್ಞಾಶಕ್ತಿಯ ಕ್ರಿಯಾಶೀಲ ಚೈತನ್ಯಗಳು. ಪಾಂಚಾಳರಿಗಿದ್ದ ದರ್ಶನಶಕ್ತಿ ಅಥವಾ ಪ್ರಜ್ಞಾಶಕ್ತಿಯು ಲೋಕದ ಕಣ್ಣಿಗೆ ಜಡವೆಂದು ಮತ್ತು ನಿರುಪಯುಕ್ತವೆಂದೂ ಕಾಣುವ ವಸ್ತುವನ್ನು ರೂಪಾಂತರಗೊಳಿಸುತ್ತದೆ. ಜಡತ್ವದೊಳಗೆ ಪ್ರಜ್ಞಾಶಕ್ತಿ ಅಡಗಿರುವುದನ್ನು ಪ್ರಾಚೀನ ಭೌತವಾದವೂ ಒಪ್ಪಿದಂತೆ ಇಂದಿನ ವಿಜ್ಞಾನವೂ ಒಪ್ಪುತ್ತದೆ. ಆ ಚೇತನ ವಸ್ತುವಿನ ಕಾರಣವಾಗಿ ಹುಟ್ಟುವ ಅರಿವಿಗೆ ತನ್ನದೇ ಆದ ಪ್ರಜ್ಞಾಶಕ್ತಿಯಿದೆ. ಪ್ರಜ್ಞಾಶಕ್ತಿಯು ಜಡವಸ್ತುವಿನ ಮಾರ್ಪಾಡಿನಿಂದ ಉದ್ಭವವಾಗುತ್ತದೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕನು ಶ್ವೇತಕೇತುವಿಗೆ ಜ್ಞಾನವನ್ನು ಬೋಧಿಸುವಾಗ ಕೆಲವು ಪ್ರಯೋಗಗಳ ಮೂಲಕ ಈ ವಿಷಯವನ್ನು ಸ್ಪಷ್ಟೀಕರಿಸಿದ್ದಾನೆ.

ಈ ಸಂಗತಿಯು ವಸ್ತುವಿಗೊಂದು ಸ್ವತಂತ್ರ ಅಸ್ತಿತ್ವವಿದೆ ಎಂಬುದನ್ನು ಮನ್ನಿಸುತ್ತದೆ. ಅನುಭಾವ ಅನ್ನುವುದು ಲೋಕದ ಪ್ರತ್ಯಕ್ಷ ಜ್ಞಾನದಿಂದ ಹುಟ್ಟುವುದೇ ಹೊರತು ಪರೋಕ್ಷಾನುಭಾವದಿಂದ ಹುಟ್ಟುವುದಲ್ಲ ಎಂಬುದು ಮೌನೇಶ್ವರರ ತಿಳುವಳಿಕೆ. ಸರ್ವರಿಗೂ ಸಮಾನವಾದ ಅನುಭವ ಮತ್ತು ಜ್ಞಾನಗಳಿಗೆ ಬೆಲೆಯುಂಟೇ ಹೊರತು ಯಾವನೋ ಒಬ್ಬ ವ್ಯಕ್ತಿ ತನಗೆ ಅಪಾರ ಜ್ಞಾನವಿದೆ ಎಂದು ಸಾರಿದ ಮಾತ್ರಕ್ಕೆ ಅದನ್ನು ಒಪ್ಪಲು ಸಾಧ್ಯವಿಲ್ಲ. ಈ ಅರ್ಥದಲ್ಲಿ ಮೌನೇಶ್ವರರು ವ್ಯಕ್ತಿ ಮತ್ತು ಜ್ಞಾನ ಪ್ರಧಾನ ಎಂದು ಹೇಳುವ ವೇದಾಗಮಗಳನ್ನೇ ವಿಸರ್ಜಿಸಿ ಬಿಡುತ್ತಾರೆ. ಶ್ರಮಣ ಪರಂಪರೆಗಳು ಅನುಭವವನ್ನು ಪ್ರಮಾಣವೆಂದು ಸ್ವೀಕರಿಸಿದರೆ ವೇದಪ್ರಣೀತ ದರ್ಶನಗಳು ಶಬ್ದವನ್ನು(ವೇದ) ಪ್ರಮಾಣವೆಂದು ಸ್ವೀಕರಿಸುತ್ತವೆ.

ಅತ್ಯಂತ ಪ್ರಾಚೀನ ಶ್ರಮಣ ಪರಂಪರೆಗಳಿಂದ ಇತ್ತೀಚಿನ ತತ್ತ್ವಪದಕಾರರ ವರೆಗೂ ಅವರು ತಮ್ಮ ದರ್ಶನವನ್ನು ಮಾತಿನ ರೂಪದಲ್ಲಿ ಹಾಗೂ ಸಂವಾದದ ರೂಪದಲ್ಲಿ ಪ್ರಸ್ತಾಪಿಸಿ ದರೆ, ವೈದಿಕ ಪರಂಪರೆ ತನ್ನ ದರ್ಶನವನ್ನು ದಾಖಲಾತೀಯನ್ನಾಗಿಸಲು ಇಚ್ಛಿಸಿತು. ಬರಹರೂಪ ಸಾಧ್ಯವಿಲ್ಲದ ಹೊತ್ತಿನ್ನಲಿ ಅದನ್ನು ಕಂಠಸ್ಥಗೊಳಿಸಿತು.

ವೇದೋಪನಿಷತ್ ಪ್ರಣೀತ ಆತ್ಮವಾದಿ ದರ್ಶನಗಳು ನಿಗಮನ ತರ್ಕ ವಿಧಾನ (ಡಿಟಿಕ್ಟಿವ್ ಮೆಥೆಡ್)ದ ಮೂಲಕ ಸತ್ಯಾನ್ವೇಷಣೆಗೆ ತೊಡಗುತ್ತವೆ. ಅಂದರೆ ಮೊದಲು ನಿರ್ಣಯ ಸಿದ್ಧಾಂತಗಳನ್ನು ಪಡೆದುಕೊಂಡು ಅದಕ್ಕೆ ಸಮರ್ಥನೆಯನ್ನು ಒದಗಿಸುತ್ತ ಹೋಗುತ್ತವೆ. ಶ್ರಮಣ ಧಾರೆಗಳು ಅನುಭವದ ವಿಶ್ಲೇಷಣೆಯ ಮೂಲಕವೇ ತನ್ನ ತಾತ್ವಿಕತೆಯನ್ನು ಕಟ್ಟಿಕೊಳ್ಳುತ್ತವೆ. ಅಂದರೆ ಮೌನೇಶ್ವರರಂಥವರು ಜನರ ಬಳಿಗೆ ಹೋಗಿ ಅವರ ನೆಲೆಯಲ್ಲಿಯೇ ನಿಂತು ಲೋಕದ ಬಗೆಗೆ ಅವರು ಹೊಂದಿದ ಮಿಥ್ಯಾ ದೃಷ್ಟಿಯನ್ನು ನೇತ್ಯಾತ್ಮಕ ಸಂಗತಿಗಳನ್ನು ಎತ್ತಿ ತೋರಿಸುತ್ತಾರೆ. ಇಂಥ ವಿಧಾನವನ್ನು ಮೌನೇಶ್ವರ ಪೂರ್ವದ ಅಲ್ಲಮ ಮತ್ತು ನಾಗಾರ್ಜುನರಲ್ಲಿ, ಸಿದ್ಧರಾಮ

ಮತ್ತು ಮುಕ್ತಾಯಕ್ಕ ಇವರೊಡನೆ ಶೂನ್ಯ ಸಂಪಾದನೆಯಲ್ಲಿ ಅಲ್ಲಮ ನಡೆಸುವ ಸಂವಾದಗಳಲ್ಲಿಯೂ ಕಾಣಬಹುದು. ಈ ಅರ್ಥದಲ್ಲಿ ಮತ, ಧರ್ಮ, ಜಾತಿ ಲಿಂಗ, ಸಮಾಜ, ವ್ಯಕ್ತಿ, ಬದುಕು, ತತ್ತ್ವ ಜನರಲ್ಲಿನ ಗ್ರಹಿಕೆಯ ದೋಷಗಳನ್ನು ಎತ್ತಿ ತೋರಿಸಿದವರು ಮೌನೇಶ್ವರರು. ಆ ಮೂಲಕ ಶ್ರಮ ಮೂಲದ ಮೌನೇಶ್ವರರು ಪ್ರಾಮಾಣಿಕ ಶೋಧದ ಫಲವಾಗಿ ಲೋಕ ವಿವರಣೆಯನ್ನು ನೀಡುತ್ತಾರೆ. ಲೋಕದ ಬದುಕನ್ನು ಸಹ್ಯಗೊಳಿಸುವ ಪ್ರಯತ್ನ ಮಾಡುತ್ತಾರೆ. ಅದಕ್ಕಾಗಿ ಶ್ರಮಣ ಧಾರೆಗಳಾದ. 'ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಪಶುಪತಿ, ಕಾಳಾಮುಖ ಆರು ದರುಶನವು ಬಸವಣ್ಣ(ಸಿ.ಬಿ.ಕೆ., ಕೆ.ಪಿ.ಈ, ೧೯೫೫, ಪು.೩೧) ಅವೈದಿಕ ಧಾರೆಗಳಾದ ಇವುಗಳನ್ನು ಆರುದರ್ಶನಗಳೆಂದು ಮೌನೇಶ್ವರರು ಕರೆಯುತ್ತಾರೆ. ಮೌನೇಶ್ವರರ ಪೂರ್ವದ ಕೊಡೇಕಲ್ಲ ಸಂಪ್ರದಾಯದಲ್ಲಿಯೂ ಈ ಮಾದರಿಯನ್ನು ಕಾಣುತ್ತೇವೆ.

ಯೋಗಿ ತಾನೆ ಅಸ್ತಿ ಜೋಗಿಯೇ ಮೌಂಸ
ಆಗರ ನರಸೂತ್ರ ಶ್ರವಣಾದಿ। ದರುಶನ
ಸಾಗರ ಅಂಗಕ್ಕೆ ಹುದುಗಿದೆ॥೮೭॥

ಸನ್ಯಾಸಿ ರಕ್ತವು ತನ್ನೊಳು ದರುಶನ
ಸನ್ನಹಿತ ಚರ್ಮ ಪಶುಪತಿ/ಕಾಳಾಮುಖಿ
ಭಿನ್ನವಿಲ್ಲದ ರೋಮ ದರುಶನ॥೮೮॥

(ಕೊಡೇಕಲ್ಲ ವಚನವಾಕ್ಯ, ಪು.೭೪;೧೯೯೮)

'ಗೋರಖನಾಥನಿಂದ ಪ್ರವರ್ತಿತವಾದ ಬಾರಹ ಪಂಥಿ ಮಾರ್ಗಗಳು(ದ್ವಾದಶ ಪೀಠಗಳು) ನಾಥ ಸಂಪ್ರದಾಯವೆಂದು ಪ್ರಸಿದ್ಧವಾದಂಥವು. ಈ ದ್ವಾದಶ ಪೀಠಗಳಿಗೆ ಶಿವನು ಭೂಲೋಕದಲ್ಲಿ ಸಂಚರಿಸುತ್ತಾ ಪಾಮರ ಜನರನ್ನು ಮಂತ್ರೋಪದೇಶ ದೀಕ್ಷಾ ವಿಧಾನಗಳಿಂದ ಪರಿಶುದ್ಧರನ್ನಾಗಿ ಮಾಡತಕ್ಕದೆಂದು ಉಪದೇಶಿಸಿದನು. ಮತ್ತು ದಾಸ, ಯೋಗಿ, ಜಂಗಮ, ಶ್ರವಣ, ಸನ್ಯಾಸಿ, ಕಾಳಾಮುಖಿ ಎಂಬ ಆರು ಜನರು ಶಿಷ್ಯರಾಗಿ ಸಂಚಾರ ಮಾಡಿ ಜ್ಞಾನ ಪ್ರಸಾರ ಮಾಡುವುದೆಂದು ತಿಳಿಸಿದನು. ಈ ಆರು ಜನ ಶಿಷ್ಯರು ಕೊಡೇಕಲ್ಲ ಸಾಹಿತ್ಯದಲ್ಲಿ ಆರು ದರುಶನದವರಾಗಿ ಕಾಣಿಸಿಕೊಳ್ಳುತ್ತಾರೆ'(ಉದ್ಧೃತ: ಡಾ ಬಸವಲಿಂಗ ಸೊಪ್ಪಿಮಠ, ಕೊಡೇಕಲ್ಲ ವಚನ ವಾಕ್ಯ, ಪು.೩೩;೧೯೯೮).

ಕೊಡೇಕಲ್ಲ ಸಂಪ್ರದಾಯದೊಂದಿಗೆ ನಿಕಟವಾಗಿ ಬೆಳೆದು ಬಂದ ಮೌನೇಶ್ವರ ರಲ್ಲಿಯೂ ವೈದಿಕ ಷಡುದರ್ಶನಗಳ ಬದಲಿಗೆ ಅವೈದಿಕ ಆರು ದರುಶನಗಳು ಕಾಣಿಸಿಕೊಂಡಿವೆ. ಕೊಡೇಕಲ್ಲ ಬಸವಣ್ಣನಲ್ಲಿ.

ಯೋಗಿ ಅಹುದಯ್ಯ ಸಿದ್ಧರಾಮೇಶ್ವರನು
ಜೋಗಿ ಅಹುದಹುದು ಗೋರಖನಾಥನು

ನಿಗಮದ ಶ್ರವಣನಹುದೈ ಆದೇಶ್ವರನು
ಜಗದ ರೂಪುಟ್ಟ ಹನುಮಂತ ಸನ್ಯಾಸಿ ತಾ॥೨೬॥

ಪಶುಪತಿ ಅಹುದಹುದು ಶುಕದೇವನೆಂಬಾತ
ಅಸಲಿ ಮಹಮ್ಮದನು ಕಾಳಾಮುಖಿಯಾತ
ಆತನ ಯಾತ್ರಿಗಳೆಲ್ಲ ಆರು ದರುಶನವೆಂದು
ಹುಸಿಕರಾಗಿ ಹೋದರೈ ಜಗದ ರೂಪುಟ್ಟು॥೨೭॥

(ಕೊಡೇಕಲ್ಲ ವಚನವಾಕ್ಯ, ಪು.೧೩೫;೧೯೯೮)

ಸಿದ್ಧರಾಮನೇ ಯೋಗಿ, ಗೋರಖನಾಥನೇ ಜೋಗಿ, ಶ್ರವಣ ಆದೇಶ್ವರ, ಸನ್ಯಾಸಿ ಹನುಮಂತ, ಪಶುಪತಿ ಶುಕದೇವ, ಮಹಮ್ಮದ ಕಾಳಾಮುಖಿ ಎನಿಸಿದ್ದಾರೆ. ವೈದಿಕ ದರ್ಶನಗಳಿಗೆ ಪರ್ಯಾಯವಾಗಿ ಅವೈದಿಕ ದರ್ಶನಗಳನ್ನು ಇಲ್ಲಿ ಕಟ್ಟಿ ಕೊಂಡಿದ್ದು ಸ್ಪಷ್ಟವಾಗಿದೆ. ಕೊಡೇಕಲ್ಲ ಪರಿಸರದಲ್ಲಿ ಬೆಳೆದು ಬಂದ ಮೌನೇಶ್ವರರು ನಾಥಪಂಥದ ಪ್ರಭಾವಕ್ಕೆ ಒಳಗಾಗಿದ್ದನ್ನು ಇಲ್ಲಿ ಗಮನಿಸಬಹುದು.

ಮೌನೇಶ್ವರರ ಹೆಗ್ಗಳಿಕೆ ಎಂದರೆ ಕೊಡೆಕಲ್ಲ ಪರಂಪರೆಗಿಂತ ತುಸು ಭಿನ್ನವಾಗಿ ಈ ದರ್ಶನಗಳನ್ನು ವಿಸ್ತರಿಸಿಕೊಂಡಿದ್ದು. ಉದಾಹರಣೆಗೆ ಜನಪದ ಅಥವಾ ದೇಸಿ ದರ್ಶನಗಳನ್ನಾಗಿ ದಾಸ, ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ ಇವರನ್ನು ಕೊಡೆಕಲ್ಲ ಪರಂಪರೆ ಸ್ವೀಕರಿಸಿದರೆ ದೇಸಿ ಮತ್ತು ಜನ ಕಾಳಜಿಯುಳ್ಳ ಸ್ಥಳೀಯ ಆಡಳಿತದ ನಾಯಕರನ್ನು ಆರು ದರುಶನಗಳನ್ನಾಗಿ ಮೌನೇಶ್ವರರು ವಿವರಿಸುತ್ತಾರೆ.

ನಾಡಿಗ, ದೇಸಾಯಿ, ಗೌಡ, ಕುಲಕರ್ಣಿ, ಓಜ, ಒಕ್ಕಲು
ಇಂತು ಸಹಿತವಾಗಿ ಆರು ದರುಶನದವರು
ನೂರೊಂದು ಕುಲದವರು ಜೋಗಿ, ಗೊರವ, ಜಂಗಮ
ದಾಸಿ, ದೋಷಿ, ಮುಲ್ಲಾ, ಖಾಜಿ, ಇಂತೀ ಸಹಿತವಾಗಿ
ಇಕ್ಕಳು ಜಗದ ಕೈಗೆ ಹೊಕ್ಕಳು ಕೊಯ್ದ ಕುಡಗೋಲು॥೨೮೧॥

(ಶ್ರೀ ಮೌನೇಶ್ವರರ ತ್ರಿಪದಿಗಳು, ಪದ್ಯ ೨೮೧, ಪು.೧೦೬;೨೦೦೪)

ಊರನಾಳುವ ನಾಡಿಗ, ದೇಸಾಯಿ, ಗೌಡ, ಕುಲಕರ್ಣಿ, ಓಜ, ಒಕ್ಕಲು ಇವರನ್ನು ಆರು ದರುಶನವೆಂದು ಹೊಸ ವ್ಯಾಖ್ಯಾನವನ್ನು ಮೌನೇಶ್ವರರು ಮಾಡಿರುವರು. ಅಮೂರ್ತ ಮತ್ತು ಜ್ಞಾನದ ಶ್ರೇಷ್ಠ ಮಾದರಿಗಳನ್ನು ನಿರಾಕರಿಸಿ ಊರಿಗಾಗಿ ಹಂಬಲಿಸುವ ಜೀವಂತ ಸಮಾಜವನ್ನು, ದೈವವನ್ನು ದರುಶನವೆಂದು ಕರೆದಿರುವಲ್ಲಿ ಸಮುದಾಯದೊಳಗೆ ಇದ್ದ ಸಮುದಾಯವನ್ನು ಜಾಗೃತಿಗೊಳಿಸುವ ಅದಕ್ಕೊಂದು ಚಲನೆಯನ್ನು ತಂದು ಕೊಡುವ ಕೆಲಸವನ್ನಿಲ್ಲಿ ಕಾಣುತ್ತೇವೆ.

ಈ ವಚನದ ಇನ್ನೊಂದು ಮಹತ್ವದ ಸಂಗತಿ ಎಂದರೆ ದರುಶನಗಳನ್ನು ನೂರೊಂದು ಕುಲಗಳನ್ನಾಗಿ ಹೊಸ ವಿಸ್ತರಣೆಗೆ ಒಯ್ದದ್ದು. ಆರು ದರುಶನ ದಳಿಯ ನೂರಾವಂದು ಕುಲದಳಿಯನೆ, ಹೊಲಿ ಹದಿನೆಂಟು ಕುಲ, ನೂರೊಂದು ಕುಲ ಎನ್ನುವಲ್ಲಿ ವರ್ಣಾಶ್ರಮ ಪದ್ಧತಿಯ ಮೂಲಕ ನಿರ್ಮಿತಿಗೊಂಡಿದ್ದ ಜಾತಿ ಮತ್ತು ಅಧಿಕಾರ ಸ್ಥಾನಗಳ ಪಲ್ಲಟವನ್ನು ಕಾಣುತ್ತೇವೆ. ಶ್ರೇಣೀಕೃತ ಜಾತಿ, ಅಧಿಕಾರ, ಹಾಗೂ ಲಿಂಗದ ಕಲ್ಪನೆಗಳನ್ನು ಹಣಿಯಲು ಮೌನೇಶ್ವರರು, ಮಂಟೇಸ್ವಾಮಿಗಳು ಕುಲದ ಕಲ್ಪನೆಯನ್ನು ಕಂಡುಕೊಂಡರು.

ಪಂಚಾನನ ಪರಬ್ರಹ್ಮ ಮುಂಚೆ ಕಲಿಯುಗಕ್ಕಾಧಾರ
ವಂಚನಿಲ್ಲದೆ ಹದಿನೆಂಟು ಜಾತಿಗೆ ಅನ್ನವ
ಹಂಚಿ ನೀಡುವನು, ಬಸವಣ್ಣ(೧೨೪)

ಜಾತಿ ರಹಿತವಾದ ಕುಲ ಸಂಘಟನೆಯ ಸಂಗತಿಗಳನ್ನು ಮೌನೇಶ್ವರರು ಪ್ರತಿಪಾದಿಸುತ್ತಾರೆ. ಜಾತಿಗೆ ಎದುರಾಗಿ ಕುಲ ಸಂಗೋಪನೆಯ ಕಲ್ಪನೆಯನ್ನಿಡುತ್ತಾರೆ. ಮೌನೇಶ್ವರರ ಅಹಂಕಾರ ನಿರಶನ, ಭಿಕ್ಷೆ ಮತ್ತು ವರ್ಣಸಂಕರದ ನಿಲುವುಗಳು ಕುಲದ ನೆಲೆಯನ್ನು ಪ್ರಮುಖವಾಗಿ ಮಂಡಿಸುತ್ತವೆ. ತಿರುಗಾಟ ಮತ್ತು ಭಿಕ್ಷೆಯ ರೂಪಗಳೇ ಕುಲದ ಸಂಗೋಪನೆ ಮತ್ತು ಸಂವರ್ಧನೆಗಾಗಿ ಹುಟ್ಟಿದಂಥವು. ರಾಜಕೀಯ ಹಾಗೂ ಸಾಮಾಜಿಕ ರಕ್ಷಣೆ ಇಲ್ಲದಿರುವಾಗ, ಧರ್ಮ ಮತೀಯವಾದ ಹೊತ್ತಿನಲ್ಲಿ ಮೌನೇಶ್ವರರು ಬದುಕಿದವರು. ಈ ಕಾರಣಕ್ಕಾಗಿಯೇ ಸ್ಥಿರೀಕರಣಗೊಂಡ ಪ್ರಧಾನ ಧರ್ಮಗಳ ಜಡ ನೆಲೆಗಳನ್ನು ತೀವ್ರವಾಗಿ ಭಗ್ನಗೊಳಿಸುವುದರ ಭಾಗವಾಗಿ ಕುಲ ಸ್ಥಾಪನೆಯ ಆಶಯಗಳನ್ನು, ವಚನಗಳಲ್ಲಿ ಕಾಣಬಹುದಾಗಿದೆ.

ವರ್ಣಾಶ್ರಮ ಪದ್ಧತಿಯ ಮೂಲಕ ಅಧಿಕಾರದ ಶಕ್ತಿ ಎಂದರೆ ಜಾತಿ ಎನ್ನುವ ಕಲ್ಪನೆಯನ್ನು ಬಿತ್ತಲಾಗಿತ್ತು. ಅದನ್ನು ಮುರಿಯಲು ಮೌನೇಶ್ವರರು ಮಂಟೇಸ್ವಾಮಿಯಂಥ ದಾರ್ಶನಿಕರು ಕುಲದ ಕಲ್ಪನೆಯನ್ನು ಕಂಡುಕೊಂಡಿದ್ದು ಪ್ರಗತಿಪರ ಧಾರ್ಮಿಕ ಚಿಂತನೆಯ ಪ್ರತೀಕವಾಗಿದೆ.

ವಚನಕಾರರ ಪ್ರಭಾವ

ಕನ್ನಡ ಸಂಸ್ಕೃತಿಯ ಒಳಗೆ ಹುಟ್ಟುವ ಅನೇಕ ಚಿಂತನಾ ಧಾರೆಗಳು ಕಲ್ಯಾಣ ಮತ್ತು ವಚನಕಾರರನ್ನು ಅಡ್ಡಹಾಯದೆ ತಮ್ಮ ಚಿಂತನೆಯ ನೇಯ್ಗೆಯನ್ನು ರೂಪಿಸಿಕೊಳ್ಳಲಾರವು. ವಚನ ಚಳುವಳಿಯೊಂದಿಗೆ ಗುರುತಿಸಿಕೊಳ್ಳುವುದರ ಜೊತೆಗೆ ಅದರೊಂದಿಗೆ ತಾತ್ವಿಕ ಅನುಸಂಧಾನವನ್ನು ಮಾಡಿದಂತೆ ತಾತ್ವಿಕ ಭಿನ್ನಾಭಿಪ್ರಾಯವನ್ನು ಮಂಡಿಸುತ್ತ ಬಂದಿವೆ. ವಚನಕಾರರ ನಂತರ ಸುಮಾರು ನಾನೂರು ವರ್ಷ

ತಡವಾಗಿ ಹುಟ್ಟಿ ಬಂದರೂ ಮೌನೇಶ್ವರರಲ್ಲಿ ವಚನಕಾರರಿಂದ ಕಸಿಗೊಂಡ ಚಿಂತನಾ ಕ್ರಮವನ್ನು ಕಾಣಬಹುದು.

ಪುರಾತನ ಶರಣರಲ್ಲಿ ಪ್ರಮುಖವಾಗಿ ಅಕ್ಕನಾಗಮ್ಮ, ಕಕ್ಕಯ್ಯ, ಕೂಗಿನ ಮಾರಯ್ಯ, ಚೆನ್ನಯ್ಯ, ಕಿನ್ನರಯ್ಯ, ಅಲ್ಲಮಪ್ರಭು, ಚನ್ನಬಸವಣ್ಣ, ಬಸವಣ್ಣ, ಮಡಿವಾಳ ಮಾಚಿದೇವ, ನುಲಿಯಚಂದಯ್ಯ, ಘಟ್ಟಿವಾಳಯ್ಯ, ಅಜಗಣ್ಣ ಅವರನ್ನು ನೆನೆದರೆ, ಸಿದ್ಧರಲ್ಲಿ ಸಿಂಧುಬಲ್ಲಾಳ, ಗೊಲ್ಲಗೇರಿ ಗೊಲ್ಲಾಳ, ಮುದ್ದೇಬಿಹಾಳದ ಗಾಳಿಪೂಜಿ ಸಿದ್ಧ, ಅಂಕಲಗಿ ಅಡಿವಿಸಿದ್ಧ, ಗುಂಡಬ್ರಹ್ಮಯ್ಯ ಮುಂತಾದ ಸಂತ ಶರಣರನ್ನು ಸ್ಮರಿಸುತ್ತಾರೆ.

'ಮಂಡಲವ ಸುತ್ತಿದರೆ ಪಂಡಿತರು ಕಾಣಲಿಲ್ಲ', 'ಹಲವು ಶಾಸ್ತ್ರಗಳನ್ನೋದಿ ನೆಲೆಗಾಣದಾದೆ", "ವೇದಶಾಸ್ತ್ರಗಳೇಕೆ ವಾದ ತರ್ಕಗಳೇಕೆ...' ಎನ್ನುವ ಮೌನೇಶ್ವರರ ಹಲವು ಮಾತುಗಳು ಕ್ರಿಯಾರಹಿತವಾದ ಜ್ಞಾನದ ನೆಲೆಗಳನ್ನು ಟೀಕೆಗೊಳಪಡಿಸುತ್ತವೆ. ವಚನಕಾರರಲ್ಲಿ 'ನಾದದ ಬಲದಿಂದ ವೇದಂಗಳಾದವಲ್ಲದೆ ವೇದ ಸ್ವಯಂಭುವಲ್ಲ ನಿಲ್ಲ'(ಅಂಬಿಗರ ಚೌಡಯ್ಯ) 'ವೇದ ವೇದಿಸಲರಿಯದೆ ಕೆಟ್ಟವು ಪುರಾಣ ಪೂರೈಸಲರಿಯದೆ ಕೆಟ್ಟವು. ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು'(ಅಲ್ಲಮಪ್ರಭು), 'ವೇದಂಗಳಿಗಬೇಧ್ಯವಾದ ಶಿವನ ಬೋಧಿಸಿ ಕಂಡರು ಶರಣರು ಶಾಸ್ತ್ರಂಗಳಿಗಸಾಧ್ಯವಾದ ಶಿವನ ಸಾಧಿಸಿ ಕಂಡರು ಶರಣರು ಆಗಮಂಗಳಿಗತಿರಹಸ್ಯನಾದ ಶಿವನರಿದು ಕಂಡರು ನೋಡಾ ಶರಣರು'(ಷಣ್ಮುಖ ಶಿವಯೋಗಿಗಳು)ಎನ್ನುವಲ್ಲಿ ಆಚಾರ ಮತ್ತು ಅರಿವಿನ ಹಂಗಿಲ್ಲದ ಶಾಸ್ತ್ರಾಗಮಗಳ ನಿರುಪಯುಕ್ತತೆಯನ್ನು ಹೇಳುವಲ್ಲಿ ಮೌನೇಶ್ವರರ ಮೇಲೆ ವಚನಕಾರರ ಪ್ರಭಾವವಿರುವುದನ್ನು ಕಾಣಬಹುದು.

ಉಣ್ಣದ ದೇವರಿಗೆ ಹಣ್ಣು ಘೃತಕ್ಷೀರ ನೈವೇದ್ಯೆ
ಬಣ್ಣ ಬಿಳಿದೊಸ್ತ್ರ ಕಣ್ಣು ಬೊಟ್ಟುಗಳನಿಕ್ಕುವ
ಉಣ್ಣುವ ದೇವರಿಗೆ ಟೊಣ್ಣೆಯ ನೈವೇದ್ಯವನಿತ್ತು
ಕಣ್ಣು ಬಿಟ್ಟು ಬೆದರಿಸುವ ಈ ಭೂನರರಿಗೆ
ಪುಣ್ಯವಿಲ್ಲ, ಬಸವಣ್ಣ

ಎನ್ನುವ ಮೌನೇಶ್ವರರ ವಚನಕ್ಕೂ

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದರೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ
.....

ಎನ್ನುವ ಬಸವಣ್ಣನರ ವಚನಕ್ಕೂ ಸಾಮ್ಯವನ್ನು ಕಾಣಬಹುದು.

ಕುಲ ಮತ್ತು ಹೊಲೆಗಳ ಬಗ್ಗೆ ಹೇಳುವಾಗಲೂ ಮೌನೇಶ್ವರರು 'ಹೊಲೆಯಲ್ಲಿ ಜನಿಸಲು ಕುಲಛಲ ಸಲ್ಲ' 'ಲೋಕದೊಳು ಪದರು ಮಾಡುವವರೇ ಹೊಲೆಯರು', 'ಕುಲದ ವಾಸಿಗೆ ಆಡಿ, ಹೊಲದ ಮೇರೆಗೆ ಆಡಿ ಹೊಲೆ ಕುಣಿದಾಡಿ ಹೊಡೆದಾಡಿ ಸತ್ತಂತ ಹೊಲೆಯರಗೊಡವಿ ನಮಗೇಕೆ...' ಎಂದರೆ 'ಕೊಲುವವನೆ ಮಾದಿಗ ಹೊಲಸು ತಿಂಬುವವನೇ ಹೊಲೆಯ'(ಬಸವಣ್ಣ) 'ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ'(ಮಾದಾರ ಚನ್ನಯ್ಯ), 'ಚಾಂಡಾಲನಾದರೂ ಶಿವಭಕ್ತನೇ ಕುಲಜನು'(ಚೆನ್ನಬಸವಣ್ಣ), 'ತಾಯಿಗೆ ಬೈದವ ಹೊಲೆಯ, ನಡುದಾರಿಗೆ ಮುಳ್ಳು ಹಚ್ಚಿದವ ಹೊಲೆಯ, ನಿಜ ನುಡಿಯದವ ಹೊಲೆಯ...'(ಅಂಬಿಗರ ಚೌಡಯ್ಯ). ಇವರೆಲ್ಲರೂ ಸದಾಚಾರವನ್ನು ಉತ್ತಮ ನಡೆ ನುಡಿಯಲ್ಲಿಯೂ ದುರಾಚಾರವನ್ನು ಅರ್ಥಹೀನ ವರ್ತನೆಯಲ್ಲಿ ಕಾಣುತ್ತಾರೆ. ಹುಟ್ಟನ್ನೇ ಉತ್ತಮಿಕೆಯ ಮಾನದಂಡ ವಾಗಿಸದೇ ಉತ್ತಮ ಸಾಧನೆ ಮತ್ತು ಸದಾಚಾರವನ್ನು ಪ್ರಮಾಣವಾಗಿಸಿಕೊಂಡದ್ದು ಕನ್ನಡ ಅನುಭಾವಿ ಪರಂಪರೆಯ ವಿಶಿಷ್ಟತೆಯಾಗಿದೆ.

ಹೀಗೆ ಕುಲ, ಜಾತಿ, ಲಿಂಗ, ಜಂಗಮ, ಕಾಯಕ, ದಾಸೋಹ ಮುಂತಾದ ಸಂಗತಿಗಳಲ್ಲಿ ವಚನಕಾರರ ಪ್ರಭಾವವನ್ನು ಮೌನೇಶ್ವರರಲ್ಲಿ ಕಾಣಬಹುದು. ಆದರೆ ಕೆಲವೊಂದು ವಿಚಾರಗಳಲ್ಲಿ ವಚನಕಾರರನ್ನು ದಾಟಿ ಮೌನೇಶ್ವರರು ಚಿಂತಿಸಿರುವುದನ್ನು ಅಲ್ಲಗಳೆಯಲಾಗದು.

ಲಿಂಗದ ವಿಚಾರದಲ್ಲಿ ಸ್ಥಾವರ ಲಿಂಗದ ಬದಲಿಗೆ ಶರಣರು ಇಷ್ಟಲಿಂಗದ ಪರಿಕಲ್ಪನೆಯನ್ನು ತಂದರು. ಆದರೆ ಮೌನೇಶ್ವರರು ಬರುವ ಹೊತ್ತಿಗೆ ಇಷ್ಟಲಿಂಗವೂ ಸ್ಥಾವರತ್ವವನ್ನು ಪಡೆದಿತ್ತು. ಹೀಗಾಗಿ ಲಿಂಗದ ಪರಿಕಲ್ಪನೆಯನ್ನೇ ಪಲ್ಲಟಗೊಳಿಸಿದರು. ಇದು ಮೌನೇಶ್ವರರರ ನಿಕಟಪೂರ್ವ ಪರಂಪರೆಗಳಾದ ಕೊಡೇಕಲ್ಲು ಮತ್ತು ಮಂಟೇಸ್ವಾಮಿ ಪರಂಪರೆಗಳಲ್ಲಿ ಕಂಡಂತೆ ೧೨ನೇ ಶತಮಾನದ ಶೂನ್ಯಸಿಂಹಾಸ ನಾಧೀಶ್ವರನಾದ ಅಲ್ಲಮ ಮತ್ತು ಅಂಬಿಗರ ಚೌಡಯ್ಯನವರಲ್ಲಿಯೂ ಕಾಣುವುದು ವಿಶೇಷ.

ಲಿಂಗದ ಉಪಾಸನೆಯ ಉದ್ದೇಶವೇ ಮನುಷ್ಯ ತನ್ನ ಅಂತರಂಗದ ಜ್ಯೋತಿಯನ್ನು ಬೆಳಗಿಸಿಕೊಳ್ಳುವುದು. ಅದಕ್ಕಾಗಿ ಉಳಿಮುಟ್ಟಿದ ಲಿಂಗವ ಬಿಟ್ಟು ಉಳಿಮುಟ್ಟದ ಲಿಂಗ ಧರಿಸಿದವರು. ಅಂದರೆ ಮನುಷ್ಯ ನಿರ್ಮಿತ ಲಿಂಗದ ಕಲ್ಪನೆಯನ್ನು ಮೀರಿ ಅಂಗವನ್ನೇ ಲಿಂಗವಾಗಿಸಿಕೊಳ್ಳುವ ಪ್ರಾಣಲಿಂಗದ ಕಲ್ಪನೆಯನ್ನು ಮೌನೇಶ್ವರರು ಬೆಳೆಸುತ್ತಾರೆ. ಕುರುಹು ಮೀರುವ ಗುಣವನ್ನಿಲ್ಲಿ ಕಾಣುತ್ತೇವೆ.

'ಆಕಾಶ ಭೂಕಾಂತಿ ಏಕಲಿಂಗವಾಗಿರಲಿಕ್ಕೆ ಯಾಕೋ ಎನಗೊಂದು ಪ್ರತಿಲಿಂಗ' ಎನ್ನುತ್ತಲೇ 'ತೋರ ಲಿಂಗ ಕಟ್ಟುವ ಪೋರ ಜಂಗಮ ನಾನಲ್ಲ ಈ ಕೀಳು

ಲೋಕದ ಸೃಷ್ಟಿಗಧಿಪತಿಯಾದ। ಆತ್ಮಲಿಂಗವೇ ಎನಗಿರಲು ಈ ತೋರ ಲಿಂಗದ ಗೊಡವಿ ನಮಗೇಕೆ' ಎನ್ನುವಲ್ಲಿ ಇಷ್ಟಲಿಂಗದ ಹಂಗುಮೀರಿದ ಹಂತವನ್ನು ಕಾಣುತ್ತೇವೆ.

ಕಾಯಕ ದಾಸೋಹದ ಬಗ್ಗೆ ಮಾತನಾಡುವಾಗಲೂ ಕೇವಲ ಪರಿಕಲ್ಪನಾತ್ಮಕವಾಗಿ ಮಾತನಾಡದೆ "ಬಡಿಗ ಕಮ್ಮಾರರು ಪೊಡವಿಗಧಿಕರ್ತರು ಬಡಿದು ಬತ್ತೀಸ ಆಯುಧವ ಮಾಡಿ ಕೊಡುವರು" ಎನ್ನುವಾಗ ಉದ್ಯೋಗ ಸೃಷ್ಟಿ ಮತ್ತು ಉಪಕರಣಗಳ ಉತ್ಪಾದನೆಯನ್ನು ಕಾಣಬಹುದು. ಆಯುಧ ಅಥವಾ ಬಳಕೆ ವಸ್ತುಗಳ ಉತ್ಪಾದನೆ ಎನ್ನುವುದೇ ಉದ್ಯೋಗಸ್ಥ ಸಮಾಜದ ಮುಖ್ಯ ಶಕ್ತಿಯಾಗಿದೆ. ಹೀಗೆ ಶರಣರ ಜಾಡಿನಲ್ಲಿ ನಡೆದಾಗಲೂ ಬಾಚಿಕಾಯಕದ ಬಸವಯ್ಯನಂತೆ ತಾತ್ವಿಕತೆಯಲ್ಲಿ ವಿಭಿನ್ನವಾಗುಳಿಯುವ ಗುಣವನ್ನು ಮೌನೇಶ್ವರರಲ್ಲಿ ಕಾಣಬಹುದು.

ಅನುಭಾವವಾದ

ಮೌನೇಶ್ವರರು ತಮ್ಮ ವಚನದುದ್ದಕ್ಕೂ ತಮ್ಮನ್ನು ಬಾಲಕ, ಕಿರಿಯ, ಮರುಳ, ಹುಚ್ಚ, ನಾಯಿ, ಹೊಲೆಮಗ, ಇತ್ಯಾದಿಯಾಗಿ ಕರೆದುಕೊಳ್ಳುತ್ತಾರೆ. ಇದು ಮೌನೇಶ್ವರರ ವಿನಯಶೀಲತೆಯೂ ಆದಂತೆ ನಾಮನಿರಸನ ಕ್ರಿಯೆಯೂ ಆಗಿದೆ. ಕುಲಮದದಿಂದ ಬರುವ ಅನೇಕ ವಿಕಾರ ಹಾಗೂ ಅಹಂಕಾರಗಳನ್ನು ಕಳೆದುಕೊಳ್ಳುವ ಕ್ರಿಯೆ ಇದಾಗಿದೆ.

ಶ್ರಮ ಸಂಸ್ಕೃತಿಯ ಹರಿಕಾರರಾದರೂ ಸಾಂಪ್ರದಾಯಿಕ ಸನಾತನ ಮೌಲ್ಯಗಳ ವಿನ್ಯಾಸದಲ್ಲಿಯೇ ಬದುಕಲು ಹಂಬಲಿಸುವ ವಿಶ್ವಕರ್ಮ ಕುಲದಲ್ಲಿ ಹುಟ್ಟಿದ ಮೌನೇಶ್ವರರು ಜನಿವಾರ, ಗುರುಕುಲ ಇತ್ಯಾದಿ ಸಂಗತಿಗಳಲ್ಲಿ ಅಡಗಿರುವ ಅರ್ಥವಿಲ್ಲದ ಆಚರಣೆಗಳನ್ನು ಖಂಡಿಸುತ್ತಾರೆ. ಅಕ್ಕಸಾಲಿಗನಾದ ಹಾವಿನಹಾಳ ಕಲ್ಲಯ್ಯ, ಕಿನ್ನರಿ ಬೊಮ್ಮಯ್ಯ, ಕಾಮಾಟದ ಭೀಮಣ್ಣ, ಬಾಚಿಕಾಯಕದ ಬಸವಯ್ಯ ಇವರೆಲ್ಲರೂ ಇಂಥ ಒಳ ಮತ್ತು ಹೊರಗಿನ ಜಡಪರಂಪರೆಗಳ ವಿರುದ್ಧ ಬಂಡಾಯ ಸಾರಿದರು. ಹೀಗೆ ಏಕಕಾಲಕ್ಕೆ ಕುಲಮದದಿಂದ ಹೊರಗುಳಿಯುವ ಅದರಿಂದ ಬಿಡಿಸಿಕೊಳ್ಳುವ ಪ್ರಯತ್ನ ಒಂದೆಡೆಯಾದರೆ, ಇನ್ನೊಂದೆಡೆ ಬಹಳಷ್ಟು ವಿಚಾರಗಳಲ್ಲಿ ಉಳಿದ ಶರಣರೊಂದಿಗೆ ಆರೂಢರೊಂದಿಗೆ ಭಿನ್ನವಾಗಿ ಬದುಕಿದ್ದು ವಿಶಿಷ್ಟವಾಗಿದೆ. ಬ್ರಾಹ್ಮಣೀಕರಣ ನೆಲೆಯಲ್ಲಿ ತನ್ನ ಸಮಾಜವೊಂದು ತನ್ನ ಆಚಾರಾಧಿಕಾರ ಮತ್ತು ಸಾಮಾಜಿಕಾಧಿಕಾರ ಪಡೆದ ರೀತಿಗೆ ತೀಕ್ಷ್ಣ ಪ್ರತಿಕ್ರಿಯೆಯಾಗಿ ಪಂಚಾಳ ಪರಂಪರೆಯ ಒಳಗಿನಿಂದಲೇ ಮೂಡಿಬಂದ ಕಸುಬುದಾರ ಸಾಧಕರು, ವಿಶ್ವಕರ್ಮ ಮೂಲ ತಾತ್ವಿಕತೆಯಾದ ಕ್ರಿಯಾಶೀಲತೆಯನ್ನು ಎತ್ತಿ ಹಿಡಿದವರು.

ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವ ವಚನಕಾರರ

ಮಾತಿನಂತೆ ಮೌನೇಶ್ವರರಾದಿಯಾಗಿ ಎಲ್ಲ ದಾರ್ಶನಿಕರೂ ತಮ್ಮ ಜಾತಿ ಶ್ರೇಣೀಕರಣವನ್ನು ಪಲ್ಲಟ ಮಾಡಿಕೊಳ್ಳುತ್ತಾರೆ. ಜಾತಿ ಶ್ರೇಣೀಕರಣದಲ್ಲಿ ತೀರ ಕೆಳಗಿದ್ದವರೊಂದಿಗೆ ಅಥವಾ ಹೊರತಳ್ಳಲ್ಪಟ್ಟವರೊಂದಿಗೆ ಗುರುತಿಸಿಕೊಳ್ಳುವ ಕ್ರಿಯೆಯೇ ಬಹುದೊಡ್ಡ ಕ್ರಾಂತಿಕಾರಕ ಸಂಗತಿಯಾಗಿದೆ.

ಗುರುತು ಮತ್ತು ಹೆಸರಿನ ನಿರಾಕರಣೆಯೇ ಅನುಭಾವದ ಗುಣವಾಗಿದೆ. 'ಶಿವ ಶರಣರ ಮನೆಯ ಹಂದಿಗಿಂತ ಕಡೆಯಯ್ಯ', 'ಆಳಿನ ಮನೆಯ ಆಳು ನಾನು ಬಹಳ ಬಡವನು', 'ನಾನು ಕೀಳನು', 'ಶಿವಶರಣರ ಕೆರವಿಗಿಂತ ನಾನು ಕಡಿಮೆಯಯ್ಯ', 'ಕರ್ಮಿಪಾತಕಿ ನಾನು', 'ಕೆರವಿನೊಳಗನ ಕಿರುಧೂಳಿಯ ಮಾಡೆನ್ನ', 'ಅಲ್ಲಮನ ಮನೆಯ ಪಡಿಲೆಂಕ', 'ಕಕ್ಕಯ್ಯನ ವರಪ್ರಸಾದಿ', 'ಕೂಗಿನ ಮಾರಯ್ಯನ ಆಗಮದ ಮಗ ನಾನು', 'ಶಿವಶರಣರ ಹಾದಿ ತೋರುವ ತಳವಾರ', 'ಮರ್ತ್ಯಕ್ಕೆ ಕಿರಿಯನು", 'ಶರಣರ ಬಾಗಿಲ ಕಾಯ್ವ ಕಿರುನಾಯಿ ಮಾಡು', 'ಧರ್ಮದ ಮಾದಿಗ ನಾನು', 'ಬಚ್ಚಲ ಹುಳು ನಾನು', 'ಹೇಲಿನೊಳಗಣ ಹುಳು ನಾನು' ಇತ್ಯಾದಿ ಮಾತುಗಳೆಲ್ಲವೂ ಶ್ರೇಣೀಕೃತ ಸಮಾಜವ್ಯವಸ್ಥೆಯಲ್ಲಿ ಹೊರತಳ್ಳಲ್ಪಟ್ಟು ಪ್ರಾಣಿ ಹಾಗೂ ವಸ್ತುವಿನೊಂದಿಗೆ ದಲಿತರೊಂದಿಗೆ ಸಮೀಕರಿಸಿಕೊಳ್ಳುವ ಅಪವರ್ಗೀಕರಣದ ಮಾತುಗಳು ಕ್ರಾಂತಿಕಾರಿಯಾದಂಥವು. ಹಾಗೆ ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರು ಹಾಕಿಕೊಳ್ಳುವ ತೊಂದರೆದಾಯಕ ಸಂಗತಿಗಳೂ ಹೌದು. ಸಾಮಾಜಿಕ ಅಸಮಾನತೆಗೆ, ಲಿಂಗ ಅಸಮಾನತೆಗೆ ಕಾರಣವಾದ ವರ್ಣವ್ಯವಸ್ಥೆಯ ಮೇಲುರಿಮೆಗಳ ಎದುರಿಗೆ ಮೌನೇಶ್ವರರ ಅಪವರ್ಗೀಕರಣದ ನೆಲೆಯೇ ಜಾತಿ ಹಾಗೂ ವರ್ಣವ್ಯವಸ್ಥೆಯ ಎಲ್ಲ ಅಹಿತಗಳನ್ನು ಮೀರುವ ಕ್ರಿಯೆಯಾಗಿ ಕಾಣುತ್ತದೆ. ಸಮಾನತೆಯ ಸಮಾಜದ ಪ್ರತಿಪಾದನೆಯಾಗಿದೆ.

ಇಂಥ ವಿಪ್ರಜಾತಿಯ ನಡವಳಿಕೆ ಕುರಿತು ಹಾವಿನಹಾಳ ಕಲ್ಲಯ್ಯನವರು

ಅತ್ಯಂತ ಯಜ್ಞ ಕ್ರಮವೆಂದು ಹೋತನೆ ಕೊಂದು
ಚಿಕ್ಕಚಿಕ್ಕವಾಗಿ ಕಡಿದು ಭಕ್ಷಿಸಿದುದ ಕಂಡು
ಮಿಕ್ಕ ಹದಿನೇಳು ಜಾತಿ
ವಿಪ್ರರ ಕೈಯಲನುಗ್ರಹವ ಪಡೆದು ತಿನಕಲಿತರಯ್ಯ

ಎನ್ನುವಲ್ಲಿ ಮಾಂಸಾಹಾರಕ್ಕೆ ಆಚಾರ್ಯ ಪುರುಷರು ಬ್ರಾಹ್ಮಣರೆ ಆಗಿದ್ದು, ಮಿಕ್ಕ ಹದಿನೇಳು ಜಾತಿಗಳು ಅವರಿಂದಲೇ ತಿನಕಲಿತರೆಂದು ಹೇಳುವ ಮಾತು ಬ್ರಾಹ್ಮಣ್ಯದ ಶ್ರೇಷ್ಠತೆಯ ಶುಷ್ಕತೆಯನ್ನು ಬಿಚ್ಚಿಡುತ್ತದೆ.

'ವಿಪ್ರರು ತಂದೆಗೆ ನುಚ್ಚು ನೀರು ಹುಯ್ವರು ಸತ್ತಾಗ ಆತನ ಕಾರ್ಯವ ಮಾಡುವರು...' 'ನಾಮವಧರಿಸಿ ನೇಮ ಸ್ನಾನವ ಮಾಡಿ, ಕಾಮ, ಕ್ರೋಧ, ಲೋಭ, ಮೋಹ,

ಮದಮತ್ಸರದಲಿ ಮಾತು ಕಲಿತುಕೊಂಡು ಮಹಾಜ್ಞಾನಿಗಳೆನಿಸುವರು... ಚಂಡಿಕೆಯ ಬಿಟ್ಟೇನು ದಂಡ ಪ್ರಣಾಮ ಎರಗೇನು ಹೆಂಡ ಖಂಡವ ತಿಂದು ಕಂಡಲ್ಲಿ ತಿರಿದುಂಡು...' 'ಯಜ್ಞೋಪವೀತನೆ ಧರಿಸಿ ಅವಗುಣವನೆ ಕೆತ್ತಿ ಭರ್ಗೋದೇವನ ಭಜಿಸಿ ಬ್ರಾಹ್ಮಣನಾದರೆ ಹಗ್ಗವ ಹಾಕಿ ಕೊರಳ ಕೊಯ್ದಂತೆ ಎಂದು ಹೇಳಿದರು...' ಹೀಗೆ ನಡೆಯಲ್ಲಿ ಒಂದು ನುಡಿಯಲ್ಲಿ ಇನ್ನೊಂದು ಮಾಡುತ್ತಿದ್ದ ಮಂದಿಯಿಂದ ಸಮಾಜವನ್ನು ಬಿಡಿಸುವ ಹೊಣೆಗಾರಿಕೆ ಆ ಕಾಲದ ಮೌನೇಶ್ವರರಂಥ ದಾರ್ಶನಿಕರಿಗೆ ಅನಿವಾರ್ಯವಾಗಿತ್ತು. ವ್ಯಕ್ತಿ ಮತ್ತು ವೃತ್ತಿಗಳಲ್ಲಿನ ಶ್ರೇಷ್ಠ–ಕನಿಷ್ಠ ಎಂಬ ಭಾವವನ್ನು ತೊಡೆದು ಹಾಕುವುದು ಮೌನೇಶ್ವರರ ಮುಖ್ಯ ಉದ್ದೇಶವಾಗಿತ್ತು. ದೇಹಶ್ರಮದ ದುಡಿಮೆಗಳನ್ನು ಗೌರವಿಸುವ ಮೂಲಕ ಪ್ರತಿಯೊಬ್ಬರು ದುಡಿದುಣ್ಣಬೇಕು, ಕಾಯಕ ಜೀವಿಗಳಿಗೆ ವೃತ್ತಿಗೌರವ ಇರಬೇಕು ಎಂದು ಕಡೆಗಣಿತ ಜಾತಿಗಳಲ್ಲಿ ಆತ್ಮವಿಶ್ವಾಸ ತುಂಬುವ ಮೂಲಕ ಅವರೊಂದಿಗೆ ಸರಿಬೆರೆತ ಸಂಗತಿಗಳು ಚಾರಿತ್ರಿಕವಾಗಿ ಮಹತ್ವದ ಅಂಶಗಳು. ಇದು ಮೌನೇಶ್ವರರ ಸಾಮಾಜಿಕ ಮತ್ತು ಧಾರ್ಮಿಕ ಜಾಗೃತಿಯ ದಿಟ್ಟ ನಡೆಯಾಗಿತ್ತು ಎಂಬುದು ಗಮನಾರ್ಹ.

ಸಮಕಾಲೀನ ದೇಸಿ ದರ್ಶನಗಳು

ಮೌನೇಶ್ವರರು ಬದುಕಿದ ಹಿಂದು ಮುಂದಿನ ದಿನಗಳಲ್ಲಿ ಹಲವಾರು ಸಿದ್ಧ ಸಾಧಕರು, ಸಂತರು ಆಗಿ ಹೋಗಿದ್ದ ಸಂಗತಿಗಳನ್ನು ಮೌನೇಶ್ವರರ ವಚನಗಳಿಂದ ತಿಳಿಯಬಹುದಾಗಿದೆ. ತಿಂತಿಣಿ ಅಥವಾ ಕೊಡೇಕಲ್ಲ ಪರಿಸರದಲ್ಲಿ ಕ್ರಿ.ಶ.೧೪೮೯ (ಕೊಡೇಕಲ್ಲ ಬಸವಣ್ಣ)ರಿಂದಲೂ ಬಹಳ ದೊಡ್ಡ ಸಿದ್ಧಪರಂಪರೆಯೊಂದು ಸಕ್ರಿಯವಾಗಿತ್ತು. ಬಸವಕಲ್ಯಾಣವು ಕೊಡೇಕಲ್ಲ ಬಸವಣ್ಣನ ಅಮರ ಕಲ್ಯಾಣ, ಧರ್ಮಕಲ್ಯಾಣ, ವಿಜಯ ಕಲ್ಯಾಣಗಳು ಪ್ರಕ್ರಿಯಾತ್ಮಕ ಸಂಬಂಧದಲ್ಲಿ ಈ ಕಾಲದ ಸಿದ್ಧ ಸಾಧಕರಲ್ಲಿ ಪುನರ್‌ಸೃಷ್ಟಿಗೊಂಡಿತು. ಅಲ್ಲಮ ಚೆನ್ನಬಸವಣ್ಣಾದಿಗಳು ಕೊಡೇಕಲ್ಲು ಬಸವಣ್ಣ, ಮಂಟೇಸ್ವಾಮಿ, ಮೌನೇಶ್ವರರಾಗಿ ಅವತಾರ ತಾಳಿದರು ಎನ್ನುವ ಪ್ರತೀತಿ. ವಚನ ಚಳುವಳಿ ಪ್ರೇರಣೆ ಪ್ರಭಾವಗಳು ಇವರೆಲ್ಲರಲ್ಲಿಯೂ ಹೊಸರೂಪದ ಸೃಜನಶೀಲ ಅನುಸಂಧಾನ ದಲ್ಲಿ ಮೂಡಿಬಂದವು. ಸ್ಥಾವರಗೊಂಡ ವೀರಶೈವ ಧಾರ್ಮಿಕ(೧೫, ೧೬, ೧೭ನೇ ಶತಮಾನ) ರಾಜಕಾರಣದಿಂದ ಹೊರಗುಳಿಯ ಬಯಸಿದರು. ತಾವಾಡುವ ನುಡಿ ಗಳನ್ನು ಡಂಗುರದ ಮೂಲಕ ಸಾರುತ್ತ ಅದರ ಪ್ರಚಾರವನ್ನು ಮಾಡಿದರು. ಇವರೆಲ್ಲರ ಇಷ್ಟಲಿಂಗರಹಿತವಾದ ತಾತ್ವಿಕತೆಯೊಂದಿಗೆ ಸಾಂಸ್ಥಿಕಗೊಳ್ಳುತ್ತಿದ್ದ ವೀರಶೈವಕ್ಕಿಂತ ವ್ಯಕ್ತಿ ಮತ್ತು ಅವನ ವಿಕಾಸದ ಅರಿವಿನ ಕ್ರಿಯೆಗಳನ್ನು ಹುಡುಕಲು ಹವಣಿಸಿದರು. ಬಹಳ ಮುಖ್ಯವಾಗಿ ಈ ಎಲ್ಲ ಅನುಭಾವಿಗಳ ಹುಡುಕಾಟವೇ ಚಲನಶೀಲವೂ ಮತ್ತು ಸಮೂಹ ಪ್ರಜ್ಞೆಯುಳ್ಳದ್ದಾಗಿತ್ತು. ಅಮರ ಕಲ್ಯಾಣ ಕೊಡೇಕಲ್ಲುಗಳು ಇಂಥ ಸಿದ್ಧ ಸಾಧಕರ ಮುಖ್ಯಸ್ಥಾನಗಳಾದಂತೆ ಗುತ್ತಿ, ಹಲವುಕಲ್ಲು, ಜಲದುರ್ಗ,

ಸಾಲೋಟಗಿ, ಕಪ್ಪಡಿ, ನಾಗಾವಿ, ತಿಂತಿಣಿಗಳೂ ಅಂಥ ವಿಶಿಷ್ಟ ಅನುಭಾವಿಗಳ ನೆಲೆ ಬೀಡುಗಳಾಗಿದ್ದವು.

ಕೊಡೇಕಲ್ಲ ಬಸವಣ್ಣನ ಪರಿವಾರವೆಂದು ಡಾ.ಬಸವಲಿಂಗ ಸೊಪ್ಪಿಮಠ ಅವರು 'ಹೆಂಡತಿ ನೀಲಮ್ಮ, ಮಕ್ಕಳಾದ ರಾಚಪಯ್ಯ, ಸಂಗಪ್ಪಯ್ಯ, ಗುಹೇಶ್ವರ ಗುರುವಾದ ಆರೂಢ ಸಂಗಮೇಶ್ವರ, ಅಮರಕಲ್ಯಾಣದ ಅಲ್ಲಮಪ್ರಭು ಎನಿಸಿದ ಪರಮಾನಂದಪ್ರಭು ಶಿಷ್ಯರಾದ ಸಾಲೋಟಗಿ ಚನ್ನಬಸವೇಶ್ವರ, ಗಲಗಿನ ಚೆನ್ನಬಸವೇಶ್ವರ, ತಿಂತಿಣಿ ಮೋನಪ್ಪಯ್ಯ, ನಾಗಾವಿ ಗುರುಗುಂಡಬಸವ ಅವನ ಮಗ ಈರಪ್ಪಯ್ಯ, ಮಂಟೇಸ್ವಾಮಿ, ವಡಬಾಳನಾಗನಾಥ ಪ್ರಶಿಷ್ಯರಾದ ಸಿದ್ದಪ್ಪಯ್ಯ, ಗಗನಾಪುರದ ಗಂಗಪ್ಪಯ್ಯ, ಮಳೆಯ ಪ್ರಭು ಮೊದಲಾದವರು ಕೊಡೇಕಲ್ಲು ಬಸವಣ್ಣನ ಅಮರಕಲ್ಯಾಣ ಪರಿಸರದ ಶರಣರಾಗಿದ್ದರು. ಆತನ ಪರಿವಾರದಲ್ಲಿ ಮುಖ್ಯರೆನಿಸಿದ್ದಾರೆ(ಡಾ.ಬಸವಲಿಂಗ ಸೊಪ್ಪಿಮಠ, ಕೊಡೇಕಲ್ಲ ವಚನ ವಾಕ್ಯ, ಸಂ.೧, ಪು.೮;೧೯೯೮). ಎಲ್ಲ ಅನುಭಾವಿಕ ನೆಲೆಗಳನ್ನು ದೇಸಿ ದರ್ಶನಗಳೆಂದು ಗುರುತಿಸಲಾಗುತ್ತದೆ. ಇವರೆಲ್ಲರೂ ಪ್ರಮುಖವಾಗಿ ಲೋಕದ ಕೆಳ ಮತ್ತು ಮಧ್ಯಮ ಸ್ತರಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪ್ರಶ್ನೆ ಗಳನ್ನು ಎತ್ತಿಕೊಂಡವರು.

ತಿಂತಿಣಿ ಮೌನೇಶ್ವರರಲ್ಲಿ ಇಂಥ ಆರೂಢ ಸೂಫಿ ಹಾಗೂ ನಾಥಪಂಥದ ಪ್ರಭಾವಗಳನ್ನು ದಟ್ಟವಾಗಿ ಕಾಣುತ್ತೇವೆ. ವಚನಗಳಲ್ಲಿ ಕಾಣುವ ನೂರೊಂದಯ್ಯ, ಹತ್ತೊಂದಯ್ಯ, ಗದ್ದಿಗಯ್ಯ, ವಿರಕ್ತಯ್ಯ ಇವು ಆ ಕಾಲದ ದೇಸಿ ದಾರ್ಶನಿಕರ ಹೆಸರುಗಳೇ ಆಗಿವೆ.

ಗುದ್ದಿನಯ್ಯನವರು ಕೂಳರು
ಸಂಗಯ್ಯನವರು ಬೋಳರು
ಮೋನಯ್ಯನವರು ಕೀಳರು(೩೧)

ಎನ್ನುವಲ್ಲಿ ಗುದ್ದಿನಯ್ಯ, ಸಂಗಯ್ಯರು ಮೌನೇಶ್ವರರ ಸಮಕಾಲೀನ ಸಂತರಾಗಿರ ಬಹುದು. ಸಂಗಪ್ಪಯ್ಯ ಕೊಡೇಕಲ್ಲ ಬಸವಣ್ಣನ ಮೂವರು ಮಕ್ಕಳಲ್ಲಿ ಕೊನೆಯವನು. ಬಾಲಸಂಗಯ್ಯನ ಹೆಸರಿನಲ್ಲಿ ಈತನ ವಚನಗಳು ಸಿಗುತ್ತವೆ. ಬಾಲಸಂಗಯ್ಯನ ಗುರು ಬೋಳಬಸವೇಶ. ಕೊಡೇಕಲ್ಲ ಬಸವಣ್ಣನಿಗೆ ಬೋಳಬಸವೇಶನೆಂಬ ಮತ್ತೊಂದು ಹೆಸರಿತ್ತು. ಆ ಕಾರಣಕ್ಕಾಗಿಯೇ ಕೊಡೇಕಲ್ಲ ಬಸವಣ್ಣನ ಸಂತತಿಗೆ ಬೋಳ ಜಂಗಮರೆಂದು ಕರೆಯುತ್ತಿದ್ದರು(ವಿವರಕ್ಕೆ ನೋಡಿ: ಡಾ. ಬಸವಲಿಂಗ ಸೊಪ್ಪಿಮಠ, ಕೊಡೇಕಲ್ಲ ವಚನವಾಕ್ಯ, ಸಂ.೧, ಪು.೧೨;೧೯೯೮).

ಗಾಳಿಪೂಜೆ, 'ಗಾಳಿಪೂಜೆ ಸಿದ್ಧ' ಎನ್ನುವ ಹೆಸರು ಮೌನೇಶ್ವರ ವಚನಗಳಲ್ಲಿ ಕಾಣುತ್ತವೆ. ಶ್ರೀ ಜೀವಣ್ಣ ಮಸಳಿಯವರು ಗಾಳಿಪೂಜೆ ಸಿದ್ಧನ ಮಠವನ್ನು

ಮುದ್ದೇಬಿಹಾಳ ತಾಲೂಕಿನ ಗಾಳಿಪೂಜೆ ಎಂಬ ಹಳ್ಳಿಯಲ್ಲಿ ಇತ್ತೆಂದು ಗುರುತಿಸುತ್ತಾರೆ. ಗೋಣಿ ಬಸಪ್ಪನ ಕಾವ್ಯದಲ್ಲಿ 'ಗಾಳಿಪೂಜೆ ಪಟ್ಟಣ' ಎನ್ನುವ ಉಲ್ಲೇಖ ಬರುತ್ತದೆ. ಗೋಣಿ ಬಸಪ್ಪನ ಪರಂಪರೆ ಹರಪನಹಳ್ಳಿ ಭಾಗದಿಂದ ಮುದ್ದೇಬಿಹಾಳದವರೆಗೆ ವಿಸ್ತರಿಸಿತ್ತೆ? ಎಂಬುದು ಅನುಮಾನ.

ಅದೇ ರೀತಿ ಸಂಗಪ್ಪ, ಬಸಪ್ಪನಂತೆ ಕೊಡೇಕಲ್ಲು ಪರಂಪರೆಯಲ್ಲಿ ಗಲಗಿನ ಚೆನ್ನಬಸವೇಶ್ವರ, ಸಾಲೋಟಗಿ ಚೆನ್ನಬಸವೇಶ್ವರರು ಬರುತ್ತಾರೆ. ಪರಮಾನಂದ ಪ್ರಭುವನ್ನು ಅನಿಮಿಷಯ್ಯ ಅಲ್ಲಮನ ಅವತಾರವೆಂದು ಹೇಳಲಾಗುತ್ತದೆ.

ಒಟ್ಟಿನಲ್ಲಿ ಮೌನೇಶ್ವರರು ತಮ್ಮ ಸಮಕಾಲೀನ ಬಹುದೊಡ್ಡ ಶರಣ ಹಾಗೂ ಅನುಭಾವಿಗಳ ಪರಂಪರೆಗಳಾದ ದೇಸಿ ದರ್ಶನಗಳಿಂದ ಹಲವು ತಾತ್ವಿಕ ಸಂಗತಿಗಳನ್ನು ರೂಪಿಸಿಕೊಂಡಿದ್ದು ಸ್ಪಷ್ಟವಾಗಿದೆ.

ಜಾತಿ ಮತ್ತು ಸಮಾಜ

ಮೌನೇಶ್ವರರ ಜಾತಿ ಮತ್ತು ಸಮಾಜದ ಕಲ್ಪನೆ ಎನ್ನುವುದು ತುಂಬ ಪ್ರಗತಿದಾಯಕವಾದದ್ದು. ವರ್ಣಾಶ್ರಮ ಧರ್ಮದ ಸಾಮಾಜಿಕ ಸಿದ್ಧಾಂತಗಳನ್ನು ನಿರಾಕರಿಸುತ್ತಾರೆ. ಮನುಷ್ಯ ಮನುಷ್ಯರಲ್ಲಿಯೇ ಶ್ರೇಷ್ಠ ಕನಿಷ್ಠವೆಂದು ಬೇಧವೆನಿಸುವ ಆತ್ಮವಾದಿ ಧೋರಣೆಗಳನ್ನು, ಅದರ ಕ್ರೌರ್ಯಗಳನ್ನು ಕಟುವಾಗಿ ಟೀಕಿಸುತ್ತಾರೆ. ಬಹುಸಂಖ್ಯಾತ ಜನ ಸಮೂಹದ ಬದುಕನ್ನು ಇಂಥ ಧಾರ್ಮಿಕ ಕ್ರೌರ್ಯಗಳಿಂದ ಬಿಡುಗಡೆಗೊಳಿಸಿ ಲೋಕದ ಬದುಕು ಸಹ್ಯವಾಗಬೇಕೆಂದು ಸಾರುತ್ತಾರೆ. ಅದಕ್ಕಾಗಿ ವೃತ್ತಿ ಮತ್ತು ವ್ಯಕ್ತಿಗೌರವಕ್ಕೆ ಮೊದಲ ಆದ್ಯತೆ ನೀಡುತ್ತಾರೆ.

'ನಡೆಶುದ್ಧ ನುಡಿ ಶುದ್ಧ। ಒಡೆಯನ ಚಾಕರಿ ಶುದ್ಧ। ತೊಡೆಯಲಿ ಶುದ್ಧ ಬಸವಣ್ಣ ಇದರಂಥ। ಒಡವಿ ಮತ್ತುಂಟೆ ಧರೆಯೊಳಗೆ। ಕೇಡು ನುಡಿದವನೆ ಹೊಲೆ ನಾಯಿ'(೩೦೦) ಮೌನೇಶ್ವರರು ಬಯಸುವ ಸಮೃದ್ಧ ಸಮಾಜದ ಕಲ್ಪನೆಯನ್ನು ಮೇಲಿನ ವಚನ ಸೂಕ್ಷ್ಮವಾಗಿ ತೋರಿಸುತ್ತದೆ. ನಡೆ ಮತ್ತು ನುಡಿ ಶುದ್ಧತೆ ಹಾಗೂ ಮಾಡುವ ಕೆಲಸದ ಮೇಲಿನ ಪ್ರೀತಿ ಮತ್ತು ಶ್ರದ್ಧೆ ಒಂದು ಸಮ ಸಮಾಜದ ಮುಖ್ಯ ದ್ರವ್ಯಗಳು. ಆಲಸ್ಯರ ಅಸುರೀ ಶಕ್ತಿಯ ಎದುರಿಗೆ ಶ್ರಮಿಕರ ಕರ್ಮಶಕ್ತಿಯನ್ನು ಎದುರು ನಿಲ್ಲಿಸಿ ಗೆಲ್ಲಿಸಿದವರು. ಕರ್ಮ ಮಾರ್ಗವನ್ನೇ ಜ್ಞಾನ ಮಾರ್ಗವಾಗಿಸಿ ಸ್ವಾನುಭವ ಮತ್ತು ಸ್ವಾವಲಂಬನೆಯನ್ನು ಬದುಕಿನ ಪ್ರಮಾಣವಾಗಿಸಿದರು. ಹಳೆಯ ಬ್ರಾಹ್ಮಣ ವ್ಯವಸ್ಥೆ ದೈಹಿಕ ಶ್ರಮದ ವೃತ್ತಿ ಮತ್ತು ವ್ಯಕ್ತಿಗಳನ್ನೆಲ್ಲ ತುಚ್ಛವಾಗಿಸಿತ್ತು, ಕೀಳಾಗಿಸಿತ್ತು.

ಪಾರಮಾರ್ಥ ಸಾಧನೆ ಎಂಬುದು ನೇಮ ವ್ರತ ಪೂಜೆಗಳಿಂದೇಕೆ ನಡೆಯಬೇಕು. ಕರ್ತವ್ಯ, ಕರ್ಮಗಳ ಮೂಲಕ ಏಕೆ ನಡೆಯಬಾರದು ಎನ್ನುವ ಮನೋಧರ್ಮ

ಮೌನೇಶ್ವರರದು. ದುಡಿಮೆ ಮತ್ತು ಕುಲವೃತ್ತಿಗಳು ಆತ್ಮೋದ್ಧಾರದ ದಾರಿಗಳಲ್ಲ ಎನ್ನುವ ಸನಾತನ ತಿಳಿವಳಿಕೆಗೆ ಚಾಣದೇಟು ನೀಡುತ್ತಾರೆ. ನಿರ್ಮಲವಾದ ಕರ್ಮವೇ ಸದ್ಗತಿ ಮತ್ತು ಜ್ಞಾನಕ್ಕೆ ಮೂಲವೆಂದು ದೇಹದ ನಿವೃತ್ತಿಪರ ವಿಚಾರಕ್ಕಿಂತ ಪ್ರವೃತ್ತಿಪರ ವಿಚಾರವನ್ನು ಮುಂದೆ ಮಾಡುತ್ತಾರೆ.

ಬುದ್ಧಿ ಮತ್ತು ಭಾವ, ಕ್ರಿಯೆ ಮತ್ತು ಅರಿವು, ದೇಹ ಮತ್ತು ಆತ್ಮ ಇವುಗಳ ಸುಸಾಂಗತ್ಯವೇ ಸಶಕ್ತ ಸಮಾಜದ ನಿರ್ಮಿತಿಗೆ ಕಾರಣವಾಗುತ್ತದೆ. ಶರೀರ ಭೇದಿಸಿ ಬುದ್ಧಿ ಮತ್ತು ಕ್ರಿಯೆಗಳನ್ನು ಎರಡಾಗಿಸಿ ವರ್ಗಭೇದದ ಬೀಜ ಬಿತ್ತಿ ಅಸಮಾನತೆಯನ್ನು ಪೋಷಿಸುವ ಗುಣ ಪುರೋಹಿತಶಾಹಿ ಮನಸ್ಸಿನದು. ಶ್ರಮ ಮತ್ತು ಜ್ಞಾನವನ್ನು ಸಮನ್ವಯಗೊಳಿಸಿ ಅದನ್ನು ಶರೀರದ ಉತ್ಪಾದನೆಯಾಗಿ ಕಾಣುವ ಆಶಯ ಮೌನೇಶ್ವರರದು.

ದೇಹ–ಆತ್ಮ, ಕ್ರಿಯೆ–ಅರಿವು, ಶ್ರೇಷ್ಠ–ಕನಿಷ್ಠ, ಬ್ರಾಹ್ಮಣ–ಶೂದ್ರ, ಮೇಲು–ಕೀಳು ಎಂದು ಹೀಗೆ ದೇಹದಿಂದ ಆತ್ಮವನ್ನು ಸಮಾಜದಿಂದ ವ್ಯಕ್ತಿಯನ್ನು ಕ್ರಿಯೆಯಿಂದ ಅರಿವನ್ನು ಸೀಳಿ ಅದನ್ನು ಜಾತಿಸ್ತರಗಳಿಗೆ ಬದ್ಧಗೊಳಿಸುವ ಪುರೋಹಿತಶಾಹಿ ಮತ್ತು ಊಳಿಗಮಾನ್ಯ ಪ್ರವೃತ್ತಿಗಳನ್ನು ಮೌನೇಶ್ವರರು ಬಲವಾಗಿ ಖಂಡಿಸುತ್ತಾರೆ. ಅದಕ್ಕಾಗಿಯೇ 'ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ, ದೇವಿ ದೇವನು ಒಡಗೂಡಿ ನಾನಾ ಜೀವ ಜಂತುಗಳು ಹುಟ್ಟಿದವು' ಎಂದು ಹೇಳಿದರು.

'ಪೃಥ್ವಿ ಆಕಾಶ ಶಿವಲಿಂಗದೊಳು ಭಕ್ತ ಭವಿಗಳೆಂದು ಬೊಗಳಲಾರೆ', 'ಸಾವು ಮರಣಗಳೊಂದೆ ದಾರಿಯೆಲ್ಲಾ ಒಂದೇ ಜನಿತಗಳು ಒಂದೇ ಸಕಲರ ಕುಲವೆಲ್ಲ ಒಂದೆ...ಇದರೊಳಗಾರ ಕುಲ ಹಿರಿದು ಕಿರಿದೆನ್ನಲಿ'. 'ವ್ಯವಸಾಯವಿಲ್ಲದ ಮನೆಯಲ್ಲ', 'ನಂಜಿನ ಊಟ ನಿರಂಜನರಿಗೆ ಸಲ್ಲದು' ಸಮಾಜದ ವಿಘಟನೆ, ಜಾತಿ–ಕುಲಗಳ ಮೇಲಾಟ, ದುಡಿಯದೆ ಉಣ್ಣುವ ಸೋಮಾರಿತನ ಇವು ನಿರ್ವೀರ್ಯ ಸಮಾಜದ ಫಲಿತಗಳು. ಹಾಗಾಗಿ

ಮೆಟ್ಟು ಮಾರುವವನಾದರೂ ಆಗಲಿ
ಕಟ್ಟಿಗೆ ತರುವವನಾದರೂ ಆಗಲಿ
ಕೆಷ್ಟಮಾಡಿ ಉಂಬುವವರ ಮನೆಯ
ಮುಷ್ಟಿ ಅನ್ನವೇ ಸಾಕು, ಬಸವಣ್ಣ(೧೬೮)

'ದುಡಿದುಣ್ಣದೆ ತುಡುಗು ಮಾಡುವರಯ್ಯ', 'ಪಂಥ ಕೋಪಗಳು ಅಡಸಲ್ಲ ನಿಮ್ಮ ಅಂತರಂಗದಲಿ ತಿಳಿದು ನೋಡಿ', 'ದೇಹವೇ ದೇವರು ಜೀವವೇ ಶಿಷ್ಯನು' ಇಲ್ಲೆಲ್ಲ ಮೌನೇಶ್ವರರು ಒಂದು ಅಖಂಡ ಹಾಗೂ ಸೃಷ್ಟಿಶೀಲ ಸಮಾಜದ ನೆಲೆಗಳನ್ನೇ ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. ಭೇದಗಳಿರದ ಬದುಕು ವೇದಕ್ಕೂ ಮಿಗಿಲು ಎನ್ನುವ ಸ್ವಾವಲಂಬಿ ಸಮಾಜದ ಕನಸುಗಾರ ಅವರು.

ಅಂತಹ ಸೃಷ್ಟಿಶೀಲ ಸಮಾಜದಲ್ಲಿ ಅವರವರ ಹಕ್ಕುಗಳು ಅವರವರಿಗೆ ಸಲ್ಲಬೇಕು. ಯಾರೂ ಯಾರ ಪಾಲನ್ನೂ ಕಸಿದುಕೊಳ್ಳಬಾರದು, ಯಾರೂ ಯಾರ ಅಧೀನದಲ್ಲಿ ಗುಲಾಮರಂತೆ ಇರಬಾರದು. 'ಕೂಲಿಗೆ ಒಡೆಯನಲ್ಲದೆ ಕುನ್ನಿಗೆ ಒಡೆಯನಲ್ಲ', 'ಪಾಲು ಪಂಕುಗಳು ನಮಗಿರಲಿ ಹಿಂದಿನ ಸಾಲಕ್ಕೆ ಗಳಿಕೆಗೆ ಸರಿಯೆಂದ' ಎನ್ನುವಲ್ಲಿ ಇಂದಿನ ಪ್ರಜಾಪ್ರಭುತ್ವವಾದಿಗಳು, ಮಾರ್ಕ್ಸ್‌ವಾದಿ ಹಾಗೂ ಸಮಾಜವಾದಿಗಳು ಎತ್ತುವ ಮೂಲಭೂತ ಹಕ್ಕಿನ ಪ್ರಶ್ನೆಗಳನ್ನು ಮೌನೇಶ್ವರರು ಮೊದಲೇ ಎತ್ತಿರುವುದು ಗಮನಾರ್ಹ. 'ನಮ್ಮದು ನಮಗೆ ಕೊಡಿರಿ ನಿಮ್ಮದು ನೀವು ಉಣ್ಣಿರಿ ಅನ್ಯಾಯದ ಬದುಕು ಅರಮನೆಗೆ' ಅನ್ಯಾಯ ಮತ್ತು ಅಕ್ರಮಗಳು ನಿರಂಕುಶ ಅಧಿಕಾರದ ಫಲಿತಗಳು, ಅವು ಮನುಷ್ಯ ಸಮಾಜದ ಕಡು ವೈರಿಗಳು. ವ್ಯಕ್ತಿಗೌರವ, ವೃತ್ತಿಗೌರವ ಹಾಗೂ ಸಮಪಾಲು ಸಮಬಾಳು ಇವು ಜೀವಂತ ಸಮಾಜದ ಲಕ್ಷಣಗಳು. ಅಂತಹ ಸಮಾಜದ ಕಲ್ಪನೆ ಮೌನೇಶ್ವರರದಾಗಿತ್ತು.

ಸ್ವ–ಸಮಾಜ ವಿಮರ್ಶೆ

ಮೌನೇಶ್ವರರು ಆತ್ಮಸಾಕ್ಷಿ ಮತ್ತು ಆತ್ಮವಿಮರ್ಶೆ ಗುಣವಿರುವ ಗಟ್ಟಿಗರು. ಕೇವಲ ಅನ್ಯ ಸಮಾಜದ ಸಮಸ್ಯೆಗಳನ್ನು ಅಸಂಗತತೆಗಳನ್ನು ಮಾತ್ರ ಹೇಳದೆ ತನ್ನ ಸಮಾಜದ ಪರಿಮಿತಿಗಳನ್ನು ಡಾಂಭಿಕತನಗಳನ್ನು ಕಟು ವಿಮರ್ಶೆಗೆ ಒಡ್ಡಿದ ಖಂಡಿತವಾದಿಗಳು. ದೀಪದ ಕೆಳಗಿನ ಕತ್ತಲೆಯಂತೆ ಗುಲಗಂಜಿಯ ಕೆಳಗಿನ ಕಪ್ಪಿನಂತಿರುವ ತನ್ನ ತಪ್ಪುಗಳನ್ನು ಮುಚ್ಚಿಟ್ಟುಕೊಂಡು ಅನ್ಯರಿಗೆ ಬೋಧಿಸುವ ಗುಣ ಮೌನೇಶ್ವರರಲ್ಲಿ ಇಲ್ಲ. ಅವರೊಬ್ಬ ನಿರ್ಭಿಡೆಯ ಸಂತರಾಗಿದ್ದರು.

ಇನ್ನೊಬ್ಬರನ್ನು ಹಳಿಯುತ್ತಲೇ ಆಯುಷ್ಯ ಕಳೆಯುವ ಬದಲು ಸಮುದಾಯದ ಮನಸ್ಸಿನೊಡನೆ ಮಥಿಸಿ ಮರುಹುಟ್ಟು ಪಡೆದು ತನ್ನ ಮಾತನ್ನು ಸಮುದಾಯದ ಮಾತಾಗಿಸಿದವರು. ಅಂದಾಗ ನಡೆ ಮತ್ತು ನುಡಿಯ ಮೇಲೆ ಹಿಡಿತವಿರುವುದಲ್ಲದೆ ಆತ್ಮಸ್ಥೈರ್ಯ ಪುಟಿದೇಳುತ್ತದೆ.

'ಬಡಿಗ ಕಮ್ಮಾರರಿಗೆ ತುಡುಗುತನ ಸಲ್ಲದು ಬಡವರಿಗೆ ಬಡಾಯಿ ಸಲ್ಲದು' 'ಪಂಚಮಹಾ ಪಂಚಾಳರೆಂದು ವಂಚನೆಯ ಮಾಡಬೇಡಿ' 'ಗರವಿ ಪಾಂಚಾಳರು', 'ಅಕ್ಕಸಾಲಿಗರಿಗೆ ಅಹಂಕಾರ ಸಲ್ಲದು' 'ಪಾಂಚಾಳರು ಕೆಟ್ಟು ಅಡವಿ ಚಂಚರಾಗಲಿ' ಎನ್ನುವ ಮಾತುಗಳು ಗಮನಾರ್ಹವಾದಂಥವು. ಪಾಂಚಾಳ ವೃತ್ತಿಗಳು ಸೂಕ್ಷ್ಮ ವೃತ್ತಿಗಳಾದಂತೆ ಅವು ನಂಬಿಕೆಯ ವೃತ್ತಿಗಳು ಆಗಿದ್ದವು. ಜನ ನಂಬಿ ಕೆಲಸ ನೀಡಿರುತ್ತಾರೆ ಅಥವಾ ಖರೀದಿಸುತ್ತಾರೆ. ಅಂಥ ಹೊತ್ತಲ್ಲಿ ವಸ್ತುವಿನ ದೀರ್ಘ ಬಾಳಿಕೆ ಮತ್ತು ಬಳಕೆಯ ದೃಷ್ಟಿಯು ಮುಖ್ಯವಾಗುತ್ತದೆ. ಸೃಷ್ಟಿ ಕರ್ತರಿಗೆ ಹುಸಿ ಸಲ್ಲದು. ಒಂದು ವೇಳೆ ಅವರು ಹುಸಿಯಾಡಿದರೆ ಅಂಥ ಪಂಚಾಳರು ಕೆಟ್ಟು ಅಡವಿ ಚಂಚರಾಗಲಿ ಎಂದು ಮೌನೇಶ್ವರರು ಹಳಿಯುತ್ತಾರೆ. ಕ್ರಿಯೆ ಮತ್ತು

ಜ್ಞಾನಕ್ಕೆ ವಿನಯ ಹಾಗೂ ವಿಧೇಯತೆಗಳು ಮುಖ್ಯವಾಗಬೇಕು. ಅಹಂಕಾರಗಳು ಮುಖ್ಯವಾಗಬಾರದು. ಹೀಗಾಗಿ ಪಾಂಚಾಳರು ವಂಚನೆಗಾರರು ಮತ್ತು ಗರವಿ ಗಳಾದರೆ ಸಮಾಜದಲ್ಲಿ ಅಸ್ತವ್ಯಸ್ತತೆ ತಲೆದೋರುತ್ತದೆನ್ನುವ ಆಶಯ ಮೌನೇಶ್ವರರದು. ಪಾಂಚಾಳರ ವೃತ್ತಿ ಕೇವಲ ಕೌಶಲ್ಯಗಳಲ್ಲ ಅವು ಸತ್ಯದ ಪ್ರತಿಸೃಷ್ಟಿ ಗಳಾಗಿದ್ದವು.

ನಗರನಾಡಿನ ಸಮಾಜೋ ಆರ್ಥಿಕ ಸಂಗತಿಗಳು

'೧೦–೧೩ನೇ ಶತಮಾನದಲ್ಲಿ ವಾಯವ್ಯ ಕರ್ನಾಟಕದಲ್ಲಿ ಆಗುತ್ತಿದ್ದ ಹೆಚ್ಚಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳು ಹೊಸ ನಗರ ಪಟ್ಟಣಗಳ ರಚನೆಗೆ ಕಾರಣವಾಗುತ್ತವೆ. ಈ ಹೊಸ ನಗರಗಳ ಹುಟ್ಟನ್ನೇ ಹಳ್ಳಿಯಲ್ಲಿ ನಡೆಯುವ ಸಂತೆಗಳ ಮೂಲದಲ್ಲಿ ಕಾಣಬಹುದು. ಹೀಗೆ ಆ ಕಾಲದಲ್ಲಿ ರಾಜ್ಯದಲ್ಲಿ ಹುಟ್ಟಿಕೊಂಡ ಮೂವತ್ತಾರು ಪಟ್ಟಣಗಳಲ್ಲಿ ಮೂವತ್ತೆರಡು ಪಟ್ಟಣಗಳು ಧಾರವಾಡ, ಬೆಳಗಾವಿ, ಶಿವಮೊಗ್ಗ ಮತ್ತು ಬಿಜಾಪುರ ಜಿಲ್ಲೆಗಳಿಗೆ ಸೇರಿದ್ದವು. ಇವುಗಳಲ್ಲಿ ಹದಿನಾರು ಪಟ್ಟಣಗಳು ಧಾರವಾಡ ಜಿಲ್ಲೆಯಲ್ಲಿ ಕಾಣಸಿಗುತ್ತವೆ'(ಉದ್ಧೃತ; ಅಮರೇಶ ನುಗಡೋಣಿ (ಸಂ), ಬಸವಣ್ಣನವರ ವಚನಗಳ ಸಾಂಸ್ಕೃತಿಕ ಮುಖಾಮುಖಿ, ಪು.೧೦;೨೦೦೪).

ವಿಶೇಷವಾಗಿ ಹತ್ತಿ ಬೆಳೆಯುವ ಜಿಲ್ಲೆಗಳಾದ ಬೆಳಗಾವಿ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ನೇಕಾರರು ಹೆಚ್ಚಾಗಿ ಕಂಡುಬರುತ್ತಾರೆ. ಕಾರಣ ನೇಕಾರಿಕೆ ಕರ್ನಾಟಕದ ಮುಖ್ಯ ಕಸುಬಾಗಿತ್ತು. ೧೦ ಹಾಗೂ ೧೩ನೇ ಶತಮಾನದಲ್ಲಿ ಕರ್ನಾಟಕ ದಲ್ಲಿ ಬಟ್ಟೆ ಉದ್ಯಮವು ಬೃಹತ್ ಆರ್ಥಿಕ ಚಟುವಟಿಕೆಯಾಗಿತ್ತು. ಹತ್ತಿ ಪ್ರಮುಖ ಬೆಳೆಯಾಗಿತ್ತು. ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳಲ್ಲಿ ಇಂಥ ನೇಕಾರರ ಸಂಘಗಳ ವಿವರಗಳಿರುವುದು ವಿಶೇಷ.

ಕಾರಣ ಗುಲಬರ್ಗಾ ಜಿಲ್ಲೆಯ ಬೆನ್ನಿಗೆ ಅಂಟಿಕೊಂಡಂತಿರುವ ಉಳಿದ ಜಿಲ್ಲೆಗಳಲ್ಲಿ ಹತ್ತಿ ಉದ್ಯಮವು ೧೦ ಹಾಗೂ ೧೩ನೇ ಶತಮಾನದಿಂದ ಮೌನೇಶ್ವರರ ಕಾಲದ ವರೆಗೂ (೧೭ನೇ ಶತಮಾನ) ಪ್ರವರ್ಧಮಾನ ಸ್ಥಿತಿಯಲ್ಲಿದ್ದುದನ್ನು ಮೌನೇಶ್ವರರು ಪಿಡ್ಡವ್ವನಿಂದ ಕದಿರಿನ ಲೆಕ್ಕವನ್ನು ವಸೂಲಿ ಮಾಡಿದ ಪ್ರಸಂಗವು ಸೂಚಿಸುತ್ತದೆ.

ಪ್ರಧಾನವಾಗಿ ಇಲ್ಲಿ ಕೃಷಿ ಭೂಮಿಯಲ್ಲಿ ಎಣ್ಣೆಕಾಳು ಮತ್ತು ಹತ್ತಿಯನ್ನು ವಾಣಿಜ್ಯ ಬೆಳೆಯನ್ನಾಗಿ ಬೆಳೆಯಲಾಗುತ್ತಿತ್ತು. ಜೀವನಾವಶ್ಯಕವಾದ ಎಣ್ಣೆಕಾಳಿಗಿಂತ ಹತ್ತಿಯ ವಾಣಿಜ್ಯೀಕರಣವು ವ್ಯಾಪಕವಾಗಿ ನಡೆದಿತ್ತು. 'ಹತ್ತಿಯ ಎಳೆಯನ್ನು ಬಿಡಿಸಿ ನೇಯ್ಗೆ ಯಿಂದ ಬಟ್ಟೆಯನ್ನು ಸಿದ್ಧಪಡಿಸುವ ನೇಕಾರರ ವರ್ಗ ಸೃಷ್ಟಿಯಾಯಿತು. ಹತ್ತಿ ಗಿರಣಿಗಳು ನೇಕಾರ ತಂಡಗಳು ಅಭಿವೃದ್ಧಿ ಹೊಂದಿದವು. ಹತ್ತಿಯಷ್ಟೇ ಮುಖ್ಯವಾಗಿ ಇನ್ನೊಂದು ಬಗೆಯ ವಾಣಿಜ್ಯದ ವಸ್ತುಗಳಾಗಿ ಕಬ್ಬಿಣ ಮತ್ತು ಬಗೆ ಬಗೆಯ ಲೋಹಗಳು ಪ್ರಮುಖವಾದವು. ಕಟ್ಟಿಗೆಯ ಬಳಕೆಯೂ ಇದರಲ್ಲಿ ಸೇರಿತ್ತು. ಈ ವಸ್ತುಗಳನ್ನು ಬಳಸಿ ಜೀವನೋಪಯೋಗಿ ಪರಿಕರಗಳನ್ನು ಸೃಷ್ಟಿಸಿಕೊಡುವ ಕುಶಲ

ಕರ್ಮಿಗಳ ವರ್ಗವು ಮುನ್ನೆಲೆಗೆ ಬಂದಿತು. ಕಂಬಾರ, ಅಕ್ಕಸಾಲಿ, ಕಂಚುಗಾರ, ಬಡಿಗ ಮುಂತಾದ ವಿಶ್ವಕರ್ಮ ಗುಂಪಿನ ವರ್ಗ ಸಮುದಾಯ ಸೃಷ್ಟಿಯಾಗಿತ್ತು. ಕೂಲಿಕಾರರಿಗಿಂತ ಕುಶಲಕರ್ಮಿಗಳು ತಕ್ಕಮಟ್ಟಿನ ಮೇಲ್ತರಗತಿಯ ಜೀವನ ವಿಧಾನವನ್ನು ಹೊಂದಿದವರಾಗಿದ್ದರು. ಅರಸರು, ಸುಲ್ತಾನರು ಹಾಗೂ ವಿವಿಧ ವರ್ಗಗಳ ಭೋಗಲಾಲಸೆಗನುಗುಣವಾಗಿ ಹತ್ತಿ ರೇಷ್ಮೆಯಿಂದ ಸೂಕ್ಷ್ಮ ನೇಯ್ಗೆಯನ್ನು ಮಾಡಿ ಕೊಡುವ ನೇಕಾರರು ವಿವಿಧ ಲೋಹಗಳಿಂದ ಕಲಾಕೃತಿ, ಪಾತ್ರೆ, ಆಭರಣ, ಮೋಹಕ ವಸ್ತುಗಳನ್ನು ಸಿದ್ಧಪಡಿಸಿಕೊಡುವ ವಿಶ್ವಕರ್ಮರು ತಮ್ಮ ತಮ್ಮ ಕಲಾತ್ಮಕ ಚಟುವಟಿಕೆಗಳಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ಬಹುಮುಖ್ಯವಾಗಿ ಬೆಳೆದಿದ್ದರು'(ಡಾ.ಶಿವಾನಂದ ವಿರಕ್ತಮಠ, ಅಮರಕಲ್ಯಾಣ, ನುಡಿ ಪ್ರಕಾಶನ, ಹೊಸಪೇಟೆ, ಪು.೩೨–೩೩;೨೦೦೫).

೧೫ನೇ ಶತಮಾನದಲ್ಲಿ ಆರಂಭಗೊಂಡ ಕೊಡೇಕಲ್ಲ ಅನುಭಾವಿ ಪಂಥ ಮತ್ತು ಮುಂದೆ ಬಂದ ಮಂಟೇಸ್ವಾಮಿ ಪಂಥಗಳು ಪ್ರಮುಖವಾಗಿ ವಿಶ್ವಕರ್ಮರು, ನೇಕಾರರು ಹಾಗೂ ಪಶು ಹಾಗೂ ಕುರಿ ಸಂಗೋಪನೆಯಂತಹ ಅಲೆಮಾರಿಗಳನ್ನು ಭಕ್ತರನ್ನಾಗಿಸಿಕೊಂಡಿದ್ದು ಗಮನಿಸುವಂತದ್ದು.

ತಿಂತಿಣಿ ಎಂದರೆ ಸಮುದಾಯ, ಸಮೂಹ, ನಿಬಿಡತೆ ಎಂಬರ್ಥವಿದೆ. ಹಾಗೆ ಹುಣೆಸೆಮರ ಹುಣಿಸೆಮೆಳೆ(ಗುಂಪು)ಎನ್ನುವ ಅರ್ಥವೂ ಇದೆ. ಈ ಅರ್ಥದಲ್ಲಿ ಮೌನೇಶ್ವರರು ನೆಲೆಸಿದ ಸ್ಥಳ ಅದೊಂದು ಕ್ರಿಯಾಶೀಲ ಕರ್ಮಭೂಮಿ ಯಾಗಿತ್ತು. ಅವರ ವಚನಗಳಲ್ಲಿ ಕಾಣುವ ಕೊಡೇಕಲ್ಲ ಬಸವಣ್ಣ, ಗಗನಾಪುರದ ಗಂಗಪ್ಪಯ್ಯ, ಬೋಳಬಸವ, ಗದಿಗೆಯ್ಯರಂತಹ ಸಮಕಾಲಿನ ಅನುಭಾವಿಗಳು ಮಾಡುವ ವಿವಿಧ ಉದ್ಯೋಗದ ಪ್ರಸ್ತಾಪಗಳನ್ನು ಗಮನಿಸಿದಾಗ ತಿಂತಿಣಿ ಜ್ಞಾನ ಮತ್ತು ಕರ್ಮ ಯೋಗಿಗಳ ನೆಲೆವೀಡಾಗಿತ್ತು ಎಂಬುದು ಗಮನಾರ್ಹ.

'ಸಕಲ ವಿಶ್ವಕರ್ಮರಾದಿಯಾಗಿ ಕರಕುಶಲ ಕೈಗಾರಿಕೆಗಳ ಜನತೆ ಅಲ್ಲಿ ಪಾಲ್ಗೊಂಡಿತ್ತು. ಬೃಹತ್ ಪ್ರಮಾಣದಲ್ಲಿ ಒಕ್ಕಲುತನದ ಕಟ್ಟಿಗೆ ಹಾಗೂ ಕಬ್ಬಿಣದ ಉಪಕರಣಗಳು ಅಲ್ಲಿ ನಿರ್ಮಾಣಗೊಂಡಿದ್ದವು. ಇದರಿಂದಾಗಿ ಅಂದಿನ ಆರ್ಥಿಕ ಸ್ಥಿತಿಗೆ ಒಂದು ಹೊಸ ತಿರುವು ಸಿಕ್ಕಿತು. ಇದನ್ನು ಸಾರಿ ಹೇಳುವ ಕಬ್ಬಿಣದ ಕಿಟ್ಟ ಕಮ್ಮಾರಿಕೆ ಹಾಗೂ ಅಕ್ಕಸಾಲಿಕೆಯ ಕುರುಹುಗಳು ಇಂದಿಗೂ ಅಲ್ಲಿ ಕಾಣಸಿಗುತ್ತವೆ' (ಪಾ.ವೆಂ.ಅರಕೇರಿ, ಶ್ರೀ ಮೌನೇಶ್ವರರು, ಪು.೭).

'ಈಶ್ವರನ ಪಾದ ಅರಹು ಎಂದರೆ ತ್ರಾಸಿನಲ್ಲಿ ನೋಡು' ಎಂದರು. 'ಹಲವು ಶಾಸ್ತ್ರಗಳನೋದಿ ನೆಲೆಗಾಣದಾದೆ ಬಲ್ಲವರಾರು ಗುರುಪಾದವೆಂದರೆ ಕುಲುಮೆಯಲಿ ನೋಡು.' ಇಂಥ ಮಾತುಗಳು ಕರ್ಮಪ್ರಜ್ಞೆಯನ್ನು ಸ್ವ–ಅರಿವಿನ ಮಹತ್ವವನ್ನು ಸ್ವಾವಲಂಬನೆ ತತ್ತ್ವವನ್ನು ಹೇಳುತ್ತವೆ. ತನ್ನನ್ನು ತಾನೇ ರೂಪಿಸಿಕೊಳ್ಳುವ ಸ್ವ

ಅರಿವಿನ ಗುಣವಿದು. ಸಗರನಾಡಿನ ಇಂಥ ಪರಿಸರ ಮೌನೇಶ್ವರರ ಚಿಂತನಾ ದ್ರವ್ಯವನ್ನು ರೂಪಿಸಿತ್ತು.

ಕದಿರಿನ ಉತ್ಪಾದನೆ ಹಾಗೂ ವಿನಿಮಯ

ತಿಂತಿಣಿ ಉತ್ಪಾದನೆ ಹಾಗೂ ವಿನಿಮಯ ಕೇಂದ್ರವಾಗಿತ್ತೆನ್ನುವುದಕ್ಕೆ 'ಮೌನೇಶ್ವರರ ಜೀವನ ಚರಿತ್ರೆಯಲ್ಲಿ ಬರುವ ಕುರುಬರ ಪಿಡ್ಡವ್ವನ ಕಥೆ ನಿದರ್ಶನವಾಗಿದೆ.

ಒಮ್ಮೆ ಮೌನೇಶ್ವರರು ಧಾರವಾಡ ಪರಿಸರದಲ್ಲಿ ಕದಿರು ಮಾರುವಾಗ ಪಿಡ್ಡವ್ವ ಎನ್ನುವ ಹೆಣ್ಣುಮಗಳು ಕದಿರನ್ನು ಉದ್ರಿಯಾಗಿ ಕೊಂಡಕೊಳ್ಳುತ್ತಾಳೆ. ಮತ್ತೊಮ್ಮೆ ಹಣದ ವಸೂಲಿಗಾಗಿ ಮೌನೇಶ್ವರರು ಅಲ್ಲಿಗೆ ಹೋದಾಗ ಪಿಡ್ಡವ್ವ ಅಂದೇ ತೀರಿಕೊಂಡಿರುತ್ತಾಳೆ. ತನ್ನ ಕದಿರಿನ ಹಣ ತನಗೆ ಬರಲೇಬೇಕೆಂದು ಹಠ ಹಿಡಿದ ಮೌನೇಶ್ವರರು ತಮ್ಮ ಯೋಗಬಲದಿಂದ ಅವಳಲ್ಲಿ ಜೀವ ತುಂಬಿ ತಮ್ಮ ಕದಿರಿನ ಹಣವನ್ನು ಕೇಳಿ ಪಡೆಯುತ್ತಾರೆ.

ಇದೊಂದು ಪುರಾಣ ಅಥವಾ ಪವಾಡದ ಮಾತಾದರೂ ಸಾಂಕೇತಿಕವಾಗಿ ದೇಸೀ ಹಾಗೂ ಗುಡಿ ಕೈಗಾರಿಕೆಗಳ ಪುನಶ್ಚೇತನಕ್ಕೆ ಶ್ರಮಿಸಿದ ಸಂಗತಿಯಾಗಿರುವುದು ಸ್ಪಷ್ಟವಾಗಿದೆ. 'ಕದಿರು ಹತ್ತಿಯನ್ನು ಅರಳೆ ಮತ್ತು ಕಾಳುಗಳಾಗಿ ಬೇರ್ಪಡಿಸುವ ಕಡ್ಡಿಯಂತಹ ಸಾಧನ. ಇದು ತಿಂತಿಣಿಯ ಕುಲುಮೆಗಳಲ್ಲಿ ತಯಾರಾಗುತ್ತಿತ್ತು. ಮೌನೇಶ್ವರರು ಅದನ್ನು ಮಾರಲು ಧಾರವಾಡ ಸೀಮೆಯಲ್ಲಿ ಸಂಚರಿಸುತ್ತಿದ್ದರು. ಈ ಮಾತನ್ನು ಸಮರ್ಥಿಸುವಂತೆ ಪಾಂಚಾಲಗೀತಾ ವೈಭವದಲ್ಲಿ ಒಂದು ಉಲ್ಲೇಖವಿದೆ.

ಕದಿರು ಮಾರುವೆನೆಂದು ಒದರುತ್ತ ತಾನು।
ಸದುಮಲ ಸೋಮನ
ಒದರಿ ನುಡಿಸಿದ ದೇವಾ
ಪಿಡ್ಡನಾಯಕಳ ದುಡ್ಡ ವಸೂಲಿಯಲ್ಲಿ
ದಡ್ಡ ಮನುಜರನು
ಮಡ್ಡ ಬಿಡಿಸಿದೆ ದೇವಾ(ಪು.೪;೧೯೯೮)

ಎನ್ನುವ ಮಾತು ವಿಶೇಷವಾದದ್ದು. ಕಾರಣ ಅಂದಿನ ಧಾರವಾಡ ಜಿಲ್ಲೆ(ಇಂದಿನ ಗದಗ, ಹಾವೇರಿ, ಲಕ್ಷ್ಮೇಶ್ವರ, ನರಗುಂದ, ನವಲಗುಂದ) ಹತ್ತಿ ಬೆಳೆಯುವ ಪ್ರಮುಖ ಕೇಂದ್ರಗಳಾಗಿದ್ದವು. ಸಹಕಾರಿ ತತ್ತ್ವವನ್ನು ಈ ನಾಡಿಗೆ ನೀಡಿದ, ಹಲವಾರು ಹತ್ತಿ ಕಾರ್ಖಾನೆಗಳನ್ನು ಹೊಂದಿದ ಈ ಪರಿಸರ ದೇಸಿ ವಸ್ತುಗಳ ತಯಾರಿಕೆಗೆ ಇಂದೂ ಹೆಸರಾಗಿದೆ. ಅಂದರೆ ಹತ್ತಿ ಹಾಗೂ ಕಾಳುಗಳನ್ನು ಬೇರ್ಪಡಿಸುವ ಯಂತ್ರಗಳ ಔದ್ಯೋಗಿಕ ಕ್ರಾಂತಿಯ ಬೀಜರೂಪವನ್ನು ಮೌನೇಶ್ವರರ ಕದಿರಿನ ತುದಿಯಲ್ಲಿ ಕಾಣಬಹುದಾಗಿದೆ. ಈ ಅರ್ಥದಲ್ಲಿ ದೊಡ್ಡ ಪ್ರಮಾಣದಲ್ಲಿ ದೇಸೀ ಕರಕುಶಲ

ಕಲೆಗಳ ಪುನರುಜ್ಜೀವನಕ್ಕೆ ಮೌನೇಶ್ವರರು ಪ್ರಯತ್ನಿಸಿದ್ದರು. ಪಿಡ್ಡವ್ವನ ಮೂಲಕ ನಿಸ್ತೇಜವಾಗಿದ್ದ ಹಾಗೂ ಸ್ತ್ರೀ ಕೇಂದ್ರಿತವಾಗಿದ್ದ ಗೃಹ ಕೈಗಾರಿಕೆಗಳ ಸಬಲೀಕರಣಕ್ಕೆ ಮೌನೇಶ್ವರರು ಶ್ರಮಿಸಿದರು. ಈ ಮೂಲಕ ಹೇಳ ಹೊರಟಿರುವುದೇನೆಂದರೆ ಪಾಂಚಾಳರು ಕೇವಲ ಕುಶಲಕರ್ಮಿಗಳಾಗಿರಲಿಲ್ಲ. ಅವರು ಉತ್ಪಾದಕರು ಮತ್ತು ಉತ್ಪಾದಿತ ವಸ್ತುಗಳನ್ನು ವಿನಿಮಯ ಮಾಡುತ್ತಿದ್ದ ಉತ್ಪಾದಕ ವ್ಯಾಪಾರಿ ವರ್ಗ ವಾಗಿದ್ದರು ಎಂಬುದು. ಇದಕ್ಕೆ ನಿದರ್ಶನವಾಗಿ ಕಂಚಿಪುರಾಣದಲ್ಲಿ ಒಂದು ಪ್ರಸಂಗವಿದೆ.

ಚಿತ್ತಯಿಸು ಭೂನಾಥ ಶ್ರೀಗಿರಿ
ಯತ್ತಣಿಂದಲಿ ಕಂಚುಗಾರರು
ಚಿತ್ತಜರೂಪರು ಗುಣೋತ್ತಮರಧಿಕ ಸಾಹಸರು
ಅರ್ಥಿಯಿಂ ಭಾಂಡವ ವ್ಯವಹರಿ
ಸುತ್ತಲಿಹ ದೇಶದೊಳು ಸಂಚರಿ
ಸುತ್ತಲೊಡನೈತಂದು ಪೊಕ್ಕರು ಚಂದ್ರಗುತ್ತಿಯ(ಸಂ:೨೬)

ಬಂದು ಗುಡಿಯನು ಹೊಯಿಸಿ ಪುರದೊಳ
ತಂದ ಭಾಂಡಗಳ ಮಾರುತಿರಲು
ಸಂದುದಲ್ಲಿಗೆ ಮಾಸ ನಾಲ್ಕರ ಮುಂದೆ ನಡವುತಿರೆ(ಸಂ:೨೭)

ಶ್ರೀಗಿರಿಯ ಉತ್ತರ ದಿಕ್ಕಿನಿಂದ ಬಂದ ಕಂಚುಗಾರರು ಶಿಲ್ಪಿಗಳು, ಸುಗುಣಿಗಳು ಬಹು ಸುಂದರವಾದ ಮೈಕಟ್ಟುಳ್ಳವರು, ಧೀರರು, ಸಾಹಸಿಗಳಾಗಿದ್ದರು. ಇವರು ತಾವು ತಯಾರಿಸುತ್ತಿದ್ದ ವಸ್ತುಗಳನ್ನು ಒಂಟೆ, ಕುದುರೆಗಳ ಮೇಲೆ ಹೇರಿಕೊಂಡು ದೇಶ ದೇಶಗಳಲ್ಲಿ ಸಂಚರಿಸಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ಮಾಡುತ್ತಿದ್ದರು. ಹಾಗೆ ಚಂದ್ರಗುತ್ತಿಗೆ ಬಂದು ನಾಲ್ಕು ತಿಂಗಳ ವ್ಯಾಪಾರ ಮಾಡುತ್ತಿದ್ದರು ಎನ್ನುವುದು ಒಂದು ಹೊಸ ಚಾರಿತ್ರಿಕ ಸಂಗತಿಯಾಗಿದೆ.

ಮಧ್ಯಕಾಲೀನ ಕರ್ನಾಟಕದಲ್ಲಿ ಪಾಂಚಾಳರು ಕೇವಲ ಕಸುಬುದಾರರಾಗಿರದೆ ಪ್ರಮುಖ ಉತ್ಪಾದಕ ಹಾಗೂ ವ್ಯಾಪಾರಿ ವರ್ಗದವರೂ ಆಗಿದ್ದರೆಂಬುದು ಗಮನಿಸು ವಂಥದ್ದು. ಇಂಥ ಉತ್ಪಾದಕ ಕಸುಬುದಾರರಿಗೆ ವಚನ ಚಳುವಳಿ ಹಾಗೂ ನಂತರದ ಚೆನ್ನಬಸವ ಪುರಾಣದಲ್ಲಿ ಸಿಗುವ ಪ್ರಾಮುಖ್ಯ ನೋಡಿದರೆ ಅಂದಿನ ವೀರಶೈವವು ಆರ್ಥಿಕ ವಿಷಯಗಳಿಗೆ ತೋರಿದ ಆಸಕ್ತಿಯನ್ನು ಗಮನಿಸಬಹುದು. ಚೆನ್ನಬಸವ ಪುರಾಣದ (ಅಧ್ಯಾಯ ೭–೮, ಮತ್ತು ೫೩, ೧೮೬೮, ಪು.೧೯೪) ಕಸುಬಿನ ಮೂಲದಿಂದ ಬಂದ ರೈತರು, ನೇಯ್ಗೆಯವರು, ಚರ್ಮ ಹದ ಮಾಡುವವರು,

ಅಕ್ಕಸಾಲಿಗರು, ಬುಟ್ಟಿ ಮಾಡುವವರು, ಬಡಿಗರು, ಈಡಿಗರು, ಹಗ್ಗ ಮಾಡುವವರು ಮುಂತಾದ ಕಸುಬುದಾರ ವರ್ಗಗಳು ಪಾತ್ರಧಾರಿಗಳಾಗಿ ಬರುವುದು ಆ ಕಾಲದ ವೀರಶೈವವು ಆರ್ಥಿಕ ವಿಷಯಗಳಿಗೆ ಎಷ್ಟೊಂದು ಪ್ರಾಧಾನ್ಯತೆ ನೀಡುತ್ತಿತ್ತು ಎನ್ನುವು ದನ್ನು ಮನಗಾಣಬಹುದು. ಮುಂದೆ ಭೂ ಹಿಡುವಳಿದಾರರು ಹಾಗೂ ಭೂಮಾಲೀಕ ಬ್ರಾಹ್ಮಣರ ಕೈಲಿ ಸಿಕ್ಕ ಕಸುಬುದಾರ ವರ್ಗಗಳು ತನ್ನ ಉತ್ಪಾದನಾ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಕಸುಬುದಾರರು, ಉತ್ಪಾದಕರು, ಅತೃಪ್ತಿಗೊಂಡು ಆ ಸಮಾಜದಿಂದ ಬೇರ್ಪಟ್ಟು ಹೊಸ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ಮುಂದಾದರು. ಇಂಥ ಸ್ವಾವಲಂಬಿ ಹಾಗೂ ದೇಸಿ ಆರ್ಥಿಕ ಭದ್ರತೆಯ ರೂಪಕ ವಾಗಿಯೇ ನಾವು ಕದಿರಿನ ಕಠಾಮತ್ತನ್ನು ನೋಡಬೇಕಾಗಿದೆ.

ಜಾತಿ, ಮತ, ಲಿಂಗಭೇದಗಳನ್ನು ಮೀರಿದ ಸಮೂಹಪ್ರಜ್ಞೆಯ ಬಹುದೊಡ್ಡ ಆಧ್ಯಾತ್ಮಿಕ(ಇಂದಿನ ಕೈಲಾಸ ಕಟ್ಟಿ) ಹಾಗೂ ಕ್ರಿಯಾಶೀಲ ಉತ್ಪಾದನ ವಿನಿಮಯ ಕೇಂದ್ರವಾಗಿ ತಿಂತಿಣಿ ಪರಿಸರವನ್ನು ಮೌನೇಶ್ವರರು ಸಜ್ಜುಗೊಳಿಸಿದ್ದರು. ಜ್ಞಾನ ಮತ್ತು ಕರ್ಮದ ಪ್ರತೀಕವಾಗಿ ಇಂದಿಗೂ ಮೌನೇಶ್ವರರು ಗುಹೆಯಲ್ಲಿ ಪೂಜೆಗೊಳ್ಳು ತ್ತಿರುವ ಹೂಜಿ ಮತ್ತು ಕೊಡಲಿ ಅಖಂಡ ಅನುಭಾವದ ಸೃಜನಶೀಲ ಸಂಕೇತ ಗಳಾಗಿವೆ.

'ಓಂ ಏಕ್ ಲಾಕ್ ಐಂಸಿ ಹಜಾರ್ ಪಾಚೋ ಪೀರ ಪೈಗಂಬರ್ ಮೌನಧೀನ್ ಜಿತಾ ಪೀರ ಪೈಗಂಬರ್ ಮೌನ್‌ಧೀನ್ ಕಾಶೀಪತಿ ಗಂಗಾಧರ ಹರಹರ ಮಹಾದೇವ, ಇದು ಹಿಂದು ಮುಸ್ಲಿಂ ಐಕ್ಯವನ್ನು ಸಾರುವ ಅಖಂಡತೆಯ ಮಂತ್ರವಾಗಿದೆ. ಒಂದು ಲಕ್ಷ ಎಂಬತ್ತು ಸಾವಿರದ ಐದು ಪೀರ ಪೈಗಂಬರಾದಿಯಾಗಿ ಮಹಮ್ಮದೀ ಯರು ಶಿವಸ್ವರೂಪಿಯಾದ ಮೌನೇಶ್ವರನಲ್ಲಿ ಅಡಗಿದ್ದರೆಂಬುದು ವಿಶ್ವತತ್ತ್ವವನ್ನೇ ಹೇಳುತ್ತದೆ. ವಿಶ್ವಕರ್ಮ ಎಂಬುದು ಕೇವಲ ಒಂದು ಜಾತಿಯಾಗಿರದೆ ಎಲ್ಲವನ್ನೂ ಒಳಗೊಂಡ ಅನಿಕೇತನ ಪ್ರಜ್ಞೆಯಾಗಿದೆ.

ವಿಶ್ವಕರ್ಮ ದಾರ್ಶನಿಕತೆ ಮತ್ತು ಮೌನೇಶ್ವರರು

ಮೌನೇಶ್ವರ ವಚನಗಳ ಮುಖ್ಯ ತತ್ತ್ವವೆಂದರೆ ಕರ್ಮವು(ಕ್ರಿಯೆ, ಕೆಲಸ)ವಾಸನಾ ಜನ್ಯವಾಗಿರದೇ ಪರಮಾತ್ಮ ಪ್ರೀತಿಯಿಂದ ಕೂಡಿ ಸದಾ ಪರೋಪಕಾರದ ಗುರಿ ಹೊಂದಿರಬೇಕೆನ್ನುವುದು. ಕಾಯ ಮತ್ತು ಕಾಯಕದಿಂದಲೇ ಎಲ್ಲವನ್ನು ಪಡೆಯ ಬಹುದು. ಕ್ರಿಯೆ ಮತ್ತು ಜ್ಞಾನದ ಸಾಂಗತ್ಯವೇ ಅರಿವು ಅಥವಾ ಅನುಭಾವ ಎಂಬುದು ಮೌನೇಶ್ವರರ ದಾರ್ಶನಿಕ ನಿಲುವು. ಇಲ್ಲಿ ಸೂಕ್ಷ್ಮವಾಗಿ ಪಂಚಾಳ ತತ್ತ್ವದ(ವಿಶ್ವಕರ್ಮ ದಾರ್ಶನಿಕತೆ) ಪ್ರತಿಪಾದನೆಯನ್ನು ಕಾಣಬಹುದು. 'ಕರ್ಮ ಎಂಬುದೇ ಪ್ರಧಾನ. ಲೋಕ ಸೇವೆಗಿಂತಲೂ ಹಿರಿಯ ತಿಳಿವು ಇಲ್ಲ. ಕಾರಣ ಕರ್ಮಯೋಗಿಗೆ ಜ್ಞಾನಮಾರ್ಗ ತಾನಾಗಿಯೇ ದೊರೆಯುತ್ತದೆ' ಎಂಬುದು ವಿಶ್ವಕರ್ಮ

ತಾತ್ವಿಕತೆಯ ಬಹುಮುಖ್ಯ ನಿಲುವು. ಈ ಅರ್ಥದಲ್ಲಿ ತಮ್ಮ ಲೋಕೋಪಕಾರಾರ್ಥ ಶಿಲ್ಪಕಾರ್ಯಗಳಿಂದ ಮನುಷ್ಯರಿಗೂ ದೇವತೆಗಳಿಗೂ ಅಸುರರಿಗೂ ಪ್ರಿಯರಾದವರೆಂದರೆ ವಿಶ್ವಕರ್ಮರು.

ಋಗ್ವೇದದಲ್ಲಿ ಬರುವ ಋಭುಗಳು ಪರಾಸಿದ್ಧಿಯನ್ನು ಗಳಿಸಿ ಎಲ್ಲ ಕಡೆಗೂ ಪೂಜ್ಯನೀಯರಾಗಿದ್ದರು. ಶಿಲ್ಪಕರ್ಮದ ಮುಖಾಂತರ ಮಾಡಿದ ಲೋಕಸೇವೆಯಿಂದಲೇ ಅಗ್ನಿಹೋತ್ರಿಯು ಯಜ್ಞದಿಂದ ಗಳಿಸುವ ಪುಣ್ಯ ಮತ್ತು ಸಫಲತೆಗಳನ್ನು ನಿತ್ಯಶಿಲ್ಪ ಕಾರ್ಯ ಮಾಡುವ ಶಿಲ್ಪಿಯು ಗಳಿಸುತ್ತಾನೆ ಎನ್ನುವ ಕಾರಣಕ್ಕೆ ಶಿಲ್ಪಿಗಳನ್ನು ನಿತ್ಯಾಗ್ನಿಹೋತ್ರಗಳು ಎಂದು ಕರೆಯಲಾಗುತ್ತದೆ.

'ಹರನೇ ಕಮ್ಮಾರ ವಿಷ್ಣುವೇ ಬಡಿಗ', 'ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ', 'ಬಡಿಗ ಕಮ್ಮಾರರು ಸೃಷ್ಟಿಗಧಿಕರ್ತರು', 'ಕುಲುಮಿ ಹುಟ್ಟದ ಮುನ್ನ ಕುಲ ಛಲವೆಲ್ಲಿತ್ತು'. 'ಕುಲ ಹದಿನೆಂಟಕ್ಕೆ ಕುಲುಮಿಯೇ ಶಿಕ್ಷಾಗುರು' 'ನೂರಾರು ದೇವರು ಚಾಣಿನ ಮಕ್ಕಳು'

ಇಕ್ಕಳವೇ ಕುಲದೈವ ಸುತ್ತಿಗೆಯೇ ಮನಿದೈವ
ಬೊಕ್ಕಸಗೋಲು ಗಜದಂಡ ನೆತ್ತೀಲಿ ತೆತ್ತೀಸ
ಕೋಟಿ ದೇವಾದಿ ದೇವರ್ಕಳ
ನಿರ್ಮಿಸಿದ ಮೇಲೆ ಕೆಟ್ಟ ಕುಲ ಎನಬಹುದೆ
ಇದು ಅಲ್ಲಮನ ಕುಲವು, ಬಸವಣ್ಣ(೬)

ಕರಚರಣಗಳಲ್ಲಿ ಕಾರ್ಯವನ್ನು ನಿರ್ಮಿತವ ಮಾಡಿದ ಗುರ್ತರಿಯೆ
ಸರುವ ದೇವರುಗಳನು ಪೆಸರಿಟ್ಟು ಕರೆದಂಥ
ಪರಬ್ರಹ್ಮ ಮೂರ್ತಿ ಈತನಲ್ಲದೆ ಪ್ರತಿ ದೈವವೆಂದು ನುಡಿದ
ಮಹಾ ಪಾತಕರು ಇದೇನು ಕೇಳು, ಬಸವಣ್ಣ(೧೬)

ಈ ಅರ್ಥದಲ್ಲಿ ಸಕಲ ಸೃಷ್ಟಿಯ ನಿರ್ಮಾಣಕ್ಕೆ ವಿಶ್ವಕರ್ಮ, ಅಂದರೆ ಆತನಿಂದ ಉದ್ಭವರಾದ ಪಂಚಕರ್ಮಿಗಳು ಕಾರಣರು ಎನ್ನುವ ಮಾತು ಅರ್ಥಪೂರ್ಣವಾದುದು.

'ಯಜುರಾರಣ್ಯಕದ ವಚನವೊಂದರಲ್ಲಿ ವಿಶ್ವಕರ್ಮ ಜಗದೀಶ್ವರನು ಸರ್ವ ಜಗತ್ತುಗಳ ಸೃಷ್ಟಿಕರ್ತ ಎಂದು ಹೇಳಲಾಗಿದೆ. ಮೂಲತಃ ವಿಶ್ವಕರ್ಮ ಎನ್ನುವ ಪದಪುಂಜವೇ ನಿರಂತರ ಕ್ರಿಯಾಶೀಲತೆಯನ್ನು ಸೃಷ್ಟ್ಯಾತ್ಮಕ ಲಕ್ಷಣವನ್ನು ಧ್ವನಿಸುತ್ತದೆ. ವಿಶ್ವ>ಸಕಲ, ಕರ್ಮ>ಕ್ರಿಯೆ, ತನ್ನ ಜೀವನಕ್ಕಾಗಿ ಅನ್ಯರ ಹಿತಕ್ಕೆ ಧಕ್ಕೆ ಬರದಂತೆ ಲೋಕಕಲ್ಯಾಣಾರ್ಥ ವಾಗಿ ಮಾಡುವ ಕಾಯಕವೇ ಕರ್ಮ. ವಿಶ್ವಕರ್ಮೋಪನಿಷತ್ತು

ಕೂಡ ಸಕಲಹಿತಾರ್ಥ ತತ್ತ್ವವನ್ನೇ ಒತ್ತಿ ಹೇಳುತ್ತದೆ. ಆತ್ಮಜ್ಞಾನಕ್ಕಾಗಿ ಲೋಕದ ಬಗೆಗೆ ವಿರಕ್ತಿ ಬೆಳೆಸಿಕೊಂಡು ಕರ್ಮನಿರತನಾದರೆ ಅದು ವ್ಯರ್ಥ. ಕರ್ಮದಿಂದ ಉತ್ಪತ್ತಿ, ಉತ್ಪತ್ತಿಯಿಂದ ಅರ್ಥ ಸಂಗ್ರಹ, ಅರ್ಥಸಂಗ್ರಹದಿಂದ ಲೌಕಿಕ ಕ್ಷೇಮ, ಲೌಕಿಕ ಕ್ಷೇಮದಿಂದ ಸಂತೋಷ, ಸಂತೋಷದಿಂದ ಆತ್ಮಸಾಧನೆ, ಆತ್ಮಸಾಧನೆಯಿಂದ ಮನಶ್ಯಾಂತಿ, ಹೀಗೆ ಸಾಧನೆಗೆ ಬುನಾದಿ ಸತ್ಕರ್ಮ. ಕ್ರಿಯೆ ಮತ್ತು ಜ್ಞಾನಗಳ ಸಂಗ್ರಹವೇ ಯಶಸ್ವಿ ಜೀವನ. ಕರ್ಮಜ್ಞಾನ ಸಮುಚ್ಚಾದಿತವಾದ ಧರ್ಮಸಿದ್ಧಾಂತವೇ ವಿಶ್ವಕರ್ಮ ಪಥ ಮತ್ತು ತಾತ್ವಿಕತೆಯಾಗಿದೆ. ಈ ಪಥ ಅಥವಾ ತತ್ತ್ವದ ಅಧಿದೇವತೆಯೇ ವಿಶ್ವಕರ್ಮ. ಈತನಿಗೆ ಸಾನಗ, ಸನಾತನ, ಅಹಭೂನ, ಪ್ರತ್ನಶ್ಯ ಮತ್ತು ಸುಪರ್ಣರೆಂಬ ಐದು ಜನ ಮಾನಸ ಪುತ್ರರು"(ಉದ್ಧೃತ: ಡಾ.ವೀರೇಶ ಬಡಿಗೇರ, ಬಾಚಿ ಕಾಯಕದ ಬಸವಯ್ಯ, ವೃತ್ತಿ ಹಾಗೂ ತತ್ತ್ವ ಮೀಮಾಂಸೆ, ಪು.೩೬;೨೦೦೭).

ವಶಿಷ್ಠ ಪುರಾಣದಲ್ಲಿ ಹೇಳಿರುವಂತೆ:

ವಿಶ್ವಕರ್ಮ ಮುಖೋದ್ಭೂತಾ ಬ್ರಾಹ್ಮಣಾಃ ಪಂಚಪ್ರಕೀರ್ತಿತಾ
ಸದ್ಯೋಜಾತ ಮುಖೋಜಾತಃ ಸಾನಗೋ ವಿಶ್ವಕರ್ಮಣಃ
ವಾಮದೇವ ಮುಖೋಜಾತೋ ಬ್ರಹ್ಮಸ್ತು ಸನಾತನಃ
ಅಘೋರ ಮುಖೋ ಸಂಜಾತೋ ಅಹಭೂನೋ ವೈಶ್ವಕರ್ಮಣ
ತತ್ಪುರುಷ ಮುಖೋಜಾತೋ ಪ್ರತ್ನಸೋ ವಿಶ್ವಕರ್ಮಣಃ
ತಸ್ಯೇಶಾನ್ಯ ಮುಖೋಜಾತೋ ಸುಪರ್ಣೋ ವಿಶ್ವಕರ್ಮಣಃ

(ಉದ್ಧೃತ: ಜಿ.ಜ್ಞಾನಾನಂದ, ಕಂಚಿ ಪುರಾಣ, ಪು.೨೪೨;೨೦೦೭)

ಸದ್ಯೋಜಾತ ಮುಖದಿಂದ ಸಾನಗ, ವಾಮದೇವ ಮುಖದಿಂದ ಸನಾತನ, ಅಘೋರ ಮುಖದಿಂದ ಅಹಭೂನ, ತತ್ಪುರುಷ ಮುಖದಿಂದ ಪ್ರತ್ನಶ್ಯ, ಈಶಾನ್ಯ ಮುಖದಿಂದ ಸುಪರ್ಣರು ಅವಿರ್ಭಾವಗೊಂಡರು. ದೇವತಾಪಂಚಕದಲ್ಲಿ ಕ್ರಮವಾಗಿ ಇವರನ್ನೇ ಶಿವ, ಬ್ರಹ್ಮ, ವಿಷ್ಣು, ಇಂದ್ರ, ಆದಿತ್ಯ ಎಂದಾಗಿ ಹೇಳುತ್ತಾರೆ. ಇವರಿಂದ ಪಂಚಕರ್ಮಿಗಳಾದ ಮನು(ಕರ್ಮಾರ), ಮಯ(ಬಡಿಗ), ತ್ವಷ್ಟು(ಕಂಚುಗಾರ), ಶಿಲ್ಪಿ(ಶಿಲ್ಪಿಕಾರ), ದೈವಜ್ಞ(ಅಕ್ಕಸಾಲಿ) ಎನ್ನುವ ಐದು ಜನ ಕರ್ತೃ ಪುರುಷರು ಹುಟ್ಟುತ್ತಾರೆ. ಒಂದು ದೇಹ ಮತ್ತು ಐದು ಮುಖಗಳುಳ್ಳ ವಿಶ್ವಕರ್ಮನ ಬಿಂಬ ಮೂರ್ತಿಯನ್ನು ಜಾನ್ ಬ್ರೋವರ್ ಕೂಡ ತಮ್ಮ ಸಂಶೋಧನಾ ಮಹಾಪ್ರಬಂಧದಲ್ಲಿ ವಿವರಿಸಿರುವುದು ಇಲ್ಲಿ ಸ್ಮರಣೀಯ.

ಇವರು 'ತತ್ರಾಸಿ ಕರ್ಮಸೇವಾಯಾ ಮಸಿರ್ಲಿಪಿ ವಿಧೌಸ್ಮೃತೌ– ಕೃಷಿರ್ಭೂಕರ್ಷಣೇ ಪ್ರೋಕ್ತಾ ಶಿಲ್ಪಂಸ್ಯಾತ್ಕರಕೌಶಲಂ ತಚ್ಛಿಚಿತ್ರಕಲಾ ಪತ್ರಛೇದ್ಯಾದಿ ಬಹುಧಾಸ್ಮೃತಂ' ಎನ್ನುವ ಮಾತಿನಂತೆ ಅಸಿಕರ್ಮ, ಲಿಪಿಕರ್ಮ, ಕೃಷಿಕರ್ಮ, ಶಾಸ್ತ್ರ ಜೀವನ, ವಾಣಿಜ್ಯ

ಕರ್ಮ, ಶಿಲ್ಪಕರ್ಮ ಈ ಷಟ್ಕರ್ಮಗಳಿಗಾಗಿಯೇ ಪಂಚಕರ್ಮಿಗಳು ದುಡಿದ ಉಲ್ಲೇಖ ಗಳು ಸಿಗುತ್ತವೆ. ಈ ಅರ್ಥದಲ್ಲಿ ಮೌನೇಶ್ವರ ವಚನಗಳಲ್ಲಿ ಉಲ್ಲೇಖವಾಗುವ ತೆತ್ತೀಸಕೋಟಿ ದೇವರು ಹಾಗೂ ಬತ್ತೀಸ ಆಯುಧಗಳ ನಿರ್ಮಾಣ ಎನ್ನುವುದೇ ಜಗತ್ತಿನ ಸೃಷ್ಟಿಶೀಲತೆಯ ಪ್ರಕ್ರಿಯೆಯನ್ನು ಹೇಳುತ್ತದೆ. ಯಾರು ಸಕಲವನ್ನು ಸಕಲ ದೇವತೆಗಳನ್ನು ನಿರ್ಮಿಸಿದನೋ ಯಾರು ಸಕಲ ದೇವತೆಗಳಲ್ಲಿ ಸಚರಾಚರಗಳಲ್ಲಿ ಚೈತನ್ಯದಾಯಕ ವಾಗಿ ಅಡಗಿರುವನೋ(ಯತ್ರ ದೇವಾಃ ಸಮಗಚ್ಛನ್ತ ವಿಶ್ವೆ) ಅವನೇ ವಿಶ್ವಕರ್ಮ ಎಂದು ವಿಶ್ವಕರ್ಮಸೂಕ್ತಿಯು ಹೇಳುತ್ತದೆ.

ಶಿವ ಸೃಷ್ಟಿಯಲ್ಲಿ ಎಲ್ಲರೂ ಭಾಗಿದಾರರು. ಆದರೆ ಮೌನೇಶ್ವರರಲ್ಲಿ ಜಗತ್ತು ಅವರದೇ ಸೃಷ್ಟಿ. ಇಲ್ಲಿ ಎಲ್ಲವೂ ಅವನ ಲೀಲೆ. ಹರಿಹರಾದಿಗಳು ಇಲ್ಲಿ ಎಳೆ ಕಂದಮ್ಮಗಳು ದೇವರ ನಿಯಂತ್ರಣ ಮತ್ತು ಸೃಷ್ಟಿಗೆ ಇಲ್ಲಿ ಅವಕಾಶವಿಲ್ಲ. 'ನೂರಾರು ದೇವರು ಚಾಣಿನ ಮಕ್ಕಳು', ದೇವತೆಗಳು ಇರುವುದಾದರೆ ಅವರು ಮಾನವ ನಿರ್ಮಿತಿಗೆ ಒಳಪಡಬೇಕು. ಅಲ್ಲದೆ ಅವರು ಮಾನವರಂತೆ ಜೀವಿಮಾತ್ರವಾಗಿರು ವಂತವರು. ಕೇವಲ ಆಚರಣೆಯ ಅಂಶವಾಗಿ ಆಧ್ಯಾತ್ಮಿಕ ಸತ್ಯವಾಗಿ ಗ್ರಹಿಸುವ ದೇವರು ಮತ್ತು ಜ್ಞಾನದ ಪರಿಕಲ್ಪನೆಗಳು ಶೋಧವಿಲ್ಲದ ಛಾಯಾನುಕೃತಿಗಳಾಗುತ್ತವೆ. ಹಾಗಾಗಬಾರದು ಎನ್ನುವುದೇ ಮೌನೇಶ್ವರರ ಉದ್ದೇಶ.

ದಟ್ಟ ಲೋಕಾನುಭವದ ಪರಿಕಲ್ಪನೆಯಲ್ಲಿ ಧರ್ಮ, ದೇವರು, ವೇದ, ಪುರಾಣ, ಆಗಮ ಮುಂತಾದ ವೈದಿಕ ಹಾಗೂ ವೀರಶೈವ ಜಡನೆಲೆಗಳನ್ನು ಮೌನೇಶ್ವರರು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುತ್ತಾರೆ. ವೈಯಕ್ತಿಕ ನಿರೀಕ್ಷೆಗಳನ್ನು ಮೀರಿ ಅನುಭಾವಿಕ ನೆಲೆಯಲ್ಲಿ ಇವುಗಳ ಅನ್ವೇಷಣೆ ಮಾಡುತ್ತಾರೆ. ಇಂಥ ಪರೀಕ್ಷೆಯಿಂದಲೇ ಹೊಸ ಜೀವನ ತತ್ತ್ವಗಳನ್ನು ಹುಟ್ಟಿಸುತ್ತಾರೆ. ಇಂಥ ಚಿಂತನೆಗಳು ಧರ್ಮ ತತ್ತ್ವಗಳಂತೆ ಸ್ಥಾವರ ಗುಣವುಳ್ಳವಾಗಿರದೆ ತನ್ನ ಪ್ರಾಯೋಗಿಕ ಅನುಭವದಲ್ಲಿ ಹಾಯ್ದು ಹೊಸ ದರ್ಶನವನ್ನು ಮೂಡಿಸುತ್ತವೆ. ವಚನಗಳ ಮೂಲಕ ಅಭಿವ್ಯಕ್ತಗೊಳ್ಳುವ ಮೌನೇಶ್ವರರ ದೃಷ್ಟಿಕೋನವು ವಿಶಾಲವೂ ಪ್ರಬುದ್ಧವೂ ಮತ್ತು ಕ್ರಿಯಾಶೀಲವೂ ಆಗಿದೆ ಎಂಬುದು ಗಮನಿಸುವಂತದ್ದು.

ಸಂಕೇತಗಳ ಆಸ್ಫೋಟ

ತಾರ್ಕಿಕವಾದ ಕಟ್ಟುವಿಕೆ ಮತ್ತು ಚಲನಶೀಲತೆ ವಿಶ್ವಕರ್ಮ ತತ್ತ್ವದ ಮೂಲಧಾತು. ಬಹಳಷ್ಟು ದಾರ್ಶನಿಕರು ಸ್ಥಾವರದ ಹೆಸರಿನಲ್ಲಿ ಮೂಲವಸ್ತುವನ್ನು ಧಿಕ್ಕರಿಸುತ್ತಾರೆ. ಅದು ಜಡವೆಂದೂ ಅಚೇತನವೆಂದೂ ತಿಳಿಯುತ್ತಾರೆ. ಆದರೆ ವಿಶ್ವಕರ್ಮ ತಾತ್ವಿಕತೆ ಯಲ್ಲಿ ಯಾವುದೂ ಜಡವಲ್ಲ, ಎಲ್ಲವೂ ಚೇತನಮಯವಾಗಿರುವುದರಿಂದಲೇ ಸೃಷ್ಟಿ

ಸಾಧ್ಯ ಎನ್ನುವ ವಿಭಿನ್ನ ತಿಳುವಳಿಕೆ ಅಲ್ಲಿನದು.

ಪಾಂಚಾಳ ದಾರ್ಶನಿಕನಾದ ಹಾವಿನಹಾಳ ಕಲ್ಲಯ್ಯನಿಗೆ ಲೋಹಗಳೂ ಬಾಚಿ ಕಾಯಕದ ಬಸವಯ್ಯನಿಗೆ ಮತ್ತು ಕಾಮಾಟದ ಭೀಮಣ್ಣನಿಗೆ ಕಟ್ಟಿಗೆ ದಿಮ್ಮಿಗಳೂ ಮೌನೇಶ್ವರರಂತವರಿಗೆ ಲೋಹಗಳೂ ಜಡವಸ್ತುಗಳೂ ಅಲ್ಲ, ಧಿಕ್ಕರಿಸುವ ಸ್ಥಾವರ ಗಳೂ ಅಲ್ಲ. ರೂಪವನ್ನು ಧಿಕ್ಕರಿಸದೆ ಸಂಸ್ಕರಿಸಿ ಬಳಕೆಗೆ ಸಾಧ್ಯವಾಗಿಸುವ ಸೃಷ್ಟ್ಯಾತ್ಮಕತೆ ಯನ್ನು ಅವರಲ್ಲಿ ಕಾಣುತ್ತೇವೆ. ವೃತ್ತಿ ಸಹಜ ಪರಿಕರಗಳಾದ ಉಳಿ, ಬಾಚಿ, ಕೊಡತಿ, ಸುತ್ತಿಗೆ, ಇಕ್ಕಳ, ಚಮ್ಮಟಿಗೆ, ಚಾಣ, ಬೊಕ್ಕಸಗೋಲು, ತಿದಿ, ಅಡಿಗಲ್ಲು ಇವೆಲ್ಲ ಉದ್ಯೋಗಸ್ಥ ಅನುಭಾವಿಯ ರೂಪಕಾತ್ಮಕತೆಯ ಸರಂಜಾಮುಗಳು. ಕಸುಬುದಾರ ದಾರ್ಶನಿಕನೊಬ್ಬ ಅಲೌಕಿಕವಾದ ಅಯೋಮಯತೆಯನ್ನು ನಂಬಿ ಏನನ್ನೂ ಸೃಷ್ಟಿಸಲಾರ ಮತ್ತು ಅಂತಹ ಅತಿಮಾನುಷ ಬದುಕನ್ನು ಪ್ರೀತಿಸಲಾರ. ಆತನ ದಾರ್ಶನಿಕ ವೇದಿಕೆ ಎಂದರೆ ಪ್ರಕೃತಿ, ಸಾಧನಾ ಪರಿಕರಗಳೆಂದರೆ ವೃತ್ತಿ ಹಾಗೂ ಅದರ ಸಲಕರಣೆಗಳು.

ಇನ್ನೊಂದೆಡೆ ಕುಲದ ದೃಷ್ಟಿಯಿಂದ ವೃತ್ತಿ ಪರಿಕರಗಳು ಕುಲದೇವತೆ ಕಾಳಿಯ ಪ್ರತೀಕಗಳು. ಕಾಳಿ ವಿಶ್ವಕರ್ಮರ ಕುಲದೇವತೆ. ಕರ್ತೃತ್ವವೇ ಅವಳ ಗುಣ. ಈ ಗುಣವೇ ಉದ್ಯೋಗಸ್ಥ ಪಾಂಚಾಳರ ಮೂಲಜೀವಾಳ. ಸುತ್ತಿಗೆ, ಚಾಣ, ಅಡಿಗಲ್ಲು, ಕುಲುಮೆ, ಉಳಿ ಇವುಗಳ ಗುಣವೇ ಸ್ಥೂಲವನ್ನು ಕಾಸಿ, ಕಡಿದು, ಬಡಿದು, ಹಿಡಿದು, ಕತ್ತರಿಸಿ ಸೂಕ್ಷ್ಮಗೊಳಿಸುವುದು. ಪಲ್ಲಟ ಮತ್ತು ಪರಿವರ್ತನೆ ವೃತ್ತಿ ಪರಿಕರಗಳ ಮುಖ್ಯ ಗುಣಸ್ವಭಾವವಾಗಿದೆ.

ಮೌನೇಶ್ವರರ ವಚನವೊಂದರಲ್ಲಿ ಇದರ ಸ್ಪಷ್ಟತೆಯನ್ನು ಕಾಣಬಹುದು. 'ಏಳೇಳು ಲೋಕದ ದೇವತೆಗಳು ಉಳಿಯಿಂದಲಾದಾರು'. 'ನಾನಾ ದೇವರು ಚಾಣಿನ ಮಕ್ಕಳು' 'ಹಲವು ಮೂರ್ತಿ ಮಾಡಿದ ಉಳಿಯೊಂದೆ ಕೊಡತಿಯೊಂದೆ ಶಿಲೆಯೆಲ್ಲವೊಂದೆ ಶಿಲ್ಪಿಯೊಂದೆ' ಎನ್ನುವಲ್ಲಿ ವೃತ್ತಿಕಾರನೊಬ್ಬನ ವೃತ್ತಿ ಬದ್ಧತೆ ಮತ್ತು ಲೋಕೋಪಕಾರದ ಮಹತ್ವ ಅರಿವಾಗುತ್ತದೆ.

ಮೌನೇಶ್ವರರಂತಹ ಪಾಂಚಾಳ ದಾರ್ಶನಿಕರಲ್ಲಿ ಪ್ರಕೃತಿ ಸತ್ಯ. ಉಳಿ, ಬಾಚಿ, ಕೊಡತಿ, ಚಾಣ, ಸುತ್ತಿಗೆ, ಇಕ್ಕಳ, ಬೊಕ್ಕಸಗೋಲು, ತಿದಿ ಇವು ದಾರ್ಶನಿಕ ಸತ್ಯವನ್ನು ಆವಿಷ್ಕರಿಸಿಕೊಳ್ಳುವ ಮಾಧ್ಯಮಗಳು. ಪರಿಕರಗಳ ಸೃಷ್ಟಿಕರ್ತರೂ ಅವರೇ. ದೇವರ ಸೃಷ್ಟಿ ಕರ್ತೃರು ಅವರೇ. ಒಂದು ರೀತಿಯಲ್ಲಿ ಮೌನೇಶ್ವರರು ತಾವೇ ಪರಂಜ್ಯೋತಿಯಾಗುತ್ತಾರೆ. ತೇಜೋಮೂರ್ತಿಯಾಗುತ್ತಾರೆ. ನಂತರ ಎಲ್ಲ ಬಾಹ್ಯ ಗುರುತುಗಳನ್ನು ವಿಸರ್ಜಿಸಿ ಬಿಡುತ್ತಾರೆ. ಅಂದರೆ ಸಂಕೇತಗಳನ್ನೇ ಆಸ್ಫೋಟಿಸಿ ಬಿಡುತ್ತಾರೆ. ರೂಪವೇ ಸ್ವರೂಪವಾಗಿ ಬಿಡುವ ಸ್ಫೋಟಕತೆ ಮೌನೇಶ್ವರರದು. ಅಲ್ಲಮನಲ್ಲಿ ಕಾಣುವ ಇಂಥ ಸಂಕೇತಗಳ ಅಸ್ಫೋಟಕತೆಯನ್ನು ಕೊಡೇಕಲ್ಲ ಬಸವಣ್ಣ

ಮತ್ತು ಮಂಟೇಸ್ವಾಮಿಯಿಂದ ಹಿಡಿದು ಮೌನೇಶ್ವರರು ಹಾಗೂ ನಂತರ ಬಂದ ತತ್ತ್ವಪದಕಾರರಲ್ಲಿಯೂ ಕಾಣಬಹುದು. ಸ್ವತಃ ತೇಜೋಮೂರ್ತಿಯಾಗುವುದು ವಿಶ್ವಕರ್ಮ ಸಿದ್ಧಾಂತದ ಮೂಲಸತ್ವ.

ಕರಗಿ ಮಾಡಲಿಬಲ್ಲ ಒರೆದು ನೋಡಲಿಬಲ್ಲ

ಕರಗಿ ಮಾಡಲಿಬಲ್ಲ ಒರೆದು ನೋಡಲಿಬಲ್ಲ
ಪರಿ ಪರಿಯ ವಸ್ತು ದೇವರಾಭರಣವ
ಜಡಿದು ಮಾಡುವ ಗುಣಮಣಿ ಚಿಂತಾಮಣಿ
ಧರೆಗಿಳಿದ ಚೆನ್ನಬಸವಣ್ಣ, ಬಸವಣ್ಣ(೧೪)

ಕರಗಿ ಮಾಡುವ, ಒರೆದು ನೋಡುವ ಕ್ರಿಯೆ ಬಹುಶಃ ವಿಶ್ವಕರ್ಮ ತಾತ್ತ್ವಿಕತೆಯ ವಿಶೇಷತೆಯಾಗಿದೆ. ಏಕೆಂದರೆ ಕರಗುವ ಅಥವಾ ರೂಪಗೊಳ್ಳುವ ನೆಲೆ ಮುಗಿದ ಮೇಲೆ ಅಂತಹ ವಸ್ತುವಿಗೆ ನಾಶವೇ ಅಂತಿಮವಾಗುವುದು ಬೇರೆ ತಾತ್ತ್ವಿಕತೆಗಳ ಲಕ್ಷಣ. ಆದರೆ ವಿಶ್ವಕರ್ಮ ತತ್ತ್ವದಲ್ಲಿ ಅಳಿವೆಂಬುದಿಲ್ಲ ಅಳಿದುಳಿದುದರಲ್ಲಿಯೂ ಆಕೃತಿ ಹುಟ್ಟಿಸುವ ರಚನಾತ್ಮಕ ತತ್ತ್ವವದು.

ಇದನ್ನು ಮೌನೇಶ್ವರರ ತಾತ್ತ್ವಿಕತೆಯಲ್ಲಿಯೇ ಹೇಳುವುದಾದರೆ ಭಾಷಿಕ ಗುರುತುಗಳಂತೆ ಧಾರ್ಮಿಕ ಗುರುತುಗಳು ಹಾಗೂ ವೃತ್ತಿಪರಿಕರಗಳು ಸ್ಥಾಪನೆಗೊಂಡು ಸಂಸ್ಥೆಯಾಗುವ ಅಥವಾ ಜಡವಾಗುವ ಬಗೆಗೆ ತೀವ್ರ ಆತಂಕವಿದೆ. ಕುರುಹು ಅಥವಾ ರೂಪ ಸ್ಥಿರವಾಗದಂತೆ ಜಡವಾಗದಂತೆ ಅವುಗಳನ್ನು ರೂಪಗಳಿಂದ ನಿರೂಪಗಳತ್ತ ತಳ್ಳಿಬಿಡುತ್ತದೆ. ನಂತರ ಸ್ವರೂಪದಲ್ಲಿ, ಕರಗಿಸಿ ಬಿಡುತ್ತಾನೆ. ಅದು ಲಿಂಗ, ಜಾತಿ, ಮತ, ಧರ್ಮ, ವ್ಯಕ್ತಿ, ಲೋಹ, ಮರ, ಯಾವ ಬಗೆಯ ರಚನೆಯಾದರೂ ಆಗಬಹುದು. ಅದನ್ನು ಕರಗಿಸುವ, ರೂಪಿಸುವ, ಒರೆಗಚ್ಚಿ ಪರೀಕ್ಷಿಸುವ ನಂತರ ಆಭರಣ ಅಥವಾ ಆಯುಧವಾಗಿಸುವ ಮತ್ತೆ ಕರಗಿಸುವ, ಮಿಶ್ರಣ ಮಾಡುವ ಮೂಲಕ ಜಾತಿ ಮತದ ಸೂತಕದ ಸೋಂಕಿನಿಂದ ಹೊರತರುತ್ತಾರೆ. ಅಂದರೆ ಅದರ ಪೂರ್ವ ವಾಸನೆಯಿಂದ ಪಾರುಗಾಣಿಸುತ್ತಾರೆ.

ಕರಗುವ ಲೋಹಕ್ಕೆ ತಮ್ಮ ಹಿಂದಿನ ಸಂಸ್ಕಾರಗಳ ಯಾವ ರೂಪವೂ ಇರುವುದಿಲ್ಲ ಹಾಗೂ ಸೂತಕವೂ ಇರುವುದಿಲ್ಲ. ಯಾವುದೇ ಲೋಹಗಳು(ಚಿನ್ನ, ಬೆಳ್ಳಿ, ಬಂಗಾರ, ಕಬ್ಬಿಣ) ಕರಗಿದಷ್ಟು ಅದು ಅಪರಂಜಿಯಾಗುತ್ತದೆ. ಬದಲಿ ರೂಪ ತಾಳುತ್ತದೆ. ಅಂದರೆ 'ರಚನೆ', 'ಮೂಲ', 'ಶುದ್ಧ', 'ಶಾಶ್ವತ' ಎನ್ನುವ ಅಮರತ್ವದ ಕಲ್ಪನೆ ಇಲ್ಲಿ ಇಲ್ಲ. ಮುರಿದು ಕಟ್ಟುವ ಕ್ರಿಯೆಯೇ ಮೌನೇಶ್ವರರ ಮುಖ್ಯ ತಾತ್ತ್ವಿಕ ನೆಲೆಗಟ್ಟು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಸಮಾಜ ಮತ್ತು ಅದರ ಆಲೋಚನೆಗಳನ್ನು ನಿಂತ ನೀರಾಗದಂತೆ, ಕ್ರಿಯಾಶೂನ್ಯತೆಗೆ ತಲುಪದಂತೆ ನೋಡಿಕೊಳ್ಳುವ ವಿಶೇಷ ಗುಣವಿದು.

ಕರಗುವಿಕೆಗೂ ರಸವಿದ್ಯೆಗೂ ಹತ್ತಿರ ಸಂಬಂಧವಿದೆ. ನಾಥಸಿದ್ಧರು, ನಾಗಾರ್ಜುನ ನಂತಹ ಸಾಧಕರು ರಸವಿದ್ಯೆಯಲ್ಲಿ ಸಿದ್ಧಹಸ್ತರು. ಚಿನ್ನ ಹಾಗೂ ಲೋಹಗಳನ್ನು ತಯಾರಿಸುವಲ್ಲಿ ಪ್ರವೀಣರು. ಅಷ್ಟೇ ಅಲ್ಲ ಯಂತ್ರ, ಮಂತ್ರ, ರಸವಿದ್ಯೆಗಳಲ್ಲಿ ಪಾಂಚಾಳರ ಸಾಧನೆ ಬಲು ದೊಡ್ಡದು. ಸಕಲ ವಿದ್ಯಾ ಕುಶಲರೂ ಹಾಗೂ ಯಂತ್ರವಿದ್ಯಾ ಸಾಧಕರೆಂದು ಕರೆಸಿಕೊಳ್ಳುವ ವಿಶ್ವಕರ್ಮರು ಅಗ್ನಿ, ಜಲ, ವಾಯು, ಆಕಾಶ ಸಂಬಂಧಿಯಾದ ಹಲವಾರು ಯಂತ್ರಗಳನ್ನು ಶೋಧಿಸಿ ಸಾಧಿಸಿಕೊಂಡವರು. ಅಲ್ಲದೆ ಕದಳೀಗರ್ಭವಿದ್ಯಾ ಪರ್ಣಲಘುವಿದ್ಯಾ ಎನ್ನುವ ಕಲ್ಲು ಕಬ್ಬಿಣ ಮತ್ತು ಕಟ್ಟಿಗೆಯಂತಹ ಘನವಸ್ತುಗಳನ್ನು ಮೃದು ಮಾಡುವ, ಕರಗಿಸುವ ಮತ್ತು ತಕ್ಕ ಅಳತೆಗೆ ಸೀಳುವ, ಭಾರವಾದ ವಸ್ತುಗಳನ್ನು ಹಗುರವಾಗಿ ಎತ್ತುವ(ಪರ್ಣಲಘುವಿದ್ಯಾ) ವಿಶೇಷ ವಿದ್ಯೆಗಳನ್ನು ಸಿದ್ಧಿಸಿಕೊಂಡವರು. ಇದಕ್ಕೆ ಮುಖ್ಯ ಕಾರಣವೇ ಅಗ್ನಿತತ್ತ್ವವಾಗಿದೆ.

ಅಗ್ನಿತತ್ತ್ವ

'ಏಳೇಳು ಜನ್ಮದಲಿ ಕಾಳಿಯ ಮಗ ನಾನು' ಎಂದು ಮೌನೇಶ್ವರರು ಹೇಳುತ್ತಾರೆ. ಕಾಳಿ ವಿಶ್ವಕರ್ಮ ಕುಲದ ಕರ್ತೃತ್ವ ಶಕ್ತಿ. ಅವಳು ಬೆಂಕಿ(ಕುಲುಮೆ) ಮತ್ತು ಬೆಳಕಿನ(ಸತ್ಯ) ಪ್ರತೀಕ. ಸೃಷ್ಟಿಯ ಸಂಕೇತವಾದ ಕುಲುಮೆ(ಕಾಳಿ) ಮೌನೇಶ್ವರರಲ್ಲಿ ಸಚರಾಚರಗಳ ಸೃಷ್ಟಿಗೂ ಮೂಲ. ವಿಶ್ವಕರ್ಮ ತಾತ್ತ್ವಿಕತೆಯಲ್ಲಿ ಅಗ್ನಿ ಮತ್ತು ಜಲ ಇವು ಶಕ್ತಿಯ ವಿಶಿಷ್ಟ ಪ್ರತೀಕಗಳು.

ವಿಶ್ವದ ಮೂಲದಲ್ಲಿರುವ ವಿಶಿಷ್ಟ ಶಕ್ತಿಯೇ ಅಗ್ನಿ. ಇದನ್ನೇ ಇಚ್ಛಾಶಕ್ತಿ ಎಂದು ಹೇಳಲಾಗುತ್ತದೆ. ಸೂಕ್ಷ್ಮರೂಪನಾದ ವಿಶ್ವಕರ್ಮನು ಯಜ್ಞದ ಮೂಲಕ ಸ್ಥೂಲರೂಪವನ್ನು ಪಡೆಯುವುದೇ ಸೃಷ್ಟಿ. ಸಮಿತ್ತು ಅಂದರೆ ಸುಡುವುದು. ಸುಡುವುದರಿಂದಲೇ ಅಗ್ನಿ ಅಂದರೆ ಶಕ್ತಿ ಪ್ರತ್ಯಕ್ಷವಾಗುತ್ತದೆ. ಅಗ್ನಿಯು ಮನ, ಪ್ರಾಣ ಮತ್ತು ವಾಕ್‌ನ ಸಂಕಲಿತರೂಪ. ಮನವು ಪ್ರಾಣವಿಷ್ಟವಾಗುವುದು ಅದೇ ಕ್ರಿಯೆಯಲ್ಲಿ ವಾಕ್‌ನೊಂದಿಗೆ ನಡೆಯುವುದು ಒಂದು ಮತ್ತೊಂದಾಗಿ ಪರಿವರ್ತಿತವಾಗುವುದು. ಈ ಅರ್ಥದಲ್ಲಿಯೇ ವಿಶ್ವಶಿಲ್ಪಿಯಾದ ವಿಶ್ವಕರ್ಮನನ್ನು ಅಗ್ನಿಯೆಂದು ಕರೆಯಲಾಗಿದೆ. 'ಕುಲುಮಿ ಹುಟ್ಟದ ಮುನ್ನ ಕುಲ ಛಲವೆಲ್ಲಿತ್ತು ಎನ್ನುವಲ್ಲಿ ಅಗ್ನಿಗೆ ಇರುವ ಮಹತ್ವವನ್ನು ಕಾಣಬಹುದು.

ಅಗ್ನಿ ಪಾಂಚಾಳರಲ್ಲಿ ಕೇವಲ ಬೆಂಕಿ ಮಾತ್ರ ಅಲ್ಲ. ಲೋಹ ಉತ್ಪಾದನೆ ಹಾಗೂ ವಿವಿಧ ರಚನೆಗಳಿಗೆ ಅದೊಂದು ದೊಡ್ಡಶಕ್ತಿ. ಮಧ್ಯಕಾಲೀನ ಕರ್ನಾಟಕದ ಆರ್ಥಿಕ ಚರಿತ್ರೆಯನ್ನು ಗಮನಿಸಿದರೆ ಕಬ್ಬಿಣ ಹಾಗೂ ವಿವಿಧ ಲೋಹಗಳ ಉತ್ಪಾದನೆಯಲ್ಲಿ ಪಾಂಚಾಳರು ತೊಡಗಿಕೊಂಡ ಕ್ರಮ ಕಣ್ಣಿಗೆ ಕಟ್ಟುತ್ತದೆ.

ಕಬ್ಬಿಣ ಹಾಗೂ ವಿವಿಧ ಲೋಹಗಳ ಉತ್ಪಾದನೆ ಮತ್ತು ವಿನಿಮಯಗಳಲ್ಲಿ ಕಂಬಾರರು ಮತ್ತು ಕಂಚುಗಾರರು ದೊಡ್ಡ ಪ್ರಮಾಣದಲ್ಲಿ ತೊಡಗಿಕೊಂಡಿದ್ದರು.

ಇದಕ್ಕೆ ಕಂಚಿ ಪುರಾಣ, ಮಂಟೇಸ್ವಾಮಿ ಕಾವ್ಯದ ಹಲುಗೂರು ಪಂಚಾಳರ ಪ್ರಸಂಗಗಳು ಉತ್ತಮ ಉದಾಹರಣೆಗಳು. ಬಳ್ಳಾರಿ ಜಿಲ್ಲೆಯ ಸಂಡೂರು ಪರಿಸರದಲ್ಲಿ ಕಾಣುವ ಮುದ್ದೆಗಂಬಾರರು ಅದಿರಿನಿಂದ ಕಬ್ಬಿಣವನ್ನು ತಯಾರಿಸುವಲ್ಲಿ ನಿಷ್ಣಾತರಾಗಿದ್ದರು. ಇಂದಿಗೂ ಹೊಸಪೇಟೆ ತಾಲೂಕಿನ ಗೊಲ್ಲರಹಳ್ಳಿಯ ಕಾಳಮ್ಮನ ಗುಡಿಯಲ್ಲಿ ಆ ಕಾಲದ ಅಡಿಗಲ್ಲು ಹಾಗೂ ಬೃಹತ್ತ್ರಮಾಣದ ಇಕ್ಕಳುಗಳಿರುವುದು ಇದಕ್ಕೆ ಉತ್ತಮ ನಿದರ್ಶನ.

ಕೆಂಪಾಚಾರಿಯನ್ನು ಸಿದ್ಧಪ್ಪಾಜಿಯನ್ನಾಗಿಸಿ ಆತನ ಮೂಲಕವೇ ಹಲಗೂರು ಪಾಂಚಾಳರನ್ನು ನಿಯಂತ್ರಿಸುವ ಮಂಟೇಸ್ವಾಮಿ ಕಬ್ಬಿಣ ಭಿಕ್ಷೆ ಕೇಳುವ ಪ್ರಸಂಗಗಳು ಪಾಂಚಾಳರ ಉತ್ಪಾದನಾ ಸಾಮರ್ಥ್ಯವನ್ನು ಕ್ಷೀಣಿಸುವ ಸಂಗತಿಗಳಾಗಿ ಕಾಣುತ್ತವೆ. ಈ ಅರ್ಥದಲ್ಲಿ ಅಗ್ನಿ ಕೇವಲ ಯಜ್ಞದ ಮೂಲವಾಗಿ ಕಾಣದೆ ವಿಶ್ವಕರ್ಮರಲ್ಲಿ ಬಹುದೊಡ್ಡ ಸೃಷ್ಟಿ ಶಕ್ತಿಯಾಗಿ ಬೆಳೆದು ಬಂದಿದೆ. ಹಾಗಾಗಿ ವಿಶ್ವಕರ್ಮರನ್ನು ನಿತ್ಯಾಗ್ನಿಹೋತ್ರಗಳು (ಅಂದರೆ ಕುಲುಮೆಯಲ್ಲಿ ಸದಾ ಬೆಂಕಿ ಇರುವುದು)ಎಂದು ಕರೆಯಲಾಗುತ್ತದೆ.

ಮೇಘವಾಹನ ಮತ್ತು ಕಶ್ಯಪ

ಮೌನೇಶ್ವರರ ವಚನಗಳಲ್ಲಿ ಪದೇ ಪದೇ ಬಳಕೆಯಾಗುವ ಎರಡು ಪದಗಳಿವು. ಮೇಘವಾಹನ ಎಂಬುದು ಶಿಲ್ಪಿಗಳಿಗೆ ಪ್ರಾಚೀನ ಕಾಲದಿಂದಲೂ ಇರುವ ಬಿರುದಾಗಿದೆ. ಕಂಚಿ ಪುರಾಣದಲ್ಲಿ(ಕ್ರಿ.ಶ.೧೫೨೦) ಬಿಜ್ಜಳರಾಯನು ಕಿನ್ನರಯ್ಯನ ವಂಶದವರಿಗೆ ಈ ಬಿರುದು ಹೇಗೆ ಬಂತೆಂದು ಕೇಳಿದಾಗ ಬಸವಣ್ಣನವರು ಉತ್ತರಿಸುವ ಪ್ರಸಂಗವೊಂದಿದೆ.

ಅಷ್ಟ ಮೇಘಗಳೆಲ್ಲ ಸುರಪನ
ಬಿಟ್ಟು ಹೋಗಿ ತ್ರಿಕೂಟಗಿರಿಯನು
ಒಟ್ಟಯಿಸಿ ಪೊಕ್ಕರಲು ಧಾಳಿಯನಿಟ್ಟು ಬಡಿತಂದು
ಸೃಷ್ಟಿಯೊಳಗೊಂದೊಂದು ಕಳುಹಿ
ವೃಷ್ಟಿಯನು ಕರೆಯಲ್ಕೆ ಇಂದ್ರ
ದೃಷ್ಟದಿಂದ ಮೇಘವಾಹನನೆಂಬ ಬಿರುದಾಯ್ತು(೧–೩೯)

ಇಂದ್ರನ ವಿರುದ್ಧ ಬಂಡಾಯವೆದ್ದ ಅಷ್ಟ ಮೇಘಗಳು ತ್ರಿಕೂಟಗಿರಿಯಲ್ಲಿ ಸೇರಿಕೊಂಡಿರಲು ಬೃಹಸ್ಪತಿ ಸೋದರನಾದ ಸಂವರ್ತಋಷಿಯು ಮೇರುಪರ್ವತವನ್ನು ಸುತ್ತುವರೆದಿದ್ದ ಮೇಘಗಳನ್ನು ತನ್ನ ಕುಂಭದಲ್ಲಿ ತುಂಬಿ ಅವು ಮಳೆಯ ರೂಪದಲ್ಲಿ ಧಾರೆಯಾಗಿ ಭೂಮಿಯ ಮೇಲೆ ಸುರಿವಂತೆ ವ್ಯವಸ್ಥೆ ಮಾಡಿದ. ಹೀಗಾಗಿ ಇಂದ್ರನು

ಸಂವರ್ತಋಷಿಯನ್ನು ಮೇಘವಾಹನನೆಂದು ಸ್ತುತಿಸಿದನು ಎಂದು ಕಂಚಿಪುರಾಣದಲ್ಲಿ ಬಸವಣ್ಣನವರು ಬಿಜ್ಜಳನಿಗೆ ಹೇಳುತ್ತಾರೆ.

'ವಿಶ್ವಕರ್ಮ ಬ್ರಾಹ್ಮಣ್ಯಕ್ಕೆ ಸೇರಿದ ವಂಶಪರಂಪರೆಯನ್ನು ವ್ಯಾಪಕಗೊಳಿಸಿರುವವರು ಇಪ್ಪತ್ತೈದು ಮಂದಿ ಸೂತ್ರಕಾರರ್ಷಿಗಳು. ಇವರು ಶಾಖಾ ಪುರುಷರು ಎಂದು ಪರಿಗಣಿತರಾಗಿರುವ ಸಾನಗ, ಸನಾತನ, ಅಹಭೂನ, ಪ್ರತ್ನ, ಸುಪರ್ಣ ಎಂಬ ಶಿಲ್ಪರ್ಷಿಗಳಿಂದ ಆವಿರ್ಭವಿಸಿ ಬಂದವರು. ಇವರಲ್ಲಿ ಸಂವರ್ತ ಶಿಲ್ಪರ್ಷಿಯು ಬಹು ಪ್ರಖ್ಯಾತನಾದವ. ಸಂವರ್ತರ್ಷಿಯು ಹದಿನೆಂಟು ಯುಗಗಳಿಗೆ ಅಧ್ಯಕ್ಷನಾಗಿದ್ದು ಮೇಘವಾಹನನಾಗಿದ್ದಾನೆ. ಈತನು ದೇವತೆಗಳ ಪಾಲಕ, ಕ್ರತು ಮತ್ತು ತತ್ಸಬಂಧ ಕಾರ್ಯಗಳಿಗೆ ಕಾರಣೀಭೂತ. ಈತನು ಯೋಗಶಕ್ತಿ ಸಮಾಯುತ ಎಂದು ದೈವಜ್ಞಸ್ಮೃತಿ ಹಾಗೂ ವಿಶ್ವಕರ್ಮಾನ್ವಯ ಪ್ರದೀಪಿಕಾ ಗ್ರಂಥಗಳಲ್ಲಿ ವಿವರಿಸಲಾಗಿದೆ. ಈ ಕಾರಣಕ್ಕಾಗಿ ಶಿಲ್ಪಬ್ರಾಹ್ಮಣರಿಗೆ ಅಂದರೆ ಪಾಂಚಾಳರಿಗೆ ಮೇಘವಾಹನ ಎಂಬ ಬಿರುದು ಸೂತ್ರಗಳ ಕಾಲದಲ್ಲಿಯೇ ಸಂದಾಯವಾಗಿದೆ'(ಡಾ.ಜಿ.ಜ್ಞಾನಾನಂದ (ಸಂ), ನಿರಂಜನ ಕವಿ ವಿರಚಿತ ಕಂಚಿಪುರಾಣ, ಪು.೪೦;೨೦೦೭).

ಶಾಂತ ನಿರಂಜನ ವಿರಚಿತ ಅಬ್ಬಲೂರು ಚರಿತೆಯಲ್ಲಿ ಚಿಕ್ಕೇಶನನ್ನು 'ಮೇಘವಾಹನ ಚಕ್ರವರ್ತಿ ಎಂದು ಕರೆಯಲಾಗಿದೆ. 'ಭಾಮುರೆ ಮೇಘವಾಹನ ಚಕ್ರವರ್ತಿಯೆ' (ಸಂಧಿ ೫, ಪದ್ಯ ೬೭, ಪು.೮೨)ಎಂದು ಸಂಬೋಧಿಸಲಾಗಿದೆ. ಚಿಕ್ಕೇಶ್ವರರು ಮೂರು ಜಾವಿಧೀಶರೆಂದು ಹೆಸರು ಪಡೆದು ವಿಶ್ವಕರ್ಮ ಕುಲಗುರುಗಳಾಗಿದ್ದವರು. ಹನ್ನೊಂದು ಜನ ವಿಶ್ವಕರ್ಮ ಪೀಠಾಧಿಪತಿಗಳಲ್ಲಿ ಚಿಕ್ಕೇಶ್ವರರು ಮೂರನೆಯವರು.

ವಿಶ್ವಕರ್ಮನು ಹಂಸವಾಹನನಾದಂತೆ ವೃಷಭವಾಹನನೂ ಹೌದು. ಮೇಘ ವಾಹನನೂ ಹೌದು. ಶಿಲ್ಪಬ್ರಹ್ಮನ ಪರ್ಯಾಯ ನಾಮದಲ್ಲಿ ಇಂದ್ರ ನಾಮವೂ ಇದೆ. ಇಂದ್ರನು ಮೇಘವಾಹನನೆಂಬ ಖ್ಯಾತಿ ಹೊಂದಿದವ. ಅದೇ ಪಂಚಾಳರಿಗೂ ಬಂದಿದೆ. ಹೀಗಾಗಿ ವಿಶ್ವಕರ್ಮ ಪರಂಪರೆಯ ಸೂತ್ರಕಾರ ಋಷಿಯಾದ ಸಂವರ್ತನಿಗೆ ಮೇಘವಾಹನನೆಂಬ ಬಿರುದುಂಟು. ಮುಂದೆ ಶಿಲ್ಪಿ ವಂಶಸ್ಥರಿಗೆಲ್ಲ ಈ ಬಿರುದು ಸಲ್ಲುತ್ತ ಬಂತು. ಅಂತೆಯೇ ವಿಶ್ವಕರ್ಮನಾಗಿದ್ದ ಕಿನ್ನರಿ ಬೊಮ್ಮಯ್ಯನಿಗೂ ಕಪಿಧ್ವಜ, ವೃಷಭಧ್ವಜ ಮೇಘವಾಹನನೆಂಬ ಬಿರುದುಗಳನ್ನು ಬಳಸಿರುವ ಉಲ್ಲೇಖಗಳು ಕಂಚಿಪುರಾಣದಲ್ಲಿ ದೊರೆಯುತ್ತದೆ.

ವಿಶ್ವಕರ್ಮ ಸಂಹಿತೆಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರಾರ್ಥನೆಯಂತೆ ಗರ್ಭವತಿಯಾದ ಅಂಜನಾದೇವಿಯ ಗರ್ಭತಾಪವನ್ನು ಶಮನಗೊಳಿಸಲು ತ್ವಷ್ಟ ವಿಶ್ವಕರ್ಮನು ಮೇಘವಾಹನನಾಗಿ ಐದು ಮುಖಗಳೊಂದಿಗೆ ಹತ್ತು ಕೈಗಳೊಂದಿಗೆ ಪ್ರತ್ಯಕ್ಷನಾಗಿ ಗರ್ಭಸ್ಥ ಶಿಶು ಹನುಮಂತನ ಕೋರಿಕೆಯಂತೆ ಚಿನ್ನದ ಉಡದಾರ,

ಯಜ್ಞೋಪವೀತ, ಕೌಪೀನ, ಕಮಂಡಲ, ಕರ್ಣಕುಂಡಲಗಳನ್ನು ನೀಡಿ ಆತನ ಸುಗಮ ಜನನಕ್ಕೆ ಕಾರಣನಾಗುತ್ತಾನೆ. ಈ ಎಲ್ಲ ವಿವರಗಳು ಮೇಘವಾಹನ ಎನ್ನುವ ಬಿರುದು ಪಾಂಚಾಳರಿಗಿದದ್ದನ್ನು ಖಚಿತಪಡಿಸುತ್ತವೆ. ಹೀಗಾಗಿ ಮೌನೇಶ್ವರರ ವಚನದಲ್ಲಿಯೂ ಇದರ ಉಲ್ಲೇಖವಿರುವುದು ಸಹಜ.

ಕಶ್ಯಪ

'ಕಶ್ಯಪ' ವಿಶ್ವಕರ್ಮ ಕುಲಗೋತ್ರಗಳ ಪ್ರವರ್ತಕನಾಗಿದ್ದಾನೆ
ಏಸೇಸು ಜನ್ಮದಲಿ ಕಶ್ಯಪನ ಮಗ ನಾನು
ವೇಶ್ಯೆಯಾ ಮಕ್ಕಳು ಜಗವೆಲ್ಲ, ನಮ್ಮನ್ನ
ಹಾಸ್ಯನಿಂದೆ ಮಾಡಿದರು ಹೊಲಿಯರು, ಬಸವಣ್ಣ(೮)

ಈ ವಚನದಲ್ಲಿ ಮೌನೇಶ್ವರರು ವಿಶ್ವಕರ್ಮ ತಾತ್ತ್ವಿಕತೆಯನ್ನು ಅದರ ನಿರಂತರತೆಯನ್ನು ಸಶಕ್ತವಾಗಿ ಹೇಳಿದ್ದಾರೆ. 'ಕಶ್ಯಪನೆಂದರೆ ವಿಶ್ವಕರ್ಮ, ವಿಶ್ವಕರ್ಮನೆಂದರೆ ಕಶ್ಯಪ'(ಬೃಹದಾರನ್ಯಕೋಪನಿಷತ್ತು ೬:೫:೩) 'ಕಶ್ಯಪನಿಗೂ ವಿಶ್ವಕರ್ಮನಿಗೂ ಅಂತರ ವಿಲ್ಲ'(ನಾಗರಖಂಡ ೪:೨೮) 'ಕಶ್ಯಪನಿಗೆ ಈರೇಳು ಲೋಕವು ಜನಿಸಿತೆಂಬುದು ಶಾಸ್ತ್ರ ಶ್ರುತಿ ವಚನಾ'(ಕಂಚಿಪುರಾಣ ೨:೨೦), ಕಶ್ಯಪನು ಕರ್ಮಹರನು (ಕಂಚಿಪುರಾಣ ೩:೨೨), ಕಶ್ಯಪನ ಪತ್ನಿಯಾದ ಮುನಿ ಎನ್ನುವವಳ ಗರ್ಭದಲ್ಲಿ ಸುಪರ್ಣನು, ದನು ಎಂಬ ಪತ್ನಿಯಲ್ಲಿ ಮಯನು ಜನಿಸಿದರು(ಮಹಾಭಾರತ ಆದಿಪರ್ವ, ೨೧೩:೫೯). ಕಶ್ಯಪನಿಗೆ ಹದಿಮೂರು ಜನ ಹೆಂಡಂದಿರು.

ಬಹಳ ಮುಖ್ಯವಾಗಿ ಕಶ್ಯಪ ಸೃಷ್ಟಿ ಎನ್ನುವುದೇ ಯೋನಿ ಜನ್ಯವಾದುದು ಮತ್ತು ಸಹಜವಾದದ್ದು. ಮೌನೇಶ್ವರರ ಹುಟ್ಟನ್ನು ಅವರ ಚರಿತ್ರೆಗಳು ಅಯೋನಿಜರನ್ನಾಗಿ ಸೃಷ್ಟಿಸಿದರೂ ಮೌನೇಶ್ವರರು ಮಾತ್ರ 'ಇಂದ್ರಿಯ ಸೂತಕದಿಂದ ಅಂದೆ ನಾನು ಜನಿಸಿದೆನು', 'ಹಾಟವೇ ತೀರ್ಥ ಕೂಟವೇ ಪ್ರಸಾದ ನಾಟಿ ಬಂದದ್ದೇ ನಿಜಲಿಂಗ' ಎನ್ನುವಲ್ಲಿ ಸೃಷ್ಟಿ ತತ್ತ್ವದ ಸಹಜತೆಯನ್ನು ಎತ್ತಿ ಹಿಡಿಯುತ್ತಾರೆ. ವಿಶ್ವಕರ್ಮ ತತ್ತ್ವ ಎನ್ನುವುದು ಅತಿಮಾನುಷವೂ ಅಲೌಕಿಕವೂ ಆದದ್ದಲ್ಲ. ಅದಕ್ಕೆ ಪ್ರಕೃತಿಯು ನಿತ್ಯ, ಸತ್ಯ ಮತ್ತು ಚೇತನಮಯವಾದದ್ದು.

'ಹರನೇ ಕಮ್ಮಾರ ವಿಷ್ಣುವೇ ಬಡಿಗ', 'ಬ್ರಹ್ಮ ವಿಷ್ಣು ರುದ್ರರು ವಿವೇಕದಿಂದಾದಾರು ಒಲೆಗುಂಡ' 'ಸೂರ್ಯ ಚಂದ್ರರ ಮಾಡಿದ ದೇವನೇ ನೀನು' ಮೇಲಿನ ವಚನದ ಸಾಲುಗಳಲ್ಲಿ ಕಾಣುವ ಬ್ರಹ್ಮ(ತ್ವಷ್ಟೃ), ವಿಷ್ಣು(ಮಯ), ಸೂರ್ಯ(ವಿಶ್ವಜ್ಞ), ಇವರೆಲ್ಲ ವಿಶ್ವಕರ್ಮನಲ್ಲಿ ನಿಹಿತವಾದವರು. ಈ ಪಂಚಶಕ್ತಿಗಳ ಸಾಕಾರಮೂರ್ತಿಯೇ ವಿಶ್ವಕರ್ಮ. ಹೀಗಾಗಿ ಮೌನೇಶ್ವರರಲ್ಲಿ ಶಿವ ಮತ್ತು ವಿಶ್ವಕರ್ಮರು ಅಭೇದರಾಗಿ ಕಾಣುತ್ತಾರೆ. ವಿಶ್ವಕರ್ಮನನ್ನು ಪಂಚಮುಖ ಮಹೇಶ್ವರನೊಂದಿಗೆ ಸಮೀಕರಿಸಿ ಶಿವನನ್ನು 'ಪಂಚ

ವಕ್ತ್ರೇಶ್ವರ'ನನ್ನಾಗಿ ರೂಪಿಸಿ, ಆತನನ್ನು ಪರಶಿವ ವಿಶ್ವಕರ್ಮನೆಂದು ವರ್ಣಿಸಲಾಗುತ್ತದೆ. ಮೌನೇಶ್ವರರ ವಚನಗಳಲ್ಲಿ ಉಲ್ಲೇಖವಾಗುವ ಪರಶಿವ, ಪರಬ್ರಹ್ಮ, ಪರಂಜ್ಯೋತಿ, ಮಲಹರಿ, ಬಾಳಾಕ್ಷ, ನಿಟಿಲನೇತ್ರ, ಶಿವಸ್ವರೂಪ ಉಲ್ಲೇಖಗಳು ಈ ಅಭಿನ್ನತೆಯನ್ನೇ ಹೇಳುತ್ತವೆ. ವಿಶ್ವಕರ್ಮನು ದೇವಾದಿ ದೇವತೆಗಳ ಸಹಾಯದಿಂದ ಈ ಸೃಷ್ಟಿಯನ್ನು ಸಲಹುತ್ತಾನೆ. ಈತನಲ್ಲಿ ನಿಹಿತರಾದ ಪಂಚಬ್ರಹ್ಮರಿಗೆ ಆದಿಶಕ್ತಿ, ಪರಾಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಎಂಬ ಪಂಚಶಕ್ತಿಗಳಿವೆ. ಪಂಚಭೂತಗಳ ಸೃಷ್ಟಿ ಎನ್ನುವುದೇ ಕಶ್ಯಪನಿಂದ ನಿಯೋಜಿತವಾದದ್ದು. ಪಾಂಚಾಳರು ಈ ಲೋಕದ ಪಂಚಭೂತಗಳಿಗೆ ಅಧಿಪತಿಯಾದ ಪಂಚಬ್ರಹ್ಮರ ಪ್ರತಿನಿಧಿಗಳು. ಹೀಗಾಗಿ ಈ ವಂಶಜರನ್ನು ಪಾಂಚಾಳರು ವಿಶ್ವಕರ್ಮರು ಎಂದು ಕರೆಯಲಾಗುತ್ತದೆ. ಇಂಥ ಸೃಷ್ಟಿಶಕ್ತಿವುಳ್ಳ ಕಶ್ಯಪನ ಕುಲದಲ್ಲಿ ಹುಟ್ಟಿದವರು ಮೌನೇಶ್ವರರು.

ವಚನಗಳ ಒಟ್ಟು ಪರಿಕಲ್ಪನೆ

ಮೌನೇಶ್ವರರ ವಚನಗಳ ಒಟ್ಟು ಆಶಯವನ್ನು ಸ್ಥೂಲವಾಗಿ ಹೇಳುವುದಾದರೆ ನೈತಿಕತೆಯ ಪುನರುತ್ಥಾನ, ಸಾಮಾಜಿಕ ಹಾಗೂ ಧಾರ್ಮಿಕ ಅಭ್ಯುದಯದ ಸಂಕಲ್ಪಗಳು ಮುಖ್ಯವಾಗಿ ಕಾಣುತ್ತವೆ. ಸಾಮಾಜಿಕ ಶೈಥಿಲ್ಯ, ರಾಜಕೀಯ ಭ್ರಷ್ಟತೆ, ಧಾರ್ಮಿಕ ವಿಡಂಬನೆ, ಆದರ್ಶಕ್ಕಿಂತ ವಾಸ್ತವಿಕ ನೆಲೆಯ ಚರ್ಚೆ ವಚನಗಳ ಮುಖ್ಯ ನೆಲೆಗಟ್ಟಾಗಿದೆ. ಸಾಂಸ್ಥಿಕ ಧರ್ಮಕ್ಕಿಂತ ವ್ಯಕ್ತಿ ಮತ್ತು ಅವನ ವಿಕಾಸಕ್ಕಾಗಿ ಅರಿವಿನ ನೆಲೆಗಳನ್ನು ಶೋಧಿಸುವ ಸಾಮುದಾಯಿಕ ಪ್ರಜ್ಞೆ ಇಲ್ಲಿ ಪ್ರಮುಖ. ಬದುಕಿನ ಸಾಂದರ್ಭಿಕತೆಯಿಂದ ತತ್ತ್ವಗಳನ್ನು ಕಟ್ಟಿಕೊಳ್ಳುವ ಮೌನೇಶ್ವರರ ಅಭಿವ್ಯಕ್ತಿ ಕ್ರಮವು ಆ ಕಾಲದ ಸಾಮುದಾಯಿಕ ಬದುಕಿನ ವಿಧಾನಗಳನ್ನು ಹಾಗೂ ವಿಘಟನೆಗಳನ್ನು ಒಳಗೊಂಡಿದೆ.

ಮೌನೇಶ್ವರರ ಆಧ್ಯಾತ್ಮಿಕ ಧೈರ್ಯಕ್ಕೆ ತಾನು ಅಲ್ಲಮ ಚೆನ್ನಬಸವನ ಅವತಾರ ಎನ್ನುವ ನಂಬಿಕೆಯೇ ಕಾರಣ. ಹೀಗಾಗಿ ಅಲ್ಲಮನ ತತ್ತ್ವಗಳಿಂದ ತನ್ನ ಅಭಿವ್ಯಕ್ತಿ ಕ್ರಮಗಳನ್ನು ಕಸಿ ಮಾಡಿಕೊಳ್ಳುವ ಗುಣ ಕಾಣುತ್ತದೆ. ಒಂದು ರೀತಿ ಮೌನೇಶ್ವರರ ವಚನಗಳಲ್ಲಿ ಮೂಲ ಶೈವದ ಸಾಮಾಜಿಕ ಕ್ರಾಂತಿಯ ಉದ್ದೀಪನ ಶಕ್ತಿಯು ಜೀವಂತವಾಗಿರುವಂತೆ ಕಾಣುತ್ತದೆ. ಇಷ್ಟಲಿಂಗದ ಬದಲಿಗೆ ಉರಿವ ಪರಂಜ್ಯೋತಿ, ಸ್ವಯಂ ಜ್ಯೋತಿ. ಮನ ಲಿಂಗದ ಕಲ್ಪನೆಯನ್ನು ವಿಸ್ತರಿಸುವ ಸಂಗತಿಗಳು ಇದನ್ನು ಖಚಿತ ಪಡಿಸುತ್ತವೆ.

ವೇದಪ್ರಮಾಣಗಳ ನಿರಾಕರಣೆಯಲ್ಲಿ ಆತ್ಮವಾದಿ ಧೋರಣೆಯ ನಿರಾಕರಣೆಯಿದೆ. ಆತ್ಮದ ಅವಿನಾಶಿ, ಅನಾದಿ, ಅನಂತ ಕಲ್ಪನೆಯ ಮೂಲಕ ರೂಪಗೊಂಡ ವರ್ಣಾಶ್ರಮ

ಧರ್ಮದ ಸಾಮಾಜಿಕ ಸಿದ್ಧಾಂತಗಳ ಜೊಳ್ಳನ್ನು ಮೌನೇಶ್ವರರು ವಿರೋಧಿಸುತ್ತಾರೆ. ಕಾರಣ ಈ ಸಿದ್ಧಾಂತವನ್ನು ಆಧರಿಸಿದ ಸೌಲಭ್ಯಗಳು ಕೆಲವೇ ಜನಕ್ಕೆ ದೊರೆಯುತ್ತಿದ್ದವು. ಯಾರು ತಮ್ಮನ್ನು ತಾವು ಶ್ರೇಷ್ಠರೆಂದು ಶ್ರಮವಿಲ್ಲದೆ ಸುಖಜೀವನ ನಡೆಸುತ್ತಿದ್ದರೋ ಅವರೇ ಧರ್ಮ ಶಾಸ್ತ್ರಗಳನ್ನು ರಚಿಸಿದರು. ಈ ಅರ್ಥದಲ್ಲಿ ಜ್ಞಾನವು ಕಾಲ ಮತ್ತು ಅನುಭವಗಳ ಶಿಶುವೆ ಹೊರತು ಅಧಿಕಾರದ ಶಿಶುವಲ್ಲ ಎನ್ನುವುದನ್ನು ಮನವರಿಕೆ ಮಾಡಲು ವೈದಿಕ ಗುರುತುಗಳನ್ನು ಮೌನೇಶ್ವರರು ಭಂಜನಗೊಳಿಸುತ್ತಾರೆ.

ಮಧ್ಯಕಾಲೀನ ಕರ್ನಾಟಕದಲ್ಲಿ ರಾಜಸತ್ತೆ ಮತ್ತು ಪುರೋಹಿತ ಸತ್ತೆಗಳು ದೇಹ ತ್ಯಾಗಕ್ಕೆ ಪ್ರಾಮುಖ್ಯತೆ ನೀಡಿ ಅದನ್ನೊಂದು ಮೌಲ್ಯವಾಗಿ ಪರಿವರ್ತಿಸಲು ಪ್ರಯತ್ನಿಸಿದ್ದವು. ದೇಹತ್ಯಾಗವೆಂದರೆ ವ್ಯಕ್ತಿಗೆ ಪ್ರಾಮುಖ್ಯ ಇಲ್ಲದಿರುವುದು. ಆದರೆ ಇಂತಹ ದೇಹತ್ಯಾಗ ಸಂಸ್ಕೃತಿಗೆ ಎದುರಾಗಿ ದೇಹ ಮತ್ತು ಅದು ಬೆಳೆಸಿಕೊಳ್ಳಬೇಕಾದ ಚೈತನ್ಯದ ಆಶಯದ ಕಡೆಗೆ ಮೌನೇಶ್ವರರಂತಹ ಮಧ್ಯಕಾಲೀನ ಸಂತ ಹಾಗೂ ಸೂಫಿಗಳ ಅಭಿವ್ಯಕ್ತಿಗಳು ಮೌಲ್ಯಾತ್ಮಕ ಚಿಂತನೆಗಳನ್ನು ರೂಪಿಸಿದವು.

'ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ' ಎನ್ನುವಲ್ಲಿ ದೇಹವನ್ನು ಅರಿವಿಗೆ ದಾರಿ ಮಾಡಿಕೊಡುವ ಮಾದರಿಯಾಗಿ ಸಜ್ಜುಗೊಳಿಸಿದರು. ವಾಂಛಲ್ಯಗಳ ಗೂಡಾದ ದೇಹವನ್ನು ನಿರಾಕರಿಸದೆ ಅದನ್ನು ಪಳಗಿಸಿ ವ್ಯಕ್ತಿಯ ಔನ್ನತ್ಯಕ್ಕೆ ಬೇಕಾದ ಸಂಕೇತವನ್ನಾಗಿ ಗ್ರಹಿಸಿದರು. ಒಡೆಯ, ಆಳು, ಮಗ, ದಾಸ ಎನ್ನುವ ನಿರಹಂಭಾವದೊಂದಿಗೆ, ವ್ಯಕ್ತಿ ತನ್ನನ್ನು ತಾನು ಅರಿಯಬೇಕೆನ್ನುವ ಸಂಗತಿಗಳು, ಊಳಿಗಮಾನ್ಯ ಮತ್ತು ಪುರೋಹಿತಶಾಹಿ ವ್ಯವಸ್ಥೆಗೆ ಕ್ರಾಂತಿಕಾರಕ ಪರ್ಯಾಯಗಳಾದವು. ಆ ಮೂಲಕ ದೇಹ, ಮನಸ್ಸು, ಕ್ರಿಯೆ, ಜ್ಞಾನ, ಮೇಲು, ಕೀಳು, ಗಂಡು, ಹೆಣ್ಣು ಎನ್ನುವ ಭೇದ ಕಲ್ಪನೆಗಳನ್ನು ನಿರಾಕರಿಸಿ ಅಖಂಡತೆಯ ಪ್ರಜ್ಞೆಯನ್ನು ಬೆಳೆಸಿದವು.

ಮೌನೇಶ್ವರ ವಚನಗಳ ದೊಡ್ಡ ಶಕ್ತಿ ಎಂದರೆ ಪ್ರಮಾಣಗಳನ್ನು ನಿರಾಕರಿಸುವುದು. ಬಂಧನಗಳಿಂದ ಬಿಡುಗಡೆ ಪಡೆಯುವುದು, ನಿರ್ವಯಲ ಸ್ಥಿತಿ ತಲುಪುವುದು. ನಿಯಂತ್ರಣಗಳಿಂದ ಹೊರಬರುವುದು. ಭಾಷೆ ಬಳಕೆಯಲ್ಲಿ ಭಾಷೆಯ ನಿಯಂತ್ರಣಕ್ಕೆ ಒಳಗಾಗದೇ ತನಗೆ ಬೇಕಾದ ಅರ್ಥ ಬರುವಂತೆ ಭಾಷೆಯನ್ನು ಕರಗಿಸಿ ಬಡಿದು ಪಳಗಿಸುತ್ತಾರೆ. ವಸ್ತು, ಮೂಲ, ಶುದ್ಧ, ಶಬ್ದಾರ್ಥದ ಕಲ್ಪನೆ, ವಾಕ್ಯ ರಚನೆ, ಇವು ಪೂರ್ವಜನ್ಮದ ವಾಸನೆಯಂತೆ ಜಡವಾಗಬಲ್ಲವು. ಅದಕ್ಕಾಗಿಯೇ ಮೌನೇಶ್ವರರು 'ಒಂದೂ ಅಕ್ಷರದ ಗುರುತನರಿಯೆ, ಛಂದಸ್ಸು ನಿಘಂಟು ಚದುರ ಮಾತೆಲ್ಲ ನಿಮ್ಮ ಕಂದನ ತೊದಲ್ನುಡಿ...' ಎನ್ನುವಲ್ಲಿ ಭಾಷೆಯ ಮೂಲ ನಿಯಮಗಳನ್ನೇ ಮೀರಿ ನಿಲ್ಲುತ್ತಾರೆ. ಅಂದರೆ ನಿಯಮಗಳ ಜಡತೆಯಿಂದ ಬಿಡಿಸಿಕೊಳ್ಳುತ್ತಾರೆ.

ಚಿನ್ನ ಅಥವಾ ಇತರೆ ಲೋಹಗಳು ಬರೀ ಲೋಹವಾಗಿದ್ದಾಗ ಅವು ಬಂಧನದ ಅಥವಾ ವಸ್ತುವಿನ ಮತ್ತೊಂದು ಜಡರೂಪಗಳೇ ಹೊರತು ಚೇತನಗಳಲ್ಲ. ಲೋಹ ದ್ರವವಾಗುವುದು ನುಡಿ ನಡೆಗೆಡುವುದು ಅದೊಂದು ಸಹಜಕ್ರಿಯೆ. ಹೀಗಾಗಿ ಸರಳ ಮತ್ತು ಆಡುಭಾಷಾ ಪ್ರಯೋಗಗಳನ್ನು ಬಳಸಿಕೊಳ್ಳುತ್ತಾರೆ. ಅಸಾಹಿತ್ಯಕ ಎನ್ನುವ ಎಷ್ಟೋ ಪದಗಳು ಪ್ರಯೋಗವಾಗುತ್ತವೆ. ಉದಾ: ಬೆಂಗುಡಿಗಿಕ್ಕು, ಅಳಿಗಾಲ, ವಾಳಿ, ದಂಟು, ಪುಚ್ಚೆ, ಎಳೆಹೂಟಿ, ತಾಕುತೈತೆ, ಮಲಕಿನ ಮಾತು, ಹೊಯ್ಮಾಲಿ, ಗೊಡವಿ ಇತ್ಯಾದಿಯಾಗಿ ಜೀವಂತ ಭಾಷಿಕ ರೂಪಗಳನ್ನು ಮೌನೇಶ್ವರರು ದುಡಿಸಿ ಕೊಳ್ಳುತ್ತಾರೆ.

ತಾತ್ತ್ವಿಕತೆಯೊಂದರ ವ್ಯವಸ್ಥಿತ ಪ್ರತಿಪಾದನೆ ಮೌನೇಶ್ವರರಲ್ಲಿ ಕಾಣುವುದಿಲ್ಲ. ಆದರೆ ಅವುಗಳನ್ನು ಪೋಣಿಸಬಲ್ಲ ಸಂಬಂಧದ ಸೂತ್ರವನ್ನು ಗುರುತಿಸಬಹುದು. ಹಾಗಂತ ಅದನ್ನು ಶಾಶ್ವತ ಸಂಬಂಧವನ್ನಾಗಿಸಲು ಮೌನೇಶ್ವರರು ಬಿಡುವುದಿಲ್ಲ. ಕಟ್ಟುತ್ತಿದ್ದಂತೇ ಒಡೆಯುವ, ಕರಗುತ್ತಿದ್ದಂತೆ ಹಣಿಯುವ ಪ್ರವೃತ್ತಿ ಅವರದು. ಒಂದು ರೀತಿ ನೀರ ಮೇಲಿನ ಬರಹವದು. ತಾತ್ತ್ವಿಕ ಸಂಘರ್ಷಗಳನ್ನು ನಿಭಾಯಿಸಬಲ್ಲ ಸ್ವತಂತ್ರ ಪ್ರಜ್ಞೆ ಮೌನೇಶ್ವರರದು.

ಅನೇಕ ತಾತ್ವಿಕ ಹಾಗೂ ಲೋಕ ವಿವರಗಳ ಮೂಲಕ ಬದುಕಿನ ಪ್ರಾಮಾಣಿಕ ಅನ್ವೇಷಣೆ ಮಾಡುತ್ತಾರೆ. ಅದು ತನ್ನ ತಾನರಿವ ನೆಲೆಯಾಗಬಹುದು, ಜೀವನ ಧರ್ಮ ಬೋಧೆಯಾಗಬಹುದು, ಆಚಾರ ವಿಚಾರಕ್ಕೆ ಸಂಬಂಧಿಸಿದ ಸಂಗತಿಯಾಗ ಬಹುದು. ಕುಲ, ಜಾತಿ, ಲಿಂಗ, ಸನ್ಯಾಸ, ಕಾಲಜ್ಞಾನ ಇತ್ಯಾದಿ ಎಲ್ಲ ಸಂಗತಿಗಳನ್ನು ನಿಸರ್ಗ ಮತ್ತು ಮನುಷ್ಯ ಬದುಕನ್ನು ಅರಿತುಕೊಳ್ಳುವ ಮಾಧ್ಯಮವನ್ನಾಗಿ ಮೌನೇಶ್ವರರು ದುಡಿಸುತ್ತಾರೆ.

ಒಟ್ಟಿನಲ್ಲಿ ಹೇಳುವುದಾದರೆ ಜನ್ಮಜಾತವಾಗಿ ಬಂದಿವೆ ಎಂದು ನಂಬಿಸುವ ಮೌಢ್ಯದ ಕೇಡುಗಳನ್ನು ಶ್ರಮರಹಿತ ನೆಲೆಗಳನ್ನು ನಿರಾಕರಿಸಿ ನಮ್ಮನ್ನು ನಾವು ಕಟ್ಟಿಕೊಳ್ಳುವ, ಓದಿಕೊಳ್ಳುವ ಹಲವು ದಾರಿಗಳನ್ನು ಇಲ್ಲಿನ ವಚನಗಳು ತೆರೆದು ತೋರಿಸಿವೆ. ಪುರುಷ ಪ್ರಯತ್ನವೇ ಲೋಕಪೂಜ್ಯವಾಗಬೇಕೆನ್ನುವ ದೃಢ ನಿಲುವು ಮೌನೇಶ್ವರರದು.

***

ಮೌನೇಶ್ವರ ವಚನಗಳ ಸಂಪಾದನ ಚರಿತ್ರೆ

ಸದ್ಯ ಲಭ್ಯವಿರುವ ಪ್ರಕಟಿತ ದಾಖಲೆಗಳ ಪ್ರಕಾರ ೧೯೧೫ ರಿಂದ ಮೌನೇಶ್ವರರ ವಚನಗಳ ಸಂಪಾದನೆ ಹಾಗೂ ಪ್ರಕಟಣ ಚರಿತ್ರೆ ಆರಂಭವಾಗುತ್ತದೆ. ಕರ್ನಾಟಕ

ಬುಕ್ ಡಿಪೋ ಬಳ್ಳಾರಿ ಇವರು ಕ್ರಿ.ಶ.೧೯೧೫ರಲ್ಲಿ 'ಶ್ರೀ ಮೌನೇಶ್ವರ ವಚನಗಳು' ಕೃತಿಯನ್ನು ಪ್ರಕಟಿಸುತ್ತಾರೆ. ಕ್ರಿ.ಶ.೧೯೫೦ರಲ್ಲಿ ದಿ.ರಾಮಣ್ಣ ಕಮ್ಮಾರ ಚಿಮ್ಮಲಿಗಿ ಇವರು 'ಶ್ರೀಮೌನೇಶ್ವರ ವಚನಗಳು' ಎನ್ನುವ ಕೃತಿ ಪ್ರಕಟಿಸುತ್ತಾರೆ. ಕ್ರಿ.ಶ.೧೯೬೯ರಲ್ಲಿ ವಿರೂಪಾಕ್ಷ ದ್ಯಾಮಣ್ಣ ಮನ್ವಾಚಾರ, ಐಹೊಳೆ ಇವರು 'ಶ್ರೀ ಮೌನೇಶ್ವರರ ಸದುಪದೇಶ ವಚನ'ಗಳು ಎನ್ನುವ ಕೃತಿ ಪ್ರಕಟಿಸಿದ್ದಾರೆ. ಕ್ರಿ.ಶ.೧೯೫೪ರಲ್ಲಿ ಕೀರ್ತನ ಕೇಸರಿ ವೇ ಕಾಳಿದಾಸಾಚಾರ್ ಮತ್ತು ವಿಶ್ವದಾಸಾಚಾರ್, ಬಸಾಪೂರ(ಚ.ಕಿತ್ತೂರು) ಇವರು 'ಶ್ರೀ ಮೌನಪ್ಪಯ್ಯನವರ ವಚನಗಳು' ಕೃತಿಯನ್ನು ಪ್ರಕಟಿಸುತ್ತಾರೆ. ಇದಲ್ಲದೆ ಶ್ರೀದೇವೇಂದ್ರಪ್ಪ ಗದಗಕರ ದಾವಣಗೆರೆ ಇವರು ೧೯೫೫ರಲ್ಲಿ 'ಶ್ರೀಮೌನೇಶ್ವರ ವಚನಶಾಸ್ತ್ರ' ಎನ್ನುವ ಕೃತಿ ಪ್ರಕಟಿಸುತ್ತಾರೆ.

ನಂತರ ೧೯೫೭ರಲ್ಲಿ ಶ್ರೀ.ಜೀವಣ್ಣ ಮಸಳಿ ಅವರು 'ಶ್ರೀ ಮೌನೇಶ್ವರ ವಚನ ಸಂಗ್ರಹ' ಕೃತಿಯನ್ನು ಸುದೀರ್ಘ ಪ್ರಸ್ತಾವನೆ ಹಾಗೂ ಪಾಠಾಂತರಗಳೊಂದಿಗೆ ಸಂಪಾದಿಸಿ ಪ್ರಕಟಿಸುತ್ತಾರೆ. ಇದು ೧೯೮೭ರಲ್ಲಿ ಮರುಮುದ್ರಣಗೊಳ್ಳುತ್ತದೆ. ಕ್ರಿ.ಶ. ೧೯೬೫ರಲ್ಲಿ ಶ್ರೀ ಸಿ.ಬಿ.ಕಡಕೋಳ ಮತ್ತು ಡಾ.ಕೆ.ಪಿ.ಈರಣ್ಣನವರು ಒಂದೇ ಹಸ್ತಪ್ರತಿ ಸಹಾಯದಿಂದ(ನ.೨೮೫೬.ಬ) 'ತಿಂತಿಣಿ ಮೌನೇಶ್ವರರ ವಚನಗಳು' ಪುಸ್ತಕವನ್ನು ಸಂಪಾದಿಸಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟಿಸುತ್ತಾರೆ. ಇದು ೧೯೬೪ರಲ್ಲಿ ಮರುಮುದ್ರಣಗೊಂಡಿದೆ.

ಮತ್ತೆ ಶ್ರೀ ಜೀವಣ್ಣ ಮಸಳಿಯವರು 'ಮೌನೇಶ್ವರ ತ್ರಿಪದಿಗಳು' ಸಂಪುಟ ೧, ೧೯೯೮ರಲ್ಲಿ ಸಂಪಾದಿಸಿ ಪ್ರಕಟಿಸುತ್ತಾರೆ. ವಿಸ್ತೃತ ಮುನ್ನುಡಿ ಕಠಿಣ ಪದಗಳ ಅರ್ಥವನ್ನು ಕೊಟ್ಟಿದ್ದಾರೆ. ಇದರಲ್ಲಿ ೧೬೯ ತ್ರಿಪದಿಗಳನ್ನು ಸೇರಿಸಲಾಗಿದೆ. ಕ್ರಿ.ಶ. ೨೦೦೪ರಲ್ಲಿ ಶ್ರೀ ಜೀವಣ್ಣ ಮಸಳಿಯವರು ಶ್ರೀ ಮೌನೇಶ್ವರ ತ್ರಿಪದಿಗಳೆಂದು ಸಂಪಾದಿಸಿ ವಿಸ್ತೃತ ಅರ್ಥಗಳೊಂದಿಗೆ ಪ್ರಕಟಿಸುತ್ತಾರೆ. ಇದರಲ್ಲಿ ಒಟ್ಟು ೮೧೬ ವಚನಗಳನ್ನು ಬೆಳಕು ಕಾಣಿಸುತ್ತಾರೆ. ಒಟ್ಟಿನಲ್ಲಿ ಕ್ರಿ.ಶ.೧೯೧೫ರಿಂದ ೨೦೦೪ರ ವರೆಗೆ ಮೌನೇಶ್ವರ ವಚನ ಸಂಗ್ರಹದ ವಿವಿಧ ರೂಪಗಳು ಪ್ರಕಟವಾಗಿವೆ. ಈ ಅರ್ಥದಲ್ಲಿ ಮೌನೇಶ್ವರರ ವಚನಗಳ ಪ್ರಕಟಣಾ ಚರಿತ್ರೆಗೆ ಒಂದು ಶತಮಾನದ ಹರವು ಇರುವುದು ವಿಶೇಷ.

ಪರಿಷ್ಕರಣ ವಿಧಾನ

ತಿಂತಿಣಿ ಮೌನೇಶ್ವರರ ಸಮಗ್ರ ವಚನಗಳ ಪರಿಷ್ಕರಣೆ ಮತ್ತು ಪ್ರಕಟಣೆ ಇದೊಂದು ಸವಾಲಿನ ಕೆಲಸವಾಗಿದೆ ಮತ್ತು ಈ ರೀತಿಯಲ್ಲಿ ಇದೊಂದು ಮೊದಲ ಪ್ರಯತ್ನವೂ ಆಗಿದೆ. ಈ ಯೋಜನೆಯಲ್ಲಿ ಪರಿಷ್ಕರಣಕ್ಕಾಗಿ ಹಲವು ಮೂಲಗಳನ್ನು ಆಶ್ರಯಿಸ ಲಾಗಿದೆ. ಪಠ್ಯ ಮತ್ತು ಪಠ್ಯದಾಚೆಯ ನೆಲೆಗಳನ್ನೂ ಬಳಸಿಕೊಳ್ಳಲಾಗಿದೆ. ಬಹಳ ಮುಖ್ಯವಾಗಿ ಸುಮಾರು ನೂರು ವರ್ಷದಿಂದ(೧೯೧೫) ಚದುರಿದಂತೆ ಪ್ರಕಟವಾಗಿದ್ದ ಮೌನೇಶ್ವರರ ವಚನಗಳನ್ನು ಒಂದೆಡೆ ಸಂಕಲಿಸುವುದು ಇಲ್ಲಿನ ಉದ್ದೇಶವಾಗಿದೆ.

ಶ್ರೀ ಜೀವಣ್ಣ ಮಸಳಿಯವರು ಸಂಪಾದಿಸಿ ಪ್ರಕಟಿಸಿದ ಶ್ರೀ ಮೌನೇಶ್ವರರ ವಚನ ಸಂಗ್ರಹ(೧೯೮೭, ದ್ವಿಮು) ಶ್ರೀ ಸಿ.ಬಿ.ಕಡಕೋಳ ಮತ್ತು ಡಾ.ಕೆ.ಪಿ.ಈರಣ್ಣ ಇವರು ಸಂಪಾದಿಸಿ ಪ್ರಕಟಿಸಿದ ತಿಂಥಿಣಿ ಮೌನೇಶ್ವರರ ವಚನಗಳು(೧೯೮೫) ಕೃತಿಗಳನ್ನು ಪ್ರಧಾನವಾಗಿಟ್ಟುಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಶ್ರೀ ಮಸಳಿಯವರು ಸಂಪಾದಿಸಿದ ಮೌನೇಶ್ವರ ವಚನ ಸಂಗ್ರಹದ ವಚನಗಳನ್ನು ಪರಿಷ್ಕರಣೆಗೆ ಒಳಪಡಿಸ ಲಾಯಿತು. ಇದಕ್ಕೆ 'ಅ' ಪ್ರತಿಯೆಂದು ಸಂಕೇತ ಕೊಟ್ಟುಕೊಳ್ಳಲಾಗಿದೆ. ಎರಡನೆಯ ಹಂತದಲ್ಲಿ ಶ್ರೀ ಸಿ.ಬಿ.ಕಡಕೋಳ ಮತ್ತು ಡಾ.ಕೆ.ಪಿ.ಈರಣ್ಣನವರ ಪ್ರತಿಯ ಮೂಲಕ ಮಸಳಿಯವರ ಸಂಪಾದನೆಯಲ್ಲಿ ಇಲ್ಲದ ಕೆಲ ವಚನಗಳನ್ನು ಮತ್ತು ಪಾಠಾಂತರದ ಸಮಸ್ಯೆಗಳನ್ನು ಗುರುತಿಸಿಕೊಳ್ಳಲಾಗಿದೆ. ಇದಕ್ಕೆ 'ಬ' ಪ್ರತಿ ಎಂದು ಸಂಕೇತ ನೀಡ ಲಾಯಿತು. ಮೂರನೆ ಹಂತದಲ್ಲಿ ಈ ಎರಡೂ(ಅ ಮತ್ತು ಬ) ಪ್ರತಿಗಳಲ್ಲಿ ಕಂಡ ಕೆಲವು ಶಾಬ್ದಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮುದ್ರಿತವಾದ ಹಾಗೂ ಅಪೂರ್ಣ ವಿರುವ ಪ್ರತಿ ಒಂದನ್ನು ಬಳಸಿಕೊಳ್ಳಲಾಯಿತು. ಇದನ್ನು 'ಕ' ಪ್ರತಿಯೆಂದು ಸಂಕೇತಿಸ ಲಾಗಿದೆ. ಇದರ ಹಿಂದು ಮುಂದಿನ ಪುಟಗಳು ಕಿತ್ತು ಹೋಗಿವೆ. ಇದೂ ಅಲ್ಲದೆ ಜೀವಣ್ಣ ಮಸಳಿ ಅವರ ಮೌನೇಶ್ವರ ತ್ರಿಪದಿಗಳು(೨೦೦೪) ಪುಸ್ತಕವನ್ನು ಬಳಸಿ ಕೊಂಡಿದ್ದು ಅದಕ್ಕೆ 'ಡ' ಎಂದು ಸಂಕೇತಿಸಲಾಗಿದೆ.

ಮೌನೇಶ್ವರರ ವಚನಗಳು ತೋಂಡಿ ಸಂಪ್ರದಾಯದಲ್ಲಿರುವ ಕಾರಣದಿಂದ ಪದ ಸಂದಿಗ್ಧತೆಗಳನ್ನು ಬಗೆಹರಿಸಿಕೊಳ್ಳಲು ಅರ್ಥಸ್ಪಷ್ಟತೆಗಾಗಿ ಮೌನೇಶ್ವರರ ಕುರಿತು ಬಂದ ಸಂಗ್ರಹಗಳನ್ನು ಅಧ್ಯಯನಗಳನ್ನು ಬಳಸಿಕೊಳ್ಳಲಾಗಿದೆ. ಇದರಲ್ಲಿ ಪ್ರಮುಖ ವಾಗಿ ವೇ. ಕಾಳಿದಾಸಾಚಾರ್ ಮತ್ತು ವಿಶ್ವದಾಸಾಚಾರ್ ಅವರ ಮೌನಪ್ಪಯ್ಯನವರ ವಚನಗಳು(೧೯೫೪), ಪಾ.ವೆಂ.ಅರಕೇರಿಯವರ ಶ್ರೀ ಮೌನೇಶ್ವರರು, ಡಾ.ವಿರೂಪಾಕ್ಷ ಬಡಿಗೇರ ಅವರ ಶ್ರೀ ಮೌನೇಶ್ವರ ವಚನ ಸಮೀಕ್ಷೆ ಸಂಪುಟ ೧(೧೯೮೦) ಶ್ರೀ ವಿ.ಜಿ.ದೀಕ್ಷಿತ ಅವರ ಶ್ರೀ ಮೌನೇಶ್ವರ ವಚನ ಪ್ರಭೆ (೨೦೦೧) ಪಾಂಚಾಲಗೀತಾ ವೈಭವ ಮುಂತಾದ ಪುಸ್ತಕಗಳ ನೆರವು ಪಡೆದಿದ್ದೇನೆ. ಇಷ್ಟೇ ಅಲ್ಲದೆ ಕೋಳೂರು ಶಂಕರ ಕವಿಯ ಶರಣ ಮೋನಪ್ಪಯ್ಯನ ಚಾರಿತ್ರ್ಯ (ಸಂ.ಡಾ.ಎಫ್.ಟಿ.ಹಳ್ಳಿಕೇರಿ, ೨೦೦೭) ಚಿನ್ನದ ಗುಡಿ ಬೋಳಮಲ್ಲನ ಮೌನೇಶ್ವರ ಬಾಲಲೀಲೆ(ಸಂ.ಸಿ.ಬಿ.ಕಡಕೋಳ, ಕೆ.ಪಿ.ಈರಣ್ಣ ೧೯೮೯). ಹಾಗೆ ಪೂಜ್ಯ ದೇವೇಂದ್ರ ಸ್ವಾಮಿಗಳು ಬರೆದ ಶ್ರೀ ಮೌನೇಶ್ವರ ಪುರಾಣ(೧೯೮೮)ಗಳನ್ನು ಪೂರಕ ಆಕರವಾಗಿ ಬಳಸಿಕೊಳ್ಳಲಾಗಿದೆ.

ಮೌನೇಶ್ವರ ವಚನಗಳು ತೋಂಡಿ ಸಂಪ್ರದಾಯಕ್ಕೆ ಸೇರಿರುವ ಕಾರಣ ಪ್ರತಿ ಯೊಂದು ಪ್ರಕಟಿತ ಪುಸ್ತಕದಲ್ಲಿಯೂ ಅವುಗಳ ಲಿಪಿ ಹಾಗೂ ಅರ್ಥಸ್ವರೂಪದಲ್ಲಿ ಸಾಕಷ್ಟು ಭಿನ್ನತೆ ಕಾಣುತ್ತದೆ. ಹೀಗಾಗಿ ಶಾಸ್ತ್ರೀಯ ಸಂಪಾದನೆಗಿಂತ ಸುಗಮ ಸಂವಹನ

ಸಾಧ್ಯವಾಗುವಂತೆ ಕಾಗುಣಿತದ ಸಮಸ್ಯೆಗಳನ್ನು ಔಚಿತ್ಯ ಮೀರದಂತೆ ಇಲ್ಲಿ ಸರಿಪಡಿಸಿ ಕೊಡಲಾಗಿದೆ.

ಸಂಪಾದಕ ಮಂಡಳಿಯ ಆಶಯದಂತೆ ಎಲ್ಲ ಬಗೆಯ ಓದುಗರಿಗೂ ಇದು ನಿಲುಕಬೇಕೆಂಬ ಕಾರಣಕ್ಕಾಗಿ ಅದನ್ನು ಹೆಚ್ಚು ಶಾಸ್ತ್ರೀಯ ಗ್ರಂಥ ಸಂಪಾದನ ವಿಧಾನಕ್ಕೆ ಅಳವಡಿಸಿಲ್ಲ. ಮೌಖಿಕ ರೂಪಗಳನ್ನು ಹಠ ಮಾಡಿ ತಿದ್ದಿ ಶಾಸ್ತ್ರೀಯಗೊಳಿಸುವುದು, ಪಠ್ಯದ ಸಹಜ ಚಲನಶೀಲತೆಯನ್ನು ನಾಶ ಮಾಡಿದಂತೆ ಎನ್ನುವ ಭಾವನನ್ನದು. ಮಿಶ್ರ ಪಾಠಗಳನ್ನು ಮಾಡಿ ಒಂದು ಪಠ್ಯವನ್ನು ಕಟ್ಟಿಕೊಡುವುದಕ್ಕಿಂತ ಓದುಗರಿಗೆ ಸಂವಹನವಾಗುವಂತೆ ಸಂಪಾದನೆಯ ವಿಧಾನಗಳನ್ನು ಸೂಕ್ಷ್ಮವಾಗಿ ಸಲಾಗಿದೆ.

ದಿನಾಂಕ ೧೩-೦೩-೨೦೧೬ರಂದು ನಡೆದ ಸಂಪಾದಕ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಸದರಿ ಕರಡನ್ನು ಅನುಮೋದಿಸಲಾಯಿತು. ಈ ಸಭೆಯಲ್ಲಿ ಪದ್ಯ ೨೬೯ ಹಾಗೂ ೪೮೪ರಲ್ಲಿ ಬಳಕೆಯಾದ ಪದಗಳನ್ನು ಮೂಲದಲ್ಲಿ ಇರುವಂತೆಯೆ ಉಳಿಸಿಕೊಳ್ಳಬೇಕು ಎಂದು ನಿರ್ಣಯಿಸಲಾಯಿತು. ಜೊತೆಗೆ ತನ್ನ ನಿಗೂಢತೆಯಿಂದಾಗಿ ಅರ್ಥ ಹೊಳೆಯದೆ ತಾತ್ಪರ್ಯ ಬರೆಯಲಾರದ ಸುಮಾರು ಹತ್ತು ಪದ್ಯಗಳನ್ನು ಹಾಗೆ ಉಳಿಸಿಕೊಳ್ಳಬೇಕು, ಸಮನ್ವಯ ಸಿದ್ಧಾಂತದ ವಚನಗಳು ವಿಸ್ತಾರವಾಗಿರುವ ಕಾರಣ ಅವುಗಳಿಗೆ ತಾತ್ಪರ್ಯದ ಅಗತ್ಯವಿಲ್ಲ. ವಚನಗಳ ಒಟ್ಟು ಸಂಖ್ಯೆಯನ್ನು ಗುರುತಿಸಲು ಅನುಕೂಲವಾಗುವ ದೃಷ್ಟಿಯಿಂದ ವಚನಗಳ ಸಂಖ್ಯೆ ೧ರಿಂದ ೭೯೬ರ ವರೆಗೆ ನಿರಂತರವಾಗಿ ಉಳಿಸಿಕೊಳ್ಳಬಹುದು. ಜೀವಣ್ಣ ಮಸಳಿಯವರು ಮೌನೇಶ್ವರ ವಚನಗಳು ಬೆಳಕು ಕಾಣುವಲ್ಲಿ ಬಹಳ ಶ್ರಮವಹಿಸಿದ ಕಾರಣ 'ಮೌನೇಶ್ವರ ವಚನ ಸಂಗ್ರಹ'(೧೯೮೭)ದಲ್ಲಿ ಅಳವಡಿಸಿದ ವಿಭಾಗ ಕ್ರಮವನ್ನೆ ಈ ಸಂಪಾದನ ಕೃತಿಯಲ್ಲಿ ತಕ್ಕಮಟ್ಟಿಗೆ ಮುಂದುವರಿಸಬಹುದೆನ್ನುವ ತೀರ್ಮಾನವನ್ನು ಈ ಸಭೆಯಲ್ಲಿ ಕೈಗೊಳ್ಳಲಾಯಿತು. ಆ ಪ್ರಕಾರ ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಲಾಗಿದೆ.

ತಾತ್ಪರ್ಯದ ಸಮಸ್ಯೆ

'ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು' 'ಉರಿವ ಬೆಂಕಿಗೆ ಮೈಯೆಲ್ಲ ನಾಲಿಗೆ' ಎನ್ನುವ ಅಲ್ಲಮ ಮಾತುಗಳು ಚಲನಶೀಲ ಪಠ್ಯವೊಂದರ ವ್ಯಾಖ್ಯಾನದಂತಿವೆ. ತೋಂಡಿ ರೂಪ ಎನ್ನುವುದೇ ಮುಕ್ತವಾದುದು. ಹೀಗಾಗಿ ವಚನಗಳಿಗೆ ತಾತ್ಪರ್ಯ ಬರೆಯುವಾಗ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಅರ್ಥದಲ್ಲಿ ಇಲ್ಲಿನ ತಾತ್ಪರ್ಯಕ್ಕೊಂದು ಮಿತಿಯಿದೆ. ವಚನದ ಒಂದು ಸ್ಥೂಲ ಅರ್ಥ ಸಾಧ್ಯತೆಯನ್ನು ಮಾತ್ರ ಪ್ರತಿ ತಾತ್ಪರ್ಯ ಹೇಳುತ್ತದೆ. ಯಾಕೆಂದರೆ ಯಾವುದೇ

ಕೃತಿ ಓದುಗನ ಪಾತಳಿಯಲ್ಲಿ ತನ್ನ ಒಡಲನ್ನು ಬಿಚ್ಚಿ ಕೊಡುತ್ತಿರುತ್ತದೆ. ಹೀಗಾಗಿ ಒಂದು ಓದಿಗೆ ಒಂದು ಅರ್ಥಸ್ಫುರಿಸಿದರೆ ಇನ್ನೊಂದು ಓದಿಗೆ ಮತ್ತೊಂದು ಅರ್ಥ ಸ್ಫುರಿಸಬಹುದು. ಹೀಗಾಗಿ ಕೆಲವೊಮ್ಮೆ ಸಾಮಾನ್ಯ ಭಾಷಿಕ ವ್ಯವಹಾರಗಳಿಗೆ ಮೀರಿದಂತ ಸಂಗತಿಗಳನ್ನು ವಚನದ ಸಾಲುಗಳು ಆಸ್ಫೋಟಿಸಬಹುದು. ಆದರೆ ಸಮಸ್ಯೆ ಎಂದರೆ ಮೌನೇಶ್ವರರು ಇನ್ನೊಂದು ನಿಜವನ್ನು ಸೃಷ್ಟಿಸುವ ಭಾಷೆಯ ಸಾಮರ್ಥ್ಯವನ್ನು ಚೆಲ್ಲಾಡಿ ಬಿಡುತ್ತಾರೆ. ಅದರ ಯಾವ ಸತ್ವವನ್ನು ಉಳಿಸುವುದಿಲ್ಲ. ಭಾಷೆಯ ನಿಯಮ ಮತ್ತು ಐಚ್ಛಿಕತೆ ಎರಡೂ ಸಾಮರ್ಥ್ಯಗಳನ್ನು ಧಿಕ್ಕೆಡಿಸುವ ಅವರ ನುಡಿಶಕ್ತಿ ಟೀಕು, ವ್ಯಾಖ್ಯಾನ ಅಥವಾ ತಾತ್ಪರ್ಯಗಳ ಗಾಣಕ್ಕೆ ಸಿಕ್ಕುವುದಿಲ್ಲ.

ಪ್ರತಿಯೊಂದು ವಚನಕ್ಕೂ ಒಂದು ಆರಂಭ ಮತ್ತು ನಿಲುಗಡೆ ಎಂಬುದಿಲ್ಲ. ಒಂದೊಂದು ಸಾಲು ಒಂದೊಂದು ಸಲ ಒಂದೊಂದು ಸಂಗತಿಗಳನ್ನು ಹೇಳುತ್ತವೆ. ಹೀಗಾಗಿ ಒಂದು ವಚನವನ್ನು ಓದಿದಾಗ ಅದೊಂದು ಪೂರ್ಣ ಸಂವಹನವೆಂದೆನಿಸದೆ ಇರಬಹುದು. ಸಂಗತಿಗಳನ್ನು ಮನಗಾಣಿಸದೇ ಇರಬಹುದು. ಕಾರಣ ಸಂಗತಿಗಳ ವ್ಯವಸ್ಥಿತ ಪ್ರತಿಪಾದನೆ ಅಲ್ಲಿ ಕಾಣುವುದಿಲ್ಲ. ಆದರೆ ಅವುಗಳನ್ನು ಹೊಸೆದು ಹುರಿಗಟ್ಟಿಸಿಕೊಳ್ಳಬಹುದಾದ ಎಳೆಗಳನ್ನು ಕಾಣಬಹುದು. ವಿಚಿತ್ರವೆಂದರೆ ಮೌನೇಶ್ವರರ ವಚನಗಳ ಸ್ವರೂಪವೇ ಕಟ್ಟುವ, ಕೆಡುವ, ಕರಗುವ, ಹಣಿಯುವ ಧೋರಣೆಯದ್ದು. ಆಕೃತಿಗೆ ಅಲ್ಲಿ ಅವಕಾಶವಿಲ್ಲ. ವಚನಗಳು ಸಂವಾದ ಮತ್ತು ಬೋಧನೆಗಳ ರೂಪದಲ್ಲಿ ಕಂಡರೂ ಅವು ಉಳಿಯಲೆಂದು ಕಟ್ಟಿದವುಗಳಲ್ಲ, ಉದ್ದೇಶಿತ ಕವಿತ್ವ ಸಾಧನೆಯ ಫಲಿತಗಳಲ್ಲ. ಆದರೆ ಮಹತ್ವದ ಸಾಂಸ್ಕೃತಿಕ ಸಂದರ್ಭದ ಅರಿವು ಮೌನೇಶ್ವರರಿಗಿದೆ ಎನ್ನುವ ಸ್ಪಷ್ಟ ಕಾಳಜಿಯನ್ನು ಅರುಹುತ್ತವೆ.

***

ಕೃತಜ್ಞತೆ

ಮೌನೇಶ್ವರ ವಚನಗಳ ಸಂಪಾದನ ಕ್ರಿಯೆಯೇ ಒಂದು ಅನಿರೀಕ್ಷಿತ ಯೋಜನೆ. ಇನ್ನು ಇದರ ಸಂಪಾದಕನ ಜವಾಬ್ದಾರಿ ಬಂದಿದ್ದಂತೂ ಇನ್ನೂ ಅನಿರೀಕ್ಷಿತ. ಈ ಯೋಜನೆಯ ಕನಸುಗಾರರೂ ವಿಶ್ವಕರ್ಮ ಸಮಾಜ ಸಂಸ್ಕೃತಿಗಳ ಬಗ್ಗೆ ಅದಮ್ಯ ಕಾಳಜಿಯುಳ್ಳ ಹಿರಿಯರಾದ ಶ್ರೀ ವೈ.ಎಮ್.ಬಡಿಗೇರವರು(ನರಗುಂದ) ದೂರವಾಣಿ ಕರೆ ಮಾಡಿ ಇದರ ಉದ್ದೇಶವನ್ನು ವಿವರಿಸಿ ಸಂಪುಟದ ಸಂಪಾದಕನಾಗಬೇಕೆಂದು ಕೇಳಿದರು. ಅದಕ್ಕೆ ಅವರು ಹಿರಿಯರೂ ನನ್ನ ಹಿತೈಷಿಗಳೂ ಆದ ಡಾ.ಚಂದ್ರಶೇಖರ ಕಂಬಾರ ಮತ್ತು ಡಾ.ಜಿ.ಜ್ಞಾನಾನಂದ ಅವರ ಶಿಫಾರಸ್ಸನ್ನು ಸೇರಿಸಿ ನೀವೇ ಸಂಪುಟದ ಸಂಪಾದಕರಾಗ ಬೇಕೆನ್ನುವುದು ನಮ್ಮೆಲ್ಲರ ಅಭಿಲಾಷೆ ಎಂದು ತಿಳಿಸಿದರು. ಆಗಲೇ

ವಿಶ್ವವಿದ್ಯಾಲಯದ ಎರಡು ಮೂರು ಯೋಜನೆಗಳನ್ನು ನಿರ್ವಹಿಸುತ್ತಿದ್ದರೂ ಹಿರಿಯರ ಪ್ರೀತಿ ಮತ್ತು ಅಭಿಮಾನಕ್ಕಾಗಿ ನಾನು ಈ ಕೆಲಸವನ್ನು ಒಪ್ಪಿಕೊಂಡೆ. ನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆತ್ಮೀಯರೂ ಆದ ಡಾ.ಬಂಜೆಗೆರೆ ಜಯಪ್ರಕಾಶ ಅವರು ದೂರವಾಣಿ ಕರೆ ಮಾಡಿ ನೀವೇ ಸಂಪುಟದ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಸೂಚಿಸಿದರು. ಸಂತೋಷದಿಂದ ತೊಡಗಿಸಿಕೊಂಡೆ.

ಈ ಯೋಜನೆಗಾಗಿ, ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ೧೧-೦೯-೨೦೧೫ರಂದು ಸಲಹಾ ಸಮಿತಿಯೊಂದನ್ನು ರಚಿಸಿ ಸಂಪುಟದ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು ಮತ್ತು ಸದರಿ ಆರ್ಥಿಕ ವರ್ಷದಲ್ಲಿಯೇ ಪೂರ್ಣಗೊಳಿಸಿ ಪ್ರಕಟಿಸಬೇಕೆಂದು ನಿಬಂಧನೆಯನ್ನು ಹಾಕಿಕೊಳ್ಳಲಾಯಿತು. ಸಮಿತಿಯಲ್ಲಿನ ಹಿರಿಯರಾದ ಡಾ.ಜಿ.ಜ್ಞಾನಾನಂದ, ಡಾ.ಶೀಲಾಕಾಂತ ಪತ್ತಾರ, ಡಾ.ವಿರೂಪಾಕ್ಷ ಬಡಿಗೇರ, ಶ್ರೀ ವೈ.ಎಮ್.ಬಡಿಗೇರ ಅವರು ಉದ್ದಕ್ಕೂ ಸೂಕ್ತ ಮಾರ್ಗದರ್ಶನ ನೀಡಿ ಸಂಪುಟ ಸಿದ್ಧಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಎರಡನೆ ಹಂತದಲ್ಲಿ ಇಡೀ ಕರ್ನಾಟಕದ ಹಿರಿಯರಿಗೆ, ಸಾಹಿತಿಗಳಿಗೆ, ಸಮಾಜದ ಮುಖಂಡರಿಗೆ ಸಂಶೋಧಕರಿಗೆ, ಮಠಾಧೀಶರಿಗೆ, ಸಮಾಜದ ಸಂಘ ಸಂಸ್ಥೆಗಳಿಗೆ ಮಠಮಾನ್ಯಗಳು, ದೇವಸ್ಥಾನದ ಪೂಜಾರಿಗಳಿಗೆ ಸುಮಾರು ೫೦೦೦ ಪತ್ರಗಳನ್ನು ೨೦೦೦ ಕರ ಪತ್ರಗಳನ್ನು ಕಳಿಸಿ ಮೌನೇಶ್ವರ ವಚನಗಳ ಕುರಿತು ಮಾಹಿತಿ ನೀಡ ಬೇಕೆಂದು ಕೋರಲಾಯಿತು. ಈ ಮಧ್ಯ ಕರ್ನಾಟಕದ ಪ್ರಮುಖ ದಿನಪತ್ರಿಕೆಗಳು, ವಾರಪತ್ರಿಕೆಗಳು, ವಿಶ್ವಕರ್ಮರು ಪ್ರಕಟಿಸುವ ಪತ್ರಿಕೆಗಳಲ್ಲಿ ಜಾಹೀರಾತು ನೀಡ ಲಾಯಿತು. ಆದರೆ ನಿರಾಶೆಯಾಯಿತು. ಕಾರಣ ಅಂತಹ ಪ್ರೋತ್ಸಾಹದಾಯಕ ಪ್ರತಿಕ್ರಿಯೆಗಳು ಬರಲಿಲ್ಲ. ಆದರೂ ನನ್ನ ಕರೆಗೆ ಓಗೊಟ್ಟು ಮಾಹಿತಿ ನೀಡಿದ ಮಹನೀಯರಿಗೂ ಜಾಹೀರಾತು ಪ್ರಕಟಿಸಿದ ಪತ್ರಿಕೆಗಳಿಗೂ ನಾನು ಋಣಿಯಾಗಿದ್ದೇನೆ.

ಈ ಮಧ್ಯ ಸಾವಿರಾರು ವಚನಗಳಿಗೆ ಸ್ವಲ್ಪೇ ಸಮಯದಲ್ಲಿ ತಾತ್ಪರ್ಯ ಬರಿಯ ಬೇಕಾದ ಸಂದಿಗ್ಧತೆಯಲ್ಲಿದ್ದಾಗ ನನ್ನ ಸಂಕಷ್ಟಕ್ಕೆ ಸ್ಪಂದಿಸಿ ಇಲ್ಲಿನ ಹಲವು ವಚನಗಳ ತಾತ್ಪರ್ಯ ಬರೆದು ಮಾರ್ಗದರ್ಶನ ಮಾಡಿದ ಹಿರಿಯರೂ ಹಂಸಭಾವಿಯ ಮಹಾಂತಸ್ವಾಮಿ ಮಹಾವಿದ್ಯಾಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರೂ ಆದ ಪ್ರೊ.ಲಿಂಗರಾಜ ಕಮ್ಮಾರ ಹಾಗೂ ಕಾನಾಹೊಸಳ್ಳಿಯ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ.ವೃಷಭೇಂದ್ರಚಾರ್ಯ ಅರ್ಕಸಾಲಿಯವರ ಪ್ರೀತಿ ಹಾಗೂ ಆಸರೆ ಬಹಳ ದೊಡ್ಡದು.

ಮೌನೇಶ್ವರರ ಕುರಿತು ಬಂದ ಹಲವು ಪ್ರಕಟಿತ ಕೃತಿಗಳನ್ನು ತಮ್ಮ ಸ್ವಂತ ಗ್ರಂಥಾಲಯದಿಂದ ಹುಡುಕಿ ತೆಗೆದುಕೊಟ್ಟು ಹೆಚ್ಚಿನ ವ್ಯಾಸಂಗಕ್ಕೆ ಹಚ್ಚಿದ ಪೂಜ್ಯ

ಶ್ರೀ ಗುರುನಾಥೇಂದ್ರಸರಸ್ವತಿ ಮಹಾಸ್ವಾಮಿಗಳು ವಿಶ್ವಕರ್ಮ ಏಕದಂಡಿಗಿ ನರಸಿಂಹ ಮಠ, ಯಾದಗಿರಿ ಅವರಿಗೂ ಹಿರಿಯರಾದ ಶ್ರೀ ಭೀಮಸೇನ ಬಡಿಗೇರ, ಶ್ರೀ ಬಂಡ್ರಾಳು ಕಾಳಪ್ಪ ಶಾಸ್ತ್ರಿಗಳು ಪ್ರೀತಿಯಿಂದ ಹುರಿದುಂಬಿಸಿದ ನಿವೃತ್ತ ವಾರ್ತಾ ಧಿಕಾರಿ ಶ್ರೀ ಸಿ.ಪಿ.ಮಾಯಾಚಾರ, ರಾಜ್ಯ ಚುನಾವಣಾ ಆಯುಕ್ತರಾದ ಶ್ರೀ ಶ್ರೀನಿವಾಸಚಾರಿ, ನಿವೃತ್ತ ಅಧಿಕಾರಿಗಳಾದ ಡಾ.ಕೆ.ಎಸ್.ಪ್ರಭಾಕರ್, ಶಿರಸಂಗಿಯ ಕಾರ್ಯಕ್ರಮಗಳಿಗೆ ಕರೆದು ವೇದಿಕೆ ಒದಗಿಸಿ ಮೌನೇಶ್ವರರ ವಚನಗಳ ಸಂಗ್ರಹದ ಪ್ರಚಾರಕ್ಕೆ ಅನುವು ಕಲ್ಪಿಸಿದ ವಿಶ್ವಕರ್ಮ ವಿಕಾಸ ಸಂಸ್ಥೆಯ ಅಧ್ಯಕ್ಷರಾದ ಪ್ರೊ.ಪಿ.ಬಿ. ಬಡಿಗೇರ ಅವರ ಸಹಾಯವನ್ನು ಮನದುಂಬಿ ಸ್ಮರಿಸುತ್ತೇನೆ.

ಈ ಯೋಜನೆಯ ರೂವಾರಿಗಳಾದ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾ ಸಭಾದ ಅಧ್ಯಕ್ಷರಾದ ಶ್ರೀ ಕೆ.ಪಿ.ನಂಜುಂಡಿ, ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಉಮೇಶ, ಅಖಿಲ ಭಾರತೀಯ ವಿಶ್ವಕರ್ಮ ಮಹಾಸಭಾದ ಜನರಲ್ ಸೆಕ್ರೆಟರಿಯಾದ ಶ್ರೀಮತಿ ಕೃಷ್ಣವೇಣಿ, ಉತ್ತರ ಕರ್ನಾಟಕದ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ಆರ್.ಬಡಿಗೇರ, ಕರ್ನಾಟಕ ರಾಜ್ಯ ವಿಶ್ವಕರ್ಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಲ್.ನಾಗರಾಜ ಆಚಾರ್, ಸಾಹಿತಿಗಳಾದ ಶ್ರೀಮತಿ ಅಂಭಾಮಣಿಮೂರ್ತಿ ಹಾಗೂ ಕೆ.ಪಿ.ಈರಣ್ಣ, ಕಾಳಿಕಾವಾಣೀ ಪತ್ರಿಕೆಯ ಸಂಪಾದಕರಾದ ಶ್ರೀ ಡಿ.ಆರ್.ಬಡಿಗೇರ, ಕಾಳಿಕಾ ಸಂದೇಶ ಪತ್ರಿಕೆ ಸಂಪಾದಕರಾದ ಜಗನ್ನಾಥ ಬಡಿಗೇರ, ವಿಧಾತೃ ಪತ್ರಿಕೆಯ ಸಂಪಾದಕರಾದ ಶ್ರೀ ಎನ್.ಸಿ.ಛಾಯಾಪತಿ ಮುಂತಾದವರ ಒತ್ತಾಸೆ ಹಾಗೂ ಸಹಕಾರಗಳು ಸ್ಮರಣೀಯ ವಾದಂಥವು.

ಈ ಯೋಜನೆಯನ್ನು ಸಮರ್ಥವಾಗಿ ಪೂರೈಸುವಲ್ಲಿ ನೆರವಾದ ನನ್ನ ಪಿಎಚ್.ಡಿ ವಿದ್ಯಾರ್ಥಿಗಳಾದ ಕುಮಾರಿ ಸಿ.ಗೀತಾ, ಗೀತಾ ಬಡಿಗೇರ, ಪ್ರಿಯದರ್ಶಿನಿ ಹಾಗೂ ವಿದ್ಯಾರ್ಥಿ ಸ್ನೇಹಿತ ಗವಿಸಿದ್ಧಪ್ಪ ಹಂದ್ರಾಳ, ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀ ಲಕ್ಷ್ಮೇಂದ್ರ ಸ್ವಾಮಿಯವರನ್ನು, ಕರಡು ತಿದ್ದುವಲ್ಲಿ ಸಹಕರಿಸಿದ ಆತ್ಮೀಯರಾದ ಡಾ.ಡಿ.ಮೀನಾಕ್ಷಿ, ಸೂಕ್ತ ಸಲಹೆಗಳನ್ನು ನೀಡಿದ ಡಾ.ಕಲವೀರ ಮನ್ವಾಚಾರ್ಯ, ಡಾ.ಗಂಗಾಧರ ದೈವಜ್ಞ, ಡಾ.ವಾಸುದೇವ ಬಡಿಗೇರ ಅವರ ನೆರವನ್ನು ನೆನೆಯದೆ ಇರಲಾರೆ. ಬೇಸರಿಸದೆ ಅಕ್ಷರ ಜೋಡಣೆ ಮಾಡಿದ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್‌ನ ಶ್ರೀಮತಿ ಬಿ.ರಶ್ಮಿ ಅವರನ್ನಲ್ಲದೆ ಈ ಯೋಜನೆಯಲ್ಲಿ ಕಂಡೂ ಕಾಣದಂತೆ ಸಹಕರಿಸಿದ ಎಲ್ಲರನ್ನು ಮನದುಂಬಿ ಸ್ಮರಿಸುತ್ತೇನೆ. ಇಂತಹ ಮಹತ್ವದ ಯೋಜನೆಯನ್ನು ಮೊದಲ ಬಾರಿಗೆ ಮೌನೇಶ್ವರ ವಚನಗಳ ಪ್ರಕಟಣೆಯ ಶತಮಾನದ ಸಂಭ್ರಮದಲ್ಲಿ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕನ್ನಡ ಪುಸ್ತಕ ಪ್ರಾಧಿಕಾರವು ರೂಪಿಸಿ ಪ್ರಕಟಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಸಮುದಾಯಗಳ ಬಗೆಗೆ ಅಪಾರ

ಕಾಳಜಿಯುಳ್ಳವರೂ ಸಂಸ್ಕೃತಿ ಚಿಂತಕರೂ ಪ್ರಾಧಿಕಾರದ ಅಧ್ಯಕ್ಷರೂ ಆದ ಡಾ.ಬಂಜೆಗೆರೆ ಜಯಪ್ರಕಾಶ ಅವರ ನೇತೃತ್ವದಲ್ಲಿ ಇಂತಹ ಮಹತ್ವದ ಕೆಲಸ ನಡೆದಿದೆ. ಅವರಿಗೂ ಪ್ರಾಧಿಕಾರದ ಆಡಳಿತಾಧಿಕಾರಿ ಹಾಗೂ ಕಚೇರಿ ಸಿಬ್ಬಂದಿಗೂ ವೈಯಕ್ತಿಕವಾಗಿ ಹಾಗೂ ಕರ್ನಾಟಕ ವಿಶ್ವಕರ್ಮ ಸಮಾಜದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಡಾ.ವೀರೇಶ ಬಡಿಗೇರ
ಸಂಪಾದಕರು

ಪರಿವಿಡಿ

೧. ತಾನಾರು ತನ್ನ ಸ್ವರೂಪವೇನು / ೧
೨. ಜೀವನಧರ್ಮ ಬೋಧೆ / ೫೬
೩. ಅರಿವು ಆಚಾರ ಅನುಭಾವ / ೧೨೦
೪. ಕುಲ ಪದ್ಧತಿ / ೧೮೬
೫. ಲಿಂಗಪ್ರಜ್ಞೆ / ೨೧೫
೬. ಸನ್ಯಾಸ / ೨೨೭
೭: ಚತುರೋಕ್ತಿ / ೨೩೮
೮. ಕಾಲಜ್ಞಾನ / ೨೬೪
೯ ಗದ್ಯಾತ್ಮಕ ವಚನಗಳು / ೩೨೬
೧೦. ಐಕ್ಯಸ್ಥಲದ ವಚನ / ೩೪೧
೧೧. ಡಂಗುರ ಪದಗಳು / ೩೫೧
೧೨. ಹುಷಾರ ವಚನಗಳು / ೩೫೩
೧೩. ಪರಾಕು ವಚನಗಳು / ೩೫೭
೧೪. ಮೌನೇಶ್ವರ ದಂಡಕ / ೩೬೧
೧೫. ಮೋನಪ್ಪನವರ ಪಾತೆ / ೩೬೩
೧೬. ಸಲಾಮ್ / ೩೬೪
೧೭. ಸುವ್ವಿ ಹಾಡು / ೩೬೬

ಅನುಬಂಧಗಳು / ೩೭೧

೧. ವಚನಗಳ ಅಕಾರಾದಿ / ೩೭೩
೨. ಸಾಂಸ್ಕೃತಿಕ ಪದಕೋಶ / ೪೦೧
೩. ಪರಾಮರ್ಶನ ಕೃತಿಗಳು / ೪೧೫

೧

ತಾನಾರು ತನ್ನ ಸ್ವರೂಪವೇನು

೧

ವಿದ್ಯೆಗೆ ಮೊದಲಾದ ಬುದ್ಧಿವಂತರ ಪಾದ
ಶುದ್ಧಾಗಿ ಶುಭದಲ್ಲಿ ನೆನೆವೆನು ಶ್ರೀ ಗಜಮುಖನೆ
ಕುದ್ಮು ಪೇಳೆನಗೆ ಕರ್ಣಬೋಧೆ, ಬಸವಣ್ಣ

ತಾತ್ಪರ್ಯ: ವಿದ್ಯೆಗೆ ಅಧಿದೇವತೆಯಾದ, ಪಂಡಿತರಾದ, ತಿಳಿವಳಿಕೆಯುಳ್ಳ ಜ್ಞಾನವಂತರನ್ನು ಶುದ್ಧಾಂಗದಲ್ಲಿ ನೆನೆಯುವೆ. ನಿನ್ನ ಶುದ್ಧಸ್ತೋತ್ರ ಮಾಡುವ ಪಾಮರನಾದ ನನಗೆ ಆತ್ಮಜ್ಞಾನವನ್ನು ಬೋಧಿಸಿ ಕರುಣಿಸು ಗಜಮುಖನೆ.

೨

ಒಂದೂ ಅಕ್ಷರದ ಗುರುತ ಎಂದೆಂದು ನಾನರಿಯೆ
ಮುಂದೆ ಲಕ್ಷಣವು ಎನಗೆ ಅಳವಟ್ಟಿಲ್ಲ, ಲೋಕದ
ಛಂದಸ್ಸು ನಿಘಂಟು ಚದುರದ ಮಾತಲ್ಲ ನಿಮ್ಮ
ಕಂದನ ತೊದಲ್ನುಡಿಯೆಂದು ಕೇಳಿ, ಬಸವಣ್ಣ

ತಾತ್ಪರ್ಯ: ಲೋಕನಾಥನಾದರೂ ನಾನೆಂಬ ಅಹಂಕಾರ ಇರದವರು ಮೌನೇಶ್ವರರು. ಆತ್ಮಜ್ಞಾನ (ಸ್ವ ಅರಿವು) ಪರಿಪೂರ್ಣತ್ವ ಮತ್ತು ಅಕ್ಷರ ಜ್ಞಾನದ ಅಪರಿಪೂರ್ಣತ್ವದ ಚರ್ಚೆ ಇಲ್ಲಿದೆ. ಮೌನೇಶ್ವರರು ಆತ್ಮಜ್ಞಾನಿ, ಆತ್ಮಜ್ಞಾನಕ್ಕೆ ಅಕ್ಷರದ ಹಂಗು ಬೇಕಿಲ್ಲ, ಸಾಧನೆ ಸಾಕು. ಅಕ್ಷರ, ಲಕ್ಷಣಶಾಸ್ತ್ರ, ಛಂದಸ್ಸು ನಿಘಂಟು ಇವೆಲ್ಲ ಚತುರರ ಹಾಗೂ ಶುಷ್ಕ ಪಾಂಡಿತ್ಯದ ಉತ್ಪಾದನೆಗಳು. ಇವು ಕಾವ್ಯ ಮತ್ತು ಸಾಹಿತ್ಯದ ಬಾಹ್ಯಾಲಂಕಾರಗಳೇ ಹೊರತು ಕಾವ್ಯದ ಅಂತರಂಗಗಳಲ್ಲ. ಮನುಷ್ಯನು ಕೂಡ ಪಾಂಡಿತ್ಯದ ಹೆಸರಿನಲ್ಲಿ ಯಶಸ್ಸು, ಕೀರ್ತಿ, ಬಿರುದು ಬಾವಲಿಯಂಥ ಹೊರಾವರಣದಲ್ಲಿಯೇ ಕಳೆದು

ಹೋಗುತ್ತಾನೆ. ಅಂಥ ಹೊರ ಆಡಂಬರಕ್ಕಿಂತ ಅಂತರಂಗ ಶುದ್ಧತೆ ಮತ್ತು ಬದುಕಿನ ಬದ್ಧತೆ ಮನುಷ್ಯನನ್ನು ಪರಿಪೂರ್ಣದತ್ತ ಕೊಂಡೊಯ್ಯುತ್ತದೆ. ಕಾವ್ಯ ಭಾಷೆಯ ಮುಂದೆ ಬಾಯಿ ಭಾಷೆ ತೊದಲ್ನುಡಿಯಾಗುತ್ತದೆ. ಮೌನೇಶ್ವರರು ಕಾವ್ಯ ಭಾಷೆಗಿಂತ ಬಾಯಿ ಭಾಷೆಗೆ ಹಾಗೂ ಭಾವ ಭಾಷೆಗೆ ಬೆಲೆ ನೀಡಿದ್ದಾರೆ.

೩

ಇಂದ್ರಿಯ ಸೂತಕದಿಂದ ಅಂದು ನಾ ಜನಿಸಿದೆನು
ಇಂದು ನಾ ತೊಳೆಯಲೆ ಪ್ರಭುದೇವರೆ, ನಾನು
ಬಂದಂಥ ಭವಕ್ಕೆ ಮಿತಿಯಿಲ್ಲ
ಹಂದಿಗಿಂತ ನಾನು ಕಡಿಮೆಯಯ್ಯಾ, ಬಸವಣ್ಣ

ತಾತ್ಪರ್ಯ : ಈ ಮನುಷ್ಯ ದೇಹ ಇಂದ್ರಿಯ ಸುಖ ಮತ್ತು ಸೂತಕದ ಫಲ. ಇಂಥ ಫಲದ ಕುಡಿ ನಾನು. ದೇಹವೆನ್ನುವುದು ದೇವನಾಗಬೇಕಾದರೆ ಹಲವು ಸಂಸ್ಕಾರ ಹಾಗೂ ಸಾಧನೆಗಳು ಅಗತ್ಯ. ಇಂಥ ಸತ್‌ಚಾರಿತ್ರ್ಯ ಹಾಗೂ ಸದ್ವರ್ತನೆಗಳನ್ನು ರೂಢಿಸಿಕೊಳ್ಳದೆ ಹಂದಿಯಂತೆ ವಿವೇಚನೆಯಿಲ್ಲದೆ ಹೀನವಾಗಿ ಬದುಕಿ ಆ ಕರ್ಮ ಫಲದಿಂದ ಹಲವು ಭವಗಳಲ್ಲಿ ಲೆಕ್ಕವಿಲ್ಲದ ಹುಟ್ಟು ಕಂಡಿರುವೆ. ಹುಟ್ಟು ಸಾವಿನ ಚಕ್ರದಲ್ಲಿ ಬಂಧಿಯಾಗಿರುವೆ. ಈ ಬಂಧನ ಬಿಡಿಸಿ ನಡೆಸು ಎನ್ನುವಲ್ಲಿ ತನ್ನ ತಾನರಿವ ಉತ್ಕಟ ಇಚ್ಛೆಯಿದೆ.

೪

ಮಾತಿಗೆ ಮೌನಸ್ವಾಮಿ ನೀತಿಗೆ ಹಸುಮಗ
ಯಾತಗಿರಿಯಲ್ಲಿ ಜನಿಸಿದ ಮೋನಯ್ಯನಾಟ
ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಮನುಷ್ಯನಿಗೆ ಅನಗತ್ಯವಾದ ಮಾತಿಗಿಂತ ಮೌನ, ಭೀತಿಗಿಂತ ನೀತಿ ಬಹಳ ಮುಖ್ಯ ಮಾತು ಬೆಳ್ಳಿ ಮೌನ ಬಂಗಾರ ಎಂಬ ಮಾತಿದೆ. ಯಾತಗಿರಿಯಲ್ಲಿ ಜನಿಸಿದ ಮೌನಯ್ಯ ಮಾತಿನಲ್ಲಿ ಸೌಜನ್ಯ ಹಾಗೂ ನೀತಿಯಲ್ಲಿ ಬದ್ಧತೆಯುಳ್ಳವ. ಆ ಮೂಲಕ ಮಾತಿನ ಸೂತಕ ಮೀರಿದವ. ಆತನ ಮಹಿಮೆ ಹಾಗೂ ಶಕ್ತಿ ಮಾತು ಮತ್ತು ಕೃತಿಯಲ್ಲಿ ಅಪ್ರಾಮಾಣಿಕರಾದವರಿಗೆ ತಿಳಿಯುವುದಿಲ್ಲ.

೫

ಜಾತಿ ಸೂತಕವಳಿದು ಮಾತಿನ ಮಾಲೆಯ ಬಿಟ್ಟು
ಜ್ಯೋತಿ ಪ್ರಕಾಶವಾಗಿದ್ದ ಮೋನಯ್ಯನ
ಭಾಷೆಯ ಕೊಟ್ಟು ಕರೆ ತಂದ, ಬಸವಣ್ಣ

ತಾತ್ಪರ್ಯ : ಮಾತೆಂಬುದು ಜ್ಯೋತಿರ್ಲಿಂಗ, ಮಾತೆಂಬುದು ಸೂತಕ ಎನ್ನುವುದು ಅಲ್ಲಮನ ಮಾತು. ಮಾತು ನೀತಿಯಾದಾಗ ಜ್ಯೋತಿಸ್ವರೂಪವಾಗಿರುತ್ತದೆ. ಅದು ಅನೀತಿ ಮಾರ್ಗ ಹಿಡಿದಾಗ ಸೂತಕವಾಗುತ್ತದೆ. ಅಲ್ಲಮನನ್ನು ಬಹು ಹಚ್ಚಿಕೊಂಡ ಮೌನಯ್ಯ ಜಾತಿ ಮತ್ತು ಮಾತಿನ ಸೂತಕವನ್ನು ಮೀರಿದವ. ಆತ್ಮಜ್ಞಾನಿಯಾದವನ ಮಾತು ಜ್ಯೋತಿ ಸ್ವರೂಪವಾಗಿರುತ್ತದೆ. ಇಂಥ ಜ್ಞಾನ ಸ್ವರೂಪಿ ಮೌನಯ್ಯನನ್ನು ಜಗತ್ತಿನ ಮೌಢ್ಯ ತಿದ್ದಲು ವಚನಕೊಟ್ಟು ಕರೆತಂದರು.

೬

ಇಕ್ಕಳವೆ ಕುಲದೈವ ಸುತ್ತಿಗೆಯೇ ಮನಿ ದೈವ
ಬೊಕ್ಕಸಗೋಲ ಗಜದಂಡನೆತ್ತೀಲಿ ತೆತ್ತೀಸ
ಕೋಟಿ ದೇವಾದಿದೇವರ್ಕಳ
ನಿರ್ಮಿಸಿದ ಮೇಲೆ ಕೆಟ್ಟ ಕುಲ ಎನಬಹುದೆ, ಇದು
ಅಲ್ಲಮನ ಕುಲವು, ಬಸವಣ್ಣ

ತಾತ್ಪರ್ಯ : ಬಡಿಗ ಕಮ್ಮಾರರು ಈ ಸೃಷ್ಟಿಗೆ ಕಾರಣರು. ಸೃಷ್ಟಿಗೆ ಕಾರಣವಾದ ಉದ್ಯೋಗ ಪರಿಕರಗಳು ಕೇವಲ ಆಯುಧಗಳಲ್ಲ. ಅವು ಈ ಸೃಷ್ಟಿಯ ಸಕಲ ಜೀವರಾಶಿಗಳನ್ನು ಸೃಷ್ಟಿಸಿ ಸಲಹುವ ಪರಿವರ್ತನಶೀಲ ರೂಪಕಗಳು. ಇಕ್ಕಳ ಸುತ್ತಿಗೆ ಬೊಕ್ಕಸಕೋಲು ಇವು ಹಿಡಿಯುವ ಬಡಿಯುವ ಕರಗುವ ಸೃಷ್ಟಿಸುವ ಶಕ್ತಿಯುಳ್ಳವು. ಇಂಥ ಆಯುಧಗಳನ್ನು ರೂಪಿಸುವ ಪಾಂಚಾಳರು ಮನುಕುಲವನ್ನಲ್ಲದೆ ಭುವಿಯ ಮೇಲೆ ಮನುಷ್ಯ ಸುಖವಾಗಿರಲು ಅವಶ್ಯಕ ವಸ್ತು ಪರಿಚಯ ವನ್ನು ನಿರ್ಮಿಸಿ ಪರಸಂಬಂಧವನ್ನು ಬೆಸೆಯಲು ಮೂವತ್ಮೂರು ಕೋಟಿ ದೇವಾನು ದೇವತೆಗಳ ನಿರ್ಮಿಸಿ ಈ ಜಗತ್ತಿಗೆ ಕೊಟ್ಟವರು. ಅಂಥವರ ಕುಲ ಹೀನಕುಲ ಹೇಗಾದೀತು, ಅದು ಅಲ್ಲಮನ ಕುಲ ಜ್ಞಾನದ ಕುಲ ಮತ್ತು ಕೌಶಲ್ಯದ ಕುಲವು ಹೌದು. ದೇವ ಶಿಲ್ಪ ಕಾರ್ಯಗಳನ್ನು ನಡೆಸುವ ವಿಶ್ವ ಬ್ರಾಹ್ಮಣರಿಗಿಂತಲೂ ಶ್ರೇಷ್ಠವಾದ ಕುಲ ಇಲ್ಲವೇ ಇಲ್ಲ ಎಂಬುದು ವೇಮನ ಯೋಗಿಯ ವಿವರಣೆ.

೭

ಆಳಿನ ಮನೆಯ ಆಳು ನಾನು ಬಹಳ ಬಡವನು
ಕೇಳ ತಿಳಿಯಲರಿಯೆನು ಕಾಳಿಯ ಮಗ ನಾ
ಕೇಳುವರುಂಟೆ ಧರೆಯೊಳಗೆ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಕೇವಲ ತನ್ನೆದುರಿನ ಸಮಾಜವನ್ನು ವಿಮರ್ಶೆ ಮಾಡಿದ ವರಲ್ಲ. ತನ್ನನ್ನೇ ತಾನು ಸ್ವ ವಿಮರ್ಶೆಗೆ ಒಡ್ಡಿಕೊಂಡವರು. ಆ ಮೂಲಕ ಕುಲದ

ಕಾರಣಕ್ಕಾಗಿ ಬರುವ ಹಲವು ಮದಗಳನ್ನು ನೀಗಿಕೊಂಡವರು. ಆಳಿನ ಮನೆಯ ಆಳು ಬಹಳ ಬಡವ ನಾನು ಎನ್ನುವ ಮೂಲಕ ದೀನ, ದಲಿತರಲ್ಲಿ ನಿರ್ಗತಿಕರಲ್ಲಿ ಒಂದಾಗಿ ಅವರಲ್ಲಿ ಆತ್ಮವಿಶ್ವಾಸ ತುಂಬಿದವರು. ತಾನು ಕಾಳಿಯ ಮಗ ಎಂದು ಹೇಳುವ ಮೂಲಕ ಈ ಲೋಕದ ಜನರೊಂದಿಗೆ ಲೌಕಿಕರಾಗಿ ಬದುಕಿ ಲೋಕಾತೀತರಾದವರು.

೮

ಏಸೇಸು ಜನ್ಮದಲಿ ಕಶ್ಯಪನ ಮಗ ನಾನು
ವೇಶ್ಯೆಯಾ ಮಕ್ಕಳು ಜಗವೆಲ್ಲ, ನಮ್ಮನ್ನ
ಹಾಸ್ಯ ನಿಂದೆ ಮಾಡಿದರು ಹೊಲೆಯರು, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ನಿರಂತರವಾಗಿ ಎಲ್ಲ ಕಾಲಗಳಲ್ಲೂ ವಿಶ್ವಕರ್ಮ ವಂಶದಲ್ಲಿ ಜನಿಸುತ್ತಾ ಜಗತ್ತಿನ ಜನರಿಗೆ ಮಾರ್ಗದರ್ಶಕರಾಗಿ ಬರುತ್ತಾ ಇದ್ದಾರೆ ಎಂಬುದು ಜನರ ನಂಬಿಕೆ. ವಚನದಲ್ಲಿಯೂ ಕಶ್ಯಪಬ್ರಹ್ಮನ ಸಂಪ್ರದಾಯದಲ್ಲಿ ಹುಟ್ಟಿದ್ದೇನೆ ಎಂಬ ಮಾತಿದೆ. ಕಶ್ಯಪ ಎಂಬುದು ವಿಶ್ವಕರ್ಮ ಪರಬ್ರಹ್ಮನ ಪರ್ಯಾಯ ನಾಮವಾಗಿದೆ. ಆದೇ ರೀತಿಯಾಗಿ ನವಬ್ರಹ್ಮರಲ್ಲಿ ಕಶ್ಯಪಬ್ರಹ್ಮ ಎಂಬ ಬ್ರಹ್ಮನೂ ಇದ್ದು ಆತನ ಸೃಷ್ಟಿಯ ವ್ಯಾಪಕ ವರ್ಣನೆಯು ಪುರಾಣಗಳಲ್ಲಿ ಲಭಿಸುತ್ತದೆ. ಬ್ರಹ್ಮ ಸೃಷ್ಟಿಯ ವಿವರಣೆಯೂ ಪುರಾಣಗಳಲ್ಲಿ ಹೇಳಿದೆ. ಈ ಎರಡೂ ಸೃಷ್ಟಿಗಳ ಪರಸ್ಪರ ಪೂರಕ ವಾದವು ಎರಡೂ ಸೇರಿ ಪ್ರಪಂಚದ ಬೆಳವಣಿಗೆಗೆ ಕಾರಣವಾಗಬೇಕೆಂಬುದು ಜಗದೀಶನ ಇಚ್ಛೆ. ಆದರೆ ಅದಕ್ಕೆ ವಿರೋಧವಾಗಿ ಸ್ವಾರ್ಥಿಗಳಾದವರು ಇದರಲ್ಲಿ ಅಂತರಗಳನ್ನು, ಮೇಲು–ಕೀಳುಗಳನ್ನು ಹುಡುಕಿ ಬಾಳುವೆಯೇ ಗೊಂದಲ ಗೂಡು ಎನ್ನುವಂತೆ ಮಾಡಿರುವುದನ್ನು ಮೌನೇಶ್ವರರು ಖಂಡ ತುಂಡಾಗಿ ಇಲ್ಲಿ ಹೇಳಿದ್ದಾರೆ.

ಸಾಮಾನ್ಯವಾಗಿ ವಿಶ್ವಕರ್ಮ ವಂಶಜರು ಆದಿ ಪಂಚಶಿಲ್ಪಗಳಿಂದ ಬಂದ ಪಂಚಶಿಲ್ಪ ಗಳನ್ನು ಲೋಕದಲ್ಲಿ ಮಾಡುತ್ತಾ ಜನಸೇವೆ–ಜನಾರ್ದನನ ಸೇವೆ ಎಂದು ನಂಬಿ ನಡೆಯುತ್ತಾರೆ. ಸಾಮಾನ್ಯವಾಗಿ ಇವರನ್ನು ಪೌರುಷೇಯ ಬ್ರಾಹ್ಮಣರು ಎನ್ನುವ ರೂಢಿ ಇದೆ. ಆದಿ ಪಂಚಶಿಲ್ಪರ್ಷಿಗಳು ವಿಶ್ವಕರ್ಮನ ಪಂಚಮುಖಗಳಿಂದ ಜನಿಸಿದ ಬ್ರಹ್ಮರಾಗಿದ್ದು ಅವರಿಂದ ಪ್ರವರ್ತಿತವಾಗಿರುವ ಬ್ರಾಹ್ಮಣ್ಯ ಇದ್ದುದರಿಂದ ಈ ಹೆಸರು ಬಂದಿದೆ ಎನ್ನುತ್ತಾರೆ.

ಇನ್ನೊಂದು ಬಗೆಯಾಗಿ ಸೃಷ್ಟಿಯನ್ನು ಹೇಳುವಾಗ ಪರಮಾತ್ಮನಿಂದ ನವಬ್ರಹ್ಮರು ಜನಿಸಿ ಅವರಿಂದ ಸೃಷ್ಟಿವಿಕಾಸ ನಡೆಯಿತು. ಇದು ನಡೆದಿದ್ದು ಸಪ್ತರ್ಷಿಗಳಿಂದ ಎಂದು ಹೇಳುವುದು ಇದೆ. ಇದನ್ನು ಸಪ್ತಾರ್ಷೇಯ ಸಂಪ್ರದಾಯ ಎನ್ನುತ್ತಾರೆ.

ಕಾಶ್ಯಪ ಎನ್ನುವುದು ವಿಶ್ವಕರ್ಮನ ಪರ್ಯಾಯ ನಾಮ. ಆದ್ದರಿಂದ ಸೃಷ್ಟಿಕರ್ತನಿಂದಲೇ ನೇರವಾಗಿ ರೂಪಿತವಾಗಿರುವ ವಂಶಕ್ಕೆ ಸೇರಿರುವ ಪಂಚಾರ್ಷೇಯ ಬ್ರಾಹ್ಮಣ ಕುಲ ಮೌನೇಶ್ವರರದು. ಇನ್ನು ವೇಶ್ಯಾಸಂತಾನ ಯಾವುದು?

ಬ್ರಾಹ್ಮಣ ಗೋತ್ರಕರ್ತರೆಂದು ಪ್ರಚಲಿತದಲ್ಲಿರುವ ಋಷಿಗಳಲ್ಲಿ ಬಹುಪಾಲು ಜನ್ಮತಃ ಬ್ರಾಹ್ಮಣರಲ್ಲ. ಬ್ರಹ್ಮಜ್ಞರಾಗಿ ಬ್ರಾಹ್ಮಣರಾಗಿರುವವರು ವಶಿಷ್ಠ ಊರ್ವಶಿಯಲ್ಲಿ (ಸುರಲೋಕದ ದೇವದಾಸಿ) ಜನಿಸಿದವರು. ಇವರ ಹೆಂಡತಿ ಹೊಲೆಯನಾಗಿದ್ದ ಮತಂಗ ಮುನಿಯ ಮಗಳಾದ ಅರುಂಧತಿ. ಆಕೆಯಲ್ಲಿ ಹುಟ್ಟಿದವನು ಶಕ್ತಿಮುನಿ. ಶಕ್ತಿಮುನಿಯ ಹೆಂಡತಿ ಶ್ವಪಚಳು. ಇವರ ಮಗನೇ ಪರಾಶರ. ಅವಿವಾಹಿತ. ಮತ್ಸಕನ್ಯೆಯಲ್ಲಿ ಪರಾಶರನಿಗೆ ಹುಟ್ಟಿದ್ದು ವ್ಯಾಸ. ಈತನೇ ವ್ಯಾಸೋನಾರಾಯಣೋಹರಿ: ಎಂದು ಪ್ರಖ್ಯಾತನಾದ. ಕೌಂಡಿನ್ಯ ವಿಧಿವೆಯ ಮಗ, ಮಾಂಡವ್ಯ ಕಪ್ಪೆಯಲ್ಲಿ ಹುಟ್ಟಿದವನು. ನಾರದನು ಹುಟ್ಟಿದ್ದು ಅಗಸರಲ್ಲಿ. ಶುಕನು ಗಿಣಿಯಲ್ಲಿ, ಗೌತಮನು ಕತ್ತೆಯಲ್ಲಿ ಹುಟ್ಟಿದ್ದಾರೆ. ಮಡಿಕೆಯಲ್ಲಿ ಅಗಸ್ತ್ಯ, ಬೋವಿಗಳಲ್ಲಿ ವಾಲ್ಮೀಕಿ ಹುಟ್ಟಿದ್ದಾರೆ. ಹೀಗೆ ಇವರೆಲ್ಲರಿಗೂ ಹುಟ್ಟಿನಿಂದ ಬ್ರಾಹ್ಮಣ್ಯವೆಂಬುದು ಬಂದಿಲ್ಲ. ಇವರೆಲ್ಲರೂ ಬ್ರಹ್ಮಜ್ಞಾನದಿಂದಲೇ ಬ್ರಾಹ್ಮಣರಾದವರು. ಅವರ ವಂಶಜರು ಕೂಡ ಅದೇ ರೀತಿಯಲ್ಲಿ ಬ್ರಹ್ಮಜ್ಞಾನದಿಂದಲೇ ಬ್ರಾಹ್ಮಣರಾದವರು. ಹಾಗಿಲ್ಲದಿದ್ದರೆ ಅವರು 'ವೇಶ್ಯಾ ಸಂತಾನ ಮಾತ್ರವೇ ಅಲ್ಲವೇ?' ಎಂಬುದು ಮೌನೇಶ್ವರರ ಮಾತು. ಕ್ರಮವಾಗಿ ಶುದ್ಧ ಸಂತಾನವಾಗಿದ್ದ ಜನ್ಮ ಕರ್ಮಗಳಿಂದ ಬ್ರಾಹ್ಮಣನಾಗಿ ಇರುವ ತನ್ನನ್ನು ಹೀಗಳೆಯುವವರ ಬ್ರಾಹ್ಮಣಿಕೆಯ ಇಂತಹುದು ಎಂಬುದು ಈ ವಚನದ ಹೂರಣ. ಇದು ಸಿಟ್ಟಿನಲ್ಲಿ ನುಡಿದಿರುವ ವಾಕ್ಯವಾದರೂ ಇದಕ್ಕೆ ಪೂರಕವಾದ ಹಿನ್ನೆಲೆ ಇದೆ ಎಂಬುದನ್ನು ನಾವು ಗಮನಿಸಬೇಕು.

೯

ಮುಚ್ಚಿ ಮುಚ್ಚಿ ಆಡುವ ಮುಚ್ಚಿಗರ ಮಗನಲ್ಲ
ಅಚ್ಚ ಲಿಂಗಾಂಗಿಗೆ ಪರಬ್ರಹ್ಮ ಕೆಲಸ
ದಚ್ಚು-ವರಿಕಲ್ಲು ಪಿಡಿದು ನಿಂತಿದ್ದಾತ
ಅಚ್ಯುತನು ಚೆನ್ನಬಸವಣ್ಣ ಬಂದುದು ಲೋಕದ
ಹುಚ್ಚರಿರ್ಯಾ ನಿಮಗೆ ತಿಳಿಯದು, ಬಸವಣ್ಣ

ತಾತ್ಪರ್ಯ: ಹಿಂದಿನ ವಚನದ ಆಶಯವೇ ಮುಂದುವರೆದಿದೆ. ನಾನು ಕದ್ದು ಮುಚ್ಚಿ ಬದುಕುವ ಹೀನ ಕುಲದವರ ಮಗನಲ್ಲ, ನಾನು ಅಚ್ಚ ಲಿಂಗಾಂಗಿ, ಅಚ್ಯುತನಾದವ. ನನ್ನ ಪರೀಕ್ಷಿಸುವ ಹುಚ್ಚ ಮನಜರನ್ನೇ ಪರೀಕ್ಷೆ ಮಾಡಲು ಅಕ್ಕಸಾಲಿಕೆ

ವೃತ್ತಿಯ ಅಚ್ಚು ಒರೆಗಲ್ಲು ಹಿಡಿದು ಬಂದವ. ಲೋಕದ ಮರುಳರೇ ಅಚ್ಯುತನಾಗಿ ಚೆನ್ನಬಸವಣ್ಣನ ಪ್ರತಿರೂಪವಾಗಿ ಬಂದ ನಾನು ನಿಮ್ಮಂತ ಮತಿಹೀನರಿಗೆ ಅರ್ಥವಾಗಲಾರೆ ಎನ್ನುವ ಭಾವ ಇಲ್ಲಿನದು.

೧೦

ವರಿಕಲ್ಲು ಸರಮಚ್ಚರ ಕರಿಲಿಂಗ ಜಪಮಾಲೆ
ಪರಮಾತ್ಮನೆಂಬ ನಿಜಮೇಣವ ಪಿಡಕೊಂಡು
ಪರಬ್ರಹ್ಮ ಬಂದ ಲೋಕಕ್ಕೆ ಮರ್ತ್ಯದ
ಕುರಿಗಳಿಗೇನು ತಿಳಿಯದು, ಬಸವಣ್ಣ

ತಾತ್ಪರ್ಯ : ಈ ಲೋಕದ ಪಾಪ ಪುಣ್ಯಗಳನ್ನು ಒರಿಗೆ ಹಚ್ಚಲು ಒರೆಗಲ್ಲು ಶುದ್ಧ ಚಿನ್ನದ ಚೂರು, ಕರಲಿಂಗದ ಸಮೇತ ಪರಮಾತ್ಮನಾದ ಮೌನಯ್ಯ ಜ್ಞಾನವೆಂಬ ಬೆಳಕಿನ ಮೇಣಬತ್ತಿ ಹಿಡಿದು ಪರಬ್ರಹ್ಮ ಸ್ವರೂಪದಲ್ಲಿ ಬಂದರೂ ಅಜ್ಞಾನಿಗಳಾದ ಈ ಲೋಕದ ಕುರಿಗಳು ಅವರ ಗುರುತನರಿಯದಷ್ಟು ಮೂಢರಾಗಿದ್ದರು.

೧೧

ಶಾಸ್ತ್ರ ಸಂಪನ್ನನು ನೀತಿ ಪರಿಪೂರ್ಣನು
ಜ್ಯೋತಿ ಪ್ರಕಾಶ ಪರಶಿವ ಅಲ್ಲಮ ಪ್ರಭುವಿನ
ಸೂತ್ರ ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಮನುಷ್ಯನಲ್ಲಿ ಹುಟ್ಟುವ ಪರಿಪೂರ್ಣತೆ ಎನ್ನುವುದು ಈ ಲೋಕವನ್ನು ಮೀರಿ ನಿಲ್ಲುವಂಥದ್ದು. ಅಂಥ ಮೀರಿದ ಮತ್ತು ಶೂನ್ಯಸಿಂಹಾಸನಾಧೀಶನಾದ ಅಲ್ಲಮನ ಸೂತ್ರವೇ ಮರ್ತ್ಯದ ಮಾನವರಿಗೆ ತಿಳಿಯಲಿಲ್ಲ. ಶಾಸ್ತ್ರ ಸಂಪನ್ನ ನೀತಿ ಪರಿಪೂರ್ಣನೂ ಜ್ಞಾನಜ್ಯೋತಿ ಪ್ರಕಾಶನಾದ ಅಲ್ಲಮನ ಅವತಾರಿಯಾದ ಮೌನೇಶ್ವರರ ತತ್ವದ ಸ್ವರೂಪ ಅಜ್ಞಾನದ ಕತ್ತಲಲ್ಲಿ ಮುಳುಗಿರುವ ಈ ಲೋಕದ ಅಂಧಕರಿಗೆ ಅರ್ಥವಾಗಲಿಲ್ಲ.

೧೨

ಚಿನ್ನ ವರ್ಣನು ಬಂದ ಚೆನ್ನಬಸವಣ್ಣನು ಬಂದ
ಹನ್ನೊಂದು ಕೋಟಿ ಪ್ರಮಥರ
ಬಣ್ಣ ಬಣ್ಣಗಳ ಬೆಲೆಯ ನಿಡುತ
ಪನ್ನಂಗಧರ ಪ್ರಭುದೇವರು ಬಂದರು
ಕುನ್ನಿಗಳು ನಿಮಗ್ಯಾಕೆ ತಿಳಿಯದು, ಬಸವಣ್ಣ

ತಾತ್ಪರ್ಯ : ಶಿವಸ್ವರೂಪಿಯೂ ಜ್ಞಾನರೂಪಿಯೂ ಆದ ಅಲ್ಲಮನ ಸ್ವರೂಪಿ ಮೌನೇಶ್ವರರು ಈ ಭವದ ಭವಿಗಳನ್ನು ತಿದ್ದಲು, ಕರ್ಮಬಂಧನದಿಂದ ಬಿಡಿಸಲು ತನ್ನ ದಿವ್ಯ ತೇಜಸ್ಸಿನ ಮೂಲಕ ಬಂದರೂ ಈ ಮಣ್ಣಿನ ಕುನ್ನಿಗಳಿಗೆ ಅವರ ಇರುವನ್ನು ಮತ್ತು ಅರಿವನ್ನು ತಿಳಿಯಲಾಗಲಿಲ್ಲ. ಶ್ರೀ ಕೃಷ್ಣನು ಗೀತೆಯಲ್ಲಿ ಮೂಢ ಜನರು ನನ್ನನ್ನು ತಿರಸ್ಕರಿಸುತ್ತಾರೆ(ಅವಜಾನಂತಿ ಮಾಮ್ ಮೂಢಾ) ಎಂದು ಹೇಳಿದನ್ನು ಈ ವಚನ ನೆನಪಿಸುತ್ತದೆ.

೧೩

ಹತ್ತು ಬಣ್ಣದ ಹೊನ್ನು ಒಪ್ಪುವರಲ್ಲವೊ
ಪುತ್ತಳಿ ಇದರ ನಿಜ ನಾಣ್ಯವ ಕೊಳಬಂದ
ಅರ್ಕಸಾಲೆನಾಗಿ ಧರೆಗಿಳಿದ, ಬಸವಣ್ಣ

ತಾತ್ಪರ್ಯ : ಮನುಷ್ಯರಲ್ಲಿನ ಹೀನ ಹಾಗೂ ಗುಣದ ಭೇದ ತಿಳಿಯಲು, ಚೊಕ್ಕ ಚಿನ್ನದ ರೂಪನು, ಕಳಂಕರಹಿತನೂ ಆದ ಮೌನೇಶ್ವರರು ಅಕ್ಕಸಾಲಿಯಾಗಿ ಧರೆಗೆ ಬಂದರು. ಬಂಗಾರದಲ್ಲಿನ ಖೊಟ್ಟಿ ಹಾಗೂ ಅಸಲಿ ಗುಣ ತಿಳಿಯಬಲ್ಲ ಶಕ್ತಿ ಅಕ್ಕಸಾಲಿಗೆ ಮಾತ್ರ ಇರುವಂಥದ್ದು. ಅಂಥ ಅಕ್ಕಸಾಲೇರ ಹೊಟ್ಟೆಯಲ್ಲಿ ಜ್ಞಾನದ ಗಣಿಯೂ ಕೌಶಲ್ಯವಂತನೂ ಆದ ಮೌನಯ್ಯನವರು ಮರ್ತ್ಯದ ಮಾನವರ ಹೀನ ಗುಣವನ್ನು ತಿಳಿದು ತಿದ್ದಲು ಬಂದರು.

೧೪

ಕರಗಿ ಮಾಡಲಿಬಲ್ಲ ಒರೆದು ನೋಡಲಿಬಲ್ಲ
ಪರಿಪರಿಯ ವಸ್ತು ಒಡವೆ ದೇವರಾಭರಣವ
ಜಡಿದು ಮಾಡುವ ಗುಣಮಣಿ ಚಿಂತಾಮಣಿ
ಧರೆಗಿಳಿದ ಚೆನ್ನಬಸವಣ್ಣ, ಬಸವಣ್ಣ

ತಾತ್ಪರ್ಯ : ಪಾಂಚಾಳರ ಕುಲಕಸುಬುಗಳು ಜ್ಞಾನ ಮತ್ತು ಕೌಶಲ್ಯದ ರೂಪಗಳು. ಲೋಹವನ್ನು ಕರಗಿಸುವ, ಅರಗಿಸುವ, ಒರೆದು ನೋಡುವ, ಬಡಿದು ಬಗ್ಗಿಸುವ ಮೂಲಕ ಹಲವು ಬಗೆಯ ವಸ್ತು ಒಡವೆ ದೇವರಾಭರಣಗಳನ್ನು ಸೃಜಿಸುವ ಆಕೃತಿಗೊಳಿಸುವ ಗುಣಮಣಿಗಳು. ಬೇಡಿದ್ದನ್ನು ಕೌಶಲ್ಯಯುತವಾಗಿ ಮಾಡಿ ಕೊಡುವ ಚಿಂತಾಮಣಿಗಳು ಅಕ್ಕಸಾಲಿಯರ ಪ್ರತಿನಿಧಿಯಾದ ಮೌನಯ್ಯನವರು ಈ ಜಡಗೊಂಡ ಜಗತ್ತನ್ನು ಕರಗಿಸಿ, ಅರಗಿಸಿ, ಒರೆದು, ಜಡಿದು ಪುನಃಸೃಷ್ಟಿಸಲು ಬಂದಿರುವರು. ಅಂದರೆ ನವಸಮಾಜ ನಿರ್ಮಾಣದ ಹಂಬಲ ಈ ವಚನದಲ್ಲಿದೆ.

೧೫

ಜಾತ ಜಾತವನಾಡಿಸುವ ಜಾತಿಗಾರನೆಂಬಂತ
ಜಾತ ಅಜಾತ ಅಲ್ಲಮನ ಒಡಗೂಡಿ
ಜ್ಯೋತಿ ತಾ ಬಂದ ಮರ್ತ್ಯಕ್ಕೆ ಜಗದ
ಸೂತ್ರದಾರವ ಕರದಲ್ಲಿ ಪಿಡಿದುಕೊಂಡು
ಸುತಾರ ಚೆನ್ನಬಸವಣ್ಣ ಬಂದಂಥ
ಸೂಚನೆಯ ಕೇಳಿರೊ ಶರಣರಿರ್ಯಾ, ಬಸವಣ್ಣ

ತಾತ್ಪರ್ಯ : ಈ ಜಗತ್ತಿನ ಸಮಸ್ತ ಚೇತನ ಅಚೇತನ ರೂಪಗಳಲ್ಲಿ ತನ್ನ ಅಸಾಧಾರಣ ಶಕ್ತಿಗಳಾದ ಶ್ರುತ–ಧಾರಣ–ಪ್ರಜ್ಞಾ ಶಕ್ತಿಗಳ ಮೂಲಕ ಚೈತನ್ಯ ತುಂಬುವ ವಿಶ್ವಕರ್ಮ ಪರಬ್ರಹ್ಮನು ಜ್ಞಾನಕ್ಕೆ ಸ್ವಾಮಿಯಾದವನು. ಸಾವು ಮರಣಗಳನ್ನು ಮೀರಿದವರಾದ ಮೌನೇಶ್ವರರು ಅಲ್ಲಮನೆಂಬ ಬ್ರಹ್ಮಜ್ಞಾನ ಪಡೆದು ಸ್ವಯಂಜ್ಯೋತಿಯಾಗಿ ಜಗದ ಸೂತ್ರವನು ಅರಿತ ಬ್ರಹ್ಮಬಡಿಗ್ಯಾನಾಗಿ ಬಂದು ಜಗದ ಸೂತಕ ಅಳಿವನು ಎಂಬ ಭಾವ ಇಲ್ಲಿನದು.

೧೬

ಕರಚರಣಗಳಲ್ಲಿ ಕಾರ್ಯವನು ನಿರ್ಮಿತವ ಮಾಡಿದ ಗುರ್ತರಿಯೆ
ಸರುವ ದೇವರುಗಳನು ಪೆಸರಿಟ್ಟು ಕರೆದಂತ
ಪರಬ್ರಹ್ಮ ಮೂರ್ತಿ ಈತನಲ್ಲದೆ ಪ್ರತಿದೈವವೆಂದು ನುಡಿದ
ಮಹಾ ಪಾತಕರು, ಇದೇನು ಕೇಳು, ಬಸವಣ್ಣ

ತಾತ್ಪರ್ಯ : ಪೂರ್ಣತ್ವ ಎನ್ನುವುದು ದೈವತ್ವದ ಪ್ರತೀಕ. ಸಾಮಾನ್ಯ ಮನುಷ್ಯರನ್ನು ದೇವರು ಸೃಷ್ಟಿಸಿದರೆ ಬ್ರಹ್ಮಜ್ಞಾನಿಯಾದ ಶಿಲ್ಪಿಯು ದೇವರನ್ನೇ ಸೃಷ್ಟಿಸುತ್ತಾನೆ. ಹಾಗೇ ದೇವರನ್ನೇ ಸೃಷ್ಟಿಸಿದ ಶಿಲ್ಪಿಯ ಗುರುತು ಎಲ್ಲಿಯೂ ಇರುವುದಿಲ್ಲ. ಹೆಸರು ಮತ್ತು ಗುರುತು ಅಹಂಕಾರದ ಸಂಕೇತ. ಮೂವತ್ತಾರು ಕೋಟಿ ದೇವತೆಗಳನ್ನು ನಿರ್ಮಿಸಿ ಅವರಿಗೆ ಹೆಸರಿಟ್ಟು ನಿರ್ಬಯಲಾದ ಪರಬ್ರಹ್ಮಮೂರ್ತಿಯನ್ನು ಮರೆತು ಮತ್ತೊಂದು ದೈವಕ್ಕೆ ಶರಣಾಗುವವನು ಮಹಾಪಾತಕನು, ತನ್ನ ತಾನರಿಯದ ಮೂರ್ಖನು ಎಂದು ಮೌನೇಶ್ವರರು ಹೇಳುತ್ತಾರೆ.

೧೭

ಬೂದಿಯ ಪೂಸಿಕೊಂಡು ಬೀದಿ ಬೀದಿ ತಿರುಗುವ
ಬೀದಿ ಜಂಗಮ ನಾನಲ್ಲ. ನಾಲ್ಕು ವೇದವ ತಿಳಿದಂಥ
ಮಾಧವನ ಗುರುತನರಿಯರು, ಬಸವಣ್ಣ

ತಾತ್ಪರ್ಯ : ದೈವತ್ವ ಮತ್ತು ಶರಣತ್ವ ಅನ್ನುವುದು ಬಾಹ್ಯ ಆಚರಣೆಯಲ್ಲಿ ಹುಟ್ಟುವುದಲ್ಲ. ಮೈಗೆ ಬೂದಿ ಬಳಿದುಕೊಂಡು ಭಿಕ್ಷೆಗಾಗಿ ಡಾಂಭಿಕತನದಿ ಬೀದಿ ಬೀದಿ ತಿರುಗುವವರು ಪರಮಜ್ಞಾನಿಗಳಾಗಲಾರರು. ಉದರ ನಿಮಿತ್ಯ ವಿವಿಧ ವೇಷ ತೊಡುವ ಇಂಥವರು ಸ್ವತಃ ತಮ್ಮ ಗುರುತನರಿಯುವುದು ಇರಲಿ ಪರಮಜ್ಞಾನಿಯಾದ ಪರಮಾತ್ಮನ ಸ್ವರೂಪವನ್ನೂ ತಿಳಿಯರು. ಅಂಥ ಪರಮಾತ್ಮ ಸ್ವರೂಪವೇ ಮೌನೇಶ್ವರರಾಗಿದ್ದಾರೆ.

೧೮

ನಂಬಿ ಕೇಳೆಲೋ ಬಸವಾ, ಡಂಬಕಂಗಳ ಬಿಟ್ಟು
ಕೊಂಬೆ ಕೊಂಬೆಗೆ ಹಾರುವ ಮನವ ಕಡೆಗಿಟ್ಟು
ನಂಬಿ ಕೇಳೆಲೋ ಬಸವ ಮರ್ತ್ಯದೊಳು, ಬಸವಣ್ಣ

ತಾತ್ಪರ್ಯ : ದೃಢಭಕ್ತಿ ಎನ್ನುವುದು ನಿಜವಾದ ಸಂತನ ನೀತಿಮಂತ್ರ. ಆದರೆ ಡಾಂಬಿಕ ವೇಶ ಧರಿಸಿ ಕೊಂಬೆ ಕೊಂಬೆಗೆ ಮಂಗನಂತೆ ಹಾರುವ ಮನಸ್ಸನ್ನು ನಿಯಂತ್ರಿಸಲಾಗದೆ ಬಸವಳಿಯುತ್ತಾರೆ. ಅದೇ ಜೀವನವೆಂದು ಕೆಟ್ಟು ಹೋಗುತ್ತಾರೆ. ಅದು ಬಿಟ್ಟು ಪರಮಾತ್ಮನಲಿ ಮನ ನಿಲ್ಲಿಸಿ ಶುದ್ಧ ಭಕ್ತಿ ಮಾಡಿದರೆ ಫಲ ದೊರೆತೀತು ಎನ್ನುವುದು ಇಲ್ಲಿನ ಭಾವ.

೧೯

ಕಾಸಿ ನೋಡಲಿಬಲ್ಲ ಕೀಸಿ ನೋಡಲಿಬಲ್ಲ
ತ್ರಾಸಿಕ್ಕಿ ತೂಗಿ ನೋಡಿದಾತನ ಮುಂದೆ
ಈಸೊಂದು ಮಾತು ನಿಮಗೇಕೆ, ಬಸವಣ್ಣ

ತಾತ್ಪರ್ಯ : ಘನರೂಪದ ಲೋಹವು ಕುಶಲ ಪಾಂಚಾಳನ ಕೈಯಲ್ಲಿ ಒಂದು ಕುಸುರಿ ವಸ್ತು ಆಗಬೇಕಾದರೆ, ಕಾಸಿ ಬಡಿಯುವ, ಕರಗಿ ಹಿಗ್ಗಿಸುವ, ತಕ್ಕಡಿಯಲ್ಲಿ ತೂಗಿ ಅದರ ಪ್ರಮಾಣವನ್ನು ನಿರ್ಧರಿಸುವ ಪ್ರಕ್ರಿಯೆಗೆ ಒಳಗಾಗಲೇಬೇಕಾಗುತ್ತದೆ. ಆವಾಗ ಮಾತ್ರ ಅದು ಒಂದು ಪ್ರಮಾಣಭೂತ ಆಭರಣವಾಗಿ ರೂಪುಗೊಳ್ಳುತ್ತದೆ. ಅಂಥ ಕುಶಲಿಯಾದ ಸರ್ವಜ್ಞಾನಿಯ ಮುಂದೆ ಜನರು ಅವಿವೇಕಿಗಳಾಗಿ ಅರ್ಥವಿಲ್ಲದೆ ಮಾತಾಡಿ ಹೇಗೆ ಮೂರ್ಖರಾಗುತ್ತಾರೆ. ರಚನೆಯ ಪರಿವರ್ತನಾಶೀಲತೆ ವಿಶ್ವಕರ್ಮ ತತ್ವಜ್ಞಾನದ ಮುಖ್ಯ ಶಕ್ತಿ. ಮನುಷ್ಯನಾದವನೂ ಹಾಗೆ. ಸಾಧನೆ ಮತ್ತು ವೇದನೆಗಳ ಮೂಲಕವೇ ಪರಿಪೂರ್ಣತ್ವದ ಕಡೆಗೆ ಸಾಗಬೇಕು ಎಂಬುದು ಇಲ್ಲಿನ ಹಂಬಲ.

೨೦

ನಮ್ಮ ನುಡಿಯೆಂದರೆ ನಾಲಗೆ ಹೋದೀತು
ಚೆನ್ನಯ್ಯನವರ ಪ್ರಸಾದವೆ ಗತಿಯೆಂದು
ಬಿನ್ನಯಿಸಿ ಹೇಳಿದ ವಚನವು
ಓಂಕಾರದ ಕಣ್ಣು ಮೂರುಳ್ಳವರು ಕೇಳಿ, ಬಸವಣ್ಣ

ತಾತ್ಪರ್ಯ : ಸಿಡಿಲಂತೆ ಮಾತಾಡಿದರೂ ಮೌನಯ್ಯನವರ ಸ್ವಭಾವ ನಿಗರ್ವಿರೂಪದ್ದು ಎನ್ನುವುದಕ್ಕೆ ಈ ಪದ್ಯವೇ ಸಾಕ್ಷಿ. ಚನ್ನಯ್ಯ ಅಂದರೆ ಹನ್ನೆರಡನೆ ಶತಮಾನದ ಮಾದಾರ ಚನ್ನಯ್ಯನು ಹೊಲೆಮಾದಿಗರಿಗೆ ಅಕ್ಷರಜ್ಞಾನ ವರ್ಜ್ಯ ಎನ್ನುವ ಲೋಕದೊಳಗೆ ಅದನ್ನು ಸುಳ್ಳು ಮಾಡುವಂತೆ ಅನುಭಾವ ಪಥದಲ್ಲಿ ನಡೆದವನು. ಅಂತಹ ಮಾದರ ಚನ್ನಯ್ಯನವರ ಅನುಗ್ರಹದಿಂದ ನಾನು ಜ್ಞಾನಿಯಾದೆನು. ಅವರು ತೋರಿದ ಮಾರ್ಗದಲ್ಲಿ ನಡೆದು ಸತ್ಯಶರಣನಾದೆನು. ನಾನು ಹೇಳಿದ ವಚನಗಳು ನನ್ನವು ಎಂದರೆ ನನ್ನ ನಾಲಿಗೆ ಕೆಟ್ಟೀತು, ಆದ್ಯ ವಚನಕಾರರ ಅನುಭಾವ ಜಗತ್ತಿನ ಪ್ರೇರಣೆಯಿಂದ ಭಿನ್ನವಿಸಿದ ನನ್ನ ಮಾತುಗಳನ್ನು ಓಂಕಾರ ಸ್ವರೂಪಿಗಳು ದಿವ್ಯಜ್ಞಾನಿಗಳಾದ ನಿಜಶರಣರು ತಿಳಿದು ನೋಡುವುದು, ಎನ್ನುವಲ್ಲಿ ಮೌನಯ್ಯನವರ ವ್ಯಕ್ತಿತ್ವ ನಿರಸನ ಗುಣವನ್ನು ನೋಡಬಹುದು. ಅಹಂ ಅಳಿದ ಭಾವ ಸಾಧಕನದಾಗಿರಬೇಕು.

೨೧

ಏಳೇಳು ಕೋಟಿ ತಪ್ಪು ಮಾಡಿದೆ ಕೀಳು ನಾನಯ್ಯ
ಗರ್ತೆಲ್ಲ ಪ್ರಭುರಾಯಾ, ತೋಳ ಮರಿಗಳ ಹಿಡಿದಂತೆ
ಏಳೇಳು ಭವಕೆ ಬಿಡದಿನ್ನು ನೀನೆನ್ನ
ಜಿಹ್ವೆಯ ಮೇಲೆ ಇರಬೇಕು ಎಂದಿನ್ನು
ಭಾಳಾಕ್ಷ ನಿಮಗೆ ನಮೋ ನಮೋ ಎಂದೆ, ಬಸವಣ್ಣ

ತಾತ್ಪರ್ಯ : 'ನಾ' ಎಂಬ ಅಹಂಭಾವ ಅಳಿವ ಪರಿ ಇಲ್ಲಿನದು. ಈ ಭವಕೆ ಬಂದು ಅಜ್ಞಾನದಿಂದಾಗಿ ಅನಂತ ತಪ್ಪುಗಳನ್ನು ಮಾಡಿರುವೆ. ಶುಷ್ಕತತ್ವ ಸಿದ್ಧಾಂತಗಳ ಗೊಡವೆಯಲ್ಲಿ ನನ್ನ ನಾನು ಮರೆತಿರುವೆ. ಜ್ಞಾನರೂಪಿಯೂ ಗುರುಸ್ವರೂಪಿಯೂ ಆದ ಪ್ರಭುರಾಯನೇ ಇನ್ನಾದರೂ ನನ್ನನ್ನು ಉದ್ಧರಿಸು. ಹೇಗೆಂದರೆ ತೋಳ ತನ್ನ ಆಹಾರದ ಅಗತ್ಯಕ್ಕಾಗಿ ಆಡು ಮತ್ತು ಕುರಿಮರಿಗಳನ್ನು ಬಿಗಿಯಾಗಿ ಹಿಡಿದುಕೊಳ್ಳುವಂತೆ, ಏಳೇಳು ಭವದ ಕರ್ಮಪಾಶಕ್ಕೆ ಒಡ್ಡಿಕೊಳ್ಳದಂತೆ ನನ್ನನ್ನು ಅಕ್ಕರೆಯಿಟ್ಟು ಹಿಡಿದು ನಿಲ್ಲಿಸುವುದಲ್ಲದೆ ಸದಾ ನನ್ನ ನಾಲಿಗೆ ಮೇಲೆ ನೆಲೆಸಿ ಸನ್ಮಾರ್ಗಿಯಾಗಿಸು. ಸುವಚನ ನುಡಿಸು, ಭಾಳಾಕ್ಷನಾದ ಹರನೆ ನಾ ನಿನಗೆ ನಮೋ ಎಂದು ಬೇಡುವೆ.

೨೨

ಓದಿ ಹೇಳುವ ಹಾದಿಯ ಮಾತಲ್ಲ
ಸಾಧನದಿಂದ ಸಾಧಿಸಿ ಹೇಳಿದ
ಪರಬ್ರಹ್ಮದ ಭೇದವ ಕೊಂಡು ಧರೆಗಿಳಿದ
ಮರ್ತ್ಯದೊಳಗಣ ಸಾಧನವುಳ್ಳ ಹಿರಿಯರು
ಮಾನ್ಯರು ಭೇದಿಸಿ ನೋಡಿ ಇದರೊಳಗೆ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಮತ್ತೆ ಮತ್ತೆ ತನ್ನ ನಿಜರೂಪವನ್ನು ಒತ್ತಿ ಹೇಳಲು ಪ್ರಯತ್ನಿಸಿದ್ದನ್ನು ಕಂಡಾಗ ಬಹುಶಃ ಅವರ ಜ್ಞಾನ ಹಾಗೂ ಅವಧೂತ ವ್ಯಕ್ತಿತ್ವದ ಬಗ್ಗೆ ಕೆಲವರು ಅನುಮಾನಿಸಿರಬಹುದು, ಅವಮಾನಿಸಿರಬಹುದು. ಹೀಗೆ ತನ್ನ ಕುಲ, ಜಾತಿ, ಸಾಧಿಸಿದ ಬ್ರಹ್ಮಜ್ಞಾನದ ಬಗ್ಗೆ ಕುಹಕಗಳಿಗಷ್ಟೇ ಅಲ್ಲ, ಜ್ಞಾನವೃದ್ಧರೂ, ಪಂಡಿತರೂ ಆದ ಮಂದಿಗೆ ತನ್ನನ್ನು ಅರ್ಥಮಾಡಿಕೊಳ್ಳುವ ಮತ್ತು ಪರೀಕ್ಷಿಸುವ ಸವಾಲು ಹಾಕುತ್ತಾರೆ.

೨೩

ಕಾಶಿಯ ಪರ್ಯಂತ ತ್ರಾಸಿಕ್ಕಿ ತೂಗಿದೆನು
ಸೀಸವ ಹಾಕಿ ಊದಿದೆನು
ಲೇಸು ಲೇಸೆಂಬ ನುಡಿಯಿಲ್ಲ
ಶಾಸ್ತ್ರದ ಸಟೆಗಂಜಿ ವಾದಿಸುವ ನರರಿಗಂಜಿ
ದೇಶಾಂತರ ಪೋದರು ಪ್ರಭುದೇವರು, ಬಸವಣ್ಣ

ತಾತ್ಪರ್ಯ : ಹೆಜ್ಜೆ ಹೆಜ್ಜೆಗೂ ತನ್ನ ತಾನು ಅರಿವ, ತನ್ನನ್ನು ಒರೆಗೆ ಹಚ್ಚಿಕೊಳ್ಳುವ ಈ ಗುಣ ಪಾಂಚಾಳರಿಗೆ ಕಸುಬು ಕಾರಣದಿಂದ ರಕ್ತಗತವಾಗಿ ಬಂದಿರುವಂಥದ್ದು. ಅಂಥ ಪ್ರಾಮಾಣಿಕ ಸಾಧನೆಯನ್ನು ಈ ಜಗತ್ತು ಗುರುತಿಸದಿರುವುದಕ್ಕೆ ಮೌನೇಶ್ವರರು ಬೇಸರ ವ್ಯಕ್ತಪಡಿಸುತ್ತಾರೆ. ಕಾಶಿಯಿಂದ ಹಿಡಿದು ದೇಶಾದ್ಯಂತ ತಕ್ಕಡಿ ಹಿಡಿದು ತೂಗಿ, ಸತ್ಯ ಶುದ್ಧ ಕಾಯಕ ಮಾಡಿದರೂ ಲೇಸೆನ್ನುವ ಮಾತನ್ನು ಒಬ್ಬರೂ ಹೇಳಲಿಲ್ಲ. ಇಂತಹ ಧರ್ಮಲಂಪಟರ, ಶುಷ್ಕ ಪಂಡಿತರ ವಿತಂಡವಾದಿಗಳ ಗೊಡವೆ ಬೇಡವೆಂದು ಜ್ಞಾನನಿಧಿಯಾದ ಅಲ್ಲಮಪ್ರಭುವೇ ಬೇಸರಿಂದ ದೇಶಾಂತರ ಹೋದಾಗ ನನ್ನಂಥವನ ಪಾಡು ಏನು ದೊಡ್ಡದು. ಕಾಯಕವು ಸಾಮೂಹಿಕ ಸತ್ಯದ ಗುಣವನ್ನು ಬೆಳೆಸಿದರೆ ಶಾಸ್ತ್ರ ವೈಯಕ್ತಿಕ ನೆಲೆಯಲ್ಲಿ ಸುಳ್ಳಿನ ಸರಮಾಲೆಯನ್ನು ಹೆಣೆದು ಸಮುದಾಯವನ್ನು ಶೋಷಿಸುತ್ತದೆ. ವೃತ್ತಿಗಳು ಸ್ವಾವಲಂಬಿ ಹಾಗೂ ಸಶಕ್ತ ಸಮುದಾಯದ ಪ್ರತೀಕಗಳೇ ಹೊರತು ಅವು ಕೀಳಲ್ಲ ಎನ್ನುವುದು ಇಲ್ಲಿನ ಭಾವ.

೨೪

ದೇಶ ದೇಶವ ತಿರುಗಿ ಬೇಸತ್ತೆನೆಲೆ ಗುರುವೆ
ಈಶ್ವರನ ಪಾದ ಅರುಹು ಎನಗೆ ಅಂದರೆ
ತ್ರಾಸಿನಲ್ಲಿ ಮನವಿಟ್ಟು ನೋಡೆಂದ, ಬಸವಣ್ಣ

ತಾತ್ಪರ್ಯ : ನನ್ನ ನಾನು ಅರಿತುಕೊಳ್ಳಲು ಗುರುವಿನ ಅನುಗ್ರಹಕ್ಕಾಗಿ ದೇಶ ದೇಶವ ತಿರುಗಿ ಸಾಕಾದೆನು, ನನಗೆ ಈಶ್ವರನ ಅನುಗ್ರಹವನ್ನು ಕರುಣಿಸಿ ಅರಿವುಳ್ಳವನನ್ನಾಗಿಸು ಎಂದರೆ ನಿನ್ನ ಕೈಯ ತ್ರಾಸಿನೊಳು(ತಕ್ಕಡಿ) ನೋಡು ಎಂದನು. ಅಂದರೆ ಸಮಭಾವ, ಸಮಪ್ರಜ್ಞೆ, ಸಂಯಮ, ಸ್ವಾನುಭವ ಇವು ಆತ್ಮಸಾಕ್ಷಾತ್ಕಾರದ ಮೆಟ್ಟಿಲುಗಳು. ತನ್ನಲ್ಲೇ ಇರುವ ಇಂಥ ದೈವಪ್ರಜ್ಞೆಯನ್ನು ಅರಿಯದೆ ದೇವನನ್ನು ಹುಡುಕುತ್ತ ಊರೂರು ಸುತ್ತುವುದು ವ್ಯರ್ಥ.

೨೫

ಇಚ್ಛೆಯಿಚ್ಛೆಗೆ ಮಾತನಾಡುವ ಹುಚ್ಚರ ಮಾತಲ್ಲ
ನಿಶ್ಚಿಂತದಿಂದ ನಿಜದಿಂದ ಪರಬ್ರಹ್ಮ
ದಚ್ಚ ವರಿಕಲ್ಲು ಪಿಡಕೊಂಡು ಬಂದೀನಿ
ಶಿವಶರಣರೇ ಹಚ್ಚಿ ಒರೆಗಳ
ಮೇಲು ದಾರಿಗಳ ತೋರಿದರೆ
ಮೆಚ್ಚಿ ನಿಮ್ಮ ಪಾದಕ್ಕೆರಗುವೆ
ಎಂದನು ಕಕ್ಕಯ್ಯನ ಪ್ರಸಾದಿ, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ಜ್ಞಾನ ಸಾಧನೆಯನ್ನು ಸಹಿಸದ ಮರ್ತ್ಯದ ಜನ ಮನಸೋ ಇಚ್ಛೆ ಹಗುರವಾಗಿ ಮಾತನಾಡಿರಬಹುದು. ಅಂಥ ಹೊತ್ತಲ್ಲಿ ಮನಸಿಗೆ ಬಂದಂತೆ ಮಾತನಾಡುವ ಹುಚ್ಚರೇ ಕೇಳಿರಿ, ನಾನು ಅಲ್ಲಮರಾಯನ ಅನುಗ್ರಹದಿಂದ ಎಲ್ಲ ಪರೀಕ್ಷೆಗೆ ಒಳಗಾಗಿ ನಿಶ್ಚಿಂತ ನಿಜಜ್ಞಾನಿ ಪರಬ್ರಹ್ಮ ಸ್ವರೂಪನಾಗಿ ಬಂದಿದ್ದೇನೆ. ಪರಿಪೂರ್ಣನಾಗಿದ್ದೇನೆ. ಬಂಗಾರ(ಅಚ್ಚ)ದಷ್ಟು ಪರಿಶುದ್ಧ ಒರೆಗಲ್ಲಿನಷ್ಟು ಸ್ವವಿಮರ್ಶಕನಾಗಿ ನನ್ನನ್ನೆ ನಾನು ತಿಳಿದುಕೊಂಡವ. ನಾನು ಅಹಂಕಾರಿಯಲ್ಲ, ಬೇಕಾದರೆ ಸತ್ಯಶಿವಶರಣರು ನನ್ನನ್ನು ಇನ್ನೂ ಪರೀಕ್ಷಿಸಿರಿ. ದೋಷವಿದ್ದರೆ ತಿದ್ದಿ ದಾರಿ ತೋರಿ ಸಾಧನೆ ಮಾರ್ಗಕ್ಕೆ ಹಚ್ಚಿದರೆ ಅಂಥವರನ್ನು ಮೆಚ್ಚಿ ಅವರ ದಿವ್ಯ ಪಾದಕ್ಕೆರಗುವೆ. ನಾನು ಮಹಾಶಿವಶರಣ ಕಕ್ಕಯ್ಯನ ವರಪ್ರಸಾದಿ ಅಂದರೆ ಅವರ ಅನುಗ್ರಹಕ್ಕೆ ಪಾತ್ರನಾದವನು. ಅವರ ಅನುಭಾವಮಾರ್ಗಿ ಎಂದು ಆತ್ಮವಿಶ್ವಾಸದ ಮಾತನ್ನು ಮೌನೇಶ್ವರರು ಹೇಳುತ್ತಾರೆ.

೨೬

ತಾಯಿ ತಂದೆಗಳ ಉಳ್ಳರೆ ನಾನಿತ್ತ ಬರುವೆನೆ
ಆರಾರು ಕಾಣದ ಅಧಮನು, ಅಲ್ಲಮರಾಯನ
ನ್ಯಾಯ ತರುವಂಥ ನರರುಂಟೆ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಜಾತನಾಗಿಯೂ ಅಜಾತನಾಗ ಬಯಸಿದವರು. ಅನಾದಿ ಅನಂತರಾದವರು. ಅಹಂಕಾರ ಹುಟ್ಟಿಸುವ ಹುಟ್ಟಿನ ಎಲ್ಲ ಕುರುಹುಗಳನ್ನು ನೀಗಿ ಶೂನ್ಯತ್ವದ ಕಡೆಗೆ ಚಲಿಸುವುದು ಅನುಭಾವಿಗಳ ಮುಖ್ಯ ಗುರಿ. ಕುರುಹು ಹಿಡಿದು ಅರಿವು ಆಚರಿಸಿ ಕುರುಹನ್ನೇ ವಿಸರ್ಜಿಸುವುದು ಅಲ್ಲಮನಂಥ ಅನುಭಾವಿಗಳ ತಾತ್ವಿಕ ನೆಲೆ. ಅಲ್ಲಮನ ಅನುಭಾವ ಮಾರ್ಗವನ್ನು ಅನುಸರಿಸಿದ ಮೌನೇಶ್ವರರು ತಂದೆ ತಾಯಿ ಬಂಧು ಬಳಗದ ಕುಲಗೋತ್ರಗಳಂತಹ ಕುಲಮದದ ಹಂಗನ್ನು ಮೀರಿ ವಿಶ್ವಮಾನವರಾದವರು. ನಿಶ್ಚಿಂತರಾದವರು.

೨೭

ಬಡಿಗ ಕಮ್ಮಾರರಿಗೆ ತುಡುಗುತನ ಸಲ್ಲದು
ಬಡವರಿಗೆ ಬಡಾಯಿ ಸಲ್ಲದು, ಊಳಿಗದ
ಒಕ್ಕಲು ಹೇಳಿದಂತೆ ಇರಬೇಕು
ಆಳಾಗಿ ಮುಂದೆ ನಡೆವುದು
ಎನಗೊಂದು ತಾನಾಗಿ ಹೋಗುವುದು
ಮೋನಯ್ಯನ ಮಾತು ಚಾಣದ ಹದನಂತೆ
ಜ್ಞಾನವುಳ್ಳವರು ತಿಳುಕೊಳ್ಳಿ, ಬಸವಣ್ಣ

ತಾತ್ಪರ್ಯ : ಸೃಷ್ಟಿಕರ್ತರು, ಸೃಷ್ಟಿನಿಯಾಮಕರು ಆದ ಬಡಿಗ ಕಮ್ಮಾರರಿಗೆ ಕೆಲಸಗಳ್ಳತನ ಅಥವಾ ಮೈಗಳ್ಳತನ ಸಲ್ಲದು. ಕಾರಣ ದೇವ ಶಿಲ್ಪಿಗಳಾದವರಿಗೆ ಸಮಾಜ ದೊಡ್ಡ ಗೌರವ ನೀಡಿದೆ. ಜ್ಞಾನ ಮತ್ತು ಕೌಶಲ್ಯಗಳಲ್ಲಿ ಪರಿಣಿತರಾದ ಪಾಂಚಾಳರು ಸಮಾಜಕ್ಕೆ ಮಾದರಿಯಾಗಬೇಕು. ಬಡವರಿಗೆ ದೊಡ್ಡಸ್ತಿಕೆ, ಆಡಂಬರ, ಊಳಿಗದ ಆಳಿಗೆ ಮೋಸ, ವಂಚನೆ ಮಾಡುವುದು ತರವಲ್ಲ. ನಂಬಿಕೆದ್ರೋಹ ಮತ್ತು ಆಡಂಬರ ಎರಡೂ ಮನುಷ್ಯ ಕುಲವನ್ನು ಭ್ರಷ್ಟಸ್ಥಿತಿಗೆ ಒಯ್ಯುತ್ತವೆ. ಶುದ್ಧ ಕಾಯಕ ಎನ್ನುವುದು ಒಂದು ಸಮಾಜದ ಪ್ರಗತಿ ಹಾಗೂ ಸ್ವಾವಲಂಬನೆಯ ಪ್ರತೀಕ. ಅದು ಭ್ರಷ್ಟವಾದರೆ ಅಂಥ ಸಮಾಜ ರೋಗಪೀಡಿತವಾಗುತ್ತದೆ. ದೈವದ ಒಕ್ಕಲಾಗುವುದೆಂದರೆ ತನ್ನ ತಾನರಿವ ಬಗೆಯದು, ಪರಮಜ್ಞಾನಿಯಾಗುವುದು. ಇದು ಸುಳ್ಳಲ್ಲ. ಮೌನಯ್ಯನವರ ಮಾತು ಚಾಣದಷ್ಟು ಹರಿತ, ವಿವೇಕಿಗಳಾದವರು ತಿಳಿಕೊಳ್ಳಿ, ಅವಿವೇಕಿಗಳಾದವರು ಬಿಡಿ ಎನ್ನುವ ನಿರ್ಭಿಡೆಯ ಮಾತು ಇಲ್ಲಿನದು.

೨೮

ಮದವಳಿಯದೆ ಮತ್ಸರವಳಿಯದು
ಹಿತಕ್ಕೆ ಬಂದವರು ಹಿರಿಯರು
ಹೀನತನಕ್ಕೆ ಬಂದವರು ಕಿರಿಯರು
ಹೇನು ಸೀರು ಕೂರಿ ಸರಿಯಂದ ಆನಂದ ಮೂರ್ತಿಗೆ
ಆನೆ ಕುದುರೆ ದಂಡು ದಳ ತಮಗಿರಲಿ
ಬೋನ ಕುಂಚಿಗಿ ಕೋರಿ ನಮಗಿರಲಿ
ಎನಗೊಂದು ತಾನೆಯಾಗಿರಲಿ
ಮೋನಯ್ಯನ ಮಾತು ಜಾನದ ಹದನದಂತೆ
ಜ್ಞಾನವುಳ್ಳವರು ತಿಳುಕೊಳ್ಳಿ, ಬಸವಣ್ಣ

ತಾತ್ಪರ್ಯ: ಮದ ಮತ್ಸರಗಳು ಮನುಷ್ಯ ಸಮಾಜದ ಅಧಃಪತನಕ್ಕೆ ಕಾರಣವಾಗುತ್ತವೆ. ಅಸಹಿಷ್ಣುತೆಗೆ ದಾರಿಯಾಗುತ್ತವೆ. ನಾನಾ ಕಾರಣಗಳಿಗಾಗಿ ಮನುಷ್ಯನಲ್ಲಿ ಹುಟ್ಟುವ ಈ ದುರ್ಗುಣಗಳನ್ನು ಅಳಿಯದ ವಿನಃ ಮನುಷ್ಯ ಮನುಷ್ಯನಾಗಲಾರ. ಮದವಳಿಯದೆ ಮತ್ಸರ ಅಳಿಯದು. ಮತ್ಸರ ಅಳಿಯದಿದ್ದರೆ ಅರಿವು ನಿಲುಕದು. ಅಹಂಕಾರ ಮತ್ತು ಅಸೂಯೆಗಳು ಆತ್ಮಜ್ಞಾನದ ವೈರಿಗಳು, ಇಂಥ ಅವಿವೇಕಿ ಮನುಷ್ಯರನ್ನು ಹಿತದಿಂದ ತಿದ್ದುವವರು ಹಿರಿಯರಾದರೆ, ಕೆಡಿಸುವವರು ಕಿಡಿಗೇಡಿಗಳು. ಪರಮಾತ್ಮನಾಗುವುದೆಂದರೆ ಎಲ್ಲ ವಾಸನೆಗಳನ್ನು ಕಳೆದುಕೊಳ್ಳುವುದು. ಆನೆ ಕುದುರೆ ದಂಡು ದಳ ಇವೆಲ್ಲವೂ ಪ್ರಭುತ್ವದ ಅಹಂಕಾರ ಮತ್ತು ಅಸೂಯೆಯ ಪ್ರತೀಕವಾದರೆ ಬೋನ ಕುಂಚಿಗಿ ಕೋರಿ ಇವು ವೈರಾಗ್ಯ ಹಾಗೂ ಸಾಧನೆಯ ಗುರುತುಗಳು. ಪ್ರೀತಿ, ಸಹನೆ, ತ್ಯಾಗ, ಸಹಿಷ್ಣುತೆ ಇವು ಉತ್ತಮ ಜ್ಞಾನ ಸಮಾಜದ ಆಧಾರಗಳು, ಮೌನೇಶ್ವರರ ಮಾತು ಉಳಿಯ ಹರಿತದಂತೆ ಮೊನಚು. ಅದು ಸುಳ್ಳಾಗದು, ತಿಳಿದವರಿಗೆ ಮಾತ್ರ ಅರ್ಥವಾಗುತ್ತದೆ.

೨೯

ಹಲವು ಶಾಸ್ತ್ರವನೋದಿ ನೆಲೆಗಾನನೆಲೆ ಗುರುವೆ
ಸನ್ಮಾರ್ಗದ ಕುಲಮಾರ್ಗ ಗುರುತ ತಿಳಿಯರು, ಪ್ರಭುರಾಯ
ಬಲ್ಲವರಾರು ಗುರುಪಾದ ಎಂದರೆ
ಕುಲುಮೆಯಲ್ಲಿ ನೋಡು, ಬಸವಣ್ಣ

ತಾತ್ಪರ್ಯ: ಕುಲುಮೆ ಕ್ರಿಯಾಜ್ಞಾನದ ಪ್ರತೀಕ, ಆತ್ಮಜ್ಞಾನದ ರೂಪಕ, ಹಲವು ಶಾಸ್ತ್ರಗಳನೋದಿದರೂ ನಾನಾರೆಂಬುದನ್ನೇ ಅರಿಯದವನಾಗಿದ್ದೇನೆ. ಗುರು ಕರುಣೆ ಬೇಕೆಂದು ಕೇಳಿದರೆ ಕುಲುಮೆಯಲ್ಲಿ ನೋಡೆಂದ ಅಂದರೆ ನಿನ್ನನ್ನು ನೀ ನೋಡಿಕೋ

ನಿನ್ನೊಳಗೆ ನೀ ತಿಳಿದುಕೋ. ಅನ್ಯರ ಅವಲಂಬನೆ ಸಲ್ಲದೆಂದು ಆತ್ಮಜ್ಞಾನದ ಮಾರ್ಗ ತೋರಿದ ಗುರುವಾಗಿ, ಅಂದರೆ ಗುರು, ದೈವ ಮತ್ತು ಅರಿವಿನ ಪಥವಾಗಿ ಕುಲುಮೆ ಬಳಕೆಯಾಗಿದೆ. ಕ್ರಿಯಾಜ್ಞಾನ ಎನ್ನುವುದು ಆತ್ಮಾನುಭವದ ಹೆಗ್ಗುರುತಾಗಿದೆ.

೩೦

ಮೊರೆ ಹೊಕ್ಕರೆ ಕೊಡೆನೆಂಬ ಗರುವ ನಮಗೇಕೆ
ಕರ್ಮ ಪಾತಕಿ ನಾನು ಜಗಕೆಲ್ಲ, ಶಿವಶರಣರ
ಕೆರವಿಗಿಂತ ನಾನು ಕಡಿಮೆಯಯ್ಯ, ಬಸವಣ್ಣ

ತಾತ್ಪರ್ಯ : ಅಹಂಕಾರ ನಿರಸನದ ವಚನವಿದು. ಅನುಗ್ರಹ ಬೇಡಿ ಬಳಿ ಬಂದರೆ ಕೊಡಲಾರೆನೆಂಬ ಗರ್ವಬೇಡ. ಹಲವು ಪಾಪಕರ್ಮಗಳು ಲೇಪಿತವಾದ ಶರೀರ ವಿದು, ಶಿವಶರಣರ ಕೆರವಿಗಿಂತ ಕಡಿಮೆ ನಾನು. ನನ್ನನ್ನು ಉದ್ಧರಿಸೆಂದು ಗುರುವನ್ನು ಮೊರೆ ಹೊಕ್ಕರೆ ಕಾಯದೆ ಕಳಿಸಿದವನ ಹಂಗು ನಮಗೇಕೆ. ಶಿಷ್ಯನ ಕೋರಿಕೆಯನ್ನು ಮನ್ನಿಸದವ, ಮೋಕ್ಷ ಮಾರ್ಗ ತೋರದವ ನಿಜವಾದ ಗುರುವಲ್ಲ.

೩೧

ಗುದ್ದಿನಯ್ಯನವರು ಕೂಳರು
ಸಂಗಯ್ಯನವರು ಬೋಳರು
ಮೋನಯ್ಯನವರು ಕೀಳರು, ಬಸವಣ್ಣ

ತಾತ್ಪರ್ಯ : ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ ಎನ್ನುವ ಬಸವಣ್ಣನ ಮಾತಿನಂತೆ ಗುದ್ದಿನಯ್ಯ ಮತ್ತು ಬೋಳಸಂಗಯ್ಯರಂತಹ ಅನುಭಾವಿಗಳಿಗಿಂತ ನಾನು ಚಿಕ್ಕವ ಎನ್ನುವ ನಿರಹಂಭಾವ ಮೌನೇಶ್ವರರದು.

೩೨

ರಾಶಿ ಹೊನ್ನು ಕೊಟ್ಟರೆ ಎನ್ನ ಆಶೆ ಹಿಂಗುವುದೆ
ಸಾಸಿರ ಮಂದಿ ಸತಿಯರ ಕೊಟ್ಟರೆ
ಹೇಸಲಿಲ್ಲವೋ ಹೊಲೆ ಜನ್ಮ
ಕಾಸನು ಕೊಡಬೇಡ ಹೊಟ್ಟಿಲಿ
ಹುಟ್ಟಿದ ಕೂಸನು ಇರಗೊಡಬೇಡ
ಏಸೇಸು ಕಾಲಕೆ ಶರಣು ಎಂಬೆ, ಬಸವಣ್ಣ

ತಾತ್ಪರ್ಯ : ಹೆಣ್ಣು ಹೊನ್ನು ಇಂಥ ಭೋಗ ಸಾಮಗ್ರಿಗಳಿಂದ ಮನುಷ್ಯನ ಆಸೆ ಹೆಚ್ಚಾಗುತ್ತದೆ ಹೊರತು ಕಡಿಮೆಯಾಗದು. ಹೆಂಡತಿ, ಮಕ್ಕಳು, ಸಂಸಾರದ ಅತಿ

ವ್ಯಾಮೋಹ, ಮಮಕಾರ ಮನುಷ್ಯನ ಜ್ಞಾನದ ದಾರಿಯನ್ನು ಮಸುಕಾಗಿಸುತ್ತದೆ. ಇಂಥ ವ್ಯಾಮೋಹಿಯನ್ನಾಗಿಸದೆ ನನ್ನನ್ನು ನಿರ್ವ್ಯಾಮೋಹಿಯನ್ನಾಗಿಸು ಬಸವಣ್ಣ ಎನ್ನುವ ಆರ್ತಭಾವ ಇಲ್ಲಿದೆ.

೩೩

ದೊರೆತನವ ಕೊಡಬೇಡ ತಿರಿವುದನೆ ಕೊಡು ಎನಗೆ
ಗುರುರಾಯ ನಿಮ್ಮನು ಮರೆಯದೆ ಅನುಗಾಲ
ನೆನೆ ನೆನೆದು ಬಲಗೊಂಬೆ, ಬಸವಣ್ಣ

ತಾತ್ಪರ್ಯ : ನಿರ್ವ್ಯಾಮೋಹಿ ನಿರ್ಮಮಕಾರನಾದ ನನಗೆ ಶ್ರೀಮಂತಿಕೆಯ ಗತ್ತು, ದೌಲತ್ತು, ಅಹಂಕಾರ ಬೇಡ. ಶ್ರೀಮಂತಿಕೆ ಅಹಂಕಾರದ ಸಂಕೇತ. ಆದ್ದರಿಂದ ಜ್ಯೋತಿ ಸ್ವರೂಪನಾದ ಪರಮಜ್ಞಾನಿಯೇ ಲೌಕಿಕ ಸುಖಕ್ಕಿಂತ ಅನುಗಾಲವು ಸಿಗುವ ನಿನ್ನ ಅನುಗ್ರಹದಿಂದ, ನಿನ್ನ ನಾಮಸ್ಮರಣೆಯಿಂದ ನಾನು ಪಾವನನಾಗುವೆ ದೊರೆತನದ ಸುಖಕ್ಕಿಂತ ತಿರಿದುಣ್ಣುವ ಸುಖ ಅಂದರೆ ಪಾರಮಾರ್ಥದತ್ತ ಹೊರಳುವ ಸುಖ ಶ್ರೇಷ್ಠವಾದುದು ಎನ್ನುವ ನಿಜ ಸಂತನ ಮನಸ್ಥಿತಿ ಇಲ್ಲಿದೆ.

೩೪

ಹುಣ್ಣು ಹುಗುಳು ತದ್ದು ಚನ್ನಾಗಿ ಎನಗಿರಲಿ
ಪನ್ನಿಯ ಮಾಡಿ ಕೆಡಿಸಿ ನುಡಿಸಿದರೆ
ಪನ್ನಂಗಧರ ನಿಮ್ಮನು ಅನುಗಾಲ ನೆನೆವೆನು, ಬಸವಣ್ಣ

ತಾತ್ಪರ್ಯ : ಹುಣ್ಣು ಹುಗುಳು(ಬೊಕ್ಕೆ) ತದ್ದು ತಲೆಬೋಳಿಸಿಕೊಳ್ಳುವುದು ಇವು ಮನುಷ್ಯನ ಬಾಹ್ಯೇಂದ್ರಿಯಗಳಿಗೆ ಅಂಟುವ ರೋಗಗಳು. ಹೀಗೆ ಈ ದೇಹವೆಂಬ ಭಾವನೆಯಿಂದ ಬರುವ ರೋಗಗಳನ್ನೂ ಮದ ಮತ್ಸರದಂತಹ ಅಜ್ಞಾನಗಳನ್ನೂ ಕೆಡಿಸಿ ನನ್ನನ್ನು ಸುಜ್ಞಾನಿಯನ್ನಾಗಿಸಿದರೆ ಅನುಗಾಲ ನಿಮ್ಮ ನೆನೆಯುವೆನು ಗುರುವೆ ಎನ್ನುವಲ್ಲಿ ಬಹಿರಂಗ ಶುದ್ಧಿ ಮಾತ್ರ ಸಾಕಾಗದು ಅಂತರಂಗ ಶುದ್ಧಿಯೂ ಬಹುಮುಖ್ಯ ಎಂಬ ನಿಲುವಿದೆ.

೩೫

ಹರಿಯು ಹಂದಿಯಾದದ್ದು ಹರನು ತಿರಿದುಂಡದ್ದು
ಬರೆವ ಬ್ರಹ್ಮನ ಶಿರವು ಅಳಿದದ್ದು ಕೇಳಿ
ಗರುವ ನಮಗೇಕೆ? ಹೊಲೆಯರಿಗೆ
ಶಿವಶರಣರ ಮನೆಯ ಕೆರವಿಗಿಂತ
ಕಡಿಮೆಯಯ್ಯಾ, ಬಸವಣ್ಣ

ತಾತ್ಪರ್ಯ : ಎಲ್ಲರ ಹಣೆಯ ಬರಹವನ್ನು ಬರೆಯುವಂತಹ ಬ್ರಹ್ಮನು ದೇವಾಸುರರ ಕಾಳಗದಲ್ಲಿ ತನ್ನ ಒಂದು ತಲೆಯನ್ನು ಕಳೆದುಕೊಂಡ. ಆ ತಲೆಯನ್ನು ಅಗ್ನಿ ಸಂಸ್ಕಾರ ಮಾಡಲೇಬೇಕು. ಅದಕ್ಕಾಗಿ ಅದನ್ನು ಕತ್ತರಿಸಿದವನೇ ಆ ಸಂಸ್ಕಾರ ನಿರ್ವಹಿಸಬೇಕು. ಇದು ಅಸಾಧ್ಯವೆನಿಸಿದಾಗ ಲೋಕ ರಕ್ಷಣೆಗಾಗಿ ಸಾಗರ ಮಂಥನದಲ್ಲಿ ಬಂದ ಹಾಲಾಹಲವನ್ನು ಕುಡಿದ ನೀಲಕಂಠನೇ ಬ್ರಹ್ಮನ ರಕ್ಷಣೆಗೆ ಬರಬೇಕಾಯಿತು. ಶಿವ ಬಂದು ತಾನೇ ಆ ತಲೆಯನ್ನು ಚಿವುಟಿದ್ದು ಎಂದು ಘೋಷಿಸಿದ. ಕೂಡಲೇ ಆ ಶಿರವು ಶಿವನ ಅಂಗೈಯಲ್ಲಿ ಕುಳಿತುಕೊಂಡಿತು. ಬ್ರಹ್ಮಹತ್ಯಾ ಪಾತಕ ಶಿವನನ್ನು ಆವರಿಸಿತು. ಇದರ ಫಲವಾಗಿ ಶಿವನು ನಗ್ನನಾಗಿ ಕಾಶಿನಗರದಲ್ಲಿ ಭಿಕ್ಷುಕನಾಗಿ ಅಲೆಯಬೇಕಾಯಿತು. ತಲೆ ಚಿಪ್ಪಿನಲ್ಲಿ ರಕ್ತ ಕುಡಿದು ಸ್ಮಶಾನದಲ್ಲಿರಬೇಕಾಯಿತು. ಇದರೊಂದಿಗೆ ಕಂಕಾಳವನ್ನು ಹೊತ್ತು ಸುತ್ತಬೇಕಾಯಿತು. ಹಾಗೆಯೇ ಪ್ರಜಾಪತಿಯು ಸೃಷ್ಟಿಕರ್ಮವನ್ನು ಪ್ರಾರಂಭಿಸಲು ಸ್ಥಳವನ್ನು ಹುಡುಕುತ್ತಾ ಇದ್ದ. ವಿಶಾಲವಾದ ಸಾಗರೋಪಮ ಜೀವಜಲ ಹರಡಿದೆ. ಜೀವ ಪ್ರಾರಂಭಕ್ಕೆ ನೆಲೆಯಾಗಿರಬೇಕಾದ ಭೂಮಿಯು ತಳದಲ್ಲಿ ಅಡಗಿದೆ. ಇದನ್ನು ಗಮನಿಸಿದ ನಿರಾಕಾರನಾಗಿದ್ದ ಪ್ರಜಾಪತಿಯು ಹಂದಿಯ ಆಕಾರವನ್ನು ಪಡೆದುಕೊಂಡು ಆ ಸಾಗರದ ಒಳಹೊಕ್ಕು ತನ್ನ ಕೋರೆಗಳ ಮೇಲೆ ಆ ಭೂಮಿಯನ್ನು ಹೊತ್ತು ತಂದು ಮೇಲೆ ಇರಿಸಿದ. ಈ ಪ್ರಜಾಪತಿಯನ್ನು ಬ್ರಾಹ್ಮಣ ಸಾಹಿತ್ಯ ವಿಶ್ವಕರ್ಮ ಎಂದರೆ ಪುರಾಣ ಹರಿ ಎಂದು ಹೇಳಿದೆ. ಲೋಕೋಪಕಾರದ ದೃಷ್ಟಿಯಿಂದ ದೇವಾನುದೇವತೆಗಳೇ ಈ ರೀತಿಯ ತೊಂದರೆಗಳನ್ನು, ಸಂಕಟಗಳನ್ನು ಅನುಭವಿಸಿದರು ಎಂದಾಗ ನಮಗೆ ಯಾವ ರೀತಿಯ ಹೆಮ್ಮೆ-ಬಿಮ್ಮು ತಾನೆ ಸೂಕ್ತವಾದೀತು? ನಾನು ತೀರಾ ಸಾಧಾರಣನಾದವನು.

೩೬

ಇಂದ್ರನ ಮೈ ಭಗವಾದದ್ದು ಚಂದ್ರನಿಗೆ ಕ್ಷಯವಾಗಿ
ಮುಂದೆ ಭೈರವನ ನಡ ಮುರಿದ ಮೇಲೆ
ನಿಂದೆ ಕುಂದುಗಳು ನಮಗೇಕೆ ಹೊಲೆಯರಿಗೆ
ಶಿವಶರಣರ ಮನೆಯ ಹಂದಿಗಿಂತ ನಾನು
ಕಡಿಮೆಯಯ್ಯ, ಬಸವಣ್ಣ

ತಾತ್ಪರ್ಯ : ಸುರಲೋಕಾಧಿಪತಿಯಾಗಿರುವ ದೇವೇಂದ್ರನೇ ಇಂದ್ರಿಯ ಚಪಲಕ್ಕೆ ಸಿಲುಕಿ ಅಹಲ್ಯಾ ಪತಿಯ ಶಾಪಕ್ಕೆ ತುತ್ತಾಗಿ ಮೈಯ್ಯೆಲ್ಲಾ ಭಗಗಳನ್ನು ಪಡೆದುಕೊಂಡು ಅಪಮಾನಿತನಾದ. ಹದಿನಾರು ಕಳೆಗಳಿಂದ ಸುಶೋಭಿತನಾಗಿರುವ ಚಂದ್ರನು ಆಕಾಶಕ್ಕೆ ಭೂಷಣವೆನಿಸಿಕೊಂಡಿದ್ದರೂ ಗಣಪತಿಯ ಕೋಪಕ್ಕೆ ತುತ್ತಾಗಿ ಕ್ಷಯ-ವೃದ್ಧಿಗಳನ್ನು ಪಡೆದುಕೊಂಡ ಮುಕ್ಕನಾದ. ಭೂಮಿಗೆಲ್ಲಾ ಪಾಲಕನಾಗಿರುವ ಭೈರವನು ತನ್ನ ಅಹಂಕಾರದಿಂದ ಶಪಿತನಾದ. ಹೀಗೆ ಬಹುಮುಖ್ಯರೇ ಕುಂದುಗಳಿಗೆ ಸಿಲುಕಿ ಕೇಡು

ಗಳನ್ನು ಪಡೆದುಕೊಂಡಿರುವಾಗ ಶ್ರೇಷ್ಠತೆಯ ಬಗ್ಗೆ ನಾವು ತಹತಹಿಸುವ ಅವಶ್ಯಕತೆ ಎಲ್ಲಿದೆ? ಕನಿಷ್ಠರಲ್ಲಿ ಕನಿಷ್ಠರು ನಾವು ಎಂದುಕೊಂಡಿರುವುದೇ ಒಳ್ಳೆಯದಲ್ಲವೆ? ಹೀಗಾಗಿ ಎಲ್ಲರಿಗಿಂತ ಕಿರಿಯ ನಾನು ಎನ್ನುವ ಭಾವ ಇಲ್ಲಿನದು.

೩೭

ಅರವತ್ತಾರು ಕೋಟಿ ಹರನ ಗಣಂಗಳ
ಕೆರವಿನೊಳಗಣ ಕಿರುಧೂಳು ಮಾಡೆನ್ನ
ಗುರುರಾಯ ನಿಮಗೆ ನಮೋ ಎಂಬೆ, ಬಸವಣ್ಣ

ತಾತ್ಪರ್ಯ : ಸತ್ಯ ಶರಣರಾದ ಅರವತ್ತಾರುಕೋಟಿ ಹರನ ಗಣಂಗಳ ಕೆರವಿನ ಕಿರುಧೂಳು ಮಾಡೆನ್ನ ಎನ್ನುವಲ್ಲಿ ಮೌನೇಶ್ವರರು ಕಿರಿಯರಲ್ಲಿ ಕಿರಿಯ ಎನ್ನುವ ಕಿಂಕರ ಸ್ವಭಾವವನ್ನು ವ್ಯಕ್ತಪಡಿಸಿದ್ದಾರೆ.

೩೮

ಧೋತ್ರವ ಒಗೆದೇನು ಗೋತ್ರದಲಿ ನಡದೇನು
ಮಾತಿನ ಮೇಲೆ ನಡದೇನು, ಪೋತರಾಜನ
ಕೈಯಲ್ಲಿ ಹೋತಿನ ಮರಿಯನ್ನೇ ಕೊಟ್ಟು
ಆತುಗೊಂಡಿದ್ದರು ಪ್ರಸಾದಕ್ಕೆ
ಆತನಿಗಿಂತ ನಾ ಕಡಿಮೆಯಾದೆನೊ, ಬಸವಣ್ಣ

ತಾತ್ಪರ್ಯ : ಆಳಿನ ಆಳಾದರೂ ನೀತಿ ತಪ್ಪದ ಮತ್ತು ಮಾತು ಮೀರದ ನಡತೆ ನನ್ನದು. ಆದರೂ ಜನ ಪೋತರಾಜನ ಕೈಲಿ ಹರಿಮರಿಯ ಕೊಟ್ಟು ಅವನು ಅದನ್ನು ದುರ್ಗಿಯ ಮುಂದೆ ಬಲಿ ಕೊಟ್ಟು ಕೊಡುವ ಪ್ರಸಾದದ ನಿರೀಕ್ಷೆಯಲ್ಲಿ ಕುಳಿತಿರುತ್ತಾರೆ. ಅಂತಹ ಪೋತರಾಜನಿಗಿಂತ ನಾ ಕಡಿಮೆಯಾದೆನೊ? ಎಂದು ಕೇಳುತ್ತಾರೆ.

೩೯

ಅಚ್ಚ ಶ್ವಾನನು ಬಂದು ಎಚ್ಚೆತ್ತು ವೇದವನೋದಲು
ನಿಕ್ಷೇಪ ನಿಜವ ಪೊಗಳ್ಯಾವು ಅರ್ತಿಯಿಂದ ಒಯ್ಯಿ
ಕೈಲಾಸದ ದಾರಿಗೆ, ನಿಮ್ಮ ಹುಚ್ಚ ಶ್ವಾನಂಗೆ
ಕೃಪೆ ಮಾಡು, ಬಸವಣ್ಣ

ತಾತ್ಪರ್ಯ : ಅಚ್ಚ ಶ್ವಾನನೆಂದರೆ ಪರಮಾತ್ಮನನ್ನು ಶುದ್ಧಾಂಗವಾಗಿ ನಂಬಿ ಆಧ್ಯಾತ್ಮದ ಹುಚ್ಚು ಹಿಡಿಸಿಕೊಂಡವ. ಅಂಥವನಿಗೆ ಆತ್ಮಜ್ಞಾನದ ಎಲ್ಲ ರಹಸ್ಯಗಳೂ ನಿಗೂಢತೆಗಳು ಒಲಿಯುತ್ತವೆ. ಅಂಥವರು ಪರಮಾತ್ಮನನ್ನು ನಂಬಿ ಪರಮಜ್ಞಾನಿಯಾಗಿ ಈ ಲೋಕದ

ನಿಜವನ್ನು ತಿಳಿದವರು. ಅಂತಹ ನಂಬಿಗಸ್ಥ ಮರುಳನಾದ ನನಗೆ ಕೃಪೆ ಮಾಡು, ದಿವ್ಯಜ್ಞಾನವನ್ನು ಕರುಣಿಸು ದೇವರೆ ಎನ್ನುವ ವಿನೀತಭಾವ ಇಲ್ಲಿದೆ.

೪೦

ಮಳೆಗೆ ಮಜ್ಜನವುಂಟೆ, ಬೆಳೆಗೆ ಪ್ರಸಾದವುಂಟೆ
ಸೂರ್ಯದೇವನಿಗೆ ಕೈಯ ಜಲವ ಇಡುವದು
ಅಳವಲ್ಲವಯ್ಯ ಪ್ರಭುದೇವರೆ, ಒಂದು
ಎಳ್ಳಿನಷ್ಟು ಕೃಪೆಯಿರಲಿ, ಬಸವಣ್ಣ

ತಾತ್ಪರ್ಯ : ಮಳೆಗೆ ಜಳಕ ಮಾಡಿಸುವುದು ಬೆಳೆಗೆ ಪ್ರಸಾದ ನೀಡುವುದು ಸೂರ್ಯ ದೇವನಿಗೆ ಅರ್ಘ್ಯ ನೀಡುವುದು ಅಜ್ಞಾನದ ಪರಮಾವಧಿಯಾಗಿದೆ. ಅಜ್ಞಾನಿಯಾದವ ನಿಗೆ ಮಳೆ, ಬೆಳೆ, ಸೂರ್ಯನ ನಿಜ ರೂಪಗಳು ತಿಳಿಯವು, ಪ್ರಭುವೇ ನನ್ನನ್ನು ಅಂಥ ಅಜ್ಞಾನಿಯನ್ನಾಗಿಸದೆ ಸ್ವಲ್ಪವಾದರೂ ಕೃಪೆಯಿಟ್ಟು ಜ್ಞಾನಿಯನ್ನಾಗಿಸು.

೪೧

ಸೂರ್ಯ ಚಂದ್ರರ ಮಾಡಿದ ದೇವನೆ ನೀನು
ಸಾರಿ ಬಂದರೆ ಉಳಿವುದೆ ಎನ್ನಳವಲ್ಲ
ಪ್ರಭುದೇವರೆ ನಿಮ್ಮ ಬಾಲನೆಂಬ ದಯೆ ಸಾಕು, ಬಸವಣ್ಣ

ತಾತ್ಪರ್ಯ : ದಿವ್ಯ ಬೆಳಕನ್ನು ನೀಡುವ ಮತ್ತು ಈ ಲೋಕದ ಚಲನೆಗೆ ಕಾರಣರಾದ ಸೂರ್ಯ ಚಂದ್ರರಂತಹ ದಿವ್ಯರನ್ನು ರೂಪಿಸಿದವ ನೀನೆ. ನಿನ್ನಂಥ ತೇಜೋಮೂರ್ತಿ ನನ್ನ ಬಳಿ ಬಂದರೆ ನಾನು ತಾಳಬಲ್ಲನೆ ಪ್ರಭುವೇ. ನಿಮ್ಮ ಬಾಲಕನೆಂದು ಅನುಗ್ರಹಿಸಿರಿ ಎನ್ನುವ ಕಿಂಕರ ಭಾವ ಇಲ್ಲಿನದು.

೪೨

ಸ್ವಾಮಿಯು ಶಿವನು ಬಂದು ಸಾಮವೇದವ ನುಡಿಯೆ
ಸ್ವಾಮಿ ಪಾದದೊಳಗೆ ಬರದ ಘಾತಕನು, ಸಕಲ
ದಾಸರ ಕಿವಿಯೊಳಗಿನ ಕೀಟಕನು
ತಾಮಸನು ಜಡಮೂರ್ಖನು
ಸ್ವಾಮಿ ಕೃಪೆಮಾಡು, ಬಸವಣ್ಣ

ತಾತ್ಪರ್ಯ : ಅವತಾರಿಯಾದ ಅಲ್ಲಮನು ಶಿವನೊಂದಿಗೆ ಬಂದು ಸುಜ್ಞಾನವನ್ನು ಬೋಧಿಸಿದರೂ ಸ್ವಾಮಿಯ ಅನುಗ್ರಹಕ್ಕೆ ಬರದ ಅಜ್ಞಾನಿಯು ಹುಳುವಿನಂತವನು. ಅಂಥ ಜಡಮತಿಯನಾದ ನನ್ನನ್ನು ಅನುಗ್ರಹಿಸಿ ಕಾಪಾಡು ಎನ್ನುವ ವಿನೀತಭಾವ ಇಲ್ಲಿದೆ.

೪೩

ಅಚ್ಚ ನಿರ್ವಾಣಿಗೆ ಮಕ್ಕಳು ಸಲ್ಲುವವೆ
ಹುಟ್ಟಿದುವೆಲ್ಲ ಹುಳುವೆಂದು, ಮನೆಯೊಳಗೆ
ಅರ್ಕಸಾಲೆ ಸಲುವುದೆ? ಅದರಿಂದ
ಕಕ್ಕಸವಾದೀತು ಜಗಕೆಲ್ಲ, ಧರ್ಮದ
ಭಿಕ್ಷವ ಬೇಡಿ ಉಣಬೇಕು, ಬಸವಣ್ಣ

ತಾತ್ಪರ್ಯ: ನಿಜವಾದ ವಿರಕ್ತನಿಗೆ ಸಂಸಾರ ಮಕ್ಕಳು ಇರುವುದು ತರವಲ್ಲ. ಒಂದು ವೇಳೆ ಮಕ್ಕಳು ಹುಟ್ಟಿದರೆ ಅವನ್ನು ಹುಳುವಿನಂತೆ ಸಾಕಲಾಗದು. ಅನೈತಿಕತೆಯಿಂದಾಗಿ ಜಗವು ಮಲಿನವಾಗುತ್ತದೆ, ನರಕವಾಗುತ್ತದೆ. ಎಲ್ಲರೂ ತಮ್ಮ ತಮ್ಮ ಧರ್ಮದಂತೆ ಜೀವಿಸಬೇಕು. ಸನ್ಯಾಸಿಯು ಸನ್ಯಾಸಿ ಧರ್ಮವನ್ನು ಪಾಲಿಸಬೇಕು. ಇಲ್ಲದಿದ್ದರೆ ಸಮಾಜವು ನೈತಿಕ ಸಮತೋಲವನ್ನು ಕಳೆದುಕೊಳ್ಳುತ್ತದೆ.

೪೪

ಹರನೆ ಕರ್ಮಾರನಾಗಿ ತಿರಿದುಂಡ ಮೇಲೆ
ಧರೆ ಮೂರು ಲೋಕ ಉಳಿಯುವುದೆ
ಗುರುಭಕ್ತನಲ್ಲವೆ ಪ್ರಭುದೇವರು, ಬಸವಣ್ಣ

ತಾತ್ಪರ್ಯ: ಜಗತ್ಕರ್ತನಾದ ಶಿವನೆ ಕರ್ಮಾರನಂತೆ ಆಯಗಾರನಾಗಿ ತಿರಿದುಂಡ ಮೇಲೆ ಇನ್ನು ಜಗತ್ತಿನ ಮಾನವರ ಗತಿಯೇನು, ಮೂರು ಲೋಕದ ಗತಿಯೇನು. ಅನ್ನ ನೀರು ನೀಡಿ ಸಕಲ ಜಗತ್ತನ್ನೆ ಸಲುಹುವ ಕೃಪಾಳುವೇ ತಿರುಕನಾದರೆ ಈ ಜಗತ್ತು ಕುರಿಯಂತಾಗುತ್ತದೆ. ಜನಸಂಖ್ಯಾಸ್ಫೋಟ ಮತ್ತು ಆಹಾರ ಕೊರತೆಯ ಪರಿಣಾಮಗಳನ್ನಿಲ್ಲಿ ಮೌನಯ್ಯನವರು ಹೇಳುತ್ತಿರಬಹುದೆ? ವಿಶ್ವಕರ್ಮನ ಪಂಚಮುಖಗಳಲ್ಲಿ ಮೊದಲನೆಯ ಮುಖದಿಂದ ಉದ್ಭವಿಸಿದ ಮನು ಬ್ರಹ್ಮನೇ ಕರ್ಮಾರ. ಅಂತಹ ಕಾಯಕನಿಷ್ಠ ಕರ್ಮಾರನೇ ತಿರಿದುನ್ನುವಂತಾದರೆ ಸಮಾಜದ ಆರ್ಥಿಕ ವ್ಯವಸ್ಥೆ ಹದಗೆಡುತ್ತದೆನ್ನುವ ವಿಚಾರವಿಲ್ಲಿ ವ್ಯಕ್ತವಾಗಿದೆ.

೪೫

ಹಡಗು ಹರಿಗೋಲ ಮಾಡಿ ಕಡಲೊಳಗೆ ನಡೆಸಿದನು
ಬಡಿಗಿಯೆಂದೆನ್ನ ಗುರುಮೂರ್ತಿ ರಾಜ್ಯದ
ಬಡಾಯಿಗಳೆಲ್ಲ ಸಟೆಯೆಂದ, ಬಸವಣ್ಣ

ತಾತ್ಪರ್ಯ: ಕ್ರಿಯೆ ಮತ್ತು ಜ್ಞಾನದ ಬಲದಿಂದ ಮಯ ಬ್ರಹ್ಮನು(ಬಡಿಗಿ) ಹಡಗು ಹರಿಗೋಲ ಮಾಡಿ ಸಮುದ್ರದ ಮೇಲೆ ನಡೆಸಿದಾಗ ಸ್ವತಃ ಆ ಪರಶಿವನೆ ನನ್ನನ್ನು

ನನ್ನ ಕೌಶಲ್ಯವನ್ನು ಕೊಂಡಾಡಿ ನನ್ನ ಬಡಿಗ ಕುಲವನ್ನು ಹರಸಿದ. ಆದರೆ ಜನ ತಮ್ಮ ಅಜ್ಞಾನದಿಂದ ಅದನ್ನು ಸುಳ್ಳೆಂದರು.

೪೬

ಅಕ್ಕಸಾಲೆ ತಾನಾದ ಅಲ್ಲಮಪ್ರಭುದೇವ
ಇಕ್ಕಳವ ಪಿಡಿದು, ಕೈಯಲ್ಲಿ ಸುತ್ತಿಗೆ ಹಿಡಿದು
ಸೊಕ್ಕಿದವರ ಹಲ್ಲು ಮುರಿಯುತ ಬಂದಾನೆ, ಬಸವಣ್ಣ

ತಾತ್ಪರ್ಯ : ಅಕ್ಕಸಾಲೆ ವೃತ್ತಿ ಸಾಂಪ್ರದಾಯಿಕ ಜ್ಞಾನ ಮತ್ತು ಕೌಶಲ್ಯದ ಪ್ರತೀಕ. ಕ್ರಿಯಾಶೀಲತೆಯನ್ನು ಮರೆತು ಜಗತ್ತು ಜಡವಾದ ಹೊತ್ತಿನಲ್ಲಿ, ವ್ಯಕ್ತಿಗಳು ತನ್ನ ಘನತೆಯನ್ನು ಕಳೆದುಕೊಂಡ ಸಂದರ್ಭದಲ್ಲಿ ಅವತಾರವೆತ್ತಿದ ಅಲ್ಲಮ ಸ್ವರೂಪಿಯಾದ ಮೌನಯ್ಯನವರು ಇಕ್ಕಳ ಸುತ್ತಿಗೆ ಎಂಬ ಹಿಡಿಯುವ ಬಡಿಯುವ ಸಾಧನಗಳ ಮೂಲಕ ಸೊಕ್ಕಿ ಮದವೇರಿದ, ಅಹಂಕಾರವಶರಾಗಿ ಅಜ್ಞಾನದಲ್ಲಿ ಬಿದ್ದಿದ್ದ ಮನುಷ್ಯರ ದುರ್ಗುಣಗಳನ್ನು ಸವರಿ ಸದ್ಗುಣಗಳನ್ನು ಬೆಳೆಸಿ ಅವರನ್ನು ಕಾಯಕ ಜೀವಿಗಳಾಗಿಸಿದ ರೆಂಬುದರ್ಥ. ನಾಶವಾಗುತ್ತಿದ್ದ ಅಕ್ಕಸಾಲಿಯಂಥ ಸೂಕ್ಷ್ಮ ಕುಸುರಿ ಕಸುಬನ್ನು ಪುನರುಜ್ಜೀವನಗೊಳಿಸಿದ ಅಕ್ಕಸಾಲೆಯು, ವಿಶ್ವಕರ್ಮ ಪರಮಾತ್ಮನ ಪಂಚಮುಖಗಳಲ್ಲಿ ಹುಟ್ಟಿದವರಲ್ಲಿ ಒಬ್ಬನಾಗಿದ್ದಾನೆ.

೪೭

ಸೂಕ್ಷ್ಮದ ಸುತ್ತಿಗೆ ದೀಕ್ಷದ ಇಕ್ಕಳ
ಲೋಕ ಪಾವನ ಅಡಿಗಲ್ಲು
ಬ್ರಹ್ಮ ವಿಷ್ಣು ರುದ್ರರು ವಿ
ವೇಕದಿಂದಾದರು ಒಲೆಗುಂಡ, ಬಸವಣ್ಣ

ತಾತ್ಪರ್ಯ : ವಿಶ್ವಕರ್ಮ ಪರಮಾತ್ಮನು ಸೃಷ್ಟಿಕ್ರಿಯೆಗಾಗಿ, ಸರ್ವಶಕ್ತರಾದ ತ್ರಿಮೂರ್ತಿಗಳನ್ನು ಒಲೆಗುಂಡು ಮಾಡಿಕೊಂಡು ಸೂಕ್ಷ್ಮದ ಸುತ್ತಿಗೆ ಎಂಬ ಕುಶಾಗ್ರಬುದ್ಧಿಯಿಂದ ವ್ರತವೆಂಬ ದೀಕ್ಷದ ಇಕ್ಕಳದಲ್ಲಿ ಹಿಡಿದು ಅಜ್ಞಾನವೆಂಬ ಜಡಸ್ವಭಾವದ ಲೋಹವನ್ನು ಲೋಕಪಾವನವೆಂಬ ಪವಿತ್ರ ಅಡಿಗಲ್ಲ ಮೇಲಿಟ್ಟು ಬಡಿದು ಬಗ್ಗಿಸಿ ರೂಪಕೊಟ್ಟ ಕ್ರಿಯಾಜ್ಞಾನದ ರೂಪಕವನ್ನಿಲ್ಲಿ ಕಾಣಬಹುದು. ವಿಶ್ವಕರ್ಮನ ಸೃಷ್ಟಿನಿರ್ಮಾಣ ಕ್ರಿಯೆಯ ವರ್ಣನೆ ಇಲ್ಲಿದೆ. ಪಾಂಚಾಳ ವೃತ್ತಿಗಳು ಹಾಗೂ ವೃತ್ತಿ ಪರಿಕರಗಳು ಇಲ್ಲಿ ಅನುಭಾವಿಕ ಅರ್ಥ ಪಡೆದುಕೊಂಡಿರುವುದು ಗಮನಾರ್ಹ.

೪೮

ಹೇಮತ್ವವುಳ್ಳವರು ಹೆಮ್ಮೆಯಲಿ ಮೆರೆವರು
ಸುಮ್ಮನಿದ್ದವರು ಮೆರೆವರೆ, ಧರ್ಮದ
ಕಮ್ಮಾರನೆಲ್ಲಿ ಮೆರೆವನು, ಬಸವಣ್ಣ

ತಾತ್ಪರ್ಯ : ಹೇಮ(ಬಂಗಾರ)ವುಳ್ಳವರು ಶ್ರೀಮಂತಿಕೆಯ ಹೆಮ್ಮೆಯಲಿ ಮೆರೆಯುತ್ತಾರೆ. ಧನಮದ ಅವರನ್ನು ಹಾಗೆ ಮಾಡಿಸುತ್ತದೆ. ಆದರೆ ಅದೇ ನಿರ್ಗುಣತ್ವ ಪಡೆದವರು ಮತ್ತು ಜ್ಞಾನಿಗಳಾದವರು ಶ್ರೀಮಂತಿಕೆಯ ಸೋಗು ಹಾಕುವುದಿಲ್ಲ. ಹಾಗೆ ಧರ್ಮ ಬುದ್ಧಿಯುಳ್ಳವನೂ ಸುಜ್ಞಾನಿಯೂ ಆದ ಮನುಬ್ರಹ್ಮನು ಬಾಹ್ಯ ಆಡಂಬರಕ್ಕೆ ಬೆಲೆ ಕೊಡುವುದಿಲ್ಲ. ಅವನು ಮಾಯಾ ಮದದಿಂದ ದೂರವಾದವನು.

೪೯

ಪಂಚ ಮಹಾ ಪಂಚಾಳರೆಂದು ವಂಚನೆಯ
ಮಾಡಲಿ ಬೇಡಿ, ಹಂಚಿಕೊಂಡೈತಿ ಸರಿಯಾಗಿನ್ನು
ಮುಂಚೆಂಬುವದೇಕೆ ಅಧಿಕಾರ, ಬಸವಣ್ಣ

ತಾತ್ಪರ್ಯ : ಕ್ರಿಯಾಜ್ಞಾನಿಗಳು ಸೃಜನಶೀಲರೂ ಆದ ಪಂಚಾಳರು; ನಾವು ಸೃಷ್ಟಿ ಕರ್ತರು ಎನ್ನುವ ಗರ್ವದಿಂದ ಅಜ್ಞಾನಕ್ಕೆ ವಶವಾಗಿ ಆತ್ಮವಂಚನೆ ಮಾಡಿಕೊಳ್ಳ ಬೇಡಿರಿ. ಭ್ರಷ್ಟಗೊಳಿಸುವ ಅಧಿಕಾರದ ಆಸೆಗೆ ಬಲಿಯಾಗಿ ನಿಮ್ಮ ಸಮಚಿತ್ತತೆಯನ್ನೂ ಸಮಷ್ಟಿ ಪ್ರಜ್ಞೆಯನ್ನು ಕಳೆದುಕೊಳ್ಳಬೇಡಿರಿ. ಅಧಿಕಾರ ಮದ ಯಾವತ್ತೂ ಮನುಷ್ಯನನ್ನು ರಾಕ್ಷಸನನ್ನಾಗಿಸುತ್ತದೆ.

೫೦

ಅರಿವು ಅತಿಗಳೆದರೆ ಗರುವ ಪರಿಹರಿಸುವ
ಗುರುವು ಬೇರೆಯಯ್ಯಾ ನಿರಾಕಾರ ನೇತ್ರಕ್ಕೆ
ದೊರೆಯಲಿಲ್ಲ, ಬಸವಣ್ಣ

ತಾತ್ಪರ್ಯ : ಮನುಷ್ಯನ ಮದಗಳಲ್ಲಿ ಶ್ರೇಷ್ಠವೆಂದು ಭ್ರಮಿಸುವ ಜ್ಞಾನ ಮದವೂ ಒಂದು. ಇಂಥ ಮದದ ವಿಕಾರಗಳನ್ನು ವಿದ್ವತ್ತಿನ ಗರ್ವವನ್ನು ಮುರಿಯುವ ಗುರುವು ನಿರಾಕಾರನೂ ನಿರ್ಗುಣಿಯೂ ಆದಂಥವನು. ಅವನು ಜ್ಞಾನದ ಒಳ ಕಣ್ಣಿಗೆ ಕಾಣುತ್ತಾನೆ, ಹೊರತು ಗರ್ವದ ಹೊರಗಣ್ಣಿಗೆ ಗೋಚರವಾಗುವುದಿಲ್ಲ.

೫೧

ಸತ್ಯದ ಬೀಜವ ಎತ್ತಿನ ಮೇಲೆ ಹೇರಿಕೊಂಡು
ಎತ್ತುತಲ್ಹಾನೆ ಇಳುಹುತಲ್ಹಾನೆ ಧರ್ಮದ
ತತ್ತ್ವವಕೊಂಡು ಧರೆಗಿಳಿದ, ಬಸವಣ್ಣ

ತಾತ್ಪರ್ಯ : ಬ್ರಹ್ಮಾಂಡದ ಜನರೆಲ್ಲ ಅಜ್ಞಾನದಿಂದಾಗಿ ಅಸತ್ಯದ ಕೂಪದಲ್ಲಿ ಬಿದ್ದು ಹೊರಳಾಡುತ್ತಿದ್ದಾರೆ. ಅದರಿಂದ ಪಾರು ಮಾಡಲು ಸತ್ಯ ಜ್ಞಾನವೆಂಬ ತತ್ವವನ್ನು ಎತ್ತಿನ ಮೇಲೆ ಹೇರಿಕೊಂಡು ಧರ್ಮಗ್ಲಾನಿಯಾದ ಜಾಗದಲ್ಲಿ ಸತ್ಯ ಧರ್ಮದ ತತ್ವಗಳನ್ನು ಬಿತ್ತರಿಸುತ್ತ ಬಂದ ಅವತಾರಿ ಮೌನೇಶ್ವರರಾಗಿದ್ದಾರೆ.

೫೨

ಹರನೆ ಕಮ್ಮಾರನು ವಿಷ್ಣುವೆ ಬಡಿಗನು
ಬಸವಣ್ಣನೆ ಎತ್ತಲ್ಲವೆ, ಈ ಲೋಕದ
ಕತ್ತೆಗಳೇನು ಬಲ್ಲರು, ಬಸವಣ್ಣ

ತಾತ್ಪರ್ಯ : ಕಲಿಯುಗದಲ್ಲಿ ಸತ್ಯ ಧರ್ಮದಂತಹ ಸಾಮಾಜಿಕ ಮೌಲ್ಯಗಳನ್ನು ಪ್ರತಿಷ್ಠಾಪಿಸಲು ಹರನೇ ಕಮ್ಮಾರನಾಗಿ ವಿಷ್ಣುವೇ ಬಡಿಗನಾಗಿ ಬಸವಣ್ಣನೇ ಎತ್ತಾಗಿ ಬಂದದ್ದನ್ನು ಅಜ್ಞಾನಿ ಸ್ವರೂಪಿಗಳೂ ಮಂದಮತಿಗಳೂ ಆದ ಲೋಕದ ಜನ ಅರಿಯದೇ ಹೋದರು.

೫೩

ಆರು ಮಣವನೆ ಹೊತ್ತು ಭೂಮಿಗೆ ಚಿಂತಿಸುವದು
ತಾನುಂಡು ತನ್ನ ಪರರಿಗೆ ಚಿಂತಿಸುವದು
ಅದರಂಥ ಒಡವಿ ಮತ್ತುಂಟೆ ಧರೆಯೊಳಗೆ
ಈತನೇ ಕಾಣಾ ದೇವ ಕುರುವೊತ್ತಿ, ಬಸವಣ್ಣ

ತಾತ್ಪರ್ಯ : ಸೃಷ್ಟಿಕರ್ತನಾದ ಪರಶಿವನು ನಂದಿಯ ಅವತಾರ ತಾಳಿ ಈ ಭೂಭಾರವನ್ನು ಹೊತ್ತದ್ದಲ್ಲದೆ ಇದರ ಆಗು ಹೋಗುಗಳ ಕುರಿತು ಚಿಂತಿಸುತ್ತ, ಜನರ ಅಜ್ಞಾನ ಅಂಧಃಕಾರಗಳಿಗೆ ಕಾರಣ ಹುಡುಕಿ ಪರಿಹರಿಸಿ ಜ್ಞಾನ ಬೋಧ ಮಾಡುವ ಗುರುವಾಗಿ ಬಂದ ಕುರುವೊತ್ತಿ ಬಸವಣ್ಣನೇ ದೇವರು.

೫೪

ಹಸಿವೆಗೆ ಆಹಾರ ಅನ್ನ, ಪಶುವಿಗೆ ತೃಣ ಉದಕ
ಶಿಶುವಿಗೆ ಘೃತ ಕ್ಷೀರ ಕೊಡುವವ
ಬಸವಣ್ಣನಯ್ಯ ಕಲಿಯುಗದಿ, ಬಸವಣ್ಣ

ತಾತ್ಪರ್ಯ : ಆಹಾರಭದ್ರತೆ ಪೌಷ್ಟಿಕ ಆಹಾರ ಎಂದೆಲ್ಲ ಚರ್ಚಿತವಾಗುತ್ತಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಈ ವಚನ ವಿಶಿಷ್ಟವೆನಿಸುತ್ತದೆ. ಹಸಿವು, ಅನ್ನ ನೀರು ಇವು ಮನುಷ್ಯನ ಮೂಲಭೂತ ಅಗತ್ಯಗಳು. ಕಲಿಯುಗದಲ್ಲಿ ಇವುಗಳ ಅಭಾವವಿದ್ದು ಹಸಿವಿಗೆ ಅನ್ನವನ್ನು ಪಶುವಿಗೆ ಹುಲ್ಲನ್ನು ಕೂಸಿಗೆ ಹಾಲನ್ನು ಕೊಡಲು

ಪರಬ್ರಹ್ಮ ಸ್ವರೂಪನಾದ ಬಸವಣ್ಣ ಹುಟ್ಟಿ ಬರುತ್ತಾನೆ. ಸಕಲ ಜೀವಿಗಳನ್ನು ಸಲುಹುತ್ತಾನೆ ಎನ್ನುವ ಕಾಲಜ್ಞಾನದ ಸಂಗತಿ ಇಲ್ಲಿದೆ.

೫೫

ಕುಲಕೋಟಿ ಬ್ರಹ್ಮಾಂಡಕೆ ಸಲಕಿಯ ಪಿಡಿದಿರ್ದ
ಕಲಕಿಗೆ ಗುದ್ದಲಿಯ ಪಿಡಕೊಂಡ ಬಸವಣ್ಣನ
ಮಲಕಿನ ಮಾತು ತಿಳಿಯದು, ಬಸವಣ್ಣ

ತಾತ್ಪರ್ಯ : ಶ್ರಮಸಂಸ್ಕೃತಿ ಒಬ್ಬ ವ್ಯಕ್ತಿ ಹಾಗೂ ಒಂದು ಸಮಾಜದ ಸ್ವಾವಲಂಬನೆಯ ಪ್ರತೀಕ. ಅಂತಹ ಶ್ರಮ ಮತ್ತು ಸಮ ಸಮಾಜದ ಮರುಸ್ಥಾಪನೆಗಾಗಿ ಕಾಯಕ ಯೋಗಿಯಾದ ಬಸವಣ್ಣನ ಪ್ರತಿರೂಪವಾದ ಮೌನಯ್ಯನವರು ಕಲಿಯುಗ ದಲ್ಲಿ ಸಲಕಿ ಗುದ್ದಲಿ ಹಿಡಿದು ಅವತಾರಿಯಾಗಿ ಬರುವ ಬಗೆ ಇಲ್ಲಿದೆ.

೫೬

ಆದಿಯಲಿ ಪರಬ್ರಹ್ಮ ವೇದ ಸಂಪನ್ನ
ನಾದ ಪರಿಪೂರ್ಣ ಬಸವಣ್ಣನ ಭೇದ
ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಪರಬ್ರಹ್ಮನೂ ಪರಿಪೂರ್ಣನೂ ದಿವ್ಯಜ್ಞಾನಿಯೂ ಆದ ಬಸವಣ್ಣ ಈ ಲೋಕೋದ್ಧಾರಕ್ಕಾಗಿ ಜನ್ಮ ಎತ್ತಿ ಬಂದವನು. ಆದರೆ ಅಜ್ಞಾನಿಗಳಾದ ಮಾನವರು ಅದನ್ನು ತಿಳಿಯದೇ ಮೂಢರಾದರು.

೫೭

ಉಕ್ಕಳದ ಕಾವಿಗೆ ಮೆಚ್ಚರು ನಮ್ಮವರು
ಇಕ್ಕಳ ಬೇಕು ನಿಜ ಬೇಕು. ಇದು ನಮ್ಮ
ಅರ್ಕಸಾಲೇನ ಮುಂದೆ ನಡೆಯದು, ಬಸವಣ್ಣ

ತಾತ್ಪರ್ಯ : ಒಲೆಯ ಮೇಲೆ ಹಾಲಿಟ್ಟಾಗ ಉರಿಯ ಒತ್ತಡಕ್ಕೆ ಅದು ಉಕ್ಕುವುದು ಸಹಜ. ಈ ಉಗಿಯು ಕ್ಷಣಿಕ ಮತ್ತು ತಾತ್ಕಾಲಿಕ, ಹಾಗೆ ಅಲ್ಪಜ್ಞಾನಿಯಾದವನು ಕ್ಷಣದ ಆಸೆಗಾಗಿ ಕುದಿದು ಜ್ಞಾನಿಯಂತೆ ವರ್ತಿಸುವುದನ್ನು ಪರಿಪೂರ್ಣಜ್ಞಾನಿಯೂ ಪರಬ್ರಹ್ಮ ಸ್ವರೂಪಿಯೂ ಆದ ಅಕ್ಕಸಾಲೆ ಒಪ್ಪುವುದಿಲ್ಲ. ಇಕ್ಕಳದಿಂದ ಸುಡುವ ಲೋಹವನ್ನು ಹಿಡಿದು ಬಡಿದು ರೂಪಿಸುವಂತೆ ಅಲ್ಪಮತಿಗಳನ್ನು ತನ್ನ ಕ್ರಿಯಾಜ್ಞಾನ ವೆಂಬ ಇಕ್ಕಳದಿಂದ ಹಿಡಿದು ಬಡಿದು ರೂಪಿಸಬಲ್ಲ ಕಲೆಗಾರನ ಕುಲ ಮೌನೇಶ್ವರರದು.

೫೮

ಸೋರುಪ್ಪು ಪಟಕವ ಹಾಕಿ ಮೇಲೆ ಜಾಜವ ತೊಡೆದು
ತೋರುವ ಬಣ್ಣಗಳನೊಪ್ಪ, ಸತ್ಯದ ಭಾವನೆ ಬೇಕು
ಬೆರೆಯ ಬೇಕು ಎಂದನು ನಾಗಲಿಯ ಮಗನು, ಬಸವಣ್ಣ

ತಾತ್ಪರ್ಯ: ಬಹುಶಃ ನೇಕಾರಿಕೆ ಉದ್ಯೋಗವನ್ನು ಈ ವಚನ ಹೇಳುವಂತಿದೆ. ನೇಯ್ದ ಅಥವಾ ನೇಯುವ ನೂಲಿಗೆ ಸೋರುಪ್ಪು, ಪಟಗ ಬಳಸಿ ಬಣ್ಣ ಹಾಕುವ ಕ್ರಿಯೆಯನ್ನು ಕಾಣಬಹುದು. ಬಣ್ಣದ ಬಟ್ಟೆಗಳ ತಯಾರಿಕೆಯ ಸಂದರ್ಭದಲ್ಲಿ ಕೆಂಪು ಬಣ್ಣ (ಕಾವಿ) ನಿಲ್ಲಿಸಲು ಪೂರಕವಾಗಿ ಪೋಟ್ಯಾಸಿಯಂ ನೈಟ್ರೇಟ್ (ಸೋರುಪ್ಪು) ನಂತಹ ರಾಸಾಯನಿಕಗಳನ್ನು ಬಳಸುವ ಕುರಿತು ಅಕ್ಕನಾಗಮ್ಮನ ಮಗನೂ ಚೆನ್ನ ಬಸವಣ್ಣನ ಅವತಾರಿಯೂ ಆದ ಮೌನೇಶ್ವರರು ಹೇಳುತ್ತಾರೆ.

೫೯

ಬಡಿಗ ಮಾಡಿದನೊಂದು ಬೆಡಗಿನ ಮೂರ್ತಿಯ
ಷಡುದರುಶನವೆಲ್ಲ ಅಡಿಮಾಡಿ ನಡೆಸಿದನು
ಒಡೆಯನ ಗುರುತ ತಿಳಿಯರು
ಬಿಡರ್ಯಾಕ ತಮ್ಮ ವೇದ ಶಾಸ್ತ್ರವ, ಬಸವಣ್ಣ

ತಾತ್ಪರ್ಯ: ವಿಶ್ವಕರ್ಮನ ಪಂಚಮುಖಗಳಲ್ಲಿ ಎರಡನೇ ಮುಖದಿಂದ ಹುಟ್ಟಿದ ಮಯ ಬ್ರಹ್ಮನೇ ಬಡಿಗ. ಅಂತಹ ಬಡಿಗ ಮನಮೋಹಕವಾದ ಬೆಡಗಿನ ಮೂರ್ತಿಯೊಂದನ್ನು ಮಾಡುತ್ತಾನೆ. ಬೆಡಗಿನ ಮೂರ್ತಿ ಎಂದರೆ ಹೊಸ ಹಾಗೂ ಕ್ರಿಯಾಶೀಲ ಸಮಾಜವೆಂದು ಅರ್ಥ. ಆ ಮೂಲಕ ವೇದ ಶಾಸ್ತ್ರ ಪುರಾಣಗಳ ಹಂಗಿನಲ್ಲಿ ನಡೆಯುತ್ತಿದ್ದ ಸಾಮಾಜಿಕ ಅಸಮಾನತೆಗಳನ್ನು ಮೌಢ್ಯಗಳನ್ನು ಹೊಡೆದೋಡಿಸುತ್ತಾರೆ. ಅಂದರೆ, ಷಡುದರುಶನವನ್ನೆಲ್ಲ(ಜೈಮಿನಿಯ ಪೂರ್ವಮೀಮಾಂಸೆ, ಬಾದಾರಾಯಣ ಉತ್ತರ ಮೀಮಾಂಸೆ, ಗೌತಮನ ನ್ಯಾಯ, ಕಣಾದನ ವೈಶೇಷಿಕ, ಕಪಿಲನ ಸಾಂಖ್ಯ ಮತ್ತು ಪತಂಜಲಿಯ ಯೋಗ) ತಲೆ ಕೆಳಗು ಮಾಡುವುದೆಂದರೆ, ತರ್ಕ, ಪಾಂಡಿತ್ಯ, ಧರ್ಮ, ಜಾತಿಯೆಂಬ ಹುಸಿ ಸಂಸ್ಕೃತಿಯ ಅಸಮಾನ ನೆಲೆಗಳನ್ನು ಕಿತ್ತು ಜಾತ್ಯಾತೀತ ಹಾಗೂ ಸ್ವತಂತ್ರ ಸ್ವಾವಲಂಬಿ ಸಮಾಜದ ನಿರ್ಮಾಣಕ್ಕೆ ಶ್ರಮಿಸುವುದು. ಅಂಥ ಸೃಷ್ಟಿ ಕರ್ತನಾದ ಗುರು ಮೌನೇಶ್ವರರ ಅನುಗ್ರಹ ಪಡೆದು, ಸುಳ್ಳು ಶಾಸ್ತ್ರಗಳ ಬಿಡಬೇಕು ಎನ್ನುವುದು ಇಲ್ಲಿನ ಭಾವ.

೬೦

ಕುಂಭಿಣಿಯಾಕಾಶದ ಮೇಲೆ ಕಂಭ ಸೂತ್ರವ ಹೂಡಿ
ಎಂಭತ್ನಾಲ್ಕು ಲಕ್ಷ ಜೀವವ ಗೊಂಬಿಯ ಮಾಡಿ ಕುಣಿಸಿದ

ಶಂಭು ಶಂಕರನ ಹೆಸರೇನು ಎಂದರೆ
ಕಮ್ಮಾರನೆಂದು ಕುರುಹು ಹಿಡಿ, ಹಿಡಿಯದಿದ್ದರೆ
ಕಾಡೆಮ್ಮಿಯ ಮಾಡಿ ಕಡಿಸ್ಯಾರು, ಬಸವಣ್ಣ

ತಾತ್ಪರ್ಯ : ಮಯ ಬ್ರಹ್ಮನಾದ ಮನುವು ತನ್ನ ಸೃಷ್ಟಿಶಕ್ತಿಯಿಂದ ಪ್ರಮಾಣ ಬದ್ಧವಾಗಿ (ಕಂಭಸೂತ್ರ) ಈ ಭೂಮಿ ಮತ್ತು ಆಕಾಶದಲ್ಲಿ ಎಂಭತ್ನಾಲ್ಕು ಲಕ್ಷ ಜೀವ ರಾಶಿಗಳನ್ನು ಸೃಷ್ಟಿಸಿ ಸಲುಹಿದ ಪರಮಾತ್ಮನಾಗಿದ್ದಾನೆ. ಅವನನ್ನೇ ಕಮ್ಮಾರನೆಂದು ತಿಳಿ. ತಿಳಿಯದಿದ್ದರೆ ಕಾಡೆಮ್ಮಿಯ ಮಾಡಿ ಕಡಿಸ್ಯಾರು ಎಂಬ ಎಚ್ಚರಿಕೆಯಿದೆ.

೬೧

ಭಕ್ತರ ಭವಿಗಳ ಮಾಡಿ ಕತ್ತೆಯ ಕುದುರೆ ಮಾಡಿ
ಚಿತ್ರಕನಿಟ್ಟ ವಿಪರೀತ ಲೋಕದ
ಚಿತ್ರಪಲ್ಲಟವ ಇದ ನೋಡಿ
ಗೋತ್ರ ಉಳ್ಳವರಿಗೆ ಗೋಮೂತ್ರ ಕುಡಿಸಿದ
ಪ್ರೇತಗಳ ಮಾಡಿ ಕುಣಿಸಿದ ಅಲ್ಲಮನೆಂಬ
ಜ್ಯೋತಿ ಕಾಣಲರಿಯರು, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಬರುವ ಕಾಲಕ್ಕೆ ಸೃಷ್ಟಿಯೆಂಬುದು ಚಲನೆಯನ್ನು ಕಳೆದುಕೊಂಡು ಜಡವಾಗಿತ್ತು. ಕರ್ಮ, ಮೌಢ್ಯ, ಕಂದಾಚಾರಗಳಿಂದ ತುಂಬಿತ್ತು. ಭಕ್ತ ಭವಿಗೂ ಕತ್ತೆ ಕುದುರೆಗೂ ನಿಜ ಮತ್ತು ಭ್ರಮೆಗೂ ವ್ಯತ್ಯಾಸವಿರಲಿಲ್ಲ. ಅಂತ ಹೊತ್ತಲ್ಲಿ ಪರಬ್ರಹ್ಮಸ್ವರೂಪಿಗಳಾದ ಮೌನಯ್ಯನವರು ಅವತರಿಸಿ ಬಹುದೊಡ್ಡ ಸಾಮಾಜಿಕ ಪಲ್ಲಟಕ್ಕೆ ಕಾರಣರಾಗುತ್ತಾರೆ. ಶ್ರೇಷ್ಠರು ಕುಲೀನರು ಎಂದು ಹೇಳಿಕೊಂಡು ಸಾಮಾಜಿಕ ಹಾಗೂ ಧಾರ್ಮಿಕ ಅಸಮಾನತೆಗಳಿಗೆ, ಮೌಢ್ಯ ಮತ್ತು ಕಂದಾಚಾರಗಳಿಗೆ ಕಾರಣವಾಗಿದ್ದವರಿಗೆ ಗೋಮೂತ್ರ ಕುಡಿಸಿ ಬುದ್ಧಿಗಲಿಸಿ ಶುದ್ಧಿ ಮಾಡಿದರು, ಪ್ರೇತಗಳ ಮಾಡಿ ಕುಣಿಸಿ ಅವರ ಅಜ್ಞಾನವನ್ನು ಬಯಲಿಗೆಳೆದ ಅಲ್ಲಮ ಸ್ವರೂಪಿಯೂ ಜ್ಯೋತಿರ್ಮಯ ಆದ ಮೌನೇಶ್ವರರನ್ನು ಜನರು ಅರ್ಥಮಾಡಿಕೊಳ್ಳದೆ ಹೋದರು. ಕಣ್ಣ ಮುಂದಿನ ಬೆಳಕನ್ನು ಅರಿಯದಾದರು ಈ ಲೋಕದ ನರರು.

೬೨

ಮಕ್ಕಳ ಬೇಡಿಕೊಳ್ಳೊ ಮೋನಪ್ಪ ಎಂದರೆ
ಬೇಡಿ ಕೊಂಬಾತನೆ, ಹುಟ್ಟಿದ ಮಕ್ಕಳೆಲ್ಲ

ತಿಪ್ಪಿಯ ಭಾಜನವಾಗಲಿ
ಕೊಟ್ಟ ಸಿರಿ ಮನೆ ಎಲ್ಲ ಬಿದ್ದು ಹೋಗಲಿ
ಸೃಷ್ಟಿಗೀಶ್ವರ ನಿನ್ನ ಮರೆಯದೆ ಬಲಗೊಂಬೆ, ಬಸವಣ್ಣ

ತಾತ್ಪರ್ಯ : ನಿರಾಕಾರ ನಿರ್ಮಯ ನಿರಂಜನನಾದವನಿಗೆ ಮನೆ, ಹೆಂಡತಿ, ಮಕ್ಕಳು, ಸಂಸಾರ ಸಲ್ಲದು. ಮನೆ, ಮಕ್ಕಳು, ಸಿರಿ, ಸಂಪತ್ತು ಇದು ಕ್ಷಣಿಕವಾದದ್ದು. ಆಶಾಶ್ವತ ವಾದದ್ದು ಆತ್ಮಜ್ಞಾನವೊಂದೇ ಮೋಕ್ಷದ ಮಾರ್ಗ. ಅದೇ ನನ್ನ ನೈತಿಕ ಬಲ ಹೊರತು ಬಾಹ್ಯ ಕುರುಹುಗಳಲ್ಲ ಎಂಬುದು ಮೌನೇಶ್ವರರ ಮಾತು.

೬೩

ಕುಲದವರು ಹಿಡಿಯದಿದ್ದರೆ ಹಲವರು ಹಿಡಿಯರೆ
ಹಲವರು ಹಿಡಿಯದಿದ್ದರೆ ಹೊಲೆಮಾದಿಗರು ಹಿಡಿಯರೆ
ಹೊಲೆಮಾದಿಗರು ಎನ್ನ ಹಿಡಿಯದಿದ್ದರೆ
ಹುಲಿ, ಕರಡಿ ಎನ್ನ ಮುರಿಯವೆ? ಮುರಿಯದಿದ್ದರೆ
ಮಲಹರನೆ ನಿಮ್ಮ ಒಡವಿ ಕೆಡುವುದೆ, ಬಸವಣ್ಣ

ತಾತ್ಪರ್ಯ : ಮನುಷ್ಯ ಸಂಘಜೀವಿ. ಸ್ವಾವಲಂಬಿಯಾದರೂ ಕುಟುಂಬ, ಸಮಾಜವನ್ನು ಆಶ್ರಯಿಸಿ ಬದುಕುವಂಥವ. ಯಾರಾದರೊಬ್ಬರೂ ಅವನ ನೆರವಿಗೆ ಇರಬೇಕು. ಅದು ಸ್ವಂತ ಕುಟುಂಬ ಅಥವಾ ಕುಲದವರು ಆಗಬಹುದು, ಊರ ದೈವವಾಗ ಬಹುದು, ಊರ ಹೊರಗಿನ ಹೊಲೆ ಮಾದಿಗರಾಗಬಹುದು. ಯಾರೂ ಆಗದಿದ್ದಾಗ ಕಾಡು ಸೇರಿದರೆ ಹುಲಿ ಕರಡಿ ತಿನ್ನುತ್ತವೆ. ಒಂದು ವೇಳೆ ಅವು ತಿನ್ನದಿದ್ದರೆ ಶಿವನ ಸೃಷ್ಟಿಲೀಲೆಯ ರೂಪವಾದ ಈ ದೇಹವೆಂಬ ಒಡವಿ ಕೇಡುವುದೇ? ಅಜ್ಞಾನಿಯಾಗಿ ಅನ್ಯರ ಆಶ್ರಯ ಹುಡುಕಿಕೊಂಡು ತಿರುಗುವುದಕ್ಕಿಂತ ಶಿವಕಾರುಣ್ಯದಿಂದ ಸುಜ್ಞಾನತ್ವ ಪಡೆದು ಈ ದೇಹವನ್ನು ಸಾರ್ಥಕ ಮಾಡಿಕೊಳ್ಳಬೇಕೆನ್ನುವುದು ತಾತ್ಪರ್ಯ.

೬೪

ಕರಿಯ ಕಲ್ಲನೆ ತಂದು ವರ್ಣ ವರ್ಣನೆ ಮಾಡಿ
ಪರಿಪರಿಯ ದೈವವ ನಿರ್ಮಿಸಿ ನೂರೊಂದು ಕುಲಕೆ
ಕುರುವಿಟ್ಟು ಕೊಟ್ಟ ಪರಬ್ರಹ್ಮ ಕುಲದಲಿ
ಕಿರಿಯನು ಬಂದು ಜನಿಸಿದನು, ಬಸವಣ್ಣ

ತಾತ್ಪರ್ಯ : ವಿಶ್ವಕರ್ಮ ಪರಬ್ರಹ್ಮನ ಕುಲದ ಕಸುಬುಗಳಲ್ಲಿ ಒಂದನ್ನು ಮಾತ್ರ ಮೌನೇಶ್ವರರು ಇಲ್ಲಿ ಹೇಳಿದ್ದಾರೆ. ಶಿಲ್ಪಿಯಾದವನು ದೇವಮೂರ್ತಿಯನ್ನು ಮಾಡಲು

ಕಾಡಿನಿಂದ ಶಿಲೆಯನ್ನು ತನ್ನ ಕಾರ್ಯಾಗಾರಕ್ಕೆ ತರುವ ಸಂದರ್ಭದಲ್ಲಿ ಕ್ಷೇತ್ರಪಾಲನನ್ನು ಆರಾಧಿಸಿ, ಸ್ಥಳೀಯ ಪಾಕೃತಿಕ ಶಕ್ತಿಗಳನ್ನು ಪ್ರಾರ್ಥಿಸಿ ಅವರೆಲ್ಲರ ಅನುಜ್ಞೆಯನ್ನು ಪಡೆದು ಶಿಲೆಯನ್ನು ಸಂಗ್ರಹಿಸಿ ತನ್ನ ಕಾರ್ಯಾಗಾರಕ್ಕೆ ಸಮಂತ್ರಕವಾಗಿ ತರುತ್ತಾನೆ. ತರುವಾಯ ಅದನ್ನು ಶುದ್ಧೀಕರಿಸಿ ಶಿಲ್ಪವನ್ನು ಮಾಡಲು ಅನುವಾಗುವ ರೂಪಕ್ಕೆ ಆ ಕಲ್ಲನ್ನು ಪಡೆದು ಅಣಿಗೊಳಿಸುತ್ತಾನೆ. ಆ ಪ್ರತಿಯ ಧ್ಯಾನ ಶ್ಲೋಕದ ಅನುಸಾರ ಕಾಲಮಾನ ಕ್ರಮದ ಪ್ರಕಾರ ಅದರ ರೇಖಾ ರೂಪವನ್ನು ಶಿಲೆಯ ಮೇಲೆ ಮೂಡಿಸುತ್ತಾನೆ. ಇದನ್ನೆ ಮೌನೇಶ್ವರರು ವರ್ಣ ವರ್ಣನೆ ಎಂದು ಹೇಳಿದ್ದಾರೆ. ಈ ವರ್ಣನೆ ಪ್ರತಿಮಾ ರೂಪಧ್ಯಾನಗಳು ಪ್ರತಿ ದೈವಕ್ಕೂ ಭಿನ್ನವಾಗಿರುತ್ತದೆ. ಅವಕ್ಕೆ ಬೇರೆ ಬೇರೆ ಬೀಜಾಕ್ಷರಗಳು–ಮಂತ್ರಗಳು ಇರುತ್ತವೆ. ಸಾಧಾರಣವಾಗಿ ಹಿಂದೂಗಳಲ್ಲಿ ಜಾತಿಗಳ ಭಿನ್ನತೆಯೊಂದಿಗೆ ಆರಾಧ್ಯದೈವದ ಭಿನ್ನತೆಯೂ ಇರುತ್ತದೆ. ಹದಿನೆಂಟು ಜಾತಿಗಳೆಂಬುದು ಸ್ಪಷ್ಟವೇ ಆಗಿದ್ದರೂ ಪ್ರತಿಜಾತಿಯಲ್ಲಿ ಅನೇಕ ಬಗೆಯ ಗುಂಪುಗಳು ಇರುತ್ತವೆ. ಇವುಗಳ ಸಂಖ್ಯೆ ನಿಜಕ್ಕೂ ಅಪಾರ. ಇದನ್ನು ಮೌನೇಶ್ವರರು ನೂರೊಂದು ಎಂದು ಸಂಕೇತಿಸಿದ್ದಾರೆ. ಆ ಪ್ರತಿಯೊಂದು ಕುಲಕ್ಕೂ ಒಬ್ಬೊಬ್ಬ ಪ್ರತ್ಯೇಕ ದೇವ/ದೇವಿಯರನ್ನು ವಿಶ್ವಕರ್ಮ ಶಿಲ್ಪಿಯೇ ಕೊಟ್ಟಿದ್ದಾನೆ. ಅದನ್ನೇ ಇಲ್ಲಿ ಮೌನೇಶ್ವರರು ಹೇಳಿದ್ದಾರೆ.

ಎಲ್ಲ ಕುಲಗಳಿಗೂ ಗುರುತಾಗಿ ಒಬ್ಬೊಬ್ಬ ದೇವರನ್ನು ಕೊಟ್ಟಿರುವ ವಿಶ್ವಕರ್ಮ ಶಿಲ್ಪಿಯ ವಂಶದಲ್ಲಿ ನಾನು ಬಂದಿದ್ದರೂ ನಾನೇ ಅವರೆಲ್ಲರಲ್ಲೂ ಕಿರಿಯ ಎಂದು ಹೇಳುತ್ತಾ ತಮ್ಮ ಕುಲಮದವನ್ನು ನಿರಾಕರಿಸಿದ್ದಾರೆ.

ಟಿಪ್ಪಿ

ಜಾತಿ ಜಾತಿಗೆಲ್ಲ ಪೋತರಾಜನೆ ಗುರುವು
ಜಾತಿ ಸೂತಕರಹಿತ ವಿಶ್ವಕರ್ಮನ
ಗೋತ್ರ ಕೇಳುವ ಹಾರುವನ ಮೋರೆ ಕಂಡರೆ
ಅಪಶಕುನ ಕಾಣೊ, ಬಸವಣ್ಣ

ತಾತ್ಪರ್ಯ: ಜಾತಿನಿರಸನ ಕ್ರಮ ಇಲ್ಲಿದೆ. ಜಾತಿ ಜಾತಿಗೆಲ್ಲ ಪೋತರಾಜನೇ ಗುರುವು ಎನ್ನುವಲ್ಲಿ ಜಾತಿಯಿಂದ ಶ್ರೇಷ್ಠರೆಂದೆನಿಸಿದ ಬ್ರಾಹ್ಮಣರು ಮನುಷ್ಯ ಜಾತಿಗೆ ಗುರುವಾಗಿದ್ದವರು. ಮೌನೇಶ್ವರರು ಅಂತಹ ಜಾತಿಶ್ರೇಷ್ಠತೆಯ ನೆಲೆಗಳನ್ನೇ ಬುಡಮೇಲು ಮಾಡುತ್ತಾರೆ. ಕೆಳವರ್ಗಕ್ಕೆ ಸೇರಿದ ಉಗ್ರರೂಪಿ ದುರ್ಗಿಯ ಆರಾಧಕ, ಪೋತರಾಜನನ್ನು ಮನುಕುಲದ ಗುರುವಾಗಿಸುವ ಮೂಲಕ, ಜಾತಿಗಳಿಗೆ ನಾಯಕನನ್ನಾಗಿಸುವ ಮೂಲಕ ಭಾರತೀಯ ಜಾತಿ ಪದ್ಧತಿಯನ್ನೇ ಪಲ್ಲಟಗೊಳಿಸುತ್ತಾರೆ. ಇನ್ನೂ ಮುಂದುವರಿದು ಮಡಿ, ಮೈಲಿಗೆ, ಕುಲ, ಜಾತಿ, ಲಿಂಗದ ಹೆಸರಲ್ಲಿ ಇನ್ನೊಬ್ಬರ ಗೋತ್ರ

ಸೂತ್ರ ಕೇಳುವ ಶ್ರೇಷ್ಠರೆಂದೆನಿಸಿದ ಹಾರುವರ ಮುಖ ನೋಡುವುದೇ ಅಪಶಕುನ ಎನ್ನುವ ಮೂಲಕ ಹಾರುವರ ಜಾತಿ ಶ್ರೇಷ್ಠತೆಯ ವ್ಯಸನಗಳನ್ನೆ ಭಗ್ನಗೊಳಿಸುತ್ತಾರೆ.

೬೬

ಅಕ್ಕಸಾಲೆನಾದ ಅಲ್ಲಮಪ್ರಭುರಾಯ
ತೆತ್ತೀಸಕೋಟಿ ದೇವಾದಿ ದೇವತೆಗಳ
ನಿರ್ಮಿಸಿ ಈತ ಕೊಟ್ಟುದಲ್ಲದೆಯಿಲ್ಲ
ಈತ ಕೊಟ್ಟ ಕ್ರಮವೇನು, ಬಸವಣ್ಣ

ತಾತ್ಪರ್ಯ : ಸುಜ್ಞಾನಮೂರ್ತಿಯಾದ ಅಲ್ಲಮನ ಅನುಭಾವದ ಪಥವನರಿತ ಪಾಂಚಾಳ ಕುಲದ ಮೌನೇಶ್ವರರು ಮೂವತ್ಮೂರು ಕೋಟಿ ದೇವಾಧಿದೇವತೆಗಳನ್ನೇ ಲೋಕಕ್ಕೆ ನಿರ್ಮಿಸಿ ಕೊಟ್ಟವರು. ಜಗತ್ತಿನ ಚೇತನ ಅಚೇತನಗಳಿಗೆ ಶಕ್ತಿ ತುಂಬುವ ಮೂಲಕ ಬಯಲನ್ನೇ ಆಲಯ ವಾಗಿಸಿದ ಮಹಾಮಹಿಮರು. ದೇವರೆಂದರೆ ಜಾಗೃತಾವಸ್ಥೆ. ಅಂತಹ. ಚೇತನಾವಸ್ಥೆಯನ್ನು ಜಗಕ್ಕೆ ಕೊಟ್ಟ ಅದರ ದರ್ಶನ ಕ್ರಮದಲ್ಲಿಯೇ ನಿರಂಜನತ್ವದ ಸಿದ್ಧಿಯು ಹುದುಗಿದೆ.

೬೭

ಮಕ್ಕಳೊಂದಿಗನೆಂಬ ಠಕ್ಕೆಯ ಬಿರುದುಂಟು
ಹೊಕ್ಕಳ ಗಂಟು ತನಗುಂಟು
ಭಿಕ್ಷುಕನಲ್ಲ ಬಿರುದಂಕ ಅಲ್ಲಮರಾಯ
ರಕ್ಷಿಸುವ ರಮಣನು, ಬಸವಣ್ಣ

ತಾತ್ಪರ್ಯ : ಮಕ್ಕಳೊಂದಿಗನೆಂಬ ಬಿರುದು ಸೃಷ್ಟಿಕರ್ತನಿಗಿರುವಂಥದ್ದು. ಜಗತ್ತನ್ನು ಸೃಷ್ಟಿಸಿದ ಮೇಲೆ ಜಗತ್ತಿನ ಸರ್ವಚೇತನಗಳೂ ಆತನ ಅನುಗ್ರಹದಲ್ಲೇ ಇರುವುದು ಸುಳ್ಳೇನಲ್ಲ. ಅಂಥವನಿಗೂ ಹಸಿವು ನೀರಡಿಕೆಗಳುಂಟು. ಹಾಗಂತ ಭಿಕ್ಷುಕನಲ್ಲ, ಬಿರುದಂಕನು ಸ್ವಾಭಿಮಾನಿಯು ಆದಂಥವನು.

೬೮

ಅಲ್ಲಮನ ಪಡಿಲೆಂಕ ನಿಲ್ಲದೋಲೆಯ ತಂದಾನೆ
ಬಲ್ಲವರು ನೋಡಿ ಪರಾಮರಿಸಿ ಇದರೊಳಗೆ
ಅಲ್ಲ ಅಹುದೆಂಬ ನಿರ್ಣಯಕ್ಕೆ ಬಲ್ಲವರು ಬನ್ನಿ
ಬೈಲಿಗೆ ಎಂದಿನ್ನು ನಿಲ್ಲದೆ ಶರಣು ಕೊಡುತಾನೆ
ಅಲ್ಲಮನಾ ಮನೆಯ ಪಡಿಲೆಂಕ, ಬಸವಣ್ಣ

ತಾತ್ಪರ್ಯ : ಅಲ್ಲಮನ ಸ್ವಾಮಿನಿಷ್ಠರಾದ ಮೌನೇಶ್ವರರು ಅಲ್ಲಮನ ವಾಣಿಯೆಂಬ ಓಲೆಯ ತಂದಿರುವರು. ತಿಳಿದಂತ ಜ್ಞಾನಿಗಳು ಇದನ್ನು ಪರಾಮರ್ಶಿಸಿ ತಪ್ಪು-ಸರಿಗಳನ್ನು ನಿರ್ಧರಿಸಿರಿ ಎಂದು ಶರಣು ಮಾಡಿ ಹೇಳತೀನಿ ಎನ್ನುವಲ್ಲಿ ಮುಕ್ತ ತಾತ್ವಿಕ ಸಂವಾದದ ಸ್ವರೂಪವನ್ನು ಕಾಣಬಹುದು. ಇದು ಕನ್ನಡದ ದೇಶಿಜ್ಞಾನ ಪರಂಪರೆಯ ಪ್ರತೀಕವಾಗಿದೆ.

೬೯

ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ
ಅರ್ಕಸಾಲೇರ ಒಡಲೊಳಗೆ ಜನಿಸಿ ನಿಂತು ಮರ್ತ್ಯದ
ಲೆಕ್ಕ ಲೆಕ್ಕಕ್ಕೆ ಜಡತಿಯ ಕೇಳಬೇಕೆಂದು ಮರ್ತ್ಯಕ್ಕೆ
ತಕ್ಕಡಿ ತ್ರಾಸು ಹಿಡಿದುಕೊಂಡು ನಿಂತಾತನ ಕೂಡ
ಠಕ್ಕೇನ ಕೆಲಸವು ನಡೆಯದು, ಮರ್ತ್ಯಕೆ
ಬೆಕ್ಕು ಬಂದೈತಿ ಇಲಿ ಜತನ
ಕುಕ್ಕ ಬಂದೈತಿ ಮೊಲ ಜತನ, ಅಂದನು
ಕಕ್ಕಯ್ಯನ ವರ ಪ್ರಸಾದಿ, ಬಸವಣ್ಣ

ತಾತ್ಪರ್ಯ : ಅಕ್ಕನಾಗಲಾಂಬಿಕೆ ೧೧ನೇ ಶತಮಾನದ ಬಸವಣ್ಣನವರ ಅಕ್ಕ. ಆಕೆಯ ಮಗ ಚೆನ್ನಬಸವಣ್ಣ. ಚೆನ್ನಬಸವಣ್ಣ ಮಹಾನ್ ತತ್ವಜ್ಞಾನಿ. ಅಂತಹ ತತ್ವಜ್ಞಾನಿಯ ಸ್ವರೂಪನಾದ ಮೌನೇಶ್ವರರು ತಮ್ಮನ್ನು ಚಿಕ್ಕ ಚೆನ್ನಬಸವಣ್ಣ ಎಂದು ಕರೆದು ಕೊಳ್ಳುವ ಮೂಲಕ ತಮ್ಮ ವಿನಯವನ್ನು ಪ್ರಕಟಿಸಿದ್ದಾರೆ. ಮೌನಯ್ಯನವರು ಪಾಂಚಾಳ ರಾದ ಅರ್ಕಸಾಲೆಯರ ಕುಲದಲ್ಲಿ ಜನಿಸಿ ಬಂದು ಕೈಯಲ್ಲಿ ನ್ಯಾಯದ ತಕ್ಕಡಿ ಹಿಡಿದು ಲೋಕದ ಜನರ ಪಾಪ ಪುಣ್ಯಗಳೆಲ್ಲವನ್ನು ತೂಗಿ ಅಳೆದು ತಪ್ಪಿತಸ್ಥರಿಗೆ ಶಿಕ್ಷೆ ಸಾತ್ವಿಕರಿಗೆ ರಕ್ಷೆ ನೀಡಲು ಬಂದಿರುವರು, ಕಪಟತನ ಯಾರಿಗೂ ಸಲ್ಲದು ಹುಷಾರದಿಂದ ಇರಬೇಕು. ಸಮಾಜದ ಸೌಹಾರ್ದದ ಹೊಲಿಗೆಯನ್ನು ಕತ್ತರಿಸುವ ಅಜ್ಞಾನಯೆಂಬ ಇಲಿಗಳನ್ನು ಹಿಡಿಯಲು ಸುಜ್ಞಾನಿಯೆಂಬ ಬೆಕ್ಕು ಬಂದೈತಿ, ನಿಷ್ಠೆಯ ನಾಯಿ ಬಂದೈತಿ, ಕಾರಣ ಮೊಲ ಜತನ ಎನ್ನುವ ಮೂಲಕ ತಪ್ಪು ಮಾಡಿದವರಿಗೂ ತಪ್ಪು ಮಾಡಬಹುದಾದವರಿಗೂ ಎಚ್ಚರಿಕೆ ನೀಡುತ್ತಾರೆ. ಶರಣ ಡೋಹರ ಕಕ್ಕಯ್ಯನ ಅನುಗ್ರಹಕ್ಕೆ ಒಳಗಾದವರು ಮೌನೇಶ್ವರರು.

೭೦

ಕೂಗಿನ ಮಾರಯ್ಯನ ಆಗಮದ ಮಗ ನಾನು
ಯೋಗಿ ಜೋಗಿಯ ಮಗನಲ್ಲ ಧರ್ಮದ
ಆಗಮ ಉಳ್ಳವರ ಮಗ ನಾನು, ಬಸವಣ್ಣ

ತಾತ್ಪರ್ಯ : ಅನುಭಾವಿಗಳಲ್ಲಿ ಜ್ಞಾನಸಂಬಂಧಿಯಾಗಿ ಮಗ, ಶಿಶುಮಗ ಎನ್ನುವ ಸಂಬಂಧವಾಚಕ ಪದಗಳು ಕನ್ನಡದ ಅನುಭಾವ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ಗುರುವಿನಿಂದ ಪಡೆದ ತತ್ತ್ವ ಸಿದ್ಧಾಂತಗಳನ್ನು ನಿಷ್ಠೆಯಿಂದ ಅಳವಡಿಸಿಕೊಂಡು ಬೆಳೆಯುವುದು. ಮಗ ವಂಶಸಂಬಂಧವನ್ನು ಮುಂದುವರಿಸಿದರೆ ಶಿಷ್ಯ ತತ್ತ್ವಸಂಬಂಧವನ್ನು ಬೆಳೆಸುತ್ತಾನೆ. ಈ ಅರ್ಥದಲ್ಲಿ ಕೂಗಿನ ಮಾರಯ್ಯನನ್ನು ತನ್ನ ಅರಿವಿನ ತಂದೆಯನ್ನಾಗಿ ಮೌನೇಶ್ವರರು ಸ್ವೀಕರಿಸಿದ್ದಾರೆ. ತಾನು ಯಾರೋ ಜೋಗಿ ಜಂಗಮರ ಮಗನಲ್ಲ. ಧರ್ಮದ ವಿವೇಕವುಳ್ಳವರ ಮಗ ಹೊರತು ಅಧರ್ಮ ಅಜ್ಞಾನ ಪಾಲಿಸುವವರ ಮಗನಲ್ಲ ಎಂಬುದು ವಚನದ ಭಾವ.

೭೧

ಹಿರೇ ಅಂಕುಶಖಾನ ಸತ್ತಂದಿನ ಮಾತು
ಎಮ್ಮಿಯ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ
ಡಂಗುರ ಸಾರಬೇಕೆಂದು
ಚೆನ್ನಬಸವಣ್ಣ ಬಂದೀನಿ ಕಾಣಿರೊ, ಬಸವಣ್ಣ

ತಾತ್ಪರ್ಯ : ಹಿರಿಯ ಅಂಕುಶಖಾನನು ಕ್ರಿ.ಶ.೧೫೮೦ರ ಸುಮಾರಿಗೆ ಲಕ್ಷ್ಮೇಶ್ವರದಲ್ಲಿ ವಿಜಾಯಪುರ ಆದಿಲ್‌ಶಾನ ಸುಭೇದಾರನಾಗಿ ಆಡಳಿತ ಮಾಡುತ್ತಿದ್ದ. ಇದೇ ಹೊತ್ತಿಗೆ ವಿಜಯನಗರದಲ್ಲಿ ಎಮ್ಮೆಯ ಬಸವಣ್ಣ(ಕ್ರಿ.ಶ.೧೫೪೩) ಎಂಬ ಕಾಲಜ್ಞಾನಿ ಇದ್ದ. ಇವನ ತಮ್ಮ ಇಮ್ಮಡಿ ಬಸವಣ್ಣ ಚೆನ್ನಬಸವಣ್ಣನ ಅವತಾರಿಯಾಗಿ ಡಂಗುರ ಸಾರಲು ಬಂದೀನಿ ಕಾಣಿರೋ ತಿಳಿದುಕೊಳ್ಳಿರಿ ಜನರು ಎನ್ನುವಲ್ಲಿ ಅವತಾರದ ಕಲ್ಪನೆಯಿದೆ.

೭೨

ಹೆಂಡರು ಮಕ್ಕಳಿಲ್ಲದ ತೊಂಡ ತ್ರೋಟಕನಲ್ಲ
ಭಂಡ ತಾನಲ್ಲ ಜಗಕೀತ ತನ್ನಾತ್ಮದಲಿ
ಕಂಡಂತೆ ಸೊಲ್ಲಿಸುತ ಬಂದನು ಅ–
ಖಂಡಕಾಣೀತ ಪರಿಪೂರ್ಣ, ಬಸವಣ್ಣ

ತಾತ್ಪರ್ಯ : ಹೆಂಡಿರು ಮಕ್ಕಳು ಬಂಧು ಬಳಗವಿಲ್ಲದ ಪರದೇಶಿಯಲ್ಲ, ಸ್ವಂತ ವಿಚಾರವಿಲ್ಲದವನಲ್ಲ, ನೀತಿಗೆಟ್ಟ, ಮಾನಗೆಟ್ಟ ಮನುಜನಲ್ಲ, ವಿಶ್ವಕುಟುಂಬ ಪ್ರಜ್ಞೆಯುಳ್ಳವ. ಅಂತಹ ಆತ್ಮಜ್ಞಾನಿಯಾದ ಮೌನೇಶ್ವರರು ಬಾಹ್ಯ ಸಾಕ್ಷಿಗಳನ್ನು ನೆಚ್ಚದೆ ತನ್ನನ್ನು ತಾನೆ ಪ್ರಮಾಣವಾಗಿಸಿಕೊಂಡ ಅಖಂಡನು ಪರಿಪೂರ್ಣನು ವಿಶ್ವವ್ಯಾಪಿ ವಿಶ್ವಕರ್ಮರಾಗಿದ್ದಾರೆ.

೭೩

ಚೊಕ್ಕ ಹೀನದ ಭೇದ ಅರ್ಕಸಾಲೆನೇ ಬಲ್ಲ
ಕಟ್ಟಲಿ ಬಲ್ಲ ಬೆಲೆ ಭೇದಂಗಳ ಬಲ್ಲ
ಮಿಕ್ಕ ಮಾನವರಿಗೆ ತಿಳಿಯದು
ಲಕ್ಷಕ್ಕೊಬ್ಬ ಶರಣ ಮಹಾತ್ಮರಿಗಲ್ಲದೆ
ಸಿಕ್ಕದು ಕಾಣಾ ಜಡರಿಗೆ ಎಂದನು
ಕಕ್ಕಯ್ಯನ ವರಪ್ರಸಾದಿ, ಬಸವಣ್ಣ

ತಾತ್ಪರ್ಯ : ಅಕ್ಕಸಾಲಿಯಾದವನು ತನ್ನ ಕುಶಾಗ್ರಮತಿಯಿಂದ ಬೆಳ್ಳಿ ಬಂಗಾರ ದೊಳಗಿನ ಶುದ್ಧ ಅಶುದ್ಧ ಸಾಚಾ ಮತ್ತು ಖೊಟ್ಟಿ ಗುಣಗಳನ್ನು ನಿರ್ಧರಿಸಲು ಸಮರ್ಥನು. ಇದು ಮಿಕ್ಕವರಿಗೆ ತಿಳಿಯಲಾರದು. ಜ್ಞಾನಿಗಳು ಗುಣಗ್ರಾಹಿಗಳು ಆದ ಅಪರೂಪದ ವ್ಯಕ್ತಿಗೆ ಮಾತ್ರ ಇಂಥ ಸಾಮರ್ಥ್ಯವಿರುವುದೇ ಹೊರತು ಸಕಲ ಜನರಿಗೆ ಈ ಕೌಶಲ್ಯ ಬರಲಾರದು. ಜಗತ್ತಿನ ಖೊಟ್ಟಿ ಮತ್ತು ಅಸಲುತನವ ಗುರುತಿಸಲು ಬಂದ ಪರಬ್ರಹ್ಮ ಮೌನೇಶ್ವರರಾಗಿದ್ದಾರೆ.

೭೪

ಕಂಡವರಿಗೆ ಹುಚ್ಚ ಕಾಣದವರಿಗೆ ಮೆಚ್ಚ
ಕಂಡೂ ಕಾಣದವರಿಗೆ ಎದೆಗಿಚ್ಚು ಉಳವಿಯ
ಲೆಂಡ ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಜ್ಞಾನಿಯಾದವನು ಲೋಕದ ಕಣ್ಣಿಗೆ ಹುಚ್ಚನಂತೆ ಕಾಣುತ್ತಾನೆ. ಕಣ್ತೆರೆದು ನೋಡಲಾರದವರಿಗೆ ಕಾಣಲಾರ. ನೋಡಿಯೂ ನೋಡದ ಹಾಗೆ ಇರುವವರಿಗೆ ಒಡಲಕಿಚ್ಚು. ಪರಮ ಸುಜ್ಞಾನಿಯೂ ನೀತಿವಿದನೂ ಆದ ಉಳಿವಿಯ ಹಠಮಾರಿ (ಲೆಂಡ) ಚನ್ನಬಸವಣ್ಣನ ಅವತಾರವಾದ ಮೌನೇಶ್ವರರು ಈ ಜಗಕೆ ಬಂದರೂ ಜ್ಞಾನಿಯನ್ನು ಸಹಿಸದ ಅಜ್ಞಾನ ಮತ್ತು ಅಂಧಕ್ಕಾರ ಈ ಜಗತ್ತನ್ನು ಕವಿದಿದೆ.

೭೫

ಸೃಷ್ಟಿ ಭೂಪರೆಲ್ಲ ಹೊಟ್ಟೆಯ ತೋರಿದರೆ
ಬೆಟ್ಟವನೇರಿ ಮಳೆಗರೆದು
ಕಾಳಿ ಹಿಡಿಸುತಲಿ ಭೇರಿಯ ಹೊಯ್ಯಿಸುತಲಿ
ಕಾಳಿಯ ಮಗನೆನುತ ಭೂಪರದ ಕೋಲು
ತಿರುವಿದನರಿಯರು ಲೋಕದ ಕೂಳರ
ಗೊಡವಿ ನಮಗೇಕೆ, ಬಸವಣ್ಣ

ತಾತ್ಪರ್ಯ : ಧನ, ದ್ರವ್ಯ, ಅಧಿಕಾರ ಮದದಿಂದ ಅಜ್ಞಾನವಶರಾಗಿ ಕರ್ತವ್ಯ ಮರೆತ ಈ ಜಗತ್ತಿನ ಅರಸರನೆಲ್ಲ ದಂಡಿಸಿ ಅವರ ಕರ್ತವ್ಯ ಪ್ರಜ್ಞೆಯನ್ನು ಎಚ್ಚರಿಸಿ ಸುಜ್ಞಾನಿಗಳನ್ನಾಗಿಸಿದ ಕಾಳಿಯ ಮಗ ನಾನು. ಕಾಳಿ ಕರ್ತೃತ್ವ ಶಕ್ತಿಯ ಸಂಕೇತ ಜಡ ಜಗತ್ತನ್ನು ಚೇತನಗೊಳಿಸಿದ ಭಾವ ಇಲ್ಲಿನದು.

೭೬

ಆಸೆ ಮಾತಾಡುವ ಹೇಸಿ ಮಾನವನಲ್ಲ
ಈಶನ ಶರಣ ಸದ್ಭಕ್ತರಿಗೆ ಉಪ–
ದೇಶಿಸ ಬಂದೆನೊ, ಬಸವಣ್ಣ

ತಾತ್ಪರ್ಯ : ಪರಿಪೂರ್ಣನು ಪರಮಜ್ಞಾನಿಯೂ ಆದವನಿಗೆ ಜಗತ್ತಿನ ಯಾವ ವಸ್ತು ಸಂಗತಿಗಳ ವ್ಯಾಮೋಹವಿರುವುದಿಲ್ಲ. ಲೌಕಿಕ ಆಕರ್ಷಣೆಯಿಂದ ವಿಮುಖ ನಾಗಿರುತ್ತಾನೆ. ಈ ಅರ್ಥದಲ್ಲಿ ಮೌನೇಶ್ವರರು ಶಿವನ ಭಕ್ತರಿಗೆ ಸದ್ಬೋದ ನೀಡಲು ಬಂದವರೇ ಹೊರತು, ಆಸೆ ಆಮಿಷಗಳ ಹೊತ್ತು ಹೀನ ಬದುಕು ಬದುಕಲು ಬರಲಿಲ್ಲ.

೭೭

ಭಾರಿ ಶಂಕರನ ಭೂರಿ ಬ್ರಹ್ಮಾಂಡ ಭಾರವ
ಹೊರುವ ಹೊಲೆಯನು ಶಿವಶರಣರ ಹಾದಿ
ತೋರುವ ತಳವಾರ, ಬಸವಣ್ಣ

ತಾತ್ಪರ್ಯ : ಈ ಬ್ರಹ್ಮಾಂಡವನ್ನು ಸಲಹುವ ಶಿವನೇ ಶಿವ ಶರಣರ ಕಿಂಕರನಾದವ. ಅಂಥ ದಾಸನ ದಾಸ ನಾನು, ಸೇವಕನು ನಾನು. ಕನ್ನಡ ನೆಲದ ಕಾಯಕ ಜೀವಿಗಳೂ ಅನುಭಾವಿಗಳೂ ಆದ ಸತ್ಯ ಶರಣರ ಅನುಯಾಯಿ ನಾನು ಎನ್ನುವಲ್ಲಿ ನಾ ಎನ್ನುವ ಅಹಂಕಾರ ನಿರಸನವನ್ನು ಕಾಣುತ್ತೇವೆ. ಆಳಿನ ಆಳಾಗುವುದೆಂದರೆ ಸತ್ಯ ಶರಣ ಮಾರ್ಗದ ನಿಜತತ್ವವನ್ನು ಅರಿಯುವುದಾಗಿದೆ.

೭೮

ಮುಂಗಾಲ ಮಣ್ಣ ಹಿಂಗಾಲಿಗೆ ಹಾಕುತ
ಕೊಂಬೀಲಿ ಮಳಲ ಕೆದರುತ ವರವಿ
ಇಂಬೊಳ್ಳಿತೆಂದು ನೆನೆದಾನು, ಬಸವಣ್ಣ

ತಾತ್ಪರ್ಯ : ಮೌನಯ್ಯನವರು ತಮ್ಮನ್ನು ಶಿವನ ವಾಹನನಾದ ನಂದಿಯ ಅವತಾರಕ್ಕೆ ಹೋಲಿಸಿಕೊಂಡಿದ್ದಾರೆ. ನಂದಿ ಶ್ರಮ, ಶಕ್ತಿ ಹಾಗೂ ಚಲನೆಯ ಸಂಕೇತ. ಶಿವನ ವಾಹನ ಎನ್ನುವುದು ವಿಶೇಷ. ಅಂತಹ ಪರಶಿವನ ವಾಹನ ನಂದಿಯ ಕಿಂಕರನಾದ

ಮೌನೇಶ್ವರರು ಕಾಲನ ಚಲನೆಯ ಸಂಕೇತವಾದಂತೆ ಕೃಷಿ ಸಂಸ್ಕೃತಿಯ ಪ್ರತೀಕವು ಹೌದು. ಮುಂಗಾಲಲ್ಲಿ ಮಣ್ಣು ಕೆದರುವುದು ಕೊಂಬಿಲಿ ಮಳಲ ಕೆದರುವ ಕ್ರಿಯೆ ಎತ್ತಿನ ಸೃಷ್ಟಿ ಶಕ್ತಿ ಹಾಗೂ ಸಮೃದ್ಧತೆಯ ಪ್ರತೀಕವಾಗಿದೆ. ಅಂತಹ ಪೂರ್ಣಜ್ಞಾನಿಯಾದ ಮೌನೇಶ್ವರರು ದೇಶ ಸಂಚರಿಸುತ್ತ ತತ್ತ್ವಬೋಧಿಸುತ್ತ ವರವಿಯ ಕ್ಷೇತ್ರ ಪರಿಸರವನ್ನು ಮೆಟ್ಟಿ ಅಲ್ಲಿ ತನ್ನ ನಿಜ ವಾಸ್ತವ್ಯ ಮಾಡುತ್ತಾರೆ.

೭೯

ಶಿವಗಿರಿಯ ಪರ್ವತದ ಗಿರಿಯನಿಳಿದು ಬಂದು
ವರವಿ ಒಳಿತೆಂದು ನೆನದಾನು ಮರ್ತ್ಯಕ್ಕೆ
ಕಿರಿಯನು ಚೆನ್ನಬಸವಯ್ಯ, ಬಸವಣ್ಣ

ತಾತ್ಪರ್ಯ : ದೇಶ ಸಂಚಾರಿಯೂ ಸುಜ್ಞಾನಿಯೂ ಆದ ಮೌನಯ್ಯನವರು ಕೈಲಾಸ ಪರ್ವತ, ಶ್ರೀಶೈಲ ಪರ್ವತ ಎನ್ನುವ ಮೇರು ಪರ್ವತಗಳನ್ನಿಳಿದು ವರವಿ ಒಳ್ಳೆಯ ದೆಂದು ವಾಸ್ತವ್ಯ ಮಾಡುತ್ತಾರೆ. ತಪಸ್ವಿಗಳು, ಸಾಧಕರು, ಭೂಮಿಯಿಂದ ಗಿರಿ ಶಿಖರಗಳತ್ತ ಜ್ಞಾನಾಕಾಂಕ್ಷಿಗಳಾಗಿ ಹೊರಟರೆ ಮೌನೇಶ್ವರರು ಗಿರಿಶಿಖರಗಳಿಂದ ಭೂಮಿ ತತ್ತ್ವದ ಕಡೆ ಹೊರಳುವುದು ಅವರ ಶ್ರಮಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

೮೦

ಆಗಲೆ ನಾ ಬಂದೆ ಅಡವಿ ಅಂಗಳ ಮಾಡಿ
ಗಿಡವ ಪಟ್ಟಣವ ಮಾಡಿ ಕೆಡುವುದನೆಲ್ಲ ಸಾಜ
ಮಾಡಬೇಕೆಂದು ಒಡೆಯ ತಾ ಬಂದ ವರವಿಗೆ
ಬೇಡಿಕೊಳ್ಳಿರೋ ಶರಣರಿರ್ಯಾ ಎಂದಿನ್ನು
ಮೃಢನು ತಾ ಹೇಳಿದ ಸ್ವಾದದ ನಿಜ ನುಡಿಯ
ಕೇಳದೆ ಕೆಡಬೇಡಿ ಬಸವಣ್ಣ

ತಾತ್ಪರ್ಯ : ಪರಿಸರ ನಾಶ ಮತ್ತು ನಗರೀಕರಣದ ಅಪಾಯಗಳನ್ನು ವಚನ ಹೇಳುವಂತಿದೆ. ಅಡವಿ ಅಂಗಳ ಮಾಡಿ ಗಿಡವ ಪಟ್ಟಣವ ಮಾಡಿ ಕೆಡುವುದನೆಲ್ಲ ಉಳಿಸಿ ಸಹಜ ಸ್ಥಿತಿಗೆ ತರಬೇಕೆಂದು ಒಡೆಯ ತಾ ಬಂದ ವರವಿಗೆ ಎನ್ನುವ ಮಾತು, ಸಾವಯವ ಹಾಗೂ ಸ್ವಭಾವಿಕ ರೂಪಗಳನ್ನು ಕಳೆದುಕೊಂಡು ಉಪಭೋಗಿ ಹಾಗೂ ಬಂಡವಾಳಶಾಹಿ ಸಂಸ್ಕೃತಿಯ ಹಿಡಿತಕ್ಕೆ ಇಡಿ ಪ್ರಕೃತಿ ಸಿಲುಕಿರುವ ಅಪಾಯದ ಸೂಚನೆಯಿದೆ. ಈ ಪ್ರಕೃತಿಯನ್ನು ಬಿಡಿಸಿ ಅದನ್ನು ಸಹಜತೆಯತ್ತ ಮರಳಿಸಬೇಕೆಂದು ಬಂದವನನ್ನು ಬೇಡಿಕೊಂಡು ಅನುಗ್ರಹಿಸಿಕೊಳ್ಳಿರಿ. ಆ ಸ್ವರೂಪಿಯೇ ಆದ ನಾನು ಹೇಳಿದ ಸವಿನುಡಿಯ ಕೇಳದೆ ದಿಮಾಕಿನಿಂದ ಕೆಡಬೇಡಿರಿ ಎನ್ನುವ ಹಿತವಚನ ಇಲ್ಲಿ ವ್ಯಕ್ತವಾಗಿದೆ.

೮೧

ಉಳಿಯ ಹಂಗಿಲ್ಲದೆ ಇಳೆಯೊಳು ಲಿಂಗವಾದ
ಉಳವಿ ಕಲ್ಯಾಣ ಕೈಲಾಸವು ಹಳಿದವರಿಗೆ
ನರಕವು ಎಂದನು ತಾ ಇಳೆಗೆ, ಚೆನ್ನಬಸವಣ್ಣ

ತಾತ್ಪರ್ಯ : ಎಲ್ಲಾ ದೇವರು ಉಳಿಯಿಂದಲಾದಾರು ಎನ್ನುವ ಮೌನಯ್ಯನವರು ಉಳಿಯ ಹಂಗಿಲ್ಲದೆ ಈ ಭೂಮಿಯಲ್ಲಿ ಘನಲಿಂಗವಾಗಿ ಮೆರೆದ ಉಳವಿ, ಕಲ್ಯಾಣ, ಕೈಲಾಸಗಳನ್ನು(ಅಲ್ಲಿನ ಸ್ಥಾವರಲಿಂಗಗಳು) ಹೆಸರಿಸುತ್ತ ಇವುಗಳ ಸ್ಥಳ ಮಹತ್ವವನ್ನು ಜ್ಞಾನದ ವೈಶಿಷ್ಟ್ಯವನ್ನು ಅರಹುತ್ತಾರೆ. ಅಂತಹ ಸ್ಥಳಗಳ ಮಹಾತ್ಮೆಯನ್ನು ತಿಳಿಯದೆ ಅವಮಾನಿಸಿದರೆ ಅಂತವರಿಗೆ ನರಕ ತಪ್ಪದು. ಕಾರಣ ಕಾಯಕ ಜೀವಿಗಳಿಂದಾಗಿ ಈ ಸ್ಥಳಗಳು ಕರ್ತೃತ್ವ ಶಕ್ತಿಯನ್ನು ಪಡೆದುಕೊಂಡಿರುವ ಬಗೆಯನ್ನು ವಚನ ಹೇಳುತ್ತದೆ.

೮೨

ಮದಗಜ ವಚನವು ಒದಗಿ ಬಂದವು ಎಂದು
ಮದಕರಿಯ ಚೆನ್ನಬಸವಣ್ಣ ಬಂದಾನೆ
ಅರುವಿಡಿದು ಬನ್ನಿ ವರವಿಗೆ, ಬಸವಣ್ಣ

ತಾತ್ಪರ್ಯ : ಜ್ಞಾನಮೇರುವಾದ ಚೆನ್ನಬಸವಣ್ಣನ ಅವತಾರಿ ಮೋನಯ್ಯ ವರವಿಗೆ ಬಂದಿರುವರು. ಇಲ್ಲಿಗೆ ಬರುವ ಭಕ್ತರು ಕಪಟಿಗಳು, ಕಳ್ಳರು, ಡಾಂಭಿಕರೂ ಆಗದೆ ಎಚ್ಚರದಿಂದ ಜ್ಞಾನದ ತಂತುಗಳನ್ನು ಅರಿತು ಬರಬೇಕು. ಕಿಡಿಗೇಡಿತನ ಸಲ್ಲದು. ಮದಿಸಿದ ಆನೆಯ ಮುಂದೆ ಕಿಡಿಗೇಡಿತನ ಮಾಡಿದ ಸಣ್ಣ ಪ್ರಾಣಿ ಅನಗತ್ಯ ಸಾಯುವಂತೆ ಜ್ಞಾನ ಮೇರುವಾದ ಮೌನೇಶ್ವರರ ಮುಂದೆ ಭವಿಯಾದವ ನಾಶವಾಗುತ್ತಾನೆ.

೮೩

ವರವಿ ಪುರದಲ್ಲಿ ಕುರುಹುಂಟು ಲಿಪಿಯುಂಟು
ಕುರಿಯ ಹೆಜ್ಜೆ ಮೊದಲುಂಟು ಇದು ನಮ್ಮ
ಹಿರಿಯರಿದ್ದ ಸ್ಥಳವೆಂದು ಬಂದ ವರವಿಗೆ, ಬಸವಣ್ಣ

ತಾತ್ಪರ್ಯ : ವಚನದ ಭಾವ ಹಿಡಿದು, ವರವಿಯನ್ನು ಮೌನೇಶ್ವರರ ವಂಶಸ್ಥರಿದ್ದ ಸ್ಥಳವೆಂಬುದಕ್ಕಷ್ಟೆ ಅರ್ಥಸೀಮಿತಗೊಳಿಸಿದರೆ ಅದರ ವಿಶ್ವ ಪ್ರಜ್ಞೆಗೆ ಭಂಗ ತಂದಂತಾಗುತ್ತದೆ. ವರವಿ ಮೌನೇಶ್ವರರಿಗಿಂತ ಮೊದಲು ಅದೊಂದು ಜ್ಞಾನಕ್ಷೇತ್ರ ಸಾಧಕರ

ಕ್ಷೇತ್ರವಾಗಿರಬೇಕು. ಅಂತಹ ಪುರಾತನರ ಜ್ಞಾನದ ಕುಡಿಯಾದ ಮೌನೇಶ್ವರರು ನಿಂತ ನೆಲದಲ್ಲಿಯೇ ತನ್ನ ಸಾಧನೆಯ ಕುರುಹುಗಳನ್ನು ಗುರುತಿಸಿಕೊಳ್ಳುವುದು ಕನ್ನಡ ಮಣ್ಣಿನಲ್ಲಿರುವ ಅವಧೂತ ಪ್ರಜ್ಞೆಯ ಪ್ರತೀಕವಾಗಿದೆ. ಭಾರತದ ಭಕ್ತಿ ಹಾಗೂ ಜ್ಞಾನ ಪರಂಪರೆಯಲ್ಲಿ ಉತ್ತರ ಭಾರತದ ನೆಲವೇ ಶ್ರೇಷ್ಠವೆಂದೂ ಪವಿತ್ರವೆಂದೂ ಸಾಧಿಸಿದ ವೈದಿಕ ಮನೋಧರ್ಮವನ್ನು ಹೊಡೆದುರುಳಿಸಿ ಅದಕ್ಕೆ ಪರ್ಯಾಯವಾಗಿ ತಿರುಳ್ಗನ್ನಡ ನಾಡು ಹಿಮಾಲಯಕ್ಕಿಂತ ಶ್ರೇಷ್ಠವಾದುದು, ಪುಣ್ಯ ಪುರುಷರ ಹುಟ್ಟಿಗೆ ಹಾಗೂ ಅವರ ತತ್ವಜ್ಞಾನಕ್ಕೆ ಇಂಬುಗೊಟ್ಟ ನಾಡೆಂಬ ಆತ್ಮವಿಶ್ವಾಸ ಹಾಗೂ ಸಾಕ್ಷಿ ಪ್ರಜ್ಞೆ ವಚನದಲ್ಲಿದೆ.

ಲಳ

ವರವಿಯ ಭಬ್ಬಿಯ ಎರಡರ ಮಧ್ಯದಲಿ
ಕುರಿಯ ದೊಡ್ಡಿಯ ಸಜ್ಜು ಮಾಡಬೇಕೆಂದು
ಕುರುಹಿಗೆ ಕೊಡಲಿಯ ಪಿಡಿಕೊಂಡು ಮರ್ತ್ಯಕ್ಕೆ
ಸಿರಿಯ ಮರಗಳ ಕಡಿಯಲಿ ಬಂದ
ಕುರುವಿಟ್ಟು ಬಂದ ವರವಿಗೆ, ಬಸವಣ್ಣ

ತಾತ್ಪರ್ಯ : ಪುಣ್ಯ ಪುರುಷರ ಹಿರಿಯ ನಾಡಾದ ವರವಿ ಪರಿಸರವು ಮೌನಯ್ಯನವರು ಬರುವ ಕಾಲಕ್ಕೆ ಮಂದಮತಿಗಳಿಂದ ತುಂಬಿ ತುಳುಕುತ್ತಿತ್ತು. ಅವರಿಂದಾಗಿ ವರವಿಯ ಅನುಭಾವಿಕ ಹಾಗೂ ಆಧ್ಯಾತ್ಮಿಕ ಶಕ್ತಿ ಕುಂದುತ್ತಿತ್ತು. ಅವಿವೇಕಿಗಳಾಗಿ ಜನ ಗುರಿ ಇಲ್ಲದೆ ಕುರಿಗಳಂತೆ ತಿರುಗುತ್ತಿದ್ದರು. ಇಂಥವರನ್ನು ತಿದ್ದಿ ಪರಿವರ್ತಿಸುವುದು ಅನಿವಾರ್ಯವಾಗಿತ್ತು. ಸಿರಿವಂತರೆಂಬ ಗರ್ವದಿಂದ ಮೆರೆಯುತ್ತಿದ್ದ ಜನರ ಅಹಂಕಾರ ನಾಶ ಮಾಡಿ ಸನ್ಮಾರ್ಗದತ್ತ ಒಯ್ಯಲು ದಿವ್ಯಜ್ಞಾನವೆಂಬ ಕೊಡಲಿಯನ್ನು ಕೈಯಲ್ಲಿ ಕುರುಹಾಗಿ ಹಿಡಿದು ವರವಿಗೆ ಬಂದದ್ದು ಗಮನಿಸುವಂಥದ್ದು.

ಲಱ

ಉಳಿಯು ಮುಟ್ಟದ ಲಿಂಗ ಪ್ರಳಯ ಹೊಂದದ ಲಿಂಗ
ಬೆಳಗು ಬಂದದ್ದು ಮನಲಿಂಗ ಭೇದಿಕ್ಕಿದ ವರವಿಯ
ಸ್ಥಳ ಒಳ್ಳಿದೆಂದು ನೆನದಾನು, ಬಸವಣ್ಣ

ತಾತ್ಪರ್ಯ : ವಿದ್ಯೆ, ಅವಿದ್ಯೆ, ಚೇತನ, ಅಚೇತನ ಎನ್ನುವ ದ್ವಂದ್ವ ಭಾವಗಳನ್ನು ಅಳಿಯದೆ ತನ್ನೊಳಗಿನ ಬೆಳಕು ಕಾಣಲಾರದು. ಇದನ್ನು ಅರಿಯಬೇಕಾದರೆ ಭೇದ, ರಹಸ್ಯ, ದ್ವಂದ್ವಗಳಿಂದ ದೂರವಾಗಿ ಪರಿಪೂರ್ಣತೆ ಹಾಗೂ ಅವಿನಾಶದ ನೆಲೆವೀಡಾದ ವರವಿ ಒಳ್ಳೆಯದೆಂದು ಇಲ್ಲಿ ನೆನೆದೆ ಎಂಬುದು ಮೌನೇಶ್ವರರ ಅಭಿಮತವಾಗಿದೆ.

೮೬

ವರವಿಯ ಪುರದಲ್ಲಿರುವ ಕಲ್ಲೆಲ್ಲ ದೇವರು
ಹರಿವ ಸಾಗರವೆಲ್ಲ ಘನ ತೀರ್ಥ ಎಂದಿನ್ನು
ಸಾರಿದನು, ಚೆನ್ನಬಸವಣ್ಣ

ತಾತ್ಪರ್ಯ : ಇಡೀ ವರವಿ ಪರಿಸರವೇ ವಿಭೂತಿ ಪುರುಷರ ಸುಜ್ಞಾನಿಗಳ ನಾಡಾಗಿತ್ತು. ಅಲ್ಲಿನ ಎಲ್ಲ ಕಲ್ಲುಗಳಿಗೂ ದೈವತ್ವದ ಚೈತನ್ಯವಿತ್ತು. ಸಾಗರದಂತೆ ತೋರುವ ಇಲ್ಲಿನ ತೊರೆ ತೀರ್ಥದ ಪಾವಿತ್ರ್ಯ ಪಡೆದಿತ್ತು. ವರವಿ ಅಂತಹ ಚೈತನ್ಯದಾಯಕ ಪುಣ್ಯಭೂಮಿ ಎಂದು ಸಾರಿದವರು ಮೌನೇಶ್ವರರು.

೮೭

ಎಲ್ಲ ವಾಹನ ಭಂಗಿಸಲು ಗತಗತವಾದವು
ನಿನ್ನ ವಾಹನ ಭಂಗಿಸಲು ಸಸಿಗಳು ಹುಟ್ಟಿದವು
ಪಶುಗಳು ಕರೆದವು ದಿಗ್ದೇವತೆಗಳ ಮುಖ
ಮಜ್ಜನವಾದವು ಹೆಮ್ಮಿಲಿ ಮಾತಾಡುವ
ಡೊಂಬಿ ಮಾನವರು ನೀರ್ವಾಣದಯ್ಯಗೆ ಸರಿಯಹರೆ
ವಿಶ್ವಕರ್ಮನೇ ಆದಿಯಲ್ಲವೆ, ಬಸವಣ್ಣ

ತಾತ್ಪರ್ಯ : ವಿಶ್ವಕರ್ಮ ಪರಬ್ರಹ್ಮನ ಸೃಷ್ಟಿಕ್ರಿಯೆ ಮತ್ತು ಆತನ ತತ್ತ್ವದ ಮಹತ್ತ್ವವನ್ನು ವಚನ ಹೇಳುವಂತಿದೆ. ಪ್ರತಿಯೊಬ್ಬ ದೇವರಿಗೂ ವಾಹನಶಕ್ತಿ ಇದ್ದೇ ಇರುತ್ತದೆ. ಬ್ರಹ್ಮನಿಗೆ ಹಂಸ, ವಿಷ್ಣುವಿಗೆ ಗರುಡ, ಶಿವನಿಗೆ ವೃಷಭ ಹಾಗೆಯೇ ವಿಶ್ವಕರ್ಮನಿಗೆ ಮೋಡವಾಹನವಾಗಿದೆ. ಇತರ ದೇವರುಗಳ ವಾಹನ ಒಡೆದರೆ ಅವು ಸಾಯುತ್ತವೆ. ಆದರೆ ವಿಶ್ವಕರ್ಮನ ವಾಹನ ಒಡೆದರೆ ಇಳೆಗೆ ಮಳೆಯಾಗುತ್ತದೆ. ಮೇಘರಾಜ, ಮಳೆರಾಜ, ನೀರು, ವಿಶ್ವಕರ್ಮ ಸೃಷ್ಟಿತತ್ತ್ವದ ಪ್ರಮುಖ ಪರಿಕಲ್ಪನೆಗಳು. ಇಂದ್ರ ಮಳೆಯ ಅಧಿದೇವತೆ. ಪುರಾಣಗಳಲ್ಲಿ ಕಾಣುವ ಪರ್ಜನ್ಯ ಇಂಥದೆ ಮತ್ತೊಂದು ಹೆಸರು. ಮೇಘವು ಮಳೆಗರೆಯದಿದ್ದರೆ ಪಶುಪಕ್ಷಿಗಳಿಗೆ ನೀರು ಆಹಾರದ ಕೊರತೆಯಲ್ಲದೆ ದಶದಿಕ್ಕಿನ ದೇವತೆಗಳಿಗೂ ಮುಖತೊಳೆಯಲು ನೀರು ಇರಲಾರದು. ಕಾರಣ ಸಕಲ ಜೀವ ಚೈತನಕ್ಕೆ ನೀರು ಪ್ರಮುಖವಾದದ್ದು. ದೇವರಿರಲಿ, ಮನುಷ್ಯರಿರಲಿ, ಜಲಚರಗಳಿರಲಿ, ಪಶುಪಕ್ಷಿಗಳಿರಲಿ ಇಂತಹ ಸಕಲ ಚೇತನ ಅಚೇತನಗಳಲ್ಲಿ ಶಕ್ತಿ ತುಂಬಿ ಸರ್ವಕಾಲವು ಜೀವವಾಹಿನಿಯನ್ನಾಗಿಸುವ ವಿಶ್ವಕರ್ಮನನ್ನು ತಿಳಿಯಬಲ್ಲರೇ. ನಿರ್ವಾಣದಯ್ಯ ಎಂದರೆ ಸತ್ಸಂಗ ಪರಿತ್ಯಾಗಿ, ನಿರ್ಗುಣಿ. ವಿಶ್ವಕರ್ಮನು ನಿರ್ಗುಣ ಬ್ರಹ್ಮನು. ಈತನಿಗೆ ಆಕಾರವಿಲ್ಲ. ಸಗುಣಿರೂಪಿಯಾದಾಗ ಮಾತ್ರ ರೂಪ. ಆದ್ದರಿಂದ ಈ ರೀತಿ ನಿರ್ಗುಣನಾಗಿ ಸಕಲವನ್ನೂ ಆವರಿಸಿರುವ ವಿಶ್ವಕರ್ಮ ಪರಮಾತ್ಮನನ್ನು

ಡಾಂಭಿಕ ಹಾಗೂ ಕಪಟಿಗುಣವುಳ್ಳ ಮಾನವರಿಗೆ ತಿಳಿಯಲಾಗದು. ವಿಶ್ವಕರ್ಮನು ಸೃಷ್ಟಿಗೆ ಆದಿಯಾಗಿರುವುದರಿಂದ ಆತನೇ ಆದಿ ಚೈತನ್ಯನಲ್ಲವೆ?

೮೮

ಕುರುಬರಲ್ಲಿ ಹುಟ್ಟಿದ್ದರೆ ಹಿರಿದಾಗುತ್ತಿದ್ದೆ ಜಗಕೆಲ್ಲ
ಗರವಿ ಪಂಚಾನನರ ಒಡಲೊಳು ಜನಿಸಿದ
ಕಾರಣದಿಂದ ಕಿರಿದಾದೆನು, ಬಸವಣ್ಣ

ತಾತ್ಪರ್ಯ : ಸಮಾಜ ಜೀವಿಗಳೂ ಕ್ರಿಯಾಜ್ಞಾನಿಗಳೂ ಆದ ಪಾಂಚಾಳರು ಬಹುಶಃ ಮೌನೇಶ್ವರರ ಕಾಲಕ್ಕೆ ಸಾಮೂಹಿಕ ಬದುಕಿನಿಂದ ವಿಮುಖರಾಗಿ ವ್ಯಕ್ತಿಗತ ನೆಲೆಯಲ್ಲಿ ಗರ್ವಿಗಳಾಗಿರಬಹುದು. ಅಂತಃಕಲಹದಲ್ಲಿ ಮುಳುಗಿರಬಹುದು. ಸಂಘಟಿತರಾಗದೆ ಲೌಕಿಕ ನೆಲೆಯಲ್ಲಿ ವ್ಯವಹರಿಸುವುದನ್ನು ಕಂಡು ಮೌನೇಶ್ವರರು ಬೇಸರದಿಂದ ಕುರುಬರಲ್ಲಿ ಹುಟ್ಟಿದ್ದರೆ ಹಿರಿಯನಾಗಿರುತ್ತಿದ್ದೆ ಪಾಂಚಾಳರಲ್ಲಿ ಹುಟ್ಟಿ ಕಿರಿದಾದೆನು ಎಂದಿರಬಹುದು. ಕಿರಿದು ಎನ್ನುವ ಪದ ಸಣ್ಣವ ಎನ್ನುವುದರ ಜೊತೆಗೆ ಕಿಂಕರತ್ವವನ್ನು ಸೂಚಿಸುತ್ತದೆ. ಆತ್ಮಜ್ಞಾನಿಯಾದವ ತನ್ನ ಕುಲಮದವನ್ನು ಮೀರುವ ಪರಿಯಿದು.

೮೯

ಕಾಯವನು ಕಡೆಗಿಟ್ಟು ಜೀವವನು ಮರೆಮಾಡಿ
ಮಾಯವಾಗುವನು ಮರ್ತ್ಯಕ್ಕೆ ಮೋನಯ್ಯ
ಜ್ಞಾನವುಳ್ಳ ದೊರೆಯೆ ದನಿದೋರು, ಬಸವಣ್ಣ

ತಾತ್ಪರ್ಯ : ಜೀವ ಭಾವ ಅಳಿವ ಪರಿಯನ್ನು ವಚನ ಹೇಳುತ್ತದೆ. ಮಾಯಾ ಮೋಹಗಳಂತಹ ದೈಹಿಕ ಹಾಗೂ ಲೌಕಿಕ ಪರಿಮಿತಿಗಳನ್ನು ಮೀರಿದವನ ಕಾಯ ಮತ್ತು ಜೀವ ಮಾಯವಾಗುವುದು. ಅಂದರೆ ಶೂನ್ಯದಲ್ಲಿ ಅಡಗುವುದು. ಶೂನ್ಯ ತತ್ತ್ವವನ್ನಿಲ್ಲಿ ಕಾಣುತ್ತೇವೆ. ಕಾಯವೇ ಪರಮಾತ್ಮನಾಗುವ ಮೂಲಕ ಭೇದವಳಿದ ಬಗೆಯಿದು. ಆತ್ಮ ಪರಮಾತ್ಮನಲ್ಲಿ ಲೀನವಾಗಿ ದೇಹ ಮತ್ತು ದೈವದ ಮಧ್ಯದ ಅಂತರವಳಿದು ಮಹಾಜ್ಞಾನಿಯಾಗುವುದು.

೯೦

ಹನ್ನೆರಡು ವರುಷದಲಿ ತನ್ನ ಜ್ಞಾನದಲ್ಲಿದ್ದು
ಕುನ್ನಿ ಮಾನವರಿಗೆ ಅಳುಕನು ಪರಬ್ರಹ್ಮ
ನೆಲೆಯಾದ ವರವಿಪುರದಲ್ಲಿ, ಬಸವಣ್ಣ

ತಾತ್ಪರ್ಯ : ತನ್ನ ಜ್ಞಾನ ಎಂದರೆ ಸ್ವಾನುಭವ, ಸ್ವ–ಅರಿವು ಎಂದರ್ಥ. ಮೌನೇಶ್ವರರು ಹನ್ನೆರಡನೇ ವಯಸ್ಸಿಗೆ ಅನುಭಾವಿಯಾಗಿ ಮಹಾಜ್ಞಾನಿಯಾಗಿ ರೂಪಗೊಂಡಿದ್ದರು.

ತಮ್ಮ ಸ್ವಾನುಭವವನ್ನೇ ಮಹಾಜ್ಞಾನದ ಮಾರ್ಗವಾಗಿಸಿಕೊಂಡಿದ್ದರು. ಲೋಕಾನುಭವ ಮತ್ತು ಸ್ವಾನುಭವದ ದಿವ್ಯಮೂರ್ತಿಯಾದ ಪರಬ್ರಹ್ಮಸ್ವರೂಪಿ ಮೌನೇಶ್ವರರು ವರವಿ ಪುರವನ್ನು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡಿದ್ದರೆನ್ನುವ ಸಂಗತಿ ಇಲ್ಲಿನದು.

೯೧

ಪಂಚಾನನದವರು ಕೆಟ್ಟು ಅಡವಿ ಚಂಚರಾಗಲಿ
ಹಂಚಿನೊಳಗೆ ತಿರಿದುಂಡು ಹೋದರೆ ಅಲ್ಲಮಗೆ
ನಿಶ್ಚಿಂತೆ ಕಾಣಾ, ತನ್ನ ಮನೆಯೆಂದು ಹೋದರೆ
ಪನ್ನಂಗಧರನೆಂದು ತಿಳಿಯಲಿಲ್ಲ ಅವರಿಗೆ
ಅಲ್ಲಮನ ಮನೆಯ ಓಲೆಯ ತಳವಾರನ
ಗುಡಿ ಕಟ್ಟಿದವರಿಗೆ ಭಯವುಂಟೆ ಧರೆಯಲ್ಲಿ
ಆ ಮಿತ್ರನ ಆಯುಷ್ಯ ತೊಂಬತ್ತು ವರುಷ ಮೂರು ತಾಸಿಗೆ
ನಿರ್ಮಿಸಿಕೊಟ್ಟಂಥ ಗುರುವಿನ ಗುರುತವನರಿಯರು, ಬಸವಣ್ಣ

ತಾತ್ಪರ್ಯ : ಸ್ವ ಜಾತಿಯಿಂದಲೂ ಮೌನೇಶ್ವರರು ಅವಮಾನಕ್ಕೊಳಗಾಗಿದ್ದರೆ? ಅಥವಾ ಕ್ರಿಯಾಜ್ಞಾನಿಗಳಾದ ಪಾಂಚಾಳರು ತಮ್ಮ ಕ್ರಿಯಾತ್ಮಕ ನೆಲೆಗಳಿಂದ ಕೌಶಲ್ಯಗಳಿಂದ ದೂರ ಸರಿದು ಸ್ಥಾವರವಾಗಿದ್ದರೆ? ಎದುರಿನ ಮನುಷ್ಯರನ್ನು ಗುರುತಿಸದಂತವರಾಗಿದ್ದರೆ? ಸ್ಥಾವರತ್ವವು ಜಡತ್ವವನ್ನಲ್ಲದೆ ಅಹಂಕಾರವನ್ನು ಅವಿವೇಕವನ್ನು ತರುತ್ತದೆ. ಸ್ವ–ವಿಮರ್ಶಕರಾದ ಮೌನೇಶ್ವರರು ಪಾಂಚಾಳರ ಇಂಥ ಅಜ್ಞಾನದ ನೆಲೆಯನ್ನು ಟೀಕಿಸಿ ಎಚ್ಚರಿಸಿದ್ದಾರೆ. ಅವರು ಅಡವಿ ಪಾಲಾಗಿ ಹೆಂಚಿನಲ್ಲಿ ತಿರಿದುಣ್ಣಲಿ ಎನ್ನುವುದು ಪಾಂಚಾಳರಿಗೊದಗಿದ ಅಧೋಗತಿಯ ಸಂಕೇತವಾಗಿದೆ. ಭಿಕ್ಷೆ ಮತ್ತು ತಿರುಗಾಟಗಳು ಮನುಷ್ಯನನ್ನು ಕಿಂಕರನನ್ನಾಗಿಸುತ್ತವೆ. ಕಿಂಕರನಾದ ಮೌನೇಶ್ವರರು ಸದೇಹವಾಗಿ ಈ ಲೋಕದಲ್ಲಿ ತೊಂಬತ್ತು ವರ್ಷ ಮೂರು ತಾಸು ಬದುಕಿದವರು. ಅಂತಹ ಮಹಾಮಹಿಮರ ಗುರುತನರಿಯದ, ಶಿವನೆಂದು ತಿಳಿಯದ ಪಾಂಚಾಳರ ರೀತಿಯನ್ನು ಕುರಿತು ಮೌನೇಶ್ವರರು ಹೇಳುತ್ತಾರೆ. ಜಂಗಮವಾದ ಮೌನೇಶ್ವರರನ್ನು ಗುಡಿಕಟ್ಟಿ ಸ್ಥಾವರವಾಗಿಸಿದ ಪರಿಯನ್ನೇ ಅವರು ವಿಡಂಬಿಸಿದ್ದಾರೆ.

೯೨

ಏಳೇಳು ಯುಗದಲ್ಲಿ ಕಾಳಿಯ ಮಗ ನಾನು
ಸೂಳೆಯ ಮಕ್ಕಳು ಜಗವೆಲ್ಲ ನಮ್ಮನ್ನ
ಏಳಲವ ಮಾಡಿದರು ಹೊಲೆಯರು, ಬಸವಣ್ಣ

ತಾತ್ಪರ್ಯ : ಏಳೇಳು, ಅಂದರೆ ಹದಿನಾಲ್ಕು ಯುಗದಲ್ಲಿಯೂ ನಾನು ಕಾಳಿಯ ಮಗನಾಗಿಯೇ ಬಂದೆ. ಕಾಳಿ ಎಂದರೆ ಮೂಲ ಪ್ರಕೃತಿ. ಅಂತಹ ಸೃಷ್ಟಿಶೀಲ

ಮೂಲದಿಂದ ಹುಟ್ಟಿ ಬಂದವರು ಮೌನೇಶ್ವರರು. ಅಂತವರನ್ನು ಈ ಲೋಕದ ಅಜ್ಞಾನಿ ಜನಗಳು ತಿರಸ್ಕಾರ ಮಾಡುತ್ತಾರೆ. ಅದರಿಂದ ಕೆರಳಿದ ಮೌನೇಶ್ವರರು ತನ್ನನ್ನು ಅರಿಯದ ಅರ್ಥಮಾಡಿಕೊಳ್ಳದ ಜನರನ್ನು ಅಧರ್ಮಿಗಳು ಎಂದು ಜರಿಯುತ್ತಾರೆ.

೯೩

ಉರಿವದು ಮೆರೆವದು ತಿರಿವದು ಸಲ್ಲುವುದೆ
ಹರನೆಂಬ ಸತ್ಯಶರಣರಿಗೆ
ಪರದೈವವಿಲ್ಲ ಪಥವಿಲ್ಲ
ಶರೀರವೆ ತಮ್ಮ ದೈವವು
ಶಿರಸವೆ ತಮ್ಮ ಒಡವೆಯಯ್ಯ, ಬಸವಣ್ಣ

ತಾತ್ಪರ್ಯ : ಪೂರ್ಣಜ್ಞಾನಿಯಾದ ಅನುಭಾವಿಗೆ ಅನ್ಯದೈವವಿಲ್ಲ, ಅನ್ಯ ಮಾರ್ಗವಿಲ್ಲ. ಅಂಥ ಜ್ಞಾನಿಗೆ ಶರೀರವೇ ದೈವ, ಶಿರವೇ ಒಡವೆಯಾಗಿರುತ್ತದೆ. ತನ್ನ ತಾನರಿತವಗೆ ಅನ್ಯ ಗುರುತುಗಳಿರುವುದಿಲ್ಲ. ದೇಹವನ್ನೇ ದೇವರಾಗಿಸುವ ಈ ತತ್ತ್ವ ದೇಹವನ್ನು ದೇಗುಲವಾಗಿಸುವ ಆಲೋಚನೆಗಿಂತ ಭಿನ್ನವಾದದ್ದು. ಅವಧೂತರ ವಿಶಿಷ್ಟ ಲಕ್ಷಣವಿದು. ಇಂಥ ಮಹಾಜ್ಞಾನಿಯಾದವನಿಗೆ ಉರಿವದು, ಮೆರೆವುದು, ತಿರಿದುಣ್ಣುವಂತಹ ಅವಿವೇಕತನಗಳು ಸರಿಹೊಂದಲಾರವು. ಹರನೆಂಬ ಸತ್ಯವರಿತ ಶರಣರು ಮತ್ತೊಂದು ಮಿಥ್ಯವನ್ನು ನಂಬುವುದಿಲ್ಲ.

೯೪

ಅವರಿಗೆ ಅವರಂತಾಗಿ ಇವರಿಗೆ ಇವರಂತಾಗಿ
ವಿವರಿಸಿಕೊಂಡವರಿಗೆ ತಾನು ತಾನಾಗಿರಬೇಕು, ಬಸವಣ್ಣ

ತಾತ್ಪರ್ಯ : ಸ್ವಂತಿಕೆ ಎನ್ನುವುದು ಪ್ರತಿಯೊಬ್ಬ ಮನುಷ್ಯನ ಅಸ್ತಿತ್ವದ ನೆಲೆಯಾಗಿದೆ. ಪೂರ್ಣಜ್ಞಾನಿಯಾದವನು ಜಗತ್ತಿನ ಎಲ್ಲ ಸ್ವಭಾವದವರಿಗೂ ಅವರವರ ರೀತಿಯಲ್ಲಿ ನಿಲುಕುತ್ತಿರುತ್ತಾನೆ. ವ್ಯಾಖ್ಯಾನಕ್ಕೆ ಒಳಗಾಗುತ್ತಿರುತ್ತಾನೆ. ಹೀಗೆ ಹಲವು ಸ್ವಭಾವಗಳಲ್ಲಿ ವಿವರಿಸಿಕೊಂಡ, ಆವರಿಸಿಕೊಂಡ ಜ್ಞಾನಿ ಜನಪ್ರಿಯತೆ ಅಥವಾ ಜಾತಿಯ ಗೀಳಿಗೆ ಸಿಕ್ಕು ಚಿಕ್ಕವನಾಗದೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ, ಹೊರತು ಪಕ್ಷಪಾತಿಯಾಗಬಾರದು.

೯೫

ಹರನೆ ಜಂಗಮನಾಗಿ ತಿರಿದುಂಡರೆ
ಧರೆ ಮೂರುಲೋಕ ಉಳಿಯುವವೆ
ಗುರುಭಕ್ತನಲ್ಲವೆ ಪ್ರಭುದೇವರು, ಬಸವಣ್ಣ

ತಾತ್ಪರ್ಯ : ಮೂರು ಲೋಕವನ್ನು ಅನ್ನ, ನೀರು, ಸಂಪತ್ತು ನೀಡಿ ಸಲುಹಬೇಕಾದ ಪರಮೇಶ್ವರನೇ ಭಿಕ್ಷೆ ಬೇಡಿದ ಮೇಲೆ ಮೂರುಲೋಕ ಉಳಿಯಬಲ್ಲವೆ. ಪರಮಾತ್ಮನ ಪಂಚವಿಶಂತಿ ಲೀಲೆಗಳಲ್ಲಿ ಭಿಕ್ಷಾಟನೆ ಮೂರ್ತಿಯ ರೂಪವು ಒಂದು. ಅಂಥ ಶಿವನೆ ತಿರುಕನಾದ ಮೇಲೆ ಈ ಲೋಕವನ್ನು ಕಾಪಾಡುವ ಶಕ್ತಿ ಅವನಲ್ಲಿ ಎಲ್ಲಿ ಇರುತ್ತದೆ. ಹರನಿಗಿಂತ ಗುರು ಮುಖ್ಯ ಎನ್ನುವ ಮಾತು ಇಲ್ಲಿನದು.

೯೬

ಒಡೆಯನಲ್ಲದಲೆ ವಡದ ಮಾನವನಲ್ಲ
ಬಡಾಯಿ ಎಂಬುವುದನರಿಯನು ಅಲ್ಲಮರಾಯ
ಬಡವರಿಗಿಂತ ಬಡವನ ಮಾಡೆಂದುಕೊಂಡು
ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಆತ್ಮ ವಿಮರ್ಶೆ ಮತ್ತು ಅಹಂಕಾರ ನಿರಸನದ ಸ್ವಭಾವ ಈ ವಚನದಲ್ಲಿದೆ. ಒಡೆಯನೆಂದರೆ ಜ್ಞಾನಕ್ಕೆ ಅಧಿಪತಿಯಾದವ ಎಂದರ್ಥ. ಅವನು ಜ್ಞಾನದಿಂದ ಪೂರ್ಣತ್ವವನ್ನು ಪಡೆದು ಪರಿಪೂರ್ಣನಾದವನೇ ಹೊರತು ಅರೆಜ್ಞಾನಿಯಲ್ಲ. ಮೈ ಮನಸ್ಸನ್ನು ಸೀಳಿಕೊಂಡು ಆತ್ಮ ಬೇರೆ, ದೇಹ ಬೇರೆ ಎಂದು ವಿಂಗಡಿಸಿ ಮನಸ್ಸು ಮತ್ತು ಮನುಷ್ಯರ ಮಧ್ಯ ಭೇದವನ್ನು ಕಲ್ಪಿಸುವ ಬಡಾಯಿಯಲ್ಲ ಅಲ್ಲಮ. ಅವನು ಶ್ರೀಮಂತನಲ್ಲ, ಮಾಲೀಕನಲ್ಲ. ಬಡವರಿಗಿಂತ ಬಡವನಾದ ಸೇವಕರಿಗಿಂತ ಸೇವಕನಾದ ಮೌನೇಶ್ವರರು ಈ ಲೋಕಕ್ಕೆ ಅರಿವಿನ ಜ್ಞಾನವನುಣಿಸಲು ಬಂದವರು.

೯೭

ಕರೆದರೆ ವ್ಯಾಪಾರವಲ್ಲ ಕೊರೆದರೆ ಹರವುವದಲ್ಲ
ಮುರಿದರೆ ಕಟ್ಟು ಅದಕಿಲ್ಲ ಕಾಷ್ಟದ ಬೊಂಬೆ
ಕರೆದರೆ ಓಯೆಂಬುವುದಲ್ಲ, ಬಸವಣ್ಣ

ತಾತ್ಪರ್ಯ : ಆತ್ಮಜ್ಞಾನ ಎನ್ನುವುದು ವಸ್ತುರೂಪದ್ದಲ್ಲ. ವಿದ್ಯೆ ತಿಳಿವಳಿಕೆಗಳು ಇಂದು ಕರೆನ್ಸಿಯಾಗುತ್ತಿರುವ ಹೊತ್ತಿನಲ್ಲಿ ಈ ಮಾತು ಮಹತ್ವದ್ದೆನಿಸುತ್ತದೆ. ಲೌಕಿಕ ಬಯಕೆಗಳಿಗಾಗಿ ಪಡೆಯುವ ವಿದ್ಯೆಗೂ ಆತ್ಮೋದ್ಧಾರಕ್ಕಾಗಿ ಸಾಧಿಸುವ ಪರ ವಿದ್ಯೆಗೂ ಅಂತರವಿದೆ. ಆತ್ಮಜ್ಞಾನವನ್ನು ವಂತಿಕೆ ಕೊಟ್ಟು ಕಲಿಯಲು ಬರುವುದಿಲ್ಲ. ಅದು ಕೊರೆದರೆ ಹರಿಯುವುದಲ್ಲ, ಮುರಿಯಲು ಕಟ್ಟಿಗೆ ಗೊಂಬೆಯಲ್ಲ, ಕರೆದರೆ ಓ ಎನ್ನುವ ಧ್ವನಿ ಅದಕ್ಕಿಲ್ಲ. ಅದೊಂದು ಆತ್ಮತೃಪ್ತಿ, ಆತ್ಮ ಸಾಕ್ಷಾತ್ಕಾರ. ಮೂಗ ತಿಂದ ರುಚಿಯಂತೆ ಬ್ರಹ್ಮಾನಂದ. ಬ್ರಹ್ಮಾನಂದ ಐಹಿಕ ನೆಲೆಗಳಿಗೆ ನಿಲುಕಲಾರದು. ಅದಕ್ಕೆ ಶ್ರಮ, ಶ್ರದ್ಧೆ ಪ್ರಾಮಾಣಿಕ ಪ್ರಯತ್ನಬೇಕು.

೯೮

ಎಷ್ಟು ಭ್ರಮಿಸಿದರಿಲ್ಲ ದೃಷ್ಟನಾದರಿಲ್ಲ
ಸೃಷ್ಟಿಗೀಶ್ವರ ಶಿವನೊಲಿವದು ಪೂರ್ವದ ಪುಣ್ಯ
ದೃಷ್ಟವೇ ಸಾಕ್ಷಿ, ಬಸವಣ್ಣ

ತಾತ್ಪರ್ಯ : ಮಾಯಾ ಮದಗಳ ಭ್ರಮೆಯಲ್ಲಿ ಮುಳುಗಿ ಏಳುವವನಿಗೆ ಶಿವ ಸಾಯುಜ್ಯ, ಆತ್ಮಸಾಕ್ಷಾತ್ಕಾರದ, ಸಾಧನೆಯ ಗುರುತು ತಿಳಿಯುವುದಿಲ್ಲ. ಆದರೆ ಸಾಧಕನಾದವನಿಗೆ ಬಾಹ್ಯ ಭ್ರಮೆಗಳಿಗಿಂತ ಅದನ್ನು ತ್ಯಜಿಸಿದ ಆತ್ಮಸಾಕ್ಷಾತ್ಕಾರವುಳ್ಳ ಜ್ಞಾನದ ಹಂಗು ಮುಖ್ಯವಾಗುತ್ತದೆ. ಶಿವನೊಲುಮೆ ಹಾಗೂ ಪೂರ್ವಪುಣ್ಯದ ಶ್ರದ್ಧೆ ಮತ್ತು ಸಾಧನೆಗಳು ತೃಪ್ತಿ ನೀಡುತ್ತವೆ. ಅಂತಹ ಜ್ಞಾನ ಲೋಕೋಪಕಾರಕ ಎನಿಸುತ್ತದೆ.

೯೯

ಹಣಕ್ಕೆ ಹನ್ನೆರಡು ಮದ ನೆಣಕ್ಕೆ ಮೂವತ್ತಾರು ಮದ
ರಣಕ್ಕೆ ರಜತಾದ್ರಿ ಸರಿಯೆ ಮದಸೊಕ್ಕಿದರೆ ಮುಂದೆ
ಗುಣತೋರುತ್ತಿಹುದು, ಬಸವಣ್ಣ

ತಾತ್ಪರ್ಯ : ಮನುಷ್ಯನ ಮದದ ವಿವಿಧ ರೂಪಗಳನ್ನು ವಚನ ಹೇಳುವಂತಿದೆ. ಹಣ ಅಂದರೆ ಸಂಪತ್ತಿನಿಂದಾಗಿ ಹನ್ನೆರಡು ಮದಗಳು ಹುಟ್ಟಿದರೆ, ಶ್ರೀಮಂತಿಕೆಯ ಸೊಕ್ಕಿನಿಂದ ಮೂವತ್ತಾರು ಮದಗಳು ಹುಟ್ಟುತ್ತವೆ. ಅದೇ ರೀತಿ ಯುದ್ಧೋನ್ಮಾದಕ್ಕೆ ರಜತಗಿರಿ ಸರಿಯಾಗದು. ಇಂಥ ಸೊಕ್ಕಿದ ಮದೋನ್ಮತ್ತರಿಗೆ ಮನುಷ್ಯನ ಸಾತ್ವಿಕ ನಡೆಗಳು ಸರಳ ಬದುಕಿನ ಕ್ರಮಗಳು ಅರ್ಥವಾಗುವುದಿಲ್ಲ.

೧೦೦

ಓಜಿನ ಶರಣೆಂದು ಮೂದಲಿಸಿ ಕುರಿಗಳು
ಮೂಜಗದ ಒಡೆಯ ಮೋನಯ್ಯನ ಬಾಧೆಗೆ
ಸಿಕ್ಕುವರೆ ನರಗುರಿಗಳು, ಬಸವಣ್ಣ

ತಾತ್ಪರ್ಯ : ಮೌನೇಶ್ವರರನ್ನು ಅವಮಾನಿಸಿದ ಪ್ರಸಂಗವನ್ನು ವಚನ ಸೂಚಿಸುವಂತಿದೆ. ಪಾಂಚಾಳ ಕುಲದಲ್ಲಿ ಹುಟ್ಟಿದ ಕಾರಣವಾಗಿ(ಓಜಿನ ಶರಣ) ನರಕುರಿಗಳು ಮೂದಲಿಸಿದರು. ಅಂಥವರು ಮೂರುಲೋಕದ ಒಡೆಯ ಮೋನಯ್ಯನ ಮಹತ್ವವನ್ನು ಅರಿಯುತ್ತಾರೆಯೆ? ಅಂತಹ ಅಜ್ಞಾನಿಗಳಿಗೆ ಶಿವಸ್ವರೂಪಿಯಾದ ಮೌನೇಶ್ವರರ ಮಹತ್ವ ಅರ್ಥವಾಗದು.

೧೦೧

ತೊಗಲ ಬೊಂಬೆಯ ನೋಡಿ ನೆಗೆನೆಗೆದು ನಗುವರು
ಅಘಹರನ ವಚನ ಸೊಗಸದೆ ಇರುವವರ
ತೊಗೆಯ ಚೆಲ್ಲುವರು ಬಂದರು ಕಾಣಾ, ಬಸವಣ್ಣ

ತಾತ್ಪರ್ಯ : ಈ ಮನುಷ್ಯನೆಂಬ ತೊಗಲುಗೊಂಬೆಯ ನೋಡಿ ಬಿದ್ದು ಬಿದ್ದು ಗಹಗಹಿಸಿ ಅಪಹಾಸ್ಯ ಮಾಡಿ ನಗುವವರು ಯಾರೆಂದರೆ ಅಘಹರ ಅಂದರೆ ಪಾಪನಾಶಕನಾದ ಶಿವನ ಮಾತು ರುಚಿಸದೆ ಇರುವವರು. ಮಾಡಿದ ಆಹಾರ ಪದಾರ್ಥಗಳನ್ನು ಸರಿಯಾಗಿ ಬಳಸದೆ ಸೊಕ್ಕಿನಿಂದ ಚೆಲ್ಲುವರು ಇವರು. ಅಜ್ಞಾನಿಗಳು ಅಹಂಕಾರಿಗಳು ಆದ ಜನರು ಇಂಥ ಹುಚ್ಚಾಟದಲ್ಲಿ ತಮ್ಮ ಬದುಕನ್ನೇ ನಾಶಮಾಡಿಕೊಳ್ಳುತ್ತಾರೆ. ಅಂಥವರ ವಿಚಿತ್ರ ನಡವಳಿಕೆಗಳನ್ನು ತಿದ್ದಲು ಜ್ಞಾನಿಗಳು ಜನ್ಮವೆತ್ತಿ ಬರುತ್ತಾರೆನ್ನುವುದು ವಚನದ ಭಾವ.

೧೦೨

ಕಾರಿಯ ಸೊಪ್ಪು ತಿಂದು ಅರಣ್ಯಕ್ಕೆ ಹೋಯಿತು
ಸೂಳೆಯ ಮಗ ಮಾಡಿದನು
ಅವನು ಕೊಟ್ಟ ಕೌಲು ಹೋಯಿತು ಕಾಣಾ, ಬಸವಣ್ಣ

ತಾತ್ಪರ್ಯ : ವಚನ ಭ್ರಷ್ಟತೆಯನ್ನು ಈ ಪದ್ಯ ಸೂಚಿಸುವಂತಿದೆ. ಆಹಾರದ ಹಾಹಾಕಾರವನ್ನು ಅದರ ಅಭಾವವನ್ನು, ಆ ಕಾರಣಕ್ಕಾಗಿ ಲೋಕದ ಜನ ಕಾರೆಯ ಸೊಪ್ಪು ತಿಂದು ಬದುಕಲು ಅರಣ್ಯಕ್ಕೆ ಹೋದರು ಎನ್ನುವ ಸಂಗತಿಯನ್ನು ವಚನ ಹೇಳುವಂತಿದೆ. ಅನಾಚಾರಿಗೆ ಅನೀತಿವಂತನಿಗೆ ಭೂಮಿ ಊಳಲು ಒಪ್ಪಂದ ಮಾಡಿಕೊಟ್ಟರೆ ಅವನು ಕೊಟ್ಟ ಮಾತು ತಪ್ಪಿದನು. ಇದರಿಂದ ಜನ ಅನ್ನ ಆಹಾರಗಳ ಸಂಕಟಕ್ಕೆ ಒಳಗಾಗಬೇಕಾಯಿತು ಎಂಬುದು ಇಲ್ಲಿನ ಭಾವ.

೧೦೩

ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ
ಕುಕ್ಕನ ಕೂಡ ಬೆರದುಂಡ ಕಾರಣದಿಂದ ಮರ್ತ್ಯಕ್ಕೆ
ಕೆಟ್ಟ ದಿನಗಳು ಬಂದೊದಗಿದವು, ಬಸವಣ್ಣ

ತಾತ್ಪರ್ಯ : ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ, ಅಂದರೆ ಚೆನ್ನಬಸವಣ್ಣನ ಅನುಭಾವದ ದಾರಿ ಹಿಡಿದ ಮೌನೇಶ್ವರರು ಕುಕ್ಕ ಅಂದರೆ ನಾಯಿಯಂಥ ಹೀನ ಮನುಷ್ಯರ ಅಜ್ಞಾನಿಗಳ ಜೊತೆ ಬೆರೆದುಂಡ ಕಾರಣದಿಂದ ಮರ್ತ್ಯಕ್ಕೆ ಕೆಟ್ಟ ದಿನಗಳು

ಬಂದವು. ಅನಾಚಾರಿ ಜನರ ಸಹವಾಸ ಬದುಕಿನ ನಾಶಕ್ಕೆ ಕಾರಣವಾಗುತ್ತದೆನ್ನುವ ಭಾವ ಇಲ್ಲಿದೆ.

೧೦೪

ಘ್ರಾಣದ ಮಂತ್ರ ಈಶ್ವರ ಪರಿಹರಿಸೊ
ವಿಶ್ವನಾಥ ಬಸವ ಭವರೋಗ ವೈದ್ಯ
ಭಕ್ತಿಗೆ ಹುಸಿ ಬಿಟ್ಟನಲ್ಲದೆ ಓಂಕಾರದ
ಒಳಭೇದವನರಿತರೆ ಹಸ್ತಕ ಶುದ್ಧ, ಬಸವಣ್ಣ

ತಾತ್ಪರ್ಯ : ಓಂಕಾರದ ಮಹಿಮೆಯನ್ನು ಹೇಳುವ ಸಂಗತಿ ಇಲ್ಲಿದೆ ಎನಿಸುತ್ತಿದೆ. ಮೌನೇಶ್ವರರು ಬಾಲ್ಯದಲ್ಲಿ ಗುರುಕುಲದಲ್ಲಿ ಶಿಕ್ಷಣ ಪಡೆಯುವಾಗ ಓಂಕಾರ ಕಲಿಸುವ ಗುರುವನ್ನೇ ಪ್ರಶ್ನಿಸಿ ಅದರ ಅರ್ಥ ಹೇಳಿದವರು. ಘ್ರಾಣದ-ಮಂತ್ರ ಎಂದರೆ ಮೂಗಿನಿಂದ ಉಚ್ಚರಿಸುವ, ನಾಭಿಯಿಂದ ಉಚ್ಚರಿಸುವ ರೀತಿ. ಓಂಕಾರದ ಅರ್ಥ ಗೊತ್ತಿಲ್ಲದೆ ಮೂಗಿಡಿದು ಕೂಡುವ, ಹಿಂಸೆಯಿಂದ ಕಂಠಪಾಠ ಮಾಡುವ ಶಿಕ್ಷೆಯಿಂದ ಬಿಡಿಸಿ ಎಚ್ಚರಿಸುವ ಮುನ್ನ ಓಂಕಾರದ ಒಳಭೇದವನ್ನು ತಿಳಿಸಿ ನನ್ನ ಜ್ಞಾನಿಯನ್ನಾಗಿಸು ಎನ್ನುವಲ್ಲಿ ಅಕ್ಷರದ ಅನುಕರಣೆ ಅಥವಾ ಉಚ್ಚಾರಣೆಯ ನಿಷ್ಕ್ರಿಯ ಸ್ಥಿತಿಯಿಂದ ಬಿಡಿಸಿ ಕ್ರಿಯೆ ಮತ್ತು ಜ್ಞಾನದ ಮೂಲಕ ಅದರ ಅರ್ಥವನ್ನು ತಿಳಿಯಬೇಕೆ ಹೊರತು ಅನುಕರಣೆಯಿಂದಲ್ಲ ಎನ್ನುವುದು ವಚನದ ಅರ್ಥ.

೧೦೫

ಏಳೇಳು ಕೋಟಿ ಲಕ್ಷ ಭಾಳಾಕ್ಷನ ಶರಣರ
ಬಾಗಿಲ ಕಾಯ್ವ ಕಿರುನಾಯಿ ಮಾಡೆಂದು
ಭಾಳಾಕ್ಷ ನಿಮಗೆ ನಮೊ ನಮೊ ಯೆಂಬೆ, ಬಸವಣ್ಣ

ತಾತ್ಪರ್ಯ : ಇದೊಂದು ಅಹಂಕಾರ ನಿರಸನ ಹಾಗೂ ಸ್ವವಿಮರ್ಶೆಯ ವಚನವಾಗಿದೆ. ಯಾವುದೇ ಮದ ಎನ್ನುವುದು ಅನುಭಾವಿಗೆ ಸಲ್ಲದು. ಕಾರಣ ಏಳೇಳು ಕೋಟಿ (ಹದಿನಾಲ್ಕು ಕೋಟಿ) ಲಕ್ಷ ಶಿವಶರಣರ ಬಾಗಿಲ ಕಾಯುವ ಕಿರುನಾಯಿ ಮಾಡೆಂದು ಮೌನೇಶ್ವರರು ಪರಮಾತ್ಮನಲ್ಲಿ ಕೋರುತ್ತಾರೆ. ಆ ಮೂಲಕ ಕುಲ ಮದದ ಹಾಗೂ ಜ್ಞಾನ ಮದದ ಅಹಂಕಾರಗಳನ್ನು ವಿಸರ್ಜಿಸುತ್ತಾರೆ.

೧೦೬

ಕಾಯದ ಕರ್ಮಾಂತ್ರ ಹೋಗಲಿಬೇಕೆಂದು
ದೇವ ಬಸವಣ್ಣನೆ ಹೋಗೆಂದು ಕಳುಹಿದರು
ನಾಯಿಗಳಿಗ್ಯಾಕೆ ತಿಳಿಯದು, ಬಸವಣ್ಣ

ತಾತ್ಪರ್ಯ : ಯಾವುದೋ ಜನ್ಮದಲ್ಲಿ ಮಾಡಿದ ಕಾಯ ಕರ್ಮಗಳು ಈ ದೇಹಕ್ಕೆ ಈ ಜನ್ಮದಲ್ಲಿ ಅಂಟಿಕೊಂಡಿವೆ. ಅದನ್ನು ಕಳೆದು ಬರಲು ಭುವಿಗೆ ಆ ಬಸವಣ್ಣನೇ ಕಳುಹಿಸಿದನು. ಅಜ್ಞಾನಿ ಮಾನವರಿಗೆ ಈ ಉದ್ದೇಶ ಯಾಕೆ ತಿಳಿಯದು.

೧೦೭

ತಾ ತನ್ನ ಶಿವಶರಣರ ಮನೆಯ ಹಮ್ಮಿನ ಅಂಬಲಿಯ
ಉಂಬುತ ಚೆನ್ನಯ್ಯನವರ ಮಗನೆನುತ ಪರಬ್ರಹ್ಮದ
ಕನ್ನಡಿಯಕೊಂಡು ಧರೆಗಿಳಿದು ಬಂದದ್ದು
ಕಣ್ಣು ಮೂರುಳ್ಳವರು ನೀವು ನೋಡಿಯೆಂದಿನ್ನು
ಬಿನ್ನೈಸಿ ಹೇಳಿದ ವಚನವು, ಬಸವಣ್ಣ

ತಾತ್ಪರ್ಯ : ಪುರಾತನ ಅನುಭಾವಿಗಳ ಅನುಭಾವವೆಂಬ ಜ್ಞಾನದ ಅಂಬಲಿಯ ಉಣ್ಣುತ್ತ, ಚೆನ್ನಯ್ಯನವರ ಮಗನೆನುತ ಪರಿಪೂರ್ಣ ಪರಬ್ರಹ್ಮನಾಗಿ ಧರೆಗೆ ಬಂದೆನು. ಪರಬ್ರಹ್ಮದ ಕನ್ನಡಿ ಎಂದರೆ ತನ್ನ ತಾ ತಿಳಿದ ನಿಜಶರಣ ಎಂದರ್ಥ. ಅಂತಹ ಮಹಾಜ್ಞಾನಿಯನ್ನು ಕಣ್ಣು ಮೂರುಳ್ಳ ಜ್ಞಾನಿಗಳು ಶಿವಶರಣರು ಅರ್ಥಮಾಡಿ ಕೊಳ್ಳಿರಿ ಎಂದು ಹೇಳಿದ ಸಂಗತಿ ಇಲ್ಲಿದೆ.

೧೦೮

ಪರಮಪಾವನ ಗುರುವೆಂಬುದು ಅರಿಯದೆಲೆ
ಗರ್ವಿಗಳ ಕಾಲು ಹಿಡಿದ ಕಾರಣದಿಂದ
ಬರ ದಾಳಿ ಭವರೋಗ ತಂದಂಥ
ಗುರುರಾಯ, ಚೆನ್ನಬಸವಣ್ಣ

ತಾತ್ಪರ್ಯ : ಜ್ಞಾನ ವೃದ್ಧರು ವಯೋವೃದ್ಧರೆಂದೂ ಗುರು ಸ್ವರೂಪರೆಂದು ನಂಬಿ ವೇಷಡಂಭಕರೂ ಕಪಟಿಗಳೂ ಆದ ಗರವಿಗಳ ಕಾಲು ಹಿಡಿದ ಕಾರಣದಿಂದ ಮರ್ತ್ಯಕ್ಕೆ ಬರ, ದಾಳಿ, ಭವರೋಗ ತಂದ ಚೆನ್ನಬಸವಣ್ಣ. ಜ್ಞಾನಿಗಳಿಗಾದ ಅವಮಾನ ಅಗೌರವ ಒಂದು ನಾಡನ್ನೆ ಹಾಳು ಮಾಡುತ್ತದೆನ್ನುವುದು ಇಲ್ಲಿನ ಭಾವ.

೧೦೯

ಬಂದದ್ದನುಂಡು ಬಾರದ್ದು ಬಯಸನು
ಒಂದೆ ಮನದಲ್ಲಿ ಶಿವಶಿವ ಎಂದನು
ದಂಡನಾಯಕನು ಶರಭನು, ಬಸವಣ್ಣ

ತಾತ್ಪರ್ಯ: ದಂಡನಾಯಕ ಶರಭನು ಬಂದದ್ದನ್ನು ಉಂಡು, ಇರದೇ ಇರುವುದನ್ನು ಬಯಸದೆ ಒಂದೇ ಮನದಲ್ಲಿ ಶಿವಶಿವ ಎಂದು ಜಪಿಸುತ್ತಾ ಇರುವುದನ್ನೇ

ನಂಬಿಕೆಯಿಂದ ಸ್ವೀಕರಿಸಿ ಪುನೀತನಾದನು ಬಹುಶಃ ಶಿವನ ಶರಭಾವತಾರವನ್ನು ವಚನ ಹೇಳುತ್ತಿರಬಹುದು.

೧೧೦

ತುರುಕರ ತಿರುಕರ ಮುರುಕವ ಬಿಡಿಸಿದ
ನರಕ ಭಾಜನಕ್ಕೆ ಎಳಸಿದ ಅಲ್ಲಮನೆಂಬ
ಅರಿಕೆ ಇಲ್ಲದ ನರರಿಗೆ, ಆಳನೆ ಅರಸನ ಮಾಡಿ
ಸೂಳೆಯ ಗರ್ತಿಮಾಡಿ
ನೀಳು ಮಾಡಿದನು ಮರ್ತ್ಯವನು ಅಲ್ಲಮರಾಯನ
ಆಳಿಗೊಂಡಂಥ ಪರಮ ಪಾತಕದಿಂದಲಿ
ಮೂಳನ ಮಾಡಿದ ಮುರಕ, ಬಸವಣ್ಣ

ತಾತ್ಪರ್ಯ : ತುರಕ ತಿರುಕರ ವಕ್ರಬುದ್ಧಿಯನ್ನು ಕಂಡಿದ್ದ ಮೌನೇಶ್ವರರು ಅವರನ್ನು ತಿದ್ದಲು ನರಕಕ್ಕೇ ತಳ್ಳಿದರೂ ಅಲ್ಲಮ್ಮನೆಂಬ ತಿಳುವಳಿಕೆ ಇವರಿಗೆ ಬರಲಿಲ್ಲ. ಅಹಂಕಾರಿ ಅರಸನ ಮದ ಮುರಿದು ಪ್ರಜಾಪಾಲಕನನ್ನಾಗಿಯೂ ದೇವರ ಹೆಸರಿನಲ್ಲಿ ಬಿಡುತ್ತಿದ್ದ ದೇವದಾಸಿ ಪದ್ಧತಿಯನ್ನು ನಿಲ್ಲಿಸಿ ಸೂಳೆಯರಿಗೆ ಲಗ್ನವಾಗುವ ಅವಕಾಶವನ್ನು ಸೃಷ್ಟಿಸಿ, ಅಜ್ಞಾನ ಹಾಗೂ ಮೂಢನಂಬಿಕೆಯಿಂದ ನಡೆಯುತ್ತಿದ್ದ ಲೋಕದ ಜನರಿಗೆ ಒಳ್ಳೆಯದು ಮಾಡಿದವರು ಮೌನೇಶ್ವರರು. ಅಲ್ಪಮತಿ ಹಾಗೂ ಅವಿವೇಕಗಳಿಂದ ಗರ್ವಿಷ್ಠರಾಗಿದ್ದ, ಮೂಢನಂಬಿಕೆಗಳ ದಾಸರಾಗಿದ್ದ ದೀನ ದಲಿತರನ್ನು ಆ ಕಂದಕದಿಂದ ಬಿಡಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬಿ ಹೊಸಬೆಳಕು ಹಾಗೂ ಬದುಕು ತೋರಿಸಿದ ಸಂಗತಿಯನ್ನು ಈ ವಚನ ಅರಹುತ್ತದೆ.

೧೧೧

ವೇಸಿ ದಾಸಿಗಾಡಿ ವಾಸಪಂಥಕ್ಕಾಡಿ
ಕಾಸುವೀಸಕ್ಕಾಡಿ ಕಡದಾಡಿ ಸತ್ತಂಥಾ
ಕೀಸುಮಾದಿಗರು ಇವರು ತಮ್ಮ
ಈಶ್ವರನ ಗುರುತವನರಿಯರು, ಬಸವಣ್ಣ

ತಾತ್ಪರ್ಯ : ವೇಷಡಂಭಕನಾದ ಮನುಷ್ಯ ಬದುಕಿನುದ್ದಕ್ಕೂ ದುರಾಸೆಯಿಂದ ಮನೆ, ಮಕ್ಕಳು, ಸಂಪತ್ತು, ಪಾಲು, ಮತ, ಪಂಥ, ಇದಕ್ಕಾಗಿಯೇ ಕಡಿದಾಡಿ ಸತ್ತರು. ಅಜ್ಞಾನವಶರಾಗಿ ಇಂತಹ ಜನರು ಭಗವಂತನ ಗುರುತನರಿಯದಾದರು. ಆಶೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ ಎನ್ನುವ ಅಲ್ಲಮನ ವಚನವನ್ನು ನೆನಪಿಸುವಂತಿದೆ ವಚನ.

೧೧೨

ಮೊರೆ ಹೊಕ್ಕರೆ ಕೊಡೆನೆಂಬ ಗರ್ವ ನನಗ್ಯಾತಕೆ
ಕರ್ಮಿಪಾತಕ ನಾನು ಜಗಕೆಲ್ಲ ಶಿವಶರಣರ
ಕೆರವಿಗಿಂಥ ನಾನು ಕಡಿಮೆಯ್ಯ, ಬಸವಣ್ಣ

ತಾತ್ಪರ್ಯ : ಬೇಡಿ ಬಂದವರಿಗೆ ಉಣಲಿಕ್ಕದ ಗರ್ವ ನನಗ್ಯಾಕೆ, ಲೋಕದ ನರರಿಗೆ ತಿಳುವಳಿಕೆ ಹಂಚಲು ಆ ಪರಮಾತ್ಮ ನನ್ನ ಕಳಿಸಿರುವಾಗ ಕರ್ತವ್ಯ ಪಾಲಿಸದ ನಾನು ಶಿವಶರಣರ ಪಾದರಕ್ಷೆಗಿಂತ ಕಡಿಮೆ ಎಂದು ತನ್ನ ಅಹಂಕಾರ ನಿರಸನವನ್ನು ಮೌನೇಶ್ವರರು ಇಲ್ಲಿ ಮಾಡಿಕೊಂಡಿದ್ದಾರೆ. ಅತೀ ಸಾಮಾನ್ಯರಲ್ಲಿ ಸಾಮಾನ್ಯರೆನ್ನುವ ಭಾವ ಇಲ್ಲಿನದು.

೧೧೩

ವಸ್ತ್ರದ ಬೆಳಕಿಗೆ ಸುತ್ತಿ ಸುತ್ತಿ ಆಡಿದೆನು
ಬತ್ತಲಾಗುವುದು ದಿಟವು ಪ್ರಭುದೇವರನ
ಕತ್ತಲೆಯೊಳಗೆ ನಾನು ಕಾಣಲರಿಯೆನು
ನಾನು ಒಕ್ಕಲಿಗಿಂತ ಕಡಿಮೆಯ್ಯ, ಬಸವಣ್ಣ

ತಾತ್ಪರ್ಯ : ಬಾಹ್ಯದಾಡಂಬರಕ್ಕೆ ಒಲಿದ ನಾನು ಮನದ ಬೆತ್ತಲೆಯನ್ನು ಅರಿಯದೆ ತನು ಬೆತ್ತಲೆಯನ್ನು ಮಾತ್ರ ಕಂಡೆನು. ಅಂತಹ ನನ್ನ ಅಜ್ಞಾನದಿಂದಾಗಿ ಪ್ರಭುದೇವರಂಥ ಜೋತಿಸ್ವರೂಪನನ್ನು ಕಾಣದಾದೆನು. ಆ ಕಾರಣ ಶರಣರ ಒಕ್ಕಲಿಗಿಂತ ಸಣ್ಣವನಾದೆನು ಎನ್ನುವಲ್ಲಿ ನಿರಹಂಕಾರ ಭಾವನನ್ನು ಕಾಣಬಹುದು.

೧೧೪

ಪುಸಿಯಿಂದಲಿ ನಾನು ದೆಸೆಗೆಟ್ಟಿನೆಲೆ ಗುರುವೆ
ನಿಮ್ಮ ಪಾದವನು ನೆನೆಯದಲಿ ಹೊಂದಿ ಹೊರದು
ಬಂದವರನೆಲ್ಲ ತಂದೆ ತಾಯಿಯೆಂದು ಕಾಣದಲಿ
ನಿಂದಿಸಿ ಕುಂದಿಸಿ ಬೈದ ಕಾರಣದಿಂದ
ಬಂದಿಖಾನಿಯ ಶೋಭಿತರಾದರು, ಬಸವಣ್ಣ

ತಾತ್ಪರ್ಯ : ಮದ ತುಂಬಿದ ಅಜ್ಞಾನದಿಂದಾಗಿ, ಮೋಹಿತನಾಗಿ ಭ್ರಮೆಯಿಂದ ಸುಳ್ಳನಾಡಿ ನಾನು ದಾರಿಗೆಟ್ಟೆ ದಿಕ್ಕುಗೆಟ್ಟೆ. ಗುರುವೆ ನಿಮ್ಮ ಪಾದವನು ಹೊಂದದೆ ಅಜ್ಞಾನಿಯಾದೆ. ಅರಸಿ ಬಂದವರನ್ನು ತಂದೆ ತಾಯಿ ಬಂಧು ಬಳಗವೆಂದು ಕಾಣದೆ ಸೊಕ್ಕಿನಿಂದ ನಿಂದಿಸಿ ಅವಮಾನಿಸಿದ ಕಾರಣ ನಾನು ಕರ್ಮದ ಸೆರೆಮನೆಗೆ ತಕ್ಕವನಾದೆ ಎನ್ನುವಲ್ಲಿ ಅಹಂಭಾವ ಕಳೆದುಕೊಳ್ಳುವ ನೆಲೆಯಿದೆ.

೧೧೫

ಬರಿಯ ಭ್ರಾಂತಿ ಹಿರಿದೆಂದುಕೊಂಬುವರು
ಗುರುವಿನುಪದೇಶ ಗುಣವೆಂದು ತಿಳಿಯದಲೆ
ಕರ್ಮಿಚಾಂಡಾಲ ಹೊಲೆಯರೆನ್ನದೆ ಬಿಡರು
ಏನಾದದ್ದು ತನ್ನ ಆನಂದ, ಬಸವಣ್ಣ

ತಾತ್ಪರ್ಯ : ತಾವು ಪಂಡಿತ, ಜ್ಞಾನಿಗಳೆಂಬ ಭ್ರಾಂತಿಯಲ್ಲೆ ಬದುಕುವರು. ಸಾಧನೆ ಮಾಡಲೊಲ್ಲರು. ಗುರುವಿನುಪದೇಶವನ್ನು ಪಡೆಯರು. ಇಂಥ ಸ್ವಯಂ ಅಹಂಕಾರಿಗಳನ್ನು ಗರ್ವಿಷ್ಠರನ್ನು ಕರ್ಮ ಚಾಂಡಾಲರು ಕಟುಕರು ಎಂದು ಕರೆಯದೆ ಇರಲಾಗದು. ಕಾರಣ ಪೂರ್ಣಜ್ಞಾನಿಯಾದವನಿಗೆ ವಿನಯ, ಸಮಾಧಾನ, ವಿವೇಕ ಬಹಳ ಮುಖ್ಯ. ಅಂಥವರಿಂದ ಈ ಲೋಕಕ್ಕೆ ಸನ್ಮಾರ್ಗ ದಕ್ಕುತ್ತದೆ.

೧೧೬

ಬಡಿಗ ಕಮ್ಮಾರರು ಪೊಡವಿಗಧಿಕರ್ತರು
ಬಡಿದು ಬತ್ತೀಸ ಆಯುಧವ ಮಾಡಿ ಸರ್ವರಿಗೆ
ಕೊಡುವರಯ್ಯ, ಬಸವಣ್ಣ

ತಾತ್ಪರ್ಯ : ಕ್ರಿಯೆ, ಜ್ಞಾನ ಮತ್ತು ಇಚ್ಛಾಶಕ್ತಿಯಿಂದಾಗಿ ಬಡಿಗ ಕಮ್ಮಾರರು ಈ ಸೃಷ್ಟಿಗೆ ಕಾರಣಕರ್ತರಾಗಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ಕುಲುಮೆ ಮತ್ತು ಅಡಿಗಟ್ಟಿಯಲ್ಲಿ ಬಡಿದು, ಬತ್ತೀಸ ಆಯುಧಗಳ ನಿರ್ಮಿಸಿ ಲೋಕದ ಜನರಿಗೆ ನೀಡಿ ಅವರ ಸ್ವಾವಲಂಬಿ ಬದುಕಿಗೆ ಕಾರಣವಾಗಿದ್ದಾರೆ. ಶರಣ ಚಳುವಳಿಯು ಕಾಯಕದ ಮಹತ್ವ ಹೇಳಿದರೆ ಮೌನೇಶ್ವರರು ಒಂದು ಹೆಜ್ಜೆ ಮುಂದೆ ಹೋಗಿ ಉದ್ಯೋಗ ಮತ್ತು ಅದಕ್ಕೆ ಬೇಕಾದ ಆಯುಧಗಳನ್ನು(ಮೂಲಭೂತ Essential) ಸೃಷ್ಟಿ ಮಾಡಿ ಕೊಡುವ ಮೂಲಕ ದೇಸಿ ಔದ್ಯೋಗಿಕ ಕ್ರಾಂತಿಗೆ ಕಾರಣವಾಗುತ್ತಾರೆ. ಅಂಥ ಒಂದು ಕ್ರಾಂತಿಕಾರಿ ಸೂಚನೆ ಈ ವಚನದಲ್ಲಿದೆ.

೧೧೭

ಸುತಾರ ಮಾಡಿದ್ದು ಭೂತಗಳಲ್ಲದೆ
ಭೂತಕ್ಕೆ ಎಲ್ಲಿಯ ದೈವ
ಮಾತಿನಮಾಲೆ ರಣಮಾಲೆ, ಬಸವಣ್ಣ

ತಾತ್ಪರ್ಯ : ಸೃಷ್ಟಿಕರ್ತವಾದ ಸುತಾರ ಅಂದರೆ ಬಡಿಗ ಸಕಲ ಜೀವಜಂತುಗಳ ನಿರ್ಮಾತೃ. ಆತನ ಕೆಲಸವೇ ಕಾಷ್ಠ ಶಿಲ್ಪಗಳನ್ನು ಮಾಡುವುದು. ಭೂತ ಎಂದರೆ ಯಾವುದೇ ವಸ್ತುವೂ ಆಗಬಹುದು, ಭೂತಕಾಲವು ಆಗಬಹುದು. ಪಂಚಭೂತಗಳ ಪರಿಕಲ್ಪನೆಯೂ ಆಗಬಹುದು. ಅದಕ್ಕೆ ಅದೇ ಸಾಟಿ ಎನ್ನುವಂತೆ ಪಂಚಭೂತಗಳೇ

ಸಕಲ ಚರಾಚರಗಳ ಸೃಷ್ಟಿಗೆ ಕಾರಣವಾಗಿರುವಾಗ ಅವುಗಳ ಸೃಷ್ಟಿಗೆ ಇನ್ನೊಂದು ಕಾರಣ ಅಥವಾ ಪ್ರಮಾಣ ಇರಲಾರದು. ಶೂನ್ಯ ತತ್ವ ಅಥವಾ ಬಯಲ ತತ್ವವನ್ನಿಲ್ಲಿ ಕಾಣಬಹುದು.

೧೧೮

ಶಿಲೆಯೊಳು ಲೋಹವ ನಿರ್ಮಿತವ ಮಾಡಿದ ಗುರುತರಿಯೆ
ಕುಲುಮಿಯ ಗುರುತ ಮೊದಲರಿಯೆ ನನಗೊಂದು
ಕುಲಮಿ ಮತ್ತೆಲ್ಲಿ ಬೆದಕಲಿ ನನ್ನಂಥ
ಹೊಲೆಯರುಂಟೇನು ಧರೆಯೊಳಗೆ, ಬಸವಣ್ಣ

ತಾತ್ಪರ್ಯ : ಅಹಂಕಾರ ನಿರಸನದ ವಚನ ಇದಾಗಿದೆ. ಕುರುವಿಡಿದು ಆಚರಿಸಿ ಕುರುಹನ್ನೆ ವಿಸರ್ಜಿಸುವ ಅಲ್ಲಮನ ತಾತ್ತ್ವಿಕತೆ ಇಲ್ಲಿದೆ. ಇದು ವಿಶ್ವಕರ್ಮ. ತಾತ್ತ್ವಿಕತೆ ಕೂಡ ಹೌದು. ಶಿಲೆ, ಲೋಹ, ಕಟ್ಟಿಗೆಯಲ್ಲಿ ವಿವಿಧ ರೀತಿಯ ನಿರ್ಮಿತಿಗಳನ್ನು ಮಾಡುವುದು ಪಾಂಚಾಳರ ಕಾಯಕದ ಶಕ್ತಿ. ಇದಕ್ಕೆಲ್ಲ ಕುಲುಮಿ ಅಡಿಗಟ್ಟಿಗಳ ಆಶ್ರಯಬೇಕು. ಕುಲುಮಿಯಲ್ಲಿ ಹುಟ್ಟಿದ ಯಾವ ವಸ್ತುಗಳಾಗಲಿ, ಪಾಂಚಾಳರ ಕೈಯಲ್ಲಿ ಹುಟ್ಟಿದ ಯಾವ ನಿರ್ಮಿತಿಗಳೂ ಅವರ ನಿಜ ಹೆಸರಿನಲ್ಲಾಗಲೀ ದಾಖಲಾಗಿ ಉಳಿಯುವುದಿಲ್ಲ. ಹೀಗಿರುವಾಗ ಇದನ್ನು ನಾನು ಮಾಡಿದೆ, ಇದು ನನ್ನ ಸೃಷ್ಟಿ, ಇದಕ್ಕೆ ನಾನು ಕಾರಣ ಎನ್ನುವುದು ಅಹಂಕಾರ ತುಂಬಿದ ಅಜ್ಞಾನಿಗಳ ಮಾತಾದೀತು. ವಿಶ್ವಕರ್ಮನೆ ಸೃಷ್ಟಿಕರ್ತನಾಗಿರುವ ಕಾರಣ ಹಕ್ಕಿನ ಪ್ರಶ್ನೆ ಹೆಸರಿನ ಪ್ರಶ್ನೆ ಬರುವುದಿಲ್ಲ. ಜ್ಞಾನಿಯಾದವನಿಗೆ ನಾನು ನನ್ನದು ಎನ್ನುವ ವ್ಯಾಮೋಹವಿರುವುದಿಲ್ಲ. ಅಜ್ಞಾನಿಗಳು ಮಾತ್ರ ಇಂತಹ ನಡವಳಿಕೆಯನ್ನು ತೋರಬಲ್ಲರು.

೧೧೯

ಅಲ್ಲಿ ಶಿವಶರಣರ ಮನೆಯ ಪಾದರಕ್ಷೆಯ
ಹೊಲಿವ ಮಾದಿಗರ ಮಗನೆನುತ
ಪರಬ್ರಹ್ಮದ ಭೇದವಕೊಂಡು ಧರೆಗಿಳಿದ
ಮರ್ತ್ಯದೊಳಗಣ ಸಾಧನವುಳ್ಳ ಹಿರಿಯ ಮಾನ್ಯರು
ಭೇದಿಸಿ ನೋಡಿ ಇದರೊಳಗೆ, ಬಸವಣ್ಣ

ತಾತ್ಪರ್ಯ : ಕಿಂಕರ ಭಾವವನ್ನು ವಚನ ಸೂಚಿಸುತ್ತದೆ. ಪೂರ್ವಸೂರಿಗಳು ಅನುಭಾವಿಗಳು ಆದ ಶಿವಶರಣರ ಮನೆಯ ಪಾದರಕ್ಷೆಯ ಹೊಲಿವ ಮಾದಿಗರ ಮಗನೆನುತ ಪರಬ್ರಹ್ಮದ ಭೇದವ ತಿಳಿದು ಅನುಭಾವಿಯಾಗಿ ಧರೆಗೆ ಬಂದಿದ್ದೇನೆ. ಮರ್ತ್ಯದೊಳಗೆ ಸಾಧನೆ ಮಾಡಿದ ಹಿರಿಯರು ನನ್ನನ್ನು ಪರೀಕ್ಷಿಸಿರಿ, ದೋಷಗಳಿದ್ದರೆ ತಿದ್ದಿರಿ ಎಂದು ಆಹ್ವಾನ ನೀಡುತ್ತಾರೆ.

೧೨೦

ಕೀಲಿಸಿ ತೆಗೆದಂತೆ ನೀಲವರ್ಣದ ಲಿಂಗ
ಜಾಲಿಸಿ ತೆಗೆದನು ಹರಪಾದ ಧರ್ಮಕ್ಕೆ
ಮೇಲೆಂದು ತೆಗೆದ ಗುರುಪಾದ, ಬಸವಣ್ಣ

ತಾತ್ಪರ್ಯ : ಹರನಿಗಿಂತ ಗುರು ದೊಡ್ಡವ ಎನ್ನುವ ಅಂಶ ಇಲ್ಲಿದೆ. ಕೆತ್ತಿ ಮಾಡಿ ಸೇರಿಸಿದ ನೀಲವರ್ಣದ ಲಿಂಗ, ಜಾಲಿಸಿ ಅಂದರೆ ಸೋಸಿ ತೆಗೆದರೂ ಆ ಲಿಂಗ ಗುರುವಿಗಿಂತ ಶ್ರೇಷ್ಠವೆನಿಸಲಿಲ್ಲ. ಗುರುಪಾದವು ಹರಪಾದಕ್ಕಿಂತ ದೊಡ್ಡದು. ಗುರು ಅರಿವಿನ ಆಗರ. ಹೀಗಾಗಿ ಗುರು ದೊಡ್ಡವ. ಹರ ಮುನಿದರೆ ಗುರು ಕಾಯುವ ಎನ್ನುವ ಭಾವ ಇಲ್ಲಿನದು.

೧೨೧

ಸಂಗನ ಶರಣರ ಹಂಗಿಸಿ ಭಂಗಿಸಿ
ರಂಗನ ಕಾಲು ಹಿಡಿಸಿದ ಲೋಕಕ್ಕೆ
ಭಂಗಿಯ ತಿನಿಸಿ ಕುಣಿಸಿದ ಅಲ್ಲಮನೆಂಬ
ಮಂಗಳ ಮಹಿಮನ ತಿಳಿಯರು, ಬಸವಣ್ಣ

ತಾತ್ಪರ್ಯ : ಶರಣರ ಧರ್ಮವನ್ನು ತಿರಸ್ಕರಿಸಿ(ವೀರಶೈವ) ವೈಷ್ಣವ(ರಂಗನ ಕಾಲು ಹಿಡಿದ)ಧರ್ಮವನ್ನು ಸ್ವೀಕರಿಸಿದ ಮತಾಂತರಿಗಳನ್ನು ಹೀನಯವಾಗಿ ಬಗೆಬಗೆಯಲ್ಲಿ ಅಲ್ಲಮನು ಶಿಕ್ಷಿಸಿದ್ದಾನೆ. ಆ ಮಹಾಮಹಿಮನ ಘನತೆಯನ್ನು ನರಮಾನವರು ಅರಿಯಲಾರರು. ಮೌನೇಶ್ವರರ ಕಾಲದಲ್ಲಿ ನಡೆಯುತ್ತಿದ್ದ ಮತಾಂತರದತ್ತ ವಚನ ಗಮನ ಸೆಳೆಯುತ್ತದೆ.

೧೨೨

ಮಲಹರನ ಭಕ್ತರು ಹೊಲೆ ಮಾದಿಗರ ಮನೆಯ
ಚಲವಿ ಆಗಬೇಕು ಎನುತಲಿ
ಛಲವ ಹಿಡಿದನು, ಬಸವಯ್ಯ

ತಾತ್ಪರ್ಯ : ಮಲಹರ ಅಂದರೆ ಶಿವನ ಭಕ್ತರೂ ಅನುಭಾವಿಗಳೂ ಆದ ಶಿವಶರಣರು. ಅವರು ಜಾತಿ ಶ್ರೇಣಿಯಲ್ಲಿ ಕೀಳೆಂದು ಪರಿಗಣಿಸಲ್ಪಟ್ಟ ಹೊಲೆಮಾದಿಗರ ಮನೆಯ ಸೇವೆ ಮಾಡಿ ತಮ್ಮ ಮಾಯಾಮದಗಳನ್ನು ಕಳೆದುಕೊಂಡು ನಿರಹಂಕಾರಿಗಳಾದರು, ಪೂರ್ಣಜ್ಞಾನಿಯಾದರು. ಶ್ರೇಣೀಕರಣ ವ್ಯವಸ್ಥೆಯ ಪಲ್ಲಟವನ್ನು ಮೌನೇಶ್ವರರು ಮಾಡುತ್ತಾರೆ.

೧೨೩

ಸೃಷ್ಟಿ ಭೂಪರನು ಭಟ್ಟನಾಗಿ ಹೊಗಳಿದೆನು
ಬಟ್ಟೆಯು ಎನಗೆ ದೊರಿಲಿಲ್ಲ ಅಲ್ಲಮನ ಮನಿಯ
ಪಟ್ಟಗುಡಮನಯ್ಯ ಪರದೇಶಿಯ
ಇಟ್ಟುಕೊಂಬವರುಂಟೆ ಧರೆಯೊಳಗೆ, ಬಸವಣ್ಣ

ತಾತ್ಪರ್ಯ : ಆಳುವ ಅರಸರನ್ನು ಹೊಗಳು ಭಟ್ಟನಾಗಿ ಹೊಗಳಿ ಹೊಗಳಿ ದಾರಿ ತಪ್ಪಿದೆ. ಇದರಿಂದಾಗಿ ಜ್ಞಾನದ ದಾರಿ ನನಗೆ ದೊರೆಯಲಿಲ್ಲ. ಅಲ್ಲಮನ ಅನುಭಾವದ ದಾರಿ ಹಿಡಿದ ಅವನ ಮನೆಯ ಸೇವಕನಾದ ಈ ಪರದೇಶಿಯನ್ನು ಯಾರಾದರೂ ತಮ್ಮ ಮನೆಯಲ್ಲಿ ಇಟ್ಟುಕೊಳ್ಳುವರೇ ಈ ಧರೆಯೊಳು ಎಂದು ಮೌನೇಶ್ವರರು ನಿರಹಂಭಾವವನ್ನು ತೋರಿಸುತ್ತಾರೆ.

೧೨೪

ಪಂಚಾನನ ಪರಬ್ರಹ್ಮ ಮುಂಚೆ ಕಲಿಯುಗಕ್ಕಾಧಾರ
ವಂಚನಿಲ್ಲದಲೆ ಹದಿನೆಂಟು ಜಾತಿಗೆ ಅನ್ನವ
ಹಂಚಿ ನೀಡುವನು, ಬಸವಣ್ಣ

ತಾತ್ಪರ್ಯ : ಪಂಚಾನನ ಪರಬ್ರಹ್ಮ ಅಂದರೆ ವಿಶ್ವಕರ್ಮ ಪರಬ್ರಹ್ಮನು ಕಲಿಯುಗಕ್ಕೆ ಆಧಾರವಾಗಿದ್ದಾನೆ. ಅಲ್ಲೋಲ ಕಲ್ಲೋಲವಾಗಿರುವ ಲೋಕವನ್ನೂ ಅದರಲ್ಲಿರುವ ಹೊಲೆ ಹದಿನೆಂಟು ಜಾತಿಗಳಿಗೂ ವಂಚನೆಯಿಲ್ಲದೆ, ಅನ್ನ ನೀಡಿ ಸಲುಹ ಬಂದವನು ಎನ್ನುವಲ್ಲಿ ಅನ್ನ, ನೀರು, ಕುಲದ ಮದದಿಂದ, ಮಡಿ ಮೈಲಿಗೆ ಎನಿಸುತ್ತಿದ್ದ ಜಗತ್ತಿನಲ್ಲಿ ಸಮಾನತೆಯ ತತ್ತ್ವ ಸಾರುತ್ತಾರೆ, ಲೋಕಕ್ಷಯವನ್ನು ತಡೆಯುತ್ತಾರೆ.

೧೨೫

ಹಿರಿಯನೆಂಬೆನೆ ಗಂಗೆಯ ಶಿರದಲ್ಲಿರಿಸಿಕೊಂಡವನ
ಕಿರಿಯನೆಂಬೆನೆ ದೇವರಿಗೆ ದೇವನೆನಿಸಿದವನ
ಉರಗಾಭರಣ ಉಮಾಪತಿಯು, ಬಸವಣ್ಣ

ತಾತ್ಪರ್ಯ : ಗಂಗೆಯನ್ನೇ ಶಿರದಲಿರಿಸಿಕೊಂಡ ಕಾರಣಕ್ಕೆ ಶಿವನನ್ನು ಹಿರಿಯನೆನ ಬಹುದೆ? ಅಥವಾ ದೇವರಿಗೆ ದೇವರಾದ ದೇವನೆನಿಸಿಕೊಂಡ ಉರಗ ಆಭರಣ ಉಮಾಪತಿಯನ್ನು ಕಿರಿಯನೆನಬಹುದೆ; ಎಂದು ಶಿವನ ಎರಡು ರೂಪಗಳಲ್ಲಿನ ವ್ಯತ್ಯಾಸದ ಚರ್ಚೆ ಇಲ್ಲಿದೆ. ದೇವರಿಗೆ ದೇವ ಎನ್ನುವುದು ವಿಶ್ವಕರ್ಮನಿಗೂ ಸಲ್ಲುವ ಮಾತು. ಇವರಿಬ್ಬರಲ್ಲೂ ಭೇದ ಇಲ್ಲ. ಹಿರಿ ಕಿರಿ ಎಂಬ ಮೇಲು ಕೀಳು ಇಲ್ಲ. ಇಬ್ಬರೂ ಒಂದೇ ಎನ್ನುವ ಅಭೇದ ತತ್ತ್ವ ಇಲ್ಲಿದೆ.

೧೨೬

ಅಡವಿ ಅಂಗಳಮಾಡಿ ಗಿಡವು ಪಟ್ಟಣಮಾಡಿ
ಸುಡಗಾಡು ಮನೆಮಾಡಿ ಕುಳತಿ
ಎನ್ನೊಡೆಯ ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಅರಣ್ಯ ನಾಶ ಮತ್ತು ನಗರೀಕರಣದ ಸೂಚನೆಯನ್ನು ವಚನ ಸೂಚಿಸುವಂತಿದೆ. ಅಡವಿ ಮತ್ತು ಗಿಡ(ಬೋಧಿವೃಕ್ಷ)ಭಾರತದ ಆಧ್ಯಾತ್ಮ ಹಾಗೂ ತತ್ವಜ್ಞಾನದ ಬಹುಮುಖ್ಯ ಸಂಕೇತಗಳು. ಭಾರತೀಯ ಜ್ಞಾನ ವಿಜ್ಞಾನದ ಶ್ರೀಮಂತ ನೆಲೆಗಳು. ಅಡವಿ ಅಂಗಳವಾಗುವ ಗಿಡವು ಪಟ್ಟಣವಾಗುವ, ಸುಡುಗಾಡನ್ನೇ ಮನೆಯಾಗಿಸುವ ಸಂಗತಿಗಳು ಭಾರತೀಯ ಸಾಮಾಜಿಕ, ಆಧ್ಯಾತ್ಮಿಕ, ಧಾರ್ಮಿಕ, ಬೌದ್ಧಿಕ ಹಾಗೂ ಸಾಂಸ್ಕೃತಿಕ ಬದುಕಿನ ನಾಶವನ್ನು ಹೇಳುತ್ತವೆ. ಆಧುನಿಕ ಮನುಷ್ಯನ ಅತಿಯಾದ ಉಪಭೋಗಿ ಪ್ರವೃತ್ತಿಗೆ ಇಡೀ ವಿಶ್ವವೇ ನಿರ್ವಿರ್ಯವಾಗುತ್ತಿದೆ. ಸ್ವಾವಲಂಬಿತನ ಶಿಥಿಲವಾಗುತ್ತಿರುವ ಸಂಗತಿಯನ್ನು ವಚನ ಹೇಳುತ್ತದೆ.

೧೨೭

ಆದಿಯಲಿ ಅಡಿಗಲ್ಲು ಬಾಧೆಗೆ ಚಮ್ಮಟಿಗಿ
ಕಾದ ಕಬ್ಬಿಣದ ಇಕ್ಕಳದಲ್ಲಿ ಪಿಡಿದು ಮಾಡುವದಿದು
ಭೂದೇವಿಯ ವಸ್ತುವು, ಬಸವಣ್ಣ

ತಾತ್ಪರ್ಯ : ಪಂಚಭೂತಗಳನ್ನೇ ಬಳಸಿ ಅದರಲ್ಲಿರದ ಗುಣವನ್ನು ತಂದುಕೊಡುವುದು ಹೊಸದಾದ ರೂಪವನ್ನು ಮಾಡುವುದೇ ಶಿಲ್ಪ. ಅಂತಹ ಶಿಲ್ಪವಾದ ಕರ್ಮಾರಿಕೆಯ ಕ್ರಿಯಾಜ್ಞಾನದ ಸ್ವರೂಪವನ್ನು ವಚನ ನಿರೂಪಿಸುತ್ತದೆ. ಸೃಷ್ಟಿಯ ಆದಿಗೆ ಅಡಿಗಲ್ಲು ಬಹುಮುಖ್ಯ ವಾದುದು. ಅಡಿಗಲ್ಲು, ಚಮ್ಮಟಿಗೆ, ಸುತ್ತಿಗೆ ಇವು ಸೃಷ್ಟಿಯ ಸತ್ಯಗಳು. ಭಕ್ತಿ, ಜ್ಞಾನ, ಕ್ರಿಯೆಯ ಸಾಂಗತ್ಯವನ್ನು ಇಲ್ಲಿ ಕಾಣಬಹುದು. ಅಡಿಗಲ್ಲು ಎಂಬ ಸತ್ಯದ ಮೇಲೆ ಕಾದ ಕಬ್ಬಿಣವೆಂಬ ಅಸತ್ಯ, ಅಜ್ಞಾನ, ಅಮೂರ್ತವನ್ನು ಜ್ಞಾನವೆಂಬ ಇಕ್ಕಳದಿಂದ ಹಿಡಿದು ಕ್ರಿಯೆ ಅಥವಾ ಕರ್ತೃವೆಂಬ ಚಮ್ಮಟಿಕೆಯಿಂದ ಹಣಿದು ತಿದ್ದಿ ತೀಡಿ ಸಂಸ್ಕಾರಗೊಳಿಸಿ ಉಪಯುಕ್ತ ವಸ್ತುವಾಗಿಸುವವನು ಕರ್ಮಾರನು. ಅಂತಹ ವಂಶದಲ್ಲಿ ಹುಟ್ಟಿದ ತ್ರಿಕಾಲಜ್ಞಾನಿ ಮೌನೇಶ್ವರರು ಅಜ್ಞಾನ ಹಾಗೂ ಅಹಂಕಾರದಿಂದ ದಾರಿ ತಪ್ಪಿದ ನರಕುಲವನ್ನು ತನ್ನ ಜ್ಞಾನದ ಚಮ್ಮಟಿಗೆಯಿಂದ ಹಣಿದು ಸನ್ಮಾರ್ಗಕ್ಕೆ ಹಚ್ಚುವರು. ಅನ್ನಮಯ ಕೋಶವಾದ ಈ ಶರೀರವನ್ನು ಕ್ರಿಯಾಶೀಲಗೊಳಿಸಿ ಸಾಧನೆಗೆ ಹಚ್ಚುತ್ತಾರೆ. ಇದೆಲ್ಲದಕ್ಕೂ ಭೂಮಿಯೇ ಆಧಾರ. ಭೂಮಿಯಲ್ಲಿ ಸಿಗುವುದನ್ನೆ ಬಳಸಿ ಅದರಲ್ಲಿರದ ಗುಣಗಳನ್ನು ಸೃಷ್ಟಿಸಿ ಹೊಸರೂಪವನ್ನು ಮಾಡುವುದೇ ಶಿಲ್ಪ. ಭೂಮಿಯೇ ಎಲ್ಲ ಶಿಲ್ಪಗಳಿಗೆ ಆಧಾರ.

೧೨೮

ಅರ್ಕಸಾಲೆಯನಾಗಿ ಚೊಕ್ಕ ಬೆಳ್ಳಿಯ ಕಾಸಿ
ಮುಕ್ಕಣ್ಣ ಮಹಾದೇವನೆಂದು ನೈವೇದ್ಯಕ್ಕೆ
ಅಕ್ಕಿಯ ಪಾಯಸವು, ಬಸವಣ್ಣ

ತಾತ್ಪರ್ಯ : ಅಕ್ಕಸಾಲೆಯ ಬಹುಮುಖ್ಯ ಗುಣವೇ ಲೋಹಗಳನ್ನು ಒರೆಗೆ ಹಚ್ಚುವುದು. ಕರಗುವುದು, ರೂಪಿಸುವುದು, ಚೊಕ್ಕ ಖೊಟ್ಟಿ, ಸತ್ಯ ಸುಳ್ಳುಗಳನ್ನು ನಿಷ್ಕರ್ಷೆಗೆ ಒಡ್ಡುವ ಗುಣ ಅವನದು. ಉತ್ತಮ ಬೆಳ್ಳಿಯ ಕಾಸಿ ಅದರಲ್ಲಿ ಮುಕ್ಕಣ್ಣನನ್ನೆ ಮಾಡಿ ಅಕ್ಕಿಪಾಯಸ ನೈವೇದ್ಯ ಮಾಡುವ ಕರ್ತೃತ್ವ ಶಕ್ತಿ ಅಕ್ಕಸಾಲಿಯದು. ಜ್ಞಾನ–ಅಜ್ಞಾನದ ಸೂಕ್ಷ್ಮ ವಿಮರ್ಶೆ ಇಲ್ಲಿದೆ.

೧೨೯

ಕಡಬಿನ ಕಾಳಗವಾಡಿ ತಡೆಯದೆ ಮಳೆಗರೆದ
ಪೊಡವಿಯೊಳಗೊಂದು ವಿಪರೀತ ಭೂಲೋಕದ
ಒಡೆಯರಾದವರೆಲ್ಲ ನರನೆಂದು ಕಂಡರೆ
ಕೆಡುವದು ಮೂಜಗವೆಲ್ಲ, ಬಸವಣ್ಣ

ತಾತ್ಪರ್ಯ : ಲೀಲಾಮೂರ್ತಿ ಮೌನೇಶ್ವರರು ಕೇವಲ ಸಾಮಾನ್ಯ ಮನುಷ್ಯರಾಗಿರಲಿಲ್ಲ. ಸೃಷ್ಟಿಶೀಲ ಮತ್ತು ವೈಚಾರಿಕ ಮನೋಧರ್ಮದವರಾಗಿದ್ದರು. ಅಂಥವರು ಬರಗಾಲ ಬಿದ್ದ ಹೊತ್ತಿನಲ್ಲಿ ಕಡಬಿನ ಕಾಳಗವಾಡಿ ತಡೆಯದೆ ಮಳೆಗರೆದು ಈ ಭೂಮಿಯ ಮೇಲೆ ಅತೀಶಯವಾದ ಪವಾಡ ಮಾಡಿದರು. ಅದನ್ನು ಅರಿಯದ ಮೂಢ ಜನರು ತಮ್ಮ ನಂಜಿನ ಮಾತುಗಳಿಂದ ಮೂಜಗವನ್ನೇ ಕೆಡಿಸಿದರು.

೧೩೦

ಕುಲಕೋಟಿ ದೈವಾದಿಗಳಿಗೆ ಗುದ್ದಲಿಯ ಹಿಡಿದಾನೆ
ಹಲಕಸಗೊಡನು ಜಗವನು ಬಸವಯ್ಯನ
ಮಲಕಿನಮಾತು ತಿಳಿಯದು, ಬಸವಣ್ಣ

ತಾತ್ಪರ್ಯ : ಕೋಟಿ ದೈವಗಳ ನಿರ್ಮಾಣಕ್ಕೆ ಕಾರಣನಾದ ಶಿಲ್ಪಿಯು ಸೃಷ್ಟಿಕರ್ತನ ಪ್ರತೀಕವಾಗಿದ್ದಾನೆ. ತನ್ನನ್ನು ಪೀಡಿಸಿದ ಅಥವಾ ಪೀಡನೆಗೆ ಒಳಗಾದ ಈ ಲೋಕವನ್ನು ನಾಶವಾಗಲು ಬಿಡದೆ ಕಾಯುವ ಅವನ ಮಲಕಿನ ಅಂದರೆ ನಿಗೂಢ ಮಾತುಗಳು ಅಜ್ಞಾನಿ ಜನರಿಗೆ ತಿಳಿಯಲಾರವು.

೧೩೧

ದೇವದೇವರಿಗೆಲ್ಲ ದೇವ ಚಿಂತಾಮಣಿಯು
ರಾಯರಾಯರಿಗೆಲ್ಲ ರಾಯ ಶಿಖಾಮಣಿಯು
ಅಲ್ಲಮನ ಜ್ಞಾನ ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಅಲ್ಲಮನ ಅನುಭಾವ ಪಥವನ್ನು ಅನುಸರಿಸಿದ ಮೌನೇಶ್ವರರು ದೇವಾನು ದೇವತೆಗಳಿಗೆಲ್ಲ ದೇವಚಿಂತಾಮಣಿಯಾಗಿದ್ದವರು. ರಾಯ ರಾಯರಿಗೆಲ್ಲ ಮಣಿ ಮುಕುಟವಾಗಿದ್ದವರು. ಚಿಂತಾಮಣಿ ಮತ್ತು ಶಿಖೆ ಅಂದರೆ ಶಿಖಾಮಣಿ ಇವೆರಡು ತನ್ನ ಮೆರಗನ್ನು ಕಂಡುಕೊಳ್ಳುವುದು ಅಕ್ಕಸಾಲಿಗನ ಯುಕ್ತಿಯಿಂದಲೇ. ಅಂತಹ ಅಮೂಲ್ಯ ಒಡವಿಯ ಸೃಷ್ಟಿಕರ್ತನನ್ನು ಜನಸಾಮಾನ್ಯರು ನರನೆಂದು ಕಂಡರೆ ಈ ಜಗತ್ತು ಕೆಟ್ಟು ಹೋಗುವುದು.

೧೩೨

ವ್ಯಾಪಾರ ಎಡವಟ್ಟು ಭೂಪಾರ ಕನಿಕಷ್ಟ
ಪರಮಾತ್ಮನ ಧ್ಯಾನದೊಳು ಇರುವದು
ಜೋಪಾನವಯ್ಯ, ಬಸವಣ್ಣ

ತಾತ್ಪರ್ಯ : ಈ ಕಲಿಯುಗದಲ್ಲಿ ಸಾತ್ವಿಕ ಬದುಕು ಮತ್ತು ನ್ಯಾಯಯುತ ವ್ಯಾಪಾರ ವ್ಯವಹಾರಗಳನ್ನು ನಡೆಸುವದು ಬಹಳ ಕಷ್ಟ. ಅದರಂತೆ ಅರಸನಾದವ ರಾಜ್ಯಭಾರ ಮಾಡುವುದು ಸಮಸ್ಯಾತ್ಮಕವಾದುದಾಗಿದೆ. ಅವೆರಡೂ ಶೋಷಣೆಯ ಮಾಧ್ಯಮ ಗಳಾಗಿವೆ. ಇವೆರಡೂ ಬಿಟ್ಟು ನೀತಿ, ಧರ್ಮ, ನ್ಯಾಯಯುತ ನಡವಳಿಕೆಯಿಂದ ಪರಮಾತ್ಮನ ಧ್ಯಾನದೊಳಿದ್ದು ಪರಿಪೂರ್ಣನಾಗುವುದು ಲೇಸು ಎನ್ನುವುದು ಇಲ್ಲಿನ ಭಾವ.

೧೩೩

ತಿಳಿದಂಥ ಮಹಾತ್ಮರಿಗೆ ಎಳೆಹೂಟಿ ಸಲ್ಲುವುದೆ
ಕಳುವು ಹಾದರ ಅಪರಾಧವ ಮಾಡಲಿಲ್ಲ
ಕೊಲ್ಲಬಹುದೆ ಶರಣನ ಎಂದಿನ್ನು
ಇಳೆಗೆ ಬಂದನು ಬಸವಯ್ಯ, ಬಂದಿನ್ನು
ಕೋಲ ಕೊಂಡಾನು ಹಿರಿಯ, ಬಸವಣ್ಣ

ತಾತ್ಪರ್ಯ : ನಿರಪರಾಧಿಗಳಿಗೆ ಶಿಕ್ಷೆಯಾಗಬಾರದೆನ್ನುವ ಸೂಚನೆ ಇಲ್ಲಿದೆ. ಯಾವುದೇ ತಪ್ಪು ಮಾಡದ ಮತ್ತು ಲೋಕ ಕಾಳಜಿಯುಳ್ಳ ಶರಣರನ್ನು ಕೊಲ್ಲುವುದು ಯಾವುದೇ ಪ್ರಭುತ್ವಕ್ಕೆ ಹೊಂದದ ಮಾತು. ಎಳೆ ಹೂಟಿಯಂತಹ ಶಿಕ್ಷೆಯೂ ನಿರಪರಾಧಿಗಳಿಗೆ

ಆಗಕೂಡದು. ಎಳೆಹೂಟಿ ಎಂದರೆ ಒಂದು ಕಡೆ ನೊಗಕ್ಕೆ ಎತ್ತನ್ನು ಮತ್ತೊಂದು ತುದಿಯ ನೊಗಕ್ಕೆ ಮನುಷ್ಯನನ್ನು ಕಟ್ಟಿ ಓಡಿಸಿ ಕೊಲ್ಲುವುದು. ಇವು ಮನುಷ್ಯ ವಿರೋಧಿಯಾದಂಥವು. ಇಂತಹ ಅನ್ಯಾಯವನ್ನು ಪ್ರತಿಭಟಿಸಲು ಮೌನೇಶ್ವರರು ಜನ್ಮವೆತ್ತುತ್ತಾರೆ ಎನ್ನುವ ಭಾವ ಇಲ್ಲಿನದು.

೨

ಜೀವನಧರ್ಮ ಬೋಧೆ

೧೩೪

ಮುಂಜಾನೆ ಏಳುತ್ತ ನಂಜುಗೊರಳನ ನೆನೆದು
ಅಂಜದೆ ಮಾಡೆಂದ ಕೆಲಸವನು ಮಾಡಿದರೆ
ಸಂಜೀವನಾಗಿ ಬೆಳೆವನು ಎಂದಿನ್ನು ನಿ–
ರಂಜನ ಹೇಳಿದ ನಿಜ ನುಡಿಯ ಕೇಳದಲೆ
ಬಂಜಿಯಾಗಿ ಕೆಡಬೇಡ, ಬಸವಣ್ಣ

ತಾತ್ಪರ್ಯ : ಪ್ರತಿಯೊಬ್ಬ ಮನುಷ್ಯ ಪ್ರಾಥಃಕಾಲದಲ್ಲಿ ಎದ್ದು ಶಿವನನ್ನು ಸ್ಮರಿಸಿ ತನ್ನ ಕಾಯಕವನ್ನು ನಿಷ್ಠೆಯಿಂದ ಮಾಡಲು ಮೊದಲಾದಲ್ಲಿ ಆತನು ಸಧೃಡನೂ ಪ್ರಬಲನೂ ಆಗಿ ಬೆಳೆಯಬಲ್ಲನು. ನಿರಂಜನ ಪಟ್ಟ ಪಡೆದು ಸತ್ಯದ ಮಾತುಗಳನ್ನು ತಾತ್ಸಾರ ಮಾಡಿದ ವ್ಯಕ್ತಿಯು, ಸಂತಾನ ಹೀನನೂ, ನಿರುಪಯುಕ್ತನೂ ಅಜ್ಞಾನಿಯೂ ಆಗುವ ನೆನ್ನುವುದು ಮೌನೇಶ್ವರರು ಹೇಳಿದ ಕಟು ಸತ್ಯದ ಮಾತಾಗಿದೆ.

೧೩೫

ವೃತವ ಸಾಗಿಸಬೇಕು ಮಥನ ಮಾಡಲಿಬೇಕು
ಘೃತ ಕ್ಷೀರ ಕೂಡಿ ಉಣಬೇಕು, ವಂಶಾಬ್ಧಿಕರು
ಹಿತವಾಗಿರಬೇಕು, ಬಸವಣ್ಣ

ತಾತ್ಪರ್ಯ : ವಂಶೋದ್ಧಾರಕರು ಅಥವಾ ಹಿರಿಯರಾದವರು ಹಿತವಾಗಿ, ಉತ್ತಮ ರಾಗಿರಬೇಕೆಂದರೆ ಅವರು ವೃತ ನಿಯಮ ಪಾಲಕರಾಗಿರಬೇಕು, ಆಲೋಚನಾಪರ

ರಾಗಿರಬೇಕು, ಹಾಲು ತುಪ್ಪ ಬೆರೆತಂತೆ ಕೂಡಿ ಉಣ್ಣಬೇಕು. ಬಂಧು ಬಳಗದವ ರೊಂದಿಗೆ ಹಿತವಾಗಿ ಇರಬೇಕೆಂಬುದು ಅವರ ಅಭಿಮತ.

೧೩೬

ಮೂರು ವರುಷಕ್ಕೆ ಮುದ್ದು ಆರು ವರುಷಕ್ಕೆ ಆಚಾರ
ಏಳನೆಯ ವರ್ಷಕ್ಕೆ ಪ್ರೌಢನ ಮಾಡದಿದ್ದರೆ
ತಾಯಿ ತಂದೆಗಳು ಹಗೆಗಳು ಎಂದಿನ್ನು
ದೇವ ಹೇಳಿದ ನಿಜ ನುಡಿಯ ಗಾವಳಿಕೆಗೆ ಬಿದ್ದು
ನೀವು ಕೆಡಬೇಡಿ, ಬಸವಣ್ಣ

ತಾತ್ಪರ್ಯ : ಈ ವಚನದಲ್ಲಿ ಮೌನೇಶ್ವರರು ತಂದೆ ತಾಯಿಗಳಾದವರು ಮಕ್ಕಳಿಗೆ ತಾವು ಮಾಡಬೇಕಾದ ಮೂಲಭೂತ ಕರ್ತವ್ಯಗಳ ಬಗೆಗೆ ವಿವರಿಸುತ್ತಾರೆ. ಮಕ್ಕಳು ಬೆಳೆದಂತೆಲ್ಲ ಆಯಾ ವಯೋಮಾನಕ್ಕೆ ತಕ್ಕಂತಹ ವಿಧಿ-ನಿಯಮಗಳು, ಆಚಾರ-ವಿಚಾರಗಳನ್ನು ನೆರವೇರಿಸತಕ್ಕದ್ದೆಂದು ಹೇಳುತ್ತಾರೆ. ಇದಕ್ಕೆ ತಪ್ಪಿದ ತಂದೆ-ತಾಯಿಗಳು ಮಕ್ಕಳ ಪಾಲಿಗೆ ಹಗೆಗಳಂತಾಗುವರೆಂದೂ ಇದು ದೇವರು ಹೇಳಿದ ಸತ್ಯದ ಮಾತೆಂದೂ ಹೇಳುತ್ತಾರೆ. ತಪ್ಪಿದಲ್ಲಿ ಗಾವಳಿಕೆ ಅಂದರೆ ಕುರುಡುತನಕ್ಕೆ ಬಿದ್ದು ಒದ್ದಾಡುವರೆಂದೂ ಹಾಗೆ ಮಾಡದಿರೆಲೆಂದೂ ಹಿತೋಪದೇಶದ ನುಡಿ ಆಡುತ್ತಾರೆ.

೧೩೭

ಗತಿಗೆಟ್ಟರೆ ಬಡವನು ಮತಿಗೆಟ್ಟರೆ ಮಂಗನು
ಸತಿ ಪತಿಯು ಸುಖವಾಗಿರಲು ಪತಿವ್ರತದಿ
ಸದ್ಗತಿಯ ಕಾಣುವರು, ಬಸವಣ್ಣ

ತಾತ್ಪರ್ಯ : ಈ ವಚನವು ಮಾನವನ ನೈತಿಕತೆಗೆ ಬಲವಾದ ಒತ್ತು ಕೊಡುತ್ತದೆ. ಕಡು ಬಡತನದಿಂದ ಕಂಗೆಟ್ಟ ಬಡವ ಹೊಟ್ಟೆಪಾಡಿಗಾಗಿ ಹಾದಿ ತಪ್ಪಿ ಮಾಡಬಾರದ ಕೆಲಸಕ್ಕೆ ಇಳಿಯಬಹುದು. ಬುದ್ಧಿ ಭ್ರಮಣೆಗೆ ಒಳಪಟ್ಟ ಮಂಗನಂತೆ ವರ್ತಿಸಬಹುದು. ಅಂತೆಯೇ ಸಂಸಾರ ರಥದ ಜೋಡುಗಳಾದ ಗಂಡ ಹೆಂಡತಿಯರು ಸುಖ-ಸಂತೋಷದಿಂದ ಜೀವನ ಸಾಗಿಸಬೇಕಾದರೆ ನೈತಿಕ ತಳಹದಿಯ ಮೇಲೆ ಬದುಕಬೇಕು. ಇದುವೇ ಸದ್ಗತಿ ಅಥವಾ ಮುಕ್ತಿಯ ಸೋಪಾನವೆನ್ನುತ್ತಾರೆ.

೧೩೮

ದಿನ ಕೆಟ್ಟವೆನಬೇಡ ಜನಕನ ಅತಿಗಳಿಯಬೇಡ
ಬಿನುಗು ದೈವಕ್ಕೆ ಬೇಡಿಕೊಳ್ಳಲು ಒಬ್ಬನ ಐಶ್ವರ್ಯ
ತನಗೆ ಬರುವುದೆ, ಬಸವಣ್ಣ

ತಾತ್ಪರ್ಯ : ಈ ವಚನವು ಮನುಷ್ಯನಾದವನು ತನ್ನ ಜವಾಬ್ದಾರಿಯನ್ನು ತಾನೇ ನಿರ್ವಹಿಸಬೇಕೆ ವಿನಃ ಮತ್ತೊಂದಕ್ಕೆ, ಮತ್ತೊಬ್ಬರಿಗೆ ಹೇರುವುದು ತಪ್ಪು. ದೈವಕ್ಕೆ ಶರಣಾಗಿ ಹತಾಶನಾಗುವುದೂ ತಪ್ಪು. ನನಗೆ ಕೆಟ್ಟ ಗಳಿಗೆ ಬಂದಿದೆ ಈ ಕಾಲ ಸರಿಯಿಲ್ಲವೆಂದು ಜನ್ಮದಾತರಾದ ತಂದೆ–ತಾಯಿಗಳನ್ನು ಅತಿಯಾಗಿ ನಿಂದಿಸುತ್ತ ಉದ್ಧಾರ ಮಾಡುವಂತೆ ದೈವಕ್ಕೆ, ದೇವರಿಗೆ ಬೇಡಿಕೊಂಡರೆ ಪ್ರಯೋಜನವಾಗದು. ಪರರ ಆಸ್ತಿ, ದ್ರವ್ಯ ತನಗೆಂದೂ ದಕ್ಕದು. ಅದು ಇನ್ನೊಬ್ಬರ ಸೊತ್ತು. ಸ್ವ ಅರಿವು ಬಹಳ ದೊಡ್ಡದು.

೧೩೯

ನಡಸುವ ವಿನಾಯಕ ಪಿತನು ಕೆಡಿಸಬೇಕಾದರೆ
ಬಿಡಿಸುವವರಾರು ಕಲಿಯುಗದಿ ಶೂದ್ರರು
ಹೊಡೆಸಿಕೊಂಬುವರು, ಬಸವಣ್ಣ

ತಾತ್ಪರ್ಯ : ಕಾಯುವವರೇ ಕೊಲ್ಲುವವರಾದರೆ ಬದುಕು ದುಸ್ತರವಾಗುತ್ತದೆ. ರಕ್ಷಿಸುವವರಾರು ಎನ್ನುವ ಪ್ರಶ್ನೆ ಇಲ್ಲಿ ಅಡಗಿದೆ. ನಮ್ಮನ್ನು ಬದುಕಿನ ದಾರಿಯಲ್ಲಿ ಕೈಹಿಡಿದು ನಡೆಸಬೇಕಾದ ಸೃಷ್ಟಿಕರ್ತ ತಾನೇ ಸೃಷ್ಟಿಸಿದ ಜೀವಿಗಳನ್ನು ವಿನಾಶ ಮಾಡಲು ತೊಡಗಿದರೆ ಯಾರು ರಕ್ಷಿಸುವರು. ಇಂದಿನ ಈ ಕಲಿಯುಗದಲ್ಲಿ ಶೂದ್ರಕರು ಅಂದರೆ ಶ್ರಮಿಕ ವರ್ಗದ, ಅಸ್ಪೃಶ್ಯ ವರ್ಗದ ಜನಗಳನ್ನು ಧನಿಕರಾದವರು ನಿರ್ದಯದಿಂದ ಹಿಂಸಿಸುವಾಗ ಅಸಹಾಯಕರಾದ ಈ ಕೆಳಸ್ಥರದ ಸಮೂಹಕ್ಕೆ ಹೊಡೆಸಿಕೊಳ್ಳುವುದೇ ಅವರ ಪಾಲಿನ ಕರ್ಮ ಎನ್ನುವುದು ಇಲ್ಲಿ ವ್ಯಕ್ತವಾದ ಮಾತು.

೧೪೦

ಇಂತಹ ಆಚಾರವನು ವಿಶ್ವನಾಥನೆ ಬಲ್ಲ
ಪಂಥ ಕೋಪಗಳು ಆಡ ಸಲ್ಲ ನಿಮ್ಮ
ಅಂತರಂಗದಲಿ ತಿಳಿದು ನೋಡಿರಿಯಲ್ಲ ನಿ
ಶ್ಚಿಂತದಾಯಕ ಅಲ್ಲಮಪ್ರಭುವಿನ
ಪಾದದಲ್ಲಿ ಸಲ್ಲು, ಬಸವಣ್ಣ

ತಾತ್ಪರ್ಯ : ಜಾತಿ, ಕುಲ, ಮತಗಳನ್ನು ಎತ್ತಿ ತೋರಿಸುತ್ತ, ಮನುಷ್ಯ ನಿರ್ಮಿತ ಉಚ್ಚ, ನೀಚ, ಶ್ರೇಷ್ಠ, ಕನಿಷ್ಠವೆನ್ನುವ ವಿಚಾರವನ್ನು ಬಲವಾಗಿ ಈ ವಚನ ಖಂಡಿಸುತ್ತದೆ. ಮತ್ತು ಇದರ ಮೂಲವನ್ನೊಮ್ಮೆ ನೀವೇ ವಿವೇಚನೆಯಿಂದ ಆಲೋಚನೆ ಮಾಡುವಂತೆಯೂ ಅರುಹಲಾಗಿದೆ.

ಪಂಥ ಕೋಪಗಳು ಜಾತಿ, ಕುಲ, ಪಂಥಗಳಿಗೆ ಸಂಬಂಧಿಸಿದ ವಿಚಾರ ಒಂದೆಡೆಯಾದರೆ, ಇನ್ನೊಂದೆಡೆ ಆಡು ಮಾತಿನಲ್ಲಿ ಹ್ಯಾಂವ, ಪಂಥ ಅಂದರೆ ಹಗೆ ಸಾಧಿಸುವುದು, ಜಿದ್ದಿಗೆ ಬಿದ್ದು ಹಠ ಸಾಧಿಸುವುದು ತರವಲ್ಲದ ಕೆಲಸ. ಇಂತಹ ಆಚಾರ ಅಂದರೆ ನಡತೆಯನ್ನು ಜಗತ್ತಿಗೆ ಅಧಿಪತಿಯಾದ ಶಿವನೇ ಬಲ್ಲ. ನಾವೆಲ್ಲ ಏಕಾಂತದಲ್ಲಿ ಕುಳಿತು ನಮ್ಮ ಅಂತಃಸಾಕ್ಷಿಯಲ್ಲಿ ವಿಚಾರಿಸಲಾಗಿ ಅದರಿಂದ ಒಡಮೂಡುವ ಮತಿತಾರ್ಥ ನಿಶ್ಚಿಂತದಾಯಕ ಅಲ್ಲಮ ಪ್ರಭುವಿನ ಒಲುಮೆಗೆ ಪಾತ್ರವಾಗುತ್ತದೆ.

೧೪೧

ಹಡೆವುದು ಮುಡಿವುದು ಕೊಡುವದು ಪಡೆವುದು
ಮೃಢರೂಪನಲ್ಲದಿನ್ನಾರು ತ್ರಿಭುವನದೊಳು
ಕೊಡುವವರಿಲ್ಲ, ಬಸವಣ್ಣ

ತಾತ್ಪರ್ಯ : ಈ ಜಗತ್ತಿನ ಎಲ್ಲ ಆಗು ಹೋಗುಗಳಿಗೆಲ್ಲ, ಕಾರ್ಯ ಕಾರಣ ಸಂಬಂಧ ಗಳಿಗೆಲ್ಲ ಆ ಶಿವನೇ ಕಾರಣೀಕರ್ತನೆನ್ನುವುದು ಇಲ್ಲಿನ ಅಭಿಮತ. ಪ್ರತಿಯೊಂದನ್ನು ಮುಡಿಗೇರಿಸಿಕೊಳ್ಳುವುದು, ಅಂದರೆ ಸಿಂಗರಿಸಿಕೊಳ್ಳುವುದು, ಕೊಡುವುದು, ನೀಡುವುದು, ಸ್ವೀಕರಿಸುವುದು, ತೆಗೆದುಕೊಳ್ಳುವುದು ಆ ತ್ರಿಲೋಕನಾಥನಾದ ಈಶ್ವರನ ಇಚ್ಛೆಯೇ ವಿನಹ ಮನುಜ ಜೀವಿಗಳದಲ್ಲ. ತೇನವಿನಃ ತೃಣಮಪಿ ನ ಚಲತಿ ಎನ್ನುವ ವಿಚಾರ ಇಲ್ಲಿ ವ್ಯಕ್ತವಾಗಿದೆ. ಎಲ್ಲದಕ್ಕೂ ಜಗದೊಡೆಯನಾದ ಈಶ್ವರನೇ ಕಾರಣ ಎನ್ನುವ ಮಾತು ಇಲ್ಲಿನದು.

೧೪೨

ನೂರು ಖಂಡುಗ ಧಾನ್ಯವ ಬೆಳೆದು ಹೊಲನು
ಕೋರನಿಕ್ಕಿ ಮೂರು ಭಾಗದಲಿ ಹಂಚಿ ಉಣಲಾರದೆ
ಕೋರನ ಬದುಕು ಕದ್ದ ಕಾರಣದಿಂದ
ಕೋರಿ ಕುಂಚಿಗಿ ಕಾಣದೆ ಬಂದೆ, ಬಸವಣ್ಣ

ತಾತ್ಪರ್ಯ : ಸಕಲ ಸಂಪತ್ತು, ಐಶ್ವರ್ಯ, ಆಸ್ತಿ, ಅಂತಸ್ತುಗಳ ಆಶೆಗೆ ಈಡಾಗಿ ಮನುಷ್ಯ ಗತಿಗೇಡಿಯಾದ ಸ್ಥಿತಿ ಈ ವಚನದ ತಾತ್ಪರ್ಯ. ನೂರಾರು ಖಂಡುಗ ಆಹಾರ ಧಾನ್ಯವನ್ನು ಉತ್ತಿ, ಬಿತ್ತಿ, ಬೆಳೆದು ಆ ಹೊಲದ ಕೋರು(ಪಾಲು) ಕೊಟ್ಟು ಮೂರು ಭಾಗ ಹಂಚಿ ಉಣ್ಣುವ ಉದಾರತನ ತೋರದೇ ಹೋದೆ. ಮೂರು ಭಾಗವೆನ್ನುವ ಪದ ಇಲ್ಲಿ ವಿಶೇಷವಾದುದು. ಹೊಲದೊಡೆಯನಾದವನು ತಾನು ಬೆಳೆದ ದವಸ

ಧಾನ್ಯಗಳನ್ನು ಮೂರು ಭಾಗಮಾಡಿ ಹಂಚಿ (ಕೋರು) ಪಾಲು ಕೊಡಬೇಕು. ೧. ಭೂತಾಯಿಯ ಪಾಲು, ೨. ಹಕ್ಕಿ ಪಕ್ಷಿ, ಪಶು ಮೃಗಗಳ ಪಾಲು, ೩. ದೈವದ ಪಾಲು. ಈ ಯಾವ ಪಾಲನ್ನೂ ಕೊಡದೇ ತಾನೇ ಎಲ್ಲವನ್ನು ಭಕ್ಷಿಸಲು ಹೋಗಿ ಮನುಷ್ಯ ಕೊನೆಗೊಂದು ದಿನ ಕೋರಿ ಕುಂಚಿಗೆ ಕುಲಾವಿಗೂ ಗತಿಯಿಲ್ಲದೆ ಬೆತ್ತಲಾಗಿ ಹೋಗುವ ಅನಾಥಪ್ರಜ್ಞೆ ಇಲ್ಲಿ ವ್ಯಕ್ತವಾಗಿದೆ.

೧೪೩

ಕೊಂದವರ ಕೊಲೆಯುಂಟು ನೊಂದವರ ನೋವುಂಟು
ತಂದೆ ತಾಯಿಗಳ ಹರಕೆ ಉಂಟು, ಇವು ಮೂರು
ಎಂದೆಂದಿಗು ಬೆನ್ನ ಬಿಡದಯ್ಯ ಅಲ್ಲಮರಾಯ
ಅಂದು ಹೇಳಿದ ನಿಜ ನುಡಿಯ, ಬಸವಣ್ಣ

ತಾತ್ಪರ್ಯ : ಮನುಷ್ಯ ತಾನು ಮಾಡಿದ ಕೃತ್ಯಗಳೆಲ್ಲ ಆತನ ನೆರಳಿನಂತೆಯೇ ಹಿಂಬಾಲಿಸುತ್ತವೆ. ಅವು ಆತನ ಬೆನ್ನು ಬಿದ್ದ ಬೇತಾಳಗಳಾಗಿಯೇ ಕಾಡುತ್ತವೆ. ಕೊಂದವರ ಕೊಲೆ ನೊಂದವರ ನೋವು ಅಗಾಧವಾದವುಗಳು. ಹಿಂಸೆ ಮತ್ತು ನೋವುಗಳು ಸಾಕ್ಷೀಭೂತಗಳು. ಅವು ಒಳಗೊಳಗೇ ಇರಿಯುತ್ತಿರುತ್ತವೆ. ಘಾಸಿ ಗೊಳಿಸುತ್ತಿರುತ್ತವೆ. ಅಂತೆಯೇ ಹೆತ್ತ ತಂದೆ ತಾಯಿಗಳು ಹೊತ್ತ ಹರಕೆಗಳೂ ಸದಾ ಕಾಪಾಡುತ್ತಲೇ ಇರುತ್ತವೆ. ಹರಕೆ ಹೊರುವುದೆಂದರೆ ಯಾತನೆ, ನೋವುಗಳಿಂದ ಬಿಡುಗಡೆಗೊಂಡು ನೆಮ್ಮದಿಯ ಬದುಕಿಗೆ, ಸನ್ಮಾರ್ಗದ ದಾರಿಗೆ ಹೋಗುವುದು. ಆದರೆ ತೊಂದರೆಗಳು ಸದಾಕಾಲ ನಮ್ಮನ್ನು ಬೆನ್ನು ಬಿಡದಂತೆ ಕಾಡುತ್ತವೆ. ಇದೇ ಮೌನೇಶ್ವರರು ಹೇಳಿದ ಕಟುವಾಸ್ತವವಾಗಿದೆ.

೧೪೪

ನಡೆ ಸುಳ್ಳು ನುಡಿ ಸುಳ್ಳು ನುಡಿವ ನಾಲಿಗೆ ಸುಳ್ಳು
ಬಡಿವಾರ ಸುಳ್ಳು ಬಹುವ್ರತನೇಮ
ದೃಢವಾಗಲಿಲ್ಲ, ಬಸವಣ್ಣ

ತಾತ್ಪರ್ಯ : ಈ ವಚನ ಮನುಷ್ಯನ ನಡೆ, ನುಡಿ, ವ್ರತ, ನಿಯಮಗಳ ಪಾವಿತ್ರ್ಯತೆಯ ಕುರಿತದ್ದಾಗಿದೆ. ನಡೆ ಮತ್ತು ನುಡಿಗಳಲ್ಲಿ ಹೊಂದಾಣಿಕೆ ಇಲ್ಲದ ಬದುಕು ಬದುಕಲ್ಲ. ನಾಲಿಗೆ ಹುಸಿಯಿಂದ, ಅದಕ್ಕಂಟಿದ ಬಡಿವಾರ ಪೊಳ್ಳುತನ ಬಯಲಾಗುತ್ತದೆ. ಬಹು ವ್ರತ, ನೇಮ ಪಾಲಿಸುವೆನೆಂಬ ನಂಬಿಕೆ ಗಟ್ಟಿಯಾಗದೇ ಸಾಧನೆ ಸಾಧ್ಯವಿಲ್ಲ. ಸುಳ್ಳು ಮತ್ತು ಅನೈತಿಕತೆಗಳು ಮನುಷ್ಯನ ಜೀವವನ್ನು ನರಕವಾಗಿಸುತ್ತವೆ.

೧೪೫

ನಾಯಕನಾದ ಮೇಲೆ ನ್ಯಾಯದಲ್ಲಿರಬೇಕು
ಘಾಯಕತನವ ಬಿಡಬೇಕು ಮೀರಿದರೆ
ಘಾಯ ತಾಕುವದು ಅನುದಿನ ಅಲ್ಲಮ
ರಾಯ ಪೇಳಿದನೊಂದು ನಿಜ ನುಡಿಯ, ಬಸವಣ್ಣ

ತಾತ್ಪರ್ಯ : ಸಮಾಜ ಸುಧಾರಕ, ನಾಯಕ, ಮುಂದಾಳುಗಳೂ ಇರಬೇಕಾದ ಹಾಗೂ ಅವರು ಅನುಸರಿಸಬೇಕಾದ ನೀತಿ, ಧರ್ಮ, ನಿಯಮ ಪಾಲನೆ ಕುರಿತು ಆಡಿದ ವಚನ ಇದಾಗಿದೆ. ಅಂತಹ ನಾಯಕನಾದವನು ನಿಯಮ ಬಾಹೀರನಾದರೆ ಅನುಭವಿಸುವ ಕಷ್ಟಗಳ ಬಗೆಗೆ ಮಾರ್ಮಿಕವಾಗಿ ಈ ವಚನ ವಿವರಣೆ ನೀಡುತ್ತದೆ.

ನಾಯಕತ್ವದ ಪ್ರಮುಖ ಲಕ್ಷಣವೆಂದರೆ, ನ್ಯಾಯ ನಿಷ್ಠುರತೆ ಹಾಗೂ ಪ್ರಾಮಾಣಿಕತೆ. ನಾಯಕನಾದವನಿಂದ ವಿಶ್ವಾಸದ್ರೋಹ, ನಂಬಿಕೆ ದ್ರೋಹಗಳು ಎಸಗಲ್ಪಟ್ಟರೆ, ಅಧಃ ಪತನಕ್ಕೆ ಬಿದ್ದು ನೋವು ಅನುಭವಿಸಬೇಕಾಗುತ್ತದೆ. ಹರಿತವಾದ ಖಡ್ಗದಿಂದಾಗಿ ಗಾಯದಂತೆ ತನು, ಮನಗಳು ಘಾಸಿಯಾಗುವವು.

೧೪೬

ಕರುವ ಕಾಯುವವನ ಬುದ್ಧಿ ಹಿರಿಯರಿಗಿದ್ದರೆ ಈ
ಧರಣಿಯೆಲ್ಲ ಕೆಡುವುದೆ, ಇವರು
ನರಿಗಳಿಗಿಂತ ಕನಿಷ್ಟ, ಬಸವಣ್ಣ

ತಾತ್ಪರ್ಯ : ಮುಗ್ಧತೆಯನ್ನು ಪ್ರಬುದ್ಧರು ಪರಿಗಣಿಸಬೇಕಾದ ರೀತಿ ಬಹಳ ಮುಖ್ಯ. ಒಂದು ವೇಳೆ ತಪ್ಪಿದಲ್ಲಿ ಆತ ಅಪ್ರಬುದ್ಧ, ಕೀಳರಲ್ಲಿ ಕೀಳಾಗಿ ಪರಿಗಣಿಸಲ್ಪಡುವ ನೆಂಬುದು ಇಲ್ಲಿಯ ಅತಿಮುಖ್ಯ ಸಾರ.

ಕರುವೆಂಬುದು ಮುಗ್ಧಮನಸ್ಸಿನ ಹಾಗೂ ಸೂಕ್ಷ್ಮತೆಯ ಸಂಕೇತ. ಈ ಕರುವೆಂಬ ಎಳೆಯ ಜೀವಿಯನ್ನು ನಾಜೂಕಾಗಿ, ಪೋಷಿಸಿ ಸಂಸ್ಕಾರ ಕೊಡುವುದು ಪ್ರಬುದ್ಧ ರಾದವರ ಹಾಗು ಹಿರಿಯರಾದವರ ಕರ್ತವ್ಯ. ಲೋಕಾನುಭವ ಪಡೆದವರ ಆದ್ಯ ಕರ್ತವ್ಯ. ಇಂತಹ ಸೂಕ್ಷ್ಮತೆಯನ್ನು ಅರಿತೇ ಕರುವನ್ನು ಪಾಲನೆ ಮಾಡುವವನೂ ಕೂಡ ಸೂಕ್ಷ್ಮಮತಿಯಾಗಿಯೇ ಇರುತ್ತಾನೆ. ಇಂತಹವನ ಬುದ್ಧಿ ಹಿರಿಯರಿಗೆ, ಅನುಭವಸ್ಥರಿಗೆ, ನೇತಾರರಿಗೆ ಇರಬೇಕು. ಹಾಗಾದಾಗ ಮಾತ್ರ ಧರಣಿ ಅಥವಾ ಭೂಮಂಡಲ ಚೆನ್ನಾಗಿ, ಸುಸೂತ್ರವಾಗಿರುತ್ತದೆ. ತಪ್ಪಿದಲ್ಲಿ ಅಂತಹ ಹಿರಿಯರು ನಡುರಾತ್ರಿಯಲ್ಲಿ ಊಳಿಡುವ ನರಿಗಳಿಗಿಂತಲೂ ಕನಿಷ್ಠ ಜೀವಿಗಳೆಂಬುದು ಇಲ್ಲಿನ ಅರ್ಥವಾಗಿದೆ.

೧೪೭

ಜಾಡರ ಬುದ್ಧಿ ನಾಡಿಗರಿಗಿದ್ದರೆ ಈ
ರೂಢಿಗಳೆಲ್ಲ ಕೆಡುವವೆ, ಇವರು
ಬೇಡರಿಗಿಂತ ಕನಿಕಷ್ಟ, ಬಸವಣ್ಣ

ತಾತ್ಪರ್ಯ : ವೃತ್ತಿ ಧರ್ಮ ಹಾಗೂ ಆ ವೃತ್ತಿಗೆ ಅಂಟಿಕೊಂಡ ನೈಪುಣ್ಯತೆ ಮತ್ತು ನಿಷ್ಠೆ, ಅತಿಮುಖ್ಯವಾದುದು. ಜಾಡರು ಎಂದರೆ ಬಟ್ಟೆ ನೇಯುವವರು. ಅವರ ಕಲಾ ನೈಪುಣ್ಯತೆ ಹಾಗೂ ವೃತ್ತಿ ಕೌಶಲ್ಯತೆ ನಾಡಿಗರಿಗಿರಬೇಕು. ನಾಡಿಗರು ಎನ್ನುವುದು ಬಹುವಿಧದ ಅರ್ಥ ನೀಡುವ ಪದವಾಗಿದೆ. ನಾಡಿಗರು ಎಂದರೆ ದೇಶವಾಸಿಗಳು, ನಾಡಿನ ಜನಗಳು ಎಂದು ಒಂದರ್ಥ. ನಾಡಿಗರು ಒಂದು ಸಮುದಾಯದ ಮೇಲ್ವರ್ಗದ ಜನಸಮೂಹವಾಗಿಯೂ ಕಾಣಿಸಿಗುತ್ತಾರೆ. ಇವರು ಸಮಾಜದ ಉನ್ನತ ಸ್ಥರದ ವ್ಯಕ್ತಿಗಳಾಗಿದ್ದು ಜವಾಬ್ದಾರಿಯುತ ಸ್ಥಾನ ಅಲಂಕರಿಸಿದವರೂ ಆಗಿದ್ದಾರೆ. ಹೀಗಾಗಿ ಮೋನಪಯ್ಯ ಜಾಡರ ಬುದ್ಧಿ ನಾಡು ಕಾಯುವ ನಾಡಿಗರಿಗೆ ಅಂದರೆ ನಮ್ಮನ್ನಾಳುವವರಿಗೆ ಇರಬೇಕು. ಅಂದಾಗ ಸಮಾಜದಲ್ಲಿ ರೂಢಿಗತವಾಗಿ ಬಂದ ಆಚಾರ, ವಿಚಾರಗಳು, ನಡೆ, ನುಡಿ, ನಿಯಮಗಳು ಕೆಡಲಾರವು. ಒಂದು ವೇಳೆ ಅವರು ನೀತಿ ಬಾಹಿರವಾದರೆ ವಿನಾಕಾರಣ ಕೇವಲ ಸ್ವಲಾಭಕ್ಕಾಗಿ ಮಾತ್ರವೇ ಕೊಲ್ಲುವ, ನಿರ್ದಯ ಬೇಡರಿಗಿಂತ ಕೀಳು ಎಂದು ಮೌನೇಶ್ವರರು ಕಟುವಾಗಿಯೇ ನುಡಿದಿದ್ದಾರೆ.

೧೪೮

ಆಡು ಕಾಯುವವನ ಬುದ್ಧಿ ಅರಸುಗಳಿಗಿದ್ದರೆ
ರೂಢಿಗಳೆಲ್ಲ ಕೆಡುವವೆ, ಇವರು
ಕೋಡಗಗಿಂತ ಕನಿಕಷ್ಟ, ಬಸವಣ್ಣ

ತಾತ್ಪರ್ಯ : ಮೇಲಿನ ವಚನದಂತೆಯೇ ಈ ವಚನವೂ ಕೂಡ ಮುಗ್ಧರು ಮತ್ತು ಆಳುವ ಅರಸರ ನೀತಿ, ನಡೆಯನ್ನು ತಿಳಿಸುತ್ತಾ ಆಡು ಕಾಯುವವನ ಬುದ್ಧಿ ಅರಸುಗಳಿಗೆ ಇರಬೇಕೆಂದು ಸಾರುತ್ತದೆ. ಆಡು ಕಾಯುವವನು ತನ್ನ ಬದುಕನ್ನು ಪೋಷಿಸುವ ಆಡುಗಳನ್ನು ಮುತುವರ್ಜಿಯಿಂದ ಪಾಲಿಸುವ ಗುಣ ತುಂಬ ವಿವೇಕ ಯುತವಾದದ್ದು. ಅದೇ ರೀತಿ ಮುಗ್ಧ ಪ್ರಜೆಗಳನ್ನು ಅರಸನಾದವನು ಮಕ್ಕಳಂತೆ ಪಾಲಿಸಬೇಕೆ ವಿನಹ ಚಿತ್ರ ಹಿಂಸೆ ಮಾಡಬಾರದು. ತಪ್ಪಿದಲ್ಲಿ ಕೋಡಂಗಿಗಳಿಗಿಂತ ಕೆಳಮಟ್ಟದವರಾಗುತ್ತಾರೆ. ಸಮಾಜ ಹಿಂಸಾ ಪಥದತ್ತ ನಡೆದೀತೆಂದು ಎಚ್ಚರಿಸುವ ಧ್ವನಿ ಈ ವಚನದಲ್ಲಿದೆ.

೧೪೯

ಕೋಪ ಬೇಡ ಕುಲದೀಪಕನಾದ ಮೇಲೆ
ದೀಪದೊಳು ಹುಳುಬಿದ್ದು ಸತ್ತಂತೆ
ಕಾಣಯ್ಯಾ ಸಂಸಾರ, ಬಸವಣ್ಣ

ತಾತ್ಪರ್ಯ : ವಂಶೋದ್ಧಾರಕನ ಪ್ರಾಮುಖ್ಯತೆಯನ್ನು ತಿಳಿಸುವ ವಚನ ಇದಾಗಿದ್ದು ಸಂಸಾರವೆಂಬ ನೌಕೆಯನ್ನು ನಡೆಸುವ ಹಾಗೂ ಪ್ರಕಾಶಮಾನವಾಗುವ ವಿಚಾರ ತಿಳಿಸುವ ಸಾರ ಇಲ್ಲಿದೆ.

ವಂಶೋದ್ಧಾರಕನಾದ, ಕುಲದ ಬೆಳಕಾಗಬೇಕಾದ ಮಗ ಕೋಪ ಮುಕ್ತನಾಗಿ ಶಾಂತಿ, ಸಮಾಧಾನದ ಜ್ಯೋತಿಯಾಗಬೇಕು. ಕೋಪಿಷ್ಟನಾಗಿ ತಪ್ಪಿನಡೆದಲ್ಲಿ ದೀಪದಲ್ಲಿ ಸಿಕ್ಕಿ ಸಾಯುವ ಹುಳುವಿನಂತೆ ಸುಟ್ಟುಕೊಂಡು ತಾನೂ ಸಾಯುವುದಲ್ಲದೇ ವಂಶವನ್ನೇ ನಾಶಮಾಡಿ ಸಂಸಾರವನ್ನು ಕತ್ತಲೆಯ ಗವಿಯಾಗಿಸುತ್ತಾನೆ. ಕೋಪ ಅವಿವೇಕಕ್ಕೆ ಕಾರಣವಾಗುತ್ತದೆ.

೧೫೦

ಕೆಟ್ಟದೆನ್ನದು ದಾನ ಕೊಟ್ಟ ಮೂಲಗಳಿಂದ
ಕಷ್ಟಪಡುತಿಹರು ಕಲಿಯುಗದಿ ಅಂತಹವರ
ದೃಷ್ಟಾಂತ ಕಂಡೆ, ಬಸವಣ್ಣ

ತಾತ್ಪರ್ಯ : ದಾನ ಹಾಗೂ ದಾನಕೊಟ್ಟವನ ಹಿನ್ನೆಲೆ, ಆಧಾರಗಳು ಹಾಗೂ ದಾನಕೊಟ್ಟ ಮೂಲಗಳ ಕುರಿತ ಅತ್ಯಂತ ಮಹತ್ವದ ಸಂಗತಿಗಳನ್ನು ಈ ವಚನ ಹೇಳುತ್ತದೆ.

ದಾನ ಕೊಡುವುದು ಕೆಟ್ಟದ್ದು ಎನ್ನಲಾಗದು. ಆದರೆ ದಾನ ಕೊಟ್ಟವನ ಆಚಾರ–ವಿಚಾರಗಳು ಮತ್ತು ದಾನಿಯ ಮೂಲ ಆದಾಯದ ನೆಲೆಗಳು ಮುಖ್ಯವಾಗುತ್ತವೆ. ದಾನ ಎಂಬುದು ಅಹಂಕಾರದ ಪ್ರದರ್ಶನವೂ ಅಲ್ಲ, ಶ್ರೀಮಂತಿಕೆಯ ದರ್ಪವೂ ಅಲ್ಲ. ಸ್ವಂತ ಆದಾಯದ ಮೂಲಗಳಿದ್ದು ದಾನಕೊಟ್ಟರೆ ಅದರ ಸಾರ್ಥಕತೆಯೇ ಬೇರೆ. ಅನ್ಯದಾರಿ ಹಿಡಿದು ದಾನ ಮಾಡುವುದಿದೆಯಲ್ಲ ಅದು ಕೊಟ್ಟ ದಾನಿಗೆ ಕೆಡುಕಲ್ಲದೇ ಬೇರೊಂದನ್ನು ಬಯಸಲಾಗದು. ಹೀಗೆ ಅನ್ಯ, ಅನೈತಿಕ ಹಾಗೂ ದುರಹಂಕಾರ, ದರ್ಪದ ಮದವೇರಿ ದಾನ ಗೈದವರ ದೃಷ್ಟಾಂತ ಕಲಿಯುಗದಲ್ಲಿ ಸಾಕಷ್ಟು ಪ್ರಮಾಣದಲ್ಲಿದ್ದು ಅಂತಹ ದಾನಿಗಳು ಪಟ್ಟ ಪಡಿಪಾಟಲನ್ನು ಕಂಡು ನೋಡಿದ್ದುದನ್ನು ಈ ವಚನ ಮನಸ್ಸಿಗೆ ತರುತ್ತದೆ.

೧೫೧

ದಿನವೊಂದು ಬೆಳಗಲು ತನಗೆ
ಒಂದು ದಿನ ಕಡಿಮೆಯಾಯಿತು
ಮನೆಯ ಲಂಪಟವು
ಮಾನಿನಿಯು ಜನನಿ ಜನಕ
ತನ್ನ ತನುಜ ತನ್ನ ಗುರು, ಬಸವಣ್ಣ

ತಾತ್ಪರ್ಯ : ಇದೊಂದು ತುಂಬಾ ಸಂಕೀರ್ಣವೂ, ಕ್ಲಿಷ್ಟಕರವೂ ಆದ ವಚನ. ಇಲ್ಲಿನ ಪದ ಬಂಧಗಳು ಒಂದಕ್ಕೊಂದು ಪರ, ವಿರೋಧಗಳನ್ನು ವ್ಯಕ್ತಪಡಿಸುತ್ತಲೇ ಮನುಷ್ಯ ಬದುಕಿಗೆ ಬೇಕಾದ ನಿಷ್ಕಲ್ಮಶತೆ, ಪಾವಿತ್ರ್ಯತೆಯನ್ನು ಪ್ರತಿಬಿಂಬಿಸುತ್ತವೆ. ಅದು ಆಯುರ್ಮಾನದ ಪ್ರತಿಕ್ಷಣ, ದಿನಗಳ ಗಣನೆಯನ್ನು ಮಾಡುತ್ತಲೇ ಕಳೆದ ದಿನಗಳೂ ಮಾರ್ಗದರ್ಶಿಗಳಂತೆ ತೋರುತ್ತವೆ.

ಸೂರ್ಯನ ಪ್ರದಕ್ಷಿಣೆಗೆ ಮೂನ್ನೂರ ಅರವತ್ತೈದು ದಿನ ನಿಜ. ಆದರೆ ಆ ಪ್ರದಕ್ಷಿಣೆಗೆ ಪ್ರತಿದಿನವೂ ಕಡಿಮೆಯಾಗಿ ಗತಕಾಲಕ್ಕೆ ಸಂದು ಹೋಗುತ್ತವೆ. ಅಂತೆಯೇ ಮನುಜನ ಆಯುಷ್ಯದ ದಿನಮಾನಗಳೂ ಸೂರ್ಯ, ಚಂದ್ರರ ಪರಿಭ್ರಮಣೆಯೊಂದಿಗೆ ಗತಕಾಲಕ್ಕೆ ಸಂದು ಬಿಡುತ್ತವೆ. ಹೆಂಡತಿ, ತಾಯಿ, ತಂದೆ ಮಗ ಮುಂತಾದ ಪರಿವಾರದ ಕ್ರಿಯಾ ವಿಶೇಷಗಳು, ಕ್ರಿಯಾ ಆಚರಣೆಗಳು ನಮ್ಮನ್ನು ಸದಾ ಜಾಗೃತಗೊಳಿಸುತ್ತ ಅರಿವಿನ ಮಾರ್ಗಕ್ಕೆ ದೂಡಿ ಗುರು ಸ್ಥಾನದಲ್ಲಿ ನಿಂತು ಎಚ್ಚರಿಸುವ ಬಗೆ ವಿಸ್ಮಯ ಕಾರಿಯಾದದ್ದು. ತಮ್ಮ ಆಯಸ್ಸಿನಲ್ಲಿ ಒಂದು ದಿನ ಕಡಿಮೆಯಾಗಿರುವ ಅರಿವಿದ್ದರೂ ತಂದೆ ತಾಯಿ ಹೆಂಡತಿ ಮಕ್ಕಳು ಸೋದರರು ಗುರುಗಳು ಇವರ ಮೂಲಕ ಬಿಗಿದುಕೊಂಡಿರುವ ಸಂಸಾರ ಬಂಧನ ಮಾತ್ರ ಇನ್ನೂ ಬಿಗಿಯಾಗುತ್ತಲೇ ಇದೆಯಲ್ಲ.

೧೫೨

ಲಂಪಟಕೆ ಸಿಲುಕಿದರೆ ಲಕ್ಷಾಂತರ ದುಶ್ಚಿಂತಿ
ಕುಂಪಳಿಸುತ್ತ ಅಂಗ ಕೂಡ್ರಗೊಡದು ನೇತ್ರಕ್ಕೆ
ಜಂಪು ಹತ್ತಗೊಡದು, ಬಸವಣ್ಣ

ತಾತ್ಪರ್ಯ : ವಿಷಯಾಸಕ್ತನಾದ ಮಾನವ ಜಾರತನಕ್ಕೆ ಸಿಕ್ಕು ಪಡಬಾರದ ಕಷ್ಟ ಅನುಭವಿಸುವುದರ ಕುರಿತು ಈ ಪದ್ಯ ಮಾರ್ಮಿಕವಾಗಿ ವಿವರಿಸುತ್ತದೆ.

ಕಾಮುಕನು ವ್ಯಾಮೋಹಿಯೂ ಸ್ತ್ರೀ ಲೋಲನೂ ಆದ ಮನುಜ ಹಲವಾರು ದುಷ್ಪ, ಚಿಂತೆಗಳಿಗೆ ತುತ್ತಾಗಿ ನಿದ್ರೆ ಆಹಾರ ನೆಮ್ಮದಿಯ ಬದುಕಿನಿಂದ ವಂಚಿತನಾಗಿ, ಕೂತಲ್ಲಿ ಕೂಡ್ರಲೂ ಆಗದೆ ನಿಂತಲ್ಲಿ ನಿಲ್ಲಲೂ ಆಗದೆ ಪಡುವ ಹಿಂಸೆಯ ವಿವರ ಈ ವಚನದ ಮೂಲ ಆಶಯ.

೧೫೩

ಕಂಚಿನ ಕಳಸಕ್ಕಾಡಿ ಮುಂಚಿನ ವೀಳ್ಯಕ್ಕಾಡಿ
ಕೆಂಜಿಹೆಣ್ಣಿಗೆ ಕಡದಾಡಿ ಸತ್ತಂಥ
ಪಂಚ ಮಹಾಪಾತಕ ಇವರು
ಪಂಚ ಮುಖದಯ್ಯನ ಗುರುತವನರಿಯರು, ಬಸವಣ್ಣ

ತಾತ್ಪರ್ಯ : ಮನುಷ್ಯ ಒಣಪ್ರತಿಷ್ಠೆಗಾಗಿ, ಹೊಡೆದಾಡಿ ಪಡುವ ಪಾಡನ್ನು ವಚನ ವಿವರಿಸುತ್ತದೆ. ಇದರಿಂದ ಆಗುವ ಲಾಭ ಲೌಕಿಕ ಬದುಕಿನಲ್ಲಿ ಪಡುವ ಕಷ್ಟ, ಸಾವು, ನೋವು, ಯಾತನೆ ಇಂತಹದರಲ್ಲೆ ಮನುಷ್ಯ ಕಾಲಕಳೆದು ಆ ಪಂಚ ಮುಖದಯ್ಯ ಅಂದರೆ ವಿಶ್ವಕರ್ಮ(ಪಂಚಾನನ)ನ ಮಹಿಮೆಯನ್ನು ತಿಳಿಯ ದಷ್ಟು, ಆತನ ಮಹತ್ವವನ್ನು ಗುರುತಿಸದಷ್ಟು ಮತಿಹೀನರಾಗಿದ್ದಾರೆ.

ಕಂಚಿನ ಕಳಸವೆನ್ನುವುದು ಮಿರಮಿರನೆ ಹೊಳೆದು ಭ್ರಮೆಯುಂಟು ಮಾಡುತ್ತದೆ. ಕಣ್ಣು ಕುಕ್ಕಿಸುವ ತೇರ ಮೇಲಿನ ಕಳಸದಂತೆ ಅದು ದೂರದ ವಸ್ತು. ಅಂತಹ ದೂರದ ವೀಳ್ಯಕ್ಕಾಡುವುದು, ಗೌರವಕ್ಕೆ ವಾಲುವುದು, ಜಿದ್ದಿಗೆ ಜೋತು ಬೀಳುವುದು, ಸುಂದರ ಸ್ತ್ರೀಯ ಸಹವಾಸಕ್ಕೆ ಹಾತೊರೆದು ಅದಕ್ಕಾಗಿ ಕಾದಾಡಿ ಸಾಯುವ ಸ್ವಭಾವದವರು ಪಂಚ ಮಹಾಪಾತಕರಿಗೆ ಸಮಾನರು. ಇಂತಹ ಮಹಾಪಾತಕಿಗಳು ಪಂಚಮುಖದ ಮಹಾಪ್ರಭು, ಜಗನ್ನಿರ್ಮಾಪಕ ಮತ್ತು ನಿಯಂತ್ರಕ ನಾಗಿರುವ ಪ್ರಭು ವಿಶ್ವಕರ್ಮನ ಗುರುತನ್ನು ಅರಿಯದ ಮತಿಹೀನರೆಂದು ಈ ವಚನ ಹೇಳುತ್ತದೆ.

ಇಲ್ಲಿ, ಹೆಣ್ಣಿಗಾಗಿ ಸತ್ತವರು ಕೋಟಿ, ಮಣ್ಣಿಗಾಗಿ ಸತ್ತವರು ಕೋಟಿ, ನಿನಗಾಗಿ ಸತ್ತವರ ಕಾಣೆ ಗುಹೇಶ್ವರ ಎನ್ನುವ ಅಲ್ಲಮ ಪ್ರಭುವಿನ ವಚನದ ಅರ್ಥ ಬರುವಂತಿದೆ. ಅಲ್ಲಮನ ಪ್ರಭಾವ ಮೋನಪಯ್ಯನವರ ಮೇಲೆ ಬೀರಿದ್ದು ಪ್ರಮುಖ ಸಂಗತಿ.

೧೫೪

ಹೆಣ್ಣು ನೆಚ್ಚುವರೇನು ಕಣ್ಣು ಕಾಣದ ಮೂಳ
ಪುಣ್ಯ ಪಾಪವನು ಅವಳಲ್ಲಿ ನಿಯಮಿಸಿದಂಥ
ಘಟವಾಳಯ್ಯಗೆ ನಾನು ಶರಣೆಂಬೆ, ಬಸವಣ್ಣ

ತಾತ್ಪರ್ಯ : ಹೆಣ್ಣನ್ನು ನಂಬಿ ಮೂಢನಾಗಬೇಡ. ಮೂಳನಾಗಬೇಡ, ಅಷ್ಟೇ ಅಲ್ಲ ಕಣ್ಣು ಕಾಣದ ಕುರುಡನಾಗಬೇಡವೆಂದು ಮೋನಪಯ್ಯನವರು ಪುರುಷನನ್ನು ಎಚ್ಚರಿಸುತ್ತಾರೆ. ಹೆಣ್ಣಿನಲ್ಲಿ ಪುಣ್ಯವೂ ಉಂಟು, ಪಾಪವೂ ಉಂಟು. ಈ ಎರಡೂ ಗುಣಗಳನ್ನು ಹೆಣ್ಣಿನಲ್ಲಿ ಕಂಡು, ಗುರುತಿಸಿ ಅವಳಿಗೆ ಗೌರವ ನೀಡಿದ ಆಧರಿಸಿದ ಘಟವಾಳಯ್ಯನವರನ್ನು ನೆನೆಸುತ್ತ ಅವರಿಗೆ ಶರಣು ಸಮರ್ಪಣೆ ಅರ್ಪಿಸುವ ರೀತಿ ಬಹಳ ಮುಖ್ಯವಾದದ್ದು.

ಮೊದಲ ಸಾಲುಗಳಿಗೂ ನಂತರದ ಸಾಲುಗಳಿಗೂ ವೈರುಧ್ಯತೆ ಕಾಣುತ್ತಿರುವಂತೆ ತೋರುತ್ತಿದೆ. ಹೆಣ್ಣನ್ನು ನಿಕೃಷ್ಟವಾಗಿ ಕಂಡು, ಚಿತ್ರಿಸಿದ ವೈದಿಕ ಪರಂಪರೆಗೆ ಘಟಿವಾಳಯ್ಯನವರ ವಚನಗಳ ಅರ್ಥವಂತಿಕೆಯ ಮಾರ್ಗ ಅನುಸರಿಸಿ ತಿರುಗೇಟು ನೀಡುತ್ತಲೇ ಅವಳನ್ನು ಗೌರವಿಸುವುದು, ಪೂಜ್ಯನೀಯವಾಗಿ ಪುರಸ್ಕರಿಸುವ ಗುಣವಂತಿಕೆಯನ್ನು ತಿಳಿಸುವುದು ಈ ವಚನದ ಪ್ರಮುಖ ಆಶಯ.

೧೫೫

ವೇಷ ಭೂಷಣಕೆ ಈಶ ತಾನೊಲಿವನೆ
ಮಾದಿಗ ಮನೆಯ ಕಾಯಕ ಮಾಡಿಕೊಡಲು
ಕಾಶಿಯ ಗಂಗೆ ಕೈಯ ನೀಡದಳು ಈ
ಭೂಸುರರ ಮಾತೇನು ಕೆಲಸೇನು, ಬಸವಣ್ಣ

ತಾತ್ಪರ್ಯ : ಮನುಷ್ಯನ ಆಷಾಢಭೂತಿತನ, ಡಾಂಭಿಕತನ, ಅಸಹಜತನಗಳ ಕುರಿತು ಈ ವಚನ ಕಣ್ಣು ತೆರೆಸುತ್ತದೆ. ಗಂಗೆಯ ಪರಿಶುದ್ಧತೆಯ ಕುರಿತು ಗಮನ ಸೆಳೆಯುತ್ತಲೆ ಜಾತಿ, ಮತ, ಧರ್ಮದ ಕುರಿತು ಬ್ರಾಹ್ಮಣರ(ಭೂಸುರರ) ಮಡಿವಂತಿಕೆ ಮುಂತಾದವುಗಳ ಕುರಿತು ಕಿಡಿಕಾರುವ ಮೊನಚುತನ ಇಲ್ಲಿದೆ.

ಮಡಿ ಹುಡಿಯ ಪ್ರತೀಕವೆಂಬಂತಿರುವ ವೇಷ, ಭೂಷಣ, ಅಲಂಕಾರಗಳಿಂದ ಶಿವನನ್ನು ಒಲಿಸಿಕೊಳ್ಳಲಾಗದು. ಇವೆಲ್ಲವುಗಳಿಗೂ ವ್ಯತಿರಿಕ್ತವಾದ ಸಾಮಾಜಿಕವಾಗಿ ದೂರ ತಳ್ಳಲ್ಪಟ್ಟ, ಕುಲಹೀನನೆಂದು ಕರೆಸಿಕೊಳ್ಳುವ ಮಾದಿಗರ ಮನೆಯಲ್ಲಿ ಕಾಯಕ ಮಾಡಿದರೆ ಈಶನೊಲಿವನು. ಪರಿಶುದ್ಧ ಗಂಗೆ ಕೈಚಾಚಿ ಮುಂಬಂದು ಸಹಾಯ ಮಾಡುವಳು. ಯಾವುದೇ ರೀತಿಯ ಆತ್ಮವಂಚನೆಯಾಗಲೀ, ಕುಲೀನತೆಯ ಪ್ರಶ್ನೆಯಾಗಲೀ ಕಾಣದು. ಆದರೆ ಈ ಭೂಮಿಯ ಮೇಲಿನ ದೇವತೆಗಳೆಂದು ಸೋಗು ಹಾಕಿಕೊಂಡ ಬ್ರಾಹ್ಮಣ ವರ್ಗದವರು ಆಚರಿಸುವ ಕಪಟ ಆಚರಣೆಗಳು, ಅರ್ಥಹೀನವಾದವುಗಳು ಎನ್ನುವ ಖಚಿತತೆ ಇಲ್ಲಿದೆ.

೧೫೬

ಉಂಬಂತೆ ಉಣಬೇಕು ಕೊಂಬಂತೆ ಕೊಳಬೇಕು
ಬಂದುದನುಂಡು ಬ್ರಹ್ಮಚಾರಿಯಾಗುವುದು
ಸಂಗನ ಶರಣರ ಯಾತ್ರೆಯು ಲೋಕದ
ವ್ಯಂಗ್ಯಾಟವ ಬಿಡಬೇಕು, ಬಸವಣ್ಣ

ತಾತ್ಪರ್ಯ : ಜೀವನವೆಂಬುದು ವ್ಯಂಗ್ಯದ ಮಂಗನಾಟವಲ್ಲ. ಅಖಾಡವೂ ಅಲ್ಲ. ಅದು ಶರಣರ ಮಹಾಯಾತ್ರೆಯಂತೆ, ಮಹಾಚೈತ್ರದಂತೆ ಸದಾ ನಮ್ಮನ್ನು ಜಾಗೃತಗೊಳಿಸುತ್ತಿರಬೇಕು. ಬಂದುದನ್ನು ಬಂದಂತೆ ಸ್ವೀಕರಿಸಬೇಕೆನ್ನುವ ವಿಚಾರ ಇಲ್ಲಿ

ಅಡಗಿದೆ. ಲೋಕದ ವ್ಯಂಗ್ಯದ ಆಟವನ್ನು ಬಿಡಬೇಕೆಂದರೆ ಉಣ್ಣುವುದು, ಪಡೆಯುವುದು, ಕೊಡುವುದು ಸಹಜವಾಗಿರಬೇಕು. ಬಂದದ್ದನ್ನು ಅನುಭವಿಸುತ್ತ ಬ್ರಹ್ಮಚಾರಿಯಂತೆ ಬದುಕಬೇಕು. ಅದು ಶಿವಶರಣರ ಯಾತ್ರೆಯಂತಿರಬೇಕೆಂದು ವಚನ ತಿಳಿಸುತ್ತದೆ.

೧೫೭

ದುಡಿದುಣ್ಣಲಾರದೆ ತುಡುಗು ಮಾಡುವರಯ್ಯ
ಕಡಿವರೇಳಯ್ಯ ಕೈಕಾಲು ಅವರಿಗೆ
ಕಡೆಗಾಲ ಬಂತು, ಬಸವಣ್ಣ

ತಾತ್ಪರ್ಯ : ಈ ಪದ್ಯ ಕಾಯಕದ ಮಹತ್ವವನ್ನು ಅರುಹುತ್ತದೆ. ಕಾಯಕದಿಂದ ವಿಮುಖನಾದವನು ಅಂತ್ಯ ಅವಸಾನಗಳ ಕುರಿತು ವಿವರಿಸುವ ಈ ವಚನ ಕಾಯಕದ ಮೂಲಕ ನ್ಯಾಯ, ನೀತಿ ಹೇಳುವುದು ಅತ್ಯಂತ ಮಹತ್ವದ ವಿಚಾರವಾಗಿದೆ.

ಶ್ರಮವಹಿಸಿ, ಕಷ್ಟಪಟ್ಟು ದುಡಿದು ಅದರಿಂದ ಬಂದ ಆದಾಯದ ಮೂಲಕ ಊಟ ಮಾಡಿದರೆ ಜೀವನ ಸಾರ್ಥಕ. ಅದಕ್ಕೆ ಬದಲಾಗಿ, ತುಡುಗುತನದಿಂದ ಕಳ್ಳತನ, ವಂಚನೆ, ಮೋಸ, ಕಪಟತನದಿಂದ ಜೀವನ ಸಾಗಿಸುವವರಿಗೆ ಆಪತ್ತು ಸದಾ ಕಾಡುತ್ತಿರುತ್ತದೆ. ಇಂತಹವರು ಒಂದಿಲ್ಲೊಂದು ದಿನ ಕೈಕಾಲು ಮುರಿಸಿಕೊಂಡು ಅಂತ್ಯಕಾಣುವರು ಎನ್ನುವ ಕಟುಸತ್ಯ ಇಲ್ಲಿ ಅಡಗಿದೆ.

೧೫೮

ಎತ್ತು ಎಮ್ಮಿಯನೇರಿದರೆ ಹೆತ್ತ ತಾಯಿಯ ಜರಿದರೆ
ಹಿತ್ತಾಳೆ ಚಿನ್ನದೊಳು ಬೆರೆತರೆ ಲೋಕದಲಿ
ತಮ್ಮವರು ತಮಗೆ ವೈರಿಯಾದಾರು, ಬಸವಣ್ಣ

ತಾತ್ಪರ್ಯ : ಈ ವಚನ ಅಸಹಜ ಮೈತ್ರಿಯ ಬಗೆಗೂ ಅಸಹಜ ವ್ಯಕ್ತಿತ್ವದ ಬಗೆಗೂ ವಿವರಣೆ ನೀಡುತ್ತದೆ. ಹಗೆತನ, ಗೆಳೆತನ, ತನ್ನವರು, ಇತರರು ಈ ಮರ್ಮ ಬಹು ಮುಖ್ಯವಾಗಿದ್ದು, ಅದರ ಅರಿವು ಮಹತ್ವವಾದದ್ದೆಂದು ಬಿಂಬಿಸುವ ಮಾತು ಇಲ್ಲಿದೆ. ಈ ವಚನದಲ್ಲಿ ನೈತಿಕತೆ, ಅನೈತಿಕತೆ, ಸಹಜತೆ, ಅಸಹಜತೆಯ ಪ್ರಶ್ನೆಯನ್ನು ಲೋಕದ ಜನರ ಮುಂದಿಡಲಾಗಿದೆ.

ಎತ್ತು ಆಕಳನ್ನು ಸಂಭೋಗಿಸುವುದು ಸಹಜ ಪ್ರಕ್ರಿಯೆ. ಆದರೆ ಎತ್ತು ಎಮ್ಮೆಯನ್ನು ಅನುಭೋಗಿಸುವುದು ಅಸಹಜ ಮತ್ತು ಅನೈತಿಕವಾದದ್ದು. ನಿಸರ್ಗದ ಪ್ರಕ್ರಿಯೆಗೆ ವಿರುದ್ಧವಾದದ್ದು. ಅದರಿಂದ ಉಂಟಾಗುವ ಫಲಶ್ರುತಿ ಶೂನ್ಯ ಅಂತೆಯೇ ಹೆತ್ತ ತಾಯಿಯನ್ನು ಹೀಗಳೆಯುವುದು, ಹಿತ್ತಾಳೆ ಚಿನ್ನಗಳನ್ನು ಬೆರೆಸುವುದು ಇವು ಅಸ್ವಾಭಾವಿಕ ಕ್ರಿಯೆಗಳೇ ಆಗಿವೆ. ಅದರಿಂದ ಬರುವ ಫಲ ಅಶುಭ ಹಾಗೂ

ಅಪಭ್ರಂಶತೆ. ಇಂತಹ ಹೀನ ಕಾರ್ಯದಲ್ಲಿ ತೊಡಗುವವರಿಗೆ ಸ್ವಜಾತಿಗಳವರೇ ವೈರಿಗಳಾಗುತ್ತಾರೆ.

೧೫೯

ದೇಹವೆ ದೇವರು ಜೀವವೆ ಶಿಷ್ಯನು
ಭಾವ ಭಕ್ತಿ ಯುಕ್ತವಾದ ಭಕ್ತರಿಗೆ ಮಾತಿನ
ಸಾಮ್ಯ ಹೊಂದದೆ ಲಡಾಯಿ, ಬಸವಣ್ಣ

ತಾತ್ಪರ್ಯ : ಸಾಮರಸ್ಯದ ಹಾಗೂ ಸಾರ್ಥಕ್ಯದ ಜೀವನ ನಡೆಸಬೇಕೆಂದರೆ ಸಾಮ್ಯತೆ, ಸಮಾನತೆ, ಸಂಯಮ ಅವಶ್ಯವೆನ್ನುವುದು ಇಲ್ಲಿನ ತಾತ್ಪರ್ಯ. ಈ ದೇಹ ದೇವರಾದರೆ, ಆ ದೇಹಕ್ಕೆ ಚೈತನ್ಯಸ್ವರೂಪನಾದವನೇ ಶಿಷ್ಯ. ಪರಿಶುದ್ಧ ನಾದ ವ್ಯಕ್ತಿಯಲ್ಲಿ ಭಾವ ತುಂಬಿದ ಭಕ್ತಿ, ಅದಕ್ಕೆ ಅನುಗುಣವಾದ ವಿವೇಕ ಹಾಗೂ ಯುಕ್ತಿಬೇಕು. ಸಮರ್ಥನೀಯ ವಾಗ್ಧರ್ಿಯೂ ಬೇಕು. ಹೀಗೆ ಪರಸ್ಪರ ಹೊಂದಾಣಿಕೆ ಯಾಗದೇ ವ್ಯತಿರಿಕ್ತವಾದಲ್ಲಿ ಅದು ಜಗಳಕ್ಕೆ ಕಾರಣವಾಗುತ್ತದೆ.

೧೬೦

ಬಾಧೆ ಬಂದಾನಕ್ಕೆ ಬೀಳುವವರೆಲ್ಲರು
ಬೀದಿ ಬೀದಿಯಲ್ಲಿ ಮೆರೆವರು, ಧರ್ಮದ
ಮಾದಿಗನೆಲ್ಲಿ ಮೆರೆವನು, ಬಸವಣ್ಣ

ತಾತ್ಪರ್ಯ : ಧರ್ಮ, ಅಧರ್ಮದ ಹಾದಿಯ ಕುರಿತು ಧ್ವನಿಸುವ ಈ ವಚನ ಧರ್ಮದ ಹಾದಿಯಲ್ಲಿ ನಡೆಯುವವರನ್ನು, ಅಧರ್ಮ, ಅನ್ಯಾಯ, ಅನೀತಿಯಲ್ಲಿ ನಡೆದು ಮೆರೆಯುವವರನ್ನು ಹಾಗೂ ಈಶ್ವರ ನಡುವಿನ ಅಂತರವನ್ನು ಮಾರ್ಮಿಕ ವಾಗಿಯೇ ಗುರುತಿಸುತ್ತದೆ.

ನೋವು, ಯಾತನೆಗಳು ಮನುಷ್ಯನನ್ನು ರೂಪಿಸಿದಂತೆ ನಾಶಕ್ಕೂ ಕಾರಣವಾಗುತ್ತವೆ. ಮನುಷ್ಯನನ್ನು ಹುಚ್ಚನನ್ನಾಗಿಸಿ ಬೀದಿಪಾಲು ಮಾಡುತ್ತವೆ. ಬಂದಾನವೆನ್ನುವುದು ಆಡುಮಾತಿನ ಪದವಾಗಿದ್ದು ಯಾತನೆಪಡುವುದು, ನೋವು ಅನುಭವಿಸುವುದು ಎಂದರ್ಥ ನೀಡುತ್ತದೆ. ಆದರೆ ಅದೇ ಧರ್ಮ, ನೀತಿ, ನಿಯತ್ತುಗಳನ್ನು ರಕ್ತಗತ ಮಾಡಿಕೊಂಡು ಬದುಕುವ ಕುಲಜನಾದ ಮಾನವನು ನಗಣ್ಯನಾಗುತ್ತಾನೆ ಎನ್ನುತ್ತದೆ ಪದ್ಯ.

೧೬೧

ಬಾಡಿಗೆಯ ದೇಹಕ್ಕೆ ಮಾಡಿದೆನು ಉಪಕಾರವ
ಆಡಿದೆನು ಅದರೊಳು ಪೊಕ್ಕು, ಕಡೆಗೆ

ಹದ್ದು ಕಾಗೆಯ ಪಾಲು ಮಾಡಿತು, ಆದರೆ
ಇದರ ಸುಖವೇನು, ಬಸವಣ್ಣ

ತಾತ್ಪರ್ಯ : ದೇಹದ ನಶ್ವರತೆಯನ್ನು ಕುರಿತು ಈ ಪದ್ಯ ವಿವರಿಸುತ್ತದೆ. ಈ ದೇಹವೆಂಬುದು ಬಾಡಿಗೆಯದ್ದು. ಇದಕ್ಕೆ ತರತರನಾದ ಅಲಂಕಾರ ಮಾಡಿ, ಅದನ್ನು ನಾನಾ ರೀತಿಯಾಗಿ ಹೊಕ್ಕಾಡಿ, ಬಳಸಿಕೊಂಡು ಅನುಭೋಗಿಸುವುದು ಶರೀರದ ಕೆಲಸ. ಇಂತಹ ಶರೀರ ಹದ್ದು ಕಾಗೆಗಳ ಪಾಲಾಗುವುದು. ಹೀಗಾಗಿ ಇದಕ್ಕೆ ಮಾಡಿದ ಶೈತ್ಯೋಪಚಾರಗಳಿಗೆ ಬೆಲೆಯಿಲ್ಲ ಎನ್ನಲಾಗುತ್ತದೆ. ಅಂದರೆ ಶರೀರ ನಶ್ವರ ಎಂದು ಗೊತ್ತಿದ್ದರೂ ಅದನ್ನು ವಿಪರೀತವಾಗಿ ನೆಚ್ಚುವ ಮೂಲಕ ಮನುಷ್ಯ ಅನುಭವಿಸುವ ದುಃಖವನ್ನು ವಚನ ಬಿಂಬಿಸುವಂತಿದೆ.

೧೬೨

ಅನುಮಾನವಿಲ್ಲದೆ ಘನದೋಷ ಮಾಡಲು
ದಿನ ಒಂದು ಹಗಲು ರಾತ್ರಿಯಲಿ ಸಪ್ತಜನ್ಮದ ದೋಷ
ತನಗೆ ತಪ್ಪುವದೆ, ಬಸವಣ್ಣ

ತಾತ್ಪರ್ಯ : ಮನುಷ್ಯರು ತಿಳಿದು ತಿಳಿದು ಮಾಡುವ ತಪ್ಪಿಗೆ ಪಡುವ ಶಿಕ್ಷೆಯ ಕುರಿತು ಹೇಳಲಾಗುವ ಈ ಮಾತುಗಳು ಮಹತ್ವದ್ದು. ತಿಳಿದು ತಿಳಿದು ಮಾಡುವ ದೋಷಗಳು, ತಪ್ಪುಗಳು ಏಳು ಜನ್ಮದಲ್ಲಿ ಆಗುವಷ್ಟು ದೋಷಕ್ಕೆ ಸಮನಾದುದು ಎನ್ನುವ ಧ್ವನಿ ಇಲ್ಲಿದೆ. ಅಂದರೆ ತಪ್ಪೆಂದು ತಿಳಿದೂ ತಾನು ಮಾಡಿದ ಹೇಯಕಾರ್ಯಗಳು ಆತನ ಮನಃಪಟಲದಲ್ಲಿ ಕುಣಿದು ಕುಪ್ಪಳಿಸಿ, ಜರ್ಜರಿತಗೊಳಿಸುತ್ತವೆ. ಅದು ಏಳೇಳು ಜನ್ಮಗಳಲ್ಲಿ ಅನುಭವಿಸುವ ಯಾತನೆಗೆ ಸಮನಾದುದು. ಹಾಗಾಗಿ ಮನುಷ್ಯನಿಗೆ ಸ್ವ ಅರಿವು ಬಹಳ ಮುಖ್ಯವಾದುದು.

೧೬೩

ಅಶುಭ ಪಶುವದು ವಿಷಕಾರುತಿದ್ದುದು
ಅಸ್ತಿಯನ್ನೆಲ್ಲ ಮುರಿದು ತಿಂದೆ ಪ್ರಭುರಾಯ
ಮಸವಂಟಿಕೆಯಲ್ಲವೆ ಎನ್ನ ಶರೀರ, ಬಸವಣ್ಣ

ತಾತ್ಪರ್ಯ : ಬೆಂಬೊಡಲ ಹೊರೆಯ ಹೋದ ಮನುಷ್ಯ ಇನ್ನೊಂದು ಪ್ರಾಣಿಯನ್ನು ಹಿಂಸಿಸಿ ಕೊಂದು ತಿಂದು ತೇಗುವ ದಾಹದ ಕುರಿತು ಹೇಳುವ ಈ ವಚನ ಇತರ ಪ್ರಾಣಿಗಳ ಬಗೆಗೆ ದಯೆ ತೋರಲು ತಿಳಿ ಹೇಳಿದಂತಿದೆ.

ಈ ದೇಹವೇ ಒಂದು ಅಶುಭ ಪಶುವಾಗಿದ್ದು ಸದಾ ವಿಷಯವೆಂಬ ನಂಜನ್ನು, ತನ್ನೊಡಲೊಳಗೆ ತುಂಬಿಕೊಂಡಿದ್ದು ತನ್ನಂತೆಯೇ ಜೀವಿಸುವ ಇತರೆ ಸಹ

ಜೀವಗಳನ್ನು ಕೊಂದು, ಮಾಂಸ, ಎಲುಬು ಸಮೇತವಾಗಿ ತಿಂದು ಒಡಲೆಂಬುದನ್ನೇ ಸುಡುಗಾಡು ಮಾಡಿಕೊಂಡಿದೆ. ಸ್ವಾರ್ಥಪರ ಆಲೋಚನೆಗಳು ಎಲ್ಲವೂ ತನಗೆ ಬೇಕೆಂಬ ವಿಪರೀತ ಆಸೆಗಳು ಈ ಶರೀರವನ್ನು ಸುಡುಗಾಡಿಗಿಂತ ಕಡೆಯಾಗಿಸಿವೆ. ದಯೆ, ಕರುಣೆ, ಮಮತೆಯನ್ನೇ ಕಳೆದುಕೊಂಡು ಬದುಕುವ ನರನ ಬದುಕನ್ನು ವಚನ ಸಮರ್ಥವಾಗಿ ಧ್ವನಿಸುತ್ತದೆ.

೧೬೪

ಕೆತ್ತಿ ಮಾಡುವದಲ್ಲ ಒತ್ತಿ ಕಾಸುವುದಲ್ಲ
ಚಿತ್ರದಲಿ ಬರೆದು ತಿದ್ದುವುದಲ್ಲ, ದೇಹವು
ಮೃತ್ಯುಂಜಯನ ಕೌತುಕವು, ಬಸವಣ್ಣ

ತಾತ್ಪರ್ಯ : ಮನುಷ್ಯನ ಶರೀರ ಮೃತ್ಯುಂಜಯನೆಂಬ ಶಿಲ್ಪಿಯು ಮಾಡಿದ ಕೌತುಕ ತುಂಬಿದ ಶಿಲ್ಪವೆಂದು ಈ ವಚನ ಧ್ವನಿಸುವುದು ಅತ್ಯಂತ ಅದ್ಭುತವಾದದ್ದು.

ಕೆತ್ತಿ ಮಾಡಿದ್ದಲ್ಲ, ಗಾಳಿ ಚೀಲದಲ್ಲಿ ಒತ್ತಿ ಬೆಂಕಿ ಮಾಡಿ ಕಾಯಿಸಿ ಹಣಿದು ತಿದ್ದಿ ತೀಡಿದ್ದೂ ಅಲ್ಲ, ಚಿತ್ರಕಾರನೊಬ್ಬ ಕುಂಚದಲ್ಲಿ ಬರೆದು ತಿದ್ದಿದುದೂ ಅಲ್ಲ. ಈ ಶರೀರ ರಚನೆ ಎಂತಹ ಕೌತುಕದ್ದೆಂದು ಆಶ್ಚರ್ಯಪಡುವುದು ಗಮನಾರ್ಹ. ಇಂತಹ ಶರೀರದ ವಿಸ್ಮಯದ ಮೀಮಾಂಸೆಯನ್ನು ಅಲ್ಲಮನಲ್ಲೂ ಕಾಣಬಹುದು.

ಮನುಷ್ಯನ ದೇಹ ರಚನೆಯೆಂಬುದು ಸೃಷ್ಟಿಕರ್ತನ ಅದ್ಭುತ ಸೃಷ್ಟಿ. ತನ್ನ ದೇಹ ಸಿರಿಯನ್ನು ನೀರಿನ ಪ್ರತಿಬಿಂಬದೊಳಗೆ ಕಂಡ ಋಷ್ಯಶೃಂಗನೆಂಬ ಋಷಿ ಸ್ವ ವ್ಯಾಮೋಹಿಯಾದ ಉದಾಹರಣೆಯನ್ನು ಪುರಾಣ ಹೇಳುತ್ತದೆ. ಸ್ತ್ರೀ, ಪುರುಷ ಎರಡು ಆಕೃತಿಗಳ ಮಾಟಕ್ಕೆ ಅದರ ಮಹಿಮೆಗೆ ಮರುಳಾಗದವರಾರು.

೧೬೫

ಅಸ್ತಿ ಮಾಂಸ ನರಕೆ ಸುತ್ತು ಚರ್ಮದ ಹೊದಿಕೆ
ವಸ್ತಿ ಬಂದಿಹುದು ಕಲಿಯುಗಕೆ, ಘನ ಶ್ರೇಷ್ಠ
ಕಾಸಿ ನೋಡಯ್ಯ, ಬಸವಣ್ಣ

ತಾತ್ಪರ್ಯ : ದೇಹದ ಮೀಮಾಂಸೆಯನ್ನಿಲ್ಲಿ ಕಾಣುತ್ತೇವೆ. ದೇಹವೇ ಮೂಳೆ ಮಾಂಸದ ಮುದ್ದೆಯಾಗಿದೆ. ಚರ್ಮದ ಹೊದಿಕೆಯಿಂದ ಆವರಿಸಿರುವ ಇದು ಈ ಭೂಮಿಗೆ ವಸ್ತಿ ಅಂದರೆ ಬಾಳಲು ಬಂದಿದೆ. ಇಂತಹ ದೇಹದ ವಿಸ್ಮಯವನ್ನು ಅದರ ಸಾತ್ವಿಕತೆಯನ್ನು ಕಾಸಿ ನೋಡುವುದೆಂದರೆ ಅದರ ನಿಗೂಢತೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ವಿಮರ್ಶಿಸುವುದೇ ಆಗಿದೆ. ದೇಹವಾದಿ ಮೀಮಾಂಸೆಯ ಈ ನೆಲೆ ಅದ್ವೈಯವಾದಿಗಳಲ್ಲಿ ಕಾಣುವ ಬಹುಮುಖ್ಯ ನೆಲೆಯಾಗಿದೆ.

ದೇಹವನ್ನು ಕೇವಲ ಹೇಸಿಕೆಯೆಂದು ವ್ಯರ್ಥವೆಂದು ಮಡಿ ಮೈಲಿಗೆ ರೂಪವೆಂದು ವ್ಯಾಖ್ಯಾನಿಸಿರುವ ನಿಲೆಗಳನ್ನು ಮೌನೇಶ್ವರರು ವಿಸರ್ಜಿಸುತ್ತಾರೆ.

೧೬೬

ಮನವೆಲ್ಲ ಮೈಲಿಗೆ ತನುವೆಲ್ಲ ಸೂತಕವು
ಜಗದ ಮೆಚ್ಚಿಗೆಗೆ ತಾನು ಜಳಕವ ಮಾಡಲು
ಮೆಚ್ಚಲಾರೆ ಪ್ರಭುರಾಯ, ಬಸವಣ್ಣ

ತಾತ್ಪರ್ಯ : ವಚನ ತನು ಮನಗಳ ಶುದ್ಧೀಕರಣದ ಕುರಿತು ಹೇಳುತ್ತದೆ. ಈ ದೇಹದ ಸಿರಿಗೆ, ತನು ಮನಗಳೆಂಬ ಎರಡು ಪ್ರಕಾರಗಳಿದ್ದು ಅವೇ ಅಂತರಂಗ ಬಹಿರಂಗಗಳಾಗಿ ವಿನ್ಯಾಸಗೊಂಡಿವೆ.

ಬಹಿರಂಗಕ್ಕಿರುವ ತನು ಅಂದರೆ ಕಾಯ, ಸೂತಕದ ಛಾಯೆಯಾಗಿದ್ದು ಅದು ಸ್ನಾನಾದಿಗಳಿಂದ ಶುದ್ಧಿಗೊಳಿಸಲ್ಪಡುವುದು. ಆ ಮುಖಾಂತರ ತನುವಿಗೆ ಅಂಟಿಕೊಂಡ ಸೂತಕವನ್ನು ಪರಿಹರಿಸಬಹುದೆಂದು ನಂಬಿಸಲಾಗಿದೆ. ಆದರೆ ಅಂತರಂಗದ ಅಂದರೆ ಮನಸ್ಸಿನ ಶುದ್ಧಿಗೆ ಕಂಡುಕೊಳ್ಳಲಾಗಿರುವ ವಿಧಾನಗಳು ಹಲವಾರು. ಅದು ಅರಿಷಡ್ವರ್ಗ ಗಳೆಂಬ ಕಾಮನೆಗಳಿಗೆ ಸಿಕ್ಕು ನಲುಗಿ ಮೈಲಿಗೆಯಾಗಿ ಹೋಗಿದೆ. ಈ ಅರಿಷಡ್ವರ್ಗಗಳ ವಿಮುಕ್ತಿಯೇ ಮೈಲಿಗೆಯಿಂದ ಬಿಡುಗಡೆ. ಈ ವಿಮುಕ್ತಿಯೇ ಜೀವನ್ಮುಕ್ತಿ. ಇದರ ಹೊರತು ಹೊರ ಆವರಣದ ಸ್ವಚ್ಛತೆಯಿಂದ ಯಾವುದೇ ಪ್ರಯೋಜನವಿಲ್ಲ. ಅಂತಹದ್ದನ್ನು ಆ ಪ್ರಭು ಮೆಚ್ಚನು. ಪ್ರಭುವಿನ ಸಾಕ್ಷಾತ್ಕಾರವೇ ಚಿರಶಾಂತಿ.

೧೬೭

ಆಡು ಕುದುರೆಯ ತಿಂದೆ ಕೋಡಗ ಕೋಣನ ತಿಂದೆ
ನಾನಾ ಮೃಗಗಳ ಮುರಿದು ತಿಂದೆ, ಪ್ರಭುರಾಯ
ಸುಡುಗಾಡು ಅಲ್ಲವೆ ಎನ್ನ ಶರೀರ, ಬಸವಣ್ಣ

ತಾತ್ಪರ್ಯ : ಮೋನಪಯ್ಯನವರು ಮತ್ತೆ ಮತ್ತೆ ಆಹಾರ ಪದ್ಧತಿಯ ಮೇಲೆ ಬೆಳಕು ಚೆಲ್ಲುತ್ತಾ **ಪ್ರಾಣಿ** ದಯೆಯ ಕುರಿತು ಪ್ರಸ್ತಾಪಿಸುವುದು ಕಂಡುಬರುತ್ತದೆ. ಇವರ ಪ್ರಮುಖ ಆಶಯ ಜೀವನಪರ ಆಶಯವೇ ಹೊರತು ಜೀವ ವಿರೋಧಿ ಆಶಯವಲ್ಲ. ಶ್ರಮ ಸಂಸ್ಕೃತಿ, ಕಾಯಕ ಸಂಸ್ಕೃತಿಯೇ ಶ್ರೇಷ್ಠವೆಂದು ಸಾರುವ ಇವರ ಮಾತುಗಳು ಪ್ರಕೃತಿ ಅಂದರೆ ನಿಸರ್ಗದ ಮಡಿಲೇ ಶ್ರೇಷ್ಠವೆನ್ನಲಾಗಿದ್ದು, ದೇಹವೆನ್ನುವುದನ್ನು ಮೃಗೀಯ ಸದೃಶ್ಯವಾಗಿಸಿ ಸುಡುಗಾಡು ಮಾಡಿಕೊಳ್ಳದಿರುವಂತೆ ಮತ್ತೆ ಮತ್ತೆ ಒತ್ತಿ ಒತ್ತಿ ಹೇಳಿದಂತಿದೆ. ಇದು ಒಂದು ರೀತಿ ಸ್ವವಿಮರ್ಶೆಯೂ ಆಗಿದೆ.

೧೬೮

ಮೆಟ್ಟು ಮಾರುವವನಾದರೂ ಆಗಲಿ
ಕಟ್ಟಿಗೆ ತರುವವನಾದರೂ ಆಗಲಿ
ಕಷ್ಟ ಮಾಡಿ ಉಂಬುವವರ ಮನೆಯ
ಮುಷ್ಟಿ ಅನ್ನವೇ ಸಾಕು, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ವಚನಗಳಲ್ಲಿ ಅತ್ಯಂತ ಶ್ರೇಷ್ಠತೆ ಪಡೆದ ವಚನಗಳಲ್ಲಿ ಇದೂ ಒಂದು; ಇಲ್ಲಿ ಕಾಯಕದ ಮಹತ್ವವನ್ನು ಎತ್ತಿಹಿಡಿದು, ಕಾಯಕ ಸಂಸ್ಕೃತಿಯೇ ಸರ್ವಶ್ರೇಷ್ಠವಾದದ್ದೆಂದು ಸಾರುವಂತಿದೆ. ಯಾವ ಕಾಯಕವೂ ಕೀಳಲ್ಲ. ಕಾಯಕವೇ ಕೈಲಾಸಕ್ಕೆ ದಾರಿಯೆನ್ನುತ್ತಾರೆ. ಚಪ್ಪಲಿ ಮಾರುವುದಾಗಲೀ ಕಟ್ಟಿಗೆ ತಂದು ಮಾರುವು ದಾಗಲೀ ಕಷ್ಟಪಟ್ಟು ಮಾಡುವ ಕಾಯಕ, ಅದರಿಂದ ಬಂದ ಉತ್ಪಾದನೆಯಲ್ಲಿ, ಆದಾಯದಲ್ಲಿ ಊಟ ಮಾಡಿ ಬದುಕುವ ಸುಖ, ಆನಂದ ಮತ್ತೊಂದರಿಂದ ಸಿಗಲಾರದು. ಶ್ರಮದಿಂದ ಬರುವ ಒಂದು ಹಿಡಿ ಅನ್ನವಾದರೂ ಸಾಕು ಪರಮತೃಪ್ತಿ ನೀಡುತ್ತದೆ. ದುಡಿಯದೇ ಶ್ರಮಪಡದೇ ತಿನ್ನುವುದು ಮಹಾಪಾಪ ಎನ್ನುವ ಸಂದೇಶ ಇಲ್ಲಿ ವ್ಯಕ್ತವಾಗಿದೆ. ಕಾಯಕದಿಂದ ಬರುವ ಕಾರೆಸೊಪ್ಪಾದರೂ ಸರಿ ಅದು ಪ್ರಸಾದವೇ ಆಗುತ್ತದೆ.

೧೬೯

ಅಂಬಲಿ ಉಣಬೇಕು ಕಂಬಳಿ ಹೊದಿಯಬೇಕು
ಡಂಬಕತನದಲ್ಲಿ ಇದ್ದರೆ
ಕಂಬಕ್ಕೆ ಕಟ್ಟಿ ಹೊಡೆದಾರು, ಬಸವಣ್ಣ

ತಾತ್ಪರ್ಯ : ಬದುಕಿನ ಸಹಜತೆ, ಅದರ ಡಾಂಭಿಕತೆಯಲ್ಲಿಲ್ಲ. ಶ್ರೀಮಂತಿಕೆಯ ಬದುಕು ಬೂಟಾಟಿಕೆ ಹಾಗೂ ಆಡಂಬರದ ಬದುಕಾಗಿದ್ದು, ಅದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚು ಎನ್ನುವುದು ಈ ವಚನದ ಸಾರ. ಕಾಟೆ ಕುಡಿದರೂ ಕಟಕಟೆ ಬೇಡ ಎನ್ನುವ ಗಾದೆ ಮಾತಿನಂತೆ ಅಂಬಲಿ ಉಂಡು, ಕಂಬಳಿ ಹೊದ್ದು ಹಾಯಾಗಿ ಮಲಗಿದರೆ ಗಡದ್ದಾಗಿ ನಿದ್ದೆ ಬರುವುದು. ಅದು ಬಿಟ್ಟು, ಸೋಗಿನ ಶ್ರೀಮಂತಿಕೆಗೆ ಮರುಳಾಗಿ, ಸುಖದ ಸುಪ್ಪತ್ತಿಗೆಯ ಮೇಲೆ ಮಲಗಿದರೂ ಅನಾರೋಗ್ಯದ ಗೂಡಾಗಿ ಬಿಡುವ ಬದುಕು ಕಂಬಕ್ಕೆ ಕಟ್ಟಿ ಹೊಡೆಸಿಕೊಂಡಂತೆ, ಬಿಡಿಸಿಕೊಳ್ಳಲಿಕ್ಕೂ ಆಗದು ಹಿಂಸೆಯನ್ನು ತಾಳಿಕೊಳ್ಳಲಿಕ್ಕೂ ಆಗದು.

೧೭೦

ವಾರ ಹುಣ್ಣಿವೆ ಹಬ್ಬ ಊರು ಕೇರಿಯ ತಿರುಗಿ
ಕೋರಣ್ಣದಯ್ಯನ ಅತಿಗಳೆದು ವಿರಕ್ತನ ಬಾಯೆಂದು
ಕರೆದು ಭಿನ್ನಯಿಸುವರು, ಬಸವಣ್ಣ

ತಾತ್ಪರ್ಯ : ಮನುಷ್ಯರಾದವರು ಭಕ್ತಿಯ ನೆಪದಲ್ಲಿ ಮಾಡುವ ಅತಿಯಾದ ಡಂಭಾಚಾರದ ಕುರಿತು ಹೇಳುವ ಮಾತು ಇದಾಗಿದೆ. ಭಕ್ತಿಯ ನೆಪದಲ್ಲಿ ವಾರ, ಹುಣ್ಣಿಮೆ, ಅಮವಾಸ್ಯೆ, ತಿಥಿ, ನಕ್ಷತ್ರಗಳನ್ನು ಶ್ರೇಷ್ಠ, ಕನಿಷ್ಠಗಳೆಂದು ತಿಳಿದು, ಹಬ್ಬ ಹರಿದಿನಗಳಲ್ಲಿ ನಾಡೆಲ್ಲ ಸುತ್ತಿ ಕೋರಣ್ಣದಯ್ಯಗಳು ಅಂದರೆ ಜಂಗಮರನ್ನು ಹೀಯಾಳಿಸಿ ಸಂಸಾರ ಸಾಗರದಿಂದ ವಿಮುಕ್ತನಾದವನನ್ನು, ಹತ್ತಿರ ಕರೆದು(ಬಿನ್ನವಿಸು) ಉಪಚರಿಸುವುದು ಎಷ್ಟರ ಮಟ್ಟಿಗೆ ಸರಿಯೆನ್ನುವ ಕುತೂಹಲ ತುಂಬಿದೆ. ಹಸಿವಿನ ಅಗತ್ಯವಿದ್ದವನಿಗೆ ಅನ್ನ ಕೊಡುವ ಬದಲು ಅದರ ಅಗತ್ಯವಿಲ್ಲದವನಿಗೆ ಕೊಡುವುದು ಎಷ್ಟು ಸರಿ.

೧೭೧

ಗಟ್ಟಿ ಹೊನ್ನನೆ ಕೊಟ್ಟು ಹಚ್ಚಡವನೆ ತಂದು
ವ್ಯರ್ಥ ಮಾನವರಿಗೆ ಕೊಡುವುದಕ್ಕಿಂತ
ಹಚ್ಚಡಾ ಕಾಣದ ಪರದೇಶಿಗೆ ಕೊಟ್ಟರೆ ಇದು
ಹತ್ತು ಕೋಟಿ ಜಂಗಮಕ್ಕೆ ಕೊಟ್ಟಂಥ ಫಲವು, ಬಸವಣ್ಣ

ತಾತ್ಪರ್ಯ : ಅತ್ಯಂತ ಮಹತ್ವದ ವಿಚಾರವನ್ನು ಈ ವಚನ ಧ್ವನಿಸುತ್ತದೆ. ಅದುವೇ ದಾನದ ಮಹತ್ವ. ಉಳ್ಳವರು ಮಾಡುವ ಶಿವಾಲಯಕ್ಕಿಂತ ನಿರ್ಗತಿಕರಿಗೆ ಕೊಡುವ ದಾನ ಶ್ರೇಷ್ಠವಾದದ್ದು ಎನ್ನುವ ತಾತ್ಪರ್ಯ ಇಲ್ಲಿ ಅಡಗಿದೆ.

ಬೆಲೆಬಾಳುವ ಚಿನ್ನ ಮಾರಿ ಹಚ್ಚಡ(ಬಟ್ಟೆ–ಬರೆ) ತಂದು ಬಹಿರಂಗದಲ್ಲಿ ಎದ್ದು ಕಾಣುವಂತೆ ಶ್ರೀಮಂತರಿಗೆ ಕೊಡುವುದು ವ್ಯರ್ಥ. ಅದಕ್ಕಿಂತ ಒಳ್ಳೆಯ, ಪುಣ್ಯದ ಕೆಲಸವೆಂದರೆ, ಬಟ್ಟೆ ಬರೆಯನ್ನೇ ಕಾಣದೆ, ಒಂದು ತುತ್ತು ಕೂಳಿಗೂ ಪರಿತಪಿಸುವ ನಿರ್ಗತಿಕರಿಗೆ ನೀಡಬೇಕು, ಅದು ಹತ್ತು ಕೋಟಿ ಜಂಗಮರಿಗೆ ದಾನ ಮಾಡಿದ ಶ್ರೇಯಸ್ಸು ನೀಡುತ್ತದೆ.

೧೭೨

ಸುತ್ತ ಬೇಲಿಯ ಹಚ್ಚಿ ಬಿತ್ತಿ ಬೆಳೆಯುವದೆ ಪುಣ್ಯ
ಉತ್ತಮರ ಕೇರಿಯಲಿ ಇರುವುದೆ ಪುಣ್ಯ
ತತ್ತ್ವವುಳ್ಳವರ ಗೆಣೆತನ ಪುಣ್ಯ
ಮತ್ತೆ ಪುಣ್ಯವನೆಲ್ಲಿ ಬೆದಕಲಿ, ಬಸವಣ್ಣ

ತಾತ್ಪರ್ಯ : ಮನುಷ್ಯನಾದವನು ತಾನು ಬೆಳೆಸಬೇಕಾದ ಸಹವಾಸ ಹಾಗೂ ಮನುಷ್ಯತ್ವದ ರಕ್ಷಣೆಯ ಕುರಿತಾದ ಈ ಮಾತುಗಳು ಅತಿಮುಖ್ಯವಾದವುಗಳು. ಸಂಗತಿಯ ಸಹವಾಸ, ಬೆಳತನಕ ಉಪವಾಸ ಎನ್ನುವ ಗಾದೆ ಮಾತು ಇಲ್ಲಿ ಧ್ವನಿಸುತ್ತದೆ.

ಪುಣ್ಯವೆನ್ನುವ ಪ್ರಾಪ್ತಿಯನ್ನು ನಾವು ಎಲ್ಲೆಲ್ಲೋ ಹುಡುಕಬೇಕಿಲ್ಲ. ಅದು ತತ್ವ, ನೀತಿವಂತರ ಗೆಳೆತನದಲ್ಲಿ ಲಭಿಸುವುದು. ಇಂತಹ ಜನರಿರುವುದೇ ಉತ್ತಮವಾದ

ಕೇರಿ. ಈ ಕೇರಿಗೆ ದುಷ್ಟರು ಕಾಲಿಡದಂತೆ ಬೇಲಿ ಹಾಕಿ ರಕ್ಷಿಸಬೇಕಾದದ್ದು ಉತ್ತಮನಾಗ ಬಯಸುವವನ ಪ್ರಮುಖ ಕೆಲಸ ಹಾಗೂ ಕರ್ತವ್ಯವಾಗಿದೆ. ಸತ್ಯವಂತರ ಸಂಗ ಉತ್ತಮ ವಾದುದು.

೧೭೩

ಕಾಯ ಕಷ್ಟವ ಮಾಡಿ ಜೀವ ದುಃಖವ ಮಾಡಿ
ಧನವನು ದಾನವ ಮಾಡಿದ ಪುಣ್ಯವು
ತಮಗೆ ಜನ್ಮಾಂತರವು, ಬಸವಣ್ಣ

ತಾತ್ಪರ್ಯ : ಬದುಕಿನ ಸಾರ್ಥಕ್ಯವನ್ನು ಕುರಿತಾಗಿ ಹೇಳುವ ಈ ಮಾತು ಮಾರ್ಮಿಕ ವಾಗಿದೆ. ಪ್ರತಿಯೊಬ್ಬ ಮಾನವನು ಬಯಸುವುದು ಸ್ವರ್ಗದ ಸುಖವನ್ನು. ಅದಕ್ಕಾಗಿ ಆತ ಪುಣ್ಯದ ಕಾಯಕ ಮಾಡಿ ಪುಣ್ಯವಂತನೆನ್ನಿಸಿಕೊಳ್ಳಬೇಕು. ಜನ್ಮ ಜನ್ಮಾಂತರದಲ್ಲಿ ಪುಣ್ಯ ಪ್ರಾಪ್ತಿಯಾಗಬೇಕೆಂದರೆ ಕಾಯವನ್ನು, ದೇಹವನ್ನು, ಕಷ್ಟಕ್ಕೆ ಒಡ್ಡಬೇಕು. ಜೀವನದಲ್ಲಿ ಒದಗಿ ಬರುವ ದುಃಖ ದುಮ್ಮಾನಗಳಿಗೆ ಸಹಿಷ್ಣುತೆಯ ಮಂತ್ರ ಜಪಿಸಬೇಕು. ಅದು ಜ್ಞಾನದ ಮೂಲಕ ಮಾತ್ರ ಸಾಧ್ಯ. ಮೊದಲು ಧ್ಯಾನಿಸಬೇಕು, ನಂತರ ದಾನ, ಧರ್ಮಾದಿಗಳೇ ಪುಣ್ಯವಂತಿಕೆಯಾಗಿ ಮಾರ್ಪಾಡಾಗಬಲ್ಲವು.

೧೭೪

ಒಡೆಯರು ಹೇಳಿದ ಮಾತಿಗೆ ನಡೆಯದ ಪಾಪಿಗೆ
ಬಡಾಯಿ ಯಾಕೆ ಬಿರುದಿಗೆ ಅಲ್ಲಮರಾಯ
ಷಡುದರುಶನ ಹೊಗಬೇಡ, ಹೊಕ್ಕರೆ
ಹೊಡೆಯೆಂದ ಕೆರವಿಲಿ, ಬಸವಣ್ಣ

ತಾತ್ಪರ್ಯ : ಕರ್ತವ್ಯ ಪ್ರಜ್ಞೆ, ಗುರುಹಿರಿಯರಿಗೆ ಗೌರವ ಕೊಡದೇಯಿರುವ ಬಾಯಿ ಬಡುಕರ ಬಿರುದು ಬಾವಲಿಗಳ ಕುರಿತು ಮೌನೇಶ್ವರರು ಬಹಳ ನಿಷ್ಠುರವಾಗಿ ಮಾತಾಡಿದ್ದಾರೆ.

ಒಡೆಯನೆಂದರೆ ಆಳುವವನೆಂದು ಇಲ್ಲಿ ಅರ್ಥೈಸದೇ ಗುರು, ಹಿರಿಯ, ದೈವ ವೆಂದು ತಿಳಿದರೆ ಸಾರ್ಥಕತೆಯಾದೀತು. ಅಂತಹ ಜ್ಞಾನಿಯೊಬ್ಬನು ಹಿತವಚನ ಹೇಳಿದರೆ ಒಪ್ಪಿ ನಡೆಯಬೇಕಾದದ್ದು ಆದ್ಯ ಕರ್ತವ್ಯ. ತಪ್ಪಿ ನಡೆಯುವವರು ಕಡು ಪಾಪಿಗಳು, ಅಂತಹ ಕಡು ಪಾಪಿಗಳಿಗೆ ಮಾತಿನ ಗೌರವ, ಬಿರುದು, ಬಾವಲಿಗಳು ಅನಾವಶ್ಯಕ. ಅಂತಹವರು ಷಡ್‌ದರ್ಶನಗಳ ಮೊರೆ ಹೋಗುತ್ತೇನೆ ಎನ್ನುವುದೇ ತಪ್ಪು. ಒಂದು ವೇಳೆ ಷಡ್‌ದರ್ಶನಗಳ ಮೊರೆಹೊಕ್ಕು ಮರೆಮಾಚಲು ಯತ್ನಿಸಿದ್ದೇ ಆದಲ್ಲಿ ಆತನನ್ನು ನಿಕೃಷ್ಟ ವಸ್ತುವಾದ ಚಪ್ಪಲಿಯಿಂದ ಹೊಡೆದು ಅವಮಾನಿಸುವ

ಸೂಚನೆ ನೀಡುತ್ತಾರೆ ಮೌನೇಶ್ವರರು ಸ್ವಂತ ಗುರುವಿನ ನಿರ್ದೇಶನವನ್ನೇ ಪಾಲಿಸಲಾರದವನು ಮಹಾಗುರುಗಳ ವಾಕ್ಯವನ್ನು ಪಾಲಿಸುತ್ತೇನೆ ಎಂದು ಹೇಳುವುದು ಠಕ್ಕಲ್ಲದೆ ಇನ್ನೇನು? ಆದ್ದರಿಂದ ಆ ಪಾಪಿ ಶಿಕ್ಷಾರ್ಹನು ಎಂದು ಮೌನೇಶ್ವರರು ಹೇಳುತ್ತಾರೆ.

ಷಡ್‌ದರ್ಶನಗಳೆಂದರೆ ಕಣಾದಸ್ಯಾಕ್ಷಪಾದಸ್ಯ ವ್ಯಾಸಸ್ಯ ಕಪಿಲಸ್ಯ ಚ। ಪತಂಜಲೇಃ ಜೈಮಿನೇಶ್ಚ ದರ್ಶನಾನಿ ಷಡೇವ ಹಿ॥ ಕಣಾದನ ವೈಶೇಷಿಕ, ಗೌತಮನ ನ್ಯಾಯ, ವ್ಯಾಸನ ವೇದಾಂತ, ಕಪಿಲನ ಸಾಂಖ್ಯ, ಪತಂಜಲಿಯ ಯೋಗ ಮತ್ತು ಜೈಮಿನಿಯ ಮೀಮಾಂಸ, ಈ ಆರು ದರ್ಶನಗಳಿಗೆ ಷಡ್‌ದರ್ಶನಗಳು ಎನ್ನಲಾಗುತ್ತದೆ. ನೆಲುವನ್ನು ನೆಲಿಕಿಸಿಕೊಳ್ಳಲಾರದವನು ಅಟ್ಟಕ್ಕೆ ಹಾರಬಲ್ಲನೇ ಎಂಬ ಗಾದೆಯ ಮಾತಿನ ವಚನ ಇದು.

೧೭೫

ಲಕ್ಷ ಬದುಕು ಮಾಡಿದರೇನು ಒಕ್ಕಲಿಗನ ಸರಿಯಲ್ಲ
ಅರ್ಕಸಾಲೆನದು ಬದುಕಲ್ಲ, ಬಸವಣ್ಣ

ತಾತ್ಪರ್ಯ : ಕೃಷಿ ಕಾಯಕದ ಮಹತ್ವವನ್ನು ಎತ್ತಿ ಹೇಳುವ ಈ ಪದ್ಯ ಕೃಷಿ ಸರ್ವಶ್ರೇಷ್ಠ ಕಾಯಕವೆಂದು ಸಾರುತ್ತದೆ. ಕೃಷಿಯ ಮುಂದೆ, ಲಕ್ಷ ಲಕ್ಷ ಉದ್ಯೋಗಗಳೂ ಸಮನಾಗಲಾರವು. ಸಕಲ ಜೀವರಾಶಿಗಳನ್ನು ಪೊರೆಯುವುದು, ಕೆಲಸ ನೀಡುವುದು ಬಹುತ್ವದ ಧಾರೆಯ ಈ ಉದ್ಯೋಗ ಜೀವಪರ ಸಂಸ್ಕೃತಿಯನ್ನು ಪೋಷಿಸುತ್ತ ಬೆಳೆಸುತ್ತ ಜೀವಸಂಕುಲವನ್ನೇ ಸಲಹುತ್ತ ಬಂದಿದೆ.

ಲಕ್ಷ ಲಕ್ಷ ಉದ್ಯೋಗಗಳನ್ನು ಮಾಡಿದರೂ ಒಕ್ಕಲಿಗ ಅಂದರೆ ರೈತನ ಸಮನಾಗಲಾರರು. ಆತನ ಆತ್ಮ ತೃಪ್ತಿ, ಸಂಪ್ರೀತಿ ದೊರಕಲಾರದು. ಆತನ ಸರಿಸಮಾನವಾಗಿ ಯಾವ ಉದ್ಯೋಗ ಹಾಗೂ ಉದ್ಯೋಗಿಯು ನಿಲ್ಲಲಾರನು. ಅಂತೆಯೇ ಒಕ್ಕಲಿಗನ ಮುಂದೆ ಅಕ್ಕಸಾಲಿಗನ ಬದುಕು ಬದುಕೇ ಅಲ್ಲವೆನ್ನುವ ತೀರ್ಮಾನಕ್ಕೆ ಮೌನೇಶ್ವರರು ಬಂದಂತಿದೆ.

೧೭೬

ಕೂಲಿಗೆ ಒಡೆಯನಲ್ಲದೆ ಕುನ್ನಿಗೆ ಒಡೆಯನಲ್ಲ
ಪಾಲು ಪಂಕುಗಳು ತಮಗಿರಲಿ ಹಿಂದಿನ
ಸಾಲಕ್ಕೆ ಗಳಿಕೆಗೆ ಸರಿಯೆಂದು ಧರ್ಮದ
ತಾಯಿ ತಂದೆಗಳ ಪರಾಮರ್ಶೆ, ಬಸವಣ್ಣ

ತಾತ್ಪರ್ಯ : ಅತಿ ಮಹತ್ವದ ವಚನ ಇದಾಗಿದ್ದು ಸ್ವಾಮ್ಯತ್ವ ಪ್ರಶ್ನೆ ಎತ್ತುತ್ತದೆ. ಹಕ್ಕು ಒಡೆತನಗಳು ವ್ಯಕ್ತಿ ಕೇಂದ್ರಿತವಾಗಬಾರದು, ಸಂಪತ್ತು ಕೇಂದ್ರಿತವಾಗಬಾರದು. ಅದು

ಕೆಲಸ ಕರ್ಮಾದಿಗಳ ಮೇಲೆ ನಿರ್ಧರಿತವಾಗಬೇಕು ಎನ್ನುವ ಧ್ವನಿಯನ್ನು ಈ ಪದ್ಯ ಒತ್ತಿ ಹೇಳುತ್ತದೆ. ವ್ಯಕ್ತಿ ಹಾಗೂ ವೃತ್ತಿ ಗೌರವದ ಪರಿಕಲ್ಪನೆ ಇಲ್ಲಿದೆ.

ಧನಿಕನಾದವನು ಕೊಡುವ ಬೆಲೆ, ಕೆಲಸಗಾರನಾದವನು ಮಾಡುವ ಕೆಲಸಕ್ಕೆ ವಿನಃ ಆತನಿಗಲ್ಲ. ಆ ಹಣದಿಂದ ಕೂಲಿಯವನ ಮೇಲೆ ಹಕ್ಕು, ಸ್ವಾಮ್ಯತ್ವ ಸ್ಥಾಪಿಸ ಲಾಗದು. ಸ್ವಾಮ್ಯತ್ವದ ಆಧಾರದ ಮೇಲೆ ಬರುವ ಪಾಲುಗಾರಿಕೆಯಾಗಲೀ ಲಾಭವಾಗಲೀ ಧನಿಕನಿಗೇ ಇರುತ್ತದೆ. ಅದೆಲ್ಲ ಆತ ಪೂರ್ವಜನ್ಮದಲ್ಲಿ ಮಾಡಿದ ಸಾಲಕ್ಕೆ ಸಮ. ಧರ್ಮವಂತರು ಜನ್ಮದಾತರು, ಅದರ ಪರಾಮರ್ಶೆ ಮಾಡುವರೇ ವಿನಃ ಅನ್ಯರಲ್ಲ. ವಸ್ತುಸಂಪತ್ತಿನಂತೆ ಮನುಷ್ಯ ವ್ಯಕ್ತಿಯ ಗುಲಾಮನಲ್ಲ. ಅವನು ಸರ್ವಸ್ವತಂತ್ರ ಎನ್ನುವ ಮಾನವೀಯ ನೆಲೆಯನ್ನು ವಚನ ಪ್ರತಿಪಾದಿಸುತ್ತದೆ.

೧೭೭

ತನ್ನ ಪಾಪ ಪುಣ್ಯವು ತನ್ನ ಬೆನ್ನು ಹತ್ತದೆ ಬಿಡವು
ಇನ್ನಾವ ಜನ್ಮಕ್ಕೂ ಬಿಡದದು, ಶುನಕನ
ಕುನ್ಯಾಗಿ ಜನಿಸುವದು, ಬಸವಣ್ಣ

ತಾತ್ಪರ್ಯ : ಪಾಪ ಪುಣ್ಯಗಳು, ಫಲಾಫಲಗಳು ಮನುಜರನ್ನು ಬೆಂಬಿಡದೆ ಕಾಡುವ ಜನ್ಮ ಜನ್ಮಾಂತರದ ನಂಟುಗಳು ಎನ್ನುವ ತಾತ್ವಿಕ ಚಿಂತನೆ ಇಲ್ಲಿ ಹುದುಗಿದೆ. ವ್ಯಕ್ತಿಯೊಬ್ಬನ ಪಾಪ, ಪುಣ್ಯ, ಶುಭ, ಅಶುಭ ಮುಂತಾದ ಕರ್ಮಾದಿಗಳು ಆತನ ಬೆನ್ನು ಬಿದ್ದು ಕಾಡುವ ಬೇತಾಳಗಳಂತೆ ನೂರು ಜನ್ಮ ಹೊತ್ತು ಬಂದರೂ ಅವು ಆತನ ಬೆನ್ನಿಗಂಟಿಕೊಂಡೆ ಬರುತ್ತವೆ. ನಾಯಿಯ ಕುನ್ನಿ(ಮರಿ)ಯಂತೆ ಜನ್ಮ ತಾಳೀ ಕುಂಯ್ ಗುಡುತ್ತಲೇ ಆತನನ್ನು ಸದಾ ಕಾಡುತ್ತಲೇ ಇರುತ್ತವೆ. ಮನುಷ್ಯನಾಗಿ ಹುಟ್ಟಿದ ಮೇಲೆ ಇಂತಹ ಹೀನಸ್ಥಿತಿಯಿಂದ ಹೊರಬಂದು ಜ್ಞಾನಿಯಾಗಬೇಕು.

೧೭೮

ಅಬ್ಬರದ ರೌಸು ಬೊಬ್ಬೆ ಹುಯ್ಯಲಿಗಳು
ಬೊಬ್ಬಿಲಿ ತೊಡರು ಬಿರುದಿನ ಪೆಂಡೇವ ಹಾಕಿ
ಒಬ್ಬ ನಿಂತಾನೆ ಮರ್ತ್ಯಕ್ಕೆ
ಅಲ್ಲಮನೆಂಬ ರಣಗಂಬವನು ಹೂಡಿ
ಕಾದಿದ ಜಗದೊಡನೆ, ಬಸವಣ್ಣ

ತಾತ್ಪರ್ಯ : ತುಂಬ ಸಂಕೀರ್ಣವಾದ ವಚನ ಇದಾಗಿದೆ. ಮರ್ತ್ಯಲೋಕದ ಎಲ್ಲ ಗೊಂದಲ, ತಳಮಳ, ತಲ್ಲಣಗಳಿಗೆ ರಣಗಂಬ ಹೂಡಿ ಕಾದಬೇಕಿದೆ. ಅದಕ್ಕೆ

ಅಲ್ಲಪ್ರಭು ಉತ್ತಮ ನಿದರ್ಶವೆನ್ನುವುದು ಇಲ್ಲಿನ ಮತಿತಾರ್ಥ. ಅಲ್ಲಮ ಪ್ರಭುವನ್ನು ಒಬ್ಬ ಧೀರೋದ್ಧಾತ್ತ, ಸಮರ್ಥ ಮತ್ತು ಸಾರ್ಥಕ ವ್ಯಕ್ತಿತ್ವದವನೆಂದು ಹೇಳುತ್ತಾರೆ ಮೌನೇಶ್ವರರು. ಅಬ್ಬರದ ಕಿರುಚಾಟ, ರೋಷದ ರೌದ್ರಾವತಾರ, ಕೇಕೆಗಳು, ಅಡ್ಡ ಗಾಲಿಡುವ ಬಿರುದುಗಳಂತಹ ಡಾಂಭಿಕ ಪ್ರವೃತ್ತಿಗಳೇ ಹೆಚ್ಚಿದ ಸಂದರ್ಭದಲ್ಲಿ ಅಲ್ಲಮ ರೂಪಿಯಾದ ಮೌನೇಶ್ವರರು ಒಂಟಿಯಾಗಿ ಮರ್ತ್ಯಕ್ಕೆ ಬಂದು, ಧರ್ಮ ಸ್ಥಾಪನೆಗಾಗಿ ಸೆಡ್ಡು ಹೊಡೆದು ಕಾದಿದ. 'ರಣಗಂಬವನು ಹೂಡಿ' ಎನ್ನುವ ಮಾತು ಇಲ್ಲಿ ವಿಶೇಷವಾದದ್ದು. ಸಮಾಜ ಸುಧಾರಣೆಗಾಗಿ ಮೌನೇಶ್ವರರು ಮಾಡಿದ ಯುದ್ಧೋಪಾದಿ ಪ್ರಯತ್ನ ಇದಾಗಿದೆ.

೧೭೯

ಉಗ್ರದ ಪುರುಷರಿಗೆ ನಿಗ್ರಹಗಳಾದರೆ
ಸುಗ್ಗಿಗಳು ಅಗ್ಗವಾಗುವವೆ, ಜಗದೊಳಗಿನ್ನು
ಕೊಬ್ಬಿ ಹೇಳಿದನು, ಬಸವಣ್ಣ

ತಾತ್ಪರ್ಯ : ಮನುಷ್ಯನು ತಾನು ಮಾಡುವ ಸಾಹಸ, ಸಮಯಪ್ರಜ್ಞೆ, ತೋರುವ ಧೈರ್ಯ, ಜಾಣ್ಮೆಗಳು ಯಶಸ್ಸಿನ ಮೆಟ್ಟಿಲುಗಳಾಗಲು ಸಾಧ್ಯವೆನ್ನುವ ಸಾರ ಇಲ್ಲಿ ಅಡಗಿದೆ. ವೀರನೂ ಶೂರನೂ ಧೈರ್ಯವಂತನೂ ಮೇಧಾವಿಯೂ ಆದ ಮನುಷ್ಯನಿಗೆ ಎಷ್ಟೇ ಅಡೆತಡೆಗಳು, ಅಡ್ಡಿ ಅಡಚಣೆಗಳು ಎದುರಾದರೂ ಆತ ಅದನ್ನು ಎದುರಿಸಿ ಗೆಲ್ಲುತ್ತಾನೆ. ಅದರಿಂದ ಕಾಲದಲ್ಲಾಗಲೀ ಋತುಮಾನದಲ್ಲಾಗಲೀ ವ್ಯತ್ಯಾಸವಾಗುವುದಿಲ್ಲ. ಸೊಕ್ಕಿನ ಮಾತುಗಳ ಸಾತ್ವಿಕನ ಮೇಲೆ ಪರಿಣಾಮ ಬೀರಲಾರವು.

೧೮೦

ಸದರ ಸಿಂಹಾಸನದಿ ನಡೆದುದು ಗಣದಿ ಗಂಭೀರ
ಚದುರಂಗ, ಲೆತ್ತ ಪಗಡಿಯನಾಡಿದ ಪಾಂಡವರಿಗೆ
ವಿಧಿ ಸೋಂಕಲಿಲ್ಲೇನು, ಬಸವಣ್ಣ

ತಾತ್ಪರ್ಯ : ಪಾಂಡವರ ಬದುಕಿನಲ್ಲಿ ನಡೆದ ಮಹತ್ವದ ಘಟನೆಯೊಂದನ್ನು ವಚನ ಹೇಳುತ್ತದೆ. ಹಸ್ತಿನಾಪುರದ ಸಿಂಹಾಸನಕ್ಕಾಗಿ ಘನಘೋರ ಕಾಳಗಕ್ಕೆ ಮುನ್ನುಡಿ ಬರೆದದ್ದು ಚದುರಂಗದಾಟ, ಲೆತ್ತದ, ಪಗಡೆಯ ಜೂಜಿನ ಮೋಸದಾಟ. ಇದರ ಬಲೆಗೆ ಸಿಕ್ಕಿ ನಲುಗಿದ ಪಾಂಡವರಿಗೆ ವಿಧಿಯಾಟ ಸೋಂಕಿ ಪಡಬಾರದ ಕಷ್ಟ ಅನುಭವಿಸಿದ್ದು ಪುರಾಣ ಪ್ರಸಿದ್ಧವಾದ ಘಟನೆ. ಇದನ್ನರಿತು ಬಾಳುವಂತೆ ಮನುಜರಿಗೆ ತಿಳಿ ಹೇಳಿದಂತಿದೆ.

೧೮೧

ವಿಪ್ರರು ತಂದೆಗೆ ನುಚ್ಚು ನೀರು ಹುಯ್ವರು
ಸತ್ತಾಗ ಪಿತನ ಕಾರ್ಯವ ಮಾಡುವರು, ಲೋಕದ
ಕತ್ತೆಗಳ ಕಂಡು ಬೆರಗಾದೆ, ಬಸವಣ್ಣ

ತಾತ್ಪರ್ಯ : ಭೂಸುರರೆಂದು ಬೀಗುವ ಬ್ರಾಹ್ಮಣರು ಮಾಡುವ ಕಂದಾಚಾರಗಳು ಹಾಕುವ ಪಿಂಡ ಮುಂತಾದ ಅಸಂಬದ್ಧ ಕ್ರಿಯಾ ವಿಧಿಗಳನ್ನು ಮೌನೇಶ್ವರರು ಟೀಕಿಸುವ ಮಾತಿದು.

ಬದುಕಿದ್ದಾಗ ತಂದೆಯನ್ನು ಅಸಡ್ಡೆಯಿಂದ ಕಾಣುವ, ತಾತ್ಸಾರದಿಂದ ತಿರಸ್ಕರಿಸುವ ಬ್ರಾಹ್ಮಣರು, ಸತ್ತಾಗ ಪಿಂಡಕ್ಕೆಂದು ತರತರದ ಭಕ್ಷಾದಿಗಳನ್ನು ಮಾಡಿ ಕಪಟತನ, ಕುಟಿಲತನ ಮರೆಯುವರು. ಇಂತಹವರು. ಕತ್ತೆಗೆ ಸಮಾನರೆಂದು ಮೂದಲಿಸುತ್ತಾರೆ. ಇವರು ಸತ್ತವರ ಉತ್ತರ ಕ್ರಿಯಾದಿಗಳನ್ನು ಮಾಡುವ, ಕೃತಕ ಆಚರಣೆಗಳನ್ನು ಕಂಡು ಅಚ್ಚರಿ ಪಡುತ್ತಾರೆ ಮೌನೇಶ್ವರರು.

೧೮೨

ಕನಸಿನಲ್ಲಿ ಕಂಡದ್ದು ನೆನೆಸಿದರೆ ಬರುವುದೆ
ಅನುಸರಿಸಿ ಅಜ್ಜಯ್ಯನವರ ಕೃಪೆಯಾದರೆ, ದ್ರವ್ಯ
ಮನಸಿಗೆ ಬಂದಷ್ಟು, ಬಸವಣ್ಣ

ತಾತ್ಪರ್ಯ : ಭ್ರಮೆ, ವಾಸ್ತವ, ಕನಸು ನನಸುಗಳ ವೈರುಧ್ಯಗಳನ್ನು ವಿವರಿಸುವ ವಚನ ಇದಾಗಿದೆ. ವಾಸ್ತವವೇ ಬೇರೆ, ಕನಸೇ ಬೇರೆ ಎನ್ನುವ ಸಂಗತಿ ಇಲ್ಲಡಗಿದೆ. ಜಾಗೃತ ಚೇತನದಲ್ಲಿ ಕಂಡ ಸಂಗತಿಗಳು, ಘಟಿಸಿದ ಘಟನಾವಳಿಗಳು ಚಿಂತನೆಗೈದ ವಿಚಾರಗಳು ಸುಪ್ತ ಚೇತನಕ್ಕೆ ಜಾರಿ ಕನಸುಗಳಾಗಿ, ವಿಕೃತ, ವಿಕಾರ, ವಿಕ್ಷಿಪ್ತ ಸ್ವರೂಪ ಪಡೆದುಕೊಳ್ಳುತ್ತವೆ. ಇಂತಹ ಕನಸುಗಳು ಎಂದಿಗೂ ನಿಜವಾಗುವುದಿಲ್ಲ. ಅವು ಕೇವಲ ಭ್ರಮೆಗಳಾಗಿಯೇ ನಮ್ಮನ್ನು ಕೊಲ್ಲುತ್ತವೆ. ಕನಸುಗಳನ್ನು ನಿಜವೆಂದು ನಂಬಿ ಎಂದಿಗೂ ಅನುಕರಿಸಲಾಗುವುದಿಲ್ಲ. ಸರಳ ಸಾತ್ವಿಕ ಜೀವನವನ್ನು ಅನುಸರಿಸಿ ಅಜ್ಜಯ್ಯ ದೇವರ ಕೃಪೆಗೆ ಪಾತ್ರರಾಗುವುದೇ ದ್ರವ್ಯ ಸಂಪತ್ತು ಬಂದಷ್ಟು ಸಂತೋಷದ ಬದುಕಾಗುವುದೆನ್ನಲಾಗಿದೆ.

೧೮೩

ಕಟ್ಟಿದ ಗುಡಿ ದೈವ ಮೆಟ್ಟಿ ಮಾಡಿದೆನೆಂಬುವುದು
ಸೃಷ್ಟಿಯೆಲ್ಲ ಬಲ್ಲದು ಮನ ಬಲ್ಲದು, ಜಗವೆಲ್ಲ
ಭ್ರಷ್ಟರಾದರ್ಯಾಕೊ, ಬಸವಣ್ಣ

ತಾತ್ಪರ್ಯ : ದೈವದ ಒಲವಿದೆಯೆಂದು ಪರೋಪಕಾರ ದಾನ ಧರ್ಮಾದಿಗಳನ್ನು ಮಾಡಿದೆನೆಂದು ಅಹಂಕಾರದಿಂದ ಮೆರೆಯುವವರು ಭ್ರಷ್ಟರೆಂದು ಹೇಳುತ್ತಾರೆ. ಗುಡಿ ಗುಂಡಾರಗಳನ್ನು ಕಟ್ಟಿ, ದೇವಾಂಶ ಸಂಭೂತನೆಂದು ಮೇರೆ ಮೀರಿ ಮಾಡಿದ ವರ ಒಳಹುನ್ನಾರಗಳನ್ನು ಸೃಷ್ಟಿಯೆಲ್ಲ ಅರಿತಿದೆ, ಮನಸ್ಸು ಅರಿತುಕೊಂಡಿದೆ. ಆದಾಗ್ಯೂ ಇವರೆಲ್ಲ ಸತ್ಯಸಂಧರಾಗದೇ ಮಹಾಭ್ರಷ್ಟರೇಕಾದರು ಎಂದು ಸಾತ್ವಿಕ ಪ್ರಶ್ನೆ ಕೇಳುತ್ತಿರುವಂತಿದೆ. ಇದಕ್ಕೆ ಇತಿಹಾಸ ಪುರಾಣ ಹಾಗೂ ವರ್ತಮಾನದಲ್ಲಿ ಹೇರಳವಾದ ಉದಾಹರಣೆಗಳುಂಟು.

೧೮೪

ಪ್ಯಾಟಿ ಸೇರಿಕೊಂಡು ಬೂಟಕರಾಗಬೇಡಿ ಒಬ್ಬ
ಕಾಟಕನ ಸೇರಿಕೊಂಡು ನೀಟಾಗಿರಿರೊ, ಬಸವಣ್ಣ

ತಾತ್ಪರ್ಯ : ನಗರಗಳ ಬೂಟಾಟಿಕೆಯ ಬದುಕು, ಗ್ರಾಮಗಳ ನಿರಾಡಂಬರ ಬದುಕಿನ ವಿಶ್ಲೇಷಣೆಯನ್ನು ಈ ಪದ್ಯ ಒಳಗೊಂಡಿದೆ. ಬೆರಗಿನ ಜೀವನಕ್ಕೆ ಹೆಸರಾಗಿರುವ ಪೇಟೆಯ ಬದುಕಿಗೆ ಮಾರು ಹೋಗಿ, ಬೂಟಕರಾಗದಿರಿ. ಅಂದರೆ ಯಡಬಿಡಂಗಿಗಳಾಗದಿರಿ ಬದಲಾಗಿ ಕಾಟಕನ ಅಂದರೆ ಬೇಡರನ್ನು, ಸಮಾಜದ ಕೆಳಸ್ತರದ ಜನಮಾನಸದಲ್ಲಿ ಬೆರೆತು ನಿಶ್ಚಿಂತೆಯಿಂದ ಬದುಕುವಂತೆ ತಿಳಿ ಹೇಳಲಾಗಿದೆ. ನಗರದ ಬದುಕು ಒಂಟಿತನ ಹಾಗೂ ಸ್ವಾರ್ಥ ಪ್ರವೃತ್ತಿ ಬೆಳೆಸಿದರೆ, ಗ್ರಾಮ ಬದುಕು ಸಮೂಹ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಹಾಗೂ ಸ್ವಾವಲಂಬನೆಯನ್ನು ಬೆಳೆಸುತ್ತದೆ.

೧೮೫

ದೋಷ ತಪ್ಪಿದರೆ ಆ ವಿಷಯಕ್ಕೆ ಒಂದೆ ಮಾತು
ಪಾಕಿ ದೊಡ್ಡದಲ್ಲ ಪರಾಮರಕಿ ದೊಡ್ಡದು, ಬಸವಣ್ಣ

ತಾತ್ಪರ್ಯ : ತಪ್ಪು ಮಾಡುವುದು ದೊಡ್ಡದಲ್ಲ. ಆದರೆ ಆ ತಪ್ಪನ್ನು ಮನನ ಮಾಡುವುದು ಅತಿ ಮುಖ್ಯವಾದ ವಿಷಯವೆನ್ನುವುದು ಇಲ್ಲಿ ಉಕ್ತವಾಗಿರುವ ಮಾತಾಗಿದೆ. ದೋಷವೆಂದರೆ ಇಲ್ಲಿ ತಪ್ಪು, ಅಪರಾಧ, ಕೆಟ್ಟ ಕೆಲಸ. ಹಳ್ಳಿಗಳಲ್ಲಿ ಇಂದಿಗೂ ಯಾರಾದರೂ ತಪ್ಪು ಮಾಡಿದರೆ 'ದೋಷ ತಟ್ಟುತ್ತದೆ' ಎನ್ನುವ ವಾಡಿಕೆ ಇದೆ. ದೋಷವೆಂದರೆ ಪಾಪ ಹತ್ತುತ್ತದೆ ಎನ್ನುವುದು. ಅಂತಹ ದೋಷ ಅಂದರೆ ಪಾಪ ತಪ್ಪಿದರೆ ಒಂದೇ ಮಾತು. ಪಾಪ ಮಾಡಿದ ಕ್ರಿಯೆ ದೊಡ್ಡದಲ್ಲ. ಆದರೆ ಆ ಪಾಪ ಮಾಡಿದವನಿಗೆ ಪಾಪದ ಪ್ರಜ್ಞೆಯ ಕುರಿತು ಅರಿವು ಮೂಡಿಸುವುದು ಪರಾಮರಿಕೆ. ಅಂದರೆ ತಿಳಿಸಿ ಹೇಳುವುದು ಅತಿ ಮಹತ್ವದ ವಿಷಯವೆನ್ನುವುದು ಇಲ್ಲಿನ ಭಾವ.

೧೮೬

ಓಜ ಒಕ್ಕಲು ದೊರೆ ಸಹಜದಿಂದಿದ್ದರೆ
ಈ ಜಗವು ಯಾಕೆ ಕೆಡುವದು, ಬಸವಣ್ಣ

ತಾತ್ಪರ್ಯ : ಓಜ ಶಬ್ದಕ್ಕೆ ಪಾಂಚಾಳ ಎಂಬ ಅರ್ಥವೂ ಇದೆ. ಇದು 'ವಾಜ' ಶಬ್ದದಿಂದ ಬಂದಿದೆ. ಸಾಮಾಜಿಕರಿಗೆ ಅವಶ್ಯಕವಾಗಿರುವ ಸೇವಾ ಶಿಲ್ಪ ಕಾರ್ಯಗಳು ಮಾಡುವವನು. ಜನರಿಗೆ ಅವಶ್ಯವಾಗಿರುವ ಮನೆ, ಮಠ, ಸಾಮಾನುಗಳು, ಲೋಹದ ವಸ್ತುಗಳು, ಇವು ನಿತ್ಯ ಜೀವನಕ್ಕೆ ಅವಶ್ಯಕವಾಗಿದ್ದರೆ, ಪಾರಮಾರ್ಥಿಕ ಸಾಧನೆಗೆ ಅವಶ್ಯಕವಾದ ದೈವ ಪ್ರತಿಮೆಗಳು, ದೇವಳಗಳು ಇದರೊಂದಿಗೆ ಕೃಷಿಗೆ ಅವಶ್ಯಕವಾದ ಸಾಧನೋಪಕರಣಗಳು, ಅರಸನಿಗೆ ರಾಜ್ಯ ರಕ್ಷಣೆಗೆ ಬೇಕಾಗಿರುವ ಶಸ್ತ್ರ ಅಸ್ತ್ರಗಳನ್ನು ಮಾಡಿಕೊಡುವವನು ಓಜನು. ಜೊತೆಗೆ ಕೃಷಿ ಹಾಗೂ ರಾಜ್ಯಾಡಳಿತಕ್ಕೆ ಪ್ರಮುಖ ನಾದವನು. ಈ ಅಂಶವೇ ಸಾಧಾರಣ 'ಗುರು' ಪಂಡಿತನಿಗಿಂತ ಓಜನನ್ನು ಭಿನ್ನವಾಗಿಸಿದೆ. ಕಾರಣ ಓಜ ರೈತ ಮತ್ತು ಅರಸ ಇವರು ಗ್ರಾಮಾಡಳಿತದ ಪ್ರಮುಖರಾಗಿದ್ದಾರೆ.

೧೮೭

ವರಕೃಪೆ ದಯೆ ಪಡೆ, ಒರತೆಯ ಅಗ್ಗವಣಿ
ಪರುಷ ಬಾಳ ಬಾಳ ಸಿರಿಯು ಬರದಿರಲಿ
ಕೆರೆ ತುಂಬಿ ಕೇಡು ಒದಗುವದು, ಬಸವಣ್ಣ

ತಾತ್ಪರ್ಯ : ಯಾವುದೇ ಆಗಲೀ ಅದು ಅತಿಯಾದಲ್ಲಿ ಕೇಡು, ಹಿತ ಮಿತವಾಗಿದ್ದರೆ ಒಳಿತು ಎನ್ನುವುದು ಇಲ್ಲಿ ಉಕ್ತವಾಗಿರುವ ವಿಚಾರ. ದೈವದ ವರವಾಗಲೀ, ದಯೆ ಯಾಗಲೀ, ಪಡೆಯಬೇಕು. ಪಡಿಯೆಂದರೆ ಅಚ್ಚುಪಡಿ, ಸೂಕ್ತವಾದದ್ದು ಎಂದೂ ಅರ್ಥವಾಗುತ್ತದೆ. 'ಪಡಿ' ಎನ್ನುವುದು ಆಡು ಭಾಷೆಯ ಶಬ್ದವಾಗಿದ್ದು ಪಡಿ–ದೊರಕಿಸಿಕೊಳ್ಳುವುದು ಸ್ವೀಕರಿಸುವುದೂ ಎಂದಾಗುವುದು. ಒರತೆಯ ಅಗ್ಗವಣಿ, ಒರತೆಯ ನೀರು, ಪರುಷವೆಂದರೆ ಮುಟ್ಟಿದ್ದೆಲ್ಲವನ್ನು ಬಂಗಾರವಾಗಿಸುವ ಶಕ್ತಿ, ಅತಿಯಾದ ಶ್ರೀಮಂತಿಕೆಯು ಬರುವುದು, ಅತಿಯಾಗಿ ನೀರು ನುಗ್ಗಿ ಕೆರೆ ಒಮ್ಮೆಲೇ ತುಂಬುವುದು ಕೇಡಿನ ಸಂಕೇತವೆನ್ನುವುದು ಇಲ್ಲಿ ವ್ಯಕ್ತವಾಗಿರುವ ಭಾವ. ಯಾವುದೂ ಅತಿಯಾದರೆ ಕೇಡು ಖಂಡಿತವೆನ್ನುವ ಆಶಯ ಇಲ್ಲಿದೆ.

೧೮೮

ನಮ್ಮದು ನಮಗೆ ಕೊಡಿರಿ ನಿಮ್ಮದು ನೀವು ಉಣ್ಣಿರಿ
ಅನ್ಯಾಯದ ಬದುಕು ಅರಮನೆಗೆ ಕೊಡು ಎಂದು
ಚೆನ್ನಬಸವಣ್ಣ ಸಾರಿದನು, ಬಸವಣ್ಣ

ತಾತ್ಪರ್ಯ : ಇದೊಂದು ವಿಶಿಷ್ಟ ಪದ್ಯವಾಗಿದ್ದು ಅವರವರ ಫಲಾಫಲಗಳನ್ನು ಅವರೇ ಉಣ್ಣಬೇಕೇ ಹೊರತು ಬೇರೆಯವರಲ್ಲ. ಅನ್ಯಾಯದ ಬದುಕು ಯಾವತ್ತೂ ಅರಮನೆಯ ಸೊತ್ತು ಎನ್ನುವ ಮಾತು ಇಲ್ಲಿ ವ್ಯಕ್ತವಾಗಿದೆ.

ಕೊಡುವ ಕೊಳ್ಳುವ ವಿಚಾರ ಇಲ್ಲಿ ಸ್ಪಷ್ಟವಾಗಿದ್ದು, ನಮ್ಮದು ನಮಗಿರಲಿ ನಿಮ್ಮದು ನಿಮಗಿರಲಿ ಅನ್ಯಾಯದ ಬದುಕು ಗಳಿಕೆ ಸಲ್ಲದು. ಅನ್ಯಾಯದ ಗಳಿಕೆ ಮಾತ್ರ ಅರಸನಿಗೇ ಸಲ್ಲಬೇಕು. ಯಾಕೆಂದರೆ ಆತ ಪ್ರಜಾಪಾಲಕನಾಗಿದ್ದು ಅದು ಅವರಿಗೆ ಸಲ್ಲತಕ್ಕದ್ದೆಂದು ಚೆನ್ನಬಸವಣ್ಣ ಹೇಳಿದ್ದಾನೆ. ಇದು ನ್ಯಾಯ ಸಮ್ಮತವಾದ ದ್ದೆಂದು ಸಮರ್ಥಿಸುತ್ತಾರೆ. ಪ್ರಭುತ್ವ ಎಂದರೇ ಅದು ಅನ್ಯಾಯ ಅನೀತಿಗಳ ಕೂಟ. ಅರಸನ ನಿರಂಕುಶ ಗುಣ, ಅಪಾಯಕಾರಿಯಾದದ್ದು, ಸಮಬಾಳು, ಸಮಪಾಲು ಅಲ್ಲಿರುವುದಿಲ್ಲ. ಮೌನೇಶ್ವರರು ಯಾರ ಹಕ್ಕನ್ನು, ಅನ್ನವನ್ನು ಯಾರೂ ಕಸಿದುಕೊಳ್ಳ ಬಾರದು. ಎಲ್ಲರಿಗೂ ಈ ಭೂಮಿಯ ಮೇಲೆ ಬದುಕುವ ಸಮಾನ ಹಕ್ಕಿದೆ ಎಂದು ಸಾರಿದರು.

೧೮೯

ಅಂಗಡಿ ರಾಜ ಬೀದಿಯೊಳು
ಬಂಗಿ ಸುರೆ ಮಾಂಸ
ಕಳ್ಳ ಕಿವಿ ಮೂಳರು ಇದ್ದಲ್ಲಿ
ಲಿಂಗಾಂಗಿಗಳು ಹೇಗಿರಬೇಕು, ಬಸವಣ್ಣ

ತಾತ್ಪರ್ಯ : ಮನುಷ್ಯರು ಅದರಲ್ಲಿಯೂ ಶಿವಭಕ್ತರು ವಾಸವಾಗಿರುವ ಪ್ರದೇಶದ ವಾತಾವರಣ ಹೇಗಿರಬೇಕೆಂಬುದರ ವಿವರಣೆ ಇಲ್ಲಿದೆ.

ಸದಾ ಕೊಡು ಕೊಳ್ಳುವ ಗಿರಾಕಿಗಳಿಂದ ತುಂಬಿದ ಅಂಗಡಿ, ಜನ ಜಂಗುಳಿ ಯಿಂದ ಜನನಿಬಿಡವಾದ ರಾಜಬೀದಿ, ಗಾಂಜಾ ಸೇದುವ ಸಮೂಹ, ಹೆಂಡ, ಸಾರಾಯಿ ಮಾರುವ, ಮಾಂಸದಂಗಡಿಗಳಿಂದ ಅವೃತ್ತವಾಗಿರುವ ಬೀದಿ, ಕಳ್ಳರು, ಕದ್ದು ಕೇಳುವವರು, ಮೂಳರು ವಾಸವಾಗಿರುವ ಪ್ರದೇಶಗಳಲ್ಲಿ ಆಧ್ಯಾತ್ಮ ಚಿಂತಕರು ಧ್ಯಾನಸ್ಥರು, ಶರಣರು ಜ್ಞಾನಿಗಳು ಹೇಗಿರಬೇಕೆಂದು ಮೌನೇಶ್ವರರು ವಿವರಿಸಿ, ಇವು ಅಂತವರ ವಾಸಕ್ಕೆ ಯೋಗ್ಯವಲ್ಲದ ಜಾಗಗಳೆನ್ನುತ್ತಾರೆ.

೧೯೦

ಗಂಧವನಿಟ್ಟ ಮೇಲೆ ಅಂದದಲ್ಲಿರಬೇಕು
ನಿಂದೆ ಕುಂದುಗಳ ಸುಡಬೇಕು, ಇದು ನಮ್ಮ
ಇಂದುಧರನು ಒಪ್ಪಲರಿಯನು, ಬಸವಣ್ಣ

ತಾತ್ಪರ್ಯ : ಆ ಇಂದುಧರ ಅಂದರೆ ಶಿವನ ಒಲುಮೆಗೆ ಪಾತ್ರನಾಗಬೇಕಾದ ಮನುಷ್ಯ ಇರಬೇಕಾದ ರೀತಿ ರಿವಾಜುಗಳನ್ನು ಈ ಪದ್ಯ ಎತ್ತಿ ಹೇಳುತ್ತದೆ.

ಗಂಧ, ಭಸ್ಮಾದಿಗಳನ್ನು ಧರಿಸಿದ ಮೇಲೆ ಅರಿವುಳ್ಳವನಾಗಿ ಚಂದದಿಂದ ಬಾಳ ಬೇಕು. ಇತರರನ್ನು ನಿಂದಿಸುವುದಾಗಲೀ, ಕುಂದು ಕೇಡುಗಳನ್ನು ಬಯಸುವುದ ನ್ನಾಗಲೀ ಸುಡಬೇಕು. ಆತ್ಮಪರಿಶುದ್ಧವಾಗಿಟ್ಟುಕೊಳ್ಳಬೇಕು. ಇತರರಿಂದ ಬಂದ ನಿಂದನೆಗಳನ್ನು ಅಪಮಾನಗಳನ್ನು ಸಹಿಸಿಕೊಳ್ಳುವ ತಾಳ್ಮೆಯ ಗುಣ ಹೊಂದಿರ ಬೇಕು. ಹಾಗಿಲ್ಲದಿದ್ದಲ್ಲಿ ಆ ಪರಮಾತ್ಮನು ಒಪ್ಪನು. ಇದು ಶಿವಶರಣರಾದವರಿಗೆ ಶಿವಭಕ್ತರಾದವರಿಗೆ ಹೇಳಿದ ನೀತಿ ಮಾತಾಗಿದೆ.

೧೯೧

ನಾಮವನಿಟ್ಟ ಮೇಲೆ ನೇಮದಲ್ಲಿರಬೇಕು
ಸ್ವಾಮಿ ಘಾತಕವ ಬಿಡಬೇಕು ನಮ್ಮ
ಸ್ವಾಮಿ ಸಂಗಯ್ಯನೊಲಿವನು, ಬಸವಣ್ಣ

ತಾತ್ಪರ್ಯ : ಸಂಗಯ್ಯನೊಲುಮೆಗೆ ಅನುಸರಿಸಬೇಕಾದ ವ್ಯತಾಚರಣೆಯನ್ನು ಕುರಿತಾಗಿ ಹೇಳಿದ ಮಾತಿದು. ಹಣೆಗೆ ನಾಮವನ್ನಿಟ್ಟುಕೊಂಡ ಮೇಲೆ ವ್ರತ, ನಿಯಮ ಗಳನ್ನು ಚಾಚು ತಪ್ಪದೇ ಆಚರಿಸಿ, ಘಾತಕತನವನ್ನು ಅಳಿಯಬೇಕಾದದ್ದು ಆದ್ಯ ಕರ್ತವ್ಯ, ಇಲ್ಲದಿದ್ದರೆ ಸ್ವಾಮಿ ಸಂಗಯ್ಯ ಒಲಿಯಲಾರ.

೧೯೨

ಚಾರಮರಾಯನ ಊಟ ಮೂರು ರಾಯರ ಕೂಟ
ಮೀರಿದವರ ಮನೆ ಸುಟ್ಟ
ಗುರು ಜಂಗಮರ ಗುರುತವನರಿಯದಲೆ
ಗುರಿಯಾದರಯ್ಯ ಯಮನಿಗೆ, ಬಸವಣ್ಣ

ತಾತ್ಪರ್ಯ : ಇದೊಂದು ಅತ್ಯಂತ ಸಂಕೀರ್ಣವೂ, ಜಟಿಲವೂ ಆದ ಪದ್ಯವಾಗಿದೆ. ಚಾರಮರಾಯನ ಊಟವೆಂದರೆ ಶ್ರಮವಹಿಸಿ ದುಡಿದು ಬಂದು ಹಸಿದು ಉಣ್ಣುವವನ ಆಹಾರ ಸೇವನೆ, ಪ್ರಸಾದ ಸ್ವರೂಪದ್ದು, ಹಸವಾದದ್ದು, ಆರೋಗ್ಯ ಪೂರ್ಣವಾದದ್ದು. ಅದು ಮೂರು ರಾಯರು ಅಂದರೆ ಬ್ರಹ್ಮ, ವಿಷ್ಣು, ಮಹೇಶ್ವರರ(ಸೃಷ್ಟಿ, ಸ್ಥಿತಿ, ಲಯ)ಕ್ಕೆ ಸಮಾನವಾದದ್ದು. ಇದನ್ನು ಮೀರಿ ನಡೆದವರ, ಸಮಾಜ ಬಾಹಿರ ಕ್ರಿಯೆಯಲ್ಲಿ ತೊಡಗಿದವರ ಮನೆ ಸುಟ್ಟು ಸರ್ವನಾಶವಾಗುವುದು ಖಚಿತ. ದಾರಿ ತೋರುವ ಗುರುವನ್ನಾಗಲೀ ಚೈತನ್ಯಶೀಲ ಜಂಗಮವನ್ನಾಗಲೀ ಗುರುತಿಸದೇ, ಅಸಡ್ಡೆ ತೋರುವುದು, ಅವಹೇಳನ ಮಾಡುವುದು, ತಪ್ಪು. ಇಂತವರು ಯಮನ ಪಾಶಕ್ಕೆ ಈಡಾಗಿ ಮರಣವನ್ನಪ್ಪುವರು.

೧೯೩

ಗುದ್ದಿನಯ್ಯನ ಮಠದಲ್ಲಿ ಆಡಿದ ಮಾತು
ಪ್ಯಾಟಿ ಪಟ್ಟಣದೊಳು ಕಟಗಗೇರಿಯನೆ ಕಟ್ಟಿ
ಶೆಟ್ಟಿ ಶ್ವಾನಗಳು ಕಡಿದಾಡಿದ ಠಾವಿಲಿ
ಮಠ ಮಾನ್ಯರು ಹೇಗಿರಬೇಕು, ಬಸವಣ್ಣ

ತಾತ್ಪರ್ಯ : ಸಾಧುಗಳು ಸದ್ಧರ್ಮವಂತರು, ಮಠಮಾನ್ಯದೊಳು ವಾಸಿಸುವ ಗುರು-ಜಂಗಮರು, ಸ್ವಾಮಿಗಳು ಇರಬೇಕಾದ ಸ್ಥಳದ ಬಗೆಗೆ ವಿವರಣೆಯಿದೆ.

ಪೇಟೆ ಪಟ್ಟಣಗಳಲ್ಲಿ, ಕಟುಕರ ಕೇರಿ, ಓಣಿ, ಕಟ್ಟಿ, ಅಲ್ಲಿನ ಶೆಟ್ಟಿಗಳು ಹಣದ ಪಿಪಾಸಿಗಳು; ನಾಯಿಗಳು ಕಡಿದಾಡಿದಂತೆ ಕಚ್ಚಾಡುತ್ತಿರುತ್ತಾರೆ. ಅಂತಹ ಸ್ವಾರ್ಥಿಗಳು, ದುರಾಚಾರಿಗಳು ಇರುವ ವಾತಾವರಣದಲ್ಲಿ ಮಠಾಧೀಶರು ವೃತ ನಿಯಮಾಚರಣೆ ಮಾಡುವವರು ಹೇಗಿರುವರೆಂಬುವ ಆತಂಕ ಇಲ್ಲಿ ವ್ಯಕ್ತವಾಗಿದೆ. ಮಠಾಧಿಪತಿಗಳು, ಸದಾಚಾರಿಗಳಾದವರು ಈ ಎಲ್ಲ ಹಂಗಿನಿಂದ ಆತಂಕಗಳಿಂದ ದೂರವಿರಬೇಕೆನ್ನಲಾಗಿದೆ.

೧೯೪

ಇಕ್ಕಿದಲ್ಲಿರದು ಠಕ್ಕೊಂದು ಮಾಡುವದು
ಅಕ್ಕ ತಂಗಿಯರಿಗೆ ಜಗಳವನಿಕ್ಕುವದು, ಇದು
ಲಕ್ಕಿಯ ಗುಣವು, ಇದು ನಮ್ಮ
ಮುಕ್ಕಣ್ಣನ ಶರಣರಿಗೆ ಸಲಹುವದೆ, ಲೋಕದ
ಚಿಕ್ಕವರಿಗಲ್ಲದೆ ನಮಗೇಕೆ, ಬಸವಣ್ಣ

ತಾತ್ಪರ್ಯ : ಐಶ್ವರ್ಯ ಲಕ್ಷ್ಮಿಯ ಸ್ವಭಾವವನ್ನು ಈ ವಚನ ಧ್ವನಿಸುತ್ತದೆ. ಲಕ್ಷ್ಮಿ ಚಂಚಲೆ, ನಿರ್ದಯಿ, ಕರುಳು ಬಳ್ಳಿಯ ಸಂಬಂಧವನ್ನೆ ಹರಿಸುವಾಕೆ ಎಂಬಿತ್ಯಾದಿ ಸಂಗತಿಗಳು ಚಂಚಲೆಯಾದ ಲಕ್ಷ್ಮಿಯ ಸಹಜ ಗುಣಗಳೆನ್ನುತ್ತಾರೆ.

ಅನ್ನವನ್ನು ಇಟ್ಟು ಉಪಕಾರ ಮಾಡಿದ ಮನೆಯವರನ್ನೇ ಇರಿದು ಕೊಲ್ಲುವುದು, ಸುಳ್ಳು, ಮೋಸ, ಠಕ್ಕುತನ, ತಟವಟ ಮಾಡುವುದು, ಒಡಹುಟ್ಟಿದ, ಒಂದೇ ತಾಯಿಯ ಹಾಲು ಕುಡಿದು ಬೆಳೆದ ಅಕ್ಕತಂಗಿಯರ ನಡುವೆ ಜಗಳ ತಂದಿಕ್ಕಿ ಹಗೆತನ ಬೆಳೆಸುವ ಗುಣ, ಲಕ್ಷ್ಮಿ(ಐಶ್ವರ್ಯ, ಶ್ರೀಮಂತಿಕೆ)ಯ ಮೂಲಭೂತ ಗುಣ. ಸಂಬಂಧ ಗಳನ್ನೆ ಕೆಡಿಸುವ ಗುಣ ಶಿವಶರಣರಿಗೆ ಸಲ್ಲದು ಮತ್ತು ಇಂತಹ ಗುಣಾದಿಗಳ ಶಿವನ(ಶರಣರು) ಭಕ್ತರನ್ನು ಸಲುಹಲಾರವು. ಒಡಕು ತರುವ ಗುಣಗಳೆಲ್ಲ ಲೌಕಿಕದಲ್ಲಿ ಜೀವಿಸುವ ಸಾಮಾನ್ಯರಿಗೇ ಹೊರತು ಶರಣರಿಗಲ್ಲ ಎನ್ನುವ ಹಿತವಚನ ಇಲ್ಲಿ ಅಡಗಿದೆ.

೧೯೫

ಗಿರಿಯ ಬಿಲ್ಲು ಉರಗನ ಹೆಡೆ
ಹರಿಯು ಅಂಬು ಇವರ
ಗುರಿ ಮಾಡಿ ಕೆಡಹಿದನು ತ್ರಿಪುರವನು
ಕರಿಮುಖನ ಪಿತನು, ಬಸವಣ್ಣ

ತಾತ್ಪರ್ಯ : ಪುರಾಣದ ಸ್ಮರಣೆ ಈ ವಚನದ ಮೂಲ ಸಾರವಾಗಿದೆ. ಗಿರಿಯ ಬಿಲ್ಲು, ಹಾವಿನ ಹೆಡೆಯನ್ನು ಬಾಣ ಮಾಡಿಕೊಂಡು ಗುರಿಮಾಡಿ ಶಿವನು ತ್ರಿಪುರ ಸಂಹಾರ ಮಾಡಿದನು. ಆ ತ್ರಿಪುರ ಸಂಹಾರನು ಈ ಕರಿಮುಖನ(ಗಣಪತಿ) ತಂದೆಯಾದ ಶಿವನು ಎನ್ನುವುದು ಪೌರಾಣಿಕ ಹಿನ್ನೆಲೆಯಿಂದ ರಚನೆಗೊಂಡು ದೈತ್ಯ ಸಂಹಾರದ ಕತೆಯನ್ನು ಸಾರಿದಂತಿದೆ. ಶಿವನು ತ್ರಿಪುರ ದಹನ ಮಾಡಿದ ಪ್ರಸಂಗವಿದಾಗಿದೆ. ಬ್ರಹ್ಮನ ಬಿಲ್ಲು ಬಾಣ, ಶಿವನ ಹಾವಿನ ಹೆಡೆ, ವಿಷ್ಣುವಿನ ಶಂಖ ಚಕ್ರಗಳು ವಿನಾಶಕ್ಕೆ, ದುಷ್ಟ ನಿಗ್ರಹಕ್ಕೆ ಆಯುಧಗಳಾದ ಉದಾಹರಣೆ ಇಲ್ಲಡಗಿದೆ.

೧೯೬

ಸಿಂಧು ಬಲ್ಲಾಳನ ಸತಿಗೆ ಸುತನಾಗಿ ಮೊಲೆಹೀರ ಆ
ನಂದದಿಂದ ಉಣಿಸಿದ ಮೃಢರೂಪ ವಿಷವ ಭಕ್ಷಿಸಿದ
ಕಂದು ಗೊರಳನು ಕರುಣದಿಂದಲಿ, ಬಸವಣ್ಣ

ತಾತ್ಪರ್ಯ : ಅರವತ್ತು ಮೂರು ಪುರಾತನರಲ್ಲಿ ಒಬ್ಬನಾದ ಸಿಂಧು ಬಲ್ಲಾಳ ದಂಪತಿಗಳಿಗೆ ಮಗನಾಗಿ ಹುಟ್ಟಿ ಆತನ ಮಡದಿಯ ಎದೆಹಾಲನ್ನು ಅತ್ಯಂತ ಹರುಷದಿಂದ ಉಂಡವನು ಶಿವನು. ಅಷ್ಟೇ ಅಲ್ಲದೆ ದೇವಾಸುರರು ಸಮುದ್ರ ಮಥನ ಮಾಡಿದಾಗ ಅಲ್ಲಿಂದ ಎದ್ದ ವಿಷವನ್ನು ಭಕ್ಷಿಸಿದವನು. ಅಂತಹ ಶಿವನಿಗೆ ಕಂದು ಗೊರಳನೆಂದೂ ಕರೆಯುವುದುಂಟು. ಇದೆಲ್ಲವೂ ಜಗತ್ತಿನ ರಕ್ಷಣೆಗಾಗಿ ಎಂಬುದನ್ನು ಮರೆಯಲಾದೀತೆ? ಹಾಗೆಯೇ, ಲೋಕದಲ್ಲಿ ಜನಿಸಿದ ಮನುಜರೆಲ್ಲ ಅಮೃತಕ್ಕೆ ಸಮಾನವಾದ ಮಾತೆಯ ಹಾಲಿರಲಿ, ಜಗತ್ತನ್ನೇ ಭಸ್ಮ ಮಾಡುವ ಕಾರ್ಕೋಟಕ (ಹಾಲಾಹಲ) ವಿಷವಿರಲಿ, ಸಮಚಿತ್ತದಿಂದ ಸ್ವೀಕರಿಸಬೇಕೆಂದು ಉಪದೇಶಿಸಲಾಗಿದೆ.

೧೯೭

ಮಾತು ಮಾಣಿಕ್ಯ ರತ್ನ, ಮಾತು ಮಥನದ ರತ್ನ
ಮಾತಿನಲಿ ಹೆಚ್ಚು ತಾ ಆಡಿದರೆ, ದೇಹವು
ಬಾತದ್ದೆ ಸಾಕ್ಷಿ, ಬಸವಣ್ಣ

ತಾತ್ಪರ್ಯ : ಮಾತು ಮಾತಿನ ಮಹತ್ವ, ಮಾತಿನ ಮತಿತಾರ್ಥ, ಮಾತಿನ ಪರಿಣಾಮ ಗಳನ್ನು ಕುರಿತಾಗಿ ವಿಶ್ಲೇಷಿಸುವ ಈ ವಚನವು ಮಾತಿನ ಮಹತ್ವ ಮತ್ತು ಅದರ ಅನಾಹುತಗಳ ಕುರಿತು ಮಾರ್ಮಿಕವಾಗಿ ವಿವರಿಸುತ್ತದೆ.

ಮಾತು ಮಾಣಿಕ್ಯವೂ ಅಹುದು, ಅದು ಜ್ಯೋತಿಯಂತೆ ಪ್ರಜ್ವಲಿಸುತ್ತದೆ. ರತ್ನದಂತೆ ಹೊಳೆದು ಹೊಸವಿಚಾರಗಳಿಗೆ ಅವಿಷ್ಕಾರನೀಡುತ್ತದೆ. ಮಾತೆಂಬುದು ಮಂಥನ ಮಾಡಿದಂತೆ ಪ್ರಖರವಾದ ವೈಚಾರಿಕತೆಗೆ ದಾರಿ ಮಾಡುತ್ತದೆ. ಆಯತಪ್ಪಿ, ಎಚ್ಚರತಪ್ಪಿ ಮಾತನಾಡಿದರೆ ಅದರ ದುಷ್ಪರಿಣಾಮವಾಗಿ ದೇಹಕ್ಕೂ ಅದರ ಬಾಧೆ ತಪ್ಪಿದ್ದಲ್ಲವೆನ್ನುವ ಸೂಕ್ಷ್ಮ ವಿಚಾರ ಇಲ್ಲಡಗಿದೆ.

೧೯೮

ಸಬಕಾರ ಬೆಳಕಿಗೆ ಸರ್ವಜನ ಮನ್ನಣೆ
ಉಪಕಾರದಿಂದ ಊಟಕ್ಕೆ ಹೇಳಿ ಅವರಿಗೆ
ತಬಕದಲ್ಲಿ ವೀಳ್ಯೆವು, ಬಸವಣ್ಣ

ತಾತ್ಪರ್ಯ : ಪರಿಶುದ್ಧತೆಯಂತೆ ಮತ್ತು ಶುಭ್ರತೆ ಜೊತೆಗೆ ಪ್ರಕಾಶಿಸುವಿಕೆ, ಅಂದರೆ ಹೊರಗಿನ ಥಳಕು ಬಳಕು ಜನಮನ್ನಣೆಗೆ ಹಾದಿ ಎನ್ನುವುದನ್ನು ಇಲ್ಲಿ ಮಾರ್ಮಿಕ ವಾಗಿಯೇ ಉಪದೇಶಿಸಲಾಗಿದೆ.

ಆಧುನಿಕ ಕಾಲದಲ್ಲಿ ಸಬಕಾರ ಅಂದರೇ ಸಾಬೂನು ಉಪಯೋಗಿಸಿ ಜಳಕ ಮಾಡುವುದರಿಂದ ಮೈಯ ಕಾಂತಿ, ಮನಸ್ಸಿನ ಪ್ರಶಾಂತಿ ಜನಾಕರ್ಷಣೆಗೆ ಹಾದಿ ಯಾಗುತ್ತದೆ. ಪರರ ಏಳಿಗೆ, ಸಂತೃಪ್ತಿಗಾಗಿ ಏರ್ಪಡಿಸುವ ಪ್ರಸಾದ ವಿತರಣೆಯ ಕಾರ್ಯವನ್ನು ಬಾಹ್ಯ ಅಂದ ಹಾಗೂ ಥಳಕು ಬಳುಕಿನ ವೈಯ್ಯಾರದವರನ್ನೇ ಕರೆದು ಉಣಿಸಿ ತಬಕ ಅಂದರೆ ತಾಟಿನಲ್ಲಿ ವೀಳ್ಯೆವನಿಟ್ಟು ಗೌರವಿಸಿದಂತೆ ಎನ್ನುವ ನೀತಿ ಇಲ್ಲಿ ಪ್ರಾಶಸ್ತ್ಯ ಪಡೆದಿದೆ. ಅಂದರೆ ಜ್ಞಾನ ಮತ್ತು ಜ್ಞಾನಿಗಿಂತ ಅಜ್ಞಾನ ಮತ್ತು ಅಜ್ಞಾನಿಗೆ ಬೆಲೆ ಹೆಚ್ಚು ಎನ್ನುವ ಟೀಕೆ ಇಲ್ಲಿದೆ.

೧೯೯

ಮೇಘರಾಜನಿಲ್ಲದೆ ಸಾಗಿಸುವರೆ ಹೊಲಗಳ
ಹರಿಗೋಲ ತಾ ಲೋಹಾರನಿಲ್ಲದೆ ನಡೆದೀತೆ
ನಡೆದದ್ದಾದರೆ ಆಗವರ ಪಾದಕ್ಕೆರಗುವೆನು, ಬಸವಣ್ಣ

ತಾತ್ಪರ್ಯ : ಸಾಮರಸ್ಯದ ಜೀವನಕ್ಕೆ ಉತ್ತಮ ಉದಾಹರಣೆಯಾಗಿದೆ ಈ ಪದ್ಯ. ಕೃಷಿಕನಾದವನು ಕೃಷಿ ಚಟುವಟಿಕೆ ಸಾಗಿಸಲು, ಮೇಘರಾಜ ಸುರಿಸುವ ಮಳೆಯಿಂದ ಮಾತ್ರ ಸಾಧ್ಯ. ಕೃಷಿ ಉಪಕರಣಗಳ ತಯಾರಿಕೆಗೆ ಬಡಿಗ, ಕಮ್ಮಾರರೆಂಬ ವೃತ್ತಿವರರ

ಸಹಾಯ ಸಹಕಾರ ಅತಿಮುಖ್ಯ. ಇಂತಹ ಕಸುಬುದಾರರಿಲ್ಲದೆ, ಹರಿಗೋಲಾಗಲಿ, ಕೃಷಿಯಾಗಲೀ ನಡೆಯದು. ನಡೆದದ್ದಾದರೆ ಅಂತಹ ವೃತ್ತಿಪರರ ಪಾದಕ್ಕೆರಗಿ ನಮಸ್ಕರಿಸುವೆನೆಂದು, ಬಡಿಗ ಕಮ್ಮಾರರಿಗಿದ್ದ ಪ್ರಾಮುಖ್ಯತೆಯನ್ನು ಮೌನೇಶ್ವರರು ಎತ್ತಿ ತೋರಿಸುತ್ತಾರೆ.

೨೦೦

ಸಹಜ ಬೀಜವ ಕೊಟ್ಟು ಮೂಜಗದೊಡೆಯ
ಬಾಜಿಗಾರಿಕೆ ಬಿಡ ಹೇಳಿದ, ಧರ್ಮದ
ಖಾಜಿ ಕೊಟ್ಟಂಥ ಅಭಯ ಹಸ್ತ ತಪ್ಪದು, ಬಸವಣ್ಣ

ತಾತ್ಪರ್ಯ : ಸಮನ್ವಯತೆ, ಧರ್ಮ ಸಾಮರಸ್ಯದ ಸಾರ ಎನ್ನುವ ತಿರುಳು ಇಲ್ಲಡಗಿದೆ. ಜೀವೋತ್ಪತ್ತಿಗೆ ಬೀಜ ಬಹಳ ಮುಖ್ಯವಾದದ್ದು. ಪ್ರಕೃತಿ ನೀಡಿದ, ಸಹಜವಾದ ಬೀಜಗಳಾಗಿರಬೇಕೆ ವಿನಃ ಅಸಹಜ ಅಥವಾ ಕೃತ್ರಿಮವಾದವುಗಳಾಗಿರಬಾರದು. ಆ ಮೂರು ಲೋಕದ ಒಡೆಯನಾದ ಶಿವನು ಉತ್ಪಾದನೆಗೆಂದೇ ಪ್ರಕೃತಿ ಸಹಜ ಬೀಜಗಳನ್ನು ನೀಡಿರುವಾಗ ಅವುಗಳನ್ನು ಬಿಟ್ಟು ಅಸಹಜ ಬೀಜಗಳನ್ನು ಬಳಸುವುದು ಸರಿಯಲ್ಲ. ಅದೇ ರೀತಿ ಸಹಜತೆಯನ್ನು ನಿರಾಕರಿಸಿ ಅಸಹಜತೆಯೆಂಬ ಜೂಜುಗಾರಿಕೆಯು ಸೂಕ್ತವಲ್ಲ. ಪರಮಾತ್ಮ ನೀಡಿದ ಸಹಜ ಬದುಕನ್ನು ಅದರ ಉತ್ಪಾದನಾ ಸಾಮರ್ಥ್ಯವನ್ನು ಹಾಳು ಮಾಡದೆ ಉಳಿಸಿ ಬೆಳೆಸಿ ಉತ್ತಮ ಸಾಧಕನಾಗಬೇಕೆಂಬ ಭಾವ ಇಲ್ಲಿದೆ.

೨೦೧

ಸಾತ ಮುಡದಾರರಿಗೆ ನೀತಿ ನಿರ್ಣಯಗಳಿಲ್ಲ
ಘಾತ ಯೋಜನೆಯು ಅಂಗದಲಿ ಕೌಲು ಕಟ್ಟುತ
ಮತ್ಯಾತಕಯ್ಯ, ಬಸವಣ್ಣ

ತಾತ್ಪರ್ಯ : ನೀತಿ ನಿಯಮಗಳ ಹೆಸರಿನಲ್ಲಿ, ಘಾತುಕತನದ ಯೋಜನೆಗಳನ್ನು ಒಡಲೊಳಗಿಟ್ಟುಕೊಂಡು ಸಭ್ಯನಂತೆ ಸೋಗು ಹಾಕುವವರನ್ನು ಕುರಿತು ಇಲ್ಲಿ ಹೇಳಲಾಗಿದೆ.

ಸ್ವಾರ್ಥಿಗಳಿಗೆ, ಅನೀತಿವಂತರಿಗೆ ಒಂದು ನೀತಿಯಿಲ್ಲ. ಬದುಕಿನ ಕುರಿತಾದ ಗಂಭೀರ ಆಲೋಚನೆಗಳಿಲ್ಲ. ಜಾರಿಗೊಳಿಸುವ, ಮುಂದೋರಣೆಯಾಗಲೀ ಮುಂದಾಲೋಚನೆಗಳಾಗಲೀ ಇಲ್ಲ. ಕೇವಲ ಬುರುಗಿನ, ಅಸಂಬದ್ಧವಾದ ಸುಳ್ಳಿನ ಮನೆ ಕಟ್ಟುತ್ತ ತಿರುಗುವವರಿಗೆ ದೈವೀ ಭಕ್ತಿ ಏತಕ್ಕೆ ಎಂದು ಪ್ರಶ್ನೆ ಮಾಡಲಾಗಿದೆ.

೨೦೨

ಉಣ್ಣದ ದೇವರಿಗೆ ಹಣ್ಣು ಘೃತ ಕ್ಷೀರ ನೈವೇದ್ಯ
ಬಣ್ಣ ಬಿಳಿದೊಸ್ತ್ರ ಆಭರಣ ಶಿಲೆಯ ದೇವರಿಗೆ
ಕಣ್ಣು ಬೊಟ್ಟುಗಳು, ಬಸವಣ್ಣ

ತಾತ್ಪರ್ಯ : ಆಡಂಬರತೆ, ಮೂಢನಂಬಿಕೆ, ಕಂದಾಚಾರಗಳ ಆಚರಣೆಯಲ್ಲಿ ಮುಳುಗಿದ ಡೋಂಗಿ ಜನರನ್ನು ಕುರಿತಾಗಿ ಈ ವಚನ ಹೇಳುತ್ತದೆ.

ಕಲ್ಲು ದೇವರಿಗೆ ಲೋಕದ ಜನರು ತೋರಿಸುವ ಕಪಟತನಗಳು ವ್ಯರ್ಥ. ಹಸಿದ ಹೊಟ್ಟೆಗಳಿಗೆ ಆಹಾರ, ವಸ್ತ್ರ, ನೀಡುವುದರ ಬದಲು ಉಣ್ಣದ ಕಲ್ಲು ದೇವರಿಗೆ ಹಾಲು, ಹಣ್ಣು, ತುಪ್ಪದ ನೈವೇದ್ಯ ಮಾಡಿ, ಹೊಸ ಬಟ್ಟೆ ಉಡಿಸಿ, ವಜ್ರ, ವೈಢೂರ್ಯ, ಬೆಳ್ಳಿ, ಬಂಗಾರಗಳ ಕಿರೀಟ, ಆಭರಣ ಮುಂತಾದವುಗಳನ್ನು ತೊಡಿಸುವುದು ಎಂತಹ ನ್ಯಾಯ ಹಾಗೂ ನೀತಿ. ಶಿಲ್ಪಿಯ ಕಲ್ಪನೆಯ ಮೂಸೆಯಿಂದ ಕೆತ್ತಲ್ಪಟ್ಟ ದೇವನಿಗೆ, ದೇವಿಗೆ ಕಣ್ಣು ಬೊಟ್ಟು, ಮೀಸೆ ಮೂಡಿಸುವುದು ಉಚಿತವಲ್ಲವೆನ್ನುವುದು ಇಲ್ಲಿನ ಪ್ರಮುಖ ಆಶಯವಾಗಿದ್ದು, ಮೂರ್ತಿಪೂಜೆಯ ಡಾಂಭಿಕತೆಯನ್ನೇ ನಿರಾಕರಿಸುವಂತಿದೆ ವಚನ.

೨೦೩

ಉಣ್ಣುವ ದೇವರಿಗೆ ಟೊಣ್ಣೆಯ ನೈವೇದ್ಯ
ಕಣ್ಣು ಬಿಟ್ಟವರ ಬೆದರಿಸುತ, ಭೂ ನರರಿಗೆ
ಪುಣ್ಯವು ಇಲ್ಲ, ಬಸವಣ್ಣ

ತಾತ್ಪರ್ಯ : ಲೋಕದ ಜನರ ಮೌಢ್ಯತೆಯನ್ನು ವಚನ ಪ್ರತಿಪಾದಿಸುವಂತಿದೆ. ಹಸಿದು ಬಂದು ಅನ್ನ ನೀಡಲು ಕೇಳುವ ಗತಿಗೆಟ್ಟ ಮಾನವರನ್ನು ಹೆದರಿಸಿ, ಬಡಿದು ಓಡಿಸುವ ಜನ ನಿರ್ಜೀವವಾದ ಕಲ್ಲಿಗೆ ನೇಮ ನಿತ್ಯದಿಂದ ಪಕ್ವಾನ್ನದ ಎಡೆ ಹಿಡಿಯುತ್ತಾರೆ. ಹಸಿದವನ ಅಗತ್ಯ ಪೂರೈಸದ ಇಂತಹ ಭೂನರರಿಗೆ ಪುಣ್ಯ ಎಲ್ಲಿಂದ ಬರಲು ಸಾಧ್ಯ. ಪುಣ್ಯವಂತರಾಗಬೇಕೆಂದರೆ ಹಸಿದೊಡಲುಗಳಿಗೆ ಊಟ ಉಪಚಾರದ ಮೂಲಕ ಸತ್ಕರಿಸಬೇಕೆಂಬುದು ಮೌನೇಶ್ವರರ ಅಭಿಮತ.

೨೦೪

ಹತ್ತು ಸಾವಿರ ಬಿನ್ನಾಯ ಜಂಗಮರಿಗಿಕ್ಕಿ
ಅನ್ನ ಪ್ರಸಾದವ ಕೆಡಿಸುವರೆ, ಊರೊಳಗಿರುವ
ತೊನ್ನು ಮೂಗರಿಗೆ ಉಣಲಿಕ್ಕಿದರೆ
ಉನ್ನತದ ಪದವಿ, ಬಸವಣ್ಣ

ತಾತ್ಪರ್ಯ : ಶ್ರೀಮಂತರೆಂದು ಮೆರೆಯಲು ಸಾವಿರಾರು ಜನರಿಗೆ ಆಮಂತ್ರ ನೀಡಿ, ಮಠಮಾನ್ಯರಿಗೆ, ಜಂಗಮರಿಗೆ ಭಿನ್ನಹ ಮಾಡಿಕೊಂಡು ಮೃಷ್ಟಾನ್ನದ ಪ್ರಸಾದವ ಮಾಡಿ ಹಾಳು ಮಾಡುವುದಕ್ಕಿಂತ ತನ್ನ ಊರೊಳಗೆ ಹಾಗೂ ಸುತ್ತಮುತ್ತಲಿರುವ ದೀನರಿಗೆ, ಪಾಮರರಿಗೆ, ವಾಸಿಯಾಗದ ರೋಗಕ್ಕೆ ತುತ್ತಾಗಿ ಬಳಲಿ ಬೆಂಡಾಗಿ ಹಸಿವಿನ ಪರಾಕಾಷ್ಠತೆಯಲ್ಲಿ ತುತ್ತು ಅನ್ನಕ್ಕಾಗಿ ಪರಿತಪಿಸುವವರಿಗೆ ಅದೇ ಪ್ರಸಾದವನ್ನು ಉಣ್ಣಲಿಕ್ಕಿದರೆ ಅಂತವರ ಹಸಿವಾದರೂ ಹಿಂಗೀತು. ಉಣಲಿಕ್ಕಿದವರಿಗೆ ಉನ್ನತ ಪದವಿ, ಗೌರವ, ಮಾನ, ಸನ್ಮಾನಗಳು ದೊರಕಿ ಸದ್ಗತಿಯೊದಗುವುದೆಂಬ ನೀತಿ ಪಾಠ ಇಲ್ಲಿದೆ. ಆಹಾರದ ಅಗತ್ಯ ಮತ್ತು ಅದರ ಸೂಕ್ತ ಬಳಕೆಯ ಸೂತ್ರವನ್ನಿಲ್ಲಿ ಕಾಣಬಹುದು.

೨೦೫

ಉಂಡ ಗಣಂಗಳ ಕಂಡು ಹಿರಿಹಿರನೆ ಹಿಗ್ಗಿ
ಗಿಂಡಿಯಲಿ ಘೃತ ಕ್ಷೀರ ನೀಡಿ ಉಣಿಸಿ, ಪುಣ್ಯ
ಕಂಡವರಿಲ್ಲ, ಬಸವಣ್ಣ

ತಾತ್ಪರ್ಯ : ಊರು ಉಪಕಾರ ಅರಿಯದು ಎನ್ನುವ ಗಾದೆಯ ಮಾತಿನ ಸಾರಾಂಶ ಈ ವಚನದಲ್ಲಿ ವ್ಯಕ್ತವಾಗಿದೆ. ಸಂತೃಪ್ತವಾಗಿ ಊಟ ಮಾಡಿದವರನ್ನು ಕಂಡು ಮನಸ್ಸಿನಲ್ಲಿ ಅತೀವ ಸಂತಸಪಟ್ಟು, ಅವರಿಗೆಲ್ಲ ಕೃತಜ್ಞತೆಯಿಂದ ಹಾಲು, ತುಪ್ಪ, ಹಣ್ಣು, ಫಲಪುಷ್ಪ, ತಾಂಬೂಲಾದಿಗಳನ್ನು ದಾನ ಮಾಡಿ ಉಣ್ಣಿಸಿ, ಪುಣ್ಯ ಕಟ್ಟಿಕೊಂಡ ಪುಣ್ಯವಂತರನ್ನು ಕಂಡವರಿಲ್ಲವೆಂದು ವ್ಯಂಗ್ಯ ಮಾಡಲಾಗಿದೆ. ಅದೆಲ್ಲ ಕುಟಿಲ ಭಕ್ತಿ, ತೋರಿಕೆಯ ಆಡಂಬರದ ನಡೆ, ಶ್ರೀಮಂತಿಕೆಯ ಅಟ್ಟಹಾಸವೆಂದು ಹೀಗಳೆಯಲಾಗಿದೆ. ಹಿಂದಿನ ವಚನದ ಭಾವವನ್ನೇ ಇಲ್ಲಿ ಕಾಣಬಹುದು.

೨೦೬

ಸಾಸಿರ ನಾಮದ ದ್ಯಾಸವ ಪೊಗಳುವರು
ವ್ಯವಸಾಯವಿಲ್ಲದ ಮನೆಯಲ್ಲ, ಮರ್ತ್ಯದಾ
ದಾಸ ಜಂಗಮರ ಗೊಡವಿಯೇನು ಇವರೆಲ್ಲ
ಬೇಸರಿಕೆಗೆ ಒಡಲ ಹೊರೆದರು ಮುಂದೆ
ಮಾನವರಿಗೆ ಉಪದೇಶಿಸಲು ಬಂದಾನೆ, ಬಸವಣ್ಣ

ತಾತ್ಪರ್ಯ : ತನ್ನ ತಾನರಿಯದೇ ಇತರರಿಗೆ ಉಪದೇಶಿಸುವವರು ಇತರರನ್ನು ಸ್ವಾರ್ಥಕ್ಕಾಗಿ ಹೊಗಳುವವರು, ವೇಷಧಾರಿಗಳು ಎನ್ನುವ ಭಾವಾರ್ಥ ವಚನದಲ್ಲಿ ಅಡಗಿದೆ.

ಸಾವಿರಾರು ದೇವರ ನಾಮಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ಸಮಯಕ್ಕೆ ತಕ್ಕಂತೆ ನೆನಪು ಮಾಡಿಕೊಂಡು ಹೊಗಳುತ್ತ, ಉಗ್ಗಡಿಸುತ್ತ ಬದುಕುವವರು ಸ್ವಾರ್ಥಿಗಳು, ನಿರರ್ಥಕ ಜೀವಿಗಳು. ಅತ್ಯಂತ ಪ್ರಮುಖ ಹಾಗೂ ಪಾವಿತ್ರ್ಯದ ಉದ್ಯೋಗವೆಂದರೆ ಸಕಲ ಜೀವರಾಶಿಗಳಿಗೂ ಅನ್ನ ನೀಡುವ ಕೃಷಿ ಕಾಯಕ. ಕೃಷಿಕಾಯಕ ಮಾಡದವನ ಜೀವನ ವ್ಯರ್ಥ. ಅಂತೆಯೇ ಕಪಟತನದಲಿ ಬದುಕು ಸಾಗಿಸುವ ಈ ಲೋಕದ ದಾಸರು, ಜಂಗಮರು ನಿರುಪಯುಕ್ತರು. ಅವರು ಏನನ್ನೂ ಉತ್ಪಾದಿಸದೇ ಇನ್ನೊಬ್ಬರ ಗಳಿಕೆಯಲ್ಲಿ ಕಾಲಹರಣ ಮಾಡುವ ನಿರರ್ಥಕ ಜೀವಿಗಳು. ಅಂತವರ ಗೊಡವಿ ಸಹವಾಸ ಬೇಡ. ಹೊಟ್ಟೆ ತುಂಬಿಸಿಕೊಳ್ಳಲು ಅವರೆಲ್ಲರೂ ಹಾಕಿದ ವೇಷವದು. ಇಂತವರ ಉಪದೇಶದಿಂದ ಯಾರಿಗೂ ಲಾಭವಿಲ್ಲ ವೆಂದು ಅವರ ಸೋಗಲಾಡಿತನಗಳನ್ನು ಮೌನೇಶ್ವರರು ಖಡಾಖಂಡಿತ ವಾಗಿ ನಿಂದಿಸಿದ್ದಾರೆ. ಒಂದು ರೀತಿ ಜಂಗಮ ದಾಸೋಹದ ನಿರರ್ಥಕತೆಯನ್ನು ವಚನ ಹೇಳುತ್ತದೆ.

೨೦೭

ಕೇಳಿಲೋ ಬಸವಾ ಏಳಲದ ಮಾತಲ್ಲ
ಆಳಾದ ಮೇಲೆ ಅಡಿಯಾಗಿ ನಿಂತ ಮೇಲೆ
ರಾಯತನ ಯಾರದೊ ಮರ್ತ್ಯದಾ
ಸೂಳ್ಯಾದ, ಮುಂದೆ ಗರ್ತಿಯಾಗಿ ನಿಂತ ಮೇಲೆ
ತಾಯಿತನ ಯಾರದೊ, ಗುರುರಾಯನ
ನ್ಯಾಯವ ನೋಡಿ ನಡೆವುದು, ಬಸವಣ್ಣ

ತಾತ್ಪರ್ಯ : ವೈರುಧ್ಯದ ಬದುಕು. ವಿಪರ್ಯಾಸದ ಜೀವನವನ್ನು ಕುರಿತು ಈ ವಚನ ಧ್ವನಿಸುವ ಧ್ವನಿ ಬಹಳ ಪ್ರಮುಖವಾದದ್ದಾಗಿದೆ.

ಮೌನೇಶ್ವರರು ನೈತಿಕ ಬದುಕಿನ ಸೂತ್ರವೊಂದನ್ನು ಹೇಳುವ ನೆಲೆ ಇಲ್ಲಿದೆ. ಇನ್ನೊಬ್ಬರಿಗೆ ತಾನು ಆಳೆಂದು ಒಪ್ಪಿಕೊಂಡ ಮೇಲೆ ತಲೆಬಾಗಿ ನಿಲ್ಲಬೇಕು. ಒಡೆಯನಿಗೆ ನಿಷ್ಠನಾಗಿರಬೇಕು, ಶ್ರದ್ಧೆಯಿಂದ ಇರಬೇಕು. ಒಂದು ಕಾಲಕ್ಕೆ ಈ ಲೋಕದಲ್ಲಿ ಸೂಳೆಯಾಗಿ ಜೀವಿಸಿದ ಹೆಣ್ಣು ಮುಂದೊಂದು ದಿನ ಗರತಿಯಂತೆ ಬಾಳತೊಡಗಿದರೆ ಅದರ ಫಲದಿಂದ ಹುಟ್ಟಿದ ಮಕ್ಕಳಿಗೆ ತಾಯಿತನದ ಪಟ್ಟ ಯಾರಿಗೆ ಕಟ್ಟಬೇಕು. ಸೂಳೆಗೊ? ಗರತಿಗೊ? ಎನ್ನುವ ಗಹನವಾದ ಪ್ರಶ್ನೆ ಎದ್ದು ಗುದ್ದುತ್ತದೆ. ಇದು ಬೆಡಗಿನ ವಚನವಾಗಿದ್ದು, ಇದರ ತಾತ್ಪರ್ಯ ಮಾತ್ರ ನೀತಿ, ನ್ಯಾಯ, ಧರ್ಮ, ಮಾನವೀಯತೆಯ ನೆಲೆಗಳನ್ನು ಹೇಳುವುದಾಗಿದೆ.

೨೦೮

ನಂಜಿನ ಊಟವು ನಿರಂಜನರಿಗೆ ಸೇರದು
ಗಂಜಿ ಬೇಕು ಶರಣ ಸದ್ಭಕ್ತರಿಗೆ
ಅಂಜದಿರಬೇಕು ಅರಣ್ಯದೊಳಗೆ, ಬಸವಣ್ಣ

ತಾತ್ಪರ್ಯ : ಹಂಗಿನರಮನೆಗಿಂತ ಇಂಗಳದ ಗುಡಿಲೇಸು ಎನ್ನುವ ಸರ್ವಜ್ಞನ ವಚನದಂತೆ ಈ ವಚನವಿದ್ದು ಹಂಗಿನ ಊಟ ಬೇಡವೆಂದು ತಿಳಿಸಿದಂತಿದೆ.

ಒಡಲೊಳಗೆ ವಿಷ, ಮತ್ಸರ, ನಂಜು ತುಂಬಿಕೊಂಡು, ಮೇಲು ನೋಟಕ್ಕೆ ನಗು ನಗುತ್ತ ನೀಡಿದರೆ, ದಾನ ಮಾಡಿದರೆ, ಅದು ಆ ನಿರಂಜನನಾದ ಶಿವನಿಗೆ ಒಪ್ಪಿತವಾಗುವುದಿಲ್ಲ. ಶುದ್ಧ ಮನಸ್ಸಿನಿಂದ, ಮುಗ್ಧ ಭಾವದಿಂದ ನೀಡಿದ ಗಂಜಿಯಾದರೂ ಶಿವಭಕ್ತರಿಗೆ ಅತಿ ಪ್ರಿಯವೆನ್ನಿಸುತ್ತದೆ. ಶರಣರಾದವರು, ಸದ್ಭಕ್ತರಾದವರು ಯಾರಿಗೂ ಎಂತಹದ್ದಕ್ಕೂ ಅಂಜದಂತಿರಬೇಕು. ಅದು ಗೊಂಡಾರಣ್ಯವಾಗಿರಲಿ, ಕ್ರೂರಿಗಳಿಂದ ತುಂಬಿದ ಸಮಾಜವೆಂಬ ಅಡವಿಯಾಗಿರಲಿ ಧೈರ್ಯದಿಂದ ಬದುಕು ಸವೆಸಬೇಕು. ಜ್ಞಾನಿಯಾದವನು ನ್ಯಾಯಪರನೂ, ನಿಷ್ಠುರಿಯೂ, ಸತ್ಯಪರನೂ ಆಗಿರಬೇಕು.

೨೦೯

ಮೂರು ಲೋಕದ ಕರ್ತ್ಯ ಸೂರ್ಯನಿಗೆ ಬೆನ್ನಾದ
ಸಾರಥಿಯಾದ, ಶರಣರಿಗೆ
ವೈರ್ಯಾದವರಿಗೆ ವೈರ್ಯಾದ, ಬಸವಣ್ಣ

ತಾತ್ಪರ್ಯ : ಈ ಬ್ರಹ್ಮಾಂಡವನ್ನು ಅಂದರೆ ಮೂರು ಲೋಕಗಳನ್ನು, ಬೆಳಗುವವನೇ ಸೂರ್ಯ. ಆತನಿಲ್ಲದೇ ಜಗತ್ತೇ ಕತ್ತಲೆಯ ಬೀಡು. ಜ್ಞಾನ, ಪ್ರಕಾಶಗಳೇ ಅದರ ತಳಪಾಯ. ಪ್ರಕಾಶಮಾನನಾದ ಸೂರ್ಯನೇ ಜೀವವಿಕಾಸಕ್ಕೆ ಜೀವಿಗಳ ಉತ್ಪತ್ತಿಗೆ ಕಾರಣೀಕರ್ತ. ಇಂತಹ ಸೂರ್ಯನಿಗೇ ಆಸರೆಯಾಗಿ, ಬೆನ್ನಾಗಿ ನಿಂತವನೇ ಆ ಮೂರು ಲೋಕವನ್ನು ಸೃಷ್ಟಿಸಿದವ, ಅಷ್ಟೆ ಅಲ್ಲ ಪ್ರಕೃತಿಯ ಮೇಲಿರುವ ಚರಾಚರ ಸಸ್ಯಸಂಕುಲ, ಜೀವಜಾಲಕ್ಕೆಲ್ಲ ಆತನೇ ಚೈತನ್ಯದಾತನು. ಅದು ಶರಣರಿಗೆ, ಸದ್‌ಭಕ್ತರಿಗೆ ಜ್ಞಾನದ ಜ್ಯೋತಿ. ಇಂತಹ ಪ್ರಕಾಂಡ ಜ್ಯೋತಿಯಿಂದ, ಜ್ಞಾನಪ್ರಕಾಶದಿಂದ ವಿಮುಖರಾದವರಿಗೆ, ಹಗೆತನ ಸಾಧಿಸುವವರಿಗೆ, ಪ್ರಕೃತಿಯೂ ಸಹಿತ, ವೈರತ್ವ ಸಾಧಿಸುತ್ತದೆ.

೨೧೦

ಮಾಗಿ ಕಟ್ಟಿದರೇನು ನೇಗಿಲ ಹೊಡೆದರೇನು
ಮೇಘರಾಜನೊಬ್ಬ ತಡೆದರೆ, ಇವರ

ಕೈಯಿಂದಾಗುವದೇನು, ಇವರು
ಕೂಗಿ ಮಾಡುವ ಫಲವೇನು, ಬಸವಣ್ಣ

ತಾತ್ಪರ್ಯ : ರೈತ ನೇಗಿಲು ಹೊಡೆದು ಭೂಮಿಯನ್ನು ಹದಗೊಳಿಸಿ ಬಿತ್ತಲು ಉತ್ಪಾದನೆ ಹೆಚ್ಚಾಗಬೇಕೆಂದರೆ ಮಳೆ ಮುಖ್ಯ. ಮೋಡಗಳು ಸಮೃದ್ಧಗೊಂಡು ಮಳೆಗರೆದರೆ ಇಳೆಯೆಲ್ಲ ತಂಪು ಹಾಗೂ ಜೀವಜಾಲದ ಉತ್ಪತ್ತಿ. ಮೇಘ ಮಳೆ ಸುರಿಸದಿದ್ದರೆ ಇಳೆಯ ಬದುಕೇ ದಾರುಣ. ಮಳೆ ಬಾರದೆಂದು ಮನುಜರು ಕೂಗಿ, ಕರೆದು, ಪೂಜೆ, ಪುನಸ್ಕಾರ, ಆರಾಧನೆ ಮಾಡಿದರೆ ಆ ಮೇಘರಾಜ ಮಳೆ ಸುರಿಸಲಾರ. ಅದಕ್ಕಾಗಿ ನಾವು ಪ್ರಾಕೃತಿಕ ಸಂಪತ್ತನ್ನು ಪರಿಸರವನ್ನು ಕಾಪಾಡಿಕೊಳ್ಳ ಬೇಕೆಂಬ ಸದಾಶಯ ಇಲ್ಲಿ ಧ್ವನಿತವಾಗಿದೆ. ಮನುಷ್ಯರು ತಮ್ಮ ಸ್ವಾರ್ಥ, ದುರಾಸೆಗೆ ಈಡಾಗಿ ಪ್ರಾಕೃತಿಕ ಸಂಪತ್ತನ್ನೆಲ್ಲ ನಾಶ ಮಾಡಿ, ಅದರಿಂದ ಆಗಬಹುದಾದ ಅನಾಹುತ ಗಳಿಗೆ ಹೊಣೆಗಾರರಾಗುತ್ತಿದ್ದಾರೆ.

೨೧೧

ಪೊಡವಿಗಧಿಪತಿಯಾಗಿ ಕಡೆಗಾಲ ಭ್ರಮಿಸುವರು
ಮೃಢರೂಪ ಮುನಿದು ಮುಂದವರ ಯಮನು
ಬಡಿದು ಬಾಧಿಸುವನು, ಬಸವಣ್ಣ

ತಾತ್ಪರ್ಯ : ಮೃಢರೂಪನಾದ ಶಿವನ ಮುಂದೆ ಎಲ್ಲರೂ ತೃಣಸಮಾನರು. ಮೃಢ ರೂಪನು ಅಮರನಾದರೆ ಲೋಕದ ಮಾನವರು ಕಾಲನ ಕೈವಶರು.

ಮನುಷ್ಯರಾದವರಲ್ಲಿ ಕೆಲವರು ತಾನೇ ಈ ಭೂಮಂಡಲದ ಅಧಿಪತಿ, ದೊರೆ, ಸಾಮ್ರಾಟನೆಂದು ಮೆರೆದು, ಕುಣಿದು ಕುಪ್ಪಳಿಸಿ ಉನ್ಮತ್ತಸ್ಥಿತಿಗೇರಿದಾಗ ಆ ಮೃತ್ಯುಂಜಯನ ಅವಕೃಪೆಗೆ ಒಳಗಾಗಿ ಯಮನ ಮುಂದೆ ಸೋತು ಸಾವನ್ನಪ್ಪುವುದು ತಪ್ಪಲಾರದು. ಕ್ಷಣ ಕ್ಷಣಕ್ಕೂ ಸಾವು ಅಂತವರನ್ನು ಬಡಿದೆಚ್ಚರಿಸುತ್ತಲೇ ಇರುತ್ತದೆ. ಕೊನೆಗೆ ಸಾವು ಬಂದು ಮನುಷ್ಯ ಮಣ್ಣಿನಲ್ಲಿ ಮಣ್ಣಾಗುತ್ತಾನೆ. ಸಾವೆಂಬುದು ಹುಟ್ಟಿದ ಜೀವಿಗೆ ಸರ್ವೇಸಾಮಾನ್ಯವಾದುದು.

೨೧೨

ಅಂತರದ ಮೇಘಕ್ಕೆ ಎಂಥವರ ಮಾತಿಲ್ಲ
ಕಂತುಹರನೊಲಿದು ಕರುಣಿಸಲು ಸರ್ವಜನಕ್ಕೆ
ಸಂತೋಷವಯ್ಯ, ಬಸವಣ್ಣ

ತಾತ್ಪರ್ಯ : ಪ್ರಕೃತಿಯ ವೈಚಿತ್ರ್ಯಗಳಲ್ಲಿ ಮೋಡ ಕಟ್ಟಿ, ಮಳೆಸುರಿಸುವುದೂ ಒಂದು ಕ್ರಮ. ಅದು ಎಂತೆಂಥವರ ಮಾತನ್ನೂ ಕೇಳದೇ ತನ್ನಷ್ಟಕ್ಕೆ ತಾನೇ ತನ್ನ ಯಥಾವತ್ತಾದ

ಕ್ರಿಯಾವಿಧಿಯಲ್ಲಿ ನಿರಂತರವಾಗಿ ತೊಡಗಿಕೊಂಡು ಸಮಯಕ್ಕೆ ತಕ್ಕಂತೆ ಮಳೆಗರೆದು ಇಳೆಗೆ ಸುಖ, ಶಾಂತಿ, ನೆಮ್ಮದಿ ನೀಡುತ್ತಲೇ ಇರುತ್ತದೆ. ಇದು ಆ ಜಗದೊಡೆಯನಾದ ಈಶ್ವರ ಕರುಣಿಸಿದ ಕರುಣೆ. ಇದರಿಂದ ಸಕಲ ಜೀವ ರಾಶಿಗಳಿಗೆಲ್ಲ ಸಂತೋಷ ಉಂಟಾಗುತ್ತದೆ.

೨೧೩

ಫಣಿಯಲ್ಲಿ ಬರೆದುದಕೆ ಅಣಿಯಿಲ್ಲ ಭುವನದಲ್ಲಿ
ಹೆಣಗಿದರೆ ಹೋಗಲರಿಯದು, ದುಷ್ಕರ್ಮ
ಉಣದೆ ಹೋಗಲಿಲ್ಲ, ಬಸವಣ್ಣ

ತಾತ್ಪರ್ಯ : ಬ್ರಹ್ಮ ಬರೆದನೆಂದು ನಂಬಿರುವ ಹಣೆಬರಹ ಯಾವುದಕ್ಕೂ ಸರಿಸಾಟಿಯಾಗಲಾರದು. ಅದು ವಿಧಿಲಿಖಿತ. ದೈವದ ಬರಹ. ಅದು ಏನೇ ಸಾಹಸ ಮಾಡಿದರೂ ತಪ್ಪದು. ಲೋಕದ ಮನುಜರು ಹೀನ ಕಾರ್ಯ, ಕೆಟ್ಟ ಕೆಲಸಗಳನ್ನೆಲ್ಲ ಮಾಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೂ, ಅಹಂಕಾರದಿಂದ ಮೆರೆದರೂ ಅದರ ಪ್ರತಿಫಲವನ್ನು ಅವರು ಉಣ್ಣಲೇಬೇಕು, ಅನುಭವಿಸಲೇಬೇಕಾಗುತ್ತದೆ. ಈ ನರಜನ್ಮದಲ್ಲಿ ತಾನು ಮಾಡಿದ ಅಹಿತ ಕಾರ್ಯಗಳಿಗೆ ತಕ್ಕ ಫಲ ಉಂಡೇ ಸಾಯಬೇಕಾಗುತ್ತದೆ.

೨೧೪

ಹಸ್ತ ಪರುಷ ಎನಗುಳ್ಳಡೆ ಹಸ್ತು ನಾ ತಿರಿದುಂಬೆನೆ
ಭಸಿತ ರುದ್ರಾಕ್ಷಿ ಬಲುಮೆ ಎನಗುಳ್ಳಡೆ
ಮೋಸ ಅನ್ಯಾಯಕೆ ನಾನು ಈಡಾಗುವೆನೆ, ಪ್ರಭುದೇವರೆ
ಹಸನವಲ್ಲಯ್ಯ ನಡೆನುಡಿ, ಬಸವಣ್ಣ

ತಾತ್ಪರ್ಯ : ನನ್ನ ಕೈಯ್ಯೆ ಪರುಷ ಮಣಿಯಾಗಿದ್ದರೆ ನಾನು ಭಿಕ್ಷೆ ಬೇಡಿ ಉಣ್ಣುತ್ತಿದ್ದೇನೆ, ಬಡವನಾಗಿರುತ್ತಿದ್ದೆನೇ, ಹಸಿವಿನಿಂದ ಕಂಗಾಲಾಗುತ್ತಿದ್ದೆನೇ ಸಾತ್ವಿಕ ಹಾಗೂ ನಿಜ ಶರಣರ ಗುರುತುಗಳಾದ ಭಸೀತ ರುದ್ರಾಕ್ಷಿಗಳ ಒಲುಮೆ(ಒತ್ತಾಸೆ) ಎನಗಿದ್ದರೆ ಮೋಸ ಅನ್ಯಾಯಕ್ಕೆ ನಾನು ಈಡಾಗಲಾರೆ. ಅಂದರೆ ಬಾಹ್ಯ ಹಾಗೂ ಅನ್ಯಾಯದ ಗಳಿಕೆಗಳು ಮನುಷ್ಯನನ್ನು ಎಂದೂ ಉದ್ಧಾರ ಮಾಡಲಾರವು. ದೈವದ ಬಲ, ಸಮಯ ಪ್ರಜ್ಞೆ, ಜಾಣ್ಮೆ ಆಲೋಚನಾ ಶಕ್ತಿಗಳು ಇದ್ದಂತಹ ಮನುಷ್ಯ, ಇತರರು ಎಸಗುವ ಮೋಸ, ವಂಚನೆ, ಕಪಟತನ, ಅನ್ಯಾಯಕ್ಕೆ ಎಂದೂ ಬಲಿ ಬೀಳನು. ನಡೆ ಹಾಗೂ ನುಡಿ ಶುದ್ಧತೆ ಮನುಷ್ಯನ ಅಂತಃಸತ್ವವನ್ನು ಬೆಳೆಸುತ್ತದೆ.

೨೧೫

ತೊತ್ತಿನ ಮಗನೆಂದು ಉತ್ತರಿಸಿ ನುಡಿದರೆ
ಕುತ್ತಾಯಿತು ನಿಮ್ಮ ಮನದಲ್ಲಿ

ಅತ್ತ ಎಂಭತ್ನಾಲ್ಕು ಲಕ್ಷ ಜೀವವ
ಬಿತ್ತಿ ಬಿತ್ತಿ ಬೆಳೆದಂಥ ಬೆಳೆಸಲ್ಲವೆ, ಇತ್ತ
ಎಪ್ಪತ್ತೇಳು ಮಂದಿಗೆ ಬೆಲೆಯಾದಂಥ ಹೆಣ್ಣು
ತೊತ್ತಲ್ಲದೆ ಗರ್ತಿಯಾಗುವಳೆ
ಅತ್ತೆಯ ಮಕ್ಕಳಿಗೆ ಮಡದಿಯಲ್ಲದೆ
ಹತ್ತೆಂಟು ಮಂದಿಗೆ ಮತ್ತೆ ಸೂಳೆಯಲ್ಲವೆ
ಮಡದಿಯ ಮೇಲೆ ಕೇಡು ನುಡಿದು ಕಡಿದಾಡಿ
ಸಾಯುವಂಥ ಹೊಲೆಯರನು ನೋಡಿ, ಇದು
ಮಡಿವಾಳರ ಮನೆಯ ಹಡದಿ ಹಾಸಿಗೆಯಲ್ಲದೆ
ಮಡಿ ಮೈಲಿಗೆಯೆಂದು ಮನಗಾಣದೆ ಹೋಯಿತು, ಬಸವಣ್ಣ

ತಾತ್ಪರ್ಯ : ಇದು ಮೌನೇಶ್ವರರ ವಚನಗಳಲ್ಲಿ ಸ್ವಲ್ಪ ದೊಡ್ಡದಾದ ಹಾಗೂ ತುಂಬ ಜಟಿಲವಾದ ಪದ್ಯ. ಇಲ್ಲಿ ಸ್ತ್ರೀ ಹಾಗೂ ಅವಳ ಪಾವಿತ್ರ್ಯದ ಬಗೆಗೆ ಹೇಳುತ್ತ ಆಕೆಯ ಬಗೆಗೆ ಗೌರವ, ಪ್ರೀತಿ ವ್ಯಕ್ತಪಡಿಸುತ್ತಾರೆ.

ತೊತ್ತಿನ ಮಗನೆಂದರೆ ಮಲಮಗ, ಆಳುಮಗ. ದಾಸಿಯ ಮಗನು ತನ್ನ ಅಧೀನದಲ್ಲಿರುವನೆಂದು ಮನಬಂದಂತೆ ಮಾತು ಬಳಸಲಾಗದು, ಕೀಳೆಂದು ಕಾಣಲಾಗದು. ಈ ಪ್ರವೃತ್ತಿ ನಡೆಸಿಕೊಂಡಾತನಿಗೇ ಕುತ್ತಾಗಿ ಕೇಡು ಮಾಡುತ್ತದೆ. ಅದು ನಿಮ್ಮ ಮನಸ್ಸನ್ನು, ಬದುಕನ್ನು ಕಾಡುತ್ತಲೇ ಇರುತ್ತದೆ. ಆತನೂ ಬ್ರಹ್ಮ ಸೃಷ್ಟಿಯಲ್ಲಿ ಜನಿಸಿದ ಇರುವೆ ಎಂಭತ್ನಾಲ್ಕು ಕೋಟಿ ಜೀವರಾಶಿಗಳಲ್ಲಿ ಒಬ್ಬನಾಗಿರುತ್ತಾನೆ. ಅವುಗಳಿಗಿರುವ ಜೀವನ ಸ್ಫೃತಿ, ಸಂಚಲನ ಆತನಲ್ಲೂ ಇರುತ್ತವೆ. ಮತ್ತೊಂದೆಡೆ ಹಲವು ಹನ್ನೊಂದು ಮಂದಿಯ ಕಣ್ಣು ಕುಕ್ಕಿದ ಹೆಣ್ಣು ಸೂಳೆಯೇ ಹೊರತು ಗರತಿಯಾಗಲಾರಳು. ನಮ್ಮ ಸಂಪ್ರದಾಯದಂತೆ ಅತ್ತೆಯ ಮಗಳನ್ನು ಹೆಂಡತಿಯಾಗಿ ಪಡೆಯುವ ವಾಡಿಕೆ ಇದೆ. ಆದರೆ ಇಂತವಳು ಹತ್ತಾರು ಜನರ ಸಂಪರ್ಕವಾಗಿ ಸೂಳೆಯೆನ್ನುವ ಪಟ್ಟ ಪಡೆದಾದ ಮೇಲೆ ಇಂತವರ ಸೆಳವಿಗೆ ಬಿದ್ದು ಕಟ್ಟಿಕೊಂಡ ಹೆಂಡತಿಗೆ ಕೇಡು ನುಡಿಯಲಾಗದು. ಆಕೆಯ ಮೇಲೆ ಕೇಡು ನುಡಿದು, ಕಡಿದಾಡಿ, ಬಡಿದಾಡಿ ಸಾಯುವವರೆಲ್ಲ ನೀತಿ ಗೆಟ್ಟವರು, ಕುಲಹೀನರು. ಇಂತಹ ಹೀನಕ್ರಿಯೆ ಅಗಸರ ಮನೆಯ ಹಡದಿಯಂತೆ. ಎಷ್ಟು ಜನರಿಗಾದರೂ ಯಾವ ಕಾರ್ಯಕ್ಕಾದರೂ ಹಡದಿಯಾಗಿ ಹಾಸಬಹುದು. ಆದರೆ ಹಡದಿ ಶುದ್ಧೀಕರಣಗೊಂಡು, ಶುಚಿತ್ವಗೊಂಡು ಮರು ಬಳಕೆಯಾದರೂ ಮೈಲಿಗೆಯನ್ನು ಕಳೆದುಕೊಂಡರೂ ಮೂಲ ಮೈಲಿಗೆಯೆಂದು ತಿಳಿಯದೆ ಹೋಗುವುದು ವೈರುಧ್ಯಗಳ ಸಂಕೇತವಾಗಿದೆ.

೨೧೬

ಜನಹಿತ ಜಂಗಮ ಭಸ್ಮದ ಸನ್ಯಾಸಿ
ಜೀವಮುಖ ಮುಲ್ಲಾ ಸಾತ್ವಿಕ ಶರಣ
ಶೃತಿಕ ಜೋಗಿ ವೃಷಭೇಂದ್ರ ಶುಭ ವಿಶ್ವರೂಪ, ಬಸವಣ್ಣ

ತಾತ್ಪರ್ಯ : ಈ ವಚನದಲ್ಲಿ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವ ವ್ಯಕ್ತಿಗಳಲ್ಲಿ ಇರಬೇಕಾದ ಸಾತ್ವಿಕ ಗುಣಗಳು, ಮೌಲ್ಯಗಳನ್ನು ಕುರಿತು ಚಿಂತಿಸಲಾಗಿದೆ.

ಜಂಗಮನಾದವನು ಯಾವಾಗಲೂ ಜನಹಿತ ಬಯಸುತ್ತ ಅವರ ಮಧ್ಯದಲ್ಲಿಯೇ ಕ್ರಿಯಾಶೀಲನಾಗಿ ಇರಬೇಕು. ಭಸ್ಮದ ಸನ್ಯಾಸಿಯಾದವನು ಸದಾಕಾಲಕ್ಕೂ ಜೀವ ಪರ ಆಲೋಚನೆ, ಕ್ರಿಯಾವಿಧಿಗಳಲ್ಲಿ ತೊಡಗಿದವನಾಗಿರಬೇಕು. ಮುಸಲ್ಮಾನರ ಮಸೀದಿಯಲ್ಲಿರುವ ಮುಲ್ಲಾ ಶರಣನಂತೆ ಶ್ರಾವಕನಂತೆಯೂ ಸಾತ್ವಿಕನಾಗಿ ಜನಗಳ ಮಧ್ಯದಲ್ಲಿಯೇ ಇದ್ದು ಬದುಕಬೇಕು. ಜೋಗಿಯಾದವನು ನಾದ ಪ್ರಿಯನೂ, ಸುಂದರನೂ, ಮೌಲ್ಯಾತ್ಮಕವೂ ಆದ ಗುಣ ಹೊಂದಿದವನಾಗಿರಬೇಕು. ವೃಷಭೇಂದ್ರನು ಶುಭದಾಯಕನೂ ವಿಶ್ವರೂಪನೂ ಆಗಿರಬೇಕೆಂಬ ಆಶಯ ಇಲ್ಲಡಗಿದೆ. ಅಂದರೆ ಧಾರ್ಮಿಕ ಕೇಂದ್ರಗಳಲ್ಲಿರುವ ಪ್ರಮುಖರಿಗೆ ಇರಬೇಕಾದ ನೈತಿಕತೆಗಳನ್ನು ಮೌನೇಶ್ವರರು ಹೇಳುತ್ತಾರೆ.

೨೧೭

ದುಡ್ಡಿಗಿಂತ ಹೆಚ್ಚು ಗುಡ್ಡ ಗಂಹ್ವರವಲ್ಲ
ಬೊಡ್ಡಿಗೆ ತುದಿ ಘನವಲ್ಲ, ಶಿವಶರಣರಿಗೆ
ದೊಡ್ಡವರಿಗೆ ಅವಗುಣ ಸಲ್ಲ, ಬಸವಣ್ಣ

ತಾತ್ಪರ್ಯ : ಶಿವಶರಣನಾದವನು ಸಮಸ್ತ ಸಮೂಹವನ್ನು ಪ್ರೀತಿ, ವಿಶ್ವಾಸ, ಗೌರವ, ಆದರದಿಂದ ಕಾಣುವ ಮುಖ್ಯ ಗುಣಗಳನ್ನು ಅಳವಡಿಸಿಕೊಂಡಿರಬೇಕೆಂಬ ಆಶಯ ಇಲ್ಲಿದೆ.

ದುಡ್ಡಿನ ಮುಂದೆ, ಗುಡ್ಡ, ಗಹ್ವರಗಳೂ, ನದಿ, ಕಾಡು, ಕಲ್ಲುಗಳು ಕ್ಷುಲ್ಲಕವಾಗಿ ಪರಿಣಮಿಸಿವೆ. ಸದಾ ಹಸಿರುತುಂಬಿ ಇಡೀ ಮರವನ್ನೇ ಜೀವಂತಿಕೆಯ ಸ್ವರೂಪಕ್ಕೆ ಕೊಂಡೊಯ್ದ ಬೊಡ್ಡೆಯು ತುದಿಯ ಮುಂದೆ ಅಲ್ಪವೆನ್ನಿಸಿಬಿಟ್ಟಿದೆ. ಅದೇ ರೀತಿ ಶಿವಶರಣನಾದವನಲ್ಲಿ ಗುರು ಹಿರಿಯರನ್ನು ಸಕಲ ಜೀವರಾಶಿಗಳನ್ನು ಗೌರವಿಸುವ ಗುಣ ಇರಬೇಕು. ಹೀನಗುಣಗಳು ಶೋಭೆ ತರುವಂಥವುಗಳಲ್ಲ. ಬಾಹ್ಯ ಕಾಣಿಕೆಗಳೆ ಸಾಧನೆಗಳಲ್ಲ ಎನ್ನುವ ಅರ್ಥ ಇಲ್ಲಿನದು.

೨೧೮

ಬ್ರಹ್ಮ ವಿಷ್ಣು ಮಹೇಶ್ವರರು ಕಷ್ಟಕರ್ಮಕೆ ಗುರಿಯು
ದುಷ್ಟ ದುರ್ಜನಕೆ ತಿಳಿವುದೆ, ಮಾವ ಕಂಸನ
ಕೃಷ್ಣ ಛೇದಿಸಿದನು, ಬಸವಣ್ಣ

ತಾತ್ಪರ್ಯ : ದುರ್ಜನರನ್ನು ಸಂಹರಿಸುವ ಕೈಂಕರ್ಯದಲ್ಲಿ ದೈವವೆಂಬುದು ಸದಾ ಸನ್ನದ್ಧವಾಗಿರುತ್ತದೆ ಎನ್ನುವ ಭಾವ ಈ ಪದ್ಯದ ಸಾರವಾಗಿದೆ.

ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರು ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣೀಕರ್ತರು. ಬ್ರಹ್ಮ ಸೃಷ್ಟಿಕ್ರಿಯೆಯಲ್ಲಿ ನಿರತನಾಗಿದ್ದರೆ, ವಿಷ್ಣುವು ಆ ಸೃಷ್ಟಿಕರ್ತನಿಂದ ಉದ್ಭವವಾದ ಜಗತ್ತನ್ನು ಪೊರೆಯುತ್ತಾನೆ, ಪರಿಪಾಲಿಸುತ್ತಾನೆ, ರಕ್ಷಿಸುತ್ತಾನೆ. ಲಯ ಕಾರನಾದವನು ಮಹೇಶ್ವರ. ಆ ಮೂಲಕ ಆತ ಸಮಾನತೆಯನ್ನು ಕಾಯ್ದುಕೊಳ್ಳುತ್ತಾನೆ. ಮನುಷ್ಯರ, ಜೀವ ಜಾಲದ ಕಷ್ಟಗಳಿಗೆ, ಸುಖದುಃಖಗಳಿಗೆ ಈ ಮೂವರು ಸಮಾನ ಕಾರಣೀಕರ್ತರಾದವರು ಎನ್ನುವ ಕನಿಷ್ಠ ಜ್ಞಾನವೂ ದುಷ್ಟರಾದವರಿಗೆ, ದುರುಳ ರಾದವರಿಗೆ ತಿಳಿಯದೇ ಹೋಗಿದೆ. ಹಾಗಾಗಿ ಅವರಲ್ಲಿ ಗರ್ವ, ಅಹಂಕಾರಗಳು ಮನೆಮಾಡಿಕೊಂಡು ಸರ್ವನಾಶಕ್ಕೂ ಮುಂದಾಗುತ್ತಿದ್ದಾರೆ. ಅದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಿದವನು ಕಂಸ. ಹಸುಗೂಸುಗಳನ್ನು ತನ್ನ ಸ್ವಾರ್ಥ ಸಾಧನೆಗಾಗಿ ನಾಶ ಮಾಡುತ್ತ ಕರುಳ ಸಂಬಂಧವನ್ನೇ ಬುಡ ಸಮೇತ ಹೊಸಕಿ ಹಾಕಹೊರಟ ದುರಳ. ಆತ ತನ್ನ ಸಹೋದರಿಯ ಮಕ್ಕಳನ್ನೇ ತನ್ನ ಅಳಿಯಂದಿರನ್ನೇ ನಿರ್ನಾಮ ಮಾಡಲು ಮುಂದಾದ. ಅಂತಹ ಕಂಸನನ್ನು ಅಳಿಯನಾದ ಕೃಷ್ಣನೇ ನಿರ್ದಯನಾಗಿ ಕೊಂದು ಹಾಕಿದ ಕಥೆ ಪುರಾಣದಲ್ಲಿ ಉಲ್ಲೇಖಿತವಾಗಿದೆ.

೨೧೯

ಅಂಟು ಕಾಚನು ಕರೆದು ಎಂಟು ದಿನದೊಳ ಹೊರಗು
ತುಂಟ ನ್ಯಾಯಗಳು ಅಂತಸ್ತ ಬಹಿರಂಗದಲಿ
ಉಂಟು ಮಾಡುವರು ದುರ್ಜನರು, ಬಸವಣ್ಣ

ತಾತ್ಪರ್ಯ : ದುರ್ಜನರಾದವರು ಸಮಾಜದಲ್ಲಿ ಸೃಷ್ಟಿಸುವ ಅವಘಡಗಳನ್ನು ಕುರಿತು ಈ ವಚನವು ಸಾರುತ್ತದೆ. ನೀತಿಗೆಟ್ಟವರು, ವಿಕೃತ ಮನಸ್ಸಿನ ದುರುಳರು ಅತಿ ಕಡಿಮೆ ಕಾಲಾವಧಿಯಲ್ಲಿಯೇ ಸಮಾಜದ ಒಳಗೂ ಹೊರಗೂ ತುಂಟಾಟ, ಅನ್ಯಾಯ ಗಳಿಂದ ಸೃಷ್ಟಿ ಮಾಡುವ ಅವಘಡಗಳು ವಿಪರೀತವಾದವುಗಳು. ಸಹಿಸಲು ಅಸಾಧ್ಯವಾದವುಗಳು. ಸಮಾಜದ ಘನತೆ, ಗೌರವಾದರಗಳಿಗೆ ಧಕ್ಕೆ ಉಂಟು ಮಾಡಿ, ಸಮಾಜದ ನೆಮ್ಮದಿ ಕೆಡಿಸುವರು. ಅಂತಹ ದುರುಳರನ್ನು ಸಹಿಸಿಕೊಳ್ಳ ಲಾದೀತೇ?

೨೨೦

ಹೆತ್ತಂಥ ಸುತನಿಗೆ ಎತ್ತಿ ಆಯುಧಗಳು
ನೆತ್ತಿಲಿ ನೋಡಿ ಕುಟ್ಟಿದನು ವಿರಾಟನ ಮನೆಯ
ತೊತ್ತಿನ ಕೆಲಸ ಅವಗಾಯ್ತು, ಬಸವಣ್ಣ

ತಾತ್ಪರ್ಯ : ಮಾಡಿದ ಕರ್ಮಾದಿಗಳು ಎಂಥ ವ್ಯಕ್ತಿಗಳನ್ನು ಬಿಡಲಾರವು ಎನ್ನುವ ಭಾವ ಈ ಪದ್ಯದಲ್ಲಿ ಅಡಗಿದೆ. ಮಹಾಭಾರತ ಕಥೆಯ ಪ್ರಸ್ತಾಪವಿಲ್ಲಿದೆ. ಮಣಲೂರಿನ ರಾಜ ಮಲಯಧ್ವಜನ ಮಗಳಾದ ಚಿತ್ರಾಂಗದೆಯನ್ನು ಅರ್ಜುನನು ಮದುವೆಯಾಗಿ ಆಕೆಯಲ್ಲಿ ಬಭ್ರುವಾಹನನೆಂಬ ಮಗನನ್ನು ಪಡೆಯುತ್ತಾನೆ. ಅಲ್ಲಿಂದ ಬಂದ ಮೇಲೆ ಅರ್ಜುನ ಬಭ್ರುವಾಹನನ್ನು ಮರೆಯುತ್ತಾನೆ. ಮುಂದೆ ಅರ್ಜುನ ಮಗನೆಂದರಿಯದೆ ಬಭ್ರುವಾಹನನ ಕೂಡ ಯುದ್ಧ ಮಾಡಿ ಬಾಣಗಳಿಂದ ಗಾಯಗೊಳಿಸಿದ ಕರ್ಮದ ಫಲಕ್ಕಾಗಿ ಅರ್ಜುನನು ವಿರಾಟ ರಾಜನ ಅರಮನೆಯಲ್ಲಿ ಬೃಹನ್ನಳೆಯಾಗಿ (ತೊತ್ತಾಗಿ) ಸೇವೆ ಮಾಡಬೇಕಾಯಿತು ಎಂಬುದು ಪದ್ಯದ ತಾತ್ಪರ್ಯ.

೨೨೧

ತುಂಟದಾತರ ತಂಟೆಯ ಸಂಸಾರ
ಗಂಟು ಮಾಡಿಹುದು, ಬಿಡದಯ್ಯ ಪಾಪದ
ಗಂಟಲಕೆ ಗಾಣ ತಾಗುವದು, ಬಸವಣ್ಣ

ತಾತ್ಪರ್ಯ : ಒಡೆಯ ಅಥವಾ ತಂದೆಯಾದವನು ಜಗಳಗಂಟನಾದರೆ, ಸಂಸಾರದ ಗತಿಯೇನು. ಅದು ದೇಹಕ್ಕೆ ಆದ ಗಂಟಿನಂತೆ ಸದಾ ಹಿಂಸಿಸುತ್ತಿರುತ್ತದೆ, ನೋವುಂಟು ಮಾಡುತ್ತಿರುತ್ತದೆ. ಅದು ಗಂಟಲಿಗೆ ಸಿಕ್ಕ ಗಾಳದಂತೆ ಸದಾ ಬಾಧಿಸುತ್ತಲೇ ಇರುತ್ತದೆ. ಇಂತಹ ಪಾಪದ ಧ್ಯನಿಗೆ, ಗಂಟಲಕ್ಕೆ ತಡೆಯೆಂಬುದು ಇದ್ದೇ ಇರುತ್ತದೆ. ಅದನ್ನು ಅರಿವಿನ ಮೂಲಕ ಅರಿತುಕೊಳ್ಳಬೇಕು.

೨೨೨

ಇರಿವೆಯ ಪ್ರಾಣ ಕ್ಷಯವು ಗಿರಿಗಿಂತ ಘನ ದೋಷ
ಸುರಭಿಯೊಳು ಜನಿಸಿರುವ ತನಕ ದಾನ ಧರ್ಮ
ಪರಿಹಾರವಯ್ಯ, ಬಸವಣ್ಣ

ತಾತ್ಪರ್ಯ : ದಾನ ಧರ್ಮಗಳ ಮಹತ್ವ ತಿಳಿಸುತ್ತಲೇ ಕ್ಷುದ್ರ ಜೀವಿಗಳ ಜೀವಕ್ಕೂ ಬೆಲೆಯುಂಟು ಎನ್ನುವ ಜೀವಪರ ಆಶಯ ಇಲ್ಲಿದೆ.

ಕ್ಷುದ್ರ ಪ್ರಾಣಿಯೆಂದು ಇರುವೆಯನ್ನು ಕೊಲ್ಲುವುದು ಗಿರಿ, ಶಿಖರಗಳನ್ನು ನಾಶಪಡಿಸುವುದಕ್ಕಿಂತ ಬಹುದೊಡ್ಡದಾದ ದೋಷವಾಗಿದೆ. ಹೀಗಾಗಿ ಈ ಭೂಮಂಡಲದಲ್ಲಿ ಜನಿಸಿ ಜೀವಂತ ಇರುವತನಕ, ಪರಿಶುದ್ಧ ಆತ್ಮದಿಂದ, ದಾನ ಧರ್ಮಾದಿಗಳನ್ನು ಮಾಡಿ ಪರೋಪಕಾರಿಯಾಗಬೇಕೆ ಹೊರತು ಹಿಂಸಾವಾದಿಯಾಗಬಾರದು.

೨೨೩

ನಾಲ್ವತ್ತು ಸಾವಿರ ಜೇನು ಹುಳವ ನಾ ಕೊಂದೆ
ನಾನದರ ಎಡಿಯ ಸೆಳೆದುಂಡೆ ಕರ್ಮಿಪಾತ
ಕಿನಾ ಜಗಕೆಲ್ಲ ನನ್ನಂಥ
ಕರ್ಮಿ ಮತ್ತಿಲ್ಲ ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಪಶ್ಚಾತ್ತಾಪದಿಂದ ನೊಂದು, ಬೆಂದು ಪರಿತಪಿಸುವ ಮನಸ್ಸಿನ ತಳಮಳ ಈ ವಚನದಲ್ಲಿ ಸೂಕ್ಷ್ಮವಾಗಿ ನಿವೇದನೆಗೊಂಡಿದೆ.

ಹೂವಿನ ಮಕರಂದ ಹೀರಿ ಸಿಹಿಯಾದ ಜೇನುತುಪ್ಪ ನೀಡುವ ಮುಗ್ಧ ನಿರುಪದ್ರವಿ ಜೀವಿಯಾದ ಜೇನು ಹುಟ್ಟನ್ನು ಕೆಡಿಸಿ, ಸಾವಿರಾರು ಜೇನುಹುಳ ಕೊಂದು ಸಂಗ್ರಹಿಸಿಟ್ಟ ಅದರ ಆಹಾರವನ್ನೇ ತಿಂದ ಪಾಪಿ ನಾನು. ಅಂತಹ ನಿರುಪದ್ರವಿ ಜೀವಿಗಳನ್ನು ಕೊಂದು, ಅವುಗಳ ಆಹಾರವನ್ನೇ ಕಿತ್ತು ತಿಂದ ನನ್ನಂಥ ಪಾಪಿ ಮತ್ತೊಬ್ಬರಿಲ್ಲವೆಂದು ತಾವು ಮಾಡಿದ ಪಾಪಕ್ಕೆ ಪ್ರಾಯಶ್ಚಿತ ಪಡುವ ಗುಣ ಬಹುದೊಡ್ಡದು. ಅದು ಜ್ಞಾನಿಯಾದವನಿಗೆ, ಸಂತನಾದವನಿಗೆ ಮಾತ್ರ ಸಾಧ್ಯ. ಇತರರಿಗೆ ಸಾಧ್ಯವಾಗುವುದಿಲ್ಲ. ಅಂತಹ ಮಾನಸಿಕ ತಳಮಳ ಇಲ್ಲಿ ಅಭಿವ್ಯಕ್ತವಾಗಿದೆ.

೨೨೪

ಅನ್ಯಾಯದ ಹಣಕ್ಕೆ ಕಣ್ಣ ದಾನವೇ ಸಾಕ್ಷಿ
ಪನ್ನಗಧರನು ಕೊಟ್ಟ ಹಣವಿಂಗೆ
ಇನ್ನು ಭಯವುಂಟೆ, ಬಸವಣ್ಣ

ತಾತ್ಪರ್ಯ : ಹಣಗಳಿಸುವ ಭರದಲ್ಲಿ ನ್ಯಾಯ, ನೀತಿ, ಧರ್ಮಪಾಲಿಸಬೇಕು. ಶ್ರೀಮಂತನಾಗುವ ದಾಹದಲ್ಲಿ ಅನ್ಯಾಯ, ಅನೀತಿಯ ಮಾರ್ಗ ಅನುಸರಿಸಿದರೆ ಅದಕ್ಕೆ ಆತನ ಕಣ್ಣುಗಳೇ ಸಾಕ್ಷಿ. ಆತನ ಒಳಮನಸ್ಸೇ ಸಾಕ್ಷಿ. ಅವುಗಳಿಂದ ಎಂದಿಗೂ ಪಾರಾಗಲು ಸಾಧ್ಯವಿಲ್ಲ. ಆ ಶಿವನು ಕೊಟ್ಟ ನಿಜ ಐಶ್ವರ್ಯದಿಂದ ಯಾತರ ಭಯವೂ ಇರದು. ಅದು ಶಾಶ್ವತ, ನಿಶ್ಚಿಂತ, ನಿರಾಳವಾದದ್ದು. ಜನಕ್ಕೆ ಅಂಜದೆ ಮನಕ್ಕೆ ಅಂಜಬೇಕೆನ್ನುವ ತತ್ವ ಇಲ್ಲಿನದು.

೨೨೫

ಐನೂರು ಕೋಟಿ ಯೋಜನಕೆ ಕೌಲು ಬಂದಾವು
ದೀನ ಸೈಯ್ಯದ ಮಹಮ್ಮದನೆ ಸಲಹೆಂಬ ಸಮಯಕ್ಕೆ
ಕೌದಿಯ ಬೀಸಿ ಮಳೆಗರೆದ, ಬಸವಣ್ಣ

ತಾತ್ಪರ್ಯ : ಇದೊಂದು ಕಾಲಜ್ಞಾನದ ವಚನವಾಗಿದ್ದು ಮುಂಬರುವ ಕೆಟ್ಟ ದಿನಮಾನಗಳ ಮುನ್ಸೂಚನೆ ನೀಡಿದಂತಿದೆ. ಧಾರ್ಮಿಕ ಸಹಿಷ್ಣುತೆಗೆ ಮೋನಪಯ್ಯನವರು ಅತೀವ ಆದ್ಯತೆ ನೀಡಿದ್ದು ಗಮನಾರ್ಹ. ದಯಾಳುವಾದ ಆ ಸೈಯ್ಯದ್ ಮಹಮ್ಮದನು ಜಗತ್ತನ್ನೇ ಸಲಹುವನು. ಕಷ್ಟದಲ್ಲಿದ್ದ ದೀನರಾದ ಜನರು ಆತನ ಮೊರೆಹೊಕ್ಕು ಬೇಡಿಕೊಳ್ಳುವ ಸಮಯಕ್ಕೆ ಮೌನೇಶ್ವರರು ಹೊದೆದ ಕೌದಿಯನ್ನು ಬೀಸಿ ಮಳೆಸುರಿಸುವ ಪವಾಡ ಸದೃಶ ಸಮಯ ಒದಗಿ ಬರುತ್ತದೆ. ಅದರಿಂದ ಜಗತ್ತೇ ಸಂತೃಪ್ತಗೊಳ್ಳುತ್ತದೆ. ಸೈಯ್ಯದನೇ ಮೌನಯ್ಯನಾಗುವ ಪರಿ ಇಲ್ಲಿ ಗಮನಿಸುವಂಥದ್ದು.

೨೨೬

ಹದ್ದು ಕಾಗೆಗೆ ಹಬ್ಬ ಶುದ್ಧ ಸುಖವಾಯಿತು
ಗುದ್ದಲಿಯ ಪಿಡಿದು ತೃಣಬೇರು ಅಗಿಯಲು
ಪಶುವಂಶ ಮೆದ್ದುಳಿಯಲಿಲ್ಲ, ವೃಷಭೇಂದ್ರ

ತಾತ್ಪರ್ಯ : ಭವಿಷ್ಯದ ದಿನಮಾನಗಳು ಅತ್ಯಂತ ದಾರುಣವಾಗಿರುವ ಮುನ್ಸೂಚನೆ ಈ ವಚನದಲ್ಲಿ ಹುದುಗಿದೆ.

ಭೀಕರ ಬರಗಾಲಕ್ಕೆ ತುತ್ತಾಗಿ, ಹೀನಾಯ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಎಲ್ಲಿ ನೋಡಿದರಲ್ಲಿ ಜನ ಜಾನುವಾರುಗಳ ಹೆಣಗಳ ರಾಶಿ ರಾಶಿಯೇ ಬೀಳುವುದು. ಇದರಿಂದ ಹದ್ದು, ಕಾಗೆಗಳಿಗೆ ಹಬ್ಬದೌತಣವಾಗಿರುವುದು ಹಸಿವಿನಿಂದ ತಪ್ಪಿಸಲು ಆ ವೃಷಭೇಂದ್ರನು ಗುದ್ದಲಿ, ಸಲಿಕೆ ಹಿಡಿದು ನೆಲದಾಳದಿಂದ ಹುಲ್ಲಿನ ಹಸಿ ಬೇರು ಕಿತ್ತು ಜಾನುವಾರುಗಳಿಗೆ ಹಾಕಿದರೂ, ಅವುಗಳು ಬದುಕಿ ಉಳಿಯದೇ ಮೃತ್ಯುಕೂಪಕ್ಕೆ ಬಲಿಯಾಗುವವು. ಎಲ್ಲೆಡೆ ಹಸಿವಿನ ಹಾಹಾಕಾರ ಕೇಳಿ ಬರುವುದಲ್ಲದೇ ದಬ್ಬಾಳಿಕೆ ಹೆಚ್ಚಾಗುವ ಮುನ್ಸೂಚನೆಯನ್ನು ಮೌನೇಶ್ವರರು ಈ ವಚನದ ಮೂಲಕ ನೀಡಿದ್ದಾರೆ.

೨೨೭

ಧರ್ಮಕ್ಕೆ ಬೇಡಿದರೆ ಗುರುಗುಟ್ಟುವರು
ಕೆರುವುಗಾಲಿಲೆ ಒದೆದರೆ ಮನೆಯೊಳಗಿನ ಹೊನ್ನಿನ
ಚರಿಗೆ ತಂದಿಕ್ಕುವರು, ಬಸವಣ್ಣ

ತಾತ್ಪರ್ಯ : ದಯೆಯ ಯಾಚನೆಗಿಂತ ದೌರ್ಜನ್ಯದ ಜೋರಿಗೆ ಬಗ್ಗುವ ಜನರಿದ್ದಾರೆ ಎನ್ನುವ ಮಹತ್ವದ ವಿಚಾರವನ್ನು ಈ ಪದ್ಯ ಸಾರುತ್ತದೆ.

ಕರುಣೆಯಿಂದ, ಧರ್ಮದಿಂದ ಬೇಡಿದರೆ, ಯಾರು ಮರುಕ ತೋರರು. ಶ್ರೀಮಂತರು ಉಳ್ಳವರು ಪ್ರತಿಯಾಗಿ ದರ್ಪತೋರಿ ಅಸಡ್ಡೆ ಮಾಡುವರು.

ಅಂತಹವರನ್ನು ರೋಷದಿಂದ, ಒಡಲೊಳಗಿನ ಕಿಚ್ಚಿನಿಂದ ಕೆರವುಗಾಲಿನಿಂದ ಒದೆದರೆ, ಜೀವ ಭಯದಿಂದ ತಮ್ಮ ಮನೆಯೊಳಗೆ ಜೋಪಾನವಾಗಿಟ್ಟ, ತಂಬಿಗೆ ತುಂಬಿಟ್ಟ ಹೊನ್ನು, ಹಣವನ್ನೆಲ್ಲ ತಂದು ಸುರಿಯುವಂತಹ ಬಲಪ್ರಯೋಗದ ದಿನಗಳ ಸೂಚನೆ ವಚನದಲ್ಲಿದೆ.

೨೨೮

ಕೊಟ್ಟ ಕೌಲು ಈಡೇರಿಸದೆ ಖೊಟ್ಟಿತನವ
ಮಾಡಿ ದಂಡ ದೋಷಂಗಳ ಕೊಂಡೆ, ಕಟ್ಟಿದ
ಕುದುರೆಯ ಕಳ್ಳರು ಒಯ್ದರೆ ರೊಟ್ಟಿಗೆ
ಗತಿಯಿಲ್ಲದೆ ನಾ ಬಂದೆ, ಬಸವಣ್ಣ

ತಾತ್ಪರ್ಯ : ಈ ವಚನವು ಸ್ವಾನುಭವದ ಸಾಕ್ಷಾತ್ ದರ್ಶನದಂತಿದೆ. ಹಾಗೆ ವಿಚಾರಿಸಿದಲ್ಲಿ ಮೌನೇಶ್ವರರು ಹೇಳಿದುದೆಲ್ಲವೂ ಅನುಭವಿಸಿದ, ಘಾಸಿಗೊಂಡ ಅನುಭವ ಸಾಕ್ಷಾತ್ಕಾರದ ಧ್ವನಿಯಾಗಿದೆ.

ಕೊಟ್ಟ ಮಾತನ್ನು, ಈಡೇರಿಸಲಾಗದೇ, ನಿಷ್ಠುರತನವನ್ನು ಕಟ್ಟಿಕೊಂಡು, ಕಷ್ಟ, ನಷ್ಟಗಳನ್ನು ಅನುಭವಿಸಿ, ದಂಡ, ದೋಷ ಇತ್ಯಾದಿಯಾದ ಅವಮಾನಗಳನ್ನು ಪಡೆದೆ, ಮನೆಯ ಮುಂದೆ ಕಟ್ಟಿದ ಕುದುರೆಯನ್ನು ಕಳ್ಳರು ಅಪಹರಿಸಿ ಸಂಚರಿಸಲೂ ಆಗದವನಾದೆ. ಹೀಗಾಗಿ ತುತ್ತು ರೊಟ್ಟಿ ಹಿಡಿ ಅನ್ನ ಕಾಣದೇ ಗತಿಗೆಟ್ಟು ಇಹಕ್ಕೆ, ಇಲ್ಲಿಗೆ ಬಂದು ನಿಂತಿದ್ದೇನೆ. ಲೌಕಿಕತೆಯಿಂದ ಪಾರಮಾರ್ಥಿಕತೆಯ ಕಡೆಗೆ ನಡೆಯುವ ಮಾತುಗಳು ಈ ವಚನದಲ್ಲಿ ಶಕ್ತಿಯುತ ರೂಪಕವಾಗಿ ಮೂಡಿಬಂದಿವೆ.

೨೨೯

ಉಣಲಿಕ್ಕೆ ಅನ್ನವಿಲ್ಲ ನೆಣವು ಮೈಯೊಳಗಿಲ್ಲ
ಹಣವಿಲ್ಲವೆಂದು ಹನ್ನೆರಡು ಚಿಂತಿಸಿದರೆ
ಫಣಿಯಲ್ಲಿರ್ದ ಅಕ್ಷರವು ತಪ್ಪುವದೆ, ಬಸವಣ್ಣ

ತಾತ್ಪರ್ಯ : ದೀನ ಬದುಕಿನ, ದಾರುಣವಾದ ಬಾಳಿನ ಚಿತ್ರಣ ಈ ಮಾತುಗಳಿಂದ ವ್ಯಕ್ತವಾಗಿವೆ.

ಮೈಯೊಳಗಿನ ನೋವೆಲ್ಲ ಕರಗಿ, ಶಕ್ತಿಗುಂದಿದ ದಿನಮಾನಗಳಲ್ಲಿ ವೆಚ್ಚಕ್ಕೆ ಹಣವಿಲ್ಲವೆಂದು ನಾನಾ ತೆರನಾಗಿ ಚಿಂತಿಸುತ್ತ, ಹಲುಬುತ್ತ ಕುಳಿತರೆ ಬ್ರಹ್ಮಬರೆದ, ಹಣೆಬರಹ ತಪ್ಪಲಾರದು. ಯಾವ ಯಾವ ಕಾಲಕ್ಕೆ ಯಾವ ಯಾವ ವಯಸ್ಸಿಗೆ ಏನೇನು ಬರುವುದೋ ಅದನ್ನು ತಪ್ಪಿಸಲಾಗದು ಎಂದು ಹೇಳುತ್ತಾ ಮಾನವ ವಿಧಿಯ ಕೈಗೊಂಬೆಯೆನ್ನುತ್ತಾ ಅದನ್ನು ಸಾಧನೆಯಿಂದ ಮೀರಿ ಹೊರಬೇಕು ಎನ್ನುವ ಸಂದೇಶ ನೀಡುತ್ತಾರೆ.

೨೩೦

ಜಾಡ, ಹಟಕಾರನೆಂದು ಆಡಿ ಕೆಡಬೇಡಿ
ನೋಡಿ ನೋಡಿ ನಿಮ್ಮ ಮನದೊಳಗೆ
ಕೂಡಿಕೊಂಡಿಪ್ಪುದನರಿಯರು, ನಿಮ್ಮ
ಕುಚೇಷ್ಟೆಯ ಬಿಡಬೇಕು, ಬಸವಣ್ಣ

ತಾತ್ಪರ್ಯ : ಜಾತಿ ನಿಂದನೆ ಅತ್ಯಂತ ಹೇಯವಾದದ್ದು. ಅದು ಆಘಾತಕಾರಿಯೂ ದುರಂತಕ್ಕೆ ಮೂಲವಾದುದೆಂದೂ ಇಲ್ಲಿ ತಿಳಿಹೇಳಲಾಗಿದೆ.

ಮನುಷ್ಯ ಮನುಷ್ಯರನ್ನು ಜಾತಿಯ ಮೂಲದಿಂದ ಗುರುತಿಸಿ ಅವಹೇಳನ ಮಾಡುವುದು ಕೆಟ್ಟ ಪರಂಪರೆ. ಸಮಾಜದಲ್ಲಿ ನಮ್ಮಂತೆಯೇ ಜೀವನ ಸಾಗಿಸುವ, ಬದುಕುವ ಜಾಡರು, ಹಟಕಾರರು ಇತರೆ ವೃತ್ತಿನಿರತ ಕಸುಬುದಾರರನ್ನು ಕೀಳೆಂದು ಭಾವಿಸಿ ಅಗೌರವದಿಂದ, ಹೀಯಾಳಿಸಿದರೆ ಕೇಡಾಗುವುದು ಶತಸಿದ್ಧ. ಇದೊಂದು ಕುಚೇಷ್ಟೆಯ ಮಾತು. ನಿಮ್ಮ ಮನಸ್ಸಿನೊಳಗೆ ಉಂಟಾಗುವ ಹಲವಾರು ವಿಚಾರಗಳೇ ಕೀಳು ಎನ್ನುತ್ತಾ, ಕುಲ ನಾಲಿಗೆಯನ್ನು ತಿಳಿಸುವುದು ಎಂದು ಮೌನೇಶ್ವರರು ಬಹಳ ನಿಷ್ಠುರವಾಗಿಯೇ ಹೇಳುತ್ತಾರೆ.

೨೩೧

ನರ ಜನ್ಮದಲಿ ಜನಿಸಿ ತಿರಿದು ಉಣಲಾರೆ
ಬರೆದ ಅಜನ ಲಿಖಿತವನು ಅವನ ಮಸ್ತಕವು
ಹರಿದು ಹೋಯಿತು, ಬಸವಣ್ಣ

ತಾತ್ಪರ್ಯ : ಮನುಷ್ಯ ಎಷ್ಟೇ ಎತ್ತರಕ್ಕೇರಿದರೂ ನರಜನ್ಮಕ್ಕೆ ಕಾಲಿಟ್ಟ ಮೇಲೆ ಒಂದಿಲ್ಲ ಇನ್ನೊಂದು ರೀತಿಯಿಂದ ಆತ ತಿರುಕನೂ ತಿರಿದುಂಬುವವನೂ ಎನ್ನುವ ಮಾತು ಬಹು ನಿಚ್ಚಳವಾಗಿ ಇಲ್ಲಿ ಮೂಡಿದೆ.

ಭೂಮಿಯ ಮೇಲೆ ನರನಾಗಿ ಹುಟ್ಟಿ, ಭಿಕ್ಷೆ ಬೇಡಿ, ತಿಂದು ಆಯ್ದು ಉಣ್ಣಲಾರೆ ನೆಂಬ ಅಹಂಕಾರದಿಂದ ಮೆರೆಯುತ್ತ ನಡೆದರೆ, ಬ್ರಹ್ಮನು ಬರೆದ ಹಣೆಬರಹವು ಹುಸಿಯಾಗಲಾರದು. ಹಣೆಬರಹ ಬರೆದ ಬ್ರಹ್ಮನ ಶಿರವೇ ಕತ್ತರಿಸಿ ಹೋದಾಗ ಅನ್ಯ ನರರ ಪಾಡೇನು. ಹಣೆಬರಹಕ್ಕಿಂತ ಸಾಧನೆಯ ಹಂಗು ಪ್ರಮುಖವಾದದ್ದು ಎನ್ನುವ ಭಾವ ಇಲ್ಲಿನದು.

೨೩೨

ಹುಟ್ಟು ಬಣ್ಣದ ಮಡಿಕೆ ಮುಟ್ಟಿದರೆ ದೋಷಿಲ್ಲ
ಮೃಷ್ಟಾನ್ನ ಕೆಡಲು ರುಚಿಯಿಲ್ಲ, ಗುರುನಾಥ
ಕೊಟ್ಟ ವರವು ಪುಸಿಯಲ್ಲ, ಬಸವಣ್ಣ

ತಾತ್ಪರ್ಯ : ದೈವದ ಒಲವು ಎಂದಿಗೂ ಹುಸಿಯಾಗದು ಎನ್ನುತ್ತದೆ ಈ ಮಾತು. ಹುಟ್ಟಿದಾರಭ್ಯದಿಂದ ಶ್ರೀಮಂತಿಕೆ, ಬಣ್ಣದ ಬದುಕು ಅನುಭವಿಸುವವರಿಗೆ ಯಾವುದೇ ರೀತಿಯ ದೋಷ ಕಾಣದು. ಹಾಗೆಯೇ ಮೃಷ್ಟಾನ್ನವು ಹಳಸಿ ಕೆಟ್ಟರೆ ತನ್ನ ರುಚಿಯನ್ನೆಲ್ಲ ಕಳೆದುಕೊಂಡು ತಿನ್ನಲಿಕ್ಕೂ ಆಗದಂಥ ಸ್ವರೂಪ ಪಡೆದು ಓಕರಿಕೆ ಬರಿಸುತ್ತದೆ. ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಇವೆಲ್ಲಕ್ಕೂ ಸರ್ವಶಕ್ತನಾದ ಗುರುನಾಥನು, ಕೊಟ್ಟ ವರವು ಅದು ಎಂದೆಂದಿಗೂ ಹುಸಿಯಾಗದು.

೨೩೩

ಬಡವಿಯ ಅಣುಗಗೆ ಕೊಡುವನು ವರಗಳ
ಅಡವಿ ಆಲಯ ಸೋಮೇಶ ಒಲಿದನಲ್ಲ
ಕಿಡಿಗಣ್ಣ ಭಕ್ತಂಗೆ, ಬಸವಣ್ಣ

ತಾತ್ಪರ್ಯ : ಬಡತನದ ಬದುಕಿನಲ್ಲೂ ಒಂದು ರೀತಿಯ ಸ್ವಾರಸ್ಯಕರವಾದ ಅನುಭವ ವಿರುತ್ತದೆ. ಅದು ಬದುಕಿನ ದಾರಿದೀಪವೆನ್ನುವುದು ಇಲ್ಲಿ ವ್ಯಕ್ತವಾಗಿದೆ.

ಅತ್ಯಂತ ಕಡು ಬಡತನದಿಂದ ಬಾಳುವ ಹೆಣ್ಣು ಮಗಳು ಮಾಡಿದ ಅಡುಗೆಯಲ್ಲೂ ಸ್ವಾರಸ್ಯವಿದೆ. ರುಚಿಯಿರುತ್ತದೆ. ಅಂತಹ ನಿಷ್ಕಲ್ಮಶ, ಶುಭ್ರ ಮನಸ್ಸಿನ ಬಡತನಕ್ಕೆ, ಅಡವಿಯನ್ನೇ ಆಲಯ ಮಾಡಿಕೊಂಡ ಸೋಮೇಶ ಒಲಿದದ್ದೂ ಉಂಟು. ಕಿಡಿ ಗಣ್ಣುಳ್ಳವನಿಗೂ ಆತನ ಭಕ್ತಿಯನ್ನು ಮೆಚ್ಚಿ(ಕಣ್ಣಪ್ಪ) ಆತನಿಗೆ ಒಲಿದ ಪ್ರಸಂಗವೂ ಇದೆ ಎನ್ನುವ ಹಿತವಚನ ಇಲ್ಲಿದೆ. ದೇವರು ಆಡಂಬರಕ್ಕೊಲಿಯದೆ ಸಾತ್ವಿಕ ಭಕ್ತಿಗೆ ಒಲಿಯುತ್ತಾನೆನ್ನುವ ಅರ್ಥವಿಲ್ಲಿದೆ.

೨೩೪

ರಕ್ಷಿಸುವ ಶಿವ ತಾನು ಭಿಕ್ಷುಕನಾದ ಮೇಲೆ
ದಿಕ್ಕು ದಿಕ್ಕೆಲ್ಲ ಉಳಿಯುವದೆ
ಒಕ್ಕಲು ಮಗನಲ್ಲದೆ ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಜಗತ್ತನ್ನೇ ಸಾಕಿ ಸಲಹುವವ ರಕ್ಷಕನು ಭಿಕ್ಷುಕನಾದರೆ ಈ ಜಗತ್ತನ್ನು ಸಾಕಿ, ಸಲಹುವವರಾರು ಎಂದು ಪ್ರಶ್ನಿಸಲಾಗಿದೆ. ಬಸವಣ್ಣ ಒಕ್ಕಲಿಗ, ಒಕ್ಕಲಿಗನ ಮನೆಯ ಮಗ. ಆತನ ಶ್ರಮದಿಂದ ಜಗತ್ತಿಗೇ ಅನ್ನ, ಬಟ್ಟೆ ನೀಡಿ ಸಾಕಿ ಸಲಹುತ್ತಾನೆ. ಇಂತಹ ರಕ್ಷಕನಾದ, ಅನ್ನದಾತನಾದ ಶಿವನೇ ಭಿಕ್ಷುಕನಾಗಿ ಬಂದರೆ ನಾಡು, ದಿಕ್ಕು ದಿಸೆಯಿಲ್ಲದೇ ಗೋಳಿಡುತ್ತದೆ. ಈ ಬದುಕು ಉಳಿಯಲಾರದು.

೨೩೫

ಎತ್ತಿಗೆ ತೊತ್ತಿಗೆ ಕತ್ತೆಗೆ ಕುದುರೆಗೆ
ನಿತ್ಯ ಕಾಲದಲಿ ಅವು ನ್ಯಾಯವಿಲ್ಲದಿದ್ದರೆ
ಹತ್ತಲಿಗೊಡುವವೆ, ಬಸವಣ್ಣ

ತಾತ್ಪರ್ಯ : ಪಶು, ಪ್ರಾಣಿಗಳಿಗೂ ಮನುಷ್ಯರಾದವರು ತಕ್ಕ ಉಪಚಾರವನ್ನು ಕಾಲಕಾಲಕ್ಕೆ ಸರಿಯಾಗಿ ಮಾಡಬೇಕೆಂಬುದು ಪ್ರಕೃತಿಯ ಧರ್ಮವಾಗಿದೆ.

ನಮ್ಮ ದಿನನಿತ್ಯದ ಅನುಕೂಲತೆಗೆ, ಬಳಸುವ, ಉಪಯೋಗಿಸುವ ಎತ್ತು, ಕತ್ತೆ, ಕುದುರೆ ಹಾಗೆಯೇ ಮನುಷ್ಯರನ್ನು(ತೊತ್ತು) ಹಸಿವು, ನೀರಡಿಕೆ, ನಿದ್ರೆ, ವಿಶ್ರಾಂತಿ, ಇತರ ಹಲವಾರು ರೀತಿಯಲ್ಲಿ ಆರೈಕೆ ಮಾಡಬೇಕು. ಉಪಚರಿಸಿದಾಗ ಮಾತ್ರ ಅವುಗಳು ನಮ್ಮನ್ನು ಬದುಕಿಸುತ್ತವೆ, ಪ್ರೀತಿಸುತ್ತವೆ, ನಮ್ಮ ಬದುಕಿಗೆ ಸಹಕಾರಿಯಾಗುತ್ತವೆ. ಅದು ಅವುಗಳಿಗೆ ಸಿಕ್ಕಬೇಕಾದ ಪ್ರಕೃತಿಯ ನೀತಿ, ನ್ಯಾಯವೂ ಹೌದು. ಇದು ವ್ಯತಿರಿಕ್ತಗೊಂಡು ಅವುಗಳಿಗೆ ನಾವು ಅನ್ಯಾಯವೆಸಗಿದಲ್ಲಿ ಅವುಗಳು ನಮ್ಮನ್ನು ಹತ್ತಲು ಅವಕಾಶ ಮಾಡಿಕೊಡುವುದಿರಲಿ, ಹತ್ತಿರವೂ ಸುಳಿಯಗೊಡದೇ ಪ್ರತಿಭಟಿಸುತ್ತವೆ. ಇದನ್ನರಿತು ಮನುಜರು ಸಕಲ ಜೀವರಾಶಿಗಳಿಗೆ ಸಲ್ಲಬೇಕಾದ ನ್ಯಾಯ ಸಲ್ಲಿಸಬೇಕೆಂದು ಅವುಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಬೇಕೆಂದು ಮೌನೇಶ್ವರರು ಉಪದೇಶಿಸುತ್ತಾರೆ.

೨೩೬

ಸರ್ವರ ಮಲವನ್ನು ಸರಿಯೆಂದು ಸೇವಿಸುವದು
ಶರೀರ ಕೊಯ್ದು ಉಣಿಸುವದು ಇದು
ಕಿರಿದೆನ್ನಬಹುದೆ ಹಿರಿದು ಕಾಣಾ, ಬಸವಣ್ಣ

ತಾತ್ಪರ್ಯ : ಮಲವೆಂದರೆ ಶರೀರಕ್ಕಂಟಿದ ಮಲತ್ರಯಗಳು. ಸ್ವೇದ, ಮೂತ್ರ, ಪರೀಷ ಇವು ಶಾರೀರಿಕ ಅಶುದ್ಧತೆಗಳು. ಇವುಗಳನ್ನು ಅಣವಮಲ, ಕಾರ್ಮಿಕ ಮಲ, ಮಾಯಾಮಲವೆಂದು ಕರೆಯಲಾಗುತ್ತದೆ. ಇಂತಹ ಮಯಾ ಮಲಗಳನ್ನು ಕಳೆದು ಹಾಕುವುದು, ಸರ್ವಾರ್ಥ ಕಾರ್ಯಸಿದ್ಧಿಗಾಗಿ ತನ್ನನ್ನೇ ತಾನು ಸಮರ್ಪಿಸಿಕೊಳ್ಳುವುದು, ಇದು ಬಹುದೊಡ್ಡ ತಪಸ್ಸಿಗೆ ಸಮವಾದದ್ದು. ಇಂತಹ ತ್ಯಾಗವನ್ನು ಸಣ್ಣ ವಿಷವೆಂದು ಪರಿಗಣಿಸಲಾಗದು.

೨೩೭

ಎತ್ತನೆ ಹೂಡಿದೆ ಕತ್ತೆಯ ಹೇರಿದೆ
ಹತ್ತಿ ಕುದುರೆಯ ನಾ ಬಳಲಿಸಿದೆ, ನನ್ನಂಥ
ಮಿಥ್ಯೆ ಮತ್ತಿಲ್ಲ, ಬಸವಣ್ಣ

ತಾತ್ಪರ್ಯ : ಸತ್ಯ, ಮಿಥ್ಯಗಳ ತಾಕಲಾಟ ಈ ಪದ್ಯದ ಮುಖ್ಯಾಂಶವಾಗಿದೆ. ಮನುಷ್ಯರೆಲ್ಲ ತಮ್ಮ ಕಾರ್ಯಸಾಧನೆಯ ಸ್ವಾರ್ಥಕ್ಕಾಗಿ ಪ್ರಾಣಿಗಳನ್ನು ಬಳಸಿಕೊಳ್ಳುತ್ತಾರೆ. ಎತ್ತುಗಳನ್ನು ಬೇಸಾಯಕ್ಕೆ, ಕತ್ತೆಯನ್ನು ಹೇರು ಹೇರಲಿಕ್ಕೆ, ದೂರ ದಾರಿ ಕ್ರಮಿಸಲು, ಐಷಾರಾಮಿಯಾಗಿ ಮೆರೆಯಲು ಕುದುರೆಯನ್ನು ಬಳಸಿಕೊಂಡು ಲೋಕದ ಜನ ಇವೆಲ್ಲವುಗಳನ್ನು ಬಹಳಷ್ಟು ಬಳಲಿಸಿದ್ದಾರೆ. ಆಯಾಸ ಪಡಿಸಿದ್ದಾರೆ. ಪ್ರಾಣಿಗಳನ್ನು ಹೀಗೆ ಸ್ವಾರ್ಥಕ್ಕಾಗಿ ಬಳಸುವುದು ಕೂಡ ಜೀವ ಹಿಂಸೆಯಾಗಿದೆ. ಅಂತಹ ಜೀವಹಿಂಸೆ ನನ್ನಿಂದಾಗಿದೆ ಎನ್ನುವ ನಿಗರ್ವತನ ಮೌನೇಶ್ವರರದು. ಪ್ರಾಣಿ ದಯೆಯ ಸಂಗತಿ ಇಲ್ಲಿ ಮುಖ್ಯವಾಗಿದೆ.

೨೩೮

ಕರುವಿನ ಬಾಯಿ ಹೊಡೆದು ಕರೆದುಂಡೆ ಕೊರೆದುಂಡೆ
ಕರ್ಮಿ ಪಾತಕಿ ಜಗಕೆಲ್ಲ ನಾ ನಿರ್ಮಳ
ವೆಂದು ಎನಲಾರೆ, ಬಸವಣ್ಣ

ತಾತ್ಪರ್ಯ : ನಿರ್ಮಲ ಮನಸ್ಸಿನವನಾಗಿರಬೇಕೆಂದರೆ ಹಸುಗಳ, ಹಸುಮಕ್ಕಳ ಆಹಾರವನ್ನು ಕಿತ್ತು ತಿನ್ನಬಾರದು. ಹಸು ಹಾಗೂ ಅದರ ಕರುವಿನ ಮೇಲೆ ಮಮತೆ, ಮಮಕಾರ ಪ್ರತಿ ಮಾನವನಿಗೂ ಇರಲೇಬೇಕು. ತಾಯಿಯ ಹಾಲನ್ನು ಕರುವಿಗೆ ಒಂದಿಷ್ಟು ಬಿಡದೆ ಹಿಂಡಿಕೊಂಡು ಎಳೆಯ ಮುಗ್ಧ ಕರುವನ್ನು ಹಸಿವಿನಿಂದ ಬಳಲುವಂತೆ ಮಾಡಿದ ನಾನು ಮಹಾಪಾಪಿ, ಪರಿಶುದ್ಧ ಮನಸ್ಸಿನವನಲ್ಲವೆಂದು ಪಶ್ಚಾತ್ತಾಪದಿಂದ ಬೆಂದು ಹೋದ ಪ್ರಸಂಗವನ್ನು ಈ ಪದ್ಯದಲ್ಲಿ ನಮ್ರತೆಯಿಂದ ನಿವೇದಿಸಿಕೊಳ್ಳಲಾಗಿದೆ.

೨೩೯

ಉಂಬೋದು ಹಿಡಿ ಅನ್ನ
ಕೊಂಬೋದು ವಕ್ಕುಡತಿ ನೀರು
ಡಂಬಕವೆಲ್ಲ ಹ್ಯಾಗಯ್ಯ
ಇದು ನಮ್ಮ ಸಂಗಯ್ಯನವರಿಗೆ ತರವಲ್ಲ, ಬಸವಣ್ಣ

ತಾತ್ಪರ್ಯ : ಪ್ರಭುವಾದ ಸಂಗಯ್ಯನೊಲುಮೆಗೆ ಪಾತ್ರನಾಗಬೇಕಾದಾಗ ಅನುಸರಿಸಬೇಕಾದ ಮಾರ್ಗಸೂಚಿ ಇಲ್ಲಿ ವ್ಯಕ್ತವಾಗಿದೆ. ನಾನಿಲ್ಲಿ ಸೇವಿಸುವ ಆಹಾರ ಹಿಡಿಯಷ್ಟು ಮಾತ್ರ, ಕುಡಿಯುವ ನೀರು ವಕ್ಕುಡತಿ, ಅಂದರೆ ಬೊಗಸೆ ನೀರು. ಈ ರೀತಿ ಇರಲಿಕ್ಕಾಗಿ, ಡಾಂಭಿಕತೆಯಾಗಿಲೀ ಮುಖವಾಡ ಹಾಕುವುದಾಗಲೀ ಆ ದೇವರ ದೇವ ಸಂಗಯ್ಯನಿಗೆ ಇಷ್ಟವಾಗದು. ಶೋಭೆ ತರದು. ಹಾಗಾಗಿ ಕಪಟತನ ಆಧ್ಯಾತ್ಮ ಸಾಧನೆಗೆ ಸಲ್ಲದು.

೨೪೦

ಲಕ್ಷ್ಮಿಯ ಮಗನಾಗಲಿ ಮುಕ್ಕಣ್ಣ ಶಿವನಾಗಲಿ
ಇಕ್ಕಳದ ಆಯ ಕೊಡಬೇಕು, ಕೊಡದಿದ್ದರೆ
ಎಂದೆಂದು ಬಿಡದು ಅವರ ಮೇಲೆ
ಲೆಕ್ಕವ ಹೊರಿಸಿ ಬಿಡಬೇಕು ಅವರ
ಹೊಕ್ಕಳ ಕೊಯ್ದ ಕುಡಗೋಲು
ಲೆಕ್ಕದ ಬಾಬಯ್ಯ ಚಾಜವ ಕೊಡಬೇಕು, ಬಸವಣ್ಣ

ತಾತ್ಪರ್ಯ : ಯಾವ ಶ್ರೇಷ್ಠ ಮನುಷ್ಯನಾಗಲೀ, ದೇವನೆಂದೆನಿಸಿಕೊಂಡವನಾಗಲೀ ಕಸುಬುದಾರರ ಅದರಲ್ಲೂ ಬಡಿಗ, ಕಮ್ಮಾರರ ಶ್ರಮಕ್ಕೆ ತಕ್ಕ ಪ್ರತಿಫಲ ಕೊಡಲೇ ಬೇಕೆನ್ನುವ ನೀತಿ ಹಾಗೂ ಬುದ್ಧಿ ಮಾತು ಇಲ್ಲಿ ವ್ಯಕ್ತವಾಗಿದೆ.

ಈ ಭೂಮಂಡಲದಲ್ಲಿ ಜನಿಸಿದ ಲಕ್ಷ್ಮಿಪುತ್ರ ಶ್ರೀಮಂತನೇ ಆಗಿರಲಿ, ಮೂರು ಕಣ್ಣುಳ್ಳ ಶಿವನೇ ಆಗಿರಲಿ ಅವರೆಲ್ಲರೂ ಇಕ್ಕಳ ಆಯ ಕೊಡಬೇಕು. ಆಯ ಎಂದರೆ ಕೃಷಿ ಹಾಗೂ ಇತರೆ ಉತ್ಪಾದನೆಗೆ ಸಹಕಾರಿಯಾಗುವ ಆಯುಧ ಉಪಕರಣ ಗಳನ್ನು ತಯಾರಿಸುವ ಬಡಿಗ, ಕಮ್ಮಾರರಿಗೆ ಕೊಡುವ ಬಾಬ್ತು. ಅಂದು ಅವರಿಗೆ ಸಂದಾಯವಾಗಬೇಕಾದ ಧಾನ್ಯರೂಪದ ವಾರ್ಷಿಕ ವಂತಿಗೆ. ಇಕ್ಕಳ ಪಂಚಾಳರ ಪ್ರಮುಖ ಅಸ್ತ್ರ. ಆಯ ಕೊಡದಿದ್ದರೆ ಅದು ಎಂದೆಂದಿಗೂ ಬಿಡದು. ಯಾಕೆಂದರೆ ಅಂತಹ ವ್ಯಕ್ತಿ ಮತ್ತೆ ಇಕ್ಕಳ ಹಿಡಿಯುವವನ ಹತ್ತಿರ ಬರಲೇಬೇಕು. ಈ ಆಯದ ಲೆಕ್ಕವನ್ನು ಅಂತಹ ತಪ್ಪಿತಸ್ಥರ ಮೇಲೆ ಹೊರಿಸುತ್ತಲೇ ಹೋಗಬೇಕು. ತಾಯಿ ಗರ್ಭದಿಂದ ಬರುವಾಗ ಮಗುವಿನ ದೇಹದ ಹೊಕ್ಕುಳಕ್ಕೂ ತಾಯಿಯ ಗರ್ಭ ಕೋಶಕ್ಕೂ ಸಂಬಂಧಿಸಿ ಆಹಾರ ಸರಬರಾಜು ಮಾಡಿದ ಹೊಕ್ಕುಳದ ಹುರಿ(ಬಳ್ಳಿ) ಯನ್ನು ಕೊಯ್ಯಲು ಇಕ್ಕಳದಲ್ಲಿ ಹಿಡಿದು ಮಾಡಿದ ಕುಡುಗೋಲೇಬೇಕು. ಅದಕ್ಕೆ ಪ್ರತಿಯಾಗಿ ಬಾಬ ಅಥವಾ ಚಾಜಯೆಂದರೆ ಧಾನ್ಯರೂಪದ ಕಾಣಿಕೆ ಕೊಡುವುದು ಸಂಪ್ರದಾಯ. ಅದನ್ನು ಎಂದಿಗೂ ಮೀರಲಾಗದು. ತಪ್ಪಿಸಿಕೊಳ್ಳಲಾಗದು. ಶ್ರಮದ ಪ್ರತಿಫಲ ನೀಡಲೇಬೇಕೆಂಬುದು ಇಲ್ಲಿನ ಅರ್ಥ. ಜೊತೆಗೆ ಪಾಂಚಾಳರಿಗೆ ಸಲ್ಲಬೇಕಾದ ಬಾಬ ಮತ್ತು ಚಾಜಗಳ ವಿವರವನ್ನು ಇಲ್ಲಿ ನೋಡಬಹುದು.

೨೪೧

ಲಾಳಿಯಲಿ ಅಂಗವಸ್ತ್ರ ಮಳೆಯಲ್ಲಿ ಪ್ರಸಾದವು
ಸುವರ್ಣದಲ್ಲಿ ಮಂಗಳಸೂತ್ರ ರಾಜ್ಯಕ್ಕೆ
ಬಾಳ್ವೆಯ ಕಾಣಾ, ಬಸವಣ್ಣ

ತಾತ್ಪರ್ಯ : ಸುಸೂತ್ರ ಸುಗಮ ಸಮೃದ್ಧ ರಾಜ್ಯಕ್ಕೆ ಬೇಕಾಗುವ ಮೂಲಭೂತ ಅವಶ್ಯಕತೆಯನ್ನು ಇಲ್ಲಿ ನಿವೇದಿಸಲಾಗಿದೆ. ಆ ಮೇಘರಾಜ ಸುರಿಸಿದ ಮಳೆಯಿಂದ ಸಮೃದ್ಧ ಫಸಲು ಬಂದು ಸುಭಿಕ್ಷೆಯಾಗಿ, ಪ್ರಸಾದವೆಂಬುದು ಉಕ್ಕಿ ಹರಿಯುತ್ತದೆ. ಮಾನ, ಮರ್ಯಾದೆ ಮುಚ್ಚಿಕೊಳ್ಳಲು ಗೌರವಾನ್ವಿತವಾಗಿ ಬದುಕಲು ಮಗ್ಗದಿಂದ ನೇಯ್ದ ವಸ್ತುಗಳು ಬೇಕು. ಪತಿವ್ರತೆಯ ಕೊರಳಲ್ಲಿ ಕರಿಮಣಿ ಸರದೊಂದಿಗೆ ಬಂಗಾರದ ಮಂಗಲಸೂತ್ರವಿದ್ದಲ್ಲಿ ಒಂದು ರಾಜ್ಯ ಸುಭಿಕ್ಷವೂ, ಸಮೃದ್ಧವೂ ಆದದ್ದೆಂದು ತಿಳಿಯಬೇಕು.

೨೪೨

ಅರವಟ್ಟಿಗೆ ಇಕ್ಕಿಸಿ, ಕೆರೆ ಬಾವಿ ಕಟ್ಟಿಸಿ
ಕರುವಿಗೆ ತಾಯ ಮೊಲೆ ಎರಡು ಉಣಬಿಟ್ಟರೆ
ಕರೆವ ಮಳೆಯೇನು ಕಡಿಮೆ?, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಸೂಚಿಸಿದ ಸುಖೀ ಸಮಾಜದ ಕಲ್ಪನೆ ಈ ವಚನದಲ್ಲಿದೆ. ಪ್ರಯಾಣಿಕರಿಗೆ ಮಾರ್ಗಾಯಾಸ ಪರಿಹರಿಸಲು ಅಲ್ಲಲ್ಲಿ ಅರವಟ್ಟಿಗೆ ಅಂದರೆ ನೀರಿನ ವ್ಯವಸ್ಥೆ ಅನ್ನ ಛತ್ರದ ವ್ಯವಸ್ಥೆಯಾಗಬೇಕು. ಅದಕ್ಕಾಗಿ ಯಥೇಚ್ಛವಾಗಿ ಕೆರೆ, ಕಟ್ಟೆ, ಬಾವಿ ತೋಡಿಸುವುದು ಲೋಕದ ಜನರ ಆದ್ಯ ಕರ್ತವ್ಯವಾಗಬೇಕು. ಅದರಂತೆಯೇ ಜಾನುವಾರಗಳು ಅಧಿಕವಾಗಲು, ಶಕ್ತಿವಂತವಾಗಿ ಬೆಳೆಯಲು ಕರುಗಳಿಗೆ ತಾಯಿಯ ಮೊಲೆ ಹಾಲನ್ನು ಯಥೇಚ್ಛವಾಗಿ ಕುಡಿಯಲು ಬಿಡಬೇಕೆಂದು ಹೇಳುತ್ತ ಇಂತಹ ವಾತಾವರಣ ಸಮಾಜದಲ್ಲಿ ಉಂಟಾದರೆ ಮಳೆ ಬೆಳೆಗೆ ಕೊರತೆ ಇಲ್ಲವೆನ್ನುವ ಭವಿಷ್ಯ ಅವರದು. ಮೌನೇಶ್ವರರು ಕಂಡ ಸುಖೀ ಸಮಾಜದ ಕನಸೂ ಅದೇ ಆಗಿದೆ.

೨೪೩

ಅಂಕುಶವಿಲ್ಲದೆ ಆನೆ ನಡೆಯದು
ಶಂಕರನಿಲ್ಲದ ಸಂಸಾರ ನಡೆಯದು, ಲೋಕದ
ಮಂಕುಗಳಿಗೇಕೆ ತಿಳಿಯದು, ಬಸವಣ್ಣ

ತಾತ್ಪರ್ಯ : ಕಟ್ಟು ಪಾಡುಗಳಿಲ್ಲದ ನಿಯಂತ್ರಣವಿಲ್ಲದ ಬದುಕು ಅಥವಾ ಸಮಾಜ ಅಡ್ಡದಾರಿ ಹಿಡಿದೀತೆಂಬ ಎಚ್ಚರದ ಮಾತು ಹೇಳುತ್ತಾರೆ.

ದೈತ್ಯಾಕಾರದ ಶಕ್ತಿವಂತ ಆನೆ ಸರಳವಾಗಿ ಮುನ್ನಡೆಯಬೇಕಾದರೆ ಮಾವುತ ಬೇಕು. ಮುಖ್ಯವಾಗಿ ಮಾವುತನ ಕೈಗೊಂದು ಅಂಕುಶ ಬೇಕೇ ಬೇಕು. ಅದೇ ತೆರನಾಗಿ ಮನುಜ ಕುಲಜರಿಗೆಲ್ಲ ಶಂಕರನೆಂಬ ಅಂಕುಶವಿದ್ದಾಗ ಮಾತ್ರ ಬದುಕಿನ

ಸೂತ್ರ ನಿಯಂತ್ರಣದಲ್ಲಿರುತ್ತದೆ. ಇಂತಹ ಸತ್ಯ ಈ ಲೋಕದಲ್ಲಿ ಹುಟ್ಟಿ ಮಂಕು ಕವಿಸಿಕೊಂಡ ಮನುಜರಿಗೆ ತಿಳಿಯದೇ ಹೋಗಿದೆಯೆಂದು ವ್ಯಥೆಪಡುತ್ತಾರೆ ಮೌನೇಶ್ವರರು.

೨೪೪

ರೂಢಿಗೀಶ್ವರನೊಬ್ಬರೊಡದು ಮಾಡಿದವರುಂಟೆ
ಮಡುವಿನ ಉದಕ ಎರೆದೆರದು ಲೋಕದೊಳು
ಕಡೆ ಮಾಡಿದರು ಭವಿಗಳು ಇವರ
ಒಡಲಿಗೆ ಮನೆ ಮನೆಯ ತಿರುಗಿಸಿದೆ, ಬಸವಣ್ಣ

ತಾತ್ಪರ್ಯ : ಜಗತ್ತಿಗೆ ಈಶ್ವರನೊಬ್ಬನೇ. ಆತನನ್ನೇ ವಿಭಜಿಸುವುದುಂಟೇ? ಆದರೂ ಈಶ್ವರನನ್ನೇ ಬಂಡವಾಳ ಮಾಡಿಕೊಂಡು ಬದುಕ ಬಯಸಿದ ಭವಿಗಳು ಒಂದೇ ಮಡುವಿನ ನೀರನ್ನೇ ಬೇರೆ ಬೇರೆಯ ಸ್ಥಳಗಳಲ್ಲಿ ಎರೆದು ಬೇರೆ ಬೇರೆಯಾಗಿ ಬಿಂಬಿಸಿದಂತೆ ತಾವೇ ಶಿವನ ಅವತಾರಿಗಳೆಂದು ಹೇಳಿಕೊಂಡವರು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಮನೆ ಮನೆ ಅಲೆಯುವಂತೆ ಆ ಈಶ್ವರನೇ ಮಾಡಿದ್ದಾನೆ. ಆದರೂ ಸತ್ಯ ಅವರಿಗೆ ಮನವರಿಕೆಯಾದಂತೆ ಕಾಣುವುದಿಲ್ಲ. ಅಜ್ಞಾನ ಎಂಬುದು ಬಹುದೊಡ್ಡದು. ಅದರಿಂದ ಹೊರಬರಲು ತೀವ್ರತರ ಪ್ರಯತ್ನ ಅತ್ಯಾವಶ್ಯಕ.

೨೪೫

ಉಪ್ಪು ಊಟಕ್ಕೆ ಲೇಸು ಕಪ್ಪು ನೊಸಲಿಗೆ ಲೇಸು
ತಪ್ಪು ಲೇಸಯ್ಯ ಮರ್ಧನಕ್ಕೆ, ಕ್ಷೀರಕ್ಕೆ
ಹೆಪ್ಪು ಲೇಸಯ್ಯ, ಬಸವಣ್ಣ

ತಾತ್ಪರ್ಯ : ಪರಸ್ಪರ ಕಾರ್ಯ ಕಾರಣ ಸಂಬಂಧವನ್ನು ಇಲ್ಲಿ ಕಾಣಬಹುದು. ಉಪ್ಪು ಅನ್ನಕ್ಕಿಂತ ಸಣ್ಣದಾದರೂ ಊಟದ ರುಚಿಯಲ್ಲಿ ಅದರ ಪಾತ್ರ ದೊಡ್ಡದು. ಹಾಗೆ ದೇಹ ದೊಡ್ಡದಾದರೂ ಸೌಂದರ್ಯ ಹೆಚ್ಚಿಸಲು ಅಥವಾ ಧಾರ್ಮಿಕ ಗುರುತು ತೋರಲು ಕಪ್ಪು(ಗಂಧ, ಕಾಡಿಗೆ) ಬಹುಮುಖ್ಯ. ಯಾರನ್ನಾದರೂ ದಂಡಿಸಬೇಕು ಮರ್ಧಿಸಬೇಕೆಂದರೆ ಏನಾದರೂ ತಪ್ಪಿನ ಕಾರಣಗಳಿರಬೇಕು. ಅದೇ ರೀತಿ ಹಾಲು ಮೊಸರಾಗಿ ಬೆಣ್ಣೆ ತುಪ್ಪವಾಗಲು ಹೆಪ್ಪು(ಹುಳಿಮೊಸರು) ಬಹುಮುಖ್ಯ. ವಸ್ತುವಿನ ಕ್ರಿಯೆ ಮತ್ತು ಪ್ರಕ್ರಿಯೆಯನ್ನಿಲ್ಲಿ ಕಾಣಬಹುದು.

೨೪೬

ಹಿತ್ತಲ ಹಿರಿಮನೆ ಪಟ್ಟಶಾಲೆ ದೇವರ ಜಗಲಿ
ಸುಟ್ಟ ಸುಡಗಾಡು ಮಸವಂಟಿಗೆ ಎಂಭತ್ನಾಲ್ಕು ಲಕ್ಷ

ಜೀವನವು ಸತ್ತು ಹೆತ್ತಂಥ ಹೊಲೆಯಂಗೆ
ಚೊಕ್ಕಟವ ನಾನೆಲ್ಲಿ ಅರಸಲಿ ಎಂದರೆ
ಮುಟ್ಟಿದೆ ಎನ್ನ ಗುರುಪಾದ, ಬಸವಣ್ಣ

ತಾತ್ಪರ್ಯ : ತಾನಿರುವ ಜಾಗವನ್ನೇ ಮನುಷ್ಯ ದೇವರು ಹಾಗೂ ದೇವಸ್ಥಾನವಾಗಿ ಪರಿವರ್ತಿಸಿಕೊಳ್ಳಬೇಕೆನ್ನುವ ವಿಚಾರ ಇಲ್ಲಿದೆ. ಹಿತ್ತಲವೇ ಅರಿವಿನ ಮನೆ. ಪಡ ಸಾಲಿಯೇ ದೇವರ ಮನೆ ಅಂದರೆ ಪೂಜಾಸ್ಥಳ. ಎಂಭತ್ನಾಲ್ಕು ಲಕ್ಷ ಜೀವ ರಾಶಿಗಳನ್ನು ಸೃಷ್ಟಿ, ಸ್ಥಿತಿ, ಲಯ ಮಾಡಿದ ಹೊಲೆಯನಿಗೆ ಸ್ವಚ್ಛತೆಯನ್ನು ಕೇಳಿದರೆ ಹುಡುಕುವುದು ಕಷ್ಟ. ಕಾರಣ ಕೆಲಸಮಾಡುವ ಜಾಗ ವಿವಿಧ ಪರಿಕರಗಳಿಂದ ಕಸಗಳಿಂದ ಹಾಗೂ ತ್ಯಾಜ್ಯಗಳಿಂದ ತುಂಬಿರುತ್ತದೆ. ಅದೇ ರೀತಿ ಹೊಲೆ ಅಂದರೆ ಮುಟ್ಟೇ ಪಿಂಡವಾಗಿ ಪರಿವರ್ತಿತವಾಗುವಾಗ ವಿರಕ್ತನಂತೆ ನಿರ್ಮಲವಾಗಿರುವುದು ಸಾಧ್ಯವಿಲ್ಲ. ಶುದ್ಧ ಸಂಸಾರಿಯಾದವನಲ್ಲಿ ಕೇವಲ ದೇಹದ ಶುಚಿತ್ವವನ್ನು ಕಾಣಲಾಗದು. ಗುರುವಿನ ಪಾದ ಮುಟ್ಟಿ ಅನುಗ್ರಹ ಪಡೆದ ಜ್ಞಾನವಂತನಾದಾಗ ಮಾತ್ರ ಮನುಷ್ಯ ದೇಹ ಮತ್ತು ಮನಸ್ಸನ್ನು ಶುಚಿಯಾಗಿರಿಸಿಕೊಳ್ಳಬಲ್ಲ. ಶುಚಿ ಎನ್ನುವುದು ತೊಳೆವ ಮೈಲಿಗೆಯಲ್ಲ ತಿಳಿವ ಅರಿವು ಎಂಬುದು ಇಲ್ಲಿನ ಅರ್ಥ.

೨೪೭

ಪಾತಕ ಮನುಜರ ಮೋತಿಯ ಕಾಣಬಾರದೆಂದು
ಪಾತಾಳಕ್ಕೆ ಇಳಿದ ಪ್ರಭುದೇವರು ಲೋಕದಲಿ
ಮತ್ತೇನು ಕೆಲಸವು ನರರಿಗೆ, ಬಸವಣ್ಣ

ತಾತ್ಪರ್ಯ : ಲೋಕವೆಲ್ಲ ಪಾತಕಿಗಳಿಂದ ಅಧರ್ಮಿಗಳಿಂದ ತುಂಬಿ ಹೋಗಿದೆ. ಇಂತಹವರನ್ನು ಬದಲಾಯಿಸಲು ಬಂದ ಅಲ್ಲಮನೇ ಕೊನೆಗೆ ಸೋತು ಪಾತಾಳ ಕ್ಕಿಳಿಯ ಬೇಕಾಯಿತು. ಬಹುದೊಡ್ಡ ಬದಲಾವಣೆಗೆ ಕ್ರಾಂತಿ ಹಾಡಿದ ಅನುಭಾವಿ ಚಳುವಳಿಯ ಅವಸಾನವನ್ನು ಪದ್ಯ ಹೇಳುವಂತಿದೆ. ಇಂತಹ ಅಜ್ಞಾನಿಗಳ ಸಹವಾಸವೇ ಬೇಡವೆಂದು ಸುಜ್ಞಾನಿಯಾದ ಪ್ರಭು ಅಸ್ತಂಗತನಾದ. ಅಂದ ಮೇಲೆ ನರಕುರಿಗಳಿಗೆ ಇನ್ನೂ ಇಂಬು ದೊರೆತಂತಾಯಿತು ತಮ್ಮ ಹೀನ ಕೆಲಸ ಮಾಡಲು.

೨೪೮

ಪೊಡವಿಯನಾಳುವ ಒಡೆಯಂಗೆ ಮುನಿದರೆ
ಒಡವಿ ಇಲ್ಲ ಅವರಿಗೆ ಮನೆ ಇಲ್ಲ
ನುಡಿದದ್ದು ನುಡಿಯಲ್ಲ ಹರಕೆಯಯ್ಯ, ಬಸವಣ್ಣ

ತಾತ್ಪರ್ಯ : ಈ ಜಗತ್ತನ್ನು ಮುನ್ನಡೆಸುತ್ತಿರುವ ದೇವನೊಂದಿಗಾಗಲಿ, ಜಗತ್ತು ಪಾಲಿಸುವ ಆಳರಸರೊಂದಿಗಾಗಲಿ ಮುನಿದರೆ, ತಕರಾರು ಮಾಡಿಕೊಂಡರೆ ಇರಲು

ಮನೆ, ಉಡಲು ವಸ್ತ್ರ, ಒಡವೆ, ಉಣಲು ಊಟ ಸಿಗಲಾರದು. ಅವರು ಬೈದರೆ ಅದನ್ನು ಬೈಗುಳವೆಂದು ಸ್ವೀಕರಿಸದೆ ಆಶೀರ್ವಾದ ಎಂದು ಭಾವಿಸಬೇಕು. ಮಾತು ಮಾಣಿಕ್ಯವಾಗದ ಹೊರತು, ಜ್ಯೋತಿಯಾಗದ ಹೊರತು ಜ್ಞಾನದ ವಿಕಾಸವಾಗದು. ಅರಿವು ಮೂಡದು. ಕಾರಣ ಮನುಷ್ಯ ಹಂಗಿನಿಂದ ಹೊರಬರಬೇಕೆಂದರೆ ಸ್ವಾನುಭವ ಹಾಗೂ ಸ್ವಾವಲಂಬನೆ ಮುಖ್ಯವಾದುದು. ಇರದೆ ಹೋದರೆ ಇನ್ನೊಬ್ಬರ ಸೇವೆ ಮಾಡಿ ಗುಲಾಮನಂತೆ ಧ್ವನಿ ಹಾಗೂ ಅಸ್ತಿತ್ವ ಕಳೆದುಕೊಂಡು ಬದುಕಬೇಕು.

೨೪೯

ತಪ್ಪು ಹೊಂದಿತು ಸ್ಥಾವರಗೇರಿಯ ಸ್ಥಳಕೆ
ಕಪ್ಪು ಹೊಂದಿತು ಕಳ್ಳರದೆಸೆಯಿಂದ
ಇಪ್ಪುದಕ್ಕೆ ಯಾವುದು ಹಾದಿಯು, ಬಸವಣ್ಣ

ತಾತ್ಪರ್ಯ : ಆ ಕಾಲದಲ್ಲಿ ನಡೆದ ಕಳ್ಳತನದಿಂದಾಗಿ ಒಂದು ಊರಿಗೆ ಕೆಟ್ಟ ಹೆಸರು ಬಂದಿರುವುದನ್ನು ವಚನ ಸೂಚಿಸುವಂತಿದೆ. ಯಾವುದೇ ತಪ್ಪು, ಅಪವಾದ ಮತ್ತು ಕಳ್ಳತನದಿಂದಾಗಿ ತಾವರಗೆರೆ(ಬಹುಶಃ ಇಂದಿನ ಕುಷ್ಟಗಿ ತಾಲೂಕಿನ ಗ್ರಾಮ) ಊರಿಗೆ ಕೆಟ್ಟ ಹೆಸರು ಬಂದಿರಬೇಕು. ಇರುವುದಕ್ಕೆ ಯಾವುದು ಹಾದಿ ಎನ್ನುವಲ್ಲಿ ವಚನಕ್ಕೆ ವಿಶೇಷ ಅರ್ಥವಿದೆ. ದುಡಿಯಲು ಕೆಲಸವಿಲ್ಲದೆ ತಿನ್ನಲು ಅನ್ನವಿಲ್ಲದೆ ಇರುವ ತಾವರಗೇರಿ ಪರಿಸರದ ಜನ ಬದುಕಿನ ಅಗತ್ಯಕ್ಕಾಗಿ ಇಂತಹ ಅಪರಾಧಗಳಲ್ಲಿ ಭಾಗವಹಿಸುತ್ತಿದ್ದಿರಬಹುದೇ?

೨೫೦

ರಂಡೇರು ಮಕ್ಕಳ ಹಡೆದರೆ
ಭಂಡಲ್ಲವೆ ಜಗದೊಳಗೆ
ಗಂಡರು ಬೇಕು ಮರೆಗೊಂಬುವುದಕ್ಕೆ, ಬಸವಣ್ಣ

ತಾತ್ಪರ್ಯ : ರಂಡೇರು ಅಂದರೆ ಸೂಳೆಯರು, ಗಂಡನಿಲ್ಲದವರು ಮಕ್ಕಳ ಹಡೆದರೆ ಅದು ಭಂಡತನವೆನಿಸುವುದು. ಗಂಡುಳ್ಳವರೇ ಹಡೆದರೆ ಸಾಕಿ ಸಲುಹಿ ಸತ್ಪ್ರಜೆಗಳನ್ನಾಗಿಸುವುದು, ಜನಸಂಖ್ಯಾ ನಿಯಂತ್ರಣ ಮಾಡುವುದು ಕಠಿಣವಾಗಿರುವಾಗ, ಪರದೇಶಿ ಮಕ್ಕಳು ಹುಟ್ಟಿ ಅನಾಥರಾಗುವರು. ಅನ್ನಕ್ಕೆ ಅಶನಕ್ಕೆ ಪರದಾಡುವರು. ಇಂತಹ ಅನೈತಿಕ ಸಂತಾನವನ್ನು ಮುಚ್ಚಿಕೊಳ್ಳಲು ಸೂಳೆಯರಿಗೆ ಗಂಡ ಬೇಕು. ಅಂದರೆ ಹುಟ್ಟಿದ ಕೂಸು ಅನಾಮಧೇಯನಾಗುವ ಅಪಾಯವನ್ನು ಮೌನೇಶ್ವರರು ಸೂಚಿಸುತ್ತಾರೆ. ಅವರ ಸಾಮಾಜಿಕ ಕಳಕಳಿ ಇಲ್ಲಿ ಎದ್ದು ಕಾಣುತ್ತದೆ.

೨೫೧

ಸಾಸಿರ ನಾಮದ ದ್ಯಾಸವ ಪೊಗಳುವರು
ವ್ಯವಸಾಯವಿಲ್ಲದ ಮನೆಯಲ್ಲ ಮರ್ತ್ಯದಾ
ದಾಸ ಜಂಗಮದ ಫಲವೇನು ಇವರೆಲ್ಲ
ಬೇಸರಿಕೆಗೆ ಒಡಲ ಹೊರೆದಾರು
ಮಾನ್ನೆರಿಗೆ ಉಪದೇಶಿಸ ಬಂದಾನೆ, ಬಸವಣ್ಣ

ತಾತ್ಪರ್ಯ : ಸಾವಿರಾರು ಬಾರಿ ಸತತ ದೇವರ ನಾಮಸ್ಮರಣೆಯೊಂದನ್ನೆ ಮಾಡಿದರೆ ಅದನ್ನು ಹೊಗಳುತ್ತಾರೆ. ಆದರೆ ಬದುಕು ನಡೆಯದು. ಶಿವನಾಮಸ್ಮರಣೆಯೊಂದಿಗೆ ಬೇಸಾಯ ಅಥವಾ ಕೃಷಿಯನ್ನು ಮಾಡಬೇಕು. ಅಂದಾಗ ಬದುಕು ಹಸನಾಗುತ್ತದೆ. ಶಿವಶರಣರು, ದಾಸರು ಎಂದು ಹೇಳಿಕೊಂಡು ಜೋಗಿ ಜಂಗಮರೆಂದು ವೇಷ ಡಂಬಕತನದಿ ಭಿಕ್ಷೆಗೆ ಬಂದು ಜನರ ಪೀಡಿಸುವರು. ಇವರ ಕೆಲಸಕ್ಕೆ ನಿಷ್ಠೆಯೆಂಬುದಿರುವುದಿಲ್ಲ. ಹೊಟ್ಟೆ ಹೊರೆವಪರಿ ಮಾತ್ರ ಅವರದು. ಅಂತಹ ಡಾಂಭಿಕರಿಂದ, ಅಜ್ಞಾನಿಗಳಿಂದ ಮರ್ತ್ಯದ ಮಾನವರಿಗೆ ಯಾವ ಪ್ರಯೋಜನವೂ ಆಗದು.

೨೫೨

ಪಾಡುಪಂಥವನುಳ್ಳ ನಾಡಿಗನಾಗಬೇಕಲ್ಲದೆ
ಹಾಡೇನು, ಕೆಲಸ ಹಳದಾದವು, ಲೋಕದ
ಪಾಡೇನು, ಕೆಲಸ ಬರಿದಾದವು, ಬಸವಣ್ಣ

ತಾತ್ಪರ್ಯ : ಮನುಷ್ಯ ತನ್ನದೆ ಆದ ಬದುಕಿನ ಕ್ರಮವನ್ನು ರೂಪಿಸಿಕೊಳ್ಳಬೇಕು. ಸತ್ಪ್ರಜೆ, ಸದ್ಗೃಹಸ್ತನೆಂದು ಗುರುತಿಸಿಕೊಳ್ಳಬೇಕು. ಯಾವತ್ತೂ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಸ್ವಾನುಭಾವವುಳ್ಳವನಾಗಬೇಕು. ಇಲ್ಲದೆ ಹೋದರೆ ಕೆಲಸವಿಲ್ಲದೆ ಸೋಮಾರಿಯಾಗಿ ಸಮಾಜ ಕಂಟಕನಾಗುತ್ತಾನೆ. ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗಳು ಕುಸಿಯುತ್ತವೆ. ಶ್ರಮ ಮತ್ತು ಸಮಸಮಾಜ ಪರಿಕಲ್ಪನೆಯೊಂದನ್ನು ಮೌನೇಶ್ವರರು ಇಲ್ಲಿ ಚಿತ್ರಿಸುತ್ತಾರೆ.

೨೫೩

ಕೆರೆತುಂಬಿ ತೊರೆತುಂಬಿ ವರತಿಗೆ ಬರುವದು
ದೊರೆತನವ ಎಂದೆಂದಿಗೆ ಬಯಸಬೇಡ, ಬಸವಣ್ಣ.

ತಾತ್ಪರ್ಯ : ಜೀವನದ ಪ್ರಮುಖ ತತ್ವವನ್ನು ವಚನ ಹೇಳುತ್ತದೆ. ನೀರಾಗಲಿ ಶ್ರೀಮಂತಿಕೆ ಸಂಪತ್ತಾಗಲೀ ಮೇಲಿನಿಂದ ಕೆಳಕ್ಕೆ ಹರಿಯುವುದು ಅದರ ಗುಣ. ಮಳೆಯ ನೀರಿನಿಂದ ಮೊದಲು ಕೆರೆತುಂಬಿ, ತೊರೆ ತುಂಬಿ, ವರತಿಗಳು ನಂತರ ತುಂಬುತ್ತವೆ. ಇದು ವಿರುದ್ಧವೂ ಆಗಬಹುದು. ಮೊದಲು ಒರತೆ(ಚಿಕ್ಕದು),

ತೊರೆ(ಹಳ್ಳ) ಹರಿದು ಬಂದ ಮೇಲೆ ಕೆರೆ ತುಂಬಬಹುದು. ನೀರಿನ ಸಹಜ ಮತ್ತು ಕೃತ್ರಿಮ ಹರಿಯುವಿಕೆಯನ್ನು ವಚನ ಹೇಳುತ್ತದೆ. ಸೃಷ್ಟಿ ನಿಯಮ ಹೀಗಿರುವಾಗ ನನ್ನನ್ನು ಸಾಮಾನ್ಯ ಮನುಷ್ಯನಾಗಿ ಇರುವಂತೆ ಮಾಡು, ಹೊರತಾಗಿ ದೊರೆಯನ್ನಾಗಿ ಮಾಡಬೇಡ ಎನ್ನುವ ನಿರಹಂಭಾವ ಇಲ್ಲಿದೆ. ಕೊಡುವ ದೊಡ್ಡಸ್ತಿಕೆಗಿಂತ ಪಡೆವ ದೀನತೆಯೇ ಶ್ರೇಷ್ಠವಾದುದು ಎಂಬುದು ವಚನದ ಭಾವ.

೨೫೪

ಕಂಚುಗಾರರ ಮನೆಯ ಕಂಚಿನ ತೆರನಂತೆ
ಮಿಂಚು ಹಾರಿದರೆ ಬೆಲೆಯಿಲ್ಲ ಮರ್ತ್ಯಕ್ಕೆ
ಸಂಚು ಹಾರಿದರೆ ನೆಲೆಯಿಲ್ಲ, ಬಸವಣ್ಣ

ತಾತ್ಪರ್ಯ : ಅಹಭೂನ ಗೋತ್ರೋದ್ಭವನಾದ ಕಂಚುಗಾರನ ಕೆಲಸವೆಂದರೆ ಕಂಚಿನ ಪಾತ್ರೆ ಹಾಗೂ ದೇವರ ಮೂರ್ತಿ ಮತ್ತು ಕಳಸ ಹಾಗೂ ಪೂಜಾ ಸಾಮಗ್ರಿಗಳನ್ನು ತಯಾರಿಸುವುದು. ಕಂಚುಗಾರನ ಮನೆಯಲ್ಲಿ ನಿರ್ಮಿತವಾಗುವ ಎಲ್ಲ ಕಂಚಿನ ಸಾಮಗ್ರಿಗಳು ಮಿರಿ ಮಿರಿ ಮಿಂಚುತ್ತಿರುತ್ತವೆ. ಮಿಂಚುವ ಮೆರಗು ನೀಡುವುದು ಕಂಚುಗಾರನ ವೃತ್ತಿ ಮತ್ತು ವ್ಯವಹಾರ ಕೌಶಲ್ಯವಾಗಿದೆ. ವಸ್ತುಗಳು ಮಿಂಚಿದರೆ ಸಾಕಾಗದು ಅವು ಉಪಯೋಗಕ್ಕೆ ಬರಬೇಕು. ಆಕಾಶದಲ್ಲಿ ತೋರುವ ಮಿಂಚು ಕೇವಲ, ಮಿಂಚಿ ಮಾಯವಾದರೆ ಸಾಲದು ಅದು ಮಳೆ ತರಿಸಬೇಕು. ಭೂಮಿಗೆ ಉಣಿಸಿ ಬೆಳೆ ತರಿಸಿ ಸಕಲ ಜೀವಜಂತುಗಳಿಗೂ ಉಣಲಿಕ್ಕೆ ಆಹಾರವಾಗಿಸಬೇಕು. ಅಂದಾಗ ಮಿಂಚಿನ ಸಾರ್ಥಕತೆಯಾಗುತ್ತದೆ.

ಯಾವುದೇ ಕೆಲಸ ಕೇವಲ ತೋರಿಕೆಯದಾಗದೆ ಅದು ಬದುಕನ್ನು ರೂಪಿಸುವ ಮುನ್ನಡೆಸುವ ಶಕ್ತಿ ನೀಡಬೇಕೆನ್ನುವುದು ವಚನದ ಭಾವ. ಥಳುಕು ಬಳಕುಗಳೇ ಬದುಕಲ್ಲ. ಅದನ್ನು ಮೀರಿದ ಆತ್ಮಜ್ಞಾನವೇ ಬದುಕಾಗಬೇಕು.

೨೫೫

ಸತ್ತನೆಂದು ಸ್ವಾಮಿಯನು ಹೊತ್ತವರು ನಾಲ್ವರು
ಮುತ್ತಿನ ಗದ್ದಿಗಿಯ ಮ್ಯಾಲೆ ಮುಸುಕಿಟ್ಟು ಮೋನಯ್ಯ
ಹೊತ್ತವರ ಕಳುಹಿ ಬಂದಾನೆ, ಬಸವಣ್ಣ

ತಾತ್ಪರ್ಯ : ಅಜ್ಞಾನ ಮತ್ತು ಅಂಧಕಾರ ತುಂಬಿದ ಮನುಷ್ಯನ ಮನಸ್ಸಿಗೆ ಮೌನೇಶ್ವರ ರಂಥ ಮೌನಯೋಗಿಯ ನಡವಳಿಕೆ ಸತ್ತಂತೆ ಕಂಡಿರಬಹುದು. ಅಂತಹವರು ನಾಲ್ಕು ಜನ ಹೊತ್ತು ಒಯ್ಯುತ್ತಿದ್ದಾಗ, ಹೊತ್ತವರನ್ನೇ ಸ್ಮಶಾನಕ್ಕೆ ಕಳಿಸಿದ ಎನ್ನುವಲ್ಲಿ ಜ್ಞಾನಿಯ ಜಾಗೃತಿ ಮತ್ತು ಅಜ್ಞಾನಿಯ ಅಜಾಗೃತ ಸ್ಥಿತಿಯನ್ನು ವಚನ ಹೇಳುವಂತಿದೆ. ಇಲ್ಲಿ ನಾಲ್ಕು ಎನ್ನುವುದು ಚತುರ್ವಿದ ಪುರುಷಾರ್ಥಗಳನ್ನು ಚಾತುರ್ವರ್ಣವನ್ನು ಸೂಚಿಸುವ ಸಾಧ್ಯತೆ ಇದೆ.

೨೫೬

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಹೃದಯದೋಳ್ಕಪಟ ತುದಿ ನಾಲಿಗಿಯಲಿ ಶರಣಾರ್ಥಿಯೆಂದೆನುತ
ಇಂತಹ ವಿಕಲ್ಪದ ಅಧಮ ಮಾನವರುಂಟು
ಧರೆಯೊಳಗೆ, ಬಸವಣ್ಣ

ತಾತ್ಪರ್ಯ : ಮಾನವನ ಕಪಟತನವನ್ನು ವಚನ ಬಿಚ್ಚಿ ತೋರಿಸುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಂತಹ ದೇಹದ ವಿಕಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತುದಿ ನಾಲಿಗೆಯ ಮೇಲೆ ಶರಣಾರ್ಥಿ ಎಂದು ನುಡಿವ ಮೋಸಗಾರರಿದ್ದಾರೆ. ಇವರಿಂದ ಲೋಕ ಎಚ್ಚರದಿಂದಿರಬೇಕು ಎನ್ನುವ ಮೌನೇಶ್ವರರ ಮಾತು ಕಪಟ ಸನ್ಯಾಸಿಗಳ ಹಾವಳಿಯನ್ನು ಸೂಚಿಸುವಂತಿದೆ.

೨೫೭

ಜಲ್ಲಿಸಾಲವ ಅರಿಯ ಜಗಳಕಂಜದ ಭಂಟ
ಬಲ್ಲಿದನೆನಬಹುದೆ ಬೆಲ್ಲಕುಪ್ಪನು ಹಾಕಿ
ಮೆಲ್ಲುವದು ರುಚಿವುಂಟೆ, ಬಸವಣ್ಣ

ತಾತ್ಪರ್ಯ : ಮನುಷ್ಯನ ಅಪ್ರಾಮಾಣಿಕತೆಯನ್ನು ಅಸಂಬದ್ಧ ನಡೆಯನ್ನು ವಚನ ಸೂಚಿಸುವಂತಿದೆ. ಸಾಲ ಮಾಡಿದ ಮೇಲೆ ಅದನ್ನು ಹಿಂತಿರುಗಿ ಕೊಡಬೇಕಾದದ್ದು ತೆಗೆದುಕೊಂಡವನ ಕರ್ತವ್ಯ. ಅದು ಬಿಟ್ಟು ಕೊಟ್ಟವನೊಂದಿಗೆ ಕಾಲು ಕೆರೆದು ಜಗಳ ವಾಡುವುದು ತಿಳಿದವರ ಲಕ್ಷಣವಲ್ಲ. ಅಂತಹ ಅಜ್ಞಾನಿಗಳ, ಜಗಳಗಂಟರ ಸಹವಾಸವೆಂದರೆ ಬೆಲ್ಲಕ್ಕೆ ಉಪ್ಪನ್ನು ಹಾಕಿ ತಿಂದಂತಾಗುತ್ತದೆ.

೨೫೮

ಸತ್ತು ಹುಟ್ಟುವ ದೇಹಕ್ಕೆ ಮುತ್ತಿನ ಹಾರಗಳ್ಯಾಕೆ
ಹತ್ತತ್ತು ವರುಷದ ಆಳಿಕೆ ತೀರಿದ ಬಳಿಕ
ಮತ್ತೊಂದು ಆಲಯವ ಭ್ರಮಿಸುವುದು, ಬಸವಣ್ಣ

ತಾತ್ಪರ್ಯ : ಸತ್ತು ಹುಟ್ಟುವ ದೇಹಕ್ಕೆ ಏಪರೀತ ಶೃಂಗಾರದ ಮೋಹವೇಕೆ. ಹತ್ತತ್ತು ಅಂದರೆ ಮನುಷ್ಯನ ಆಯುಷ್ಯವನ್ನು ಹತ್ತು, ಹತ್ತು ಎಂದು ಅಳೆಯುವುದು ಲೋಕ ರೂಢಿ. ಅಂತಹ ಹತ್ತು ಹತ್ತು ಸೇರಿ ಒಟ್ಟು ನೂರು ವರುಷ ಆಯುಷ್ಯವನ್ನು ಅಳೆಯಲಾಗುತ್ತದೆ. ಹೀಗೆ ಸತ್ತು ಹುಟ್ಟುವ ದೇಹ ಹುಟ್ಟಿದಾಗ ಮತ್ತೊಂದು ಮನೆಯ ಆಶ್ರಯವನ್ನು ಬಯಸುತ್ತಿರುತ್ತದೆ. ಜೀವನ ಪರ್ಯಂತ ಹೀಗೆ ಸತ್ತು ವ್ಯರ್ಥವಾಗುವ ಬದಲು ಇರುವ ನರಜನ್ಮವನ್ನೇ ಹರಜನ್ಮವಾಗಿಸಬೇಕೆನ್ನುವ ಒತ್ತಾಸೆ ವಚನದ್ದು.

೨೫೯

ಕತ್ತಿ ಕುದುರಿಗೆ ಸರಿಯೆ
ತೊತ್ತು ಗರ್ತಿಗೆ ಸರಿಯೆ
ಮುತ್ತೈದಿಗೆ ಮುಂಡೆ ಸರಿಯೆ
ಭುವನದೊಳು ಸರ್ತಿಕರಿಲ್ಲ, ಬಸವಣ್ಣ

ತಾತ್ಪರ್ಯ : ಸತ್ಯವಂತರಿಗೆ ಸುಳ್ಳುಗಾರರು, ಜ್ಞಾನಿಗಳಿಗೆ ಅಜ್ಞಾನಿಗಳು ಹೇಗೆ ಹೊಂದಿಕೆಯಾಗಲಾರರೋ ಹಾಗೆ ಕತ್ತೆ ಕುದರೆಗೆ, ದಾಸಿ ಪತಿವ್ರತೆಗೆ, ಮುಂಡೆ ಮುತ್ತೈದೆಗೆ ಸರಿಸಮಾನಳಾಗಲಾರಳು. ಅವರವರ ಸ್ವಭಾವ ಮತ್ತು ಸಂಸ್ಕಾರಗಳಿಂದ ಅವರವರು ಭಿನ್ನವಾಗುಳಿಯುತ್ತಾರೆ. ಈ ಜಗತ್ತಿನಲ್ಲಿ ಸತ್ಯವಂತರು ಧರ್ಮವಂತರು ಬಹಳ ಕಡಿಮೆ ಇರುವರು.

೨೬೦

ಜಾಡ ಜಂಗಮರೆಲ್ಲ ನಾಡ ಗೌಡಿಕಿಯ ಮಾಡಿ
ಓಡಿ ಹೋಗುವರಯ್ಯ ದೇಶಾಂತ್ರ ಅವರಿಗೆ
ಬೇಡಿ ಬದನಾಮಿ, ಬಸವಣ್ಣ

ತಾತ್ಪರ್ಯ : ನಾಡ ಗೌಡನಾದವನು ಪ್ರಜಾಪಾಲಕನೂ ಪ್ರಜ್ಞಾವಂತನೂ ಸೂಕ್ಷ್ಮ ಮತಿಯೂ ಆಗಿರಬೇಕಾಗುತ್ತದೆ. ಅಂದಾಗ ಆ ನಾಡು ಸುಭಿಕ್ಷವಾಗಿರುತ್ತದೆ. ಅದು ಬಿಟ್ಟು ತಿರುಕರು ಮುರುಕರು ಜೋಗಿ ಜಂಗಮರು ಊರ ಆಳ ಹೊರಟರೆ ಹಾಳು ಮಾಡಿ ಓಡಿ ಹೋಗುತ್ತಾರೆ. ಅಂತಹವರನ್ನು ಬೇಡಿ ಬದನಾಮಿ, ಅಂದರೆ ಅಗೌರವಕ್ಕೆ ಅವಮರ್ಯಾದೆಗೆ ಈಡಾಗುವುದು ಸರಿಯಾದ ಕ್ರಮವಲ್ಲ. ನಾಡು ಆಳಲು ಒಂದು ಸಾತ್ವಿಕ ಸೂಕ್ಷ್ಮತೆ ಬೇಕಾಗುತ್ತದೆ ಎಂಬುದು ಇಲ್ಲಿನ ಭಾವ.

೨೬೧

ಆರುಶಾಸ್ತ್ರಕ್ಕೆ ಐನೂರು ಶಾಸ್ತ್ರಕ್ಕೆ
ಮೀರಿದ ಶಾಸ್ತ್ರಕ್ಕೆ ಮಿಗಿಲು ಗುರುವು
ಕಳ್ಳ ಶಾಸ್ತ್ರಗಳ ಗಂಡ ಸುಳ್ಳು ಶಾಸ್ತ್ರಗಳ ಮಿಂಡ
ಎಳ್ಳು ಕಾಳಷ್ಟು ಪ್ರತಿದೋರದಿದ್ದರೆ
ಹಂದಿ ಮಾನವರ ಗಂಡ, ಬಸವಣ್ಣ

ತಾತ್ಪರ್ಯ : ಪಾರಂಪರಿಕ ವೈದಿಕ ಜ್ಞಾನದ ಕುರುಹುಗಳಾದ ಷಡುದರುಶನಗಳನ್ನು ಅದರ ವಿವಿಧ ಶಾಸ್ತ್ರಗಳನ್ನು ಮೌನೇಶ್ವರರು ನಿರಾಕರಿಸುತ್ತಾರೆ. ಅವು ಬೋಧಿಸುತ್ತಿದ್ದ ಮನುಷ್ಯ ವಿರೋಧಿ ಅಸಮಾನತತ್ವಗಳ ಕಾರಣಕ್ಕಾಗಿ ಜಡಸಂಪ್ರದಾಯಗಳ ಕಾರಣಕ್ಕಾಗಿ ವಿರೋಧಿಸಿದಂತಿದೆ. ಅಂತಹ ಸುಳ್ಳು ಶಾಸ್ತ್ರಗಳ ಗಂಡ ಮತ್ತು ಮಿಂಡ ಅಂದರೆ

ವೈದಿಕ ಶಾಸ್ತ್ರಗಳಿಗಿಂತ ಹೆಚ್ಚಿನವನು ಅನುಭಾವಿ. ಅಂತ ಗುರುವಿನ ಅನುಗ್ರಹದಿಂದ ಕ್ರಿಯಾಶೀಲನಾಗಬೇಕೆ ಹೊರತು ಶುಷ್ಕ ಆಚರಣೆಗಳಿಂದ ಜ್ಞಾನಸಿಗದು. ವೇದ ವೇದಾಂಗಗಳಿಗೂ ಮಿಗಿಲು ಗುರುವು ಎನ್ನುವ ಭಾವ ಇಲ್ಲಿನದು.

೨೬೨

ಕಡಿದ ಅಲಗಿನ ಚಾಜ ಪಡದಂಥವರಿಗೆ ಆಯಿತು
ಹಡದ ಪಿತ ಮಾತೆ ಹಿತ ಮೋಹವು ಸನ್ಮತ ಸಕಲವು
ಮಡದಿಗೆ ಆಯಿತು, ವೃಷಭೇಂದ್ರ

ತಾತ್ಪರ್ಯ : ಬಹುಶಃ ಹೊಕ್ಕಳ ಹುರಿ ಕೊಯ್ದು ಚಾಜ ಪಡೆವ ಸೂಲಗಿತ್ತಿಯ ಸಂಗತಿಯನ್ನು ವಚನ ಹೇಳುವಂತಿದೆ. ಕಡಿದ ಅಲಗು, ಅಂದರೆ ಉಳಿ ಅಥವಾ ಕುಡ ಗೋಲಿನ ಚಾಜ ಸೂಲಗಿತ್ತಿಗೆ ಸಂತೋಷ ತಂದರೆ, ಕೂಸು ಹುಟ್ಟಿದ್ದಕ್ಕಾಗಿ ಹಡೆದ ತಂದೆ ತಾಯಿಗಳು ಖುಷಿಪಡುತ್ತಾರೆ. ಬೆಳೆಸಿ ದೊಡ್ಡವರನ್ನಾಗಿಸಿ ಮದುವೆ ಮಾಡಿದಾಗ ಆ ಸಂತೋಷವನ್ನು ತನ್ನ ಹೆಂಡತಿಗೆ ನೀಡಬೇಕು ಎನ್ನುವುದು ವಚನದ ಸಾರ. ಸಕಲ ಸುಖ ಸಂಪದವೂ ಮಡದಿಗೆ ಸಿಗಬೇಕು.

೨೬೩

ಹಣದ ಆಸೆಗೆ ನೀವು ಆಸೆ ಮಾಡಲಿ ಬೇಡಿ
ತೃಣ ನಿಜವು ನಿಮ್ಮಲ್ಲಿ ಇಲ್ಲ
ಒಣ ಮರಕೆ ನೀರು ಹೊಯ್ದರೆ
ಕೊನರುವುದುಂಟೆ ನಿಮ್ಮ
ಕೋಣನ ಬುದ್ಧಿಯ ಮಾತು ಬಿಡಬೇಕು, ಬಸವಣ್ಣ

ತಾತ್ಪರ್ಯ : ಮಂದಮತಿಗಳಾದ ಜನರೇ ನೀವು ಕೇಳಿರಿ ಹಣದ ಆಸೆಗೆ ಬಿದ್ದು ಕೆಡಬೇಡಿರಿ. ಕಾರಣ ತೃಣ ಸಮಾನನಾದ ಸಣ್ಣ ನಿಜವೂ ನಿಮ್ಮಲ್ಲಿ ಇಲ್ಲ. ಅಪ್ರಾಮಾಣಿಕತೆಯಿಂದ ತುಂಬಿದ ಮನಸ್ಸು ಒಣಗಿದ ಮರದಂತೆ. ಅದಕ್ಕೆ ಎಷ್ಟು ನೀರು ಹೊಯ್ದರೂ ಚಿಗುರಲಾರದು. ದುರಹಂಕಾರ, ಅಜ್ಞಾನ, ಅಂಧಕಾರ ಕಳೆಯದ ಹೊರತು ಸುಜ್ಞಾನದ ಜ್ಯೋತಿ ದರ್ಶನವಾಗದು. ಪ್ರಾಮಾಣಿಕ ಪ್ರಯತ್ನ ಯಶಸ್ಸಿನ ಮೊದಲ ಮೆಟ್ಟಿಲು.

೨೬೪

ಆಡುದಾಸು ಕೇಳದಾತ ಅರಸು ತಾನಲ್ಲ
ಷಡುಶಾಸ್ತ್ರವ ಓದದಾತ ಗುರುವು ತಾನಲ್ಲ

ಬಡತನಕ್ಕೆ ಒದಗದಾಕಿ ಸತಿಯು ತಾನಲ್ಲ
ಒಡೆತನಕ್ಕೆ ಬರದಾತ ಮಗನು ತಾನಲ್ಲ, ಬಸವಣ್ಣ

ತಾತ್ಪರ್ಯ : ಸೃಷ್ಟಿಯಲ್ಲಿ ಮನುಷ್ಯರಾಗಿ ಹುಟ್ಟಿ ಬಂದ ಮೇಲೆ ಒಬ್ಬರಿಗೊಬ್ಬರು ಅನುಸರಿಸಿಕೊಂಡು ಹೊಂದಿಕೊಂಡು ಹೋಗಬೇಕೆನ್ನುವ ನೀತಿಯನ್ನು ವಚನ ಹೇಳುತ್ತದೆ. ಮನುಷ್ಯ ಸ್ವಾರ್ಥಿಯಾಗಬಾರದು. ತೊಂದರೆ ಎಂದು ಬಂದವರನ್ನು ಏನೆಂದು ಕೇಳದಾತ, ತಗೋ ಎಂದು ನೀಡದಾತ ಅರಸನಲ್ಲ. ಶಾಸ್ತ್ರಜ್ಞಾನದ ಕ್ರಮಬದ್ಧ ತಿಳಿವಳಿಕೆಯಿಲ್ಲದವ ಗುರುವಲ್ಲ. ಬಡತನಕ್ಕೆ ಸ್ಪಂಧಿಸದಿದ್ದರೆ ಆಕೆ ನಿಜವಾದ ಹೆಂಡತಿಯಾಗಲಾರಳು. ಒಡೆತನ ಅಂದರೆ ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳದವ ಮಗನಾಗಲಾರ. ಪರಸ್ಪರ ಅನುನಯ ಮತ್ತು ಕೊಡು ಕೊಳ್ಳುವಿಕೆ ಸುಭದ್ರ ಹಾಗೂ ಸಹಿಷ್ಣು ಸಮಾಜದ ಪ್ರವೃತ್ತಿಯಾಗಬೇಕು ಎಂಬ ಭಾವ ಇಲ್ಲಿದೆ.

೨೬೫

ತೊತ್ತು ತೊಂಟರಿಗೆ ತುಪ್ಪಾನ್ನ ಉಣಲಿಕ್ಕುವರು
ಇತ್ತಬಾರೆಂದು ಕರೆವರು
ಹೆತ್ತ ತಾಯಿ ತಂದೆಯರು ಬಂದರೆ
ನುಚ್ಚ ನೀರು ಹೊಯ್ಯರು
ಮರ್ತ್ಯದೊಳಗೆ ಸತ್ಯವೆಲ್ಲೈತೆ, ಬಸವಣ್ಣ

ತಾತ್ಪರ್ಯ : ಜನ್ಮಕೊಟ್ಟ ತಂದೆ ತಾಯಿಯರನ್ನೇ ಬೀದಿಪಾಲು ಮಾಡುವರು. ಉಣಲು ಮನೆಗೆ ಬಂದರೆ ನುಚ್ಚ ನೀರ ನೀಡಿ ಕಳಿಸುವರು. ಅಂತಹ ಮಕ್ಕಳು ತಮ್ಮ ಗುಲಾಮರಿಗೆ ಜಗಳಗಂಟರಿಗೆ ಮೃಷ್ಟಾನ್ನವನ್ನು ಉಣಿಸುವುದಲ್ಲದೆ, ಅವರಿಗೆ ಭಾರಿ ಗೌರವ ಮರ್ಯಾದೆಗಳನ್ನು ಮಾಡಿ ಕಳಿಸುತ್ತಾರೆ. ಹೆತ್ತ ತಂದೆ ತಾಯಿಗಳನ್ನೇ ತಿರಸ್ಕಾರದಿಂದ ನೋಡುವ ಕಾಲದಲ್ಲಿ ಸತ್ಯ ಧರ್ಮಗಳೆಲ್ಲಿ ಉಳಿಯಲು ಸಾಧ್ಯ.

೨೬೬

ಹರುಷದ ಬೀಜ ಪರುಷದ ಬೆಳಸು
ಕೊಟ್ಟರೆ ಇಸಗೊಂಡಪ್ಪ
ಕೊಡದಿದ್ದರೆ ಕಸಗೊಂಡಪ್ಪ, ಬಸವಣ್ಣ

ತಾತ್ಪರ್ಯ : ಸಮೃದ್ಧಿ ಮತ್ತು ಸಂಪತ್ತಿನ ಅಪಾಯವನ್ನು ವಚನ ಸೂಚಿಸುವಂತಿದೆ. ಹರುಷದ ಬೀಜ ಪರುಷದ ಬೆಳಸು ಅಂದರೆ ಬೇಡಿದ್ದನ್ನು ಕೊಡುವ ಕಾಮಧೇನು, ಬೀಜ ಮತ್ತು ಬೆಳೆಗಳು ಮೂರು ಲೋಕದ ಸಮೃದ್ಧಿ ಹಾಗೂ ಸಂಪತ್ತಿನ ಪ್ರತೀಕಗಳು. ಬೀಜ ಮೊಳೆತು ಬೆಳೆಯಾಗದಿದ್ದರೆ ಸಕಲ ಜೀವರಾಶಿಗೂ ಅನ್ನವಿಲ್ಲ. ಹೀಗಿರುವಾಗ ಇಂತಹ ಸಂಪತ್ತನ್ನು ಕೊಟ್ಟರೆ ಇಸಿದುಕೊಳ್ಳುವ ಕೊಡದಿದ್ದರೆ ಕಸಿದುಕೊಳ್ಳುವ

ಸ್ವಾರ್ಥಿಗಳು ಇರುತ್ತಾರೆ. ಸಂಪತ್ತು ಯಾವತ್ತು ಅಪಾಯಕಾರಿ ಎನ್ನುವುದು ಇಲ್ಲಿನ ತತ್ವ. ಅದು ಸದ್ವಿನಿಯೋಗವಾಗಬೇಕು.

೨೬೭

ಸರ್ವರ ಮಲವನ್ನು ಸವಿಯೆಂದು ಮೆಲಿವದು
ಪಾಲನ್ನು ಕರದು ಉಣಿಸುವದು
ಶರೀರ ಕೊಯ್ದು ಉಣಿಸುವದು ಇದು
ಪರಹಿತಾರ್ಥದ ಒಡವಿಯು
ಶರಭಭೇರುಂಡನೆಂಬ ಬಿರುದುಂಟು ಇದು
ಪರಬ್ರಹ್ಮದ ಒಡವಿಯು, ಬಸವಣ್ಣ

ತಾತ್ಪರ್ಯ : ಮಲವೆಂದರೆ ದೇಹಕ್ಕಂಟಿದ ಮಾಯಾ ಮಲಗಳು. ಅಂತಹ ಮಾಯಾ ಮಲಗಳನ್ನು ಕಳೆವುದು, ಹಾಲು ಕರೆದು ಉಣಿಸುವುದು, ಶರೀರ ಕೊಯ್ದು ಉಣಿಸುವುದು ಅಂದರೆ ಸರ್ವಾರ್ಥ ಕಾರ್ಯಸಿದ್ಧಿಗಾಗಿ ಲೋಕೋದ್ಧಾರಕ್ಕಾಗಿ ತನ್ನನ್ನೇ ತಾನು ಸಮರ್ಪಿಸಿಕೊಳ್ಳುವುದು. ಇದು ಪರರಿಗೆ ಹಿತವನ್ನುಂಟು ಮಾಡುವ ಬೆಲೆಯುಳ್ಳ ಒಡವಿಯಾಗಿದೆ. ಅಂತಹವನಿಗೆ ಶರಭ ಬೇರುಂಡನೆಂಬ ಬಿರುದುಂಟು. ಈ ಪುಣ್ಯ ಪರಬ್ರಹ್ಮನ ಒಡವಿಯು. ಆ ಪರಬ್ರಹ್ಮನೇ ವಿಶ್ವಕರ್ಮ ಪರಮಾತ್ಮನು. ಜನರ ಅಜ್ಞಾನವನ್ನು ಕಳೆದು ಕ್ರಿಯಾಜ್ಞಾನಿಯನ್ನಾಗಿಸುವುದು ಸನ್ಮಾರ್ಗಕ್ಕೆ ಹಚ್ಚುವುದೇ ವಿಶ್ವಕರ್ಮ ಧರ್ಮತತ್ವವಾಗಿದೆ. ಅಂತಹ ತತ್ವವನ್ನು ಮೌನೇಶ್ವರರಿಲ್ಲಿ ಹೇಳಿದ್ದಾರೆ.

೨೬೮

ಲೆಂಡ ಪುಂಡರಿಗಿಕ್ಕಿ ಗಂಡನುಳ್ಳವಳಿಗಿಕ್ಕಿ
ದಂಡವನಿಕ್ಕಿ ಕೆಡಬ್ಯಾಡ ಮನೆಯೊಳಗಿರುವ
ತಂದಿ ತಾಯಿಗಳಿಗೆ ಉಣಲಿಕ್ಕಿ ಮಿಕ್ಕಿದ್ದನ್ನು
ಕೊಂಡೊಯ್ದು ಅಂಧಕರಿಗಿಕ್ಕಿ
ಇದು ಹನ್ನೊಂದು ಕೋಟಿ ಜಂಗಮರಿಗಿಕ್ಕಿದ ಫಲವು, ಬಸವಣ್ಣ

ತಾತ್ಪರ್ಯ : ಅಪಾತ್ರರಾದಂತ ಪುಂಡಪೋಕರಿಗಳಿಗೆ, ಮನೆಹಾಳರಿಗೆ ಕೊಟ್ಟು, ಗಂಡುಳ್ಳ ಹೆಣ್ಣಿನ ಮೇಲೆ ಮನಸ್ಸಿಟ್ಟು ಅವಳಿಗೆ ಸಹಾಯ ಮಾಡುವುದು ದಂಡ ವಾಗುತ್ತದೆ, ಅಧರ್ಮವಾಗುತ್ತದೆ. ಅದು ಬಿಟ್ಟು ಹೆತ್ತು ಹೊತ್ತ ತಂದೆ ತಾಯಿಗಳಿಗೆ ಮುಪ್ಪಿನ ಕಾಲದಲ್ಲಿ ಪ್ರೀತಿಯಿಂದ ಉಣಲಿಕ್ಕೆ ಹಾಕಬೇಕು. ಮಿಕ್ಕಿದ್ದನ್ನು ಕುಂಟ ಕುರುಡರಂತಹ ಅಸಹಾಯಕರಿಗೆ ನೀಡಿದರೆ ಹನ್ನೊಂದು ಲಕ್ಷ ಜಂಗಮರಿಗೆ ಉಣಿಸಿದ ಪುಣ್ಯ ಬರುತ್ತದೆ.

೨೬೯

ಪುಣ್ಯಕ್ಕೆ ಬೇಡಿದರೆ ತುಣ್ಣೆಯ ತೋರುವರು
ಟೊಣ್ಣೆಯ ತಕ್ಕೊಂಡು ಹೊಡಿದರೆ ಮನೆಯೊಳಗಣ
ಸಣ್ಣ ಚರಿಗೆ ಹೊನ್ನು ತಂದಿಕ್ಕುವರು, ಬಸವಣ್ಣ

ತಾತ್ಪರ್ಯ : ಧರ್ಮಕ್ಕಾಗಿ ನೀಡಿರೆಂದು ಆರ್ತತೆಯಿಂದ ಬೇಡಿದರೆ ಯಾರೂ ನೀಡಲು ಮುಂದೆ ಬರರು. ಅವಮಾನಿಸಿ ಕಳಿಸುವರು. ಮರ್ಮಾಂಗವನ್ನು ತೋರಿ ಅಸಹ್ಯ ಮಾಡುವರು. ಅಂತವರಿಗೆ ಟೊಣ್ಣೆಯ ತಗೊಂಡು ಒಂದು ಹೊಡೆದರೆ ಹೆದರಿ ಮನೆಯೊಳಗಿನ ಹೊನ್ನ ತುಂಬಿದ ಚರಿಗೆಯನ್ನು ತಂದುಕೊಡುವರು. ಅಂದರೆ ಈ ಜಗತ್ತು ಪ್ರೀತಿಗಿಂತ ಭೀತಿಗೆ ಹೆಚ್ಚು ಬೆಲೆ ಕೊಡುತ್ತದೆಂಬುದು ವಚನದ ಅರ್ಥ.

೨೭೦

ಪುತ್ರಸಂತಾನವು ಹತ್ತಲಿಲ್ಲವೆಂದು ಅತ್ತನ್ಯೆ
ಚೆನ್ನಬಸವಣ್ಣ ಮಾಡಿದದು ಹತ್ತಿ
ಸೂಳೆಯ ಒಗತನದ ಸಂಸಾರ ತಾವು ತಮ್ಮ
ಮುತ್ತ್ಯಾನ ಹೆಸರು ಕಳದರು ಕಳದಂಥ ಪಾಪಿಯನು
ಕತ್ತೆಯನೇರಿಸಿ ಕಳಹುವದು, ಬಸವಣ್ಣ

ತಾತ್ಪರ್ಯ : ಕಟ್ಟಿಕೊಂಡ ಹೆಂಡತಿಯಲ್ಲಿ ಮಕ್ಕಳು ಹುಟ್ಟಲಿಲ್ಲವೆಂದು ಸೂಳೆಯ ಸಹವಾಸ ಮಾಡಿ, ವಂಶದ ಗೌರವ ಕಳೆದರು. ಅಂತಹ ಕಳ್ಳರನ್ನು ಅಧರ್ಮಿಗಳನ್ನು ಕತ್ತೆಯ ಮೇಲೆ ಕೂರಿಸಿ ಮೆರೆಸಬೇಕು. ಅದೇ ಅವರಿಗೆ ಶಿಕ್ಷೆ.

೨೭೧

ಹೆಣ್ಣು ಹಾದರಗಿತ್ತಿ ಕಣ್ಣು ಕುಂಟಣಿಗಿತ್ತಿ
ಹುಣ್ಣು ಉಷ್ಣಗಳ್ಹತ್ತಿ ಉಣುಉಡುವ ಬಾಯಲ್ಲಿ
ಮಣ್ಣು ಹೊಯಿಕೊಂತು, ಬಸವಣ್ಣ

ತಾತ್ಪರ್ಯ : ಹೆಣ್ಣು ಮತ್ತು ಕಣ್ಣು ಅಂದರೆ ಸೃಷ್ಟಿ ಮತ್ತು ದೃಷ್ಟಿ, ಕ್ರಿಯೆ ಮತ್ತು ಜ್ಞಾನ ಗಳ ಸರಿಯಾದ ಸಾಂಗತ್ಯ ಬದುಕಿನ ಯಶಸ್ಸಿಗೆ ಕಾರಣವಾಗುತ್ತವೆ. ಸಂಸಾರದ ಕಣ್ಣಾದ ಹೆಣ್ಣು ಅನೀತಿವಂತಳಾದರೆ ದುರಾಚಾರಿಯಾದರೆ ಅಂತಹ ಕುಟುಂಬ ಮತ್ತು ಸಮಾಜ ಸುರಕ್ಷಿತವಾಗಿರಲಾರದು. ಹೀಗಾಗಿ ಉತ್ತಮ ಸಮಾಜದ ನಿರ್ಮಿತಿಯಲ್ಲಿ ಹೆಣ್ಣಿನ ಪಾತ್ರ ಬಹುದೊಡ್ಡದು ಎನ್ನುವ ಭಾವ ಇಲ್ಲಿನದು.

೨೭೨

ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಅನ್ಯರಿಗೆ
ಕಟ್ಟಿಸಿ ಕೆರೆ ಬಾವಿ ಮಠ ವೃಕ್ಷಮಂ ಪುಣ್ಯವು
ಮುಟ್ಟಿತೇಳಯ್ಯ, ಬಸವಣ್ಣ

ತಾತ್ಪರ್ಯ : ಲೋಕೋಪಕಾರದ ಸಂಗತಿಯನ್ನು ವಚನ ಹೇಳುತ್ತದೆ. ಕೆರೆ ಭಾವಿ ಮಠ ಕಟ್ಟಿಸುವುದು ಹಾಗೂ ವೃಕ್ಷಗಳನ್ನು ಬೆಳೆಸುವುದು ಪ್ರಾಚೀನ ಭಾರತದಲ್ಲಿ ಪುಣ್ಯದ ಕಾರ್ಯವಾಗಿತ್ತು. ಅದೊಂದು ಸಾಮಾಜಿಕ ಜವಾಬ್ದಾರಿಯೂ ಆಗಿತ್ತು. ಅನುಕೂಲಸ್ಥರು ಸಾರ್ವಜನಿಕರಿಗಾಗಿ ದಾರಿಕಾರರಿಗಾಗಿ ಇಂತಹ ಲೋಕಹಿತ ಕಾರ್ಯಗಳನ್ನು ಮಾಡಿ ಪುಣ್ಯಗಳಿಸಿ ಕೃತಾರ್ಥರಾಗುತ್ತಿದ್ದರು. ಆದರೆ ಇಂದು ಉಪಭೋಗಿ ಪ್ರವೃತ್ತಿಯನ್ನೇ ಬೆಳೆಸಿಕೊಂಡಿರುವ ಮನುಷ್ಯ ಇಂತಹ ಲೋಕೋಪ ಯೋಗಿ ನಿರ್ಮಿತಿ ಗಳನ್ನೆ ನಾಶಮಾಡಿ ಪಾಪಿಯಾಗುತ್ತಿದ್ದಾನೆ.

೨೭೩

ದುಡಿದರೆ ದುಗ್ಗಾಣಿ ಪಡೆದರೆ ಐಶ್ವರ್ಯ
ಉಡುವಾಹನನಾಳುವ ಪತಿ ಕೊಡುವನಲ್ಲದೆ
ಇನ್ಯಾರು ಕೊಡುವರು, ಬಸವಣ್ಣ

ತಾತ್ಪರ್ಯ : ದುಡಿದರೆ ಮಾತ್ರ ಫಲ ದುಡಿಯದಿದ್ದರೆ ಇಲ್ಲ ಎನ್ನುವ ತಾತ್ತ್ವಿಕತೆ ಇಲ್ಲಿನದು. ಕ್ರಿಯೆ ಜ್ಞಾನದ ಮೂಲವಾದರೆ ದುಡಿಮೆ ದುಗ್ಗಾಣಿ(ಹಣ) ಮತ್ತು ಅನ್ನಕ್ಕೆ ದಾರಿಯಾಗುತ್ತದೆ. ದುಡಿಮೆಯಿಂದ ಆರೋಗ್ಯ ಹಾಗೂ ಸಂಪತ್ತು ಎರಡೂ ಸಿಗುತ್ತದೆ. ಸೋಮಾರಿಯಾದರೆ ಸಂಪತ್ತೂ ಇಲ್ಲ ಆರೋಗ್ಯವೂ ಇಲ್ಲ. ದುಡಿತವೇ ದುಡ್ಡಿನ ತಾಯಿ ಎನ್ನುವಂತೆ ದುಡಿದರೆ ಉಡುವಾಹನನಾದ ಇಂದ್ರನು ಸಹ ತಲೆಬಾಗುತ್ತಾನೆ. ಇಂದ್ರನ ಅಧಿಪತಿಯಾದ ವಿಶ್ವಕರ್ಮ ಪರಮಾತ್ಮನೂ ಶ್ರಮಕ್ಕೆ ಗೌರವ ನೀಡುತ್ತಾನೆ. ವಿಶ್ವಕರ್ಮ ತಾತ್ತ್ವಿಕತೆಯ ದೊಡ್ಡ ಶಕ್ತಿಯೇ ಕರ್ತೃತ್ವ ಮತ್ತು ವೃತ್ತಿ ಗೌರವ.

೨೭೪

ಒಪ್ಪತ್ತಿನ ಊಟಕ್ಕೆ ಉಪ್ಪಿಲ್ಲದಿದ್ದರೆ
ಇಪ್ಪತ್ತು ಮನೆಗೆ ಉಸುರುವಳು ಹೆಣ್ಣೆಂಬ
ಮಿಥ್ಯವನಾಳುವವನ ಹೆಸರೇನು, ಬಸವಣ್ಣ

ತಾತ್ಪರ್ಯ : ಹೆಂಡತಿ ಅಥವಾ ಸಹಧರ್ಮಿಣಿಯಾದವಳು ಕಷ್ಟ ಸುಖದಲ್ಲಿ ಸಹನೆಯಿಂದ ಸಹಕರಿಸಬೇಕು. ಅದು ಬಿಟ್ಟು ಒಪ್ಪತ್ತಿನ ಊಟಕ್ಕೆ ಉಪ್ಪಿಲ್ಲವೆಂದು ಓಣಿಯಲ್ಲೆಲ್ಲಾ

ಬೀದಿಯಲ್ಲೆಲ್ಲಾ ಹೇಳಿಕೊಂಡು ತಿರುಗಿದರೆ ಕುಟುಂಬದ ಮಾನ ನಗೆಪಾಟಲಾಗುತ್ತದೆ. ಅಂತಹವಳು ನಿಜವಾದ ಸತಿಯಾಗಲಾರಳು. ಅಂತಹ ಸುಳ್ಳೆಂಬ ಸತಿಯನ್ನು ಮಿಥ್ಯೆ ಯನ್ನು, ಮಾಯೆಯನ್ನು ಬೆನ್ನು ಹತ್ತಿದ ಅಜ್ಞಾನಿಗೆ ತನ್ನದೆನ್ನುವ ಅಸ್ತಿತ್ವ ಇರಲಾರದು. ಕಾರಣ ಮನುಷ್ಯನಿಗೆ ಸ್ವಂತಿಗೆ ಹಾಗೂ ವಿವೇಚನೆ ಬಹಳ ಮುಖ್ಯ ವಾದುದು.

೨೭೫

ಇಚ್ಛೆಗಿಲ್ಲದ ಸತಿಯ ಹುಚ್ಚೆಂದು ಬಿಡಬೇಕು
ಹುಚ್ಚುನಾಯಿಯಂತೆ ಬೊಗಳ್ಯಾಡಿ ಮಾನವುಳ್ಳವರ
ಕಚ್ಚಿ ಕಟ್ಟಿಗೆ ತರಿಸುವಳು, ಬಸವಣ್ಣ

ತಾತ್ಪರ್ಯ : ಸತಿಪತಿಗಳೊಂದಾದ ಭಕ್ತಿ ಹಿತವೊಪ್ಪುದು ಶಿವಗೆ ಎನ್ನುವಂತೆ ಸತಿ–ಪತಿ ಎಂಬುದು ಕೇವಲ ಗಂಡು ಹೆಣ್ಣಿನ ಸಂಬಂಧ ಎನ್ನುವುದಕ್ಕಿಂತ ಅದೊಂದು ಬದುಕಿನ ಕ್ರಮ. ಹೊಂದಾಣಿಕೆ ಹಾಗೂ ಗೌರವವಿಲ್ಲದ ಬದುಕು ನರಕ ಸದೃಶ್ಯ ಹೀಗಾಗಿ ಸತಿಯಾದವಳು ಪತಿಯ ಇಚ್ಛೆಯನ್ನು ಪತಿಯಾದವನು ಸತಿಯ ಇಚ್ಛೆಯನ್ನು ಅರ್ಥಮಾಡಿಕೊಳ್ಳಬೇಕು. ಇಚ್ಛೆಯರಿಯದ ಸತಿಯಿದ್ದರೆ ಅವಳನ್ನು ಹುಚ್ಚಿ ಎಂದು ಬಿಡಬೇಕು ಇಲ್ಲವಾದರೆ ಹುಚ್ಚುನಾಯಿಯಂತೆ ಬೊಗಳ್ಯಾಡಿ ಕಚ್ಚಿ ಮಾನ ಕಳೆಯುವಳು. ಅಂತ ಅಜ್ಞಾನಿ ಸತಿಯು ಸಾಧನೆಗೆ ಮಾರಕವಾಗುತ್ತಾಳೆ.

೨೭೬

ಆರು ದರುಶನದ ಬೆರಕಿಯ ಮಾತು ಕೇಳ
ಬಾರದೆಂದು ಕಿವಿಗೆ ನೀಲದ ಪೊಗಧರಿಸಿದ
ಲೋಕದ ಶೀಲ ಲೀಲೆಗಳ ಬಿಡಬೇಕು
ಕೂಲಿಯ ಮಾಡಿ ಉಣಬೇಕು, ಬಸವಣ್ಣ

ತಾತ್ಪರ್ಯ : ಆರು ದರುಶನಗಳು ವೈದಿಕ ತತ್ತ್ವಜ್ಞಾನದ ಬಹುಮುಖ್ಯ ಅಂಗಗಳು. ಅವು ಸಾರುವ ಸಾಂಪ್ರದಾಯಿಕ ಜ್ಞಾನದ ಮೌಲ್ಯಗಳು ಬಹಳ ಅಮಾನವೀಯವೂ ಶುಷ್ಕವೂ ಶೋಷಣೆ ಗುಣವುಳ್ಳವೂ ಆಗಿದ್ದವು ಎಂಬುದು ಮೌನೇಶ್ವರರ ನಿಲುವು. ಅಂತಹ ಆರು ದರುಶನಗಳನ್ನು ಓದುವುದಿರಲಿ ಕಿವಿಯಿಂದಲೂ ಕೇಳಬಾರದೆಂದು ನೀಲಿ ಬಣ್ಣದ ವಸ್ತುವಿನಿಂದ ಕಿವಿಯ ಮುಚ್ಚಿಕೊಂಡವ. ಕಾರಣ ಅದು ಸೃಷ್ಟಿಸುವ ಜಡ ತಿಳಿವಳಿಕೆಯಿಂದ ಯಾವ ಅನುಭವವೂ ಬಾರದು. ಅನುಭವ ಆಗಬೇಕೆಂದರೆ ಕೂಲಿ ಮಾಡಿ ಉಣಬೇಕು, ಕ್ರಿಯಾಶೀಲವಾಗಿರಬೇಕು.

೨೭೭

ಆಶೆಪಾಶೆಯುವಂದೆ ಈಸುವ ಕರುವಂದೆ
ಆಶೆಯಲ್ಲ ನಾನು ಮುರಿದು ತಿಂದೆ
ಮಸವಂಟಿಕೆಯಲ್ಲವೆ ಎನ್ನ ಶರೀರವು, ಬಸವಣ್ಣ

ತಾತ್ಪರ್ಯ: ಮನುಷ್ಯನ ಆಶೆಗೆ ಮಿತಿಯಿಲ್ಲ. ಎಷ್ಟೆಷ್ಟು ಮಹಾತ್ವಾಕಾಂಕ್ಷಿಯಾಗುತ್ತಾನೋ ಅಷ್ಟಷ್ಟು ಮಾನಸಿಕವಾಗಿ ದೈಹಿಕವಾಗಿ ಕುಸಿಯುತ್ತಾ ತುಂಬಿದ ಹೊಳೆಯಲ್ಲಿ ಸಣ್ಣ ಕರು ಅಸಹಾಯಕತೆಯಿಂದ ಈಸಿ ದಣಿಯುವಂತೆ ಹೈರಾಣಾಗುತ್ತಾನೆ. ಆಸೆಯಿಂದಾಗಿ ಈ ಮೈ ಮತ್ತು ಮನಸ್ಸು ಜರ್ಜರವಾಗಿದೆ, ಸುಡುಗಾಡಾಗಿದೆ, ಕಲುಷಿತವಾಗಿದೆ. ಅಜ್ಞಾನ ಇದಕ್ಕೆಲ್ಲ ಕಾರಣ. ಆಶೆಯನಳಿದರೆ ಅವನೇ ಈಶನಾಗುತ್ತಾನೆ.

೨೭೮

ಆಡಿದಂತಾಡಿದರೆ ಕೋಡಗನ ಮುಖ ಪದ್ಮ
ಮೋಡದೊಳು ಮೂಡಿದ
ದಿನಕರನಂತೆ ಲಕ್ಷಣವು, ಮುಖ
ಬಾಡಿತೇಳಯ್ಯ, ಬಸವಣ್ಣ

ತಾತ್ಪರ್ಯ : ಮನುಷ್ಯ ಅವನಾಡಿದಂತೆ ಮಾಡಿದಂತೆ ಬಿಟ್ಟರೆ ಸ್ವೇಚ್ಛೆಯಿಂದ ಚೆನ್ನಾಗಿ ಇರುತ್ತಾನೆ. ಹೀಗೆ ಏಕೆ ಮಾಡಿದೆ? ಮಾಡಬಾರದಿತ್ತು ಎಂದು ಪ್ರಶ್ನೆ ಮಾಡಿದರೆ ಆತ ಬೇಸರದಿಂದ ಮುಖ ಬಾಡಿಸಿಕೊಂಡು ಮೋಡದೊಳಗೆ ಮುಳುಗಿ ಪ್ರಕಾಶರಹಿತ ನಾದ ಸೂರ್ಯನಂತೆ ಬಾಡಿಕೊಂಡಿರುತ್ತಾನೆ. ಇದ್ದದ್ದು ಇದ್ದಂಗೆ ಹೇಳಿದರೆ, ಸಿಟ್ಟಿನಿಂದ ಕಣ್ಣು ಮುಖಗಳನ್ನು ಕೆಂಪಾಗಿಸಿಕೊಂಡು ಮುಖವನ್ನು ಕಿವಿಚಿ ಬಿಡುತ್ತಾರೆ. ಇದು ಸಲ್ಲದು. ಕೇಳಿಕೊಳ್ಳುವ ಸಹನೆ ಮನುಷ್ಯನನ್ನು ಪರಿಪೂರ್ಣತೆಯತ್ತ ಒಯ್ಯುತ್ತದೆ.

೨೭೯

ಭಾಳಾಕ್ಷನ ಮನೆಯ ವಾಲಿಯ ತಳವಾರ
ಕೋಳಿ ನಾನಹುದಯ್ಯ ಬಡ ನಾಯಿ
ಶಿವಶರಣರ ಮನೆಯ ಊಳಿಗಕೆ ಬಂದ
ಮಗನೈಯ್ಯೊ ಎಂದಿನ್ನು ಹೇಳುಕಂಡ್ಯಾ, ಬಸವಣ್ಣ

ತಾತ್ಪರ್ಯ : ಭಾಳಾಕ್ಷ ಎಂದರೆ ಶಿವನ ಪರಿಚಾರಕ. ತಾನು ಶಿವಭಕ್ತರ ಮನೆಯ ಊಳಿಗದ ಆಳು. ನಾನು ಅಂತಹ ಮಹಾಭಕ್ತರ ಮನೆಯಲ್ಲಾಡುವ ಕೋಳಿ ಹಾಗೂ ನಾಯಿಗೆ ಸಮ ಎನ್ನುವಲ್ಲಿ ಮೌನೇಶ್ವರರ ಆತ್ಮನಿರೀಕ್ಷಣೆ ಹಾಗೂ ನಿರಹಂಭಾವ ವನ್ನು ಕಾಣುತ್ತೇವೆ.

೩

ಅರಿವು ಆಚಾರ ಅನುಭಾವ

೨೮೦

ಕರ ಚರಣ ಮುಗಿಯುತ್ತ ಶಿರ ಸಾಷ್ಟಾಂಗವೆರಗಲು
ಅರವತ್ಮೂರು ಯೋಜನವಿರಲು ಗುರುಮಹಾದೇವಗೆ
ಶರಣು ಮುಟ್ಟುವದು, ಬಸವಣ್ಣ

ತಾತ್ಪರ್ಯ : ಪರಮಾತ್ಮನು ತಿಳಿದು ನೋಡಿದರೆ ತನ್ನೊಳಗೇ ಇದ್ದಾನೆ. ಆತನಿಗೆ ನಮಸ್ಕಾರ ಮಾಡಲು ಎಷ್ಟೆಷ್ಟೋ ದೂರವಿರುವ ಪುಣ್ಯಕ್ಷೇತ್ರಗಳೆಂಬ ಸ್ಥಳಗಳಿಗೆ ಹೋಗುವ ಅವಶ್ಯಕತೆ ಇಲ್ಲ. ತನ್ನೊಳಗೆ ತಾನು ತಿಳಿದುಕೊಂಡು ಭಕ್ತಿ ಸಾಧನೆ ಮಾಡಿದರೆ ನರನೇ ಹರನಾಗುತ್ತಾನೆ ಎಂಬುದು ಇಲ್ಲಿನ ಭಾವ.

೨೮೧

ನಂಬಿದವರಿಗೆ ಅಂಬಿಗನಯ್ಯ ಶಿವನು
ನಂಬಿ ನಂಬದಂಥ ಡಂಬಕರಿಗೆ ಶಿವನು
ಅಂಬಿನ ಮೊನೆಯು, ಬಸವಣ್ಣ

ತಾತ್ಪರ್ಯ : ನಂಬಿ ಕರೆದರೆ ಓ ಎನ್ನನೆ ಶಿವನು, ನಂಬದೆ ನೆಚ್ಚದೆ ಬರಿದೆ ಕರೆದೊಡೆ ಶಿಕ್ಷಿಸುವನು ಎಂದು ಬಸವಣ್ಣನವರ ಮಾತಿನ ಪ್ರಭಾವವನ್ನು ಇಲ್ಲಿ ಕಾಣಬಹುದು. ಗಾಢವಾಗಿ ತನು ಮನ ಧನಗಳನ್ನೆಲ್ಲ ಅರ್ಪಿಸುವ ಸಮರ್ಪಣಾ ಭಾವದ ನಂಬಿಕೆಯು ಭಕ್ತಿಯ ಮೂಲ ಆಧಾರ, ಅಂತ ನಂಬಿಕೆಯಿಂದ ಎಷ್ಟೋ ಶರಣರು ಸಂಸಾರದ ಕೋಟಲೆಗಳನ್ನು ದಾಟಿ ಶಿವ ಸಾಯುಜ್ಯವನ್ನು ಪಡೆದಿದ್ದಾರೆ. ನಂಬಿದರೆ ಶಿವನೇ

ಕಷ್ಟ ಬಂಧನಗಳಿಂದ ದಾಟಿಸುತ್ತಾನೆ. ಕೇವಲ ಡಂಭಾಚಾರದ, ತೋರಿಕೆಯ ಭಕ್ತಿಯ ಆಚರಣೆಗಳಿಗೆ ಶಿವನು ಮುನಿಯುತ್ತಾನೆ, ಶಿಕ್ಷಿಸುತ್ತಾನೆ ಹೊರತು ಒಲಿಯಲಾರ.

೨೮೨

ಶಂಭು ಶಂಕರ ತಾನು ಅಂಬಿಗನಾದ ಮೇಲೆ
ನಂಬಬಾರದೆ ಹರಿಗೋಲ, ನಂಬಿಕೆಗೆ
ಪಡಿಹೊನ್ನು ಕುಂಭ ಕುಚದೊಳಗಿತ್ತ
ನಂಬಲಾರದ ಅಧಮರಿಗೆ
ತಿರಿದುಂಬುವುದನೆ ಕೊಟ್ಟ, ಬಸವಣ್ಣ

ತಾತ್ಪರ್ಯ : ನಂಬಿಕೆಯಿಂದ ಪರಮಾತ್ಮನನ್ನು ಯಾವ ರೂಪದಲ್ಲಾದರೂ ಪೂಜಿಸ ಬಹುದು. ಉದಾಹರಣೆಗೆ ಮಹಾಶಿವಭಕ್ತ ನಂಬಿಯಣ್ಣ ತಾನು ಪ್ರೀತಿಸಿದವಳ ಕುಚಗಳನ್ನೆ ಲಿಂಗದಂತೆ ಭಾವಿಸಿ ಪೂಜಿಸಿದ, ನಂಬಿದ ಗೊಲ್ಲಾಳನಿಗೆ ಕುರಿಯ ಹಿಕ್ಕೆಯಲ್ಲಿ ಲಿಂಗರೂಪದಲ್ಲಿ ಪರಮಾತ್ಮ ಕಂಡ ಎಂಬಂತಹ ದೃಷ್ಟಾಂತಗಳಿವೆ. ಹೀಗಾಗಿ ಗಾಢ ನಂಬಿಕೆ ಬಹಳ ಮುಖ್ಯ. ನಂಬಿಯಣ್ಣನ ಕಥೆಯಲ್ಲಿ ಬರುವಂತೆ ಶಿವನು ಆತನ ಭಕ್ತಿಗೆ ಮೆಚ್ಚಿ ದಿನವೂ ಪಡಿಹೊನ್ನು ಕೊಡುತ್ತಿದ್ದನಂತೆ. ಆದರೆ ನಂಬದೆ ಡಂಭಾಚಾರದ ಭಕ್ತಿ ಮಾಡುವವರಿಗೆ ತಿರಿದುಣ್ಣುವುದೇ ಗತಿಯಾಗುತ್ತದೆ.

೨೮೩

ನಂಬಿದವರಿಗೆ ಜಯ, ನಂಬದ್ದೇ ಕುಲ ಕ್ಷಯ
ನಂಬಿದಳಯ್ಯ ಸೀತಾ, ಶ್ರೀರಾಮನಂಬಿನಲಿ
ಶಿರಚ್ಛೇದನ, ಬಸವಣ್ಣ

ತಾತ್ಪರ್ಯ : ನಂಬಿಕೆ ಎಂಬುದು ಮಾನವೀಯ ಸಂಬಂಧಗಳಿಗೆಲ್ಲ ಅನ್ವಯವಾಗುವ ವಿಷಯ. ಹಾಗೆಯೇ ಮಾನವ ಪರಮಾತ್ಮನ ನಡುವಿನ ಸಂಬಂಧದಲ್ಲೂ ಅನ್ವಯ ವಾಗುತ್ತದೆ. ತನ್ನ ಗಂಡನೇ ದೈವವೆಂದು ನಂಬಿದ ಸೀತೆಯು ರಾವಣನು ಕದ್ದೊಯ್ದು ವಶಪಡಿಸಿಕೊಳ್ಳಲು ಪ್ರಯತ್ನಿಸಿದರೂ ಸೋಲದೆ ಶುದ್ಧವಾಗುಳಿದಳು. ಅಂತಹ ಪತಿವ್ರತೆಯನ್ನು ಹಿಂಸಿಸಿದ್ದಕ್ಕಾಗಿ ರಾವಣ ರಾಮನಿಂದ ಹತನಾಗಬೇಕಾಯಿತು. ತನ್ನನ್ನು ತನ್ನ ದೈವವನ್ನು ನಂಬಿದ ಸೀತೆ ತನ್ನ ಗಂಡನನ್ನು ಮರಳಿ ಪಡೆದಳು.

೨೮೪

ವಿಶ್ವಾಸದಿಂದಲಿ ವಿಶ್ವ ತಾ ಪುಟ್ಟಿಸಿದ
ವಿಷ, ಕಾರ, ಹುಳಿ, ರುಚಿ ಕೊಂಬುವ ನಾಲಗೆಯಲಿ

ಹುಸಿಯೆನಬಹುದೆ ಧರ್ಮ ವಂಚನೆ ಎಂದರೆ
ಹುಸಿಯ ಶೂಲ ತಪ್ಪುವದೆ, ಇದು ನಮ್ಮ
ಸಂತತಿಗೆ ತರವಲ್ಲ, ಬಸವಣ್ಣ

ತಾತ್ಪರ್ಯ : ಪರಮಾತ್ಮ ಈ ವಿಶ್ವವನ್ನು ವಿಶ್ವಾಸದಿಂದಲೇ, ನಂಬಿಕೆಯಿಂದಲೇ ಹುಟ್ಟಿಸಿದ್ದಾನೆ. ವಿಷ, ಕಾರ, ಹುಳಿ, ರುಚಿ ಮುಂತಾದ ಪ್ರಕೃತಿ ಸಹಜವಾದ ಆಸ್ವಾದನೆಗಳನ್ನು ನಾಲಗೆಗೆ ಕೊಟ್ಟಿದ್ದಾನೆ. ಅಂತಹ ನಾಲಗೆಯಿಂದ ಹುಸಿಯಾಡುವುದು ಧರ್ಮವಂಚನೆಯಾಗುತ್ತದೆ. ಸುಳ್ಳಾಡುವುದು ಶೂಲದ ಶಿಕ್ಷೆಗೆ ಗುರಿ ಮಾಡುತ್ತದೆ. ಹುಸಿಯಾಡುವುದು ಸತ್ಯ ಶರಣರಿಗೆ ಸಲ್ಲದ ಮಾರ್ಗ.

ಬಸವಣ್ಣನವರು ಸತ್ಯವ ನುಡಿವುದೆ ಸತ್ಯಲೋಕ, ಮಿಥ್ಯವ ನುಡಿವುದೆ ನರಕ ಲೋಕ ಎಂದು ಸತ್ಯದ ರಾಜಮಾರ್ಗವನ್ನು ತೋರಿಸಿದರು. ಪರಮಾತ್ಮನ ಸೃಷ್ಟಿಯೇ ಸತ್ಯದ ದಾರಿ. ಇಲ್ಲಿ ನಾವು ಉಪ್ಪು ಹುಳಿ ಖಾರಗಳನ್ನು ತಿಂದು ಬದುಕಿರುವುದೇ ಸತ್ಯದ ಆಧಾರದ ಮೇಲೆ. ಅಂತಹ ನಾಲಗೆಯಿಂದ ಹುಸಿಯಾಡಿದರೆ ಅದು ಧರ್ಮ ದ್ರೋಹವಾಗುತ್ತದೆ. ಅದಕ್ಕೆ ಶಿಕ್ಷೆ ತಪ್ಪಿದ್ದಲ್ಲ. ಇದೊಂದು ವಿಶ್ವಸತ್ಯದ ಮಾತು(Universal Truth) ಬಹುದೊಡ್ಡ ಸತ್ಯ ಶರಣ ಹಾಗೂ ಸಂತರ ಸಂತತಿಯವರಾದ ನಾವು ಎಂದೂ ಹುಸಿಯ ಮಾರ್ಗ ತುಳಿಯಬಾರದು.

೨೮೫

ಕಾಯದೊಳು ಕಪಟವು, ಜೀವದೊಳು ಕಳವಳವು
ಬಾಯಲ್ಲಿ ಬೆಲ್ಲ ಎದೆಯಲ್ಲಿ ಕತ್ತರಿ
ಸಹಜವಿಲ್ಲದವರನ್ನು ದೇವಭಕ್ತರೆಂದೆನಲಾರೆ, ಬಸವಣ್ಣ

ತಾತ್ಪರ್ಯ : ಕಾಯದೊಳಗೆ ಕಪಟ, ಜೀವದಲ್ಲಿ ಕಳವಳ ಇಟ್ಟುಕೊಂಡವರು ಎದೆಯಲ್ಲಿ ಕತ್ತರಿ ಇಟ್ಟುಕೊಂಡು ಬಾಯಲ್ಲಿ ಬೆಲ್ಲದಂಥ ಮಾತಾಡಿದರೆ ಅಂತವರು ಭಕ್ತರಲ್ಲ. ದೇಹದ ಕಾಮನೆಗಳನ್ನು ಜೀವದ ಆಶೆ ಮೋಸಗಳನ್ನು ಹೊಂದಿರುವವನು ಒಳಗೆ ಕತ್ತರಿ ಇಟ್ಟುಕೊಂಡಂತೆ. ಅಂತವನು ಭಕ್ತಿ, ಜ್ಞಾನ ಮುಂತಾದ ಬೆಲ್ಲದಂಥ ಮಾತನ್ನಾಡಿದರೆ ಅವನು ನಿಜವಾದ ಭಕ್ತನಾಗಲಾರ. ಭಕ್ತನಾದವನಿಗೆ ಅಂತರಂಗ ಮತ್ತು ಬಹಿರಂಗ ಶುದ್ಧಿ ಎರಡೂ ಮುಖ್ಯ. ಅದರಲ್ಲೂ ಶರಣರು ಅಂತರಂಗ ಶುದ್ಧಿಗೇ ಬಹಳ ಮಹತ್ವಕೊಡುತ್ತಾರೆ.

೨೮೬

ಉದಯ ಕಾಲದೊಳೆದ್ದು ನದಿಯ ಮುಖದರ್ಶನವು
ಹದಿನಾರು ಸಾವಿರ ದುಷ್ಕರ್ಮ ಹರಿಹರಿದು ಕೊಡುವಲ್ಲಿ
ಸದಮಲಾತ್ಮಕನ ದರುಶನವು, ಬಸವಣ್ಣ

ತಾತ್ಪರ್ಯ : ಉದಯ ಕಾಲದಲ್ಲಿ ಎದ್ದು ನದಿಯಲ್ಲಿ ಮೀಯುವರು. ಹದಿನಾರು ಸಾವಿರ ದುಷ್ಕರ್ಮಗಳು ತೊಳೆದು ಹೋದಾಗ ಸದುಮಲ ಪರಮಾತ್ಮನ ದರ್ಶನ ವಾಗುತ್ತದೆ. ನದಿಯಲ್ಲಿ ಮಿಂದು ಶುದ್ಧವಾಗುವುದು ದೇಹಕ್ಕೆ ಸಂಬಂಧಪಟ್ಟ ವಿಷಯ. ಆದರೆ ಆತ್ಮಶುದ್ಧಿಗೆ ಇದರಿಂದ ಹೆಚ್ಚು ಪ್ರಯೋಜನವಿಲ್ಲ. ಅಂತರಂಗದ ಪಾಪಗಳು, ದುಷ್ಕರ್ಮಗಳನ್ನು ತೊಳೆದುಕೊಳ್ಳುವುದೇ ನಿಜವಾದ ಶುದ್ಧಿ. ಇಂತಹ ಹದಿನಾರು ಸಾವಿರದಷ್ಟು ಎಂದರೆ ಲೆಕ್ಕವಿಲ್ಲದಷ್ಟು ಪಾಪಗಳನ್ನು ನಾವು ಮಾಡುತ್ತೇವೆ. ಅವುಗಳನ್ನು ತೊಳೆದುಕೊಂಡಾಗಲೇ ನಿಜವಾದ ಆತ್ಮಶುದ್ಧಿಯಾಗುತ್ತದೆ. ಪರಮಾತ್ಮನ ಸಾಕ್ಷಾತ್ಕಾರ ವಾಗುತ್ತದೆ. ಬಹಿರಂಗ ಶುದ್ಧಿಗಿಂತ ಅಂತರಂಗ ಶುದ್ಧಿಯೇ ಮುಖ್ಯ ಎಂಬುದು ಇಲ್ಲಿನ ಭಾವ.

೨೮೭

ನೀರಿನಿಂದ ನಿರ್ಮಿತವ ಮಾಡಿದ ಗುರುತಾ ಅರಿಯೆ
ತಾಯಿ ತಂದೆಗಳ ಮೊದಲರಿಯೆ
ದೇವರಿನ್ನೆಲ್ಲಿ ಬೆದಕಲಿ? ನನ್ನಂಥ
ಗಾವಿಲರು ಉಂಟೇನು ಜಗದೊಳು, ಬಸವಣ್ಣ

ತಾತ್ಪರ್ಯ : ಜೀವ ಎಂಬುದು ಮೊದಲು ನೀರಿನಲ್ಲಿ ಸೃಷ್ಟಿಯಾಯಿತು. ಪರಮಾತ್ಮ ಸೃಷ್ಟಿ ಮಾಡಿದ ಎಂಬುದು ಆಧ್ಯಾತ್ಮಿಕ ಸಿದ್ಧಾಂತದಂತೆ ವೈಜ್ಞಾನಿಕ ಸಂಶೋಧನೆಯೂ ಹೌದು. ಇದು ಹೇಗಾಯಿತು ಎಂಬುದು ಆಧ್ಯಾತ್ಮಕ್ಕೂ ಒಗಟು ವಿಜ್ಞಾನಕ್ಕೂ ಒಗಟು. ಹಾಗೆಯೇ ಮನುಷ್ಯ ಜೀವಿಯು ಹೇಗೆ ಸೃಷ್ಟಿಯಾಗುತ್ತದೆ ಎಂಬುದು ತಂದೆ ತಾಯಿಗಳ ಮಿಲನದಿಂದ ಎಂದು ನಾವು ತಿಳಿದಿದ್ದೇವೆ. ಆದರೆ ನನಗೆ ಹುಟ್ಟಿಸಿದ ತಂದೆ ತಾಯಿಯರೇ ಯಾರೆಂಬುದು ಗೊತ್ತಿಲ್ಲ ಎನ್ನುವಲ್ಲಿ ಮೌನೇಶ್ವರರ ವಿಶ್ವಾತ್ಮಕ ದರ್ಶನವಿದೆ. ಹುಟ್ಟಿನ ಕುರುಹುಗಳನ್ನೇ ಮೀರುವ ಮೂಲಕ ವಿಶ್ವ ಜ್ಯೋತಿಯಾಗಿದ್ದಾರೆ. ಹೀಗಿರುವಾಗ ಸಕಲ ಜೀವರಾಶಿಗಳನ್ನು ಸೃಷ್ಟಿಮಾಡಿದ ಪರಮಾತ್ಮನ ಬಗ್ಗೆ ನಮಗೇನು ಗೊತ್ತಿರಲು ಸಾಧ್ಯ. ಹಾಗೆ ನಾನು ದೇವರನ್ನು ಕಾಣಬೇಕೆಂದು ಹುಡುಕುತ್ತಾ ಹೋಗುತ್ತೇನೆ ಎಂಬ ಪ್ರಯತ್ನ ಮೂರ್ಖತನದ್ದಾಗುತ್ತದೆ. ಬಾಹ್ಯ ಹುಡುಕಾಟಕ್ಕಿಂತ ಆಂತರಿಕ ಶೋಧ ಮುಖ್ಯ ಎಂಬುದು ಇಲ್ಲಿನ ಅರ್ಥ. ಅಂದರೆ ಕುರುಹು ಮೀರಿದ ಅರಿವು ಕಾಣುವ ಬಯಕೆ.

೨೮೮

ವರವಿರಲು ದೈವ, ಅರುವಿರಲು ಮನುಜನು
ಗರುವಿನಲ್ಲಿ ಗಂಭೀರೈಶ್ವರ್ಯವು ಎಷ್ಟಿದ್ದರೂ
ಸ್ಥಿರವಾಗಲಿಲ್ಲ, ಬಸವಣ್ಣ

ತಾತ್ಪರ್ಯ : ಬೇಡಿದ್ದನ್ನು ಕೊಡುವ ಸಾಮರ್ಥ್ಯ ಇರುವಂಥದ್ದನ್ನು ನಾವು ದೇವರು ಎಂದು ನಂಬುತ್ತೇವೆ. ಅಂತಹ ದೈವತ್ವವನ್ನು ಪರಮ ಯೋಗಿಗಳು, ತಪಸ್ವಿಗಳು ಸಾಧಿಸಲು ಸಾಧ್ಯ. ಆದರೆ ಸಾಮಾನ್ಯ ಮಾನವರೆಲ್ಲರಿಗೂ ಇದು ಸಾಧ್ಯವಿಲ್ಲ. ಕೊನೆಗೆ ಅರಿವಿನ ಜೀವಿಯಾಗಿ ಬದುಕಿ ಮಾನವನೆನಿಸಿಕೊಂಡರೆ ಅಷ್ಟೇ ಸಾಕು. ಅರಿವಿನ ಜೀವಿಯು ಗರ್ವಿಯೂ, ಲೋಭಿಯೂ, ಸ್ವಾರ್ಥಿಯೂ, ಕ್ರೂರಿಯೂ ಆಗಿರಲು ಸಾಧ್ಯವಿಲ್ಲ. ಅಂತವರ ಸಂಪತ್ತು ಲೋಕ ಕಲ್ಯಾಣಕ್ಕೆ ವಿನಿಯೋಗವಾಗುತ್ತದೆ. ಆದರೆ ಗರ್ವಿಯಾದ ಮಾನವ ಮಾನವನೇ ಅಲ್ಲ. ಅಂತವನಲ್ಲಿ ಎಷ್ಟು ಸಂಪತ್ತಿದ್ದರೇನು ಅದು ಸ್ಥಿರವಲ್ಲ, ಪಾಪಿಯ ಹಣ ಪ್ರಾಯಶ್ಚಿತಕ್ಕೆ ಎಂಬಂತೆ ಅದು ವ್ಯರ್ಥವಾಗಿ ಹಾಳಾಗುತ್ತದೆ.

೨೮೯

ಮೋಸದ ಮಲನಾಯಿ, ಹೇಸದು ಹೊಲೆ ನಾಯಿ
ಏಸು ಕಾಲದಲಿ ಯಮಗೊಂಡದೊಳು ಬಿದ್ದು
ಈಶನ ಗುರುತ ತಿಳಿಯದು, ಬಸವಣ್ಣ

ತಾತ್ಪರ್ಯ : ಮೋಸ ಮಾಡುವಂಥವರನ್ನು, ಕೆಟ್ಟ ಕೆಲಸ ಮಾಡುವಂಥವರನ್ನು ಮೌನೇಶ್ವರರು ಮಲನಾಯಿ ಹೊಲೆ ನಾಯಿಗಳಿಗೆ ಹೋಲಿಸಿ ಹೀಗಳೆದಿದ್ದಾರೆ. ಹೇಸಿಗೆ ತಿನ್ನುವಂತಹ ನೀಚಗುಣವುಳ್ಳವರನ್ನು ನಾಯಿಗಳೆಂದು ಕರೆದಿದ್ದಾರೆ. ಅಂತವರಿಗೆ ಬದುಕೇ ಯಮಗೊಂಡವಾಗಿ ಅದರಲ್ಲಿಯೇ(ಯಮಲೋಕದಲ್ಲಿರುವ ಹೇಸಿಗೆಯ ಹೊಂಡ)ಎಷ್ಟೋ ಕಾಲ ಹೊರಳಾಡುತ್ತಾರೆ. ಅಂತವರು ಸಾಮಾನ್ಯ ಮನುಷ್ಯರ ಮಟ್ಟಕ್ಕೂ ಏರಲಾರರು. ಪರಿಶುದ್ಧ ಪಾರಮಾರ್ಥದ ಗುರಿಯಾದ ಪರಮಾತ್ಮನ ಗುರುತನ್ನು ಕೂಡಾ ಅರಿಯಲಾರರು.

೨೯೦

ಪಾತಕದ ಪರ್ವತವು ಸೂತಕದ ಸರಮಾಲೆ
ಮಾತಂಗವೆಲ್ಲ ಮಸವಂಟಿಗೆ
ಬೂಟಾಟಿಕೆಯೆಲ್ಲ ದೈವವು, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ತಮ್ಮ ಸುತ್ತಲಿನ ಲೋಕವನ್ನು ನೋಡಿ ವಿಮರ್ಶಿಸುತ್ತ ಪಾಪಕಾರ್ಯಗಳು ಗುಡ್ಡದಂತಿವೆ. ಸೂತಕಗಳು ಸರಮಾಲೆಯಾಗಿ ಕೊನೆಯಿಲ್ಲದಂತೆ ನಡೆದಿವೆ. ಮಾತಂಗ ಬೆಟ್ಟದಂಥ ತಪೋಭೂಮಿಯೂ ಸ್ಮಶಾನದಂತಾಗಿ ಹೋಗಿದೆ. ದೇವರುಗಳ ಹೆಸರಿನಲ್ಲಿ ಕೇವಲ ಬೂಟಾಟಿಕೆಗಳೇ ನಡೆದಿವೆ ಎಂದು ನುಡಿದಿದ್ದಾರೆ. ಪಾತಕ, ಸೂತಕಗಳು, ಮೋಸ, ವಂಚನೆ, ಅನ್ಯಾಯ, ಅನಾಚಾರ ಮುಂತಾದುವನ್ನು ಸೂಚಿಸುತ್ತವೆ. ಅವು ದೇವರು, ಧರ್ಮದ ಆಚರಣೆಗಳನ್ನೂ ಬಿಟ್ಟಿಲ್ಲ. ಅವೇ ಪರ್ವತ

ದಷ್ಟು ಅಗಾಧವಾಗಿ ಒಟ್ಟಿಕೊಂಡಿವೆ. ಏಕದೇವೋಪಾಸನೆಯನ್ನು ಬಿಟ್ಟು ಅನೇಕ ದೇವರುಗಳನ್ನು ಸೃಷ್ಟಿಸಿಕೊಂಡ ನಮ್ಮ ಸಮಾಜದಲ್ಲಿ ಕೇವಲ ಬೂಟಾಟಿಕೆಗಳೇ ದೈವವಾಗಿ ತೋರಿದ್ದರೆ ಆಶ್ಚರ್ಯವಿಲ್ಲ.

೨೯೧

ಆರನಳಿದಂಥವರು ಮಾರಹರ ಮಾದೇವರು
ಧಾರುಣಿಯನು ದಾಟಿ ಪೋಗಲು, ಕೈಲಾಸ
ಸೇರುವದು ಸಿದ್ಧ, ಬಸವಣ್ಣ

ತಾತ್ಪರ್ಯ : ಅಂತರಂಗ ಶುದ್ಧಿಯೇ ಪರಮಾತ್ಮನ ನಿಜವಾದ ಮಾರ್ಗ. ಮಾನವನ ವೈರಿಗಳಾದ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳೆಂಬ ಆರು ದುರ್ಗುಣಗಳು ಅವನ ಮನದೊಳಗೇ ಇದ್ದು ಅವನನ್ನು ಅಧೋಗತಿಗೆ ತಳ್ಳುತ್ತವೆ. ಅವುಗಳನ್ನು ಗೆಲ್ಲುವುದೇ ಪಾರಮಾರ್ಥದ ಸಾಧನೆಯ ಮಾರ್ಗ. ಹಾಗೆ ಗೆದ್ದವರು ಮಾರಹರ ಮಹಾದೇವನಿಗೆ ಸಮಾನರಾಗುತ್ತಾರೆ. ಕೈಲಾಸವನ್ನು ಅವಶ್ಯವಾಗಿ ಸೇರುತ್ತಾರೆ.

೨೯೨

ಬಸವನುಂಗುರ ಬೆರಳಲ್ಲಿ ಧರಿಸಿ ಭಸಿತವನಿಟ್ಟ ಮೇಲೆ
ಹುಸಿಯನಾಡುವುದು ಬಿಡಬೇಕು. ಇದಕ್ಕೆ ನಮ್ಮ
ಶಶಿಧರ ಒಪ್ಪಲರಿಯನು, ಬಸವಣ್ಣ

ತಾತ್ಪರ್ಯ : ಶಿವಭಕ್ತರಾದವರು ವಿಭೂತಿ ಹಚ್ಚುವುದು, ರುದ್ರಾಕ್ಷಿ ಧರಿಸುವುದು, ಬೆರಳಿಗೆ ಬಸವಣ್ಣನ ಮುದ್ರೆಯುಂಗುರ ಧರಿಸುವುದು ಮುಂತಾದ ವೇಷ ಭೂಷಣ ಗಳನ್ನು ಮಾಡಿಕೊಳ್ಳುವುದು ಆ ಕಾಲದ ಶರಣರ ಪದ್ಧತಿಯಾಗಿತ್ತು. ಶರಣರಾದವರು ತಮ್ಮ ನೀತಿ ನಡತೆಗಳನ್ನು ಅದಕ್ಕೆ ತಕ್ಕಂತೆ ಅನುಸರಿಸಬೇಕಾಗಿತ್ತು. ಅಂತಹ ನಡತೆಗಳಲ್ಲಿ ನಿಜ ಶರಣನು ಸುಳ್ಳು ನುಡಿಯಬಾರದು ಎಂಬುದೂ ಒಂದು. ಆದರೆ ಶಿವಭಕ್ತನ ವೇಷಭೂಷಣಗಳನ್ನು ಧರಿಸಿಯೂ ಸುಳ್ಳಾಡುವವರು ಬಹುಶಃ ಮೌನೇಶ್ವರರ ಕಾಲದಲ್ಲಿ ಇದ್ದಿರಬೇಕು. ಅಂತವರನ್ನು ನೋಡಿ ಈ ವಚನ ಹುಟ್ಟಿರಬಹುದು.

೨೯೩

ಕಾಲ ಮೂಲವ ಬಲ್ಲ, ಬಾಲ ವಿರಕ್ತನ ಮೂಲ
ಮಾನವರಿಗೆ ತಿಳಿಯದು ಹೀಗೆಂದು
ಲೋಲ ವಿರಕ್ತಯ್ಯ ನುಡಿದನು, ಬಸವಣ್ಣ

ತಾತ್ಪರ್ಯ : ಈ ವಚನದಲ್ಲಿ ಬರುವ 'ಬಾಲ ವಿರಕ್ತ' ಯಾರು ಎಂಬುದು ಗೊತ್ತಾಗುವುದಿಲ್ಲ. ಲೋಲ ವಿರಕ್ತಯ್ಯ ಎಂಬುದು ಮೌನೇಶ್ವರರನ್ನೇ ಸೂಚಿಸುತ್ತದೆ ಎಂದು ಹೇಳಬಹುದು. ಆ ಬಾಲ ವಿರಕ್ತ ಮಗುವಾಗಿದ್ದಾಗಿನಿಂದಲೇ ವಿಶೇಷ ಆಧ್ಯಾತ್ಮಿಕ ಶಕ್ತಿಯನ್ನು ಪಡೆದಿದ್ದ. ಆತನು ಕಾಲದ ಮೂಲವನ್ನು ಬಲ್ಲವನಾಗಿದ್ದ ಎಂದರೆ ತ್ರಿಕಾಲ ಜ್ಞಾನಿಯಾಗಿದ್ದನೆಂದು ಗೊತ್ತಾಗುತ್ತದೆ. ಅಂತಹ ಬಾಲಯೋಗಿಯ ಮೂಲವು ಸಾಮಾನ್ಯ ಮಾನವರಿಗೆ ತಿಳಿಯದು. ಬಹುಶಃ ಬಾಲಕನಾಗಿದ್ದಾಗಿನಿಂದಲೇ ತನಗೆ ಅಂತ ದೈವದೊಲುಮೆಯಾಗಿತ್ತು ಎಂಬುದಾಗಿ ತಮ್ಮನ್ನು ಕುರಿತೇ ಮೌನೇಶ್ವರರು ಹೇಳಿರಬಹುದು.

೨೯೪

ನಾಮವ ಧರಿಸಿ ನೇಮ ಸ್ನಾನವ ಮಾಡಿ
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಲಿ
ಮಾತು ಕಲಿತುಕೊಂಡು ಮಹಾಜ್ಞಾನಿಗಳೆನಿಸುವ
ಮೂಢ ಮಾನವರಿಗೆ ಒಳ್ಳೆಯ ನಾಮ ದೊರಕುವುದೆ
ಭೂಮಿಯ ಮೇಲಣ ಮಣ್ಣನೆ ತಂದು
ನೀರಲಿ ಕಲಿಸಿ ನಾಮವ ಮಾಡಿ
ಸ್ಥಾನ ಸ್ಥಾನಕ್ಕೆ ಧರಿಸಿಕೊಂಡು ನಾನಾ
ಲೋಕಂಗಳಲಿ ನಾಮಧಾರಿಗಳಾದರು
ಹೇಮಾಧಿಪತಿ ಚೆನ್ನಬಸವಣ್ಣ ಬಂದು
ನಾಮ ಲಕ್ಷಣವ ಕೇಳಲು ನೀವು ಉತ್ತರವ
ಕೊಟ್ಟರೆ ನಿಜವಂತರೆಂಬೆನು, ಕೊಡದಿದ್ದರೆ
ನಿಮ್ಮ ಸೂತಕ ಕೊಂಡದ ಪಾಲನೆ ಮಾಡುವನು
ನಿಮ್ಮ ಪಡಿಪಾಟು ಹೇಳಲಳವಲ್ಲ
ಜೋಕೆಯಿಂದ ತಿಳಿದುಕೊಳ್ಳಿರಿ
ನಾಮಧಾರಿಗಳೆಲ್ಲರು, ಬಸವಣ್ಣ

ತಾತ್ಪರ್ಯ : ಸ್ನಾನ ಮಾಡಿ ನಾಮವ ಧರಿಸಿ ಮಾತು ಕಲಿತುಕೊಂಡು ಮಹಾಜ್ಞಾನಿಗಳೆಂಬಂತೆ ಮಾತಾಡುವ ನಾಮಧಾರಿಗಳು ಒಳಗೆ ಕಾಮ ಕ್ರೋಧಾದಿಗಳನ್ನು ತುಂಬಿಕೊಂಡಿರುವ ಮೂಢ ಮಾನವರು. ಅವರಿಗೆ ಒಳ್ಳೆಯ ಹೆಸರು(ನಾಮ) ದೊರೆಯುವುದಿಲ್ಲ. ಭೂಮಿಯಲ್ಲಿ ಸಿಗುವ ಒಂದು ಬಗೆಯ ಮಣ್ಣನ್ನು ನೀರಿನಲ್ಲಿ ಕಲಸಿ ಹಣೆಗೆ ಹಾಗೂ ಮತ್ತಿತರ ಅಂಗಾಂಗಗಳಿಗೆ ನಾಮಗಳನ್ನು ಧರಿಸಿ ನಾಮಧಾರಿ

ಗಳೆನಿಸಿಕೊಳ್ಳುತ್ತಾರೆ. ಅಂತವರನ್ನು ಹೇಮಾಧಿಪತಿಯಾದ(ಅಕ್ಕಸಾಲಿಗೆ) ಚೆನ್ನ ಬಸವಣ್ಣನ ಅವತಾರಿ ಮೌನೇಶ್ವರರು ಬಂದು ನಾಮ ಲಕ್ಷಣವನ್ನು ಕೇಳಿದರೆ ನೀವು ಕೊಡಲಾಗದೆ ಪಡಿಪಾಟಲು ಪಡುತ್ತೀರಿ. ನಿಮ್ಮ ಪಾತಕಗಳನ್ನೆಲ್ಲ ಆತನು ಹೊರಗೆ ಹಾಕುತ್ತಾನೆ. ಆದ್ದರಿಂದ ನಾಮಧಾರಿಗಳೆಲ್ಲ ಜೋಕೆ. ಅಂದರೆ ತನ್ನ ಕಾಲದಲ್ಲಿ ಪ್ರಚಲಿತವಿದ್ದ ವೈದಿಕ ಪಂಥಗಳ ದಿವಾಳಿತನವನ್ನು ವಚನ ಹೇಳುವಂತಿದೆ.

೨೯೫

ಅಕ್ಷತಿಯನಿಟ್ಟ ಮೇಲೆ ಠಕ್ಕೊಂದು ಬಿಡಬೇಕು
ಮುಕ್ಕಣ್ಣನಿಟ್ಟ ನೊಸಲಗಣ್ಣ ಧರಿಸಿದ ಮೇಲೆ
ಕಕುಲಾತಿಗಳ ಸುಡಬೇಕು, ಬಸವಣ್ಣ

ತಾತ್ಪರ್ಯ : ಹಣೆಯ ಮೇಲೆ ಜಾತಿ ಮತ ಸೂಚಕವಾಗಿ ಆಯಾ ಪಂಥಗಳ ಆಧ್ಯಾತ್ಮಿಕ ಸಂಕೇತಗಳಂತೆ ಕುಂಕುಮ, ಗಂಧ, ನಾಮ, ಅಕ್ಷತಿ ಮುಂತಾದುವನ್ನು ಧರಿಸುವ ಪದ್ಧತಿ ಇದೆ. ಕೆಲವು ಹಿಂದೂಗಳು ಅಕ್ಷತಿಯನ್ನು ಸಾಮಾನ್ಯವಾಗಿ ಹಚ್ಚಿ ಕೊಳ್ಳುತ್ತಾರೆ. ಅದನ್ನು ಅಕ್ಕಿಯಿಂದ ತಯಾರು ಮಾಡಲಾಗಿರುತ್ತದೆ. ಅದು ಶಿವನ ಹಣೆಗಣ್ಣಿನ ಸಂಕೇತವೆಂಬ ನಂಬಿಕೆ ಇದೆ. ಅದನ್ನು ಹಚ್ಚಿಕೊಂಡವನು ಠಕ್ಕುತನ, ನೀಚ ಗುಣಗಳನ್ನು ಬಿಟ್ಟು ನೀತಿವಂತನಾಗಿ ಪರಿಶುದ್ಧವಾದ ನಡತೆಯುಳ್ಳವನಾಗಿರ ಬೇಕು ಎಂಬುದೇ ಈ ವಚನದ ಅರ್ಥ.

೨೯೬

ಯಜ್ಞೋಪವೀತನೇ ಧರಿಸಿ, ಅವಗುಣವನೆ ಕೆತ್ತಿ
ಭರ್ಗೋದೇವನ ಭಜಿಸಿ ಬ್ರಾಹ್ಮಣನಾದೆನೆಂದರೆ
ಹಗ್ಗವ ಹಾಕಿ ಕೊರಳು ಕೊಯ್ಕೆಂದು ಆರು ಹೇಳಿದರು
ಈತ ಆಚಾರನಲ್ಲ ಬ್ರಾಹ್ಮಣನಲ್ಲ ಶೂದ್ರನಲ್ಲ
ಆವ ಕುಲವೆಂದು ತಿಳಿಯಲಿ, ಬಸವಣ್ಣ

ತಾತ್ಪರ್ಯ : ಜನಿವಾರ ಪಾವಿತ್ರ್ಯತೆ ಮತ್ತು ಪ್ರಬುದ್ಧತೆಯ ಸಂಕೇತ. ಅಂತಹ ಜನಿವಾರ ಹಾಕಿಕೊಂಡ ಬ್ರಾಹ್ಮಣರು ಯಜ್ಞ ಹೋಮಗಳ ನೆಪದಲ್ಲಿ ಮೇಕೆ, ಕುರಿ, ಕೋಣ ಮುಂತಾದ ಪ್ರಾಣಿಗಳನ್ನು ಎಳೆತಂದು ಬಲಿ ಕೊಡುತ್ತಾರೆ. ಬ್ರಹ್ಮಜ್ಞಾನಿಯಾದ ಬ್ರಾಹ್ಮಣ ಸತ್ಯ ಅಹಿಂಸೆ, ಶ್ರದ್ಧೆ, ಭಕ್ತಿಗಳ ಪರಿಶುದ್ಧ ಜೀವನ ನಡೆಸಬೇಕಾದಂಥವನು. ಅಂತವರು ಇಂತಹ ಹಿಂಸೆಯ ಮಾರ್ಗವನ್ನು ಹಿಡಿದರೆ ಅವರನ್ನು ಯಾವ ಕುಲಕ್ಕೆ ಸೇರಿಸಬೇಕು. ಹೀಗಾಗಿ ಬ್ರಹ್ಮಜ್ಞಾನ ಪಥದರ್ಶಕದ ಸ್ವರೂಪವಾದ ಜನಿವಾರ ತನ್ನ ಅರ್ಥಕಳೆದು

ಕೊಂಡು ಹಗ್ಗದಂತೆ ಆಗುತ್ತದೆ. ಇದೆಂತಹ ಪದ್ಧತಿ ಎಂದು ಮೌನೇಶ್ವರರು ಖೇದದಿಂದ ನುಡಿದಿದ್ದಾರೆ.

೨೯೭

ಚೆಂಡಿಕೆಯ ಬಿಟ್ಟೇನು ದಂಡ ಪ್ರಣಾಮ ಎರಗೇನು
ಹೆಂಡ ಖಂಡವ ತಿಂದು ಕಂಡಲ್ಲಿ ತಿರಿದುಂಡು ಇದ್ದೇನು
ಗುಂಡಿಗೆಯ ಬಾಬಯ್ಯ ಗುರುವಾದದ್ದು
ಕಂಡಿಲ್ಲವೇನೊ ಕುರುಡರು, ಬಸವಣ್ಣ

ತಾತ್ಪರ್ಯ : ಗುಂಡಿಗೆಯ ಬಾಬಯ್ಯ ಮೌನೇಶ್ವರರ ಆಧ್ಯಾತ್ಮಿಕ ಗುರುವಾಗಿರಬೇಕು. ಆದರೆ ಆತ(ಆಧ್ಯಾತ್ಮ ಯೋಗಿಗಳ) ಗುರುವಾದದ್ದನ್ನು ಸಾಮಾನ್ಯರು ಅರಿಯಲಾರರು ಎಂಬ ಅರ್ಥವನ್ನು ವಚನ ಕೊಡುತ್ತದೆ. ಅದನ್ನೇ ಮೌನೇಶ್ವರರು ತಮಗೇ ಅನ್ವಯಿಸಿ ಕೊಂಡು ಹೇಳಿದ್ದಾರೆ ಎಂಬ ಇನ್ನೊಂದು ಅರ್ಥವನ್ನೂ ಕೊಡುತ್ತದೆ. ತಾನು ಚಂಡಿಕೆ ಬಿಟ್ಟು ದಂಡ ಪ್ರಮಾಣ ಮಾಡುವ ಸಂಪ್ರದಾಯಸ್ಥನಾಗಿದ್ದರೂ ಅಸ್ವಸ್ಥ ಬದುಕು ಮಾಡಿ ತಿರಿದುಂಡು ತಿರುಗುತ್ತಾ ಗುಂಡಿಗೆಯ ಬಾಬಯ್ಯ ಎಂಬ ಆಧ್ಯಾತ್ಮ ಗುರುವನ್ನು ಪಡೆದು ಸಾಧಕನಾದೆ. ಇದರ ಮರ್ಮ ಸಾಮಾನ್ಯರಿಗೆ ಗೊತ್ತಾಗುವುದಿಲ್ಲ.

೨೯೮

ರಾಟಾಣಕೆ ದಾರವ ಹಾಕಿದರೆ ರಂಡೇರ ಸಲುಹಿತ್ತು
ಭೂಮಂಡಲದ ಅಭಿಮಾನ ಮುಚ್ಚಿತ್ತು ಈ
ಪಾಪಿಯ ಕೊರಳಲ್ಲಿ ಹಾಕಿದರೆ ಏತಕ್ಕೆ ಬಂತು
ಇದನ್ನು ನಮ್ಮ ಪಾಪೋಸಿಗೆ
ಹೊಲಿದರು ಹೊಲೆಯರು, ಬಸವಣ್ಣ

ತಾತ್ಪರ್ಯ : ಇದು ದಾರವನ್ನು ಜನಿವಾರವೆಂದು ಕೊರಳಲ್ಲಿ ಹಾಕಿಕೊಂಡು ತಾವು ಶ್ರೇಷ್ಠರು ಎಂದು ಬೀಗುವ ಬ್ರಾಹ್ಮಣವರ್ಗವನ್ನು ಅತಿ ಕಟುವಾಗಿ ವಿಡಂಬಿಸುವ ವಚನವಾಗಿದೆ. ಹತ್ತಿಯನ್ನು ಚರಕದಲ್ಲಿ ನೂತು ಮಾಡಿದ ದಾರ ಬಟ್ಟೆಯಾಗುತ್ತದೆ. ಲೋಕದ ಜನರ ಮಾನ ಮುಚ್ಚುತ್ತದೆ. ರಂಡೆಯರು ಮುಂಡೆಯರು ಚರಕದಲ್ಲಿ ನೂತು ದಾರ ಮಾಡಿ ತಮ್ಮ ಹೊಟ್ಟೆ ಹೊರೆಯುತ್ತಾರೆ. ಅದೇ ದಾರವನ್ನು ಹೊಲೆಯರು ಪಾಪೋಸು(ಚಪ್ಪಲಿ) ಹೊಲಿಯುವುದಕ್ಕೂ ಉಪಯೋಗಿಸುತ್ತಾರೆ. ಇಲ್ಲೆಲ್ಲ ದಾರದ ಸಾಮಾಜಿಕ ಉಪಯುಕ್ತತೆ ಇದೆ. ಆದರೆ ಅದೇ ದಾರವನ್ನು ಶ್ರೇಷ್ಠತೆಯ ಕುರುಹಾಗಿ ಕೊರಳಲ್ಲಿ ಹಾಕಿಕೊಂಡು ಕಪಟಿಗಳಾದರೆ ಏನು ಉಪಯೋಗ ಎಂದು ಮೌನೇಶ್ವರರು ಜನಿವಾರ ಹಾಗೂ ಬ್ರಾಹ್ಮಣ್ಯದ ಶುಷ್ಕ ಶ್ರೇಷ್ಠತೆಯನ್ನು ವಿಡಂಬಿಸಿದ್ದಾರೆ.

೨೯೯

ನೇಮ ನಿತ್ಯಗಳೇಕೆ ಹೋಮ ಜಳಕವು ಏಕೆ
ಸೋಮವಾರವೇಕೆ ಸೊಡರೇಕೆ, ತನ್ನ ಮನದೊಳಗಿನ
ಸಾಮಘಾತಕದ ಅವಗುಣಗಳ
ತಾನು ಬಿಡದನಕ, ಬಸವಣ್ಣ

ತಾತ್ಪರ್ಯ : ನೇಮ ನಿತ್ಯಗಳು, ಜಳಕ(ಸ್ನಾನ) ಪೂಜೆ, ಹೋಮಾದಿಗಳು, ಸೋಮ ವಾರ ಮಂಗಳವಾರ ಮುಂತಾದ ವಾರಗಳ ಆಧಾರದ ಮೇಲೆ ನಡೆಯುತ್ತವೆ. ವ್ರತ ನೇಮಾದಿಗಳು. ಸೊಡರು(ದೀಪ) ಧೂಪ, ನೈವೇದ್ಯಾದಿಗಳು ಇವೆಲ್ಲವುಗಳು ಅಂತ ರಂಗ ಶುದ್ಧಿ ಆತ್ಮೋದ್ಧಾರಕ್ಕೆಂದೇ ರೂಪಿತವಾಗಿ ಧರ್ಮ, ಮತ ಪಂಥಗಳಲ್ಲಿ ಆಯಾ ಜಾತಿ ಕುಲ ದೈವಾದಿಗಳ ಹೆಸರುಗಳಲ್ಲಿ ನಡೆಯುತ್ತಾ ಬಂದಿವೆ. ಬರುಬರುತ್ತಾ ಇವೆಲ್ಲ ಕೇವಲ ಡಂಭಾಚಾರಗಳಾಗಿ ಬೆಳೆದು ಬಂದು ಅಂತರಂಗ ಶುದ್ಧಿ ಆತ್ಮೋದ್ಧಾರ ಸಮಾಜೋದ್ಧಾರ ಮೌಲ್ಯಗಳನ್ನು ಕಡೆಗಣಿಸಿವೆ. ಮನದೊಳಗೆ ಸಮಾಜವಿರೋಧಿ ಯಾದ(ಸಾಮಘಾತಕ) ದುರ್ಗುಣಗಳು ಹೆಚ್ಚಾಗುತ್ತಾ ಹೊರಟಿವೆ. ಆದ್ದರಿಂದ ಅಂತರಂಗದ ಶುದ್ಧಿಯಿಲ್ಲದೆ ಬಹಿರಂಗದಲ್ಲಿ ನಡೆಯುವ ವ್ರತ, ನೇಮ, ಪೂಜೆ, ಪುನಸ್ಕಾರಾದಿಗಳೆಲ್ಲ ವ್ಯರ್ಥವಾದಂಥವು.

೩೦೦

ನಡೆ ಶುದ್ಧ ನುಡಿ ಶುದ್ಧ ಒಡೆಯನ ಚಾಕರಿ ಶುದ್ಧ
ತೊಡೆಯಲ್ಲಿ ಶುದ್ಧ ಇದರಂಥ
ಒಡವಿ ಮತ್ತುಂಟೆ ಧರೆಯೊಳಗೆ
ಕೇಡು ನುಡಿದವನೆ ಹೊಲೆನಾಯಿ, ಬಸವಣ್ಣ

ತಾತ್ಪರ್ಯ : ಅಂತರಂಗ ಮತ್ತು ಬಹಿರಂಗ ಶುದ್ಧಿಗಳೇ ಮಾನವನಿಗೆ ನಿಜವಾದ ಸಂಪತ್ತು ಹೊರತು ಹೊನ್ನು, ಮಣ್ಣುಗಳು ಸಂಪತ್ತಲ್ಲ. ಆತ್ಮಜ್ಞಾನವೇ ನಿಜವಾದ ಸಂಪತ್ತು ಎಂದು ಹೇಳಿದ ಅಲ್ಲಮಪ್ರಭುಗಳ ಮಾತಿನ ಸಾರವೇ ಇಲ್ಲಿದೆ. ಮಾನವ ನಡೆಯಲ್ಲಿ ನುಡಿಯಲ್ಲಿ ಮಾಡುವ ಉದ್ಯೋಗದಲ್ಲಿ ಶುದ್ಧನಾಗಿರಬೇಕು. ತೊಡೆಯಲ್ಲಿ ಶುದ್ಧ ಅಂದರೆ ವಿಷಯ ಲಂಪಟನಾಗಬಾರದು. ಶುದ್ಧನಾಗಿರುವುದೇ ಒಂದು ದೊಡ್ಡ ಸಂಪತ್ತಿದ್ದಂತೆ. ಇದಕ್ಕೆ ಭಿನ್ನವಾಗಿ ಕೆಟ್ಟದ್ದನ್ನು ನುಡಿಯುವವನು ಹೊಲೆ ನಾಯಿಯಂತೆ. ಈ ವಚನ ತತ್ವವನ್ನು ಆಚರಣೆಗೆ ತರುವ ವಾಸ್ತವ ಸತ್ಯಮಾರ್ಗ ವನ್ನು ಹೇಳುತ್ತದೆ.

೩೦೧

ಒಡೆಯನು ಬಡವನೆಂದು ಬಡದಂಟನೆ ಮೆದ್ದು
ಮಡುವಿನ ಸೀತಾಳವನೆ ಕೊಂಡು
ಮಡಿ ಮೈಲಿಗೆ ಎಂದು ಮನದಲ್ಲಿ
ನಿಷೇಧವಿಲ್ಲದೆ ಹೋಗುವರು, ಇದರಂಥ
ಒಡವಿ ಮತ್ತುಂಟೆ ಧರೆಯೊಳಗೆ
ಕೇಡು ನುಡಿದವನೆ ಹೊಲೆಗತ್ತೆ, ಬಸವಣ್ಣ

ತಾತ್ಪರ್ಯ : ಸರಳ ನಿಸ್ಪೃಹ ಜೀವನವನ್ನು ಒಂದು ಸಾಕು ಪ್ರಾಣಿಗೆ ಹೋಲಿಸಿ ಹೇಳಿರುವ ಈ ವಚನವು ಪ್ರಾಣಿ ಮತ್ತು ಮಾನವ ವರ್ಗಗಳೆರಡನ್ನೂ ಜೋಡಿಸಿ ಕೊಂಡು ಲೋಕದ ಅತ್ಯಂತ ಸಾರ್ಥಕವಾದ ಬದುಕಿನ ಒಂದು ಮಾದರಿಯನ್ನು ಮುಂದಿಡುತ್ತದೆ. ತನ್ನ ಒಡೆಯ ಹೊಟ್ಟೆ ತುಂಬಾ ಸಮೃದ್ಧವಾಗಿ ಮೇವು ಹಾಕಲಾರದಷ್ಟು ಬಡವ. ಹಾಗೆಂದು ಅಲ್ಲಲ್ಲಿ ಕಳ್ಳ ಮೇವು ಮೇಯದೆ ಸಿಕ್ಕ ಒಣ ದಂಟನ್ನೇ ತಿಂದು ಹಳ್ಳದ ನೀರನ್ನು ಕುಡಿದು ಹೊಟ್ಟೆ ತುಂಬಿಸಿಕೊಳ್ಳುವುದು ಒಂದು ಬಗೆ. ಆ ಪ್ರಾಣಿಗೆ ಮಡಿ ಮೈಲಿಗೆ, ಮೇಲು ಕೀಳು ಎಂಬ ನಿಷೇಧ ದೃಷ್ಟಿ ಇಲ್ಲದ ಸಹಜ ಸಮದೃಷ್ಟಿ ಇರುತ್ತದೆ. ಎಲ್ಲರನ್ನೂ ಸಮವಾಗಿ ಕಾಣುವ ಸಮಚಿತ್ತ ದೃಷ್ಟಿಯೇ ಒಂದು ಒಡವೆ. ಇದಕ್ಕಿಂತ ದೊಡ್ಡ ಒಡವೆ(ಸಂಪತ್ತು) ಲೋಕದಲ್ಲಿ ಏನಿದೆ? ಒಬ್ಬ ಸಹಜ ಸನ್ಯಾಸಿಯ, ಯೋಗಿಯ ಜೀವನ ಕೂಡಾ ಹೀಗೇ ಇರುತ್ತದೆ. ಇದೇ ಜೀವನದ ದೊಡ್ಡ ಆದರ್ಶ ದೊಡ್ಡ ಸಂಪತ್ತು. ಇದಕ್ಕೆ ಭಿನ್ನವಾಗಿ ನುಡಿಯುವವನು ಹೊಲೆಗತ್ತೆಯಂತೆ ಕೀಳು ಮನುಷ್ಯನಾಗುತ್ತಾನೆ.

೩೦೨

ಗುಂಡಬ್ರಹ್ಮನ ಮನಗಂಡು ಬಿದ್ದನು ಬೆನ್ನ
ಪುಂಡಗಾರಿಕೆಗೆ ಅಣಿಯಿಲ್ಲ ಶೂಲ ಚಿಗಿಯಿತು
ಕೆಂಗಣ್ಣಿನವರ ಕೃಪೆಯು, ಬಸವಣ್ಣ

ತಾತ್ಪರ್ಯ : ಗುಂಡ ಬ್ರಹ್ಮನ ಮನವನ್ನು ನೋಡಿ ಪರಮಾತ್ಮ ಅವನ ಬೆನ್ನ ಹಿಂದೆ ಬಿದ್ದ. ಅಲ್ಲಿ ಪುಂಡಗಾರಿಕೆಗೆ ಅವಕಾಶವಿಲ್ಲ. ಕೆಂಡಗಣ್ಣಿನ ಆ ಮುಕ್ಕಣ್ಣನ ಕೃಪೆಯಿಂದ ಶೂಲವು ಚಿಗಿತು ಬೆಳೆಯಿತು. ಶೂಲ ಚಿಗಿಯುವುದೆಂದರೆ ಹಿಂಸೆ ಕೊನೆಗೊಂಡಂತೆ ಹಿಂಸೆ ಮತ್ತು ರಕ್ತಪಾತ ರಹಿತ, ಸಮೃದ್ಧ ಸಮಾಜದ ಹಂಬಲ ಮೌನೇಶ್ವರರಲ್ಲಿ ಕಾಣುತ್ತದೆ.

೩೦೩

ಕೊಟ್ಟು ಹುಟ್ಟಲಿಬೇಕು, ಹುಟ್ಟಿ ಪಡೆಯಲಿಬೇಕು
ಸಿಟ್ಟಲಿ ಶಿವನ ಬೈದರೆ ಮುಂದೆ ಕನಿ
ಕಷ್ಟ ತಪ್ಪುವದೆ, ಬಸವಣ್ಣ

ತಾತ್ಪರ್ಯ : ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಎಂಬಂತೆ ದಾನ ಮಾಡಿ ಪುಣ್ಯಗಳಿಸಿದರೆ ಒಳ್ಳೆಯ ಜನ್ಮದಲ್ಲಿ ಮಾನವ ಹುಟ್ಟಿ ಬರುತ್ತಾನೆ. ನಾವು ಪಡೆದದ್ದು ನಮ್ಮ ಈ ಜನ್ಮದ ಸುಕೃತದ ಫಲ. ಅದಿಲ್ಲದೆ ಅತಿ ಆಸೆಯಿಂದ ಇಲ್ಲದಿರುವುದನ್ನು, ಬರಬೇಕೆಂಬುದನ್ನು ಬಯಸುತ್ತ, ಸಿಗದೆ ಇರುವುದಕ್ಕೆ ಚಿಂತಿಸುತ್ತ, ಶಿವನೇ ಕೊಡಲಿಲ್ಲ ಎಂದು ಅವನನ್ನು ಬಯ್ದರೆ ಮುಂದೆ ಇನ್ನೂ ಕಷ್ಟವೇ ಬರುತ್ತದೆ. ಬಡತನವೇ ಇರಲಿ ಸಿರಿತನವೇ ಇರಲಿ ಅದು ಶಿವನ ಪ್ರಸಾದ ಎಂದು ಸ್ವೀಕರಿಸಿ ಆಶೆ ಪಡದೆ ಸಮಚಿತ್ತದಿಂದ ಬಾಳುವುದೇ ಜ್ಞಾನ ಮಾರ್ಗ.

೩೦೪

ಕಟ್ಟಲು ಬಿಡಲಿಕ್ಕೆ ದೇವರು ಬಟ್ಟಲುದಕದಲ್ಯೆತೆ?
ಕಟ್ಟುವುದನೆ ಕಟ್ಟಿ ಬಿಡುವುದನೆ ಬಿಟ್ಟರೆ ಕೈಲಾಸ
ಬಟ್ಟಬಯಲ ಕಾಣಾ, ಬಸವಣ್ಣ

ತಾತ್ಪರ್ಯ : ದೇವರನ್ನು ಬಟ್ಟಲಿನಲ್ಲಿನ ನೀರಿನಂತೆ ಹಿಡಿದಿಡಲಿಕ್ಕೆ ಅಥವಾ ಬಿಟ್ಟು ಬಿಡಲಿಕ್ಕೆ ಬರುತ್ತದೆಯೆ? ದೇವರನ್ನು ಸೆರೆಹಿಡಿದು ವಶಮಾಡಿಕೊಳ್ಳುವುದು ಅಷ್ಟು ಸುಲಭವೆ? ಆದರೆ ಕಟ್ಟಬೇಕಾದುದು ಚಂಚಲ ಮನಸ್ಸನ್ನು ಮತ್ತು ಬಿಟ್ಟು ಬಿಡ ಬೇಕಾದುದು ಆಶೆ, ಮೋಹ ಮುಂತಾದ ದುರ್ಗುಣಗಳನ್ನು. ಹೀಗೆ ಮಾಡು ವುದರಿಂದ ಕೈಲಾಸ ಬಟ್ಟ ಬಯಲು. ಅಂದರೆ ದೇವರು ಸುಲಭವಾಗಿ ವಶನಾಗುತ್ತಾನೆ. ತಾನೇ ದೇವನಾಗುತ್ತಾನೆ. ತನ್ನ ತಾನರಿವ, ತಾನೇ ಸೇವಕನಾಗುವ ಪ್ರಕ್ರಿಯಾತ್ಮಕ ಗುಣ ಇಲ್ಲಿದೆ.

೩೦೫

ಮುದ್ದುಮುಖದ ಆಧ್ಯಾತ್ಮ ಪರಬ್ರಹ್ಮ
ಇದ್ದದು ನುಡಿವ ಅರುಹುವನು ಮರ್ತ್ಯದೊಳಗೆ
ನಾನು ಎಂಬವರಿಗೆ ಲಿಗಾಡ, ಬಸವಣ್ಣ

ತಾತ್ಪರ್ಯ : ಆಧ್ಯಾತ್ಮಿಕ ಜ್ಞಾನ ಚಿಂತನೆಯಿಂದ ಮತ್ತು ಸಾಧನೆಯಿಂದ ಸುಂದರ ಸ್ವರೂಪನಾದ ಪರಬ್ರಹ್ಮನನ್ನು ಕಾಣಬಹುದು. ಇದಕ್ಕೆ ನಾನು ಎಂಬ ಅಹಂಕಾರವನ್ನು

ಸಂಪೂರ್ಣ ನಾಶಗೊಳಿಸಿ ಎಲ್ಲವೂ ಪರಮಾತ್ಮನೇ ಎಲ್ಲವೂ ಪರಮಾತ್ಮನದೇ ಎಂಬ ವಿನಯ ವೈರಾಗ್ಯಗಳು ನೆಲೆಗೊಂಡಿರಬೇಕಾಗುತ್ತದೆ. ಅಹಂಕಾರ ಮಮಕಾರ ಗಳಿಂದ ಕೂಡಿದವರಿಗೆ ಲೋಕದ ಜಂಜಾಟಗಳಲ್ಲಿ ಸಿಲುಕಿಕೊಂಡು ಒದ್ದಾಡುವುದು ತಪ್ಪಿದ್ದಲ್ಲ. ಇದು ವಿಶ್ವಸತ್ಯ. ನಾನು ಇದ್ದುದ್ದನ್ನು ಇದ್ದ ಹಾಗೆ ಹೇಳುತ್ತೇನೆ.

೩೦೬

ಕಾಳಮ್ಮನೆಂಬಾಕೆ ವಿಳೇಳು ಲೋಕದಕರ್ತಿ
ಕೀಳು ಮಾದಿಗರ ಕಾಳಿಕೆಯೊಳು ಅಡಗಿಹಳು ಸಕಲ
ಕಳೆಯಲ್ಲ ಆಕೆಯ ಒಡಲೊಳಗೆ, ಬಸವಣ್ಣ

ತಾತ್ಪರ್ಯ : ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಬಿದ್ದು ಪಾರ್ವತಿದೇವಿಯು ಕರ್ರಗಾಗಿ ಕಾಳಮ್ಮನಾಗಿ ಮೂಡಿ ಬಂದಳು ಎಂಬುದು ಭದ್ರಕಾಳಿ ವಿವಾಹದ ಕಥೆ. ಪಾರ್ವತಿ ಯನ್ನು ಶೈವರು ಮತ್ತಿತರರು ಪೂಜಿಸಿದರೆ ಕಾಳಮ್ಮನನ್ನು ವಿಶ್ವಕರ್ಮರು ತಮ್ಮ ಕುಲದೇವತೆಯನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಆಕೆಯು ಕಪ್ಪು ಕುಲದವರೆನಿಸಿ ಕೊಂಡ ಮಾದಿಗ ಮುಂತಾದವರಿಗೂ ಮಾತಂಗಿಯಾಗಿ ಆರಾಧ್ಯಳಾಗಿದ್ದಾಳೆ. ಆಕೆಯೂ ಎಲ್ಲ ಕಸುಬು ವೃತ್ತಿಗಳಿಗೂ ಹಾಗೂ ಕಲೆಗಳಿಗೂ ಒಡತಿ. ವಿಶ್ವದ ಎಲ್ಲ ಕಳೆ ಸೌಂದರ್ಯಗಳೂ ಆಕೆಯಲ್ಲಿವೆ. ಆಕೆಯೇ ಹದಿನಾಲ್ಕು ಲೋಕಗಳನ್ನು ಸೃಷ್ಟಿ ಮಾಡಿರುವ ಸೃಷ್ಟಿಕರ್ತೆ. ದೇವಿ ಉಪಾಸನೆ ಭಾರತದ ಅತಿ ಪ್ರಾಚೀನವಾದ ಪೂಜಾ ಮಾರ್ಗ. ದೇವಿಯ ಮಹಿಮೆಯ ಬಗ್ಗೆ ದೇವಿಪುರಾಣ ರಚಿತವಾಗಿದೆ. ಆದಿಮಾನವನ ಕಾಲದಿಂದಲೂ ಸ್ತ್ರೀ ಪ್ರಧಾನವಾದ ದೈವೋಪಾಸನೆ ಬೆಳೆದುಬಂದಿದೆ. ಹಳ್ಳಿಹಳ್ಳಿಗಳಲ್ಲಿ ಊರುಗಳಲ್ಲಿ ಗ್ರಾಮದೇವತೆ ಇದ್ದೇ ಇರುತ್ತಾಳೆ.

೩೦೭

ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ
ದೇವಿ ದೇವನು ಒಡಗೂಡಿ ನಾನಾ ಜೀವ
ಜಂತುಗಳು ಹುಟ್ಟಿದವು, ಬಸವಣ್ಣ

ತಾತ್ಪರ್ಯ : ಇದು ಭಾರತೀಯ ಆಧ್ಯಾತ್ಮ ವಿದ್ಯೆಯ ಮೂಲವನ್ನು ಹೇಳುವ ವಚನ. ಈ ಜಗತ್ತು ಸೃಷ್ಟಿಯಾಗಿರುವುದು ಜಗದ ತಾಯಿ ತಂದೆಗಳ ಸಮ್ಮಿಲನದಿಂದ. ಅವುಗಳನ್ನು ಪ್ರಕೃತಿ ಮತ್ತು ಪುರುಷ ಎನ್ನಲಾಗುತ್ತದೆ. ಪ್ರಕೃತಿಯೇ ಪಾರ್ವತಿ, ಪುರುಷನೇ ಪರಮೇಶ್ವರ. ಅದನ್ನೇ ಮಾನವ ಜನ್ಮಕ್ಕೆ ಸಮೀಕರಿಸಿ ಕಾಯವೇ ಕಾಳಮ್ಮ, ಜೀವವೇ ಪರಬ್ರಹ್ಮ ಎಂದು ಹೇಳಲಾಗಿದೆ. ಇದನ್ನೇ ವಿಜ್ಞಾನವು ಜಡ–ಚೇತನಗಳೆಂದು ವಿಂಗಡಿಸುತ್ತದೆ. ಇವೆರಡು ಜಗತ್ತಿನ ನಾನಾ ಜೀವರಾಶಿಗಳ ಉಗಮಕ್ಕೆ

ಕಾರಣವಾದ ಮೂಲ ತತ್ವಗಳು. ಕಾಯ ಮತ್ತು ಜೀವದ ಅವಿನಾಭಾವ ಸಂಬಂಧದ ತಾತ್ವಿಕತೆಯನ್ನಿಲ್ಲಿ ಕಾಣಬಹುದು.

೩೦೮

ಎಲ್ಲಾ ದೇವರನು ಕಲ್ಲಿನೊಳಗೆ ಮಾಡಿದರು ನಮ್ಮ
ಅಲ್ಲಮನ ಗುರುತ ತಿಳಿಯರು ಶಿವಶರಣರ
ಸೊಲ್ಲಿನೊಳಗಿದ್ದ ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಕಲ್ಲಿನ ದೇವರುಗಳನ್ನು ಪೂಜಿಸುವವರಿಗೆ ನಮ್ಮ ಅಲ್ಲಮಪ್ರಭು ಹೇಳಿದ ವ್ಯೋಮಮೂರ್ತಿ ಪರಮಾತ್ಮನ ನಿಜ ಸ್ವರೂಪ ತಿಳಿಯುವುದಿಲ್ಲ. ಶಿವಶರಣರು ಗುಡಿಯಲ್ಲಿರುವ ಕಲ್ಲಿನ ದೇವರಿಗೆ ಸೀಮಿತರಾಗದೆ ಪ್ರಭುದೇವರು ಹೇಳಿದ ಗಗನ ಸದೃಶನಾದ, ಅಸೀಮನಾದ, ವಿಶ್ವವಿಶಾಲ ರೂಪದ ಪರಮಲಿಂಗವನ್ನು ನಂಬಿ ಅದನ್ನೇ ಸಾಧಿಸುವುದರಲ್ಲಿ ತೊಡಗಿದರು. ಆದ್ದರಿಂದ ಶಿವಶರಣರ ಸೊಲ್ಲಿನಲ್ಲಿ ಅಜಡನಾದ ಪ್ರಭುದೇವನೇ ಇದ್ದಾನೆ ಹೊರತು ಬೇರಿಲ್ಲ.

೩೦೯

ಏಳೇಳು ಲೋಕದ ದೇವತೆಗಳು ಉಳಿಯಿಂದಲಾದಾರು
ಹಳಿಯಲಿ ಇನ್ನು ಯಾವುದನು
ಬರಿಯ ಮಾತು ಭೈರೂಪ, ಬಸವಣ್ಣ

ತಾತ್ಪರ್ಯ : ದೇವತೆಗಳನ್ನು ಪ್ರತಿಮೆಯ ರೂಪದಲ್ಲಿ ಕಟೆದು ದೇವಾಲಯಗಳಲ್ಲಿಟ್ಟು ಪೂಜಿಸುವುದು ದೇಶದ ಎಲ್ಲ ಕಡೆಗಳಲ್ಲಿ ನಡೆದಿದೆ. ಇವುಗಳೆಲ್ಲ ಶಿಲ್ಪಿಗಳ ಉಳಿ ಹಾಗೂ ಚಾಣಗಳಿಂದ ತಯಾರಾದಂಥವು. ಇವುಗಳಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಯಾವುದು ಶ್ರೇಷ್ಠ ಯಾವುದು ಕನಿಷ್ಠ ಎಂದು ಹೇಳಲು ಬರುವುದಿಲ್ಲ, ಯಾವುದನ್ನೂ ಹಳಿಯಲು ಬರುವುದಿಲ್ಲ. ಸಾರಾಂಶವೆಂದರೆ ದೇವತೆಗಳ ಸೃಷ್ಟಿ ಕರ್ತನೇ ಮಾನವ. ಹೀಗಿರುವಾಗ ಈ ಬಗ್ಗೆ ಬರಿಯ ಮಾತಾಡುವುದು ವೇಷಭಾರಿಕೆ ಯಾಗುತ್ತದೆ, ಡಾಂಭಿಕತನವಾಗುತ್ತದೆ.

೩೧೦

ನಾನಾ ದೇವರೆಲ್ಲ ಸುತ್ತಿಗೆಯ ಮಕ್ಕಳು
ಯೋನಿಯ ಮಕ್ಕಳು ಜಗವೆಲ್ಲ ನಾ ನನ್ನ
ಜ್ಞಾನ ಬಂದಂತೆ ಉಸುರುವೆನು, ಬಸವಣ್ಣ

ತಾತ್ಪರ್ಯ : ಎರಡು ಸತ್ಯಗಳನ್ನು ಇಲ್ಲಿ ಮೌನೇಶ್ವರರು ಹೇಳುತ್ತಾರೆ. ಒಂದು; ದೇವರ ಪ್ರತಿಮೆಗಳು(ಶಿವ, ವಿಷ್ಣು, ಗಣಪತಿ, ಹನುಮಂತ, ದೇವಿ ಇತ್ಯಾದಿ)

ಶಿಲ್ಪಿಯು ಚಾಣ ಸುತ್ತಿಗೆಗಳಿಂದ ಕಟೆದು ಮಾಡಿದಂಥವು. ಮಾನವರು ತಂತಮ್ಮ ದೇವರುಗಳನ್ನು ಮೂರ್ತಿರೂಪದಲ್ಲಿ ಪೂಜಿಸುವ ವೈಶಿಷ್ಟ್ಯ ಹಿಂದೂ ಧರ್ಮದಲ್ಲಿ ಬೆಳೆದುಬಂದಿದೆ. ದೇವಾಲಯಗಳು ಭಕ್ತಿ ಆತ್ಮಶುದ್ಧಿಯ ಸ್ಥಳಗಳಾಗದೆ ಶೋಷಣೆಯ ಮೂಢ ಆಚರಣೆಗಳ ಕೇಂದ್ರಗಳಾಗುತ್ತ ಬಂದಿವೆ. ಈ ಪರಂಪರೆಯನ್ನು ಬಸವಾದಿ ಶರಣರಂತೆ ಮೌನೇಶ್ವರರೂ ವಿರೋಧಿಸಿದ್ದಾರೆ. 'ನಾನಾ ದೇವರುಗಳೆಲ್ಲ ಚಾಣಿನ ಮಕ್ಕಳು' ಎಂಬುದರಲ್ಲಿ ಅನೇಕ ದೇವೋಪಾಸನೆಯ ನಿರಾಕರಣೆ ಇದೆ. ಇನ್ನೊಂದು ಕಠೋರ ಸತ್ಯವೆಂದರೆ 'ಯೋನಿಯ ಮಕ್ಕಳು ಜಗವೆಲ್ಲ' ಎಂದರೆ ತಾಯಿ ಗರ್ಭದಿಂದಲೇ ಎಲ್ಲಾ ಜೀವಿಗಳು ಜನಿಸುವುದು ವಿಶ್ವ ನಿಯಮ. ಇದಕ್ಕೆ ಭಿನ್ನವಾದ ಆಲೋಚನಾ ಲಹರಿಯೊಂದು ಹೆಣ್ಣು ಮಾಯೆ, ಪಾಪದ ಮೂಲ, ಹೆಣ್ಣಿನಿಂದ ಜನಿಸುವುದು ಹೀನವಾದುದು ಮುಂತಾದ ರೀತಿಯಲ್ಲಿ ಬೆಳೆದು ಬಂತು. ಈ ಹಿನ್ನೆಲೆಯಲ್ಲಿ ಮಹಾಪುರುಷರು ಕರ್ಣದಿಂದಲೋ, ಕುಂಭದಿಂದಲೋ, ಅಯೋನಿಜರಾಗಿಯೋ ಹುಟ್ಟಿ ಬಂದವರು ಎಂಬ ಕಥೆಗಳು ಬೆಳೆದು ಬಂದಿವೆ. ಇಂತಹ ಅವೈಜ್ಞಾನಿಕ ಹಾಗೂ ಅವೈಚಾರಿಕ ನೆಲೆಯನ್ನು ನಿರಾಕರಿಸುವ ಮೂಲಕ ಮೌನೇಶ್ವರರು ಹೆಣ್ಣಿನ ಮತ್ತು ತಾಯಿಯ ವಿಶೇಷ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ ಎಂಬುದು ಇದರರ್ಥ.

೩೧೧

ತೈಲವಿಲ್ಲದ ಜ್ಯೋತಿ ಬೈಲೊಳಗೆ ಉರಿಯುವದು
ಕೌಲು ಕೊಟ್ಟಂತೆ ನಡೆಸುವನು ಹರಿಶ್ಚಂದ್ರನ
ದೌಲತ್ತದೊಳಗೆ, ಬಸವಣ್ಣ

ತಾತ್ಪರ್ಯ : ಮಾತು ಕೊಡುವುದು ಎಂದರೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಜ್ಞೆ ಮಾಡುವುದು, ವಚನ ಕೊಡುವುದು ಮತ್ತು ಅದರಂತೆ ನಡೆದುಕೊಳ್ಳುವುದು. ಸತ್ಯಹರಿಶ್ಚಂದ್ರ ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಂಡು ರಾಜ್ಯವನ್ನು ಕಳೆದುಕೊಂಡ, ಹೆಂಡತಿ ಮಕ್ಕಳನ್ನು ಮಾರಿದ, ಸುಡುಗಾಡನ್ನು ಕಾದ. ಕೊನೆಗೆ ತನ್ನ ಹೆಂಡತಿಯನ್ನು ತಾನೇ ಶಿರಚ್ಛೇದ ಮಾಡುವ ಪ್ರಸಂಗವೂ ಬಂತು. ಆದರೆ ಸತ್ಯವನ್ನು ಬಿಡಲಿಲ್ಲ. ರಾಮಾಯಣ, ಮಹಾಭಾರತಗಳೂ ಇದೇ ಮೌಲ್ಯವನ್ನು ಸಾರುತ್ತವೆ. ಇದು ಭಾರತೀಯರ ಜೀವನದಲ್ಲಿ ಬಹಳ ದೊಡ್ಡ ಮೌಲ್ಯ. 'ಕೊಟ್ಟ ಮಾತಿಗೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂದು ಹೇಳುವ ಗೋವಿನ ಹಾಡು ಕೂಡಾ ಇದನ್ನು ಹೇಳುತ್ತದೆ. ಇಂಥ ಮಾರ್ಗವು ಸಾತ್ವಿಕ ಸಂಪತ್ತಿನ ರಾಜಮಾರ್ಗ. ಇಂಥ ದಾರಿಯಲ್ಲಿ ನಡೆಯುವವರಿಂದ ಅಘಟಿತ ಘಟನೆಗಳೂ ನಡೆಯುತ್ತವೆ. 'ತೈಲವಿಲ್ಲದ

ಜ್ಯೋತಿ ಬೈಲೊಳಗೆ ಉರಿಯುವುದು' ಎಂದರೆ ಸತ್ಯದ ಜ್ಯೋತಿ ಆತ್ಮಜ್ಯೋತಿ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

೩೧೨

ಆರಾರು ನೋಡಿದರೆ ಆರಂತೆ ಇರುವನು
ಆರಕ್ಕಿಂತ ಅಧಿಕನು ಅತ್ಯಧಿಕನು
ನೀರಂತೆ ಕಾಣೋ ಪರಬ್ರಹ್ಮ ಇದ ಬಿಟ್ಟು
ಬೇರೆ ದೈವ ಬೆದಕುವರೆ, ಬಸವಣ್ಣ

ತಾತ್ಪರ್ಯ : ಇದು ಪರಮ ವೈರಾಗ್ಯಮೂರ್ತಿಯಾದ ನಿರಂಜನ ಸ್ವರೂಪನಾದ ಒಬ್ಬ ಯೋಗಿಯ ಚಿತ್ರವನ್ನು ಕೊಡುತ್ತದೆ. ಅಂತವರೇ ಪರಬ್ರಹ್ಮ ಸ್ವರೂಪರು. ಅವರು ಎಲ್ಲರೊಡನೆ ಎಲ್ಲರಂತೆ ಬೆರೆಯುತ್ತಾರೆ. ಯಾರು ಯಾರು ನೋಡುತ್ತಾರೋ ಅವರಂತೆಯೇ ಕಂಡು ಬರುತ್ತಾರೆ. ಆರಕ್ಕಿಂತ ಅಧಿಕನೆಂದರೆ ಪಂಚಭೂತಗಳು ಐದು ಮತ್ತು ಜೀವ ಎಂಬ ಆರು ತತ್ತ್ವಗಳನ್ನು ಮೀರಿದ ಅತ್ಯಧಿಕರಾಗಿರುತ್ತಾರೆ. ಅವರು ನೀರಿನಂತೆ ಪಾರದರ್ಶಕ, ಪರಿಶುದ್ಧಗೊಳಿಸುವ, ಜೀವದ್ರವ್ಯವಾಗಿರುವಂಥವರು. ಅಂತ ಅಲೌಕಿಕ ಸಿದ್ಧಿಯನ್ನು ಪಡೆದ ಶಿವಯೋಗಿಯು ತಾನೇ ಪರಬ್ರಹ್ಮ ಸ್ವರೂಪ ನಾಗಿರುತ್ತಾನೆ. ಅಂತವರನ್ನು ಬಿಟ್ಟು ಬೇರೆ ದೇವರನ್ನು ಏಕೆ ಹುಡುಕಬೇಕು?

೩೧೩

ಉಕ್ಕು ತಿಳಿದರೆ ಕಾಣಿಸುವದು
ಉದಕ ತಿಳಿದರೆ ಕಾಣಿಸುವದು ತನ್ನ
ಯುಕ್ತಿ ತನಗೆ ತಿಳಿದರೆ ಕಾಣಿಸದೆ, ಬಸವಣ್ಣ

ತಾತ್ಪರ್ಯ : ಅನ್ನ, ಸಾರು, ಹಾಲು, ಪಾಯಸ ಯಾವುದೇ ಪದಾರ್ಥ ಉಕ್ಕುವಾಗ ಅದರ ನಿಜ ಸ್ವರೂಪ ಗೊತ್ತಾಗುವುದಿಲ್ಲ. ಉಕ್ಕು ತಿಳಿದು ಇಳಿದಾಗ ಪದಾರ್ಥ ಯಾವುದೆಂಬುದು ಕಾಣುತ್ತದೆ. ಹಾಗೆಯೇ ಕದಡಿದ ನೀರಿನೊಳಗೆ ಏನೂ ಕಾಣಿಸುವುದಿಲ್ಲ. ಆದರೆ ನೀರು ತಿಳಿದಾಗ ಅದರ ತಳದೊಳಗಿರುವುದೆಲ್ಲ ಕಾಣಿಸುತ್ತದೆ. ಅದರಂತೆ ಮನುಷ್ಯನ ಮನಸ್ಸು ಕೂಡ ಉಕ್ಕುವ ಪದಾರ್ಥದಂತೆ, ಕದಡಿದ ನೀರಿನಂತೆ ತನ್ನೊಳಗನ್ನು ತೋರುವುದಿಲ್ಲ. ಆದರೆ ಅದು ತಿಳಿಯಾದಾಗ ಅಂದರೆ ಶಾಂತ ಸ್ಥಿತಿಯಿಂದ ತನ್ನನ್ನು ತಾನು ತಿಳಿದು ನೋಡಿದಾಗ ತನ್ನ ಯುಕ್ತಿ ತನಗೆ ಕಾಣಿಸು ವುದಿಲ್ಲವೆ! 'ತಿಳಿ' ಎಂಬ ದೊಡ್ಡ ಮೌಲ್ಯವನ್ನು ಈ ವಚನ ಸೂಕ್ತ ಹೋಲಿಕೆಗಳ ಮೂಲಕ ತಿಳಿಸಿ ಕೊಡುತ್ತದೆ.

೩೧೪

ಲಿಂಗವಾದರೇನು ಜಂಗಮವಾದರೇನು
ಸಂಗಯ್ಯನಾದರೆ ನನಗೇನು, ನಾ ನನ್ನ
ಕಂಗಳಲಿ ಕಂಡಂತೆ ಉಸುರುವೆನು, ಬಸವಣ್ಣ

ತಾತ್ಪರ್ಯ : ಇದೂ ಮೌನೇಶ್ವರರ ಖಂಡಿತವಾದಿತ್ವವನ್ನು ಹೇಳುತ್ತದೆ. ಗುರು ಲಿಂಗ ಜಂಗಮಗಳು ವೀರಶೈವದ ತ್ರಿವಿಧ ಭಕ್ತಿಯ ಮೂರು ಮೂಲ ತತ್ತ್ವಗಳು. ಇವುಗಳಿಗೆ ಹೆದರಿ ನಾನು ನನಗೆ ತಿಳಿದ ಸತ್ಯವನ್ನು ಹೇಳದೆ ಬಿಡುವುದಿಲ್ಲ ಎನ್ನುತ್ತಾರೆ. ವೀರಶೈವದ ತತ್ತ್ವಾಚರಣೆಗಳು ಅವನತಿಗಿಳಿದಿರುವುದನ್ನು ಅವರು ಕಂಡಿದ್ದಾರೆ. ಕೇವಲ ನಾಮಮಾತ್ರವಾಗಿ ಉಳಿದಿದ್ದ, ಸತ್ಯದಿಂದ ದೂರವಾಗಿದ್ದ ಅಂತವುಗಳನ್ನು ಕೂಡ ವಿಡಂಬಿಸಿ ತಾನು ಕಂಡ ಸತ್ಯವನ್ನು ನಿರ್ಭಿಡೆಯಿಂದ ಹೇಳುತ್ತಾರೆ.

೩೧೫

ಅಕ್ಕನಾದರೇನು ತಂಗಿಯಾದರೇನು
ಚಿಕ್ಕವ್ವನಾದರೆ ನನಗೇನು, ನಾ ನನ್ನ
ಲೆಕ್ಕ ಬಂದಂತೆ ಉಸುರುವೆನು, ಬಸವಣ್ಣ

ತಾತ್ಪರ್ಯ : ಯಾವ ಅಧೀನಕ್ಕೊಳಪಡದ ಬದುಕು ಮೌನೇಶ್ವರರದು. ಈ ವಚನ ಮೌನೇಶ್ವರರ ಖಂಡಿತವಾದಿತ್ವವನ್ನೇ ಹೇಳುತ್ತದೆ. ಅಕ್ಕ, ತಂಗಿ, ಚಿಕ್ಕವ್ವ ಮುಂತಾದ ಕರುಳು ಬಳ್ಳಿಯ ಆತ್ಮೀಯ ಸಂಬಂಧಿಕರನ್ನು ತೃಪ್ತಿಪಡಿಸುವುದಕ್ಕಾಗಿ ಸತ್ಯವನ್ನು ಮರೆಮಾಚಿ ಸುಳ್ಳನ್ನು ಹೇಳುವುದಕ್ಕೆ ಅವರು ಒಪ್ಪುವುದಿಲ್ಲ. ತನ್ನ ಲೆಕ್ಕಕ್ಕೆ ಸರಿಯೆಂದು ತೋಚಿದ್ದನ್ನು ಯಾರ ಮುಲಾಜಿಲ್ಲದೆ ಹೇಳಿದ್ದಾರೆ.

೩೧೬

ತಾಯಿಯಾದರೇನು ದೇವರಾದರೇನು
ಯಾವನಾದರೆ ನನಗೇನು, ನಾ ನನ್ನ
ನ್ಯಾಯವಿದ್ದಂತೆ ಉಸುರುವೆನು, ಬಸವಣ್ಣ

ತಾತ್ಪರ್ಯ : ಇದೂ ಕೂಡಾ ಮೌನೇಶ್ವರರ ಕಠೋರ ನಿಷ್ಠುರವಾದಿತ್ವವನ್ನೇ ಹೇಳುವ ವಚನ. ಹಿಂದಿನ ವಚನಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾವು ಅತ್ಯಂತ ಹೆಚ್ಚಿನ ಗೌರವ ಕೊಡುವ ತಾಯಿಯ ಮುಂದೆ ಮತ್ತು ದೇವರ ಮುಂದೆ ಕೂಡ ಅವರು ತಮ್ಮ ಸತ್ಯವಾದಿತ್ವವನ್ನು ನಿಷ್ಠುರವಾಗಿ ವ್ಯಕ್ತ ಮಾಡುತ್ತಾರೆ. ತಮಗೆ ನ್ಯಾಯವೆಂದು ಕಂಡದ್ದನ್ನು ಹಿಂಜರಿಯದೆ ಹೇಳುವ ಖಂಡಿತವಾದಿಯವರು.

೩೧೭

ದಿಕ್ಕಿನ ದೇವರೆಲ್ಲ ಸುತ್ತಿಗೆಯ ಮಕ್ಕಳು
ತೊತ್ತಿನ ಮಕ್ಕಳು ಜಗವೆಲ್ಲ, ನಾ ನನ್ನ
ಚಿತ್ತವಿದ್ದಂತೆ ಉಸುರುವೆನು, ಬಸವಣ್ಣ

ತಾತ್ಪರ್ಯ : ಇದು ಕೂಡ ಅವರ ನಿಷ್ಠುರವಾದಿತ್ವವನ್ನೇ ಹೇಳುತ್ತದೆ. ಅಥವಾ ಇದೇ ಅವರು ಸಾರಬೇಕಾಗಿರುವ ಕಠೋರ ಸತ್ಯ. ಜಗತ್ತಿಗೆ ವಿಶ್ವಕ್ಕೆ ಒಬ್ಬನೇ ದೇವನು ಎಂಬುದು ಮೂಲ ಸತ್ಯ. ಹಾಗಾದರೆ ಈ ಅನೇಕ ದೇವರುಗಳೆಲ್ಲ ಎಲ್ಲಿಂದ ಬಂದರು? ಶಿಲ್ಪಿಯು ತನ್ನ ಸುತ್ತಿಗೆ ಉಳಿಗಳಿಂದ ಕೆತ್ತಿ ಕೊಟ್ಟದ್ದರಿಂದ ಹುಟ್ಟಿಕೊಂಡರು. ಹಾಗೆಯೇ ಹೆಣ್ಣಿನ ಗರ್ಭದಿಂದಲ್ಲದೆ ಬೇರೆ ಯಾವ ರೀತಿಯಿಂದಲೂ ಮಾನವರ ಜನನವಾಗುವುದು ಸಾಧ್ಯವಿಲ್ಲ. ಈ ಎರಡು ಮೂಲ ಸತ್ಯಗಳನ್ನು ಅವರು ಯಾವ ನಿರ್ಬಿಡೆಯೂ ಇಲ್ಲದೆ ನುಡಿದಿದ್ದಾರೆ.

೩೧೮

ಆರು ಚಿಂತೆಗಳೆಲ್ಲ ಧಾರುಣಿಯ ನರರಿಗೆ
ಮೀರಿದ ಏಳನೆಯ ದುರ್ಧರ ಚಿಂತೆ
ಮಾರಹರನಿಗೆ, ಬಸವಣ್ಣ

ತಾತ್ಪರ್ಯ : ಹಸಿವಿನ ಚಿಂತೆ ಮೂಲಭೂತವಾದದ್ದು. ಅದನ್ನು ತೀರಿಸಿದರೆ ಉಡಲು ಹೊದೆಯಲು ಬಟ್ಟೆಯ ಚಿಂತೆ. ಅದು ನೆರವೇರಿದರೆ ವಾಸಕ್ಕೊಂದು ಮನೆಯ ಚಿಂತೆ. ಅದರ ನಂತರ ಸಂಗಾತಿಬೇಕೆಂಬ ಚಿಂತೆ. ಅದೂ ಆದ ಮೇಲೆ ದುಡಿದು ಹಾಕುವ ಚಿಂತೆ. ಆನಂತರ ಮಕ್ಕಳು ಬೇಕೆಂಬ ಚಿಂತೆ. ಹೀಗೆ ಈ ಆರು ಚಿಂತೆಗಳೆಲ್ಲ ಸಂಸಾರಕ್ಕೆ ಸಂಬಂಧಿಸಿರುವಂತವು. ಇವುಗಳನ್ನು ಮೀರಿ ಪರಮಾತ್ಮನ ಸಲುವಾಗಿ ಮಾಡುವ ಚಿಂತೆ ದುರ್ಧರವಾದುದು. ಇದನ್ನು ಎಲ್ಲರೂ ಸಾಧಿಸಲಾಗುವುದಿಲ್ಲ. ಏಕೆಂದರೆ ಈ ಏಳನೆ ಚಿಂತೆ ಮೊದಲಿನ ಆರನ್ನೂ ಗೌಣವಾಗಿಸಿ ಬಿಡುವಂತದ್ದು. ಆಧ್ಯಾತ್ಮದ ಮೊದಲ ಮೆಟ್ಟಿಲಾದ ಅತಿಯಾಸೆಯನ್ನು ಬಿಡುವುದು. ಅದೇ ಮಾರಹರ ಪರಮಾತ್ಮನಿಗೆ ಪ್ರಿಯವಾದುದು ಮತ್ತು ಸಲ್ಲತಕ್ಕಂತದ್ದು.

೩೧೯

ಅಕ್ಷರವೆಂಬಂಥ ಲೆಕ್ಕ ನಿಮಗೇತಕ್ಕೆ
ಖರೆ ಖರೆ ನವರಸವು ಬಂದು ಉಕ್ಕುತೈತಿ
ಜಗದೊಳಗೆ ತಕ್ಕೈಸಿಕೊಳ್ಳಿರೋ ಶರಣರಿರ್ಯಾ, ಬಸವಣ್ಣ

ತಾತ್ಪರ್ಯ : ಅಕ್ಷರದ ಲೆಕ್ಕವೆಂದರೆ ಕಾವ್ಯದ ಬಾಹ್ಯ ಅಲಂಕಾರಗಳಾದ ಶಬ್ದ ಪ್ರಾಸ, ಅಲಂಕಾರ ಛಂದಸ್ಸುಗಳಲ್ಲಿಯೇ ಪಾಂಡಿತ್ಯ ಪ್ರದರ್ಶನ ಮಾಡುವುದೇ ವಿದ್ಯೆ ಅಥವಾ ಅನುಭಾವವಲ್ಲ. ಅದೊಂದು ಶುಷ್ಕ ಪ್ರದರ್ಶನ. ನಿಜವಾದ ಓದು ಅಥವಾ ಅಕ್ಷರಭ್ಯಾಸ ವೆಂದರೆ ತನ್ನ ತಾ ತಿಳಿಯುವುದು. ಸ್ವಾನುಭವದ ಕಲಿಕೆ ನಿಜವಾದ ರಸೋತ್ಪತ್ತಿಯನ್ನು ಸಾರ್ಥಕತೆಯನ್ನು ಹುಟ್ಟು ಹಾಕುತ್ತದೆ. ಅಂತಹ ನಿಜಾನುಭವ ಬಂದು ಉಕ್ಕುವಾಗ ಅದನ್ನು ಲೋಕದ ಜನ ತಡೆದುಕೊಳ್ಳಬೇಕೆ ಹೊರತು ಉಪೇಕ್ಷೆ ಮಾಡಬಾರದು ಅಕ್ಷರ ಅರಿವಾಗಿ ಪರಿವರ್ತಿತವಾಗಬೇಕೆ ಹೊರತು ಅಹಂಕಾರವಾಗಬಾರದು. ಛಂದಸ್ಸಿನ ಪ್ರಮಾಣದ ನಿರಾಕರಣೆಯನ್ನಿಲ್ಲಿ ಕಾಣಬಹುದು. ಸ್ವಚ್ಛಂದತೆ ಮೌನೇಶ್ವರರ ಅಭಿವ್ಯಕ್ತಿಯ ಕ್ರಮವಾಗಿದೆ.

೩೨೦

ಸ್ನಾನ ಜಪ ತಪಗಳು ಜ್ಞಾನ ತತ್ತ್ವ ಪುರಾಣ
ಮಾನವ ಜನ್ಮಕ್ಕೆ ಬಂದು ಅತಿಗಳೆದರೆ
ಶ್ವಾನನ ಗರ್ಭದಿ ಜನಿಸುವರು, ಬಸವಣ್ಣ

ತಾತ್ಪರ್ಯ : ಮೇಲೆ ಹೇಳಿದಂತೆ ಪಾರಮಾರ್ಥ ಸಾಧನೆಯ ಮಾರ್ಗಗಳೆಲ್ಲವನ್ನು ಮೀರಿದ ಯೋಗಿಗಳು ತುರೀಯಾವಸ್ಥೆಯಲ್ಲಿ ಅವೆಲ್ಲ ಮುಖ್ಯವಲ್ಲ ಎಂದು ಹೇಳು ವುದನ್ನು ಬೇರೆ ಅನುಭಾವ ಸಾಹಿತ್ಯದಲ್ಲಿ ನೋಡುತ್ತೇವೆ. ಆದರೆ ಸಾಮಾನ್ಯ ಮನುಷ್ಯರ ದೃಷ್ಟಿಯಿಂದ ಅವರು ಇಹ ಪರ ಸಾಧನೆಯ ಮಾರ್ಗವಾಗಿ ಇವೆಲ್ಲವನ್ನು ಅನುಸರಿಸ ಬೇಕು. ಇವನ್ನು ಬಿಟ್ಟು ಬೇಕಾಬಿಟ್ಟಿಯಾಗಿ ಕ್ರಮವಿಲ್ಲದೆ ಜೀವನ ಮಾಡುವವರು ಅಧೋಗತಿಗೆ ಹೋಗುತ್ತಾರೆ. ಅಂತವರು ಮುಂದೆ ನಾಯಿಯ ಜನ್ಮದಲ್ಲಿ ಹುಟ್ಟುತ್ತಾರೆ ಎಂದು ಮೌನೇಶ್ವರರು ಹೇಳಿದ್ದಾರೆ.

೩೨೧

ದೈವವೇ ದೇವರೆಂದು ಕೈಮುಗಿದಾತಂಗೆ
ಜೀವಂತ ಜಯವಂತನಾಗೆಂದು ಹಾರೈಸುತ್ತಾನೆ
ಅವರಿಗೆ ಕೈಲಾಸ, ಬಸವಣ್ಣ

ತಾತ್ಪರ್ಯ : ಗ್ರಾಮೀಣ ವ್ಯವಸ್ಥೆಯಲ್ಲಿ ಎಲ್ಲ ಜಾತಿಗಳ ಪ್ರತಿನಿಧಿಗಳ ಒಂದು ಸಮಿತಿ ಇರುತ್ತಿತ್ತು. ಅದನ್ನು 'ದೈವಸ್ತ'ರು 'ದೈವ' ಎಂದು ಕರೆಯುತ್ತಿದ್ದರು. ಊರಿನ ಸಾರ್ವತ್ರಿಕ ಸಮಸ್ಯೆಗಳನ್ನು ಅಥವಾ ಕೌಟುಂಬಿಕ ಆರ್ಥಿಕ ಧಾರ್ಮಿಕ ಕುಲಾಚಾರಗಳ ಸಮಸ್ಯೆ ಗಳನ್ನು ಬಗೆಹರಿಸಿಕೊಳ್ಳಲು ಹಾಗೂ ದೇವರುಗಳ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಅದು ಆಡಳಿತ ಸಮಿತಿಯಂತೆ, ನ್ಯಾಯಾಲಯದಂತೆ ಕಾರ್ಯ ನಿರ್ವಹಿಸುತ್ತಿತ್ತು.

ದೈವದ ತೀರ್ಪಿಗೆ ಎಲ್ಲರೂ ತಲೆಬಾಗುತ್ತಿದ್ದರು. ಅಂತಹ ದೈವವನ್ನು ಕುರಿತು ಮೌನೇಶ್ವರರು ಹೇಳಿರಬಹುದೆನಿಸುತ್ತದೆ. ದೈವವನ್ನೇ ದೇವರೆಂದು ಕೈ ಮುಗಿಯುವ ವನು ದೀರ್ಘಾಯೂ, ಜಯಶಾಲಿಯೂ ಆಗೆಂದು ಹರಸುತ್ತಾರೆ. ಮತ್ತು ಕೈಲಾಸ ದೊರೆಯಲೆಂದು ಆಶೀರ್ವದಿಸುತ್ತಾರೆ. ವ್ಯಕ್ತಿಯ ಒಂದು ಸಾಮಾಜಿಕ ಜವಾಬ್ದಾರಿ ಯನ್ನು ವಚನ ಹೇಳುತ್ತದೆ.

೩೨೨

ಭಕ್ತಿ ಭಾವಗಳನು ಕುಯುಕ್ತಿಯಲಿ ಕೆಡಿಸುವರು
ಮುಕ್ತಿ ಸಾಧನವು ಮುಂದಿಲ್ಲ ಷಡುಸ್ಥಲದ ವಿ
ರಕ್ತರಿಗೆ ಅವಗುಣವು ಸಲ್ಲದು, ಬಸವಣ್ಣ

ತಾತ್ಪರ್ಯ : ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬಿವು ವೀರಶೈವದ ಸಾಧನಾ ಮಾರ್ಗದ ಆರು ಹಂತಗಳು. ಅವುಗಳನ್ನು ಸಾಧಿಸಿದವರು ವಿರಕ್ತರು, ಯೋಗಿಗಳು ಎನಿಸಿಕೊಳ್ಳುತ್ತಿದ್ದರು. ಅಂತವರು ಬೇರೆಯವರ ಭಕ್ತಿ ಭಾವಗಳನ್ನು ಕೂಡ ಗೌರವಿಸಬೇಕು. ಮೋಸದಿಂದ ಕೆಡಿಸಲು ಹೋಗಬಾರದು. ಹಾಗೆ ಮಾಡುವುದು ಯೋಗ್ಯವಲ್ಲ. ಅಂತವರಿಗೆ ಮೋಕ್ಷವಿಲ್ಲ ಎಂದು ಈ ವಚನದ ಎರಡು ಭಾಗಗಳನ್ನು ಜೋಡಿಸಿ ಅರ್ಥೈಸಬೇಕಾಗುತ್ತದೆ. ಸರ್ವಮತ ಸಹಿಷ್ಣುತೆಯ ಸಮದೃಷ್ಟಿ ಇಲ್ಲಿ ವೇದ್ಯವಾಗುತ್ತದೆ.

೩೨೩

ಹುಟ್ಟಿತು ರಾಜರಲ್ಲಿ ಕೆಟ್ಟತು ಪ್ರಜೆಗಳಲ್ಲಿ
ಕೊಟ್ಟ ಭಾಷೆಗೆ ತಪ್ಪಿದಲ್ಲಿ ಮಳೆ ಬೆಳೆ
ಸುಟ್ಟು ಹೋದವು ಕ್ಷಿತಿಜದೊಳು, ಬಸವಣ್ಣ

ತಾತ್ಪರ್ಯ : ರಾಜಕಾರಣದಲ್ಲಿ ಮೋಸ ವಂಚನೆ ವಚನಭ್ರಷ್ಟತೆಗಳು ಯಾವ ಕಾಲಕ್ಕೂ ಕಂಡುಬರುವ ಸಾಮಾನ್ಯ ಸಂಗತಿಗಳು. ಅದು ರಾಜರುಗಳಲ್ಲಿ ಹುಟ್ಟಿ ಪ್ರಜೆಗಳಲ್ಲೆಲ್ಲಾ ವ್ಯಾಪ್ತಿಸುತ್ತದೆ. ಏಕೆಂದರೆ ಯಥಾ ರಾಜ ತಥಾ ಪ್ರಜಾ ಎಂಬಂತೆ ಪ್ರಜೆಗಳು ತಮ್ಮನ್ನು ಆಳುವವರನ್ನೇ ಅನುಕರಣೆ ಮಾಡುತ್ತಾರೆ. ಜನರ ರಾಜರ ದುರ್ಗುಣ–ದುರ್ವರ್ತನೆ ಗಳಿಂದಲೇ ಮಳೆ ಬೆಳೆ ಇಲ್ಲದೆ ದುಷ್ಕಾಲ ಬರುತ್ತದೆ ಎಂಬುದು ಒಂದು ಸಾಮಾನ್ಯ ನಂಬಿಕೆ. ಅಂದರೆ ಅನೈತಿಕತೆ, ಅತಿ ಉಪಭೋಗಿ ಪ್ರವೃತ್ತಿ ಇವು ಸಮೃದ್ಧ ಸಂಸ್ಕೃತಿ ಯನ್ನು ನಾಶ ಮಾಡುತ್ತವೆ. ವೈಜ್ಞಾನಿಕವಾಗಿ ಇದನ್ನು ಸಿದ್ಧಮಾಡಲಾಗುವುದಿಲ್ಲ. ಆದರೆ ಜನರು ಒಳ್ಳೆಯ ರೀತಿ ನೀತಿಗಳಲ್ಲಿ ನಡೆಯಬೇಕೆಂಬ ಹಾರೈಕೆಗೆ ಇಂಥ ಭಯವನ್ನು ಜೋಡಿಸಲಾಗಿದೆ.

೩೨೪

ಹೊಟ್ಟೆ ಹೋರಕನಲ್ಲ, ನೆತ್ತಿ ಬೋಳಕನಲ್ಲ
ತುತ್ತಿನಾ ಮೇಲೆ ಮನಸಿಲ್ಲ, ಗುರುರಾಯ
ಬುತ್ತಿ ಕಟ್ಟ್ಯಾನ ಮನದೊಳಗೆ, ಬಸವಣ್ಣ

ತಾತ್ಪರ್ಯ : ಈ ವಚನ ಮೌನೇಶ್ವರರು ತನ್ನ ಬಗ್ಗೆಯೇ ಹೇಳಿಕೊಂಡಿರಬಹುದಾದರೂ ಯಾರಿಗಾದರೂ ಅನ್ವಯಿಸಿಕೊಳ್ಳುವಂತಿದೆ. ಉಣ್ಣುವುದೇ, ಹೊಟ್ಟೆ ಹೊರೆಯುವುದೇ ಮುಖ್ಯವಾಗಿರುವವನು ಬೇರೆಯವರನ್ನು ಹಿಂಸಿಸಿಯಾದರೂ ತನ್ನ ಸ್ವಾರ್ಥ ಸಾಧಿಸುತ್ತಾನೆ. ಇಂತಹ ಸ್ವಾರ್ಥಪರ ಲೌಕಿಕ ಆಶೆ ಮೋಸಗಳಿಲ್ಲದಿದ್ದರೆ ಪರಮಾತ್ಮ ಮನುಷ್ಯನ ಮನದೊಳಗೆ ಸಂತೃಪ್ತಿ, ಸುಖದ ಬುತ್ತಿಯನ್ನು ಕಟ್ಟಿಕೊಡುತ್ತಾನೆ ಸಾತ್ವಿಕನಾಗುತ್ತಾನೆ.

೩೨೫

ಕಾಸಿಗೆ ಹೋಗಬಹುದು ದೇಶ ಪಲ್ಲಟಿಸಬಹುದು
ಹುಸಿಯ ಪಲ್ಲಟಿಸುವದು ಕಷ್ಟ ಕಾಣಾ, ಬಸವಣ್ಣ

ತಾತ್ಪರ್ಯ : ಕಾಶಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಪುಣ್ಯಗಳಿಸಲೆಂದು ಹೋಗಬಹುದು. ದೇಶವನ್ನೆಲ್ಲ ಸುತ್ತಿ ಬರಬಹುದು. ಆದರೆ ಹುಸಿಯನ್ನು ನಾಶಮಾಡುವುದು ಬಹಳ ಕಷ್ಟ. ಹುಸಿ ಎಂದರೆ ಸಾಮಾನ್ಯ ಅರ್ಥದಲ್ಲಿ ಸುಳ್ಳು, ವಿಶೇಷ ಅರ್ಥದಲ್ಲಿ ಮಾಯೆ ಎಂದರ್ಥ. ಈ ದೇಹದ ಬಗ್ಗೆ ಇರುವ ಆಶೆ, ಸಂಸಾರದ ಬಗ್ಗೆ ಇರುವ ಅಹಂಕಾರ ಮಮಕಾರ, ಕಾಮ ಕ್ರೋಧಾದಿ ದೇಹ ಗುಣಗಳು ಇವೆಲ್ಲ ಭ್ರಮೆ, ಹುಸಿ, ಅಶಾಶ್ವತ ಎಂಬ ತಿಳುವಳಿಕೆ ಇಲ್ಲದೇ, ಈ ಪ್ರಪಂಚ ಹಾಗೂ ಇಲ್ಲಿಯ ಸಂಬಂಧಗಳೇ ನಿತ್ಯ ಸತ್ಯ ಎಂಬಂತೆ ಸಾಮಾನ್ಯರು ಭಾವಿಸಿಕೊಂಡು ಜೀವನ ಮಾಡುತ್ತಾರೆ. ಅದು ತಪ್ಪು. ಬದುಕಿನ ಭ್ರಮೆಯನ್ನು ಅಥವಾ ಹುಸಿಯನ್ನು ತೆಗೆದುಹಾಕುವುದು ತೀರ್ಥಯಾತ್ರೆಗಳನ್ನು ಮಾಡಿದಷ್ಟು ಸುಲಭವಲ್ಲ.

೩೨೬

ಯೋನಿಯ ಮುಖದಿ ಮಾನವ
ಚಾಣದ ಮುಖದಿ ದೈವವ
ನೀನು ನಾನೆಂಬ ಮಾತಿನ ಮತ್ಸರದಿಂದ
ಹಾನಿಯಾಯಿತು ನರಜನ್ಮ, ಬಸವಣ್ಣ

ತಾತ್ಪರ್ಯ : ಯೋನಿಯಿಂದ ಅಂದರೆ ತಾಯಿಯ ಗರ್ಭದಿಂದಲೇ ಮಾನವ ಜನಿಸುವನು. ಅಸಹಜ ರೀತಿಯಲ್ಲಿ ಹುಟ್ಟಿ ಬರುವುದು ಸಾಧ್ಯವಿಲ್ಲ. ದೇವರುಗಳ ಮೂರ್ತಿಗಳ ಜನ್ಮಕ್ಕೆ ಶಿಲ್ಪಿಯ ಕೈಯೊಳಗಿನ ಚಾಣ ಸುತ್ತಿಗೆಗಳೇ ಕಾರಣ. ಕಾಣದ ದೇವರಿಗೆ ಮೂರ್ತಿ ರೂಪವನ್ನು ಶಿಲ್ಪಿಯೇ ಕೊಟ್ಟಿದ್ದಾನೆ. ದೇವರುಗಳು ಚಾಣಿನ

ಮಕ್ಕಳೆಂದು ಇನ್ನೊಂದೆಡೆ ಹೇಳಿದೆ. ಎಲ್ಲರೂ ತಾಯಿಯ ಮಕ್ಕಳು ಎಂಬ ಸೋದರ ಭಾವನೆಯಿಂದ ಬಾಳಬೇಕು. ಅನೇಕ ರೂಪಗಳಿಗೆಲ್ಲ ಮೂಲ ರೂಪವಾದ, ರೂಪವೇ ಇಲ್ಲದ ನಿರ್ಗುಣ ನಿರಾಕಾರ ನಿರಂಜನ ದೇವನು ಒಬ್ಬನೇ. ಮಾನವರೆಲ್ಲರೂ ಆತನ ಮಕ್ಕಳು ಎಂಬ ಭಾವನೆ ವಿಶ್ವಭ್ರಾತೃತ್ವಕ್ಕೆ ದಾರಿ ಮಾಡಿ ಕೊಡುತ್ತದೆ. ಆದರೆ ಈ ಜಗತ್ತು ಇದನ್ನರಿಯದೆ ನಾನಾ ದೇವರು ಧರ್ಮಗಳ ಹೆಸರಿನಲ್ಲಿ ಭೇದ ಮಾಡುತ್ತ ನಾನು ನೀನು ಬೇರೆ ಬೇರೆಯೆಂದು ಹೊಡೆದಾಡುತ್ತ ಹಾನಿಯಾಗುತ್ತ ನಡೆಯುತ್ತಿದೆ.

೩೨

ಹಲವು ಮೂರ್ತಿಯ ಮಾಡಿದ
ಉಳಿಯೊಂದೆ ಕೊಡತಿಯೊಂದೆ
ಶಿಲೆಯೆಲ್ಲ ಒಂದೆ ಶಿಲ್ಪಿ ಒಂದೆ
ಕೆಲದಾಡಬೇಡಿ ಶರಣರಿರ್ಯಾ, ಬಸವಣ್ಣ

ತಾತ್ಪರ್ಯ : ಹಿಂದೂ ಧರ್ಮದಲ್ಲಿ ರೂಢಿಯಲ್ಲಿರುವ ಬಹುದೇವೋಪಾಸನೆ ಅನೇಕ ಜಾತಿ ಮತ ಪಂಗಡ ಭೇದಗಳು ಬೆಳೆಯಲು ಕಾರಣವಾಗಿವೆ. ಪರಸ್ಪರ ದ್ವೇಷಾಸೂಯೆಗಳು ಇವೆಲ್ಲ ಒಂದೆ ಎಂಬ ಐಕ್ಯತೆ ಬೆಳೆಯದಿರಲು ಮೂಲ ಕಾರಣವಾಗಿರುವುದೆಂದು ತಿಳಿದು ಮೌನೇಶ್ವರರು ಅನೇಕ ಬಗೆಯಲ್ಲಿ ಹೇಳಿದ್ದಾರೆ. ದೇವನೊಬ್ಬ ನಾಮ ಮತ್ತು ರೂಪ ಹಲವು. ತಿಳಿದು ನೋಡಿದರೆ ಹೊಡೆದಾಟಕ್ಕೆ ಆಸ್ಪದವಿಲ್ಲ. ಶರಣ ಮಾರ್ಗದಿಂದ ಈ ಸತ್ಯವನ್ನು ಅರಿತುಕೊಂಡು ನಡೆಯಿರಿ ಎಂದು ಬುದ್ಧಿವಾದ ಹೇಳಿದ್ದಾರೆ ಮೌನೇಶ್ವರರು

೩೩

ಅವಗುಣದ ಅಪೇಕ್ಷೆ ಶಿವಗುಣವ ಮಸಣಿಸಿತು
ನೆವನೆವದಿ ದುಃಖ ಒದಗುವದು ಸರ್ವರಿಗೆ
ಭುವನದೊಳಗಯ್ಯಾ, ಬಸವಣ್ಣ

ತಾತ್ಪರ್ಯ : ಅವಗುಣ ಶಿವಗುಣ ಎಂಬ ಎರಡು ಅರ್ಥಪೂರ್ಣ ಪದಗಳನ್ನು ಮೌನೇಶ್ವರರು ಬಳಸಿ, ಅವನತಿಯ ದಾರಿ ಉದ್ಧಾರದ ದಾರಿಗಳನ್ನು ಅಥವಾ ದುಃಖದ ದಾರಿ ಮತ್ತು ಸುಖದ ದಾರಿಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಆಶೆ, ಸ್ವಾರ್ಥ, ಮೋಹ, ವಂಚನೆ, ಸೇಡು, ಹಿಂಸೆ, ಅನೀತಿ, ಅನ್ಯಾಯ ಮುಂತಾದುವೆಲ್ಲ ಅವಗುಣಗಳು. ಇವುಗಳ ಕಡೆಗೇ ಹೋಗುವ ಮನುಷ್ಯ ಅನೇಕ ದುಃಖಗಳಿಗೆ ಗುರಿಯಾಗುತ್ತಾನೆ. ಇದರಿಂದ ಶಿವಗುಣ ಹಾಳಾಗಿ ಹೋಗುತ್ತದೆ. ಶಿವಗುಣವು

ಶಿವನಿಗೆ ಪ್ರೀತಿಯಾಗುವಂತಹ ಸಾತ್ವಿಕ ಗುಣವಾಗಿದೆ. ಶಿವನ ಕೃಪೆ ಪಡೆಯಲು ದಯೆ, ಧರ್ಮ, ನಿಸ್ವಾರ್ಥ, ಪ್ರೀತಿ, ಕರುಣೆ, ಶಾಂತಿ, ಸಹನೆ, ನ್ಯಾಯ, ನೀತಿ ಮುಂತಾದ ಸದ್ಗುಣಗಳು ಅಗತ್ಯವಾಗುತ್ತವೆ.

೩೨೯

ಯೋಗ ಒದಗಲು ಸಿದ್ಧಿ ಭೋಗ ತೀರಲು ಮರಣ
ರೋಗ ಮುನ್ನೂರಾ ಅರವತ್ತು ದೇಹದಲಿ ನಿತ್ಯ ನಿತ್ಯ
ಹೋಗಿ ಬರುತಿಹವು, ಬಸವಣ್ಣ

ತಾತ್ಪರ್ಯ : ಈ ವಚನದಲ್ಲಿಯೂ ಯೋಗ ಮತ್ತು ಭೋಗ ಮಾರ್ಗಗಳೆಂದು ಎರಡು ದ್ವಂದ್ವಗಳನ್ನು ಮೌನೇಶ್ವರರು ಗುರುತಿಸಿ ಹೇಳಿದ್ದಾರೆ. ಯೋಗ ಮಾರ್ಗ ಆತ್ಮೋನ್ನತಿಯದು. ಭೋಗ ಮಾರ್ಗ ಅವನತಿಯದು. ಇಲ್ಲಿ ಇಹ–ಪರ, ದೇಹ–ಆತ್ಮ ಎರಡಕ್ಕೂ ಅನ್ವಯವಾಗುವಂತೆ ವಿವರಿಸಿದ್ದಾರೆ. ಆತ್ಮೋದ್ಧಾರ, ಆತ್ಮಾನಂದಗಳ ಜೊತೆಗೆ ದೇಹದ ನಿರೋಗಿಯಾದ ಬದುಕನ್ನೂ ಯೋಗ ಮಾರ್ಗ ನೀಡುತ್ತದೆ. ಆದರೆ ಕೇವಲ ದೇಹ ಸುಖವನ್ನೇ ಮುಖ್ಯವೆಂದು ಹೋಗುವ ಮನುಷ್ಯ ದೇಹವನ್ನು ದಿನದಿನವೂ ರೋಗಗಳಿಗೆ ಗುರಿ ಮಾಡಿಕೊಂಡು ಹಾಳಾಗುತ್ತಾನೆ. ಆತ್ಮೋದ್ಧಾರ ವಂತೂ ದೂರವೇ ಉಳಿಯಿತು.

೩೩೦

ಒಡಲೊಳು ಇರುವಂಥ ಒಡೆಯರೊಂದೈವರು
ಹಿಡಿದಿದ್ದವರೊಂದೈವರು, ಬ್ರಹ್ಮಾಂಡವ
ಬಿಡದೆ ಆಳುವವರೊಂದೈವರು, ಅಲ್ಲದೆ
ಕಡೆಯಲ್ಲಿ ಯಾರಿಹರು, ಬಸವಣ್ಣ

ತಾತ್ಪರ್ಯ : ಪಂಚ ತತ್ವಗಳ ಮೂಲಕ ಈ 'ಪ್ರಪಂಚ' ನಡೆದಿದೆ ಎಂಬುದನ್ನು ಭಾರತೀಯ ಆಧ್ಯಾತ್ಮ ಅನುಭವ ಪ್ರಾಚೀನ ಕಾಲದಿಂದಲೇ ಕಂಡುಕೊಂಡಿದೆ. ಇಂದಿಗೂ ಅದೇ ಆಧಾರವಾಗಿದೆ. ಪೃಥ್ವಿ ಅಪ್ಪ ತೇಜ ವಾಯು ಆಕಾಶ ಈ ಪಂಚಭೂತಗಳೇ ಬ್ರಹ್ಮಾಂಡವನ್ನು ಆಳುವ ಐವರು. ದೇಹವು ಕಣ್ಣು ಕಿವಿ ಮೂಗು ಬಾಯಿ ಮತ್ತು ಸ್ಪರ್ಶ ಎಂಬ ಪಂಚೇಂದ್ರಿಯಗಳಿಂದ ನಡೆಯುತ್ತದೆ. ಇವುಗಳನ್ನು ಹಿಡಿದುಕೊಂಡಿರುವವರು ಮನ ಬುದ್ಧಿ ಚಿತ್ತ ಅಹಂಕಾರ ಮತ್ತು ಪ್ರಾಣ. ಇದೇ ರೀತಿಯ ಪಂಚಕಗಳನ್ನು ಇನ್ನು ಅನೇಕ ಆಯಾಮಗಳಲ್ಲಿ ಆಧ್ಯಾತ್ಮಶಾಸ್ತ್ರ ವಿಸ್ತರಿಸಿದೆ. ಇವುಗಳಿಗೆ ಆಯಾ ದೇವತೆಗಳನ್ನು ಗುರುತಿಸಲಾಗಿದೆ. ಪರಮಾತ್ಮನನ್ನು ಪಂಚಮುಖಿಗಳ ಆಕಾರದಲ್ಲಿ ಪೂಜಿಸುವ ಪರಂಪರೆಯೂ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ.

೩೩೧

ಮುದುಕನಾದೀತು ದೇಹ ಬದುಕು ಮಾಡಲು ಒಲ್ಲದು
ಅದಕೆ ಭ್ರಮಿಸಿತು ಅಘಹರನ ಹಸಿವು, ತೃಷೆಗೆ
ಉದಕ ಆಹಾರ ನಡಸು, ಬಸವಣ್ಣ

ತಾತ್ಪರ್ಯ : ಇದು ದೇಹದ ಇಳಿವಯಸ್ಸಿನ ಕಠೋರ ಪರಿಸ್ಥಿತಿಯನ್ನು ನಿರೂಪಿಸುವ ವಚನ. ವಯಸ್ಸು ಇರುವವರೆಗೂ ಹೇಗೋ ಮೆರೆದು ಬಾಳಿದ ಮೇಲೆ ಇಳಿವಯಸ್ಸಿನಲ್ಲಿ ಎಲ್ಲರೂ ಅನುಭವಿಸುವುದು ನಿಶ್ಶಕ್ತ, ನಿಸ್ಸಹಾಯಕ ಸ್ಥಿತಿ. ದುಡಿದು ಗಳಿಸಿ ಸ್ವತಂತ್ರವಾಗಿ ಬದುಕಲು ಸಾಧ್ಯವಿಲ್ಲದಂಥ ಅವಸ್ಥೆಯಲ್ಲಿ ಶಿವ ಶಿವ ಎಂದು ಅದು ಭ್ರಮಿಸುತ್ತದೆ, ನೆನೆಸುತ್ತದೆ. ಅದು ಬದುಕಿರುವ ವರೆಗೆ ಆಹಾರ ನೀರುಗಳನ್ನು ಒದಗಿಸಿದರೆ ಸಾಕು ಎಂದು ಒಂದು ದಿನ ಕಣ್ಣು ಮುಚ್ಚುತ್ತದೆ. ಇದು ಕೇವಲ ಭೌತಿಕ ದೃಷ್ಟಿಯಿಂದಲೇ ಇಳಿವಯಸ್ಸಿನ ಬವಣೆಯನ್ನು ಚಿತ್ರಿಸುವ ವಚನ ಮಾತ್ರವಾಗದೆ ದೇಹ ಮತ್ತು ಮನಸ್ಸಿನ ಅಪಕ್ವತೆ ಹಾಗೂ ನಿಷ್ಕ್ರಿಯತೆಯನ್ನು ಹೇಳುತ್ತದೆ.

೩೩೨

ಗೆಳೆಯನಗಲಿದ ಮೇಲೆ ಅಳುವರೀ ದೇಹಕ್ಕೆ
ಬಳಲುವರಯ್ಯ ಸುಖ ದುಃಖದಲಿ, ಪಾಮರರಿಗೆ
ತಿಳಿಯುವದಿಲ್ಲ, ಬಸವಣ್ಣ

ತಾತ್ಪರ್ಯ : ಜೀವದ ಗೆಳೆಯ ಅಥವಾ ದೇಹದ ಗೆಳೆಯನಂತಿದ್ದ ಜೀವ ಹೋದ ಮೇಲೆ ಆ ಶವದ ಮುಂದೆ ಅಳುತ್ತಾರೆ. ಅದನ್ನು ನಂಬಿ ಇಡೀ ಜೀವನದುದ್ದಕ್ಕೂ ಸುಖ ದುಃಖಗಳಲ್ಲಿ ಬಳಲುತ್ತಾರೆ. ಇದು ಜನಸಾಮಾನ್ಯರ ಲೋಕಜೀವನ ರೀತಿ. 'ಪಾಮರರಿಗೆ ತಿಳಿಯುವುದಿಲ್ಲ' ಎಂದು ಹೇಳಿರುವ ಮಾತಿನಲ್ಲಿ ವೈಶಿಷ್ಟ್ಯವಿದೆ. ಅಜ್ಞಾನ ವಶದಿಂದಾಗಿ ಅಶಾಶ್ವತವಾದ ಈ ದೇಹದಲ್ಲಿದ್ದುಕೊಂಡು ಶಾಶ್ವತ ಸುಖವನ್ನು ಅರಿಯುವ ಪರಿ ಸಾಮಾನ್ಯರಿಗೆ ಗೊತ್ತಿಲ್ಲ. ಅದು ಗೊತ್ತಿದ್ದರೆ ಸುಖ ದುಃಖಗಳಲ್ಲಿ ಬಳಲದೆ ಸಮಚಿತ್ತದಿಂದ ಬದುಕುತ್ತಿದ್ದರು.

೩೩೩

ಬಿಟ್ಟು ಹೋಗಲು ಜೀವ ಸುಟ್ಟು ಹೋಗುವದು ದೇಹ
ಮುಟ್ಟಿ ಅಳುತಿಹರು ಹಿತ ಬಾಂಧವರು ಅವರ ಸಖತ್ವ
ಕೆಟ್ಟಿತೇಳಯ್ಯ, ಬಸವಣ್ಣ

ತಾತ್ಪರ್ಯ : ಇದೂ ಕೂಡ ದೇಹದ ನಶ್ವರತೆಯನ್ನು ಕುರಿತು ಹೇಳುವ ವಚನ. ಜೀವ ಇರುವವರೆಗೆ ಮಾತ್ರ ಆ ದೇಹ. ವ್ಯಕ್ತಿಯ ಬದುಕು, ಅವನ ಸುತ್ತಲಿನ

ಬಂಧು ಬಳಗದೊಡನೆ ಸಂಬಂಧಗಳು ನಡೆಯುತ್ತವೆ. ಸತ್ತಾಗ ಅವನ ಶವದ ಮುಂದೆ ಗೋಳಾಡಿ ಅತ್ತು ನಂತರ ಶವವನ್ನು ಸುಟ್ಟು ಬಿಡುತ್ತಾರೆ(ಅಥವಾ ಮಣ್ಣು ಮಾಡುತ್ತಾರೆ). ಅಲ್ಲಿಗೆ ಆ ವ್ಯಕ್ತಿ ಇದ್ದವರೊಡನಿದ್ದ ಸಂಬಂಧ ಕೂಡ ಮುಕ್ತಾಯ ವಾಯಿತು. ಅಲ್ಲಿಂದ ಜೀವ ಎಲ್ಲಿಗೆ ಹೋಗುತ್ತದೆ ಏನಾಗುತ್ತದೆ ಎಂಬ ಬಗ್ಗೆ ಮೌನೇಶ್ವರರು ಏನು ಹೇಳುವುದಿಲ್ಲ. ಇದೇ ಭೌತಿಕವಾದದ ದೃಷ್ಟಿ, ಸಾಕಾರ ತತ್ವ.

೩೩೪

ಕುರಿಯ ಆಹಾರಕ್ಕೆಂದು ಕಬ್ಬಿನ
ಹೊರೆಯ ಕೆಡುಹಲು ಅದು
ಗರಿಯ ಭಕ್ಷಿಸುವದು. ಒಳಗಿರುವ ಕ್ಷೀರದ
ರುಚಿಯ ಸುರಿದುಕೊಂಬುವುದೆ, ಬಸವಣ್ಣ

ತಾತ್ಪರ್ಯ : ಇದನ್ನು ಶರಣರು ಕವಿಗಳು ಅಲ್ಲಲ್ಲಿ ಬಳಸಿದ್ದಾರೆ. ಕುರಿಗೆ ತಿನ್ನಲು ಕಬ್ಬನ್ನೇ ಕೊಟ್ಟರೂ ಅದು ಕೇವಲ ಗರಿಯನ್ನು ಮಾತ್ರವೇ ತಿನ್ನುತ್ತದೆ ಹೊರತು ಕಬ್ಬನ್ನಲ್ಲ. ಕುರಿಯನ್ನು ಸಾಮಾನ್ಯ ಮನುಷ್ಯರಿಗೆ, ಸ್ವಂತ ಬುದ್ಧಿ ಹಾಗೂ ಸ್ವತಂತ್ರ ಆಲೋಚನೆ ಇಲ್ಲದವರಿಗೆ ಹೋಲಿಸುವುದು ಸಾಮಾನ್ಯ. ಅಂತವರು ಜೀವನದ ಒಳಗಿನ ನಿಜವಾದ ರಸವನ್ನು ಸವಿಯಲಾರರು. ಆ ರಸವೇ ಆಧ್ಯಾತ್ಮಿಕವಾದ ಆತ್ಮಾನಂದ. ಅದೇ ಅಂತಿಮ ಗಮ್ಯ. ಅಜ್ಞಾನದ ಕುರಿ ಹೇಗೆ ಕಬ್ಬಿನ ರಸ ಹೀರ ಲಾರದೋ ಹಾಗೆ ಅಜ್ಞಾನಿ ಮನುಷ್ಯನು ಈ ಜೀವನದ ಸತ್ವವನರಿಯದೆ ನಾಶ ವಾಗುತ್ತಾನೆ.

೩೩೫

ಹರನೊಬ್ಬ ಗುರುವಾದ ಹರಿಯು ತಾನು ಶಿಷ್ಯ
ಬರೆದಂಥ ಬ್ರಹ್ಮ ವಿಭೇದ ಮಾಡಿದವರಿಗೆ
ವರಹ ಗರ್ಭವೆ ಸಾಕ್ಷಿ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಪ್ರಧಾನವಾಗಿ ಏಕದೇವೋಪಾಸಕರು. ಹಿಂದೂ ದೇವರು ಗಳನ್ನು ಅವರು ಅಲ್ಲಗಳೆಯುವುದಿಲ್ಲ. ಅವುಗಳನ್ನು ಮೂರ್ತಿರೂಪದಲ್ಲಿ ಬೇರೆ ಬೇರೆಯಾಗಿ ಪೂಜಿಸುವುದನ್ನೂ ಅವರು ಮೆಚ್ಚುವುದಿಲ್ಲ. ಆದರೆ ಅವುಗಳನ್ನು ಒಂದೇ ವೃಕ್ಷದ ಶಾಖೆಗಳಂತೆ, ಪರಿಕಲ್ಪನೆಗಳಂತೆ ಅವರು ಭಾವಿಸುತ್ತಾರೆ. ಆದ್ದರಿಂದ ಹರಿ ಹರ ಬ್ರಹ್ಮ ಎಂಬ ತ್ರಿಮೂರ್ತಿ ಕಲ್ಪನೆಯನ್ನು ಅವರು ಮಾನ್ಯ ಮಾಡುತ್ತಾರೆ. ಆದರೆ ಅವರಲ್ಲಿ ಭೇದವನ್ನು ಮಾಡುವುದು ಮಹಾಪಾಪ. ಅಂತವರು ಹಂದಿಯಾಗಿ ಹುಟ್ಟುತ್ತಾರೆ ಎಂದು ಕಟುವಾಗಿ ಹೇಳಿದ್ದಾರೆ.

೩೩೬

ಲಕ್ಷ ಗಾವುದ ದಾರಿಯಲ್ಲಿ ಅರ್ಕಮನ್ನೆಯರು ಇರಲು
ದಿಟ್ಟಿಸಿ ನೋಡಲು ಎನ್ನಳವಲ್ಲ, ಪ್ರಭುದೇವರೆ ನಿಮ್ಮ
ಪುತ್ರನೆಂಬಂಥ ದಯವೇ ಸಾಕು, ಬಸವಣ್ಣ

ತಾತ್ಪರ್ಯ : ಬಹಳ ದೀರ್ಘವಾದ ಚರಿತ್ರೆಯ ದಾರಿಯಲ್ಲಿ ಎಂಥೆಂಥ ಮಹನೀಯರು ಮಹಾತ್ಮರು ಆಗಿ ಹೋಗಿದ್ದಾರೆ. ಅವರನ್ನೆಲ್ಲ ನೆನೆಯುವುದಾಗಲಿ, ಅವರನ್ನು ಅನುಸರಿಸುವುದಾಗಲಿ ನನ್ನ ಸಾಮರ್ಥ್ಯಕ್ಕೆ ಮೀರಿದ್ದು. ಪ್ರಭುದೇವರೆ ನಾನು ನಿಮ್ಮನ್ನು ನೆನೆಯುತ್ತೇನೆ. ನಿಮ್ಮ ಮಗನೆಂದು ತಿಳಿದು ನಡೆಯುತ್ತೇನೆ. ನನಗೆ ನಿಮ್ಮ ದಯವೊಂದೇ ಸಾಕು. ಮೌನೇಶ್ವರರು ಹಿಡಿದಿದ್ದು ಅಲ್ಲಮ ಪ್ರಭುವಿನ ಅನುಭಾವದ ದಾರಿ ಎಂಬುದು ಮುಖ್ಯ.

೩೩೭

ಕಿಂಚಿತ್ ಮಾತ್ರದಿ ಹಿಂಚು ಮುಂಚು ಕಾಣದೆ
ಕಂಚಿಪುರಕ್ಕೆ ಯಾತಕೆ ಹೋಗಬೇಕು, ಮಲಗುವ
ಮಂಚದ ಮೇಲೆ ತಿಳಕೊಳ್ಳು, ಬಸವಣ್ಣ

ತಾತ್ಪರ್ಯ : ಜೀವ, ಜಗತ್ತು, ಈಶ್ವರರ ಬಗ್ಗೆ ಹಿಂದು ಮುಂದುಗಳನ್ನು ಎಂದರೆ ವಿವರಗಳನ್ನು ತಿಳಿಯುತ್ತಾ ಹೋಗುವುದೇ ಆತ್ಮಜ್ಞಾನ. ಅದನ್ನು ಸಾಧಿಸುವುದೇ ಜೀವನದ ಗುರಿ. ಅದನ್ನು ಮಲಗುವ ಮಂಚದ ಮೇಲಿದ್ದು, ಅಂದರೆ ತಾನು ಇದ್ದಲ್ಲಿಯೇ ತಿಳಿಯುತ್ತಾ ಹೋಗಬೇಕು. ದೂರ ದೂರದ ಕಂಚಿ, ಕಾಶಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಹೋಗಿ ಅದನ್ನು ಪಡೆಯುವುದು ಸಾಧ್ಯವಿಲ್ಲ.

೩೩೮

ಅವತಾರ ಮುಗಿಯಲು ಶಿವ ತಾನು ಒಯ್ವನು
ಸವತಿ ಬಹಳು ಊಳಿಗಕೆ, ಕಲಿಯುಗದ
ಕೌತುಕವ ನೋಡು, ಬಸವಣ್ಣ

ತಾತ್ಪರ್ಯ : ಇದು ಹೆಣ್ಣನ್ನು ಕುರಿತು ಹೇಳಿರುವ ಮಾತು. ಒಬ್ಬ ಹೆಂಡತಿ ಆಯುಷ್ಯ ಮುಗಿದರೆ ಶಿವನ ಪಾದ ಸೇರುತ್ತಾಳೆ. ಗಂಡನಾದವನು ಸವತಿಯಾಗಿ ಇನ್ನೊಂದು ಹೆಣ್ಣನ್ನು ಮದುವೆ ಮಾಡಿಕೊಂಡು ಸೇವೆ ಮಾಡಿಸಿಕೊಳ್ಳುತ್ತಾನೆ. ಇದನ್ನು ಕಲಿಯುಗದ ಕೌತುಕವೆಂದು ಮೌನೇಶ್ವರರು ಏಕೆ ಕರೆದರು? ಬಹುಶಃ ಹೆಣ್ಣಿಗೆ ಇಂಥ ಮರು ಮದುವೆ ಅಧಿಕಾರವಿಲ್ಲ. ಸ್ವತಂತ್ರ ಪೂರ್ವದಲ್ಲಿಯೇ ವಿಧವಾ ವಿವಾಹ ಹಾಗೂ ವಿಧುರ ವಿವಾಹ ಕುರಿತು ವೈಚಾರಿಕವಾಗಿ ಮೌನೇಶ್ವರರು ಮಾತನಾಡಿದ್ದಾರೆ.

ಹೆಣ್ಣಿಗೊಂದು ನೀತಿ ಗಂಡಿಗೊಂದು ನೀತಿಯ ವಿಚಿತ್ರ ಹಾಗೂ ಅಮಾನವೀಯ ಸಾಮಾಜಿಕ ನೆಲೆಗಳ ಕುರಿತು ಹೇಳಿದ್ದಾರೆ.

೩೩೯

ಸೋಲು ಗೆಲುವುಗಳೇಕೆ ಶೀಲ ಮಾಲೆಗಳೇಕೆ
ನೂಲ ಮಾಲೆಗಳೇಕೆ ನುಡಿಯೇಕೆ ಅಲ್ಲಮ ಪ್ರಭುವಿನ
ಕೀಲ ಕಂಡಂಥ ಶರಣರು ಧರ್ಮದ ಕೂಲಿ
ಆಳಾಗಿ ನಡೆಯುವರು, ಬಸವಣ್ಣ

ತಾತ್ಪರ್ಯ : ಜನಿವಾರ ಶಿವದಾರಗಳನ್ನು ಹಾಕಿಕೊಂಡು ಡಾಂಭಿಕತನದಿ ಶೀಲವಂತಿಕೆ ವ್ರತ ನೇಮಾದಿಗಳನ್ನು ಆಚರಿಸುತ್ತ ಅಥವಾ ಮಡಿವಂತಿಕೆ ಮಾಡುತ್ತ ಆಚರಣೆಗಳಲ್ಲಿ ಸೋಲು ಗೆಲುವುಗಳನ್ನು ಎಣಿಸುತ್ತ ಹೋಗುವುದು ಮುಂತಾದುವೆಲ್ಲ ಧರ್ಮದ ಹೊರ ಆಚರಣೆಯ ರೂಪಗಳು. ಇವುಗಳಿಂದ ಧರ್ಮಸಾಧನೆ ಆಗುವುದಿಲ್ಲ. ಆತ್ಮೋದ್ಧಾರ ಆಗುವುದಿಲ್ಲ. ಪ್ರಭುದೇವರು ಹೇಳಿದ ಶರಣ ಧರ್ಮದಲ್ಲಿ ಕೂಲಿಯಾಳಿನಂತೆ ಕಿಂಕರ ಭಾವನೆಯಿಂದ ನಡೆದರೆ ಸಾಕು. ಸಾತ್ವಿಕರಾಗುತ್ತಾರೆ.

೩೪೦

ಕಾಯವು ಮಾಯೆಯ ನುಂಗಿ ಛಾಯೆ ಮನವ ನುಂಗಿ
ನಾಯಕತನವು ಶಿವ ನುಂಗಿ, ಇವುಗಳ
ನ್ಯಾಯವ ನೋಡು, ಬಸವಣ್ಣ

ತಾತ್ಪರ್ಯ : ದೇಹದೊಳಗೆ ಮಾಯೆ ತುಂಬಿದೆ ಎಂದರೆ ದೇಹವೇ ನಾನೆಂಬ ಭ್ರಮೆಯ ಮೋಹ ತುಂಬಿದೆ. ಛಾಯೆಯೆಂದರೆ ಮಾಯೆಯೆಂದೂ ನೆರಳು ಸುಳ್ಳು ಎಂದೂ ಅರ್ಥಕೊಡುತ್ತದೆ. ಹಾಗಾಗಿ ಮನದಲ್ಲಿ ನಿಜವಿಲ್ಲದೆ ಸುಳ್ಳು ತುಂಬಿದೆ, ಅಂದರೆ ಅಜ್ಞಾನ ತುಂಬಿದೆ. ನಾನೇ ನಾಯಕ ಎಂಬ ಶ್ರೇಷ್ಠತೆ ಹಮ್ಮು ಅಹಂಕಾರ, ಮದ ಇವು ಶಿವಗುಣವನ್ನೇ ನುಂಗಿವೆ. ಅಹಂಕಾರ ಇದ್ದಲ್ಲಿ ಶಿವತ್ವ ಒಳ್ಳೆಯ ಗುಣಗಳು ಇರಲು ಆಸ್ಪದವೇ ಇಲ್ಲ. ಇವುಗಳ ನ್ಯಾಯ ಎಂದರೆ ಇದು ಲೋಕದ ರೀತಿ ನೋಡು ಬಸವಣ್ಣ ಎಂದು ನಿವೇದಿಸಿದ್ದಾರೆ.

೩೪೧

ಶಾಸ್ತ್ರ ಸಂತೆಯ ಗೋಷ್ಠಿ, ಪುರಾಣ ಪುಂಡರ ಗೋಷ್ಠಿ
ವೇದ ಗಾದೆಯ ಮಾತು, ತರ್ಕ ಟಗರಿನ ಹೋರಾಟ
ಅದರ ನಿಘಂಟು ಎಂಜಲ ಪತ್ರಾವಳಿ

ಸತ್ತವರ ಕಥೆಯೇನು ಓದುತ್ತೀರೊ
ಕತ್ತೆಯ ಮಕ್ಕಳಿರ್ಯಾ, ಬಸವಣ್ಣ

ತಾತ್ಪರ್ಯ : ಶಾಸ್ತ್ರ ಪುರಾಣಗಳ ಶುಷ್ಕ ಹಾಗೂ ಸಮಾಜವಿಮುಖ ಧೋರಣೆಗಳ ಬಗ್ಗೆ ಕನ್ನಡದ ಎಲ್ಲ ಅನುಭಾವಿಗಳಂತೆ ಮೌನೇಶ್ವರರು ಮಾತನಾಡಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ವೇದಗಳಿಗೆ ಅರ್ಥನೀಡುವ ನಿಘಂಟನ್ನೇ 'ಎಂಜಲು ಪತ್ರಾವಳಿ' ಎಂದು ಜರಿದಿದ್ದಾರೆ. ಶಾಸ್ತ್ರ, ಪುರಾಣ, ವೇದ, ತರ್ಕ, ನಿಘಂಟುಗಳ ಜಡತೆಯನ್ನು ಶರಣರಂತೆ ಮೌನೇಶ್ವರರು ತಿರಸ್ಕರಿಸುತ್ತಾರೆ. ಇನ್ನು ಎರಡನೆಯ ಭಾಗವು ಚಾಮರಸನ ಮಾತನ್ನೇ ಇನ್ನೂ ಕಠೋರವಾಗಿ ಹೇಳುತ್ತದೆ. ರಾಮಾಯಣ ಮಹಾಭಾರತಗಳು ಹೆಣ್ಣಿಗಾಗಿ ಮಣ್ಣಿಗಾಗಿ ಹೊಡೆದಾಡಿ ಸತ್ತವರ ಕಥೆಗಳು. ಶಿವನಿಗಾಗಿ ಸತ್ತು ಕೈಲಾಸ ಕಂಡವರು ಶರಣರು. ಅಂತವರ ಕಥೆಗಳನ್ನು ಮಾತ್ರ ಬರೆಯಬೇಕು, ಓದಬೇಕು ಎಂದು ಹರಿಹರ ಮಹಾಕವಿ ಶಪಥವನ್ನು ಮಾಡಿದ. ಶರಣರಲ್ಲದವರ ಹಾಗೂ ಸತ್ತವರ ಕತೆಗಳನ್ನು ಓದುವವರನ್ನು ಕತ್ತೆಗಳೆಂದು ನಿಂದಿಸಿದ್ದಾರೆ ಮೌನೇಶ್ವರರು.

೩೪೨

ದಾನ ದಂಡಕೆ ಅಳತೆಯೆ ಜ್ಞಾನ ಲಕ್ಷ್ಮಿಗೆ ಕುಲವೆ
ಶ್ವಾನಂಗೆ ದೇವ ಪ್ರಸಾದವೆಂಬ
ಜ್ಞಾನ ಅದಕುಂಟೆ, ಬಸವಣ್ಣ

ತಾತ್ಪರ್ಯ : ದಾನ ಮಾಡಲಾಗಲಿ ದಂಡ ಹಾಕುವುದಾಗಲೀ ಇಷ್ಟೇ ಎಂಬ ಅಳತೆ ಅಥವಾ ಪ್ರಮಾಣ ಇಲ್ಲ. ಹಾಗೆಯೇ ಜ್ಞಾನವಾಗಲೀ ಲಕ್ಷ್ಮೀಯಾಗಲಿ ಕುಲಭೇದವಿಲ್ಲದೆ ಯಾರಿಗಾದರೂ ಒಲಿಯುತ್ತವೆ. ನಾಯಿಗೆ ಇದು ದೇವರ ಪ್ರಸಾದ ಇದು ಸಾಮಾನ್ಯ ವಾದ ತಿನಿಸು ಎಂಬ ಭೇದವಿಲ್ಲ. ಈ ದೃಷ್ಟಾಂತಗಳನ್ನು ಕೊಟ್ಟಿರುವುದು ಬೇಧ ಬುದ್ಧಿಯನ್ನು ಮಾನವ ಬಿಡಬೇಕು ಎಂಬುದಕ್ಕಾಗಿ ಎಂದು ಭಾವಿಸಬೇಕು.

೩೪೩

ಮಂಡಲವ ತಿರುಗಿದೆನು ಪಂಡಿತರೆಂಬವರ ಕಾಣೆನು
ಖಂಡವ ತಿಂಬುವ ಹೊಲೆಯರ ಮಾರಿಯ
ಕಂಡರೆ ಪಾಪವಾದೀತೆಂದು
ಪಾಂಡುರಂಗ ವಿಠಲ ಮಡುವಿನಲ್ಲಿ ಮರೆಯಾದದ್ದು
ಕಂಡದ್ದಿಲ್ಲವೇನೋ ಕುರುಡರು
ಪಾಂಡುರಂಗ ವಿಠಲನು ಪಂಡಿತರಿಗೆ ಒಲಿದನೆ
ಚಾಂಡಾಲ ಚೋಖಾಮಿಳಯ್ಯಗೆ ಒಲಿದನು, ಬಸವಣ್ಣ

ತಾತ್ಪರ್ಯ : ಪಾಂಡುರಂಗ ವಿಠಲ ಪಂಡಿತರಿಗೆ ಒಲಿಯದೆ ಹೊಲೆಯನಾದ ಚೋಖಾ ಮಿಳನಿಗೆ ಒಲಿದ ಜಾತಿ ಹೀನನಾದರೂ ಭಕ್ತಿ ಅಂತರಂಗ ಶುದ್ಧಿ ಮುಖ್ಯ ಎಂಬುದು ವಚನದ ಉದ್ದೇಶವಾಗಿದೆ. ಭೂಮಂಡಲವನ್ನೆಲ್ಲ ತಿರುಗಿದರೂ ನಿಜವಾದ ಪಂಡಿತರನ್ನು ಕಾಣಲಿಲ್ಲ. ಪಂಡಿತರೆಲ್ಲ ಜಾತಿ ಭೇದವನ್ನು ಪೋಷಿಸುವವರೇ. ಆದರೆ ದೇವರಾದ ಪಾಂಡುರಂಗ ವಿಠಲನಿಗೆ ಜಾತಿ ಭೇದವಿಲ್ಲ. ಆತನು ಹೀನ ಕುಲದವನಿಗೆ ಒಲಿದ ಎಂಬುದು ಇಂದಿನವರೆಗೂ ನಡೆದು ಬಂದಿರುವ ವಿಠಲ ಸಂಪ್ರದಾಯದ ಹಿನ್ನೆಲೆಯಲ್ಲಿಯೂ ಸರಿಹೊಂದುತ್ತದೆ. ಆದರೆ ಪಾಠಾಂತರವು 'ಹೊಲೆಯರ ಮುಖ ಕಂಡರೆ ಪಾಪ ಬಂದೀತೆಂದು ಹೊಳೆಯಲ್ಲಿ ಮುಳುಗುವುದು' ಈ ಸಂದರ್ಭದಲ್ಲಿ ಪೂರಾ ವಿರುದ್ಧವಾದ ಅರ್ಥಕೊಡುತ್ತದೆ.

೩೪೪

ಜನನ ನಕ್ಷತ್ರವ ಪಿಡಿದು ಅನುಸರಿಸುತ್ತಿರುವ ಜನರು
ಮನಸು ಬಾರದಂಥ ಆಚರಣೆ, ಶಾಸ್ತ್ರಜ್ಞಾನ
ಕನಸು ಕಂಡಂತೆ, ಬಸವಣ್ಣ

ತಾತ್ಪರ್ಯ : ವಚನ ನೇರವಾಗಿ ಜೋತಿಷ್ಯ ಶಾಸ್ತ್ರದ ಪರಂಪರೆಯನ್ನು ವಿರೋಧಿಸುತ್ತದೆ. ಮಗು ಹುಟ್ಟಿದ ಜನ್ಮ ನಕ್ಷತ್ರದ ಮೇಲೆ ಕೂಡಿಸಿ ಕಳೆದು ಗುಣಾಕಾರಾದಿಗಳನ್ನು ಮಾಡಿ ಆ ಮಗುವಿನ ಮುಂದಿನ ಭವಿಷ್ಯವನ್ನೆಲ್ಲ ಹೇಳುವ ಶಾಸ್ತ್ರವೊಂದು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಇಂದಿಗೂ ಜನರು ಆ ಶಾಸ್ತ್ರವನ್ನು ನಂಬುತ್ತಾರೆ. ಆ ಶಾಸ್ತ್ರ ಅವೈಜ್ಞಾನಿಕ ಮತ್ತು ಕಾಲ್ಪನಿಕ. ಅದನ್ನು ನಂಬಬಾರದು ಎಂದು ಬಸವಾದಿ ಶರಣರು ಹೇಳಿದರು. ಶರಣರ ಪರಂಪರೆಯನ್ನು ಗೌರವಿಸುವ ಮೌನೇಶ್ವರರೂ ಕೂಡಾ ಅದು ಕೇವಲ ಕನಸು ಕಂಡಂತೆ ಹೊರತು ಸತ್ಯವಲ್ಲ ಎಂದು ಹೇಳುತ್ತಾರೆ.

೩೪೫

ಹಗಲು ರಾತ್ರಿಯಲಿ ಎದ್ದು ಮುಗಿಲು ನೋಡುವರಯ್ಯ
ನಗೆಗೇಡು, ಅನ್ಯಾಯ ಮಾಡುವ ಜನರಿಗೆ
ಅಘಹರನು ಮುನಿದು ಶಿಕ್ಷಿಸುವನು, ಬಸವಣ್ಣ

ತಾತ್ಪರ್ಯ : ಅನ್ಯಾಯ ಮಾಡುವವರಿಗೆ ಶಿವನು ಸಿಟ್ಟಾಗಿ ಶಿಕ್ಷಿಸುವನು ಎಂಬುದು ಸಾಮಾನ್ಯ ಮಾತು. ಇದನ್ನು ಹಗಲೂ ರಾತ್ರಿ ಮುಗಿಲು ನೋಡುವ ಜನರಿಗೆ ಜೋಡಿಸಲಾಗಿದೆ. ಇದು ನಾಚಿಕೆಗೇಡು ಎಂದೂ ಸೇರಿಸಿದ್ದಾರೆ. ಜನರು ಮುಗಿಲು ನೋಡುವುದು ಮಳೆಗಾಗಿ ಮಾತ್ರ. ಇದು ಮೋಡಗಳನ್ನು ನೋಡುವುದಕ್ಕೂ, ಮೇಲಿರುವ ಪರಮಾತ್ಮನ ಕರುಣೆಗಾಗಿ ಬೇಡುವುದಕ್ಕೂ ಅನ್ವಯವಾಗುತ್ತದೆ. ಆದರೆ

ಇದು ನಗೆಗೇಡು ಎನ್ನುತ್ತಾರೆ ಮೌನಪ್ಪಯ್ಯ. ನ್ಯಾಯ ನೀತಿಗಳಿಂದ ಮಾನವರು ನಡೆದರೆ ಮಳೆ ಬೆಳೆಯನ್ನೂ ದೇವರು ತಂತಾನೆ ಕೊಡುತ್ತಾನೆ. ಅನ್ಯಾಯ ಅನೀತಿ ಹೆಚ್ಚಾದರೆ ಆತನು ಮಳೆ ಬೆಳೆ ಕೊಡದೆ ಶಿಕ್ಷಿಸುತ್ತಾನೆ ಎಂಬುದು ಈ ವಚನದ ಅಂತರಾರ್ಥ ಎನಿಸುತ್ತದೆ.

೩೪೬

ಮಳೆಯೆಲ್ಲ ತೀರ್ಥವು ಬೆಳೆಯೆಲ್ಲ ಪ್ರಸಾದವು
ಸುಳಿವ ಗಾಳಿ ಸೂಸಿ ಬೀಸಿದರೆ, ಇವು ಮೂರು
ಪ್ರಳಯಾಗ್ನಿ ಜಗಕೆ, ಬಸವಣ್ಣ

ತಾತ್ಪರ್ಯ : ಬೀಸುವ ಗಾಳಿ ಕ್ರಮಬದ್ಧವಾಗಿ ಬೀಸಿ ಮಳೆ ಮೋಡಗಳನ್ನು ತಂದು ಮಳೆ ಸುರಿಯುವಂತೆ ಮಾಡಿದರೆ ಇಳೆಯೆಲ್ಲ ಬೆಳೆಯಿಂದ ನಳನಳಿಸುತ್ತದೆ. ಜಗತ್ತಿನ ಜನರಿಗೆ ಸುಖವಾಗುತ್ತದೆ. ಆಗ ಮಳೆಯೆಲ್ಲ ತೀರ್ಥವಾಗಿ ಬೆಳೆಯೆಲ್ಲ ದೇವರಿತ್ತ ಪ್ರಸಾದವಾಗಿ ಕಂಡುಬರುತ್ತದೆ. ಅದೇ ಗಾಳಿ ಮಳೆ ಬೆಳೆ ಮೂರು ಸರಿಯಾಗಿ ಬರದಿದ್ದರೆ ಲೋಕಕ್ಕೆ ಬರಗಾಲ ಬರುತ್ತದೆ. ಅದೇ ಅತೀಯಾದರೆ ಪ್ರಳಯಾಗ್ನಿಯಾಗುತ್ತದೆ. ಇಲ್ಲಿ ತೀರ್ಥ, ಪ್ರಸಾದಗಳೆಂಬ ಪೂಜೆಯ ವಿಷಯಗಳನ್ನು ಇಡೀ ನಿಸರ್ಗಕ್ಕೆ ಅನ್ವಯಿಸಿರುವುದು ಮೌನೇಶ್ವರರ ವಿಶ್ವವಿಶಾಲ ದೃಷ್ಟಿಯ ದ್ಯೋತಕವಾಗಿದೆ.

೩೪೭

ಮಿಂಚು ಗದ್ದರಣಿ ಪುಟ್ಟಲು ಮುಂಚಿನ ಮಳೆ
ಪಂಚತಂತ್ರ ಶಾಸ್ತ್ರ ನೋಡಲು ದರಬಾರದ
ಕಿಂಚಿತ್ ಪುಣ್ಯವಾಗಲಿಲ್ಲ, ಬಸವಣ್ಣ

ತಾತ್ಪರ್ಯ : ಮಳೆಗಾಲ ಪ್ರಾರಂಭವಾದಾಗ ಮಿಂಚು ಗುಡುಗುಗಳಿಂದಾಗಿ ಮಳೆ ಬರುತ್ತದೆ. ಆದರೆ ರಾಜರ ಆಜ್ಞೆಯ ಪ್ರಕಾರ ಪಂಡಿತರು ಪಂಚಾಂಗ ಶಾಸ್ತ್ರಗಳನ್ನು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಮಳೆ ಬರುವುದರ ಬಗ್ಗೆ ಪಂಚಾಂಗ ಶಾಸ್ತ್ರಗಳು ಏನೇನೋ ಭವಿಷ್ಯಗಳನ್ನು ಹೇಳುತ್ತವೆ. ಅದು ಜನರ ಬೇಡಿಕೆಯಿಂದಲೇ ಇರಬಹುದು ಅಥವಾ ದೇಶವನ್ನಾಳುವ ರಾಜನ ದರಬಾರಿನ ಅಪ್ಪಣೆಯೇ ಇರಬಹುದು. ಋತುಮಾನದ ಅಗತ್ಯವಾದ ಮಳೆ ಬರುವಾಗಲೇ ಬರುತ್ತದೆಯೇ ಹೊರತು ಅದು ಯಾರ ಅಪ್ಪಣೆಯಿಂದಲೋ, ಯಾವ ಶಾಸ್ತ್ರ ಹೇಳಿದಂತೆಯೋ ಬರುವುದಿಲ್ಲ. ಮಳೆ ಬರುವುದು ಅದೊಂದು ಸಹಜ ಕ್ರಿಯೆ ಹೊರತು ಕೃತ್ರಿಮ ಕ್ರಿಯೆಯಲ್ಲ.

೩೪೮

ಕುರುಬನಂತಿರಬೇಕು ಕೊರವನಂತಿರಬೇಕು
ಕೆರುವು ತರುವವನಂತಿರಬೇಕು, ಮುಂದಿನ
ಅರುವೆಂಬುದಿರಬೇಕು, ಬಸವಣ್ಣ

ತಾತ್ಪರ್ಯ : ಮಾನವನು ಹೇಗೆ ಬಾಳಬೇಕೆಂಬುದನ್ನು ಇಲ್ಲಿ ಸೂಚಿಸಲಾಗಿದೆ. ಬದುಕುವ ರೀತಿಯಲ್ಲಿ ಕುರುಬ ಕೊರವ ಹೊಲೆಯರಂತೆ ಕಾಯಕ ಜೀವಿಗಳಾಗಿ ಸರಳವಾಗಿ, ಶ್ರದ್ಧೆಯಿಂದ ಬದುಕಬೇಕು. ಆದರೆ ಅರಿವಿನಿಂದ ಬದುಕಬೇಕು. ಮೋಸ ವಂಚನೆ, ಆಸೆ, ದುರಾಸೆ, ಸ್ವಾರ್ಥ, ಭೇದಭಾವ ಮುಂತಾದ ಗುಣಗಳು ಕೆಳವರ್ಗದ ಜನರಲ್ಲಿರುವುದಿಲ್ಲ. ಅವೆಲ್ಲ ಮೇಲುವರ್ಗದ ಜನರಲ್ಲೇ ಹೆಚ್ಚು. ಮೌನೇಶ್ವರರು ಕೆಳಜಾತಿಯ ಜನರನ್ನೇ ಮೆಚ್ಚಿಕೊಂಡಿದ್ದಾರೆ. ಆದರೆ ಅಜ್ಞಾನ ಅವಿವೇಕ ಮತ್ತು ದುರ್ಗುಣಗಳು ಇರಬಾರದು. ಅರಿವಿನ ಜೀವವಾಗಿರಬೇಕು ಅಷ್ಟೆ.

೩೪೯

ಕುಂಬಾರ ಹುಳುವು ತಾನು ಜಂಬರದೊಳು ಸಿಲುಕಿ
ನಂಬಿತಯ್ಯ ಗುರುಪಾದ, ಹೊಂದಲಿಲ್ಲ ತುಸು ಮಣ್ಣ
ಶಿವಶರಣರ ಅಂದವು ಬೇರೆ, ಬಸವಣ್ಣ

ತಾತ್ಪರ್ಯ : ಸಂಸಾರದಲ್ಲಿ ಯಾವುದಕ್ಕೂ ಅಂಟದಂತೆ ಬಾಳಬೇಕು. ಭವದ ಕೆಸರಿನಲ್ಲಿದ್ದೂ ಭವವು ಅಂಟದಂತೆ ಜೀವಿಸಬೇಕು. ನೀರೊಳಗೆ ಬೆಳೆದ ಕಮಲದ ಎಲೆಯ ಮೇಲಿನ ನೀರಿನ ಹನಿ ಎಲೆಗೆ ಅಂಟದೆ ಇರುವಂತೆ ಬಾಳಬೇಕು ಎಂಬುದು ಯೋಗಿಗಳು, ಜ್ಞಾನಿಗಳು ಈ ಜಗತ್ತಿನಲ್ಲಿ ಹೇಗೆ ಬದುಕಬೇಕೆಂಬುದನ್ನು ಹೇಳಿದ್ದಾರೆ. ಹಾಗೆಯೇ ಕುಂಬಾರ ಹುಳ ಕೆಸರಲ್ಲೇ ಇದ್ದರೂ ತನ್ನ ಮೈಗೆ ಕೆಸರು ಅಂಟದಂತಿರುತ್ತದೆ. ಇದು ಗುರುಪಾದವನ್ನು ನಂಬಿ ಎಂದರೆ ಪ್ರಕೃತಿ ನಿಯಮವನ್ನು ನಂಬಿರಿ ಎಂಬ ಅರ್ಥ ಕೊಡುತ್ತದೆ. ಇದು ಸರಳ ದೃಷ್ಟಾಂತವನ್ನು ಕುರಿತು ಹೇಳುವ ವಚನವಾದರೂ ಶಿವಶರಣರು ಹೇಗೆ ಭಿನ್ನವಾಗಿ ಬಾಳುತ್ತಾರೆ ಎಂಬುದನ್ನು ಹೇಳುತ್ತದೆ. ಮೋಹ ಮಾಯೆ ಆಶೆಗಳಿಗಂಟಿಕೊಂಡು ಅದರಲ್ಲೇ ವಿಲಿವಿಲಿ ಒದ್ದಾಡುವ ಭವಪಾಶ ಜೀವಿಗಳಿಗೆ ನೀಡಿರುವ ಬಾಳಿನ ಬಹುದೊಡ್ಡ ರಹಸ್ಯವಾಗಿದೆ.

೩೫೦

ಬೇರಿಗೆ ಬೆಂಕಿಯ ಹಚ್ಚಿ ಮೇಗಣ ತೊಪ್ಪಲ ನೆಚ್ಚಿ
ಹೋರಾಡುತೈತಿ ಜಗವೆಲ್ಲ, ಮುಂದಿನ್ನು
ಹೇಗಾದೀತೆಂಬುದನರಿಯರು, ಬಸವಣ್ಣ

ತಾತ್ಪರ್ಯ : ಈ ವಚನ ಬಹಳ ಅರ್ಥಪೂರ್ಣವಾದುದು ಮತ್ತು ಅನೇಕ ರೀತಿಯಲ್ಲಿ ಅರ್ಥೈಸಲು ಬರುವಂತಹುದು. ಪ್ರಪಂಚದಲ್ಲಿ ಸತ್ಯ ಜ್ಞಾನ ಕಾಯಕ ಆಧ್ಯಾತ್ಮ ಪರಮಾತ್ಮ ಇತ್ಯಾದಿಗಳೆಲ್ಲ ಬೇರಿನಂತೆ. ದೈಹಿಕ ವಿಷಯ ಸುಖ, ಹಣ, ಆಸ್ತಿ, ಜಾತಿ, ಮತಗಳು, ಆಡಂಬರದ ಪೂಜೆ, ಮೆರೆದಾಟ, ಅನೇಕತೆಯ ಭೇದಗಳು, ಕೃತಕತೆ, ಸ್ವಾರ್ಥ, ಆಶೆ, ನಾನು, ನನ್ನದು ಎಂದು ಸಂಸಾರವನ್ನೇ ನೆಚ್ಚಿಕೊಂಡು ಬಡಿದಾಡುವುದು ಮುಂತಾದುವೆಲ್ಲ ಒಂದು ಮರದ ಕೊಂಬೆ ರೆಂಬೆ ಎಲೆಗಳಂತೆ. ಈ ಜಗತ್ತು ಬೇರಿಗೆ ಬೆಂಕಿ ಹಚ್ಚಿ ತೊಪ್ಪಲನ್ನು ನೆಚ್ಚಿಕೊಂಡು ಹೋರಾಡು ತ್ತಿದೆ. ಎಂದರೆ ಬಹುಶಃ ಈ ರೀತಿ ಅರ್ಥಮಾಡಬೇಕಾಗುತ್ತದೆ. ಮನುಷ್ಯನಿಗೆ ಉತ್ಪಾದನೆಯ ಮೂಲವಾದ ಕೃಷಿ ಪರಂಪರೆಯನ್ನು ಹಾಗೂ ನಿಸರ್ಗವನ್ನು ಹಾಳು ಮಾಡಲಾಗು ತ್ತದೆ. ಇದರ ಪರಿಣಾಮಗಳು ಮನುಕುಲವನ್ನು ಅವನತಿಯ ಕಡೆಗೇ ಒಯ್ಯುತ್ತಿವೆ ಇದು ಮೂಢ ಜನರಿಗೆ ಗೊತ್ತಾಗುವುದಿಲ್ಲ.

೩೫೧

ಕಲ್ಲು ಕಾಷ್ಠ ಕಂಚು ಬೆಳ್ಳಿ ತಾಮ್ರದ ದೇವರು
ನೆಲ್ಲಕ್ಕಿ ಬೋನ ಕಾಯಿ ದೀಪ ಧೂಪಾದಿ, ಈ
ಜನರಿಗೆಲ್ಲಿ ಕಾಣುವದು, ಬಸವಣ್ಣ

ತಾತ್ಪರ್ಯ : ದೇವರುಗಳನ್ನು ಕಲ್ಲು ಕಟ್ಟಿಗೆ ಬೇರೆ ಬೇರೆ ಲೋಹಗಳಿಂದೆಲ್ಲ ಮಾಡುತ್ತಾರೆ. ಅವುಗಳನ್ನು ಮನೆಯಲ್ಲೋ ಗುಡಿಯಲ್ಲೋ ಇಟ್ಟು ಪೂಜೆ ಮಾಡುವ ಪದ್ಧತಿ ಹಿಂದೂ ಧರ್ಮದಲ್ಲಿ ಹಿಂದಿನಿಂದಲೂ ನಡೆದುಬಂದಿದೆ. ಪೂಜೆಗೆ ದೀಪ ಧೂಪ ಭಕ್ಷ್ಯಾದಿಗಳ ನೈವೇದ್ಯ ಆರತಿ ಪ್ರಸಾದ ಮುಂತಾದವುಗಳ ಕ್ರಮ ಬದ್ಧವಾದ ಆಚರಣೆಗಳೂ ಈ ಮೂರ್ತಿ ಪೂಜೆಯ ಸುತ್ತಲು ಬೆಳೆದಿವೆ. ಇಂಥ ಪೂಜಾದಿಗಳಿಂದ ದೇವರು ಒಲಿಯುತ್ತಾನೆ. ನಮ್ಮ ಇಷ್ಟಾರ್ಥಗಳನ್ನು ಈಡೇರಿಸುತ್ತಾನೆ. ಇದೇ ಮೋಕ್ಷಕ್ಕೂ ನಮ್ಮನ್ನು ಕರೆದೊಯ್ಯುವ ಮಾರ್ಗವೆಂದು ಜನ ನಂಬಿ ನಡೆಯುತ್ತಿದ್ದಾರೆ. ಆದರೆ ಇದರಿಂದ ಆತ್ಮಶುದ್ಧಿ ದುರ್ಗುಣಗಳ ವಿಮೋಚನೆ, ಸತ್ಯದ ಅರಿವು ಮುಂತಾದುವು ಸಾಧನೆಯಾಗುವುದಿಲ್ಲ. ನಿಜದ ದರ್ಶನ ಈ ಜನರಿಗೆ ಆಗುವುದಿಲ್ಲ.

೩೫೨

ಹದಿನಾರು ವರುಷ ಒದಗಿದ ಪ್ರಾಯದೊಳಗೆ
ಮಲಹರನೆಂದು ನೆನೆಯದೆ, ಮುದಿನಾಯಿ
ಯಾಗಿ ಬಿಡುವದೆ, ಬಸವಣ್ಣ

ತಾತ್ಪರ್ಯ : ಇದನ್ನು ಬಸವಣ್ಣನವರೇ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. 'ನೆರೆ ಕೆನ್ನೆಗೆ ತೆರೆ ಗಲ್ಲ ಶರೀರ ಗೂಡವೋಗದ ಮುನ್ನ... ಪೂಜಿಸಿರೋ ನಮ್ಮ ಕೂಡಲ ಸಂಗಮದೇವನ'. ಇದರ ಮತ್ತೊಂದು ರೂಪವನ್ನು ಎರಡು ಸಾಲುಗಳಲ್ಲಿ ಮೌನೇಶ್ವರರು ಸಂಗ್ರಹಿಸಿ ಹೇಳಿದ್ದಾರೆ. ಭಕ್ತಿ ಎಂಬುದು ಜೀವನದ ಒಂದು ಭಾಗವಾಗಿ ಬಾಲ್ಯದಿಂದಲೇ ಬೆಳೆದು ಬರಬೇಕು. ಯೌವನದಲ್ಲಿ ಸ್ವಚ್ಛಂದವಾಗಿ ಹೇಗೆ ಹೇಗೋ ಮೆರೆದಾಡಿ ಕಾಲ ಕಳೆದು ವಯಸ್ಸಾದ ಮೇಲೆ ಮುದಿನಾಯಿಯಂತಾಗಿ ಬಿಡುವುದೆ! ಎಂದು ಪ್ರಶ್ನಿಸಿದ್ದಾರೆ.

೩೫೩

ಜಳಕ ಮಾಡಲು ದೇಹ
ಕೊಳಕು ಮೇಲಿನದು ಹೋಯ್ತು
ಪುಳುಗೊಂಡ ಮಲ ಮಾಂಸ ರಕ್ತ ಕ್ರಿಮಿ
ಇರಲು, ಮನಸಿನೊಳಗಣ ಕಳವಳ
ಬಿಡಲು ಮಡಿಯು, ಬಸವಣ್ಣ

ತಾತ್ಪಯ : ಇದು ಅಂತರಂಗ ಶುದ್ಧಿಯನ್ನು ಬೋಧಿಸುವ ವಚನ. ಸ್ನಾನ ಮಾಡುವುದರಿಂದ ಬಹಿರಂಗ ಶುದ್ಧಿಯೇನೋ ಆಗುತ್ತದೆ. ಅದೂ ದೇಹದ ಮೈ ಮೇಲಿನ ಹೊಲಸು ಮಾತ್ರ ತೊಳೆಯುತ್ತದೆ. ಇನ್ನೂ ದೇಹದೊಳಗೆ ಎಷ್ಟೊಂದು ಹೊಲಸು ಹುಳಗಳು, ಕ್ರಿಮಿಕೀಟಾದಿಗಳೆಲ್ಲ ಇವೆ. ಅವುಗಳನ್ನು ತೊಳೆದುಕೊಳ್ಳುವುದು ಹೇಗೆ? ಅದಕ್ಕಿಂತಲೂ ಮುಖ್ಯವಾಗಿ ಮನಸ್ಸಿನಲ್ಲಿ ಆಸೆ ಮೋಹ ಚಂಚಲತೆ ಮುಂತಾದ ಅನೇಕ ದುರ್ಗುಣಗಳ ಹೊಲಸು ತುಂಬಿದೆ. ಅವುಗಳನ್ನು ತೊಳೆದುಕೊಂಡಾಗಲೆ ನಿಜವಾದ ಮಡಿ ಅಥವಾ ಶುದ್ಧಿ.

೩೫೪

ಗುರುಹಸ್ತ ಮುಟ್ಟಲು ಚರ್ಮ ಪಾವನವಾಗೆ
ಕೆರವೆನ್ನಬಹುದೆ ಮನಿದೇವರು, ಬಸವಣ್ಣ

ತಾತ್ಪರ್ಯ : ಗುರುವಿನ ಅನುಗ್ರಹದಿಂದ ಶಿಷ್ಯನ ಸರ್ವಾಂಗವೂ ಪಾವನವಾಗುತ್ತದೆ. ಆತನ ಮನ, ಚಿತ್ತ, ಬುದ್ಧಿ, ಅಹಂಕಾರ, ಪ್ರಾಣಗಳೆಂಬ ಆತನ ಜನ್ಮವೇ ಪಾವನವಾಗುತ್ತದೆ. ಇನ್ನು ಶಿಷ್ಯನ ಚರ್ಮವೂ ಪಾವನವಾಗಿರುವುದೂ ಸರಿಯೇ. ಅಂತ ಗುರುವಿನ ಚಪ್ಪಲಿಯನ್ನು ಕೆರವೆಂದು ಕರೆಯಬಹುದೆ? ಅಲ್ಲ. ಅದು ಶಿಷ್ಯನ ಮನೆ ದೈವ. ಆತನು ತನ್ನ ಮನೆಯ ದೇವರ ಜಗುಲಿಯಲ್ಲಿ ಗುರುವಿನ ಪಾದುಕೆಗಳನಿಟ್ಟು

ಕೊಂಡು ದಿನವೂ ಪೂಜೆ ಮಾಡುತ್ತಾನೆ. ಹೀಗೆ ಗುರುವಿನ ಮಹಿಮೆಯನ್ನು ಶಿಷ್ಯನ ಕಿಂಕರ ಭಾವವನ್ನೂ ಈ ವಚನ ಅಭಿವ್ಯಕ್ತ ಮಾಡುತ್ತದೆ.

೩೫೫

ವಾದಿಗೆ ವ್ರತವಿಲ್ಲ ಮೇದಿನಿಗೆ ಹೇಸಿಗಿಲ್ಲ
ಮಾದಿಗನ ಮಾತು ನಿಜವಲ್ಲ, ಮುಕ್ತಿಪಥದ
ಹಾದಿ ಅವಗಿಲ್ಲ, ಬಸವಣ್ಣ

ತಾತ್ಪರ್ಯ : ವಾದಿಗೆ 'ವ್ರತ'ವಿಲ್ಲ ಎಂಬ ಮಾತು ಸಂದಿಗ್ಧವಾಗಿದೆ. ವಾದಿಯಾದವನಿಗೆ ಪ್ರತಿವಾದಿಯನ್ನು ಸೋಲಿಸಬೇಕೆಂಬುದೇ ಮುಖ್ಯ ಗುರಿಯಾಗಿರುತ್ತದೆ. ಅಂತವನಿಗೆ ವ್ರತವಿಲ್ಲ ಎಂದರೆ ಸತ್ಯವಿಲ್ಲ ಎಂದೂ ಅಥವಾ ವ್ರತ ನೇಮಗಳಿಲ್ಲವೆಂದೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. 'ಭೂಮಿಗೆ ಹೇಸಿಗೆ ಇಲ್ಲ' ಎಂಬ ಮಾತು ನಿಜವಾದುದು. ಮಾದಿಗನ ಮಾತು ನಿಜವಲ್ಲ, ಅವನಿಗೆ ಮೋಕ್ಷವಿಲ್ಲ ಎಂಬ ಮಾತು ಕೂಡ ಅವರು ಬೇರೆ ಕಡೆ ಮಾದಿಗರಿಗೆ ಕೊಟ್ಟ ಮಾನ್ಯತೆಗೆ ವಿರುದ್ಧವಾಗಿದೆ. ಬಹುಶಃ ಶರಣರ 'ಹೊಲಸು ತಿಂಬುವನೆ ಹೊಲೆಯ' ಎಂಬ ಅರ್ಥದಲ್ಲಿ ತೆಗೆದುಕೊಂಡು ಜಾತಿಯ ದೃಷ್ಟಿ ಅಲ್ಲದೆ ಕರ್ಮದ ದೃಷ್ಟಿಯಿಂದ ವಿಚಾರ ಮಾಡಬೇಕು. ಅಜ್ಞಾನ ತುಂಬಿದವನು ಮೋಕ್ಷಕ್ಕೆ ಅರ್ಹನಲ್ಲ ಎಂದು ಸ್ವೀಕರಿಸಬೇಕು.

೩೫೬

ಮಾತಾ ಪಿತರನು ಬಿಟ್ಟು, ನೀತಿ ಮಾರ್ಗವ ಬಿಟ್ಟು
ಜಾತವನು ತಾ ಬಿಟ್ಟು, ಜಗದೊಳಗೆ ಪ್ರ–
ಖ್ಯಾತರಾದರೇನು, ಬಸವಣ್ಣ

ತಾತ್ಪರ್ಯ : ಭಾರತೀಯ ಪರಂಪರೆಯಲ್ಲಿ ತಂದೆ ತಾಯಿಗಳನ್ನು ದೇವರೆಂದೇ ಭಾವಿಸಲಾಗಿದೆ. ಅವರಿಗೆ ವಿಧೇಯರಾಗಿ ಇಳಿವಯಸ್ಸಿನಲ್ಲಿ ಅವರ ಸೇವೆ ಮಾಡುತ್ತ ಚೆನ್ನಾಗಿ ನೋಡಿಕೊಳ್ಳುವುದು ದೈವ ಪೂಜೆಗೆ ಸಮಾನ ಮತ್ತು ಮಕ್ಕಳಾದವರ ಆದ್ಯ ಕರ್ತವ್ಯ ಹಾಗೆಯೇ ಮಕ್ಕಳನ್ನು ಸರಿದಾರಿಯಲ್ಲಿ ಬೆಳೆಸಿ ವಿದ್ಯಾ ಬುದ್ಧಿ ಗುಣವಂತರನ್ನಾಗಿ ಮಾಡುವುದೂ ಒಬ್ಬ ಮನುಷ್ಯನ ಇನ್ನೊಂದು ಮಹತ್ವದ ಕರ್ತವ್ಯ. ಇದರೊಡನೆ ನೀತಿಮಾರ್ಗ ಇವುಗಳನ್ನು ಒಳಗೊಂಡು ಸಾಮಾಜಿಕ ವಾಗಿಯೂ ಒಬ್ಬ ವ್ಯಕ್ತಿ ಒಳ್ಳೆಯ ನಡತೆಗಳಿಂದ ಎಲ್ಲರಿಗೂ ಮಾದರಿಯಾಗುವಂತೆ ನಡೆದುಕೊಳ್ಳಬೇಕು. ಇವು ಮೂಲಭೂತ ವಿಷಯಗಳು. ಇವುಗಳನ್ನೆಲ್ಲ ಬಿಟ್ಟು 'ಏನಕೇನ ಪ್ರಕಾರೇಣ ಪ್ರಸಿದ್ಧೋಭವ' ಎಂಬಂತೆ ಲೋಕ ವಿಖ್ಯಾತನಾದರೂ ಏನು ಪ್ರಯೋಜನ? ಎನ್ನುತ್ತಾರೆ ಮೌನೇಶ್ವರರು.

೩೫೭

ಪಕ್ಷಿ ವಂಶಾಭಿವೃದ್ಧಿಗೆ ವೃಕ್ಷದ ಆಲಯವು
ನಕ್ಷತ್ರ ರವಿ ಶಶಿಗೆ ಏತರದಾಲಯವು
ಶ್ರೀ ಸದಾಶಿವನು ರಕ್ಷಿಸುವನು, ಬಸವಣ್ಣ

ತಾತ್ಪರ್ಯ : ವಿಶ್ವದ ಅಗಾಧ ಲೀಲೆಯ ಬಗ್ಗೆ ಮೌನೇಶ್ವರರು ಚಿಂತಿಸಿದ್ದಾರೆ. ಪಕ್ಷಿಗಳಿಗೆ ವೃಕ್ಷಗಳು ಮನೆಯಾಗಿವೆ. ಆದರೆ ಲೋಕಕ್ಕೆಲ್ಲ ಬೆಳಕು ಕೊಡುವ ಸೂರ್ಯನಿಗಾಗಲಿ ಬೆಳದಿಂಗಳು ಕೊಡುವ ಚಂದ್ರನಿಗಾಗಲಿ, ಅಸಂಖ್ಯವಾಗಿರುವ ನಕ್ಷತ್ರಗಳಿಗೆ ಯಾವುದು ಮನೆ? ಆಕಾಶವೇ ಮನೆ. ಪರಮಾತ್ಮ ಆಕಾಶದಂತೆ. ಆಕಾಶದೊಳಗಿನ ಬ್ರಹ್ಮಾಂಡ ಗಳನ್ನೆಲ್ಲ ಸೂರ್ಯ ಚಂದ್ರರನ್ನೆಲ್ಲ ತಿರುಗಿಸುವ ಮೂಲ ಶಕ್ತಿ ಆತ. ಆದ್ದರಿಂದ ಶ್ರೀ ಸದಾಶಿವನು ಅವುಗಳನ್ನೆಲ್ಲಾ ರಕ್ಷಿಸುತ್ತಾನೆ ಎನ್ನುತ್ತಾರೆ.

೩೫೮

ಬಾಳೆಯ ಕಡಿಯುವ ಬಸವಿಯ ಮಕ್ಕಳಿಗೆ
ಬೆಳ್ಳನ್ನ ಬೋನ ಉಣಲಿಕ್ಕುವರು
ಭಾಳಾಕ್ಷನೆಂದು ಭಕ್ತರು ಬಂದರೆ
ಅತ್ತ ಸಾಗೆಂದು ಹಳಿಯುವರು, ಮರ್ತ್ಯದೊಳಗೆ
ಸತ್ಯವೆಲ್ಲಿಹದು, ಬಸವಣ್ಣ

ತಾತ್ಪರ್ಯ : 'ಬಾಳೆಯ ಕಡಿಯುವ ಬಸವಿಯ ಮಕ್ಕಳು' ಎಂಬುದಕ್ಕೆ ಬಾಳೇವು– ಬಾಳುವೆಗಳು ಎಂದು ಅರ್ಥಮಾಡಿಕೊಂಡರೆ ವಚನ ಸರಿಯಾಗಿ ಅರ್ಥವಾಗುತ್ತದೆ. ಬಾಳೇವುಗಳನ್ನು ಕೆಡಿಸುವ ಬಸವಿಯ ಮಕ್ಕಳಿಗೆ ಒಳ್ಳೊಳ್ಳೆ ಭೋಜನವನ್ನು ಇಟ್ಟು ಗೌರವಿಸುತ್ತಾರೆ. ಭಾಳಾಕ್ಷನ ಭಕ್ತರು ಬಂದರೆ ಅತ್ತ ಹೋಗೆಂದು ಹಳಿಯುತ್ತಾರೆ.

ಬಾಳುವೆಗಳನ್ನು ಕೆಡಿಸಿ ದೊಡ್ಡವರೆನಿಸಿಕೊಳ್ಳುವವರಿಗೆ, ಕೊಲೆ ಸುಲಿಗೆ ದೌರ್ಜನ್ಯ ಗಳನ್ನು ಮಾಡಿ ಮೇಲೆ ಬಂದಿರುವ ಅನೈತಿಕರಿಗೆ ಗೌರವಸ್ಥ ಜನ ಹೆದರುತ್ತಾರೆ. ಕರೆದು ಗೌರವದಿಂದ ಭಕ್ಷ್ಯಾನ್ನಗಳನ್ನಿತ್ತು ಸತ್ಕರಿಸುತ್ತಾರೆ. ಸಾತ್ವಿಕವಾದ ಸರಳ ಜೀವನ ನಡೆಸುವ ಶಿವಭಕ್ತರು 'ಭಿಕ್ಷಾಂದೇಹಿ' ಎಂದು ಬಂದರೆ ಮುಂದೆ ಹೋಗಿರೆಂದು ಸಾಗಹಾಕುತ್ತಾರೆ. ಈ ಲೋಕದಲ್ಲಿ ಸತ್ಯವೆಲ್ಲಿದೆ ಎಂದು ಕೇಳುತ್ತಾರೆ ಮೌನೇಶ್ವರರು.

೩೫೯

ಕಾಮ ದೇವನೆಂಬುದು ಕಾಣರು ಜಗದೊಳಗೆ
ಭೂಮಿಯ ಹೊತ್ತು ನಿಲಿಸಿದ ಬಸವಯ್ಯನಲ್ಲದೆ
ದೇವನೆಲ್ಲಿಹನು ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಕಾಲ್ಪನಿಕವಾದ ಕಾಮ ಮುಂತಾದವರನ್ನು ಜನರು ದೇವನೆಂದು ಪೂಜಿಸುತ್ತಾರೆ. ಆದರೆ ಅಂತ ದೇವರುಗಳು ಜನರಿಗೆ ಕಾಣುವುದಿಲ್ಲ. ಈ ಭೂಮಿಯಲ್ಲಿ ಬದುಕಲು ಅತಿ ಮುಖ್ಯವಾಗಿ ಬೇಕಾದ ಹಾಗೂ ಧಾನ್ಯವನ್ನು ಬೆಳೆಯಲು ಮೂಲಾಧಾರನಾದ ಬಸವಯ್ಯ ಎಂದರೆ ಎತ್ತು(ಭೂಮಿಯನ್ನು ಹೊತ್ತು ನಿಲ್ಲಿಸಿದ). ದೇಶದ ಬೆನ್ನೆಲುಬಾದ ರೈತರಿಗೆ ಆಧಾರ. ಆ ಬಸವಯ್ಯನಲ್ಲದೆ(ಎತ್ತುಗಳು) ಮರ್ತ್ಯಕ್ಕೆ ಬೇರೆ ದೇವರಿಲ್ಲ.

೩೬೦

ತಾವರೆಯ ಎಲೆಯು ನೀರೊಳಿಪ್ಪುದು
ತಾ ನೀರ ಹೊಂದುವದೆ, ಶಿವಶರಣರ
ಭಾವ ಬೇರೈತಿ, ಬಸವಣ್ಣ

ತಾತ್ಪರ್ಯ : ಸಂಸಾರದೊಳಗಿದ್ದೂ ಸಂಸಾರಕ್ಕಂಟದೆ ನಿರ್ಲಿಪ್ತವಾಗಿ ವೈರಾಗ್ಯ ಭಾವನೆಯಿಂದ ಬಾಳುವುದು ಶಿವಶರಣರ ಹಾಗೂ ಯೋಗಿಗಳ ಪ್ರಸಿದ್ಧವಾದ ನೀತಿ. ಸಾಮಾನ್ಯರಿಗೂ ಶಿವಯೋಗಿಗಳಿಗೂ ಮುಖ್ಯ ವ್ಯತ್ಯಾಸ ಇದೇ ಆಗಿದೆ. ಸಾಮಾನ್ಯರು ಈ ದೇಹ, ಸಂಸಾರ ಇಲ್ಲಿಯ ಸುಖಗಳು ಮುಂತಾದುವೇ ಸತ್ಯವೆಂದು ಅದರಲ್ಲೇ ಮುಳುಗಿ ತೇಲಾಡುತ್ತಾರೆ. ಸಂಸಾರ ಎನ್ನುವ ಭವದ ಕೆಸರು ಅವರಿಗೆ ಅಂಟಿಕೊಂಡು ಅವರು ಪರಮಾತ್ಮನ ಸತ್ಯವನ್ನು ಕಾಣದೆ ತೊಳಲಾಡುತ್ತಾರೆ. ಆದರೆ ಶಿವಶರಣರ ರೀತಿಯು ಸಾಮಾನ್ಯರಿಗಿಂತ ಬೇರೆಯೇ ಆಗಿರುತ್ತದೆ. ಅವರು ಒಡಲು ಹಿಡಿದು ಒಡಲನ್ನು ಮೀರಿ, ಲೋಕದೊಳಗಿದ್ದು ಲೋಕವನ್ನು ಮೀರಿ ಬಾಳುತ್ತಾರೆ.

೩೬೧

ಸದರಿಗೆ ಸಂತೋಷವಾಗಬೇಕು ಉತ್ತಮರ
ನೋಯಿಸಲಾಗದು, ಸಾಹೇಬರು ಸಭೆಯವರು
ತಿಳಿದಿರಬೇಕು ಸತ್ಯಕ್ಕೆ ಸರಿ ರಾತ್ರಿ ಸಲ್ಲದು, ಬಸವಣ್ಣ

ತಾತ್ಪರ್ಯ : ಯಾವುದೋ ಒಂದು ಸಮಸ್ಯೆಯ ವಿಚಾರಣೆ ರಾಜರ(ಸುಲ್ತಾನರ) ಸಭೆಯಲ್ಲಿ ನಡೆದಿದ್ದಾಗ ರಾತ್ರಿಯಾಗಿರಬಹುದು. ಸತ್ಯದ ಪರಿಶೀಲನೆಗೆ, ವಿಚಾರಣೆಗೆ ಸರಿ ರಾತ್ರಿ ಸರಿಯಲ್ಲ. ಉತ್ತಮರಾದ ಕಕ್ಷದಾರರನ್ನು ರಾತ್ರಿ ಹೊತ್ತು ಎಳೆತಂದು ನೋಯಿಸಬಾರದು. ಸಾಹೇಬರಿಗೆ ಸಭಿಕರಿಗೆ ಇದು ತಿಳಿದಿರಬೇಕು. ಎಲ್ಲರಿಗೂ ಸಂತೋಷವುಂಟಾಗುವಂತೆ ನ್ಯಾಯ ನಿರ್ಣಯ ನಡೆಯಬೇಕು ಎಂದು ಮೌನೇಶ್ವರರು ಮನವೊಲಿಸಿ ಹೇಳಿದಂತೆ ಈ ಸಂದರ್ಭ ಕಂಡುಬರುತ್ತದೆ.

೩೬೨

ಹೆಗ್ಗಡೆ ದೇವರ ಕೂಡ ನುಗ್ಗು ಮಾತುಗಳೇಕೆ
ಹಿಗ್ಗಿದರೆ ಹಲ್ಲು ಮುರಿದಾನು, ಕಾಲಿಗೆ
ಹಗ್ಗವ ಹಾಕಿ ಎಳೆಸುವಾತನ ಕೂಡ
ಅಗ್ನಾನ ಬೇಡ ಅಧಮರಿರ್ಯಾ, ಬಸವಣ್ಣ

ತಾತ್ಪರ್ಯ : ಹೆಗ್ಗಡೆ ದೇವರು ಎಲ್ಲರಿಗೂ ಹಿರಿಯವನಾದ ದೇವರು. ಆತನ ಮುಂದೆ ಸಣ್ಣ ಚಿಲ್ಲರೆ(ನುಗ್ಗು) ಮಾತುಗಳನ್ನಾಡಬಾರದು. ಗಂಭೀರವಾಗಿ ಸತ್ಯವಾದ ಮಾತುಗಳನ್ನೇ ಆಡಬೇಕು. ಹುಡುಗಾಟದಿಂದ ಹಲ್ಲುಕಿರಿದು ಮಾತಾಡಿದರೆ ಆತನು ಹಲ್ಲು ಮುರಿಯುತ್ತಾನೆ. ತಪ್ಪು ಎಂದು ಕಂಡು ಬಂದರೆ ಕಾಲಿಗೆ ಹಗ್ಗ ಹಾಕಿ ಎಳೆಸುತ್ತಾನೆ. ಆತನಿಗೆ ಅಂತಹ ಅಧಿಕಾರವಿದೆ, ಸಾಮರ್ಥ್ಯವಿದೆ. ಅಂತಹ ದೇವರ ಮುಂದೆ ಅಜ್ಞಾನಿಗಳಾಗಿ ವರ್ತಿಸಬೇಡಿ, ಅಧಮರೇ ಎಂದು ದೈವದ ಆಸ್ಥಾನದಲ್ಲೋ, ದೇವರ ಮುಂದೆಯೋ ನಡೆದ ಪ್ರಸಂಗದಲ್ಲಿ ಈ ವಚನ ಹೊರಬಂದಿದೆ ಎನಿಸುತ್ತದೆ.

೩೬೩

ಗೂಳಿ ಬಸವನು ಬಂದು ಆವುಗಳನೇರಿದರೆ
ಯಾವುದು ತನ್ನ ಕರುವು? ಧರ್ಮದ
ಸ್ಥಾವರಿದ್ದಲ್ಲಿ ಇರಬೇಕು
ಸತ್ಯದ ದೇವರೆತ್ತ ಇತ್ತ ನರನೆತ್ತ, ಪಾಪಕ್ಕೆ
ಠಾವಿಲ್ಲ ಎಂದನು ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಅನೇಕ ಗೂಳಿಗಳು ಅನೇಕ ಆಕಳುಗಳನ್ನೇರುತ್ತವೆ. ಗೋವುಗಳು ಈಲಾಗಿ ಕರು ಹಾಕುತ್ತವೆ. ಅವುಗಳಲ್ಲಿ ಯಾವ ಗೂಳಿಯ ಕರು ಯಾವುದು? ಯಾವುದೇ ಆಗಿದ್ದರೂ ಆ ಗೋವು ಗೂಳಿಗಳ ಸಂಬಂಧ ಅಲ್ಲಿಗೆ ಮುಗಿಯಿತು. ಇದು ಪ್ರಕೃತಿ ಧರ್ಮ, ದೇವರ ನಿಯಮ. ಆದರೆ ಮಾನವರಲ್ಲಿ ಗಂಡು ಹೆಣ್ಣಿನ ಸಂಬಂಧ ಕೇವಲ ಸಂತಾನ ಕ್ರಿಯೆಗೆ ಸೀಮಿತವಾಗುವುದಿಲ್ಲ. ಗಂಡ ಹೆಂಡತಿಯರಾಗಿ ಬಾಳಿನುದ್ದಕ್ಕೂ ಸಂಬಂಧ ಮುಂದುವರಿಯುತ್ತದೆ. ಪ್ರಕೃತಿ ಸಹಜವಾದ ಪ್ರಾಣಿಗಳ ಸಂತಾನ ಕ್ರಿಯೆಗೂ, ಮಾನವರ ಸಂತಾನ ಕ್ರಿಯೆಗಳಿಗೂ ವ್ಯತ್ಯಾಸವಿದೆ. ಆದರೆ ಇದು ಪಾಪದ ಕ್ರಿಯೆ ಎನ್ನಲು ಅವಕಾಶವಿಲ್ಲ. ಇದು ಪ್ರಕೃತಿ ಸಹಜ ದೇವರ ಕ್ರಿಯೆ.

೩೬೪

ಅರಿವಿಲ್ಲದವನಿಗೆ ಗುರುವಿಲ್ಲ ದೈವವಿಲ್ಲ
ಪರಹಿತವಿಲ್ಲ ಶುಭವಿಲ್ಲ, ಎಂದಿನ್ನು

ಪರಮಾತ್ಮ ಹೇಳಿದ ನಿಜ ನುಡಿಯ
ಪರಾಮರಿಸಿರಿ ಸತ್ಯ ಶರಣರಿರ್ಯಾ, ಬಸವಣ್ಣ

ತಾತ್ಪರ್ಯ : ಗುರು ದೈವ ಪರಹಿತ ಶುಭ ಇವುಗಳ ತಿಳುವಳಿಕೆ ಮತ್ತು ಆಚರಣೆ ಬಗ್ಗೆ ಮಾನವನಲ್ಲಿ ಅರಿವು ಇರುವುದು ಬಹಳ ಮುಖ್ಯ. ಅರಿವೇ ಇಲ್ಲದ ಅಜ್ಞಾನಿಗೆ ಗುರುವು ಬೋಧಿಸಿದರೂ ದೈವ ಎದುರಿಗಿದ್ದು ಅದರ ಪೂಜೆ ಮಾಡಿದರೂ ಅವುಗಳ ಹಿತಾಹಿತಗಳಾಗಲಿ ಶುಭ ಅಶುಭಗಳಾಗಲಿ ಅವನಿಗೆ ಗೊತ್ತಾಗುವುದಿಲ್ಲ. ಅಂತವನು ಮಾಡುವುದೆಲ್ಲ ಕೇವಲ ಕೃತಕ ಡಂಭಾಚಾರವಾಗುತ್ತದೆ. ಅರಿವಿನಿಂದ ಮಾತ್ರ ಗುರುವಿನ ಮಹತ್ವ, ಗುರುಬೋಧೆಯ ಮಹಿಮೆಗಳು, ದೈವದ ಭಾವನೆ–ಅನುಭಾವಗಳು, ಲೋಕಹಿತದ ಮತ್ತು ಒಳಿತಿನ ಪರಿಕಲ್ಪನೆಯಾಗಲಿ ಆಚರಣೆಯಲ್ಲಿ ಅಳವಡಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಎಲ್ಲವೂ ವ್ಯರ್ಥ. ಆದ್ದರಿಂದಲೇ ಅಲ್ಲಮನು 'ಅರಿವೇ ಗುರು' ಎಂದದ್ದು.

೩೬೫

ನಾಲ್ಕು ದಿಕ್ಕಿಗೆಲ್ಲ ಜಾಲವ ಹಾಕಿದೆನು
ಬಾಳುವ ಮೀನು ದೊರೆಯಲಿಲ್ಲ, ಲೋಕದ
ಮೀನು ದೊರೆತಾವೆಂದು ಪ್ರಭುದೇವ
ಜಾಲಿಸಿ ಹೋದ ಜಗವನು, ಬಸವಣ್ಣ

ತಾತ್ಪರ್ಯ : ಬಾಳುವ ಮೀನು ಎಂದರೆ ಇಲ್ಲಿ ತುರೀಯಾವಸ್ಥೆಯನ್ನು ಮುಟ್ಟಿದ ಮಹಾಯೋಗಿ ಸಿದ್ಧಪುರುಷ ಎಂದು ಅರ್ಥೈಸಬೇಕಾಗುತ್ತದೆ. ಮೌನೇಶ್ವರರು ಅಂತ ಸಿದ್ಧಿ ಪಡೆದ ಮೀನಿಗಾಗಿ ಬಲೆ ಹಾಕಿ ಎಲ್ಲಾ ದಿಕ್ಕುಗಳಲ್ಲಿ ಹುಡುಕಿದರೂ ಒಂದೂ ಸಿಗಲಿಲ್ಲವಂತೆ. ಅಲ್ಲಮ ಪ್ರಭುಗಳು ಹೀಗೆಯೇ ಜಗವನ್ನೆಲ್ಲಾ ಜಾಲಾಡಿ ಹುಡುಕಿ ಹೋದರು ಎಂದು ಹೇಳುತ್ತಾರೆ. ಅಂದರೆ ಮಾನವತೆ ಆಧ್ಯಾತ್ಮ ದೈವೀಶಕ್ತಿಗಳನ್ನೆಲ್ಲ ಸಮಗ್ರವಾಗಿ ಸಮ್ಮೇಳೈಸಿ ಯೋಗಸಿದ್ಧಿಯ ಶಿಖರವನ್ನು ಮುಟ್ಟುವುದು ಭಾರತೀಯ ಪಾರಮಾರ್ಥ ಸಾಧಕರ ಗುರಿ ಎಂಬುದು ಋಷಿಮುನಿಗಳ ಕಾಲದಿಂದಲೂ ಕಂಡು ಬರುವ ಒಂದು ಮಹಾನ್ ಪರಂಪರೆ. ಇಂಥ ಪೂರ್ಣ ಮಾನವನನ್ನು ಮೀನಿಗೆ ಹೋಲಿಸಲಾಗಿದೆ. ಮೀನುಗಳು ದೇವತೆಗಳಂತೆ ಅನಿಮಿಷ(ಕಣ್ಣು ಪಿಳುಕಿಸದ) ಜೀವಿಗಳು. ಅನಿಮಿಷರು ಅಮರರು.

೩೬೬

ಡಂಭಕದ ವೇದವು ಡೊಂಬಿಯಾ ಶಾಸ್ತ್ರವು
ನಂಬಿಗಿಲ್ಲದೆ ದೈವ ಹಿಡಕೊಂಡು
ಅಂಬಿಗನೆಂದು ಎನಲಾರೆ, ಸಕಲವು

ಕುಂಬಾರನ ಮನೆಯ ಮಡಿಕೆಯ ಮಾಡಿಟ್ಟ
ಸಂಭ್ರಮವಿದು, ಬಸವಣ್ಣ

ತಾತ್ಪರ್ಯ : ಇದು ವೇದ ಶಾಸ್ತ್ರ ಮತ್ತು ಅನೇಕ ದೇವರುಗಳ ಡಾಂಭಿಕ ಪರಂಪರೆಯನ್ನು ತಿರಸ್ಕರಿಸುವ ವಚನವಾಗಿದೆ. ಇವು ನಮ್ಮನ್ನು ಸಂಸಾರದ ಹೊಳೆಯನ್ನು ದಾಟಿಸುತ್ತವೆ ಎಂಬ ನಂಬಿಕೆ ನನಗಿಲ್ಲ. ಇಂಥ ಡಾಂಭಿಕ ಜ್ಞಾನಗಳೆಲ್ಲವೂ ಅಸ್ಥಿರ ವಾದಂಥವು ನಶ್ವರವಾದಂಥವು. ಸುಂದರವಾಗಿ ಕಂಡರೂ ಕುಂಬಾರನ ಗಡಿಗೆ ಮಡಿಕೆಗಳು ಒಂದು ದೊಣ್ಣೆಯ ಪೆಟ್ಟಿಗೆ ಹೇಗೆ ಪುಡಿ ಪುಡಿಯಾಗುವವೋ ಹಾಗೆ ಅಸ್ಥಿರ.

೩೬೭

ಓದಿ ಹಾಡಿದರೇನು ಸ್ವಾದ ತಿಳಿಯದ ಮೂರ್ಖ
ಮೆದ್ದ ಕಬ್ಬಿನ ಸಿಪ್ಪೆಯ ಮೆಲಿದರೆ ಮಧುರ ರಸ
ಸ್ವಾದ ತಿಳಿಯುವದೆ, ಬಸವಣ್ಣ

ತಾತ್ಪರ್ಯ : ಕಾವ್ಯ ಗ್ರಂಥಗಳನ್ನು ಓದುವವರಿಗೆ, ಗೀತೆಗಳನ್ನು ಹಾಡುವವರಿಗೆ (ಅವುಗಳನ್ನು ಕೇಳುವವರಿಗೂ ಕೂಡ) ಎಲ್ಲರಿಗೂ ಹೇಳಿದ ಮಾತು ಇದು. ಎಲ್ಲ ಕಾಲಕ್ಕೂ ಅನ್ವಯವಾಗುವ ಮಾತು. ಸಾಹಿತ್ಯ ಅಥವಾ ಹಾಡನ್ನು ಅದರೊಳಗಿನ ಅರ್ಥ ಸೌಂದರ್ಯವನ್ನು ಸವಿದು ಓದಬೇಕು ಇಲ್ಲವೆ ಹಾಡಬೇಕು ಮತ್ತು ಅನುಭವಿಸ ಬೇಕು. ಇಲ್ಲದಿದ್ದರೆ ಕಬ್ಬಿನ ಹೊರಗಿನ ಸಿಪ್ಪೆಯನ್ನು ಮಾತ್ರ ತಿಂದಂತಾಗುತ್ತದೆ. ಅದರೊಳಗಿನ ರಸವನ್ನು ಅರಿಯದಂತವರೇ ಬಹುಸಂಖ್ಯೆಯಲ್ಲಿದ್ದಾರೆ ಎಂಬುದಕ್ಕೆ ಈ ಟೀಕೆಯ ವಚನ.

೩೬೮

ಜೀವ ಜೀವಿಗಳಲ್ಲಿ ಜನಿಸಿದೆನೆಲೆಗುರುವೆ
ಸಾವಿಲ್ಲವಿದಕೆ ಸ್ಥಳವಿಲ್ಲ, ಪ್ರಭುರಾಯ
ವಾವಿಲ್ಲವಿದಕೆ ಕುಲವಿಲ್ಲ
ಆವ ಮಾರ್ಗದಲಿ ನಡೆಯಲಿ ಎಂದರೆ
ಆವಿನ ಹಾಗೆ ಇರು ಹೋಗು ಎಂದರೆ
ಆವು ನರಕವನುಂಡು ಹಾಲನೆ ಕರೆಯಿತು
ವಾವಿಲ್ಲದೆ ಕೂಡಿ ವಸ್ತು ಬೆರೆದಂತೆ
ನಾವೆತ್ತ ನರನೆತ್ತ, ಬಸವಣ್ಣ

ತಾತ್ಪರ್ಯ : ಜೀವ ಎಂಬುದು ತನ್ನ ಕರ್ಮಫಲಾನುಸಾರ ಅನೇಕ ಜನ್ಮಗಳಲ್ಲಿ ಅನೇಕ ಜೀವಗಳಲ್ಲಿ ಜನಿಸಿ ಬರುತ್ತದೆ. ಪುಣ್ಯದ ಫಲದಿಂದ ಮಾನವ ಜನ್ಮದಲ್ಲಿ

ಹುಟ್ಟುತ್ತದೆ ಎಂಬುದು ಭಾರತೀಯರ ನಂಬಿಕೆ. ಇದಕ್ಕೆ ಸಾವು ಇಲ್ಲ ಎಂದರೆ ಮೋಕ್ಷವಿಲ್ಲ ಮತ್ತು ಸ್ಥಿರವಾದ ಒಂದು ನೆಲೆಯೂ ಇಲ್ಲ. ಬಂಧುತ್ವ ಕುಲ ಎಂಬುದೆಲ್ಲ ಮಾನವರು ಮಾಡಿಕೊಂಡಿರುವ ರೀತಿ ನೀತಿ ಪದ್ಧತಿಗಳು. ಯಾವ ಜನ್ಮದಲ್ಲಿ ಹುಟ್ಟಿದರೆ ಯೋಗ್ಯವೆಂದರೆ ಆಕಳಿನ ಜನ್ಮ ಒಳ್ಳೆಯದು. ಏಕೆಂದರೆ ಅದು ಯಾರಿಗೂ ಕೇಡು ಬಯಸದು. ತನ್ನ ಹೊಟ್ಟೆಗೆ ಏನು ತುಂಬಿಸಿಕೊಂಡರು ಮಾನವನಿಗೆ ಹಾಲನ್ನೇ ಕೊಡುತ್ತದೆ. ಇಲ್ಲಿಯ ವರೆಗೆ ವಚನವು ಒಂದು ಅರ್ಥವನ್ನು ಕೊಡುತ್ತದೆ. ಮುಂದಿನ ಸಾಲುಗಳು ಇದಕ್ಕೆ ಸರಿಯಾಗಿ ಹೊಂದುವುದಿಲ್ಲ. 'ವಾವಿಲ್ಲದೆ(ಬಂಧುತ್ವ ಸಂಬಂಧ ಇಲ್ಲದೆ) ವಸ್ತು ಬೆರೆದಂತೆ' ಎಂಬ ಸಾಲು ಯಾವ ಸಂಬಂಧ ಇಲ್ಲದವು ಒಂದು ವಸ್ತುವಿನಲ್ಲಿ ಬೆರೆತಂತೆ ಅಥವಾ ಒಂದು ವಸ್ತುವಾಗಿ ಹೋದಂತೆ ಎಂಬ ಒಂದು ಸಾಲು ಮತ್ತು ಕೊನೆಯದಾಗಿ 'ನಾವೆತ್ತ ನರನೆತ್ತ ನೋಡು ಬಸವಣ್ಣ' ಎಂಬ ಸಾಲು ಇವು ಒಗಟಿನಂತಿವೆ. ಸಂಬಂಧವಲ್ಲದ ವಸ್ತು ಜೀವಿಗಳು ಮತ್ತೊಂದು ವಸ್ತು ಜೀವಕ್ಕೆ ಕಾರಣವಾಗುವ ಸೃಷ್ಟಿ ನಿಯಮವನ್ನು ಆ ಸಾಲು ಹೇಳುವಂತಿದೆ. ಕೊನೆಯ ಸಾಲು ನಾನು ಕೇವಲ ಜನ್ಮಾಂತರಗಳಲ್ಲಿ ಸಾಗುತ್ತಿರುವ ಒಂದು ಜೀವ. ಈ ನಾನೇ ಬೇರೆ ನರಜನ್ಮವೇ ಬೇರೆ ಎಂಬಂತೆ ಅತೀತ ನಿಲುವನ್ನು ಹೇಳುವಂತಿದೆ.

೩೬೯

ಮದ ಸೊಕ್ಕಿದ ಆನೆಯು ಗುದುಕಿಗೆ ಅಂಜುವುದೆ
ಸದಮಲ ಜ್ಞಾನಿ ಪರಿಪೂರ್ಣನು ಲೋಕದ
ಭಜನೆಗಂಜುವನೆ, ಬಸವಣ್ಣ

ತಾತ್ಪರ್ಯ : ಯೋಗಿಯು ಅಥವಾ ತಪಸ್ವಿಯು ಪವಿತ್ರನು ಪರಿಶುದ್ಧನು. ಆತನಲ್ಲಿ ಅಂತರಂಗದ ಅಶುದ್ಧಿಗಳಿಲ್ಲ. ಆತನು ಪರಿಪೂರ್ಣ. ಆತನಲ್ಲಿ ಅರೆಕೊರೆಗಳು, ಅಸಮಗ್ರತೆ, ಸಣ್ಣತನಗಳಿಲ್ಲ. ಪರಮಾತ್ಮನ ಪರಿಪೂರ್ಣತ್ವವನ್ನು ಸಾಧಿಸಿ ತಾನು ಪರಮಾತ್ಮನೇ ಎಂಬಂತಾಗಿರುವವನು. ಆತನು ಎಲ್ಲವನ್ನು ತಿಳಿದ ಜ್ಞಾನಿಯು. ಅಶುದ್ಧಿ, ಅಪೂರ್ಣತೆ, ಅಜ್ಞಾನಗಳೇ ತುಂಬಿರುವ ಪ್ರಪಂಚದ ರೀತಿ ನಿಯಮಗಳು ಆತನಿಗೆ ಅನ್ವಯವಾಗುವುದಿಲ್ಲ. ಅವೆಲ್ಲ ಆತನಿಗೆ ಸಂಕೋಲೆಗಳಂತೆ. ಆದರೆ ಮದ್ಯಾನೆಯಂತೆ ಆತನು ಅವುಗಳನ್ನು ಕಳಚಿಕೊಂಡು ನಡೆಯುತ್ತಾನೆ. ಲೋಕದ ಜನರ ಹೀನ ಮಾತುಗಳಿಗೆ ಆತನು ಅಂಜುವುದಿಲ್ಲ.

೩೭೦

ಆನೆ ನೀರಾಟವಾಡಿದರೆ ಮೀನುಗಳು ಅಂಜುವವೆ
ಹೀನ ಮಾನವರ ಬಿರುನುಡಿಗೆ
ತತ್ತ್ವಜ್ಞಾನಿ ಅಂಜುವನೆ, ಬಸವಣ್ಣ

ತಾತ್ಪರ್ಯ : ಈ ವಚನ ಹಿಂದಿನ ವಚನದ ಅರ್ಥವನ್ನೇ ಬಿಂಬಿಸುತ್ತದೆ. ಇಲ್ಲಿಯ 'ತತ್ತ್ವಜ್ಞಾನಿ' ಹಿಂದಿನ ವಚನದ 'ಸದಮಲ ಪರಿಪೂರ್ಣ ಜ್ಞಾನಿ'ಯ ಅರ್ಥವನ್ನು ಹೊಂದಿದೆ. ಹೋಲಿಕೆಗಳು ಮಾತ್ರ ಭಿನ್ನವಾಗಿವೆ. ಸಾಮಾನ್ಯ ಜನರಿಗೂ ಒಬ್ಬ ತತ್ತ್ವಜ್ಞಾನಿಯಾದ ಯೋಗಿಗೂ ವ್ಯತ್ಯಾಸವಿದೆ. ಲೋಕದ ರೀತಿ, ನೀತಿಗಳೆಲ್ಲ ಸಾಮಾನ್ಯ ಜನರಿಗಾಗಿ ಮಾಡಿಕೊಂಡಿರುವಂಥವು. ಇದು ಲೌಕಿಕ. ಆದರೆ ಯೋಗಿಗಳು ಅಲೌಕಿಕ ಆಧ್ಯಾತ್ಮದ ತಳಹದಿಯ ಮೇಲೆ ಜೀವಿಸುತ್ತಾರೆ. ಅವರಿಗೆ ಲೌಕಿಕ ನಿಯಮಾದಿಗಳು ಅನ್ವಯವಾಗುವುದಿಲ್ಲ. ಅಂತಹ ಅವರ ವರ್ತನೆಗಳನ್ನು ಲೋಕದ ಜನರು ಉಪೇಕ್ಷಿಸಿದರೂ ಅದಕ್ಕವರು ಅಂಜುವುದಿಲ್ಲ.

೩೭೧

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಕ್ರಮದಿ ಷಡ್ಗುಣಗಳನಳಿದವರ ಹೃದಯದಲಿ
ಸ್ವಾಮಿ ಇಹನು ಕಾಣಾ, ಬಸವಣ್ಣ

ತಾತ್ಪರ್ಯ: ಈ ಆರು ಗುಣಗಳು ಮಾನವರಲ್ಲಿ ಸಹಜವಾಗಿ ಇರುವಂಥವು. ಸಾಮಾನ್ಯ ಮನುಷ್ಯರು ಇವುಗಳ ಬಂಧನದಲ್ಲೇ ಸಿಕ್ಕಿಕೊಂಡು ಒದ್ದಾಡುತ್ತಾರೆ. ಇವುಗಳಿರುವವರೆಗೆ ಮಾನವನು ಪಾರಮಾರ್ಥದ ದಾರಿಯ ಕಡೆ ಹೋಗಲಾಗುವುದಿಲ್ಲ. ಆತ್ಮೋದ್ಧಾರಕ್ಕೆ ಅಡ್ಡಿಯಾಗುವ ಈ ಗುಣಗಳನ್ನು ವೈರಿಗಳೆಂದು ಕರೆಯಲಾಗುತ್ತದೆ. ಇವುಗಳನ್ನು ಅರಿಷಡ್ವರ್ಗಗಳೆನ್ನುತ್ತಾರೆ. ಇವುಗಳನ್ನು ಗೆದ್ದು ಅಥವಾ ಇಲ್ಲದಂತೆ ಮಾಡಿಕೊಂಡವನ ಮನಸ್ಸಿನಲ್ಲಿ ಕೇವಲ ಪರಮಾತ್ಮನ ಗುಣಗಳು ನೆಲೆಸುತ್ತವೆ. ನಿಷ್ಕಾಮ, ಪ್ರಶಾಂತತೆ, ಅಲೋಭ, ನಿರ್ಮೋಹ, ನಿರ್ಮದ(ವಿನಯ–ನಿರಹಂಕಾರ), ನಿರ್ಮತ್ಸರ(ಸರ್ವಜೀವ ಪ್ರೀತಿ, ಸಮಾನ ದೃಷ್ಟಿ) ಇವುಗಳು ನೆಲೆಗೊಂಡಾಗ ಅಂತವನ ಹೃದಯದಲ್ಲಿ ಪರಮಾತ್ಮ ಇದ್ದಾನೆಂಬುದು ಪಾರಮಾರ್ಥಿಕ ಸತ್ಯವೆನಿಸುತ್ತದೆ.

೩೭೨

ಕಣ್ಣು ನಾಲಗೆ ಹುಬ್ಬು ಉನ್ನತದ ನಾಶಿಕವು
ಚಿನ್ನದ ಶಿಖರವ ಹೊತ್ತುಕೊಂಡು ಅನ್ಯ ಕಳಸಕ್ಕೆ
ಹೆಣಗಾಡುವ ಕುನ್ನಿಗಳು ಇವರು ನೋಡು, ಬಸವಣ್ಣ

ತಾತ್ಪರ್ಯ : ಪರಮಾತ್ಮ ನಮಗೆ ಕೊಟ್ಟಿರುವ ಅಂಗಾಂಗಗಳು, ಸುಂದರವಾದ ಮುಖ, ಈ ದೇಹ ಇದೆಲ್ಲ ವರದಂತೆ ಅಮೂಲ್ಯವಾದುವು. ಇಂತಹ ಭಾವನೆ ನಮಗಿರಬೇಕು. ಇವು ಸದೃಢವಾಗಿ ಬಂಧುರವಾಗಿ ಸುಂದರವಾಗಿರುವಂತೆ ನೋಡಿಕೊಂಡು ಇವುಗಳು ಆತ್ಮಸಾಧನೆಗೆ ಅನುಕೂಲವಾಗುವಂತೆ ಮಾಡಿಕೊಳ್ಳಬೇಕು.

ಒಂದು ವೇಳೆ ಇವುಗಳಲ್ಲಿ ದೋಷಗಳಿದ್ದರೂ ಇವುಗಳು ನನ್ನವು ಎಂಬ ಅಭಿಮಾನ ಇರಬೇಕು. ಬೇರೆಯವರ ಚೆಲುವು ಸ್ಫುರದ್ರೂಪತೆ ಎಷ್ಟೇ ಇದ್ದರೂ ಅವು ನಾನಾಗಲಾರೆ. ಬೇರೆಯವರ ರೂಪಕ್ಕಾಗಲಿ ಸಂಪತ್ತಿಗಾಗಲಿ ಆಸೆ ಪಡುವುದು ಅವರಂತೆ ತಾನಾಗಲು ಹೆಣಗಾಡುವುದು ಕುನ್ನಿತನ ಮತ್ತು ಸಣ್ಣತನವಾಗುತ್ತದೆ.

೩೭೩

ಮನುಜ ಕೊಟ್ಟನ್ನವು ಉಣಲಿಕ್ಕೆ ಆ ಕ್ಷಣವು
ಚಿನ್ಮಯ ಚಿದ್ರೂಪ ಘನಮಹಿಮ ಕೊಟ್ಟನ್ನವು
ಅನುಗಾಲ ಆನಂದ! ಆನಂದ!!, ಬಸವಣ್ಣ

ತಾತ್ಪರ್ಯ : ಇದು ಭೌತಿಕ ಅನ್ನ ಮತ್ತು ಆಧ್ಯಾತ್ಮಿಕ ಅನ್ನಗಳನ್ನು ಕುರಿತು ಹೇಳುವ ವಚನ. ಮಾನವರು ಕೊಡುವ ಭೌತಿಕ ಅನ್ನ ಉಂಡ ಕೂಡಲೇ ಆ ಕ್ಷಣಕ್ಕೆ ಆನಂದವನ್ನು ಕೊಡುತ್ತದೆ. ಮತ್ತೆ ಸ್ವಲ್ಪ ಹೊತ್ತಾದ ಮೇಲೆ ಹೊಟ್ಟೆ ಹಸಿಯುತ್ತದೆ. ಮತ್ತೆ ಅನ್ನ ಬೇಕೆಂದು ಬೇಡುತ್ತದೆ. ಮತ್ತೆ ಉಣ್ಣಬೇಕು. ಇದು ದಿನವೂ ನಡೆಯುವ ಕ್ರಿಯೆ. ಈ ಅನ್ನಮಯ ಕೋಶದ ಹಂತದಲ್ಲೇ ಇಡೀ ಜಗತ್ತು ದುಡಿಯುತ್ತ ಗಳಿಸುತ್ತ ಬಾಳುತ್ತಿದೆ. ಆದರೆ ಮನ ಬುದ್ಧಿ ಜ್ಞಾನಗಳ ಹಸಿವೆಂಬುದೂ ಇದೆ. ಅದಕ್ಕೆ ಕೊಡುವ ಅನ್ನ ಚಿನ್ಮಯ ಚಿದ್ರೂಪ ಸ್ವರೂಪದ್ದು, ಘನಮಹಿಮ ಪರಮಾತ್ಮ ಅದಕ್ಕೆ ಅನ್ನ ನೀಡುತ್ತಾನೆ. ಅದನ್ನು ಉಂಡ ಮೇಲೆ ಮತ್ತೆ ಹಸಿವು ಎಂಬುದೇ ಇಲ್ಲ. ಕೇವಲ ಆನಂದವೇ ಆನಂದ. ಅಲ್ಲಿ ಲೌಕಿಕದ ಹಸಿವು ಕಾಡುವುದಿಲ್ಲ.

೩೭೪

ಪರಮ ಕಲ್ಯಾಣಿ ನಿನ್ನ ಅರುವಿನ ಒಡಲೊಳಗೆ
ಪರಬ್ರಹ್ಮಮೂರ್ತಿ ಜನಿಸಿದ, ಅವರಿಬ್ಬರ
ಶರೀರ ಬೇರೆ ಸವಿಯೊಂದೆ, ಬಸವಣ್ಣ

ತಾತ್ಪರ್ಯ : ಇದೊಂದು ನಿಗೂಢ ವಚನ ಆದರೆ ಬಹಳ ಅರ್ಥಪೂರ್ಣವಾದುದು. 'ಪರಮ ಕಲ್ಯಾಣಿ' ಎಂದು ಜಗದಂಬೆಯನ್ನು ಮೌನೇಶ್ವರರು ಸಂಬೋಧಿಸಿದ್ದಾರೆ. ತಾಯಿ ನಿನ್ನ ಒಡಲಿನಿಂದ ಪರಬ್ರಹ್ಮಮೂರ್ತಿ ಜನಿಸಿದ. ಹೀಗಾಗಿ ನೀವು ಇಬ್ಬರಾದಿರಿ ನಿಮ್ಮ ಶರೀರಗಳು ನೋಡಲು ಎರಡು. ಆದರೆ ಅಂತರಂಗದ ಸವಿ ಒಂದೇ ಜಗದ ತಂದೆ ಮತ್ತು ಮಾಯರೂಪಿ ಪ್ರಕೃತಿ ಇವರಿಬ್ಬರು ಬೇರೆ ಬೇರೆಯಾಗಿದ್ದರೂ ಅವರ ಆತ್ಮಗಳು ಒಂದೇ, ಆನಂದ ಒಂದೇ. ತಾಯಿಯ ಅರಿವಿನ ಒಡಲಿಂದ ಜನಿಸಿದ ಪರಿಕಲ್ಪನೆ ಈ ಆಧ್ಯಾತ್ಮಿಕ ಸಂಬಂಧಕ್ಕೆ ಅನ್ವಯವಾಗುವಂತಿದೆ. ಇಲ್ಲಿ

ಮನೋಸೃಷ್ಟಿಯ ಭಾವನೆ ಇದ್ದು, ಇಚ್ಛಾಮಾತ್ರಂ ಪ್ರಭೋಸೃಷ್ಟಿಃ ಎನ್ನುವ ವಾಕ್ಯಕ್ಕೆ ಮಹತ್ತ್ವ ಬಂದಿರುವಂತೆ ತೋರುತ್ತದೆ.

೩೭೫

ಪಕ್ಕ ಮುರಿಯಲು ಪಕ್ಷಿ ಇಕ್ಕಿದಲ್ಲಿರುವುದು
ದೊಕ್ಕನೆ ಯೌವನವು ದೇಹಕ್ಕೆ ಬರಲು
ಓಂಕಾರದ ಜೀವನವು ಸಿಗದು, ಬಸವಣ್ಣ

ತಾತ್ಪರ್ಯ : ಇಳಿವಯಸ್ಸಿನ ಜೀವನ ರೆಕ್ಕೆ ಮುರಿದ ಹಕ್ಕಿಯಂತೆ. ಮುದಿವಯಸ್ಸಿನಲ್ಲಿ ಬಿದ್ದಲ್ಲಿಯೇ ಇರುವ ನಿಸ್ಸಹಾಯಕ ನಿಶ್ಯಕ್ತ ಪರಿಸ್ಥಿತಿ ಇರುತ್ತದೆ. ಅಲ್ಲಿಯವರೆಗೆ ಮದ ಮೋಹಾದಿಗಳಿಂದ ಮೆರೆವ ಅಂತಹ ಜೀವ ಆ ವಯಸ್ಸಿನಲ್ಲಿ ಕೃತಕವಾದ ಕಾರಣ ಗಳಿಂದ ಚೈತನ್ಯ ಬಂದರೂ ಮತ್ತೆ ತಾನು ಹಿಂದಿನಿಂದ ಬಂದಿದ್ದ ಮದ ಮೋಹಾದಿಗಳ ವರ್ತನೆಯನ್ನೇ ಅನುಸರಿಸುತ್ತದೆಯೇ ಹೊರತು ಓಂಕಾರದ ಜೀವನ ಎಂದರೆ ವೈರಾಗ್ಯದಿಂದ ಕೂಡಿದ ಆಧ್ಯಾತ್ಮಿಕ ಸಾಧನೆಯತ್ತ ಅದು ಹೋಗುವುದಿಲ್ಲ. ಆಧ್ಯಾತ್ಮ ಸಾಧನೆಯು ವ್ಯಕ್ತಿಗೆ ಸಹಜವಾಗಿ ದೇವರ ಒಲುಮೆಯಿಂದ ಚಿಕ್ಕಂದಿನಿಂದಲೇ ಅಳವಡುವ ಜೀವನ ರೀತಿ ಮತ್ತು ವ್ಯಕ್ತಿತ್ವದ ಸ್ವರೂಪ. ಅದು ಇದ್ದಕ್ಕಿದ್ದಂತೆ ವೃದ್ಧಾಪ್ಯದಲ್ಲಿ ಬರುವಂಥದ್ದಲ್ಲ ಎಂದು ಆಧ್ಯಾತ್ಮದ ಸಹಜ ಮತ್ತು ನಿಜವಾದ ಸ್ವರೂಪವನ್ನು ಮೌನೇಶ್ವರರು ವಿಶ್ಲೇಷಿಸಿದ್ದಾರೆ.

೩೭೬

ಬಡವನಿಗೆ ಬಡವನು, ದೊರೆಗಳಿಗೆ ದೊರೆಯು ಬಿರು
ನುಡಿಯವರಿಗೆಲ್ಲ ಒಡೆಯನು ಅಲ್ಲಮರಾಯ
ಬಿಡದೆ ಹಿಡಿದವರ ಒಡೆಯನಯ್ಯ, ಬಸವಣ್ಣ

ತಾತ್ಪರ್ಯ : ಇದು ಯೋಗಿಯ ಸರ್ವವ್ಯಾಪಕವಾದ, ಪಾರದರ್ಶಕವಾದ ಮತ್ತು ವ್ಯೋಮ ಸ್ವರೂಪಿಯಾದ ಅಲ್ಲಮ ಪ್ರಭುವಿನ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ. ಯೋಗಿಯು ಬಡವರೊಡನೆ ಬಡವರಂತೆಯೇ, ಶ್ರೀಮಂತರೊಡನೆ ಶ್ರೀಮಂತನಾಗಿಯೇ ತೋರು ತ್ತಾನೆ. ಆಕಾಶಕಾಯನಾದ ಆತನಿಗೆ ತನ್ನದೇ ಆದಂಥ ವ್ಯಕ್ತಿ ಸ್ವರೂಪವಿಲ್ಲ. ತನ್ನನ್ನು ನಿಂದೆ ಮಾಡುವವರಿಗೂ ತನ್ನನು ಬಿಡದೆ ಹಿಡಿದುಕೊಂಡ ಅಂದರೆ ಭಕ್ತಿ ಶ್ರದ್ಧೆಗಳಿಂದ ಆರಾಧಿಸುವ ಭಕ್ತರಿಗೂ ಒಡೆಯನಾಗಿ ಸಮಾನವಾಗಿಯೇ ಕಾಣುತ್ತಾನೆ. ತನ್ನನ್ನು ನಿಂದಿಸುವ ಅಜ್ಞಾನಿಗಳನ್ನು ಒಡೆಯನಂತೆ ಸರಿದಾರಿಗೆ ತರುತ್ತಾನೆ. ತನ್ನನ್ನು ಭಜಿಸುವ ವರನ್ನು ಪ್ರೀತಿಯಿಂದ ಒಡೆಯನಂತೆ ನೋಡಿಕೊಳ್ಳುತ್ತಾನೆ. ಇದು ಯೋಗಿಯ ಸಮದೃಷ್ಟಿ ಮತ್ತು ಗುರು ಸ್ವರೂಪ.

೩೭೭

ಬಡವನಿಗೆ ಒಡೆಯನಾಗಿರುವುದೇ ಪುಣ್ಯ
ಬಡಾಯ ಬಿಂಕ ಬಿಡುವುದೇ ಪುಣ್ಯ
ಒಡಲ ಧರ್ಮ ಸುಡುವುದಕ್ಕೆ ನೀರನೆರೆವುದೇ ಪುಣ್ಯ
ಒಡೆಯನಾಗಿ, ಬಸವಣ್ಣ

ತಾತ್ಪರ್ಯ : ಶ್ರೀಮಂತನಾದವನು ತಾನು ಶ್ರೀಮಂತನೆಂಬ ಬಿಂಕ ಬಡಿವಾರ ಬಿಟ್ಟು ಬಡವರಿಗೆ ಸಹಾಯ ಮಾಡಿದರೆ ಅವನ ಶ್ರೀಮಂತಿಕೆಗೆ ಅರ್ಥಬರುತ್ತದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಒಡಲ ಉರಿ ನಾಶವಾಗಬೇಕೆಂದರೆ ಸಾತ್ವಿಕ ಸಾಧನೆ ಮಾಡುವುದು ಶ್ರೇಯಸ್ಕರ. ತನಗೆ ಒಡೆತನ ಬಂದ ಕಾಲಕ್ಕೆ ಅದು ದರ್ಪಕ್ಕೆ ಎಂದು ಭಾವಿಸದೆ ಬಡವರ ಸೇವೆಗೆ ದೊರೆತಿರುವ ಅವಕಾಶವೆಂದು ಅರಿತು ವರ್ತಿಸುವುದೇ ಪುಣ್ಯಾರ್ಜನೆಗೆ ಕಾರಣವಾಗುತ್ತದೆ.

೩೭೮

ಊರ ನಡತೆಗಳು ಎನಗೆ ಸರಿಬಾರವು
ಬೇರೊಂದು ನಡತಿ ಇನ್ನಿಲ್ಲ ಅಲ್ಲಮರಾಯ
ತೋರಿದಂತೆ ಇರಬೇಕು, ಸಕಲರಿಗೆ
ಸೇರಿ ಸೇರದಂತೆ ಹೊರಗಾಗಿ ಇರುವುದು ಇದು
ಪೀರರ ನಡತಿಯು ಕಾಣಾ, ಬಸವಣ್ಣ

ತಾತ್ಪರ್ಯ : ಜ್ಞಾನಿ ಹಾಗೂ ಅನುಭಾವಿಯಾದವನ ನಡೆ ನುಡಿಗಳು ಲೋಕದ ಜನರಿಗಿಂತ ಭಿನ್ನವಾದವು. ಸಾಮಾನ್ಯ ಜನರ ನಡವಳಿಕೆಯಂತಿರುವುದಿಲ್ಲ. ಹಾಗೆ ಸಾಮಾನ್ಯ ಜನರ ನಡವಳಿಕೆಗಳು ಅವರಿಗೆ ಹಿಡಿಸುವುದಿಲ್ಲ. ಅಲ್ಲಮರಾಯ ತೋರಿದ ಅನುಭಾವದ ದಾರಿ ಮೌನೇಶ್ವರರದು. ಕಂಡು ಕಾಣದಂತೆ, ಇದ್ದು ಇಲ್ಲದಂತೆ ಇರುವುದೇ ಪೀರರ ಅಂದರೆ ಅನುಭಾವಿಗಳ ಗುಣಸ್ವಭಾವ.

೩೭೯

ಹೊಯಿಮಾಲಿ ವ್ಯವಹಾರಕ್ಕೆ ಏಮೂಲಿ ಚೌಕಾಸಿಗ್ಯೆವ
ಆಚಾರವುಳ್ಳಂಥ ಶಿಷ್ಯಂಗೆ
ಕೈಲಾಸಪತಿಯ ಕೃಪೆಯುಂಟು, ಬಸವಣ್ಣ

ತಾತ್ಪರ್ಯ : ವ್ಯವಹಾರದಲ್ಲಿ ಚುರುಕುತನ ಬಹಳ ಮುಖ್ಯ ಎನ್ನುವುದು ವಚನದ ಸಾರ. ಜಗತ್ತಿನಲ್ಲಿ ನಡೆಯುವ ಹೊಯ್ಮಾಲಿ ವ್ಯವಹಾರ, ಅಂದರೆ ನಂಬಿಸಿ ಮೋಸ

ವಂಚನೆ ಮಾಡುವ, ಸುಳ್ಳಿನ ಕಂತೆ ಮಾರುವ ವ್ಯವಹಾರ ಚತುರರೊಂದಿಗೆ ಅವರಂತೆಯೇ ಐಮೂಲಿ ಅಂದರೆ ನಿಯಮಬದ್ಧವಲ್ಲದ ವ್ಯವಹಾರ ಮಾಡಿ ಅವರನ್ನು ಗೆಲ್ಲುವಂತವನಿಗೆ ಶಿವನ ಕೃಪೆ ಸಿಗುತ್ತದೆ. ಕಾರಣ ಮೋಸಗಾರರನ್ನು ಮೋಸದಿಂದ ಗೆದ್ದು ಬುದ್ದಿಕಲಿಸುವ ಕ್ರಮದ ಬಗ್ಗೆ ವಚನ ಹೇಳುತ್ತದೆ.

೩೮೦

ಹುಲಿಯು ಹುಲ್ಲೆಗೆ ವೈರಿ ಇಲಿಗೆ ಬೆಕ್ಕು ವೈರಿ
ಮೊಲಕ್ಕೆ ನಾಯಿ ವೈರಿ ಸತ್ಯ ಸದ್ಭಕ್ತರಿಗೆ ಸಠಿಗಳೇ ವೈರಿ
ಮರ್ತ್ಯದೊಳು ಕುಲ ಕುಲಕೆ ವೈರಿ, ಬಸವಣ್ಣ

ತಾತ್ಪರ್ಯ : ಹುಲಿಯು ಜಿಂಕೆಗೆ ಬೆಕ್ಕು ಇಲಿಗೆ ನಾಯಿ ಮೊಲಕ್ಕೆ ವೈರಿಯಾಗಿರುವಂತೆ ಹಾಗೆಯೇ ಪ್ರಾಣಾಪಾಯ ತರುವಂತೆ, ಸತ್ಯವಂತರಿಗೆ, ಜ್ಞಾನಿಗಳಿಗೆ ಸುಳ್ಳು ಮತ್ತು ಸುಳ್ಳು ಹೇಳುವವನೆ ಬಹಳ ದೊಡ್ಡ ವೈರಿ. ದುಷ್ಟ ಜನರು ಶಿಷ್ಟ ಜನರನ್ನು ಕಷ್ಟಕ್ಕೆ ಸಿಲುಕಿಸುತ್ತಾರೆ. ಆದರೂ ಸಾಧಕರು ಅಂತ ಅಗ್ನಿಪರೀಕ್ಷೆಯಿಂದ ಗೆದ್ದುಬರುವುದು ಲೋಕರೂಢಿ.

೩೮೧

ಹೆಜ್ಜೆಯ ಹಿಡಿದು ಬಂದರೆ
ಅಜನೆಂಬರು ಅಜಗಣ್ಣನೆಂಬರು
ಹೆಜ್ಜೆ ತಪ್ಪಿ ನಡೆದರೆ ಮಾದಿಗರ ಮನೆಯ
ಗುಜ್ಜೆ ನಾಯಿಗಿಂತ ಕಡಿಮೆ ಕಾಣಾ, ಬಸವಣ್ಣ

ತಾತ್ಪರ್ಯ: ಸನ್ಮಾರ್ಗದಲ್ಲಿ ನಡೆಯುವುದು ಬ್ರಹ್ಮಜ್ಞಾನಿಯ ಲಕ್ಷಣ. ಅಂತ ಸನ್ಮಾರ್ಗಿಗೆ ಜ್ಞಾನಬ್ರಹ್ಮ ಎಂದೂ ಅನುಭಾವಿ ಎಂದು ಕರೆಯುವರು. ಹೆಜ್ಜೆ ತಪ್ಪಿ ನಡೆದರೆ ಅಂದರೆ ದಾರಿಬಿಟ್ಟು ಅತೀಯಾದ ಲೌಕಿಕ ಸುಖಭೋಗಗಳಿಗೆ ಅಂಟಿಕೊಂಡರೆ ಅಂತವನು ಮಾದಿಗರ ಮನೆಯ ಗಿಡ್ಡ ಅಥವಾ ಕಜ್ಜಿ ನಾಯಿಗಿಂತ ಕೀಳು. ಸನ್ನಡತೆ ಮತ್ತು ಸನ್ಮಾರ್ಗ ಸಾಧಕನಾದವನ ಮುಖ್ಯ ಲಕ್ಷಣ ಎಂಬುದು ಇಲ್ಲಿನ ಭಾವ.

೩೮೨

ಕಿನ್ನರ ವಿರಕ್ತಯ್ಯ ಕವಿಯಲ್ಲಿ ನಾಗರಸುತ್ತು
ಕಿನ್ನರಿಯ ಮೇಲೆ ಸರಮುತ್ತು ವಿರಕ್ತಯ್ಯ
ಪನ್ನಂಗಧರನು ಪವಡಿಸಿದ, ಬಸವಣ್ಣ

ತಾತ್ಪರ್ಯ : ಕಿನ್ನರಯ್ಯ ಎನ್ನುವ ಶರಣ ೧೨ನೇ ಶತಮಾನದಲ್ಲಿದ್ದ. ಕಿನ್ನರಿ ಬ್ರಹ್ಮಯ್ಯ ಎಂಬುದು ಈತನ ಪೂರ್ಣ ಹೆಸರು. ಅಕ್ಕಸಾಲಿಕೆ ವೃತ್ತಿ ಮಾಡುತ್ತಿದ್ದಾತ ಶಿವಶರಣನಾದ.

ನಂತರ ಕಿನ್ನರಿ ಬಾರಿಸುವ ಸೇವೆಯಲ್ಲಿ ತೊಡಗಿಸಿಕೊಂಡು ಕಿನ್ನರಿ ಬ್ರಹ್ಮಯ್ಯನೆಂದೇ ಹೆಸರಾದ. ಅನುಭವ ಮಂಟಪದೊಳಗೆ ಶರಣ ಸಂಪ್ರದಾಯದವರನ್ನು ಪರೀಕ್ಷಿಸಿ ಒಳಗೆ ಬಿಡುವುದು ಭವಿಗಳನ್ನು ಹೊರತಳ್ಳುವುದು ಈತನ ಕಾಯಕ ಧರ್ಮವಾಗಿತ್ತು. ಈತ ವಿಶ್ವಕರ್ಮ ಕುಲದವನಾಗಿದ್ದ

ಮೌನೇಶ್ವರರು ವಿಶ್ವಕರ್ಮ ಸಂಪ್ರದಾಯಕ್ಕೆ ಸೇರಿದ್ದ ಅಂತಹ ಕಿನ್ನರಿ ಬ್ರಹ್ಮಯ್ಯನನ್ನು ಇಲ್ಲಿ ಸ್ಮರಿಸುತ್ತಾರೆ. ಕಿನ್ನರಯ್ಯ, ನಾಗಬಂಧ ಇವು ಪಾಂಚಾಳ ಕುಲಮೂಲಕ್ಕೆ ಹತ್ತಿರ ವಾದಂಥವು. ಕಿನ್ನರಯ್ಯ ತನ್ನ ಕಿವಿಯ ಓಲೆಯಾಗಿ ನಾಗರಸುತ್ತನ್ನು ನಾಗಬಂಧವನ್ನು ಧರಿಸಿ ಸರಾಗವಾಗಿ ಕಿನ್ನರಿ ನುಡಿಸುತ್ತಿದ್ದರೆ ಶಿವನು ಪವಡಿಸಿ ಮಲಗಿ ತನ್ಮಯತೆಯಿಂದ ಕೇಳುತ್ತಿದ್ದನಂತೆ. ಶಿವನನ್ನೇ ತಾನು ನುಡಿಸುವ ವಾದ್ಯದಿಂದ ಸಮ್ಮೋಹಿನಿಗೊಳಿಸಿದ, ಒಲಿಸಿಕೊಂಡ ಮಹಾ ಭಕ್ತ ಕಿನ್ನರಿ ಬ್ರಹ್ಮಯ್ಯನಾಗಿದ್ದಾನೆ.

೩೮೩

ಎಚ್ಚಿಗರ ಆಲಯದ ಇಚ್ಛೆಯ ಆಳಯ್ಯ ಶಿವನು
ಮೆಚ್ಚಿ ಬಾಗಿಣವ ಕೊಟ್ಟಂಥಾ ಶ್ರೀಗುರುನಾಥ
ಮೆಚ್ಚಲು ಐಶ್ವರ್ಯ್ಯ ಆನಂದ, ಬಸವಣ್ಣ

ತಾತ್ಪರ್ಯ : ಎಚ್ಚಿಗ ಅಂದರೆ ಬಾಣವನ್ನು ಹೂಡಿ ಹೊಡೆವವರು, ಅಂದರೆ ಬೇಡರು, ಬೇಡರ ಕಣ್ಣಪ್ಪನ ಕುಲದವರು. ಅಂತಹ ಮಹಾಭಕ್ತ ಬೇಡರ ಕಣ್ಣಪ್ಪನ ಮನೆಯ ಆಳಾಗಿ ದುಡಿದವನು ಪರಶಿವನು. ಅವನ ಮುಗ್ಧ ಹಾಗೂ ನಿಸ್ವಾರ್ಥ ಭಕ್ತಿಗೆ ಮೆಚ್ಚಿ ಕೃಪೆದೋರಿ ಕಣ್ಣಪ್ಪನ ಬದುಕನ್ನು ಉದ್ಧಾರ ಮಾಡಿದವ ಆ ಪರಮಾತ್ಮ, ಭಕ್ತರ ಭಕ್ತ ಮಹಾದೇವ.

೩೮೪

ತಾಮ್ರದ ಮುಖಪದ್ಮ ಸೀಮಿಗಧಿಪತಿಯಾಗಿ
ಕ್ಷಯನಿರ್ಣಯದಲಿ ಆಳುವಂಥ ಸೀತಾಪತಿ
ರಾಮ ಅವತಾರ ಕಾಣಾ, ಬಸವಣ್ಣ

ತಾತ್ಪರ್ಯ : ಪೌರಾಣಿಕ ಪುರುಷನಾದ ರಾಮಾವತಾರ ಮತ್ತು ರಾಮ ತಾಮ್ರದ ಉತ್ಸವ ಮೂರ್ತಿಯಾಗಿ ನೆಲೆಗೊಂಡ ಸಂಗತಿಗಳನ್ನು ವಚನ ಸೂಚಿಸುತ್ತದೆ. ಸೀತಾಪತಿಯಾದಂತ ರಾಮನು ಅವತಾರವೆತ್ತಿ ಈ ಸೀಮೆಯನ್ನು ಆಳುತ್ತಾನೆ. ಭಕ್ತರನ್ನು ಕಾಯುತ್ತಾನೆ. ಕಲಿಯುಗದಲ್ಲಿ ತಾಮ್ರದ ಉತ್ಸವ ಮೂರ್ತಿರೂಪದಲ್ಲಿ ಸ್ಥಾಪಿತನಾಗಿ ಭಕ್ತರ ಕಾಯುವನು ಎನ್ನುವಲ್ಲಿ ರಾಮನನ್ನು ನಿರ್ಮಿಸಿ ಪೂಜೆಗೆ ಅಣಿಗೊಳಿಸಿದ ಕೀರ್ತಿ ಪಾಂಚಾಳರದ್ದು. ಆದರಲ್ಲಿಯೂ ಕಂಚುಗಾರಿಕೆ ಕೆಲಸ ಮಾಡುವ ಕಂಚುಗಾರರದು.

೩೮೫

ಬಂಡಾರವುಳ್ಳವರು ಬಳಸಿಕೊಂಡು ಉಣಲಾರದೆ
ದಂಡಕಿಕ್ಕಿದರು ಧನವನು ಪಾಪದ
ಭಂಡಗಿಕ್ಕಿದರು ಮನವನು ಲೋಕದ
ರಂಡೇರಿಗೆ ನ್ಯಾಯ ಸಲ್ಲುವದೆ, ಬಸವಣ್ಣ

ತಾತ್ಪರ್ಯ : ಭಂಡಾರ ಎಲ್ಲಮ್ಮ ಮತ್ತು ಮೈಲಾರ ಸಂಪ್ರದಾಯದ ವಿಶಿಷ್ಟ ಸಂಕೇತ ವೀರಶೈವರಿಗೆ ವಿಭೂತಿ, ವೈದಿಕರಿಗೆ ಗಂಧವಿರುವಂತೆ ಕೆಲವು ಅವೈದಿಕ ಪಂಥಗಳಿಗೆ ಲಾಂಛನವಾಗಿದೆ. ಇಂತ ಪವಿತ್ರವಾದ ಭಂಡಾರವನ್ನು ಬಳಿದುಕೊಂಡು ದೈವೀ ಅನುಗ್ರಹಕ್ಕೆ ಪಾತ್ರವಾಗದೇ ಅಜ್ಞಾನಿಗಳಾಗಿ ದೇಹ ಮತ್ತು ಹಣವನ್ನು ದಂಡ ಮಾಡುತ್ತಾರೆ, ಪೋಲು ಮಾಡುತ್ತಾರೆ. ಪಾಪದ ಕೆಲಸಗಳಿಗೆ ಮನ ಹರಿಬಿಟ್ಟು ಆತ್ಮವಂಚಕರಾಗುತ್ತಾರೆ. ಬಂಡಾರ ಹಚ್ಚಿಕೊಂಡು ಕೊಡ ಹೊತ್ತು ಹೊಟ್ಟೆ ಹೊರೆವ ರಂಡೇರಿಗೆ ಇದರಿಂದ ಯಾವ ಫಲವು ಸಿಗದು. ಅದು ಬಿಟ್ಟು ಸಾತ್ವಿಕ ಹಾಗೂ ನೈತಿಕ ಪ್ರಜ್ಞೆಯಿಂದ ದುಡಿದರೆ ಬದುಕು ಸಾರ್ಥಕವಾಗುತ್ತದೆ.

೩೮೬

ಸಾಕ್ಷಿ ಉಪದೇಶಕ್ಕೆ ಕೊಕ್ಕಿಯ ಕಳುಹಿದರು
ಲೋಕದ ಊಳಿಗವು ನಮಗ್ಯಾತಕ್ಕೆ ಅಲ್ಲಮನೆಂಬೊ
ಏಕೋಭಾವದಲಿ ಉಳಿಯಬೇಕು ಲೋಕದ
ಏಕೋಭಾವದ ಊಳಿಗವು ನಮಗ್ಯಾತಕ್ಕೆ, ಬಸವಣ್ಣ

ತಾತ್ಪರ್ಯ : ಬಹುಶಃ ಮೌನೇಶ್ವರರು ಅನುಭವಿಸಿದ ಮುಜುಗರವನ್ನು ಈ ವಚನ ಪ್ರತಿಪಾದಿಸುವಂತಿದೆ. ತ್ರಿಕಾಲಜ್ಞಾನಿಗಳಾದ ಮೌನೇಶ್ವರರು ಸಂಚಾರದ ಸಂದರ್ಭದಲ್ಲಿ ಕೆಲವರೊಂದಿಗೆ ಆಧ್ಯಾತ್ಮದ ಬಗ್ಗೆ ಚರ್ಚಿಸಿರಬಹುದು. ಉಪದೇಶಿಸಲು ಪ್ರಯತ್ನಿಸಿರಬಹುದು. ಅಂತ ಸಂದರ್ಭದಲ್ಲಿ ಅವರು ಮೌನೇಶ್ವರರ ಮಾತುಗಳನ್ನು ನಂಬದೇ ಸಾಕ್ಷಿ ಕೇಳಿರಬಹುದು. ಇವರ ಮಾತಿಗೆ ಕೊಕ್ಕೆ ಹಾಕಿರಬಹುದು, ಅಡಚಣೆ ಮಾಡಿರಬಹುದು. ಅದರಿಂದ ಬೇಸತ್ತ ಮೌನೇಶ್ವರರು ಲೋಕದ ಊಳಿಗ ಸೇವೆ ನಮಗೇಕೆ ಎಂದು ತಿಳಿದು ಅಲ್ಲಮನೆಂಬ ಪರತತ್ವವನ್ನು ನಂಬಿ ಬದುಕಿದರು. ಲೋಕದ ಉಸಾಬರಿಯಿಂದ ದೂರ ಸರಿಯುತ್ತಾರೆ. ಅಂದರೆ ಮೌನೇಶ್ವರರ ಹಿತನುಡಿಗಳನ್ನು ಕೇಳದ ಅಜ್ಞಾನಿಗಳಿಂದ ಅವರು ದೂರ ಉಳಿಯುತ್ತಾರೆ.

೩೮೭

ತಾವೆ ದೇವರೆಂಬುದು ಕಾಣರು ಜಗದೊಳಗೆ
ಭೂಮಿಯ ಹೊತ್ತು ನಿಲ್ಲಿಸಿದ ಬಸವಯ್ಯನಲ್ಲದೆ
ದೇವನೆಲ್ಲಿಹನು ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ತನ್ನರಿವು ತನಗೆ ಗುರು, ಅರಿವೆ ದೈವ ಮತ್ತು ಸತ್ಯ. ಸತ್ಯ ತನ್ನಲ್ಲಿದ್ದರೂ ಅದನ್ನು ಹುಡುಕಲು ಹೋಗುವುದು ಅಜ್ಞಾನಿಗಳ ಸ್ವಭಾವ. ಅಂತವರು ಈ ಭೂಮಿಯನ್ನು ಹೊತ್ತ ಬಸವಯ್ಯನನ್ನೂ ದೇವರೆಂದು ತಿಳಿಯರು. ತಾನೇ ದೇವರಾಗುವುದೆಂದರೆ, ಕ್ರಿಯೆ ಅಂದರೆ ಕೆಲಸದಲ್ಲಿ ಮಗ್ನನಾಗುವುದು. ಬಸವಣ್ಣನ ರೂಪಕ ಇಲ್ಲಿ ಕ್ರಿಯೆ ಮತ್ತು ಜ್ಞಾನದ ಗುರುತಾಗಿ ಬಳಕೆಯಾಗಿದೆ. ಹೀಗೆ ಕಾಯಕ ದಿಂದಲೇ ಕೈಲಾಸ ಎನ್ನುವ ಮಾತು ಅನ್ವಯವಾಗುತ್ತದೆ.

೩೮೮

ಅಡವಿಯಲಿ ಮಳೆ ಬಡಿದು ಗಿಡಬಳ್ಳಿ ನಡುಗಿ
ಹುಡಿಯೊಳು ಸ್ಥಾವರಿ ಬೆಳದಂದಿಗೆ ಗದ್ದರಿಸಿ
ಸಿಡಲು ಮಿಂಚು ಮಾನವರಿಗೆ, ಬಸವಣ್ಣ

ತಾತ್ಪರ್ಯ : ಅಡವಿಯಲಿ ಮಳೆ ಬಡಿದು ಗಿಡಬಳ್ಳಿ ನಡುಗುವುದು ಈ ಮಾತು ಕಾರು ಮಳೆ ಅಥವಾ ಅಣಿಕಲ್ಲು ಮಳೆಗಳ ಆರ್ಭಟವನ್ನು ಹೇಳುತ್ತದೆ. ಅಂತಹ ವಿಪರೀತ ಮಳೆಗೆ ಪ್ರಕೃತಿಯ ಮಡಿಲಲ್ಲಿ ಬೆಳೆದ ಗಿಡ ಮರ ಬಳ್ಳಿಗಳು ಸ್ಥಾವರದಂತಿದ್ದ ಪರ್ವತಗಳು ಬೆಳೆದವು. ಆದರೆ ಮಾನವರಿಗೆ ಸಿಡಿಲು ಮಿಂಚು ಮಾತ್ರ ದೊರೆತವು. ಪ್ರಕೃತಿ ವಿರೋಧಿಯಾದ ಮನುಷ್ಯನ ಅವಸಾನವನ್ನು ವಚನ ಚಿತ್ರಿಸುವಂತಿದೆ.

೩೮೯

ನಂಬಿದವರ ಕೂಡ ಡಂಬಗಾರಿಕಿ ಆಡಿದರೆ
ಕುಂಭಿನಿ ನರಕದೊಳು ಎಳಸುವರು ಇದು ನಮ್ಮ
ನಂಬಯ್ಯನವರಿಗೆ ತರವಲ್ಲ, ಬಸವಣ್ಣ

ತಾತ್ಪರ್ಯ : ನಂಬಿಕೆ ಎಂಬುದು ಮನುಷ್ಯರ ಮಧ್ಯದ ಬಹಳ ತೆಳುವಾದ ಸಂಗತಿ. ಅದರಲ್ಲಿಯೂ ಕಲಿಯುಗದಲ್ಲಿ, ಇಂದಿನ ಆಧುನಿಕತೆಯಲ್ಲಿ ನಂಬಿಸಿ ಕುತ್ತಿಗೆ ಕೊಯ್ಯುವ ಜನರೇ ಹೆಚ್ಚು. ಮೌನೇಶ್ವರರ ಕಾಲದಲ್ಲಿಯೂ ಇಂತಹ ವಂಚಕರಿದ್ದರೆನಿಸುತ್ತದೆ. ಅದಕ್ಕಾಗಿ ಅವರು ನಂಬಿದವರಿಗೆ ಮೋಸ ಮಾಡಬಾರದು. ಧರ್ಮದ್ರೋಹ ಮಾಡ ಬಾರದೆಂದು ಹೇಳುತ್ತಾರೆ. ಒಂದು ವೇಳೆ ಅಂತ ದ್ರೋಹ ಮಾಡಿದವರು ಈ ಭೂಮಿಯಲ್ಲಿ ಘನಘೋರ ನರಕವನ್ನು, ಕಷ್ಟಕೋಟಲೆಗಳನ್ನು ಅನುಭವಿಸುತ್ತಾರೆ. ಇಂತಹ ದ್ರೋಹ ಸತ್ಯಶರಣರಿಗೆ ಸಲ್ಲದು. ಶರಣ ಸದಾಚಾರಿಯಾಗಿರಬೇಕು ಎಂಬ ಭಾವ ಇಲ್ಲಿನದು.

೩೯೦

ಮಾಸ ಹನ್ನೆರಡು ಇಪ್ಪತ್ತೇಳು ನಕ್ಷತ್ರ
ರಾಶಿ ಗುಣಿಸಿ ಹೇಳುವರು

ಭೂಸುರರ ಮಾತು ಹುಸಿಯಲ್ಲ ದಿಟವಲ್ಲ
ಈಶನೊಬ್ಬನೆ ಬಲ್ಲ ಎನಗೆ ಅರುವಿಲ್ಲ
ಆವ ಬ್ರಾಹ್ಮಣನರಿಯ
ದೇವ ಬ್ರಾಹ್ಮಣ ಬಲ್ಲ, ಬಸವಣ್ಣ

ತಾತ್ಪರ್ಯ : ಜ್ಯೋತಿಷ್ಯ ಪಂಚಾಂಗಗಳ ಮೂಲಕ ಫಲಜ್ಯೋತಿಷ್ಯ ಹೇಳುವ ಬ್ರಾಹ್ಮಣರನ್ನು ಅವರ ನುಡಿಗಳನ್ನು ವಚನ ತೀಕ್ಷ್ಣವಾಗಿ ವಿಮರ್ಶಿಸುತ್ತದೆ. ಹನ್ನೆರಡು ತಿಂಗಳು, ಹನ್ನೆರಡು ರಾಶಿ, ಇಪ್ಪತ್ತೇಳು ನಕ್ಷತ್ರ, ಗುಣಿಸಿ, ಕುಂಡಲಿ ಹಾಕಿ, ಲೆಕ್ಕ ಮಾಡಿ ಭೂಸುರರು ಹೇಳುವ ಭವಿಷ್ಯ ಸತ್ಯವೂ ಅಲ್ಲ, ಸುಳ್ಳೂ ಅಲ್ಲ ಅದೊಂದು ಅಪ್ರಸ್ತುತ ವಿದ್ಯೆ. ಇಂತಹ ಬ್ರಾಹ್ಮಣರು ಅರಿಯದ ಸತ್ಯವನ್ನು ಸೃಷ್ಟಿಕರ್ತ ಹಾಗೂ ದೇವ ಬ್ರಾಹ್ಮಣನೂ ಆದ ವಿಶ್ವಕರ್ಮ ಮಾತ್ರ ಬಲ್ಲ.

೩೯೧

ಗುರು ಲಿಂಗ ಜಂಗಮದ
ಗುರುತವ ತಾವು ಅರಿಯದಲೆ
ಗುರಿಯಾದರಯ್ಯ ಯಮಗೆ, ಬಸವಣ್ಣ

ತಾತ್ಪರ್ಯ : ತಾನು ತನ್ನನ್ನು ತನ್ನ ಪರಿಸರವನ್ನು ತಿಳಿಯದವ ಮನುಷ್ಯನಲ್ಲ, ಅನುಭಾವದ ಮೂಲಗಳಾದ ಗುರು ಲಿಂಗ ಜಂಗಮದ ಗುರುತುಗಳನರಿಯದೆ ಅಂದರೆ ಅವುಗಳ ಮಹತ್ವವನ್ನು ಮನಗಾಣದೆ, ಅರ್ಥಮಾಡಿಕೊಳ್ಳದೆ ಅಜ್ಞಾನಿಗಳಾಗಿ ಬದುಕು ಹಾಳು ಮಾಡಿಕೊಂಡು ಯಮನಿಗೆ ಗುರಿಯಾದ ಮಂದಿಯ ಕುರಿತು ವಚನ ಹೇಳುತ್ತದೆ.

೩೯೨

ಗುರುಗಳು ಎಂಬ ಗರ್ವವು ನಿಮಗ್ಯಾತಕೆ
ಎಳೆ ಕರುವುಗಳಿರಾ ನಿಮಗೇಕೆ ತಿಳಿಯದು, ಬಸವಣ್ಣ

ತಾತ್ಪರ್ಯ : ಜಾತಿಗೊಬ್ಬ ಗುರು ಮಠಕ್ಕೊಬ್ಬ ಜಗದ್ಗುರುಗಳ ಹಾವಳಿ ಜಾಸ್ತಿಯಾಗಿ ಧರ್ಮನಾಶವಾಗುತ್ತಿರುವ ಕಾಲವಿದು. ಗುರು ಅಥವಾ ಮಠಾಧೀಶರ ಬಗೆಗಿನ ನಂಬಿಕೆಗಳೇ ಕುಸಿಯುತ್ತಿರುವ ಕಾಲವಿದು. ಮೌನೇಶ್ವರರೂ ತಮ್ಮ ಕಾಲದಲ್ಲಿ ಗುರುಗಳೆಂದು ಧರ್ಮದ ಗುರುತುಗಳನ್ನು ಧರಿಸಿಕೊಂಡು ಗರ್ವ ಅಹಂಕಾರ ದಿಂದ ಅಪ್ರಬುದ್ಧರಾಗಿ ಮೆರೆಯುತ್ತಿದ್ದವರ ಬಗ್ಗೆ ಹೇಳಿದ್ದಾರೆ. ಪ್ರಬುದ್ಧತೆ ಗುರುವಿನ ಗೌರವವನ್ನು ಹೆಚ್ಚಿಸುತ್ತದೆ. ಎಳೆಗರು ಅಂದರೆ ಅಪ್ರಬುದ್ಧತೆ, ಅನನುಭವ, ವ್ಯಕ್ತಿಯನ್ನು ಅಧಃಪತನಕ್ಕಿಳಿಸುತ್ತದೆ.

೩೯೩

ತ್ರಿವಿಧ ನಿಷ್ಠೆಯಿಲ್ಲ ಧರಣಿಯೊಳಗಿರುವ
ದೇವದೇವಾದಿಗಳು ಏರುವ ವಾಹನದಿಂದ
ಏನಾಹುದು ನೀರವಾಹನನೇರಿ ನಿರ್ಮಿಸಿದ
ಶ್ರೀ ವಿಶ್ವನಾಥನು ಪಾದತೀರ್ಥಂಗಳನು
ಉಂಡು ಉಟ್ಟು ಮೂಜಗವೆಲ್ಲ ಇಂಥ
ಆಗಮವನರಿಯದ ಕಾಣದ ಕೋತಿಗಳಿಗೆ ಉಸುರಬಹುದೆ
ಈರೇಳುಭವಕ್ಕೆ ವಿಶ್ವನಾಥನೆ ದೈವ, ಬಸವಣ್ಣ

ತಾತ್ಪರ್ಯ : ಅನುಭಾವಿಯಾಗಬೇಕೆಂದರೆ, ಅನುಭಾವ ಕೇಳಬೇಕೆಂದರೆ ಅದಕ್ಕೆ ದೃಢ ಮನಸ್ಸು ಬೇಕು, ಶ್ರದ್ಧೆ ಬೇಕು. ಆದರೆ ಈರೇಳು ಭುವನದಲ್ಲಿ ಸ್ವಹಿತಾಸಕ್ತಿಗೆ ಬಡಿದಾಡುವವರಿದ್ದಾರೆ. ತ್ರಿವಿಧ ನಿಷ್ಠೆಯಿಲ್ಲದೆ ಅಂದರೆ ಕಾಯಾ ವಾಚಾ ಮನಸಾ ಅಶುದ್ಧರಾಗಿ ಬದುಕುತ್ತಿದ್ದಾರೆ. ಅಂತಹ ನಿಷ್ಠೆಯಿಲ್ಲದ ಜನ ಎಂತಹ ವಾಹನ ಏರಿ ಬಂದರೂ ದೊಡ್ಡವರೆನಿಸಿಕೊಳ್ಳಲಾರರು. ನೀರ ವಾಹನ ಅಂದರೆ ಇಂದ್ರ, ವಿಶ್ವಕರ್ಮ (ತೋಯದವಾಹನ=ವಿಶ್ವಕರ್ಮ) ಸೃಷ್ಟಿ ಮಾಡಿದ ವಿಶ್ವನಾಥನ ಪಾದ ತೀರ್ಥಂಗಳನ್ನು ಸೇವಿಸಿ ಬದುಕಿದ ಮೂರುಲೋಕದ ಜನರೂ ಮೌನೇಶ್ವರರ ಸೃಷ್ಟಿಯನ್ನು ಅವರ ಅನುಭಾವದ ಪಥವನ್ನು ಅರಿಯಲಿಲ್ಲ. ಅಂತವರಿಗೆ ಹೇಳಬಹುದೇ ಅನುಭಾವವನ್ನು. ಸಾಧ್ಯವಿಲ್ಲ, ಅವರಿಗೆ ಅರ್ಥವಾಗಲಾರದು. ವೈದಿಕ ಆಗಮದ ನೆಲೆಗಳನ್ನು ಟೀಕಿಸುತ್ತಾ ಅವೈದಿಕಾಗಮಗಳ ಬಗ್ಗೆ(ಕಾಳಾಮುಖ, ಪಾಶುಪತ... ಇತ್ಯಾದಿ) ಹೇಳುತ್ತಿದ್ದಾರೆಂದೆನಿಸುತ್ತದೆ. ಅವರ ವಚನಗಳಲ್ಲಿ ಬಹಳಷ್ಟು ಕಡೆ ವೈದಿಕ ಆಗಮ, ಶಾಸ್ತ್ರಗಳ ತೀಕ್ಷ್ಣ ಟೀಕೆ ಇರುವುದು ಗಮನಾರ್ಹ.

೩೯೪

ಶ್ರೀ ಪರಮಭಕ್ತರಿಗೆ ಪರಾಮರಿಕೆ
ಕಟ್ಟಲಿಕೆ ಬಿಡಲಿಕೆ ದೇವರು
ಬಟ್ಟಲ ಉದಕದಲೈತೆ ಕಟ್ಟುವುದು
ಕಟ್ಟಿ ಬಿಡುವುದು ಬಿಟ್ಟರೆ ಕೈಲಾಸ
ಬಟ್ಟ ಬಯಲು ಕಾಣಾ, ಬಸವಣ್ಣ

ತಾತ್ಪರ್ಯ : ಪರಮಭಕ್ತರಿಗೆ ಹೇಳುವುದೇನೆಂದರೆ ಸೃಷ್ಟಿಕರ್ತನಾದ ದೇವರನ್ನು ಕಟ್ಟಲು ಕಡಿಯಲು ಸಾಧ್ಯವೆ? ಕಟ್ಟಲು, ಬಿಡಲು ದೇವರೇನು ಬಟ್ಟಲೊಳಿರುವ ನೀರಿನಲ್ಲಿ ಇದ್ದಾನೆಯೆ? ಸರ್ವಾಂತರ್ಯಾಮಿಯೂ ನಿರಾಕಾರನೂ ನಿರ್ಗುಣನೂ ಆದ ಶಿವನನ್ನು

ಗುಡಿ ಕಟ್ಟಿ ಅಥವಾ ಮೂರ್ತಿ ಮಾಡಿ ನಿಲ್ಲಿಸಿದರೆ ಕೈಲಾಸ ಬಟ್ಟ ಬರಿದಾಗುತ್ತದೆ ಎನ್ನುವ ಭಾವ ಇಲ್ಲಿನದು.

೩೯೫

ಕೈಲಲ್ಲಿ ಕಾರ್ಯವಿಲ್ಲ ಐವರು ದ್ರೌಪದಿಯ
ಕೈಶರೆಯ ಹಿಡಿದ ಅರಸರ್ಯಾರು ಎಂತೆಂದರೆ
ಸೈಯ್ಯದ ಮಹಮ್ಮದನ ಮಗನೆಂದು
ಮಗನಾರೆಂದು ಕೇಳಿದರೆ ಮೈದುನ ರಾಮಯ್ಯ
ಮೈದುನ ರಾಮಯ್ಯನ ಮಗನಾರೆಂದರೆ ಪರಾಶರೆಂದ, ಬಸವಣ್ಣ

ತಾತ್ಪರ್ಯ:

೩೯೬

ಗಟ್ಟಿ ಕಲ್ಲನೆ ಒಡದು ಬಸವನ ನಾಮವ ಮಾಡಿ
ಶಿಶು ಪಶುಗಳ ಹೆಸರಿಟ್ಟು ಕರಿಸಿದಂಥ
ವಸ್ತು ಬೇರೆ ಹಾನೆ ಕಡೆಯಲ್ಲಿ ಲೋಕದ
ನುಸಿಗಳಿಂದೇನು ನಡಿಯದು, ಬಸವಣ್ಣ

ತಾತ್ಪರ್ಯ: ವಚನ ಶಿಲ್ಪಿಯ ಬಹುಸೃಷ್ಟಿ ಕ್ರಿಯೆಗಳನ್ನು ಸೂಚಿಸುವಂತಿದೆ. ಸೃಷ್ಟಿಕರ್ತನಾದ ವಿಶ್ವಕರ್ಮ ಭೂಮಿಯಲ್ಲಿರುವ ಶಿವ ಶಿಲ್ಪಿ ಭೂಮಿಯಲ್ಲಿ ದೊರೆಯುವ ಪಂಚಭೂತಾತ್ಮಕ ವಸ್ತುಗಳಾಗಿರುವ ಗಟ್ಟಿ ಕಲ್ಲನ್ನೆ ಒಡೆದು ಕಡೆದು ಕೆತ್ತಿ ಬಸವಾದಿ ರೂಪಗಳ ನಿರ್ಮಾಣ ಮಾಡಿ ಅಂದರೆ ಹಲವು ಮೂರ್ತಿಗಳ ಕೆತ್ತಿ, ಅವುಗಳಿಗೆ ಹೆಸರಿಟ್ಟು ಗುರುತಿಸಿದವನು. ಇಂಥ ಪ್ರತಿಸೃಷ್ಟಿ ಮತ್ತು ಅದರ ನಾಮನಿರ್ದೇಶನದ ಕೆಲಸ ಶಿಲ್ಪಿಯಿಂದಾಗುತ್ತದೆಯೇ ಹೊರತು ಸಾಮಾನ್ಯ ನರಮಾನವರಾದ ಅಜ್ಞಾನಿಗಳಿಂದಲ್ಲ ಸಾಧ್ಯವಿಲ್ಲ.

ಸೃಷ್ಟಿಕರ್ತನಾಗಿರುವ ವಿಶ್ವಕರ್ಮನಂತೆಯೇ ಪಂಚಭೂತಗಳನ್ನು ಬಳಸಿಕೊಂಡು ನೂತನವಾದುದನ್ನು ಭೂಮಿಯ ಮೇಲೆ ಶಿಲ್ಪಿಯು ಸೃಷ್ಟಿಸುತ್ತಾನೆ. ಇದೇ ಕಾರಣದಿಂದಲೇ ಶಿಲ್ಪಿಯನ್ನು ಶಾಸ್ತ್ರಗಳಲ್ಲಿ ವಿಶ್ವಕರ್ಮನೆಂದು ಕರೆದಿರುವುದು. ಈ ಅಂಶವನ್ನು ಮೌನೇಶ್ವರರು ಇಲ್ಲಿ ಹೇಳಿದ್ದಾರೆ.

೩೯೭

ಕ್ರಿಯಾವ್ರತದ ನಚ್ಚಿಗೆಯ ಹೊತ್ತಿಗೆಯ ನಚ್ಚಿ
ಕ್ರಿಯೆಯ ಹಿಡಿದು ನಡೆದೆನೆಂದರೆ ಬರಸಿ ದಾರಿದ್ರ

ಬಹು ಮುಪ್ಪು ಬಂದಾಗ ತಿಳಿವರು ಮನೆಮನೆಯ
ಮರದಿರದು ಉಣಿಸುವದು ಪ್ರಭುರಾಯ
ಸ್ಥಿರವಲ್ಲವಯ್ಯ ಸಂಸಾರ, ಬಸವಣ್ಣ

ತಾತ್ಪರ್ಯ : ಸದೃಢವಿದ್ದಾಗ ಪೂಜಾದಿ ಆಚರಣೆಗಳ ನೆಚ್ಚಿ ಅದಕ್ಕಾಗಿ ಆಧ್ಯಾತ್ಮಿಕ ಗ್ರಂಥಗಳನ್ನು ಪಠಣ ಮಾಡಿ ಕ್ರಿಯೆಯ ಆಚರಿಸುತ್ತಾರೆ. ಪೂಜೆ ಆಚರಣೆಯಂತಹ ಬಾಹ್ಯ ಧಾರ್ಮಿಕ ಕ್ರಿಯೆಗಳಲ್ಲಿಯೇ ವ್ಯರ್ಥ ಕಾಲಹರಣ ಮಾಡುತ್ತಾರೆ. ಇಡೀ ಬದುಕನ್ನು ಹೀಗೆ ಐಹಿಕ ಸುಖದಲ್ಲಿ ಕಳೆದರೂ ಇವರಲ್ಲಿ ಜ್ಞಾನವಾಗಲಿ, ಪರಮಾತ್ಮನ ಕುರಿತ ನಂಬಿಕೆಯಾಗಲಿ ಬರುವುದಿಲ್ಲ. ಏನನ್ನೂ ಸಾಧಿಸದೆ ಬೌದ್ಧಿಕ ಬಡತನ ಮತ್ತು ಮುಪ್ಪು ಬಂದಾಗ ಮನೆ ಮನೆ ತಿರಿದು ಉಣ್ಣುವರು, ಪಶ್ಚಾತ್ತಾಪದಿಂದ ಹಲಬುವರು. ಹೀಗೆ ಬದುಕಿನುದ್ದಕ್ಕೂ ಸುಮ್ಮನೆ ಕಾಲಹರಣ ಮಾಡಿ ಏನನ್ನು ಸಾಧಿಸಲಾರದ ನಿಷ್ಪ್ರಯೋಜಕರು. ಇಂತವರ ಕ್ರಿಯಾಗಮದಲ್ಲಿ ಅಂಗದ ಅಧ್ಯಾತ್ಮಿಕ ಪ್ರಗತಿಗೆ ಸ್ಥಾನವಿಲ್ಲ. ತನುಮುಟ್ಟಿ ಮಾಡುವುದಲ್ಲದೆ ಮನಮುಟ್ಟಿ ಮಾಡಬೇಕು ಎನ್ನುವ ಭಾವ ವಚನದ್ದು.

೩೯೮

ಬೆಟ್ಟ ಘಟ್ಟಿಯ ಕಲ್ಲು ಸೂಜಿ ದಬ್ಬಣ ಕಲ್ಲು
ರಾಜರಾಜರ ಮನೆಯು ಕಲ್ಲು ಮಾಡಿದ
ಸಹಜ ಬೇರೆ ಹಾನೆ ಕಡೆಯಲ್ಲಿ ಲೋಕದ
ಭೇದರಿಂದೇನು ನಡಿವದು, ಬಸವಣ್ಣ

ತಾತ್ಪರ್ಯ : ಇಡೀ ಸೃಷ್ಟಿಯೇ ಸಹಜ ಮತ್ತು ಸಾವಯವವಾಗಿದ್ದರೂ ಅದನ್ನು ಮನುಷ್ಯ ತನ್ನ ದುರಹಂಕಾರದ ಭಾಗವಾಗಿಸಿಕೊಳ್ಳುವುದನ್ನು ವಚನ ಸೂಚಿಸುವಂತಿದೆ. ಪ್ರಕೃತಿಯಲ್ಲಿ ಕಾಣುವ ಬೆಟ್ಟ ಗುಡ್ಡ ಕಲ್ಲುಗಳೆಲ್ಲ ದೈವ ಸೃಷ್ಟಿ. ಸೂಜಿ ದಬ್ಬಣ ಆರಮನೆ ಗುರುಮನೆ ಇವು ಶಿಲ್ಪಿಯ ಸೃಷ್ಟಿಗಳು. ಪ್ರಕೃತಿಯಲ್ಲಿ ದೊರೆಯುವ ಕಲ್ಲು ಕಟ್ಟಿಗೆ ಕಬ್ಬಿಣವನ್ನು ಸಂಸ್ಕರಿಸಿ ಉಪಯುಕ್ತ ಆಯುಧ ಹಾಗೂ ಆಲಯಗಳನ್ನಾಗಿಸುವ ಶಿವ ಮತ್ತು ಶಿಲ್ಪಿಯ ಮರೆತು ತಮ್ಮ ಹಕ್ಕು ಸಾಧಿಸುವ, ಇದು ತಮ್ಮ ನಿರ್ಮಿತಿ ಎಂದು ಅಹಂಕಾರದಿಂದ ಹೇಳುವ ಜನರಿಗೆ ತಿಳುವಳಿಕೆಯನ್ನು ನೀಡಿದ್ದಾರೆ ಮೌನೇಶ್ವರರು.

೩೯೯

ಧರಣಿಯ ಕಲ್ಲೊಡೆದು ಗೋರಿ ಗುಮ್ಮಟ ಕಟ್ಟಿ
ಏರ ಪೀರರನ ಮಲಗಿಸಿದಂಥ

ಶೂರ ಬೇರೆ ಹಾನೆ ಕಡೆಯಲ್ಲಿ
ಲೋಕದ ಪೋರರಿಂದೇನು ನಡಿವದು, ಬಸವಣ್ಣ

ತಾತ್ಪರ್ಯ: ಲೋಕದ ಸೃಷ್ಟಿ ಶಿವನಿಂದ, ಆದರೆ ಲೋಕದೊಳಗಿನ ಸೃಷ್ಟಿಗಳು ಶಿಲ್ಪಿಯಿಂದ ನಡೆಯುತ್ತವೆ. ಭೂಮಿಯ ಮೇಲೆ ಸಿಗುವ ಕಲ್ಲು ಮಣ್ಣುಗಳಿಂದ ಗೋರಿ ಗುಮ್ಮಟವ ಕಟ್ಟಿ ವೀರ ಧೀರರನು ಮಲಗಿಸಿದಂತಹ ಶೂರ ಅಂದರೆ ಸಾಹಸಿ ಬೇರೆಯೇ ಇದ್ದಾನೆ. ಆದರೆ ಈ ಮೂರ್ಖ ಜನರು ಅಪ್ರಬುದ್ಧರಾದವರು ನಾವೇ ಮಾಡಿರುವೆವೆಂದು ಜಂಬದಿಂದ ಗುಡಿ ಗೋರಿ ಗುಮ್ಮಟಗಳ ಹಕ್ಕಿಗಾಗಿ ವಾರಸುದಾರಿಕೆಗಾಗಿ ಬಡಿದಾಡುವುದು ಹೇಸಿಕೆ ತರಿಸುವಂಥದ್ದು. ಗೋರಿ ಗುಮ್ಮಟ ಗಳನ್ನು ಜಾತಿ ಸಂಕೇತಗಳನ್ನಾಗಿಸಿಕೊಂಡು ಸಮಾಜದಲ್ಲಿ ಅಶಾಂತಿಯನ್ನು ಹಿಂಸೆ ಯನ್ನು ಹುಟ್ಟು ಹಾಕುವ ಅಪ್ರಬುದ್ಧ ಮನಸುಗಳಿಗೆ ಮೌನೇಶ್ವರರು ಕೊಡುವ ಈ ಸಂದೇಶ ಗಮನಾರ್ಹವಾದುದು. ವೀರರು ಮತ್ತು ಧೀರರು ಮರಣಾನಂತರ ಗೋರಿ ಗುಮ್ಮಟಗಳಾಗಿ ಸ್ಥಾವರವಾಗುವ ಅಸಂಗತತೆಯನ್ನು ಮೌನೇಶ್ವರರಿಲ್ಲಿ ಎತ್ತಿ ತೋರಿಸಿದ್ದಾರೆ.

೪೦೦

ಕದ್ದ ಕಳವು ಒಡೆಯರಿಗೆ ಪಾಲನಿಕ್ಕದಿದ್ದರೆ
ತಳಕುಲ ಹ್ಯಾಗೆ ತಿದ್ದಿಸುವನು
ತಳವಾರ ಕಡಿಯಲ್ಲಿ ಇರಲಿಕ್ಕೆ, ಬಸವಣ್ಣ

ತಾತ್ಪರ್ಯ: ಒಡೆಯನಿಗೆ ನಿಷ್ಠನಾಗಿರಬೇಕೆಂಬುದು ವಚನದ ಭಾವ. ಕಳ್ಳನಾಗಲಿ ಸುಳ್ಳನಾಗಲಿ ತಾನು ಮಾಡಿದ ಕೆಲಸಕ್ಕೆ ಪ್ರತಿಫಲವಾಗಿ ಬಂದ ಭಾಗವನ್ನು ಅವನನ್ನು ರಕ್ಷಿಸುವ ಮಾಲೀಕನಿಗೆ, ಒಡೆಯನಿಗೆ ಕೊಡಬೇಕು. ಇಲ್ಲದಿದ್ದರೆ ಅವನಂತಹ ಕೀಳು ಮನುಷ್ಯ ಇನ್ನೊಬ್ಬನಿರಲಾರನು. ಕೆಲಸ ಯಾವುದಾದರೂ ಸರಿ ವೃತ್ತಿನಿಷ್ಠೆ ಪ್ರತಿಯೊಬ್ಬ ವೃತ್ತಿಕಾರನ ಗುಣಲಕ್ಷಣವಾಗಬೇಕು.

೪೦೧

ಕತ್ತಿಯ ಹಿಡಿದುಕೊಂಡು ನೆತ್ತಿಯ ಕೊಯಿಕೊಂಡು
ನೆತ್ತರವ ಸುರಿಸುತ್ತ ಬಂದಂಥ ನಿತ್ಯುಳ್ಳ ಶರಣರ
ತುತ್ತು ವೋಗರಕ್ಕಾಗಿ ಉತ್ತತ್ತಿ ವನವ ವತ್ತರಿಸಿ ಕಡಿವರು
ಎತ್ತಣ ಉಪದೇಶ ಅವರಿಗೆ, ಬಸವಣ್ಣ

ತಾತ್ಪರ್ಯ: ರಣರಂಗವಾಗಿದ್ದ ಕಲ್ಯಾಣದಿಂದ ಕತ್ತಿಯ ಹಿಡಿದು ನೆತ್ತರ ಸುರಿಸುತ್ತ ಬಂದ ಶರಣರ ದಿನನಿತ್ಯದ ದಾಸೋಹಕ್ಕಾಗಿ ವಾಸಕ್ಕಾಗಿ ಉತ್ತತ್ತಿವನವ ಕಡಿದು

ನಾಶಮಾಡುವವರಿಗೆ ಉಪದೇಶಿಸಲು ಸಾಧ್ಯವೇ. ಅಂದರೆ ಶರಣರ ಹೆಸರಲ್ಲಿ ಪರಿಸರ ನಾಶ ಮಾಡುವ ಸ್ವಾರ್ಥಿಗಳ ಸಂಗತಿಯನ್ನು ವಚನ ಸೂಚಿಸುವಂತಿದೆ.

೪೦೨

ಕರ್ಮವು ಕರಿಗಡಬು
ಧರ್ಮವೆ ಶ್ರವಣ ನಿರ್ಣಯ ವಿಷಯವು
ವರ್ಮಸಾಧನದಿ ಒದ್ದಾಡುವವರಿಗೆ ಯಮ–
ಧರ್ಮನೆ ಸಾಕ್ಷಿ, ಬಸವಣ್ಣ

ತಾತ್ಪರ್ಯ : ಅಧರ್ಮ ಮತ್ತು ಅಜ್ಞಾನ ವಶರಾದವರಿಗೆ ಅಲ್ಲದ ಕಾರ್ಯಗಳು ಅಂದರೆ ಕರ್ಮಮಾರ್ಗವು ಕರಿಗಡಿಬಿನಂತೆ ಸಿಹಿಯಾಗಿ ಕಾಣುತ್ತದೆ. ಅದರಿಂದ ಅಹಂಕಾರ ಬಲಿತು ಸಹಬಾಳ್ವೆ ಮರೆತು ಪರಸ್ಪರ ಸೇಡಿನಿಂದ, ಕಚ್ಚಾಡುವರು ಬಡಿದಾಡುವರು. ಕರ್ಮಬಂಧನಗಳಲ್ಲಿಯೇ ಒದ್ದಾಡಿ ಸಾಯುತ್ತಾರೆ. ಇದಕ್ಕೆ ಯಮಧರ್ಮನೇ ಸಾಕ್ಷಿ. ಕಾರಣ ಧರ್ಮ ಶ್ರವಣ, ಸಜ್ಜನರ ಸಂಗ ಮಾಡಿದರೆ ಕರ್ಮಕ್ಷಯವಾಗಿ ಅಜ್ಞಾನ ಅಳಿವುದು. ಸುಜ್ಞಾನ ಬೆಳೆಯುವುದು.

೪೦೩

ಗಿರಿಯ ನಡೆಸಿದರೇನು ಗುರುವಿನ ಜರಿದರೇನು
ತಿರುಗಿದರೇನು ದೇಶಾಂತ್ರ
ಕಾಂತಾರದೊಳು ಕುಳಿತು ಬಾಯಿ–
ತೆರೆದರಿನ್ನೇನು, ಬಸವಣ್ಣ

ತಾತ್ಪರ್ಯ : ತನ್ನ ತಾನು ತಿಳಿಯದೆ ಅಜ್ಞಾನದಿಂದ ಗಿರಿಯ ಏರಿದರೇನು. ದೇಶಾಂತರವ ತಿರುಗಿದರೇನು, ದಟ್ಟಡವಿಯಲ್ಲಿ ಕುಳಿತು ಓಂಕಾರ ಪಠಿಸಿದರೇನು ಫಲ. ಗುರುವಿನ ಜರಿದ ಕಾರಣಕ್ಕಾಗಿ ಅಜ್ಞಾನವು ಆವರಿಸಿ ಸುಜ್ಞಾನವನ್ನು ನುಂಗಿ ಹಾಕಿತು. ಶುದ್ಧ ಮನಸ್ಸು ಹಾಗೂ ಭಕ್ತಿ ವ್ಯಕ್ತಿಯನ್ನು ಬೆಳೆಸುತ್ತದೆ.

೪೦೪

ಕರವಗಲ್ಲಿನ ತೈಲ ಕೆರವಿಗೆ ಉಣಿಸಲು ದ್ವಯ
ಚರಣ ರಕ್ಷಾಗಿ ಜೋಪಾನ ಕಲಿಯುಗದಿ ಜನಿಸಿ
ಇರುವ ಪರ್ಯಂತ್ರ, ಬಸವಣ್ಣ

ತಾತ್ಪರ್ಯ : ಹಿಂದಿನ ಕಾಲದಲ್ಲಿ ಹಳ್ಳಿಗಳಲ್ಲಿ ಝುರುಕಿ ಕಾಲ್ಮರಿ ಹಾಗೂ ಚರ್ಮದ ಚಪ್ಪಲಿಗಳನ್ನು ಸ್ಥಳೀಯ ಮಾದಿಗರಿಂದ ಹೊಲಿಸುತ್ತಿದ್ದರು. ಇಂದು ಬೂಟಿಗೆ

ಪಾಲೀಶ್ ಹಾಕಿದಂತೆ ಅಂದು ತೊಗಲ ಚಪ್ಪಲಿಗೆ ಒಳೆಣ್ಣೆ ಉಣಿಸುತ್ತಿದ್ದರು. ಇದರಿಂದ ಅವು ಹೆಚ್ಚು ಕಾಲ ಬಾಳಿಕೆ ಬರುತ್ತಿದ್ದವು. ಚರ್ಮ ಹದಗೊಂಡು ಮೃದುವಾಗುತ್ತಿತ್ತು. ಪಾದಗಳಿಗೆ ಸಮಸ್ಯೆಯಾಗುತ್ತಿರಲಿಲ್ಲ. ಅಂತಹ ಸ್ಥಳೀಯ ಜ್ಞಾನದ ರೀತಿಯನ್ನು ವಚನ ಹೇಳುತ್ತದೆ. ಎಣ್ಣೆಯ ಸ್ಪರ್ಶದಿಂದ ಚರ್ಮದ ಚಪ್ಪಲಿಯ ಒಣಗಿದ ಚರ್ಮವೇ ಹದಗೊಳ್ಳುವಾಗ ಜ್ಞಾನದ ಸ್ಪರ್ಷದಿಂದ ಅಜ್ಞಾನಿ ಸುಜ್ಞಾನಿಯಾಗ ಲಾರನೆ? ಸನ್ಮಾರ್ಗ ಹಿಡಿಯಲಾರನೆ ಎನ್ನುವ ಮಾತು ಇಲ್ಲಿನದು.

೪೦೫

ಹವಣಿಸಿದ ಹವಣಿಕೆಯು ಶಿವನೊಲಿದು ಕೊಟ್ಟರೆ
ಭುವನಕಧಿಪತಿಗಳೆನಿಸುವರು ತ್ರಿಮೂರ್ತಿಗಳು
ನೆವನೆವದಲ್ಲಿ ಕಾಡುವರು, ಬಸವಣ್ಣ

ತಾತ್ಪರ್ಯ : ನಿರೀಕ್ಷಿಸಿದ ನಿರೀಕ್ಷೆಗಳನ್ನು ಪರೀಕ್ಷಿಸಿದ ಶಿವನೊಲಿದು ಕೊಟ್ಟರೆ ಭುವಕೆ ಅಧಿಪತಿಗಳೆನಿಸುವರು. ಅಹಂಕಾರದಿಂದ ಸಂಪತ್ತಿನ ಮದದಿಂದ ಮೆರೆವರು. ಇಂಥವರ ಸೊಕ್ಕು ಮುರಿಯಲು ವಿವಿಧ ರೀತಿಯಿಂದ ತ್ರಿಮೂರ್ತಿಗಳು ಕಾಡುವರು, ಪರೀಕ್ಷಿಸು ವರು, ಗರ್ವಹರಣ ಮಾಡುವರು.

೪೦೬

ಆನೆಯನೇರಿದವ ಸ್ವಾನಂಗೆ ಅಂಜುವನೆ
ಹೀನ ಮಾನವರ ಬಿರುನುಡಿಗೆ ತತ್ವದ
ಘನವುಳ್ಳ ಶಿವಜ್ಞಾನಿ ಅಂಜುವನೆ, ಬಸವಣ್ಣ

ತಾತ್ಪರ್ಯ : ಆನೆ ದೊಡ್ಡದು ಮತ್ತು ಘನವಾದದ್ದು. ಸ್ವಾನ ಸಣ್ಣದು ಮತ್ತು ಲಘು ವಾದದ್ದು. ಘನವುಳ್ಳ ಶಿವಜ್ಞಾನಿಗಳು ಆನೆಯಂತೆ ಗಂಭೀರರಾದರೆ ಅಂಧಕಾರ ಹಾಗೂ ಅಜ್ಞಾನದಲ್ಲಿ ಕೊಳೆಯುವ ನರಮಾನವರು ಕೀಳು ನಾಯಿಗೆ ಸಮಾನರು. ಇಂಥ ಹೀನ ಮಾನವರ ಬಿರುನುಡಿಗೆ ಸುಜ್ಞಾನಿಯಾದ ಸಂತ ಅಂಜುವುದಿಲ್ಲ, ಅಳುಕುವುದಿಲ್ಲ. ಅನುಭಾವ ಸ್ವಾವಲಂಬಿತನ ಕಲಿಸಿದರೆ ಅಜ್ಞಾನ ಪರಾವಲಂಬಿತನವನ್ನು ಹುಟ್ಟು ಹಾಕುತ್ತದೆ ಎಂಬ ಭಾವ ಇಲ್ಲಿನದು.

೪೦೭

ಕುರುಬ ಕುಡುವಕ್ಕಲಿಗಂಗೆ ಸುರಭಿ ಸಾರಿತವಾಯಿತು
ದೊರೆ ರಾವುತರಿಗೆ ಖಡ್ಗಗಳು ವಣಿಕರಿಗೆ
ತಿರುಗುವದು ಸಾರ್ಥ, ಬಸವಣ್ಣ

ತಾತ್ಪರ್ಯ : ಪಶು ಪಾಲಕರಾದ ಕುರುಬ ಮತ್ತು ಕುಡುವೊಕ್ಕಲಿಗರಿಗೆ ಕಾಮಧೇನು ಸ್ವರೂಪಿಯಾದ ಆಕಳು ಮುಖ್ಯವೇಕು. ಅವರ ವೃತ್ತಿಗೆ ಕುರಿ ಮತ್ತು ಆಕಳುಗಳೇ ಸಂಪತ್ತು ಮತ್ತು ಭೂಷಣ. ಅದೇ ರೀತಿ ರಾಜ ಮತ್ತು ರಾವುತರಿಗೆ ಅಂದರೆ ಪಾಳೆಗಾರರಿಗೆ(ಕುದುರೆ ಸವಾರರು) ಯುದ್ಧೋಪಕರಣಗಳಾದ ಖಡ್ಗಗಳು ಮುಖ್ಯ. ವಣಿಕ ಅಂದರೆ ವ್ಯಾಪಾರಿಗಳಿಗೆ ವಸ್ತುಗಳನ್ನು ಹೊತ್ತು ಊರಿಂದೂರಿಗೆ ಸಂಚರಿಸುತ್ತ ಮಾರುವುದೇ ಭೂಷಣ. ಅವರವರ ಕೆಲಸ ಅವರು ನಿರಂತರವಾಗಿ ಮಾಡುವುದೇ ಸಾರ್ಥಕವಾದುದು, ವೃತ್ತಿಗೆ ಭೂಷಣವಾದದ್ದು. ಅದೇ ರೀತಿಯಾಗಿ ಜ್ಞಾನಿಯಾದವನಿಗೆ ಲೋಕದ ಹಿತಚಿಂತನೆಯೋ ಮುಖ್ಯವಾಗುತ್ತದೆ.

೪೦೮

ತಾನು ಉಣ್ಣದೆ ಗಳಿಸಿ ದಾನ ಕೊಟ್ಟದನು ಎಣಿಸಿ
ಹೀನತನದ ಹಿರಿತನದ ಉದ್ಯೋಗ ಲೋಕದ
ಸುಜ್ಞಾನಿಗಳಿಗಲ್ಲ, ಬಸವಣ್ಣ.

ತಾತ್ಪರ್ಯ : ಜಿಪುಣ ಮನುಷ್ಯ ತಾನೂ ಉಣ್ಣದೆ, ಬರಿ ಗಳಿಸಿ ಇಟ್ಟಿದ್ದಲ್ಲದೆ ಅಪರೂಪಕ್ಕೆ ದಾನ ಕೊಟ್ಟುದುದನ್ನೂ ಎಣಿಸುತ್ತಾ ಕೊಟ್ಟೆನೆಂಬ ಅಹಂಭಾವದಿಂದ ಮೆರೆದು ಹೀನತನದಲ್ಲಿ ಸಂಭ್ರಮಿಸುತ್ತಾನೆ. ಇಂತಹ ಜಿಪುಣರ ಮತ್ತು ಹೀನರ ಉದ್ಯೋಗ ಅಜ್ಞಾನಿಗಳಿಗೆ ಸಲ್ಲುತ್ತದೆಯೇ ಹೊರತು ಸುಜ್ಞಾನಿಗಳಿಗೆ ಸಲ್ಲದು.

೪೦೯

ತುಂಗಭದ್ರೆಗಳತ್ತ ಮಂಗಮರ್ಕಟ ಜನರು
ಎಂಗಿಯದು ಕಡಿಯೊ ಯಡವಟ್ಟು ಅನ್ಯಾಯದಿ
ಆತಂಕಬಿಡುತಿಹರು, ಬಸವಣ್ಣ

ತಾತ್ಪರ್ಯ : ಹಂಪಿಯತ್ತ ಬರುವ ಅನ್ಯದೇಸಿಗರ ಸೂಚನೆಯನ್ನು ವಚನ ಸೂಚಿಸುತ್ತಿರಬಹುದು. ಮಂಗ ಮರ್ಕಟರೆಂದರೆ ಕೆಂಪು ಮುಖದ ಬ್ರಿಟೀಷರು, ಪಾಶ್ಚಾತ್ಯರು. ವ್ಯಾಪಾರಕ್ಕೆ ಅಥವಾ ಪ್ರವಾಸಕ್ಕೆ ಹಂಪಿಯ ಕಡೆ ಧಾವಿಸಿ ಬಂದು ಮರ್ಕಟರಂತೆ ಕಲ್ಲು ಗುಡ್ಡಗಳಲ್ಲಿ ನೆಲೆಸಿ ತುಂಗಭದ್ರೆಯ ಪರಿಸರದ ಪಾವಿತ್ರ್ಯ ನಾಶ ಮಾಡಬಹುದು ಎನ್ನುವ ಶಂಕೆ ವಚನದಲ್ಲಿದೆ. ಮೌನೇಶ್ವರರು ತುಂಗಭದ್ರೆ ಪರಿಸರ ಕಲುಷಿತವಾಗುವುದನ್ನು ಆಗಲೇ ಹೇಳಿದ್ದಾರೆ ಎಂದೆನಿಸುತ್ತದೆ.

೪೧೦

ಅಲ್ಲಮುಲ್ಲಾ ಬಾಲ ವಿರಕ್ತನ ಮಾಲೆ
ಮಾನವರಿಗೆ ತಿಳಿಯದು ಹೀಗೆಂದು
ಲೋಲ ವಿರಕ್ತಯ್ಯ ನುಡಿದನು, ಬಸವಣ್ಣ

ತಾತ್ಪರ್ಯ : ಅಲ್ಲಮ ಹಾಗೂ ಅಲ್ಲಾನ ಅವತಾರವಾದ ಮುಲ್ಲಾ ಮೌನೇಶ್ವರರ ಮಹಿಮೆ ನರ ಮಾನವರಿಗೆ ತಿಳಿಯಲಾರದು. ಅವರ ಅಂತರ್‌ದೃಷ್ಟಿಗೆ ಮೌನೇಶ್ವರರ ತಾತ್ತ್ವಿಕತೆ ಕಾಣುವುದಿಲ್ಲ ಎಂಬುದು ಲೋಲ ವಿರಕ್ತಯ್ಯನ ಮಾತಾಗಿದೆ.

೪೧೧

ಇಂಥ ಆಚಾರವನು ವಿಶ್ವನಾಥನೆ ಬಲ್ಲ
ಪಂಥ ಕೋಪಗಳು ಆಡ ಸಲ್ಲವು ನಿಮ್ಮ
ಅಂತರಂಗದಲಿ ತಿಳಿದುನೋಡಿರಿಯಲ್ಲ ನಿ
ಶ್ಚಿಂತದಾಯಕ ಅಲ್ಲಮಪ್ರಭುವಿಗೆ ಅಸಮವಲ್ಲ, ಬಸವಣ್ಣ

ತಾತ್ಪರ್ಯ : ಅಂತರಂಗದ ವಿಕಾಸ ಮತ್ತು ಅರಿವು ವ್ಯಕ್ತಿ ಮತ್ತು ಸಮಾಜವನ್ನು ಬೆಳೆಸುತ್ತದೆ. ಕ್ರಿಯಾಶೀಲವಾಗಿಸುತ್ತದೆ. ಅಂತರಂಗದ ಅರಿವಿರದ ಅಜ್ಞಾನಿ ಮನುಷ್ಯ ಪಂಥ ಕುಲ ಛಲ ಎಂದು ಬಡಿದಾಡಿ ಸಾಯುತ್ತಾನೆ. ಆಚಾರವಂತ ಮತ್ತು ವಿಚಾರ ವಂತನಾದವನಿಗೆ ಇಂತಹ ಪಂಥ ಪಂಗಡಗಳು ಕುಲ ಭೇದಗಳು ಸಹ್ಯವಾಗ ಲಾರವು. ಅಂತವನು ನಿಶ್ಚಿಂತದಾಯಕನೂ ಅನುಭಾವಿಯೂ ಆದ ಅಲ್ಲಮನಿಗೆ ಸಮನಾಗುತ್ತಾನೆ. ಅಂತರಂಗದಲ್ಲಿ ತಿಳಿದು ನೋಡುವವನು ತನ್ನ ತಾನರಿಯುವವನು ಪರಮಾತ್ಮನಿಗೆ ಸಮನಾಗುತ್ತಾನೆ.

೪೧೨

ಬೊಬ್ಬರಿದು ಕೂಗುವರಂದು ಇಬ್ಬರು ಶರಣರು
ಕೊಬ್ಬಿದ ಹುಲಿಯ ಕಡಿವುದಕ್ಕೆ ಶರಣರ
ಬೊಬ್ಬಿಯ ನೋಡು, ಬಸವಣ್ಣ

ತಾತ್ಪರ್ಯ : ಬಹುಶಃ ಶರಣ ಕ್ರಾಂತಿಯ ಮೂಲ ಕರ್ತೃಗಳಾದ ಬಸವಣ್ಣ ಮತ್ತು ಅಲ್ಲಮನ ಕುರಿತು ವಚನ ಸೂಚಿಸುತ್ತಿರಬಹುದೆ? ಅಂದಿನ ಕೊಬ್ಬಿದ ಹುಲಿಯಂತಿದ್ದ ಪ್ರಭುತ್ವ ಮತ್ತು ಪುರೋಹಿತಶಾಹಿಯ ಜಡ ವ್ಯವಸ್ಥೆಯನ್ನು ನಾಶಮಾಡಿ ಜಂಗಮ ವ್ಯವಸ್ಥೆಯನ್ನು ಹುಟ್ಟುಹಾಕಿದ ಪರಿ ಇದಾಗಿರಬಹುದು.

೪೧೩

ಮಕ್ಕಳು ಬೇಡಿದರೆ ಮಕ್ಕಳ ಕೊಡಲಾರೆ
ರಕ್ಷಿಸಲಾರೆ ಜಗ ಜನರ
ಪುಕ್ಕಟೆ ಪೂಜೆ ನಮಗ್ಯಾತಕೆ ಶಿವಶರಣರ ಮನೆಯ
ಕುಕ್ಕನಾಗಿರುವದು ಪರಿಣಾಮ, ಬಸವಣ್ಣ

ತಾತ್ಪರ್ಯ : ದುಡಿಯದೆ ಫಲ ಪಡಿಯಬಾರದೆನ್ನುವ ಭಾವ ವಚನದ್ದು. ಕಣ್ಣೆದುರಿಗಿರುವ ದೇವರನ್ನು ಅರಿಯದೆ ಅಜ್ಞಾನದಿಂದ ಸುಮ್ಮನೇ ಪೂಜಿಸುವರು ಜನರು. ಅರ್ಥವಾಗದ ಪೂಜೆ ನಿರರ್ಥಕ, ಅಂತಹ ಪೂಜೆ ಮಾಡಿಕೊಳ್ಳುವುದಕ್ಕಿಂತ ಶಿವಶರಣರ ಮನೆಯ ನಂಬಿಕೆಯ ನಾಯಿಯಾಗಿರುವುದೇ ಸೂಕ್ತ. ಮನವಿಟ್ಟು ಪೂಜಿಸಿದ, ಶ್ರದ್ಧೆಯಿಲ್ಲದ ಭಕ್ತರಿಗೆ ಮಕ್ಕಳ ಫಲಾಫಲಗಳನ್ನಾಗಲೀ ಅವರ ರಕ್ಷಣೆಯ ಜವಾಬ್ದಾರಿಯಾಗಲಿ ಕೊಡಬಾರದು. ಅವರ ಮೂಢನಂಬಿಕೆಗಳನ್ನು ಬಲಿಸಬಾರದು.

೪೧೪

ಪ್ರಾಣ ಛೇದನ ಕುರಿಯ ಕಾಣಲಿಲ್ಲ ಹಬ್ಬದ
ಕೋಣನಾಗುವದು ಜನ್ಮಾಂತ್ರ ದೇವೇಂದ್ರನು
ರಾಣಿಗನಾದ, ಬಸವಣ್ಣ

ತಾತ್ಪರ್ಯ : ಪಶು ಬಲಿಯ ಸಂಗತಿಯನ್ನು ವಚನ ಸೂಚಿಸುತ್ತದೆ. ದುರ್ಗಿ ಮಾರಮ್ಮ ದ್ಯಾಮವ್ವ ಮುಂತಾದ ದೇವಿಯರಿಗೆ ಪ್ರಾಣಿ ಬಲಿಕೊಡುವುದು ಇಂದಿಗೂ ಮುಂದುವರೆದಿರುವುದನ್ನು ನೋಡುತ್ತೇವೆ. ಇಲ್ಲಿ ಕುರಿ ಮತ್ತು ಕೋಣ ಬಲಿಯ ಪ್ರಸಂಗವಿದೆ. ಈ ಪ್ರಾಣಿಬಲಿ ದೇವತೆಗಳ ಒಡೆಯನಾದ ದೇವೇಂದ್ರನಿಗೆ ನಡೆಯುತ್ತದೆ. ರಾಣಿಗನೆಂದರೆ ಪೋತರಾಜ, ಉಗ್ರದೇವತೆಯ ಪೂಜಾರಿ ಎಂದರ್ಥ. ಬಲಿ ಕಾರಣದಿಂದ ದೇವೇಂದ್ರನೆ ಜನ್ಮಾಂತರದಲ್ಲಿ ಪ್ರಾಯಶ್ಚಿತ ರೂಪದಲ್ಲಿ ರಾಣಿಗನಾಗಿ, ಪೋತರಾಜನಾಗಿ ಹುಟ್ಟಿದ ಸಂಗತಿಯನ್ನು ವಚನ ಹೇಳುವಂತಿದೆ.

೪೧೫

ಕೋಟಿ ಬದಕು ಮಾಡಿದರೇನು
ತೋಟಿಗನ ಸರಿಯಲ್ಲ
ಬ್ಯಾಟಿಕಾರನದು ಬದುಕಲ್ಲ, ಬಸವಣ್ಣ

ತಾತ್ಪರ್ಯ: ತೋಟಿಗ ಅಂದರೆ ಹಳ್ಳಿಯಲ್ಲಿ ಸಾರ್ವಜನಿಕ ಸ್ಥಳಗಳ ಕಸಗುಡಿಸುವವನ ಬದುಕೇ ಪಾವನವಾದದ್ದು. ತನ್ನ ಶ್ರಮದಿಂದ ಊರನ್ನಾದರೂ ನಿರ್ಮಲವಾಗಿಸುತ್ತಾನೆ. ಸ್ವಚ್ಛವಾಗಿಡುತ್ತಾನೆ. ಕೋಟಿ ಬದುಕು ಎತ್ತಿ ಬಂದರೂ ಅಥವಾ ಕೋಟ್ಯಾಧೀಶನಾಗಿದ್ದರೂ ತನ್ನ ಮನಸ್ಸನ್ನು ತನಗೆ ನಿರ್ಮಲವಾಗಿ ಇಟ್ಟುಕೊಳ್ಳಲಾಗಲಿಲ್ಲ. ದಿನನಿತ್ಯ ಕಾಡುಪ್ರಾಣಿಗಳೊಂದಿಗೆ ಎದುರಾಗುವ ಬ್ಯಾಟಿಕಾರನ ಬದುಕು ಅಸ್ಥಿರವಾದದ್ದು ಮತ್ತು ರಕ್ತಸಿಕ್ತವಾದದ್ದು. ಯಾರಿಗೂ ತೊಂದರೆ ಕೊಡದೆ ತಾನೇ ತಾನಾಗಿ ಊರಿನ ನೈರ್ಮಲ್ಯಕ್ಕಾಗಿ ನಿಸ್ವಾರ್ಥದಿಂದ ದುಡಿವ ತೋಟಿಗನೇ ಇವರಿಬ್ಬರಿಗಿಂತ ಮೇಲು ಎಂಬುದು ವಚನದ ಭಾವ.

೪೧೬

ಬೇಡಿದರೆ ಕೊಡದಂಥಾ ಪಾಪಿಗಳ ಬದುಕನು
ಬ್ಯಾಡರಿಗೆ ಹಚ್ಚಿ ಸುಲಿಸುವನು ನೋಡ
ಬಲ್ಲವರ ದೃಷ್ಟಕ್ಕೆ ಸಾಕ್ಷಿ, ಬಸವಣ್ಣ

ತಾತ್ಪರ್ಯ : ತಾ ಎಂದು ಕೇಳಿದರೆ ತಗೋ ಎಂದು ಶಿವನೇ ಕೊಡುವವನಿರುವಾಗ ಮರ್ತ್ಯದಿ ಮಾನವರಿಗೆ ಅದೆಂತಹ ಅಹಂಕಾರ. ಇದ್ದವನಲ್ಲಿ ಇಲ್ಲದ ಮನುಷ್ಯ ಬಂದು ಕೈಯೊಡ್ಡಿ ಬೇಡಿದರೂ ಕೊಡದಂಥ ಪಾಪಿಗಳ ಬದುಕನ್ನು ಅವರ ದೇಹವನ್ನು ಬೇಡರಿಗೆ ಹಚ್ಚಿ ಸುಲಿಸುವೆನು. ಇದಕ್ಕೆ ತಿಳಿದವರೆ ಸಾಕ್ಷಿ ಎನ್ನುವಲ್ಲಿ ಮೌನೇಶ್ವರರು ಸ್ವಾರ್ಥ ಮತ್ತು ಅದರ ಮರ್ಧನದ ಸಂಗತಿಗಳನ್ನು ವಿವರಿಸುತ್ತಾರೆ. ಹಂಚಿ ತಿನ್ನುವುದು ಮನುಷ್ಯ ಸ್ವಭಾವವಾಗಬೇಕು ಎಂಬುದು ವಚನದ ಭಾವ.

೪೧೭

ಶಿರ ಸಾಹೇಬನ ದುರಾಯಿ ಪರಶಿವನಾಣೆ
ಮೀರಿ ನಡೆದರೆ ಕೈಕಾಲು ಕೊಯ್ಯಬೇಕು, ಬಸವಣ್ಣ

ತಾತ್ಪರ್ಯ : ಸ್ವಾಮಿಭಕ್ತಿಯ ನಿಷ್ಠೆಯನ್ನು ವಚನ ವಿವರಿಸುತ್ತದೆ. ಆಳಾದವನು ಒಡೆಯನಿಗೆ ನಿಷ್ಠನಾಗಿರಬೇಕು. ಅನ್ನ ಕೊಡುವ ಧನಿಗೆ ಧ್ವನಿಯಾಗಿರಬೇಕು. ಒಂದು ವೇಳೆ ಸಾಹೇಬನ ಅಣತಿಯನ್ನು ಮೀರಿ ನಡೆದರೆ, ವಿರೋಧ ಕಟ್ಟಿಕೊಂಡರೆ ಶಿವನಾಣೆ ಅಂತವನನ್ನು ಸುಮ್ಮನೆ ಬಿಡದೆ ಅವನ ಕೈಕಾಲು ಕೊಯ್ಯಬೇಕು ಎನ್ನುವಲ್ಲಿ ಸ್ವಾಮಿದ್ರೋಹಕ್ಕೆ ಬೇಕಾದ ಶಿಕ್ಷೆಯನ್ನು ಕಾಣುತ್ತೇವೆ. ದ್ರೋಹವೇ ಜಗತ್ತಿನ ನೀತಿಯಾಗಿರುವ ಹೊತ್ತಿನಲ್ಲಿ ವಚನ ವಿಶಿಷ್ಟವೆನಿಸುತ್ತದೆ.

೪೧೮

ನಾಯಿ ನಂಜು ಇಳುಹಿದ
ಹಾವಿನ ಕುಂದುಗಳು ಇಳುಹಿದ
ಸ್ವಾನ ಮೃಗಗಳ ಇಳುಹಿದ ಮೇಲೆ
ಕೆರವೆನ್ನಬಹುದೆ ಮನಿದೇವರು, ಬಸವಣ್ಣ

ತಾತ್ಪರ್ಯ : ನಾಯಿ ಹಾವು ಮುಂತಾದ ಪ್ರಾಣಿಗಳಿಂದ ಬಂದಿದ್ದ ಆಪತ್ತುಗಳನ್ನು ಸಂಕಟಗಳನ್ನು ಪರಿಹರಿಸಿದ ಮನೆ ದೇವರನ್ನು ಸ್ಥಿರಿಸದೆ ಆತನನ್ನು ಕೆರವಿಗಿಂತ ಕಡೆ ಮಾಡಬಹುದೆ. ಅಂದರೆ ಮನೆ ದೇವರನ್ನು ನಿಕೃಷ್ಟಗೊಳಿಸಿ ಹೊರಗಿನ ದೈವಗಳಿಗೆ ನಡೆದುಕೊಳ್ಳುವವರನ್ನು ವಚನ ಟೀಕಿಸುತ್ತದೆ. ಮನೆ ಮನ ಗೆಲ್ಲದೆ ಊರು, ಗೆಲ್ಲಲು ಎಳೆಸುವ ಬಡಿವಾರದವರ ಮೂರ್ಖತನವನ್ನು ವಚನ ಹೇಳುತ್ತದೆ.

೪೧೯

ಕುಕ್ಷವೆ ಗುರುವು ತನಗೆ ಭಿಕ್ಷವೇ ಶಿಷ್ಯನು
ಲಕ್ಷ್ಮಿಯಿಂದ ಐಶ್ವರ್ಯವು ಜ್ಞಾನಕ್ಕೆ
ಅಕ್ಷರವೆ ಮೊದಲು, ಬಸವಣ್ಣ

ತಾತ್ಪರ್ಯ : ಬಾಲ್ಯದಲ್ಲಿ ಅಕ್ಷರಭ್ಯಾಸದ ಶುಷ್ಕತೆಯನ್ನೇ ನಿರಾಕರಿಸಿ ಆತ್ಮಜ್ಞಾನಕ್ಕೆ ಸರಿದ ಮೌನೇಶ್ವರರ ಈ ವಚನ ಸ್ವಲ್ಪ ಸಂಕೀರ್ಣವೆನಿಸುತ್ತದೆ. ಬಹಳಷ್ಟು ಸಲ ಅಕ್ಷರ ಮತ್ತು ಅದರಲ್ಲಿ ಮಡುಗಟ್ಟಿ ನಿಂತ ವೇದಶಾಸ್ತ್ರಗಳನ್ನೇ ನಿರಾಕರಿಸುತ್ತಾರೆ. ಆದರೆ ಇಲ್ಲಿ ಜ್ಞಾನಕ್ಕೆ ಅಕ್ಷರವೇ ಮೊದಲೆಂದು ಹೇಳುತ್ತಾರೆ. ಗುರು ಕಲ್ಪನೆಯನ್ನೇ ಈ ವಚನ ಹೊಸದಾಗಿ ಕಟ್ಟಿಕೊಡುತ್ತದೆ. ಗುರುವಿನ ಬಾಹ್ಯ ಗುರುತನ್ನು ನಿರಾಕರಿಸುತ್ತದೆ. ಕುಕ್ಷಿ ಅಂದರೆ ಹೊಟ್ಟೆಯೇ ಗುರು, ಭಿಕ್ಷವೇ ಶಿಷ್ಯ, ಲಕ್ಷ್ಮೀಯಿಂದ ಐಶ್ವರ್ಯ ಎನ್ನುವಲ್ಲಿ ಹಸಿವು ಮತ್ತು ನೀರಡಿಕೆಗಳು ಅದಕ್ಕಾಗಿ ಮಾಡುವ ತಿರುಗಾಟಗಳೇ ಬದುಕಿನ ನೆಲೆಗಳನ್ನು ನಿರ್ಧರಿಸುತ್ತವೆ. ದೇಶ ತಿರುಗಿ ಪಡೆದ ಸ್ವ–ಅನುಭವವೇ ಅನುಭಾವಿಗಳ ಮೂಲದ್ರವ್ಯ. ಹೀಗಾಗಿ ಅಕ್ಷರದ ಜೊತೆಗೆ ಜಗತ್ತಿನ ಜೀವನ ಪಾಠ ಶಾಲೆಯಲ್ಲಿ ಪಡೆಯುವ ಸ್ವಾನುಭವ ಮನುಷ್ಯನನ್ನು ಅನುಭಾವಿಯಾಗಿಸುತ್ತದೆ ಎನ್ನುವ ಭಾವ ವಚನದ್ದು.

೪೨೦

ರಾಶಿ ಹೊನ್ನು ಕೊಟ್ಟರೆ ಎನ್ನ ಆಶೆ ಹಿಂಗುವುದೆ
ಸಾಸಿರ ಮಂದಿ ಸತಿಯರ ಕೊಟ್ಟರೆ
ಹೇಸಲಿಲ್ಲವು ಎನ್ನಯ ಹೊಲಿ ಜನ್ಮ
ಕಾಸನೂ ಕೊಡಬೇಡ ಹೊಟ್ಟಿಲಿ ಹುಟ್ಟಿದ
ಕೂಸನು ಇಡಗೊಡಬೇಡ
ಏಸೇಸು ಕಾಲ ನಿನಗೆ ಶರಣೆಂಬೆನು, ಬಸವಣ್ಣ

ತಾತ್ಪರ್ಯ : ಸಂಸಾರ ತ್ಯಾಗದ ಮಾತಿನಂತೆ ಈ ವಚನ ಕಾಣುತ್ತದೆ. ಲೌಕಿಕ ಸುಖ ಮತ್ತು ಬಯಕೆಗಳಾದ ಹೊನ್ನಿನ ರಾಶಿ, ಸಾವಿರ ಮಂದಿ ಸತಿಯರು ಭೋಗ ಜೀವನದಿಂದಾಗಿ ಈ ಜೀವಕ್ಕೆ ಹೇಸಿಕೆ ಬರಲಿಲ್ಲ, ನಾಚಿಕೆ ಆಗಲಿಲ್ಲ. ಭೋಗವೂ ಬೇಡ, ಸಂಪತ್ತು ಬೇಡ, ಸಂಸಾರ ಬೇಡ, ಹೊಟ್ಟಿಲಿ ಹುಟ್ಟಿದ ಕೂಸನೂ ಉಳಿಸಬೇಡ, ಅದರ ಬದಲಾಗಿ ಸದಾ ನಿನ್ನ ಚರಣ ದಾಸನನ್ನಾಗಿಸಿಕೊಂಡು ಕೃಪೆ ಮಾಡು ಶಿವನೆ ಎನ್ನುತ್ತಾರೆ. ಇದರಿಂದ ಮೌನೇಶ್ವರರು ಗೃಹಸ್ತರಾಗಿದ್ದರೆ ಎನ್ನುವ ಅನುಮಾನ ಸುಳಿಯದಿರದು.

೪೨೧

ನಾಡದೇಶ ಫಿರೋಜಾಬಾದ ಪಟ್ಟಣ
ಗುರುಮನಿ ಗೋಗಿ ಅರಮನಿ ರಾಯಚೂರ
ಬರಿಮನಿ ಮುದಗಲ್ಲು ಹಾನಿ ಹಾನಗಲ್ಲು
ಹೀನ ಬಂಕಾಪುರ ಕಾನನವಲ್ಲವೆ ಮಲದೇಶ
ಇದು ನಮ್ಮ
ಮೋನಯ್ಯಗೆ ದೂರ ಮರುಳರು
ಜ್ಞಾನಕ್ಕೆ ದೂರ ದುರುಳರು
ಅಲ್ಪ ಆನೆಗುಂದಿ ಸ್ವಲ್ಪ ಸಾಹೇಬರೆ
ಅದರ ಕಲ್ಪನೆ ಇಷ್ಟುಕಾಣಾ, ಬಸವಣ್ಣ

ತಾತ್ಪರ್ಯ : ಪ್ರಸ್ತುತ ವಚನ ತನ್ನ ಕಾಲದ ರಾಜ ರಾಜಧಾನಿ ಗುರುಮನಿ ಪ್ರಮುಖ ನಗರಗಳು ಮತ್ತು ಅವು ಅವಸಾನವಾದ, ಸಂಗತಿಗಳನ್ನು ಸೂಚಿಸುವಂತಿದೆ. ಆದಿಲ್ ಶಾಹಿಗಳು ಮತ್ತು ಅವರ ಸ್ಥಳೀಯ ಆಡಳಿತ ಭಾಗಗಳು ಅಲ್ಲಿನ ಪ್ರಮುಖರು ನಾಶವಾಗಿ ಹೈದ್ರಾಬಾದ್ ನಿಜಾಮನ ಆಡಳಿತ ಆರಂಭವಾದದ್ದನ್ನು ಸೂಚಿಸುತ್ತಿರ ಬಹುದೆ? ಇಲ್ಲಿ ಬರುವ ಗುರುಮನಿ ಗೋಗಿ ಅರಮನಿ ರಾಯಚೂರು ಇವು ಇನ್ನಷ್ಟು ವಿವರಗಳನ್ನು ಖಚಿತ ಆಧಾರಗಳನ್ನು ನಿರೀಕ್ಷಿಸುವಂತಿವೆ. ಇಲ್ಲಿದ್ದದ್ದು ಯಾರ ಗುರುಮನಿ, ಯಾರ ಅರಮನಿ ಎಂಬುದು ಇತಿಹಾಸದ ಶೋಧ ಬಯಸುತ್ತದೆ.

ಮರುಳರು ತತ್ವಜ್ಞಾನಿಯಾದ ಮೌನೇಶ್ವರರಿಂದಲೂ ದುರುಳರು ಜ್ಞಾನವಂತ ರಿಂದಲೂ ದೂರ ಇರುತ್ತಾರೆ. ಸಮೀಪ ಬರಲಾರರು. ಅಲ್ಪ ಆನೆಗುಂದಿ ಸ್ವಲ್ಪ ಸಾಹೇಬರು ಕಲ್ಪನೆ ಇಷ್ಟು ಕಾಣಾ ಎನ್ನುವುದು ತುಂಬ ಸಂಕೀರ್ಣ ಸಂಗತಿಗಳನ್ನು ಹೇಳುತ್ತವೆ. ಈ ಕುರಿತು ಹೆಚ್ಚಿನ ಶೋಧದ ಅಗತ್ಯವಿದೆ.

೪೨೨

ಕೊಟ್ಟು ಕಸಕೊಂಬುವರು ಕೆಟ್ಟ ಗುಣದಲಿ ಶಿವನು
ಕಟ್ಟಿ ರಾವಣನ ದಶಶಿರವ ಲಂಕೆಯಲಿ
ಕೊರದಿಟ್ಟರಾಕ್ಷಣದಿ, ಬಸವಣ್ಣ

ತಾತ್ಪರ್ಯ : ಮಾಡಿದ್ದ ದಾನವನ್ನು ನೀಡಿದ ವಸ್ತುವನು ಕೊಟ್ಟು ಮತ್ತೆ ಕಸಗೊಂಡ ವರಿದ್ದಾರೆ. ಕೆಟ್ಟತನದ ಕಾರಣವಾಗಿ ರಾವಣನ ಹತ್ತು ತಲೆಗಳನ್ನು ಸಮುದ್ರಕ್ಕೆ ಸೇತುವೆ ಕಟ್ಟಿ ಕ್ಷಣಾರ್ಧದಲ್ಲಿ ಹೊಡೆದು ಉರುಳಿಸಿದವರು. ರಾವಣನ ಅಹಂಕಾರ ಮತ್ತು ಅಜ್ಞಾನದಿಂದಾಗಿ ಲಂಕೆ ಹಾಗೂ ರಾವಣ ನಾಶವಾದರು ಎಂಬುದರ್ಥ.

೪೨೩

ತುತ್ತು ಮಾಡಿ ಉಣಲಿಲ್ಲ ತುತ್ತಲ್ಪಯೆತ್ತಿ ಉಣಲಿಲ್ಲ
ಸತ್ತಿಗಿ ಅಪ್ಪಾಗಿರಿಯು ಸೌಕರ್ಯದ ಪೂಜಿಯು
ಕಣ್ಣೆತ್ತಿ ನೋಡುವುದೆ, ಬಸವಣ್ಣ

ತಾತ್ಪರ್ಯ : ಪರಿಪೂರ್ಣತ್ವಕ್ಕೆ ಆಡಂಬರ ಒಗ್ಗುವುದಿಲ್ಲ. ಲೋಕದ ಎಲ್ಲ ಲೌಕಿಕ ನೆಲೆಗಳನ್ನು ದಾಟಿ ಬಂದವನಿಗೆ ಪ್ರಭುತ್ವ ಗುರುತಾದ ಸತ್ತಿಗೆ ಆಪ್ಪಾಗಿರಿ ಅಂದರೆ ಛತ್ರಿ ಚಾಮರಗಳ ವೈಭೋಗಗಳು ತೃಣ ಸಮಾನವಾಗಿ ಕಾಣುತ್ತವೆ. ತುತ್ತು ಮಾಡಿ ಉಣಲಿಲ್ಲ ತುತ್ತಲ್ಪಯೆತ್ತಿ ಉಣಲಿಲ್ಲ ಎನ್ನುವಲ್ಲಿ ಇರುವ ಭೋಗವ ಬಿಟ್ಟು ಬಂದವಗೆ ಇರದೇ ಇರುವ ಅಂದರೆ ಆಯತವಾಗಿ ಬರುವ ಭೋಗಭಾಗ್ಯಗಳು ಬೇಡವೆನ್ನುವುದು ಇಲ್ಲಿನ ಭಾವ.

೪೨೪

ಗೌಡ ಕುಲಕರಣಿಗಳು ತೌಡು ಭಕ್ಷಿಸಲೇಸು
ಚೌಡಕಿಯ ಹೊತ್ತು ತಿರಿದುಣಲು ಅವರಿಗೆ
ಔಡಲದಷ್ಟು ಅಭಿಮಾನ, ಬಸವಣ್ಣ

ತಾತ್ಪರ್ಯ : ಊರನಾಳುವ ಪ್ರಮುಖರಾದ ಗೌಡ ಕುಲಕರಣಿಗಳು ತಮ್ಮ ಸ್ವಾರ್ಥ ಹಾಗೂ ಅಜ್ಞಾನದಿಂದ ಅಲ್ಲದ ಕೆಲಸ ಮಾಡಿದ್ದರಿಂದ ಚೌಡಕಿ ಹೊತ್ತು ಜೋಗತಿಯ ರಂತೆ ಊರೂರು ತಿರುಗಿ ಭಿಕ್ಷೆ ಎತ್ತಿ ಉಣಬೇಕಾಯಿತು. ಅಂದರೆ ಗೌಡ ಕುಲಕರಣಿ ಗ್ರಾಮಾಡಳಿತದ ಪ್ರಮುಖ ಆಧಾರ ಸ್ಥಂಭಗಳು. ಅವರು ಜೀವ ವಿರೋಧಿ ನೆಲೆ ಗಳಿಂದಾಗಿ ತಮ್ಮ ಅನ್ನ ಹಾಗೂ ಅಧಿಕಾರ ಗೌರವಗಳನ್ನು ಕಳೆದುಕೊಂಡು ಬದುಕುವಂತಾಯಿತು.

೪೨೫

ವರವಿಯೊಳು ವಾಸವಾಗಿರುವ ಮೋನಯ್ಯನ
ಚರಣಕಮಲವನು ಸ್ಮರಿಸಿದರೆ ಸಪ್ತಜನ್ಮದ
ದುರಿತ ಕಂಟಕವು ಪರಿಹಾರ, ಬಸವಣ್ಣ

ತಾತ್ಪರ್ಯ : ಇದು ಸೇರಿದ ವಚನವಾಗಿರುವಂತಿದೆ. ಮೌನೇಶ್ವರರು ಬರೆದುದಕ್ಕಿಂತ ಅವರ ಕುರಿತು ಬರೆದಿರುವಂತಿದೆ. ವರವಿಯೊಳು ವಾಸವಾಗಿರುವ ಮೋನಯ್ಯನ ಚರಣ ಕಮಲವ ಸ್ಮರಿಸಿದರೆ ಏಳೇಳು ಜನ್ಮದ ದುರಿತ ಕಂಟಕವು ಪರಿಹಾರ ಎನ್ನುವ ಭಾವ ಇಲ್ಲಿನದು. ಕರ್ಮ ಮತ್ತು ಪುನರ್‌ಜನ್ಮಗಳ ಬಗ್ಗೆ ಖಡಕ್ಕಾಗಿ ಮಾತನಾಡುವ ಮೌನಯ್ಯನವರ ಸ್ವಭಾವಕ್ಕೆ ಹೊಂದದ ವಚನವಿದು.

೪೨೬

ಮಳೆಗೆ ಜೋಯಿಸರಿಲ್ಲ ಇಳೆಗೆ ನಿಷೇಧವಿಲ್ಲ
ಹೊಳೆಯ ನೀರಿಗೆ ಆಳವಿಲ್ಲ ರಾಜರಿಗೆ
ತಿಳಿವಳಿಕೆ ಇಲ್ಲ, ಬಸವಣ್ಣ

ತಾತ್ಪರ್ಯ: ನಿಸರ್ಗದ ವಸ್ತುಗಳಾದ ಮಳೆ, ನಕ್ಷತ್ರ ಮತ್ತು ಭೂಮಿ ಯಾರ ಗುಲಾಮರೂ ಅಲ್ಲ. ಅವು ಸ್ವತಂತ್ರ ಸತ್ಯಗಳು. ಇಂಥ ಪ್ರಾಕೃತಿಕ ಸತ್ಯಗಳನ್ನು ಜೋತಿಷ್ಯ ಹಾಗೂ ವಾಸ್ತುವಿನ ಹೆಸರಿನಲ್ಲಿ ನಿರ್ಬಂಧಿಸುವುದು, ಪಂಚಾಂಗದಂತೆ ನಿಯಂತ್ರಿ ಸುವುದು ಸಾಧುವಲ್ಲ. ಮಳೆ ಬರುವುದು ಬಿಡುವುದು ಅದು ಪ್ರಕೃತಿ ಕೆಲಸ, ಜೋಯಿಷರ ಪಂಚಾಂಗದಂತೆ ಬರುವುದಿಲ್ಲ. ಭೂಮಿ ಮಡಿ ಮೈಲಿಗೆ ಮುಂತಾದ ಮನುಷ್ಯ ನಿರ್ಮಿತ ವಿಂಗಡಣೆಗಳಿಗೆ ಮೀರಿದ್ದು, ಅದರ ಮೇಲೆ ಮನುಷ್ಯ ಹಕ್ಕು ಸ್ಥಾಪಿಸುವುದು ಕ್ಷಣಿಕವಾದದ್ದು. ಅದೇ ರೀತಿ ಹರಿಯುವ ನೀರಿಗೆ ಆಳವಿರುವುದಿಲ್ಲ. ಅಜ್ಞಾನವಶಾತ್ ಇದೆಲ್ಲವೂ ನನ್ನ ಸ್ವಾಧೀನ ಎನ್ನುವ ರಾಜನಿಗೆ ತಿಳಿವಳಿಕೆ ಇರುವುದಿಲ್ಲ. ಭ್ರಮಾಧೀನತೆ ಮತ್ತು ಮನುಷ್ಯ ಅಹಂಕಾರಗಳು ಪ್ರಕೃತಿ ಸತ್ಯಗಳ ಮೇಲೆ ಸ್ಥಾಪಿಸುವ ಹಕ್ಕಿನ ಸಂಗತಿಯನ್ನು ವಚನ ಹೇಳುತ್ತದೆ.

೪೨೭

ಜನರಿಂದ ಜಾತ್ರಿಯು ವನದಿಂದ ಕಪಿ ಬಲವು
ಧಣಿಯಿಂದ ಧರ್ಮವಾಸನವಿರಲು ಮಳೆಬೆಳೆಯಿಂದ
ತನುವಿಹುದು ರಾಜ್ಯ, ಬಸವಣ್ಣ

ತಾತ್ಪರ್ಯ: ಜಾತ್ರೆಗೆ ಜನವಿದ್ದರೇ ಚಂದ ವನಕ್ಕೆ ಕಪಿಗಳಿದ್ದರೆ ಭೂಷಣ. ಮಳೆ ಬೆಳೆಗಳು ಈ ಲೋಕದ ಸಕಲ ಜೀವಿಗಳಿಗೆ ಪೋಷಣೆಗೆ ಒತ್ತಾಸೆಯಾಗಿ ಲೋಕದ ನಡೆಗೆ ಕಾರಣವಾಗಬೇಕು. ಧನಿ ಅಂದರೆ ಹಣವಂತ ಧರ್ಮಮಾರ್ಗಿಯಾಗಿದ್ದರೆ ನಾಡು ಸುಭಿಕ್ಷವಾಗಿರುತ್ತದೆ. ಮನುಷ್ಯ ಅಹಂಕಾರಿಯಾಗಬಾರದು, ಸಾತ್ವಿಕನಾಗಬೇಕು. ಅಂದಾಗ ಮಾತ್ರ ಈ ಲೋಕ ಸುಗುಣಾತ್ಮಕವಾಗಿರುತ್ತದೆ.

೪೨೮

ಲಕ್ಷ್ಮೀಯ ಸುತನಿಗೆ ಸಾಕ್ಷಾತ ಗುರು ಕೃಪೆಯು
ಲಕ್ಷಾಂತ್ರ ದುಷ್ಕರ್ಮ ಬರಲು ಪಾರಾಗುವವು
ನಕ್ಷತ್ರದೊಳಗೆ ಶಶಿಪ್ರಭೆಯು, ಬಸವಣ್ಣ

ತಾತ್ಪರ್ಯ: ಗುರುಬಲ ಮತ್ತು ದೈವಬಲದ ಚರ್ಚೆಯಿಲ್ಲಿದೆ. ಸಾಕ್ಷಾತ್ ಲಕ್ಷ್ಮಿ ಪುತ್ರನಿಗೆ ಅಂದರೆ ಶ್ರೀಮಂತನಿಗೆ ಲಕ್ಷ್ಮಿ ಕಟಾಕ್ಷ ಮಾತ್ರವಿದ್ದರೆ ಸಾಲದು. ಅವನಿಗೆ

ಗುರುಭೋದೆ ಬೇಕೆ ಬೇಕು. ಗುರುಕೃಪೆಯಿಂದ ಸಿಗುವ ವಿದ್ಯೆ ವಿವೇಕಗಳು ಮನುಷ್ಯನನ್ನು ವಿಚಾರವಂತನನ್ನಾಗಿಸುತ್ತವೆ. ಸ್ವತಂತ್ರ ವಿಚಾರವಂತನು ಸೂಕ್ಷ್ಮಮತಿಯುಳ್ಳವನು ಎಂಥ ಸಂಕಷ್ಟಗಳನ್ನು ಎದುರಿಸಿ ಪಾರಾಗುತ್ತಾನೆ. ಅಲ್ಲದೆ ನಕ್ಷತ್ರದಂತೆ ಪ್ರಕಾಶಿಸುತ್ತಾನೆ. ಶ್ರೀಮಂತಿಕೆ ಮತ್ತು ವಿದ್ಯೆಗೆ ಇರುವ ವ್ಯತ್ಯಾಸವನ್ನು ವಚನ ಹೇಳುತ್ತದೆ. ವಿತ್ತಕ್ಕಿಂತ ವಿದ್ಯೆ ದೊಡ್ಡದು.

೪೨೯

ಇಪ್ಪತ್ತೇಳು ಕೋಟಿ ಮುಕ್ಕಣ್ಣನ ಶರಣರ
ಬಚ್ಚಲದ ಬಾಲ್ಬುಳವ ಮಾಡೆಂದು
ಗುರುರಾಯ ನಿಮಗೆ ನಮೊ ನಮೊಯೆಂಬೆ, ಬಸವಣ್ಣ

ತಾತ್ಪರ್ಯ : ಕಿಂಕರತ್ವದ ಸ್ವಭಾವ ಹೇಳುವ ವಚನವಿದಾಗಿದೆ. ಮೌನೇಶ್ವರರು ಮಹಾ ಜ್ಞಾನಿಗಳಾಗಿದ್ದರೂ ಅಹಂಕಾರಿಗಳಾಗಿರಲಿಲ್ಲ. ಪದೇ ಪದೇ ಅವರು ತಮ್ಮನ್ನು ಸ್ವವಿಮರ್ಶೆಗೆ ಒಡ್ಡಿಕೊಳ್ಳುತ್ತಲೇ ಬರುವುದನ್ನು ಬಹಳಷ್ಟು ವಚನಗಳಿಂದ ಕಾಣ ಬಹುದು. ಇಲ್ಲೂ ಕೂಡ ಇಪ್ಪತ್ತೇಳು ಕೋಟಿ ಶಿವಶರಣರ ಬಚ್ಚಲದ ಬಾಲುಳಗಳನ್ನು ಮಾಡಿ ಸಲಹು, ಗುರುರಾಯ ಕೃಪೆ ತೋರಿ ಕಾಪಾಡು ಎನ್ನುವುದು ನಿರಹಂಕಾರ ಗುಣದೊಂದಿಗೆ ಸಕಲ ಜೀವಜಂತುಗಳು ಈ ಭೂಮಿಯಲ್ಲಿ ಬದುಕುವ ಹಕ್ಕನ್ನು ಪಡೆದಿರುವುದನ್ನು ಪ್ರತಿಪಾದಿಸುತ್ತಾರೆ.

೪೩೦

ಒಂದು ಹೊತ್ತುಗಳ್ಯಾಕೆ ವೃಂದಾವನದ ಮಡಿಯಾಕೆ
ಸಂಧ್ಯಾನವ್ಯಾಕೆ ಜಪತಪಗಳವು ಯಾಕೆ ತನ್ನ ಮನದೊಳಗಿನ
ನಿಂದೆ ಸೂತಕವನೊಂದು ಬಿಡದನಕ, ಬಸವಣ್ಣ

ತಾತ್ಪರ್ಯ : ಮನುಷ್ಯನ ಮನಸ್ಸು ವಿವಿಧ ಲೌಕಿಕ ಬಯಕೆಗಳಲ್ಲಿ ಸಿಲುಕಿ ಸಂಭ್ರಮಿಸಿದಂತೆ ಪ್ರಯಾಸವನ್ನು ಪಡುತ್ತದೆ. ಅಂತ ವಿಪರೀತ ಆಶೆಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಉಪವಾಸ ಮಾಡುವುದು ಮಡಿ ಹುಡಿ ಮಾಡುವುದು ಬೃಂದಾವನ ಪೂಜಿಸುವುದು, ಸಂಧ್ಯಾ ವಂದನೆ, ಜಪ ತಪ ಮಾಡುವುದು ವ್ಯರ್ಥ. ಮನದ ಸೂತಕವನ್ನು ಕಳೆಯದೆ ಮೈಯ ಕೊಳೆ ತೊಳೆದರೆ ಪ್ರಯೋಜನವಿಲ್ಲ. ಅಂತರಂಗ ಮತ್ತು ಬಹಿರಂಗ ಶುದ್ಧಿಗಳೆರಡು ನರನನ್ನು ಹರನನ್ನಾಗಿಸುತ್ತವೆ ಎನ್ನುವುದು ಇಲ್ಲಿನ ಅರ್ಥ.

೪೩೧

ಒಂತಿನ ನರನಲ್ಲ ತಂತ್ರಿ ಅನಿಮಿಷಯ್ಯ
ಸಿಂತ್ರ ಮಾತ್ರವನು ಹಿಡಿವನೇ ಬಸವಯ್ಯ

ನಿಂತು ನಿಂತಲ್ಲಿ ಪರುಷ ಪಾವನ
ಅನಂತ ನಾಮದ ಜಗದೀಶ, ಬಸವಣ್ಣ

ತಾತ್ಪರ್ಯ : ಪೂರ್ಣತ್ವ ಪಡೆದ ಯೋಗಿಯು ಎಂಥ ಸಂದರ್ಭದಲ್ಲಿಯೂ ವಿಚಲಿತನಾಗಬಾರದು. ತನ್ನ ತಂತ್ರ ಸಿದ್ಧಾಂತಗಳಿಗೆ ಬದ್ಧನಾಗಿ ಯುಕ್ತಿಯಿಂದ ವಿವೇಕದಿಂದ ಬದುಕಬೇಕು. ಹೀನವಾದ ಕೆಲಸಗಳಿಗೆ, ಯೋಚನೆಗಳಿಗೆ ಇಳಿಯಬಾರದು. ಹೋದಲ್ಲಿ ಬಂದಲ್ಲಿ ಹರುಷ ಮತ್ತು ಆನಂದಗಳನ್ನು ಉಕ್ಕಿಸುವವನಲ್ಲದೇ, ಬೇಡಿದ್ದನ್ನು ಕೊಡುವ ಪುಣ್ಯಪ್ರದವಾಗಿದ್ದನ್ನು ಮಾಡಲು ಶಕ್ತನಾಗುತ್ತಾನೆ. ಅಂತವನು ಅನಂತ ನಾಮದ ಜಗದೀಶನಿಗಿಂತಲೂ ಮಿಗಿಲು. ಅವನೇ ಅನಿಮಿಷ ಲಿಂಗ.

೪೩೨

ಮೋಡೆಲ್ಲ ಮಳೆಯಾಗಿ ನಾಡೆಲ್ಲ ಬೆಳೆಯಾಗಿ
ಚಾಡಿಗಾರರೆಲ್ಲರ ಕುಲಕ್ಷಯವಾಗಿ
ನಾಡಿಗೆ ಒಬ್ಬ ಅರಸಾಗಿ ಅಂದಿಗೆ
ಚಲೋ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಮನುಷ್ಯ ನಿರ್ಮಿತ ಹಲವಾರು ಸಮಸ್ಯೆಗಳಿಂದ ಇಡೀ ಪ್ರಕೃತಿ ಮತ್ತು ಮನುಷ್ಯ ಲೋಕ ಇಂದು ಹೊತ್ತಿ ಉರಿಯುತ್ತಿವೆ. ಇದರ ಕೊನೆ ಎಂದರೆ ಪ್ರಳಯ ಮತ್ತು ನಾಶ. ನಂತರ ಹೊಸ ಸೃಷ್ಟಿ. ಇಂಥ ಹೊಸ ಸೃಷ್ಟಿಯಲ್ಲಿ ಬಂಜೆಯಾಗಿದ್ದ ಮೋಡಗಳು ತುಂಬಿಕೊಂಡು ಮಳೆ ಸುರಿಸುತ್ತವೆ. ಅದರಿಂದಾಗಿ ಬರಡಾದ ಭೂಮಿ ಬೆಳೆದು ನಾಡೆಲ್ಲ ಫಲವಾಗುತ್ತದೆ. ಚಾಡಿಕಾರರು ಮನೆ ಮುರುಕರ ವಂಶವೇ ನಾಶವಾಗಿ ನಾಡಿಗೊಬ್ಬ ಧೀಮಂತ ನಾಯಕ ಬಂದು ಆಳ್ವಿಕೆ ಮಾಡುತ್ತಾನೆ ಎನ್ನುವಲ್ಲಿ ಪ್ರಕೃತಿಯ ನಾಶ ಮತ್ತು ಪುನರ್‌ಸೃಷ್ಟಿ ಕ್ರಿಯೆಗಳನ್ನು ಕಾಣಬಹುದು. ಮೌನೇಶ್ವರರೊಬ್ಬ ಆಶಾವಾದಿ. ಪುನರಚನಾವಾದಿ ಎನ್ನುವುದು ಗಮನಾರ್ಹ.

೪೩೩

ಅರ್ಥವಿಲ್ಲದ ಮಾತು ನಿರ್ತು ಇಲ್ಲದ ಶೀಲ
ಕರ್ತೃ ಇಲ್ಲದ ಕೈಲಾಸ ಈ ಮೂರು
ವ್ಯರ್ಥ ಕಾಣಯ್ಯ, ಬಸವಣ್ಣ

ತಾತ್ಪರ್ಯ : ಅರ್ಥವಿಲ್ಲದ ಮಾತು ನಿಷ್ಠೆಯಿಲ್ಲದ ಶೀಲ ಶಿವನಿಲ್ಲದ ಕೈಲಾಸ ಈ ಮೂರು ವ್ಯರ್ಥವಾದಂಥವು. ಮಾತು ಕೃತಿ ನಡವಳಿಕೆಗಳಿಗಿರಬೇಕಾದ ಔಚಿತ್ಯಗಳನ್ನು ವಚನ ತಿಳಿಸುವಂತಿದೆ.

೪೩೪

ಅಸಮಯ ರುದ್ರನು ಕುಶಲ ಸಂಸಾರನು
ಅಗಸನ ಮುಂದೆ ಮೈಲಿಗಿ ಹಾಕಿದರೆ
ಮಶಿಯ ತೊಳಿಯದಲೆ ಕೊಡುವನೆ
ಪಾಪದ ನುಸಿಗಳಿಗ್ಯಾಕೆ ಪರಮಾನ್ನ, ಬಸವಣ್ಣ

ತಾತ್ಪರ್ಯ : ಅಸಮಾನ್ಯನು ಕಾಲರುದ್ರನೂ ಆದ ಶಿವನಿಗೂ ಚತುರ ಸಂಸಾರಿಗನೂ ಆದ ಮನುಷ್ಯನಿಗೂ ಅಗಸಬೇಕು. ಅಗಸನ ಮುಂದೆ ಮೈಲಿಗೆ ಬಟ್ಟೆ ಹಾಕಿದರೆ, ಕೊಳೆಯಾದದ್ದನ್ನು ತೊಳೆಯದಲೇ ಕೊಡಲಾರನು. ಅಂಧಕಾರ, ಅಜ್ಞಾನವೆಂಬ ಲೋಕದ ಹೊಲಸನ್ನು ತೊಳೆಯ ಬಂದ ಅಗಸನ ಸ್ವರೂಪವೇ ಮೌನೇಶ್ವರರು. ಅವರ ಮಹತ್ವ ನರಲೋಕದ ಕ್ರಿಮಿಗಳಿಗೆ ತಿಳಿಯಲಾರದು.

೪

ಕುಲ ಪದ್ಧತಿ

೪೩೫

ಊರೆಲ್ಲ ನೆಂಟರು ಕೇರೆಲ್ಲ ಬಳಗ
ಧಾರುಣಿಯೆಲ್ಲ ಕುಲದೈವ, ಇದರೊಳಗೆ
ಯಾರನು ಬಿಟ್ಟು ಯಾರನು ಹಿಡಿಯಲಿ, ಬಸವಣ್ಣ

ತಾತ್ಪರ್ಯ : ಊರೆಲ್ಲ ಬಂಧುಗಳು ಕೇರಿಯ ತುಂಬಾ ಬಳಗದವರು ಈ ಪ್ರಪಂಚ ದಲ್ಲೆಲ್ಲಾ ಆವರಿಸಿರುವಾಗ ಇದರಲ್ಲಿ ಯಾರನು ಬಿಡಲಿ ಯಾರನು ಹಿಡಿಯಲಿ ಎಲ್ಲರೂ ನನ್ನವರೆ ಎನ್ನುವಲ್ಲಿ ಜಾತಿ, ಧರ್ಮ, ಕುಲ, ಮತ, ಹೆಣ್ಣು, ಗಂಡು ಎನ್ನುವ ಭೇದ ಮೀರಿದ ಅಖಂಡ ಪ್ರಜ್ಞೆ ಮೌನೇಶ್ವರರದು.

೪೩೬

ಕುಲುಮಿ ಹುಟ್ಟದ ಮುನ್ನ ಕುಲ ಛಲವೆಲ್ಲೈತಿ
ಹಲವು ಉದ್ಯೋಗ ಆಯುಧದ ಪರಿಹ್ಯಾಗೆ ಲೋಕದ
ಕಿಲುಮೆ ಕೀಟಕದ ಪುಳಗಳಿರ್ಯಾ ನಿಮ್ಮ
ಹಲವು ಶಾಸ್ತ್ರಗಳ ಬಿಡಬೇಕು, ಬಸವಣ್ಣ

ತಾತ್ಪರ್ಯ : ಕುಲುಮೆ ಮತ್ತು ಕಬ್ಬಿಣದ ಆವಿಷ್ಕಾರ ಮಾನವ ನಾಗರಿಕತೆಯ ಪ್ರತೀಕಗಳು. ಅವು ಹುಟ್ಟಿದ ಮೇಲೆ ಹಲವು ಉದ್ಯೋಗಗಳು, ಆಯುಧಗಳು ಸೃಷ್ಟಿಯಾದವು. ಉದ್ಯೋಗವನ್ನಾಧರಿಸಿ ವೃತ್ತಿ, ಜಾತಿ ಕುಲಗಳು ಬೆಳೆದವು ಹೊರತು ಹುಟ್ಟಿನಾರಂಭ ದಿಂದ ಜಾತಿ ಕುಲಗಳು ಬರಲಿಲ್ಲ. ಶಾಸ್ತ್ರ ಮತ್ತು ಧರ್ಮದ ಹೆಸರಿನಲ್ಲಿ ಜಾತಿ ಭೇದ ಮಾಡುವ ಜೀವ ವಿರೋಧಿ ಪ್ರವೃತ್ತಿಯವರಿಂದ ಮನುಷ್ಯ ಸಂಬಂಧಗಳು ಮೇಲು–ಕೀಳು ಪಡೆದವು.

೪೩೭

ಕುಲ ಹದಿನೆಂಟಕ್ಕೆ ಕುಲುಮಿಯೇ ಶಿಕ್ಷಾ ಗುರುವು
ಕಲಿಸಿತೇಳಯ್ಯ ವಿದ್ಯೆಯನು, ಮೃಷ್ಟಾನ್ನದ ರುಚಿಯು
ಮರೆಸಿತೇಳಯ್ಯ ವಾಯಿಯನು, ಬಸವಣ್ಣ

ತಾತ್ಪರ್ಯ: ಜಗತ್ತಿನ ಎಲ್ಲ ಕುಲ ಜಾತಿಗಳಿಗೆ ಕುಲುಮಿಯೇ ಶಿಕ್ಷಕ. ಕುಲಮಿ ಮತ್ತು ಕಬ್ಬಿಣ ಕೃಷಿ ಹಾಗೂ ಕುಲಕಸುಬುಗಳು ಸಮಾಜದ ಪ್ರವರ್ತಕ ಸಂಗತಿಗಳು ಇದರಿಂದಲೇ ಹದಿನೆಂಟು ಕುಲಗಳ ರೂಢಿಗೆ ಬಂದವು. ಕಬ್ಬಿಣದ ಬಳಕೆ ಶಿಲಾಯುಗದ ಮಾನವನಿಂದ ನಾಗರಿಕ ಮಾನವನನ್ನು ಬೇರ್ಪಡಿಸಿತು. ದುಡಿದು ಉಣ್ಣುವ ಸ್ವಾವಲಂಬಿತನ ಮನುಷ್ಯನಲ್ಲಿ ಮೋಸ ವಂಚನೆ ಕಪಟತನಗಳನ್ನು ಕಳೆದು ಹಾಕಿ ಸಮಸಮಾಜದ ಗುಣವನ್ನು ಕಲಿಸಿತು. ಆದರೆ ಇಂದು ಮನುಷ್ಯನ ಉಪಭೋಗಿ ಪ್ರವೃತ್ತಿಯು ಮನುಷ್ಯನ ದುಡಿಯುವ ಸ್ವಭಾವವನ್ನು ಸಾಮಾಜಿಕ ಅನುಬಂಧಗಳನ್ನು ಮರೆಸಿ ಸೋಮಾರಿಯಾಗಿಸಿದೆ.

೪೩೮

ಮಧುರ ಕೀಟಕದ ಹುಳುವು ಮಾಂಸದೊಳಗಿನ ಕ್ಷೀರ
ಮಲಹರನ ಶರಣರು ಹೊಲೆಯಲ್ಲಿ ಜನಿಸಿದರೆ
ಅಧಮ ಕುಲವೆಂದು ಎನಸಲ್ಲ, ಲೋಕದೊಳು
ಪದರು ಮಾಡುವರೆ ಹೊಲೆಯರು, ಬಸವಣ್ಣ

ತಾತ್ಪರ್ಯ: ಜೇನು ಹುಳದಿಂದ ಸಿಗುವ ಜೇನುತುಪ್ಪ, ಹಸು ಅಥವಾ ಎಮ್ಮೆ ಕೆಚ್ಚಲೊಳಗಿನ ಹಾಲು, ತಾಯಿ ಗರ್ಭದಿಂದ ಹುಟ್ಟುವ ಶಿವಶರಣರ ಜನನ ಇವ್ಯಾವನ್ನೂ ಕೀಳು ಎನಿಸಬಾರದು. ಆದರೂ ಇಂತಹ ಸಹಜ ಬದುಕಿನ ನಿಜಗಳನ್ನು ಕೀಳೆಂದು, ಹೊಲೆಯೆಂದು ಕರೆಯುವ ಕೀಳು ಮನಸ್ಸಿನವರೇ ಹೊಲೆಯರಾಗಿದ್ದಾರೆ.

೪೩೯

ಉಚ್ಚಯ ಕುಣಿಯೊಳು ಉಚ್ಚಿ ಬಿದ್ದದ್ದು ನಾ ಬಲ್ಲೆ
ಹೆಚ್ಚು ಕಡಿಮೆಂದು ಕುಲವೆಣಿಸ್ಯಾಡುವವರಿಗೆ
ಮಚ್ಚಿ ಮಚ್ಚಿಲೆ ಹೊಡೆಯಂದ, ಬಸವಣ್ಣ

ತಾತ್ಪರ್ಯ: ಎಲ್ಲರೂ ಹುಟ್ಟುವುದು ತಾಯಿಯ ಗರ್ಭದಿಂದಲೇ. ಯಾರೂ ಆಯೋನಿಜರಲ್ಲ. ಎಲ್ಲರ ಜನನವೂ ಒಂದೆ ಬಗೆಯದಾದರೂ ಹೆಚ್ಚು ಕಡಿಮೆ ಮೇಲು-ಕೀಳು ಎಂದು ಭೇದ ಕಲ್ಪಿಸುವ ದುಷ್ಟ ಮನುಷ್ಯರನ್ನು ಎಕ್ಕಡದಿಂದ ಹೊಡೆಯಬೇಕು ಎಂದು ಮೌನೇಶ್ವರರು ಹೇಳುತ್ತಾನೆ.

ಳಳ೦

ಕಾಯಕದ ಮರೆಯಲ್ಲಿ ಕದ್ದು ಒಡಲವ ಹೊರಿದೆ
ದೇವರ ಮರೆಯಲ್ಲಿ ತಿರಿದುಂಡೇ ಪ್ರಭುರಾಯ
ಯಾವದು ಹಿರಿದು ಕಿರಿದೆನಲಿ, ಬಸವಣ್ಣ

ತಾತ್ಪರ್ಯ : ಸತ್ಯ ಶುದ್ಧ ಕಾಯಕ ಮಾಡದೆ ಕೆಲಸದ ಹೆಸರಲ್ಲಿ ಸುಳ್ಳು ಹೇಳಿ ಅದಕ್ಕೆ ಪ್ರತಿಫಲ ಪಡೆಯುವುದು ದೇವರನ್ನು ಮುಂದಿಟ್ಟುಕೊಂಡು ಊರಾಡಿ ಬೇಡಿ ತಿಂಬುವುದು ಎರಡೂ ಸರಿಯಲ್ಲ, ಡಾಂಭಿಕ ಬದುಕು ಬದುಕಲ್ಲ.

ಳಳ೧

ಉಕ್ಕು ಕಬ್ಬಿಣದ ಮಗನೆಂಬುದು ದಿಕ್ಕೆಲ್ಲ ಬಲ್ಲುದು ಅದರ
ನಿಕ್ಕವನಾರೂ ಅರಿಯರು, ಉಕ್ಕು ಉದಕವನುಂಡು
ನಿಕ್ಕರವನೆ ಕಂಡು ಉತ್ತರಿಸಿತು ತನ್ನ ಕುಲವನು
ಸತ್ಯುಂಟು ಸಟೆಯಿಲ್ಲ, ಬಸವಣ್ಣ

ತಾತ್ಪರ್ಯ : ಎಳ್ಳೊಳಗಿನ ಎಣ್ಣೆಯಂತೆ, ನೆಲದೊಳಗಿನ ನಿಧಿಯಂತೆ, ಉಕ್ಕು ಕಬ್ಬಿಣದೊಳಗೇ ಅಡಗಿದ್ದರೂ ಅದರ ಗುರುತನ್ನು ಯಾರೂ ತಿಳಿಯರು. ಆದರೆ ಇದರ ಖಚಿತ ಮರ್ಮ ಬಲ್ಲವ ಕಮ್ಮಾರ ಮಾತ್ರ. ಕಬ್ಬಿಣ ಹರಿತವಾದ ಆಯುಧವಾಗಿ ಬಳಕೆಯಾಗಬೇಕಾದರೆ ಅದರ ಉಕ್ಕಿನ ಗುಣಮಟ್ಟ ನಿರ್ಧಾರವಾಗಬೇಕು. ಕುಲುಮೆಯಲ್ಲಿ ಕಮ್ಮಾರನು ಕಬ್ಬಿಣವನ್ನು ಹದವಾಗಿ ಕಾಯಿಸಿ ಬಡಿದು ಸರಿಯಾದ ಪ್ರಮಾಣದಲ್ಲಿ ಅದಕ್ಕೆ ನೀರು ಕುಡಿಸಿದಾಗ ಉಕ್ಕಿನ ಗುಣಮಟ್ಟ ನಿರ್ಧಾರವಾಗುತ್ತದೆ. ಇದು ಕಂಬಾರನ ಕೌಶಲ್ಯವನ್ನವಲಂಬಿಸಿರುತ್ತದೆ. ನೀರೊಳಗದ್ದಿದ ಕಬ್ಬಿಣಕ್ಕೆ ನೀಲಿ ಗೆರೆ ಮೂಡಿದಾಗ ಅದು ಹೊಂದಿರುವ ಉಕ್ಕಿನ ಪ್ರಮಾಣ ನಿರ್ಧಾರವಾಗುತ್ತದೆ. ಅದೇ ರೀತಿ ಸಾಧಕನ ಭಕ್ತಿ ಗುಪ್ತವಾಗಿರುತ್ತದೆ. ಅದು ಸಾಧನೆಯಿಂದ ಕಬ್ಬಿಣದೊಳಿರುವ ಉಕ್ಕಿನಂತೆ ಸಿದ್ಧಿಯಾಗುತ್ತದೆ.

ಳಳ೨

ವೇದಶಾಸ್ತ್ರಗಳೇಕೆ ವಾದ ತರ್ಕಗಳೇಕೆ
ಕಾದಾಡಬಹುದೆ ಕುಲ ಛಲಕೆ, ಮಾದಿಗರ
ಹಾಗಿರಬೇಕು, ಬಸವಣ್ಣ

ತಾತ್ಪರ್ಯ : ಆತ್ಮಜ್ಞಾನ ಎನ್ನುವುದು ಅಕ್ಷರದ ತಿಳಿವನ್ನು ಮೀರಿದ್ದು, ಅದು ನರನನ್ನು ಹರನನ್ನಾಗಿಸುತ್ತದೆ. ಆದರೆ ತಿಳಿದವರು ತಮ್ಮ ಪಾಂಡಿತ್ಯ ಮತ್ತು ಜ್ಞಾನವನ್ನು ವ್ಯಕ್ತಿ

ಹಾಗೂ ಸಮಾಜದ ಒಳಿತಿಗಾಗಿ ಬಳಸದೆ ಅವುಗಳನ್ನು ಶೋಷಣೆಯ ಅಸ್ತ್ರಗಳನ್ನಾಗಿ ಬಳಸುತ್ತಾರೆ. ಆ ಮೂಲಕ ಸಮಾಜದಲ್ಲಿ ಪಂಡಿತ ಪಾಮರ ಎನ್ನುವ ಭೇದಭಾವನೆ ಕಲ್ಪಿಸಿ ಮನುಷ್ಯರಲ್ಲಿಯೇ ಕುಲ ಹಾಗೂ ಜಾತಿಯ ವಿಷಬೀಜ ಬಿತ್ತಿ ಮೇಲು ಕೀಳುತನಗಳನ್ನು ತುಂಬಿ ಬಿಡುತ್ತಾರೆ. ಹೀಗೆ ಮನುಷ್ಯರಲ್ಲಿಯೇ ಅಸಮಾನತೆ ಕಲ್ಪಿಸುವ ವೇದ ಶಾಸ್ತ್ರಗಳು, ಅವುಗಳಿಂದ ಹುಟ್ಟುವ ಒಣ ತರ್ಕಗಳು ಸಮಾಜಕ್ಕೆ ಉಪಯೋಗ ವಾಗಲಾರವು. ಯಾವುದೇ ತಿಳುವಳಿಕೆ ಎನ್ನುವುದು ಮನುಷ್ಯ ಸಂಬಂಧವನ್ನು ಬೆಸೆಯ ಬೇಕೆ ಹೊರತು ಕತ್ತರಿಸಬಾರದು.

ಳಳಿ

ಮೇದಿನಿಗೊಬ್ಬ ಶಿವನಾದ ಮೇಲೆ
ಕಾದಾಡಬಹುದೆ ಕುಲ ಛಲಕೆ, ಲೋಕದ
ಓದು ತರ್ಕದ ಹೊಲೆಯರ ನೋಡು, ಬಸವಣ್ಣ

ತಾತ್ಪರ್ಯ : ಭಾರತದಂತಹ ಹಲವು ಕುಲಜಾತಿಗಳಿರುವ ದೇಶದಲ್ಲಿ ಓದು ಮತ್ತು ಅದರಿಂದ ಬರುವ ಪಾಂಡಿತ್ಯವು ಒಂದು ಅಖಂಡ ಮನುಷ್ಯ ಪ್ರಜ್ಞೆಯನ್ನು ಬೆಳೆಸಬೇಕು. ಮನುಷ್ಯನ ಮೈ ಮನಸ್ಸನ್ನು ಸನ್ಮಾರ್ಗದಲ್ಲಿ ನಡೆಸಬೇಕು. ಕುಲ ಜಾತಿಗಳ ಭೇದ ಅಳಿಸಬೇಕು. ಈ ಭೂಮಿಗೆ ಶಿವನೆ ಪ್ರಧಾನ. ಒಬ್ಬನೇ ದೇವರು ಹೊರತು ಇಬ್ಬರಿರಲು ಸಾಧ್ಯವಿಲ್ಲ. ದೇವನೊಬ್ಬ ನಾಮ ಹಲವು ಎನ್ನುವ ತತ್ವವನ್ನು ತೊರೆದು ಪಾಂಡಿತ್ಯದ ಹೆಸರಿನಲ್ಲಿ ಸಮಾಜವನ್ನು ವಿಘಟನೆ ಮಾಡುವವರೇ ನಿಜವಾದ ಹೊಲೆಯರು ಹೊರತು ಜಾತಿಯಿಂದ ಹೊರಗಿರುವವರಲ್ಲ.

ಳಳಳ

ಕಾಯಕವೆ ಕಮ್ಮಾರ ಕಾಯವೇ ಹೊಲೆ ಮಾದಿಗ
ವಾಯು ಅಗ್ನಿ ಪರಬ್ರಹ್ಮ, ಇದರೊಳಗೆ
ಆವ ಕುಲವೆಂದು ಬೆದಕಲಿ, ಬಸವಣ್ಣ

ತಾತ್ಪರ್ಯ : ಪಂಚಭೂತಗಳಿಂದ ಈ ಜಗತ್ತು ಹೇಗೆ ನಿರ್ಮಾಣವಾಗಿದೆಯೋ ಹಾಗೆ ಮನುಷ್ಯ ದೇಹ ಕೂಡ ಪಂಚಭೂತಗಳ ಸೃಷ್ಟಿ. ಅಂತಹ ದೇಹವು ಮಾಡುವ ಕಾಯಕವೇ ಕಮ್ಮಾರ, ಅಂದರೆ ಸೃಷ್ಟಿಶಕ್ತಿಯ ಸಂಕೇತ. ಕ್ರಿಯೆ ಹಾಗೂ ಕೌಶಲ್ಯದ ಪ್ರತೀಕ. ಇಂತಹ ಕ್ರಿಯೆಗೆ ದೇಹ ಮುಖ್ಯ. ದೇಹ ಆತ್ಮ, ಆತ್ಮ ಪರಮಾತ್ಮ ಎಂದು ದೇಹ ಮತ್ತು ಮನಸ್ಸನ್ನು ವಿಭಾಗಿಸಿ ಉಚ್ಚ ನೀಚವಾಗಿ ನೋಡಲಾಗದು. ಸೃಷ್ಟಿಯಲ್ಲಿ ಸ್ವಭಾವತಃ ಯಾವುದು ಮೇಲು ಕೀಳೆಂದಿರುವುದಿಲ್ಲ. ಉಚ್ಚ ನೀಚ ಕುಲ ಜಾತಿ

ಇವು ಮನುಷ್ಯ ಮಾಡಿಕೊಂಡ ಅವಿವೇಕದ ವಿಂಗಡಣೆಗಳು. ಉಚ್ಚ ನೀಚ ಎನ್ನುವ ಸಂಗತಿಗಳು ಅಸಮಾನ ಸಮಾಜಕ್ಕೆ ಕಾರಣವಾಗುತ್ತವೆ. ಇದು ಕೂಡದು.

ಳಳಜ

ಮುತ್ತು ಸಿಂಪೆಯೊಳು ಪುಟ್ಟುವದು
ರತ್ನ ಪಾಷಾಣದೊಳು ಪುಟ್ಟುವುದು
ಉತ್ತಮ ಶರಣರು ಹೊಲೆಯಲ್ಲಿ ಹುಟ್ಟಿದ ಮೇಲೆ
ನನ್ನ ಕುಲ ತನ್ನ ಕುಲ ಹೆಚ್ಚನಬಹುದೆ, ಬಸವಣ್ಣ

ತಾತ್ಪರ್ಯ : ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ ಎನ್ನುವಂತೆ ಹುಟ್ಟು ಎನ್ನುವುದು ಅಸಹಜವೂ ಅಲ್ಲ, ಅಸಂಭವವೂ ಅಲ್ಲ. ಹೊಲೆಯಿಲ್ಲದೆ ಜೀವ ಅಂಕುರಿಸಲಾರದು. ಹೇಗೆ ಮುತ್ತು ಸಿಂಪೆಯೊಳಗೆ ರತ್ನ ಪಾಷಾಣದೊಳಗೆ ಹುಟ್ಟುವುದೋ ಈ ಜಗತ್ತಿನ ಎಲ್ಲ ಉತ್ತಮರೂ ಹೊಲೆಯರಲ್ಲಿಯೇ ಹುಟ್ಟಿದ ಮೇಲೆ ಕುಲಜ ಹಾಗೂ ಕುಲಹೀನ ಎನ್ನುವ ಪ್ರಶ್ನೆಗಳೇ ಬರಬಾರದು. ಜಗತ್ತಿನ ಎಲ್ಲ ಮಹಾತ್ಮರು ತಾಯಿ ಗರ್ಭದಿಂದಲೇ ಹುಟ್ಟಿ ಬೆಳೆದವರೇ ಹೊರತು ಅಯೋನಿಜರೇನಲ್ಲ ಎನ್ನುವ ಮೂಲಕ ಹುಟ್ಟಿನಿಂದಲೇ ಜಾತಿ ಹಾಗೂ ಕುಲ ಶ್ರೇಷ್ಠತೆಯನ್ನು ಬಿತ್ತುತ್ತಿದ್ದ ಮನೋಧರ್ಮವನ್ನು ಮೌನಯ್ಯನವರು ಟೀಕಿಸುತ್ತಾರೆ.

ಳಳಟ

ಹಿಂದು ತುರುಕರಿಗೆ ಚಂದ್ರಮನೊಬ್ಬನೆ
ನಿಂದಿಸಿದವನೇ ಅಧಮನು, ಕಾಣದ
ಅಂಧಕರಿಗೇಕೆ ದರ್ಪಣವು ಸಕಲವು
ಒಂದೆ ಎಂದು ಕಂಡ ಗುರು ಬೇರೆ, ಬಸವಣ್ಣ

ತಾತ್ಪರ್ಯ : ದೇವನೊಬ್ಬ ನಾಮ ಹಲವು ಎಂಬಂತೆ, ಹಿಂದೂಗಳಿರಲಿ ಮುಸಲ್ಮಾನರಿರಲಿ, ಎಲ್ಲರಿಗೂ ಬೆಳಕು ನೀಡುವ ಸೂರ್ಯ ಚಂದ್ರಮರೊಬ್ಬರೆ. ಧರ್ಮ ಹಾಗೂ ದೇವರ ಹೆಸರಲ್ಲಿ ಮಾನವ ಸಮಾಜವನ್ನು ಒಡೆಯುವ, ಮತೀಯ ಜಗಳಕ್ಕೆ ಪ್ರೇರಣೆ ನೀಡುವವರು ಅಧಮರು. ಅಂಗೈ ಹುಣ್ಣಿಗೆ ಕನ್ನಡಿಯ ಅಗತ್ಯ ಹೇಗಿಲ್ಲವೊ ಹಾಗೆ ಕಣ್ಣೆದುರಿಗೆ ಪ್ರಕಾಶಿಸುವ ಹಾಗೂ ಬೆಳಕು ನೀಡುವ ಸೂರ್ಯ ಚಂದ್ರರನ್ನೇ ಗುರುತಿಸಲಾಗದ ಧರ್ಮಾಂಧರಿಗೆ ಕನ್ನಡಿಯಲ್ಲಿ ಬಿಂಬ ತೋರಿಸಿದರೆ ಏನೂ ಪ್ರಯೋಜನವಿಲ್ಲ. ಅದರಿಂದ ಸಮಾಜ ಹಿಡಿಗಾಳಿನಂತೆ ಕೂಡಿರಲು ಸಾಧ್ಯವಿಲ್ಲ ಆದರೆ ಸಕಲವು ಸಕಲರೂ ಒಂದೇ ಎಂದು ಭಾವಿಸುವ ಉದಾತ್ತತೆ ಕೆಲವರಲ್ಲಿ ಮಾತ್ರ ಇರುವಂಥದ್ದು. ಅಂಥವರೇ ಈ ಸಮಾಜಕ್ಕೆ ಗುರು ಸ್ವರೂಪರಾಗುತ್ತಾರೆ.

೪೪೭

ರೊಟ್ಟಿಯ ತಿಂದರೆ ಕುಲ ಕೆಟ್ಟೀ ತೆಂಬರು
ನಟ್ಟ ನಡುಗೇರಿಯೊಳಗೊಬ್ಬ ಬಟ್ಟನ್ನ ಮೊಲೆಯವಳ ಕಂಡು
ಬಿಟ್ಟು, ತನ್ನ ಕೈಯ ಹಣವ ಕೊಟ್ಟು ಭೋಗಿಸಿದ ಮೇಲೆ ಅವನ
ತುಟಿಯ ತುದಿಯ ಮೇಲೆ ಹುಣ್ಣು ಒಡೆದರೆ ಅವಳ
ಹಾಟ ಕುಡಿದಂತಾಯಿತು, ಬಸವಣ್ಣ

ತಾತ್ಪರ್ಯ : ಕುಲ ಜಾತಿಯೆಂಬ ವಿಷವನ್ನುಂಡು ಬದುಕುತ್ತಿರುವ ಮನುಷ್ಯ ಸಮಾಜದಲ್ಲಿ ಹಸಿದವನೊಬ್ಬ ಇನ್ನೊಬ್ಬರ ಮನೆಯ ರೊಟ್ಟಿ ತಿಂದರೆ ನೀರು ಕುಡಿದರೆ ಕುಲ ಕೆಟ್ಟೀತೆನ್ನುವರು. ಆದರೆ ನಟ್ಟ ನಡು ಕೇರಿಯೊಳಗೆ ಬಟ್ಟನ್ನ ಮೊಲೆಯ ಹರೆಯದ ಹೆಣ್ಣನ್ನು(ವೇಶ್ಯ) ಕಂಡು ಮೋಹಗೊಂಡು ತನ್ನ ಹಣವ ಕೊಟ್ಟು ಅವಳನ್ನು ಇಚ್ಛಾನುಸಾರ ಭೋಗಿಸಿದ ಮೇಲೆ ಅವನ ಕುಲ ಕೆಡಲಾರದೆ? ಅವಳ ಸಂಪರ್ಕದಿಂದಾಗಿ ಅವನ ತುಟಿಯ ಮೇಲೆ ಹುಣ್ಣಾಗಿ ಒಡೆದರೆ ಅವಳ ಹಾಟ ಕುಡಿದಂತಲ್ಲವೆ. ಅಂದರೆ ಅವಳ ಆಧರಾಮೃತವನ್ನು ಮತ್ತು ರುಧಿರವನ್ನೆ ಕುಡಿದವ ಕುಲಗೇಡಿಯಾಗಲಿಲ್ಲವೇ, ಅವನೆಂತಹ ಉತ್ತಮ ಮನುಜ.

೪೪೮

ಕೂಡಿದ್ದ ಕಾಲಕೆ ಕುಲಾಚಾರ
ನೀರಿದ್ದ ಕಾಲಕೆ ನೇಮ ನಿತ್ಯ
ಕೂಳು ನೀರು ಎರಡು ಕಡಿಮೆಯಾದರೆ
ದರಿದ್ರರಿಗೆ ಆರ ಮನೆಯಾದರೇನು, ಬಸವಣ್ಣ

ತಾತ್ಪರ್ಯ : ಮನುಷ್ಯನಲ್ಲಾಗುವ ಸಂಪತ್ತಿನ ಹೆಚ್ಚಳವು ಹೇಗೆ ವರ್ಗ ಮತ್ತು ವರ್ಣ ಸಮಾಜದ ನಿರ್ಮಾಣಕ್ಕೆ ಕಾರಣವಾಗುತ್ತದೆನ್ನುವುದು ಇಲ್ಲಿನ ತಾತ್ಪರ್ಯ. ಸಂಪತ್ತಿನ ಹೆಚ್ಚಳವು ಒಂದು ಮನುಷ್ಯ ಸಮಾಜದ ವಿಘಟನೆಗೆ ಕಾರಣವಾಗುತ್ತದೆ. ಕೂಳು(ಅನ್ನ) ಜಾಸ್ತಿಯಾದಂತೆ ಕುಲಾಚಾರ, ನೀರು ಜಾಸ್ತಿಯಾದಂತೆ ನೇಮ ನಿತ್ಯ ಮಡಿ ಮೈಲಿಗೆ ಎಂದು ತನ್ನಂತರಂಗವನ್ನೇ ಕಳೆದುಕೊಳ್ಳುವರು. ಇವರಿಗೆ ಕುಲ ಹಾಗೂ ಜಾತಿ ಶ್ರೇಷ್ಠತೆಗಳೇ ಮುಂದಾಗಿ ದುಡಿವ ಹಾಗೂ ಶ್ರಮ ಮೂಲ ಜನರನ್ನು ಪಶುಗಳಂತೆ ಕಾಣುತ್ತಾರೆ. ಆದರೆ, ಅನ್ನ ನೀರು ಎರಡು ಇಲ್ಲದಾಗಿ ದಾರಿದ್ರ್ಯ ಬಂದಾಗ ಹಸಿವು ನೀರಡಿಕೆಗಾಗಿ ಎಂಥವರ ಮನೆಯ ಬಾಗಿಲನ್ನೂ ತಟ್ಟುತ್ತಾರೆ. ಆಗ ಕುಲಭೇದ ಎಣಿಸುವುದಿಲ್ಲ.

೪೪೯

ಸಾವಿರ ಮಂದಿ ಸತಿಯರ ಭೋಗವ ಮಾಡಿ
ಯೋಗಿಯಾಗುವ ಸ್ಥಳ ಬೇರೈತಿ
ಸಕಲರ ಮನೆಯ ಓಗರವನುಂಡು
ಕುಲಜನಾಗುವಂಥ ಅವರಾಗಮವು ಬೇರೈತಿ, ಬಸವಣ್ಣ

ತಾತ್ಪರ್ಯ : ಮನುಷ್ಯನಿಗೆ ಹಸಿವು ಮತ್ತು ಮೈಥುನ ಅನಿವಾರ್ಯ. ಚತುರ್ವಿಧ ಪುರುಷಾರ್ಥಗಳಲ್ಲಿ ಇವುಗಳಿಗೆ ಪ್ರಧಾನ ಸ್ಥಾನ. ಈ ಕಾರಣಕ್ಕೆ ದೊರೆತಿರುವುದು. ಹೀಗೆ ಮೋಹ ವಶನಾದ ಮನುಷ್ಯ ತನ್ನ ಅತಿಯಾದ ಇಂದ್ರಿಯ ಸುಖಕ್ಕೆ ಬಲಿಯಾಗಿ ಭೋಗಲೋಲುಪನಾಗಿ ನಂತರ ಪರಿವರ್ತಿತನಾಗಿ ಯೋಗಿಯಾಗುವ ದಾರಿ ಒಂದು ರೀತಿಯದಾದರೆ, ಸಕಲರ ಮನೆಯ ಓಗರ(ಅನ್ನ)ವನ್ನು ಬೇಡಿ ತಂದು ತಿಂದು ತನ್ನ ಅಹಂಕಾರವಳಿದು, ಸುಜ್ಞಾನಿಯಾಗುವ ಪರಿ ಮತ್ತೊಂದು ರೀತಿಯದು. ಭೋಗಿ ವೈರಾಗ್ಯದಿಂದ ಯೋಗಿಯಾಗುವ, ಸನ್ಯಾಸಿ ಹಲವರ ಮನೆಯ ಭಿಕ್ಷೆವುಂಡು ಕುಲಜನಾಗುವ ಎರಡು ಮಾರ್ಗಗಳು ಕನ್ನಡ ಸಂಸ್ಕೃತಿಯಲ್ಲಿ ಇರುವುದು ವಿಶೇಷ.

೪೫೦

ಬೀದಿಗಳು ಎರಡೆಂಬೋ ಭೇದವನು ಕೇಳಿರೋ
ಮೇದಿನಿಗೊಬ್ಬ ಶಿವನಾದ ಮೇಲೆ
ಕಾದಾಡಬಹುದೆ ಕುಲ ಛಲಕೆ, ಲೋಕದ
ವಾದ ತರ್ಕದ ಹೊಲೆಯರ ನೋಡು, ಬಸವಣ್ಣ

ತಾತ್ಪರ್ಯ : ಬೀದಿಗಳು ಎರಡಾದರೂ ಅವು ಪಥಿಕನನ್ನು ತಲುಪಿಸುವ ಕೂಡಿಸುವ ಸ್ಥಳ ಒಂದೆ. ಹಾಗೆ ಈ ಜಗತ್ತಿಗೆ ದೇವನು ಒಬ್ಬನೇ ಆದ ಮೇಲೆ ಕುಲ ಜಾತಿ ಮತ ಪಂಥದ ಹೆಸರಿನಲ್ಲಿ ಬಡಿದಾಡುವುದು ತರವಲ್ಲ. ಪಾಂಡಿತ್ಯದ ಸೋಗಿನಲ್ಲಿ ಮತ ಧರ್ಮಗಳಲ್ಲಿ ಕ್ರೌರ್ಯದ ಕಿಚ್ಚು ಹಚ್ಚುವ ಧರ್ಮಲಂಡರು ಹೊಲೆಯರೇ ಹೊರತು ಮನುಷ್ಯ ನಿರ್ಮಿತ ಅಸಮಾನತೆಯ ಕಾರಣವಾಗಿ ಪಂಚಮರೆಂದು ಕೇರಿಯಲ್ಲಿ ಬದುಕುವವರು ಹೊಲೆಯರಲ್ಲ.

೪೫೧

ಮೂರು ಹೊಲೆಗಳು ಎನಗೆ ಸೇರಿಕೊಂಡಿಪ್ಪವು
ನೀರು ಮುಳುಗಿದರೆ ತೊಳೆಯವು, ನಿಮ್ಮ
ಹಾರುವ ಜನ್ಮ ಬಿಡಬೇಕು, ಬಸವಣ್ಣ

ತಾತ್ಪರ್ಯ : ಸ್ವೇದ ಮೂತ್ರ ಪರೀಷ ಇವು ಶಾರೀರಿಕ ಅಶುದ್ಧತೆಗಳು. ಮುಟ್ಟಾದ ಮೂರು ದಿವಸಕ್ಕೆ ಹುಟ್ಟಿ ಬಂದವ ನೀನು ಎನ್ನುವ ಮಾತಿನಂತೆ, ಮುಟ್ಟಿನ ಹೊಲೆ, ಹುಟ್ಟಿನ ಹೊಲೆ, ಸಾವಿನ ಹೊಲೆಯಲ್ಲಿ ಹುಟ್ಟಿ ಬಂದ ಈ ದೇಹವನ್ನು ನೀರೊಳಗ್ದಿದರೆ ಆ ಹೊಲೆಗಳು ತೊಳೆದು ಹೋಗಬಲ್ಲವೇ. ಇವುಗಳನ್ನೇ ವೀರಶೈವ ತಾತ್ತ್ವಿಕತೆಯಲ್ಲಿ ಮಲತ್ರಯಗಳೆಂದು ಹೇಳಿರಬಹುದು. ಆಣವ ಮಲ ಅಂದರೆ ಜೀವಾತ್ಮನಿಗೆ ಅಂಟಿಕೊಂಡು ಬಂದದ್ದು, ಕಾರ್ಮಿಕ ಮಲ ನಾವು ಮಾಡುವ ಕರ್ಮದಿಂದ ಬಂದದ್ದು, ಮಾಯಾ ಮಲ ಮನುಷ್ಯನ ಆಸೆ, ಆಮಿಷಗಳಿಂದ ಬಂದದ್ದು, ಇವು ಮನುಷ್ಯ ಸಾಧನೆಗೆ ಅಡ್ಡಿಯಾಗುತ್ತವೆ. ದೇಹಕ್ಕಂಟಿದ ಇಂತಹ ಹೊಲೆತನ ಮತ್ತು ಮಲತ್ರಯಗಳನ್ನು ಸಾಧನೆಯ ಮೂಲಕ ಕಳೆದುಕೊಂಡಾಗ ಮಾತ್ರ ಮೋಕ್ಷ ಪ್ರಾಪ್ತಿಯಾಗುತ್ತದೆ. ಅಂತರಂಗ ಶುದ್ಧಿಯಾಗದ ಹೊರತು ಬಹಿರಂಗ ಶುದ್ಧಿಗೆ ಬೆಲೆ ಬಾರದು.

೪೫೨

ತಳಹಾರುವರಿಗಿಂತ ತಲೆಹಾರುವವರುಂಟೆ
ಮೇಲೆ ಗುರು ಹಿರಿಯರಿಗಿಂತ ಹಿರಿಯರುಂಟೆ
ಮಾದಿಗರು ಹೊಲೆಯರು ಮಾಂಸವನುಂಡು
ನಾಯಿ ನೆಕ್ಕಿದ ತೊಗಲೊಳಗೆ ತುಪ್ಪವ ತುಂಬಿ
ನಾಡೆಲ್ಲ ಉಂಡ ಮೇಲೆ ಇವರ ಕುಲ ಮಾದಿಗರಿಗಿಂತ
ಕಡಿಮೆಯಲ್ಲವೆ, ಬಸವಣ್ಣ

ತಾತ್ಪರ್ಯ : ನಾವು ಶುದ್ಧ ಶ್ರೇಷ್ಠ ಎಂದು ಹೇಳುವವರು, ಬಾಹ್ಯ ಮಡಿ ಮೈಲಿಗೆ ಆಚರಿಸುವವರು, ಮಾದಿಗರು ಹೊಲಿಯರು ಮಾಂಸವನ್ನುಂಡು ಒಣಗಲು ನೇತು ಹಾಕಿದ ಪ್ರಾಣಿಯ ಚರ್ಮವನ್ನು ನಾಯಿ ನೆಕ್ಕಿದ ಮೇಲೆ ಅದನ್ನು ತೊಗಲ ಚೀಲವಾಗಿ ತಯಾರಿಸುವರು. ಜಾತಿ ಹೀನರೆಂದು ಹೇಳುವ ಜನ ತಯಾರಿಸಿದ ಮತ್ತು ನಾಯಿ ನೆಕ್ಕಿದ ತೊಗಲಿನ ಚೀಲದಲ್ಲಿ ತುಂಬಿಟ್ಟ ತುಪ್ಪವನ್ನು ನಾಡೆಲ್ಲ ಉಣ್ಣುವುದು. ಅಂದ ಮೇಲೆ ಉಂಡವರ ಕುಲ ಜಾತಿಹೀನರೆಂದು ಕರೆಯುವ ಮಾದಿಗರಿಗಿಂತ ಕೀಳಲ್ಲವೆ.

೪೫೩

ಹಾಲು ಸಕ್ಕರಿ ತುಪ್ಪ ಲೋಲ್ಯಾಡಿ ಉಂಬುವರು
ಕೂಳು ತಿಂದರೆ ಕುಲಗೆಡುವದೆ? ಲೋಕದ
ಪ್ಯಾಲಿ ಶಾಸ್ತ್ರವ ನೋಡು, ಬಸವಣ್ಣ

ತಾತ್ಪರ್ಯ : ಜಾತಿ ಶ್ರೇಷ್ಠರೆಂದು ಹೇಳಿಕೊಳ್ಳುವ ಮಂದಿ ತಮಗಿಂತ ಕೀಳೆನ್ನುವ ಶ್ರಮಿಕವರ್ಗದ ಜನರಿಂದ ತಯಾರಾಗುವ ಹಾಲು ಸಕ್ಕರಿ ತುಪ್ಪವನ್ನು ಎಗ್ಗಿಲ್ಲದೆ ಸಂತೋಷದಿಂದ ಉಣ್ಣುವರು. ಆದರೆ ಅಂತಹ ಶ್ರಮಿಕ ವರ್ಗದವರು ಮನೆಯಲ್ಲಿ ಮಾಡಿದ ಅಡಿಗೆಯನ್ನು ತಾವು ಉಂಡರೆ ಕುಲಕೆಡುವುದು ಎನ್ನುತ್ತಾರೆ. ಇಂತಹ ಅಸಮಾನತೆಯನ್ನು ಪೋಷಿಸುವ ಶಾಸ್ತ್ರಗಳು ಪ್ಯಾಲಿ(ಮರುಳ) ಶಾಸ್ತ್ರಗಳು ಹೊರತು ಬುದ್ಧಿವಂತರವಲ್ಲ.

೪೫೪

ಮಾತು ಮಾಯುವುದಿಲ್ಲ ತೂತು ಮುಚ್ಚುವುದಿಲ್ಲ
ನೀತಿ ನಿರ್ಣಯಗಳ ಅತಿಗಳೆದವರು
ಜಾತಿ ಶುದ್ಧ ಹೊಲೆಯರು, ಬಸವಣ್ಣ

ತಾತ್ಪರ್ಯ : ಮಾತೆಂಬುದು ಜ್ಯೋತಿರ್ಲಿಂಗ ಎಂದು ಮಾತಿಗೆ ಮನ್ನಣೆ ಕೊಟ್ಟವರು ಶರಣರು. ಅಂತಹ ಮಾತನ್ನು ಅಜ್ಞಾನದಿಂದ ಇನ್ನೊಬ್ಬರಿಗೆ ಬಳಸಿ ಅವರ ಮನಸ್ಸಿಗೆ ನೋವುಂಟು ಮಾಡುವವರು ಎಂತಹ ದೊಡ್ಡ ಸ್ಥಾನದಲ್ಲಿದ್ದರೂ ಕೀಳರು. ಮಾತಿನಿಂದಾದ ಗಾಯ ಮಾಯಲಾರದು. ಅದೇ ರೀತಿ ಗೋಡೆ ಅಥವಾ ಪಾತ್ರೆಯಲ್ಲಿ ಬಿದ್ದ ತೂತು ಏನು ಮಾಡಿದರು ಶಾಶ್ವತವಾಗಿ ಮುಚ್ಚಲಾಗದು. ಹೀಗಾಗಿ ಸಮಾಜದ ನೀತಿನಿಯಮಗಳನ್ನು ಅಲ್ಲಗಳೆದು ಇತರರ ಬದುಕನ್ನು ದುರ್ಬರಗೊಳಿಸುವವರೇ ಹೊಲೆಯರಾಗುತ್ತಾರೆ.

೪೫೫

ಸಾವು, ಮರಣಗಳೊಂದೆ ನೋವು ಬ್ಯಾನಿಗಳೊಂದೆ
ಜನಿತಗಳು ಒಂದೆ ಸಕಲರ ಕುಲವೆಲ್ಲ ಒಂದೆ
ಇದರೊಳಗೆ ಆವ ಕುಲ
ಹಿರಿಯ ಕಿರಿಯ ಎನ್ನಬಹುದು, ಬಸವಣ್ಣ

ತಾತ್ಪರ್ಯ : ಈ ದೈವ ಸೃಷ್ಟಿಯಲ್ಲಿ ಹುಟ್ಟಿ ಬದುಕುವ ಮನುಷ್ಯರೆಲ್ಲರಿಗೂ ಹುಟ್ಟು ಸಾವು ನೋವು ಬ್ಯಾನಿ ಬ್ಯಾಸರಿಕೆ ಒಂದೆ. ಶ್ರೀಮಂತರಿಗೆ ಶ್ರೇಷ್ಠರಿಗೆ ಬಡವರಿಗೆ ಹೀಗೆ ಅವರ ಅಂತಸ್ಥನ್ನು ಆಧರಿಸಿ ಅವು ಬರುವುದಿಲ್ಲ. ಸಕಲರಿಗೂ ಅವುಗಳ ಪರಿಣಾಮ ಒಂದೇ ರೀತಿ ಇರುವಾಗ ಉಚ್ಚ ಕುಲ, ನೀಚ ಕುಲ, ಹಿರಿದು ಕಿರಿದು ಕುಲದ ಪ್ರಶ್ನೆ ಬರುವುದಿಲ್ಲ.

೪೫೬

ಬಂದ ಸೂತಕವ್ಯಾಕೆ ನಿಂದ ಸೂತಕವ್ಯಾಕೆ
ಸಂದ ಸೂತಕದ ಘಸನಿಗಳು ನಿಮಗ್ಯಾಕೆ
ತನ್ನ ಮನದೊಳಗಿನ ಸೂತಕ ಬಿಡದನಕ, ಬಸವಣ್ಣ

ತಾತ್ಪರ್ಯ : ಮುಟ್ಟು ಹುಟ್ಟು ಸಾವಿನ ಸೂತಕಗಳು ಇವು ದೇಹಕ್ಕಂಟಿ ಬಂದಂತವು. ಸೂತಕವೆಂದು ಈ ದೇಹವನ್ನು ನೀರಿನಲ್ಲಿ ಎಷ್ಟು ತೊಳೆದರೂ ಪ್ರಯೋಜನವಿಲ್ಲ. ಆದರೆ ಸಾಧಕನಾಗಬೇಕಾದರೆ ಇಂತಹ ಬಾಹ್ಯ ಸೂತಕಗಳಿಗಿಂತ ತನ್ನ ಮನದೊಳಗಿನ ಅವಿಚಾರ ಅನಾಚಾರ ಎಂಬ ಸೂತಕವನ್ನು ತ್ಯಜಿಸಬೇಕು. ಬಾಹ್ಯ ಶುದ್ಧಿಯ ಜೊತೆಗೆ ಅಂತರಂಗ ಶುದ್ಧಿ ಬಹುಮುಖ್ಯವಾದುದು.

೪೫೭

ಕೆರವು ಹಿಡಿದರೆ ಕರವ ತೊಳೆದುಕೊಂಬುವರು
ಕರಿಯ ಹಾಕಿದ ತೊಗಲೊಳಗೆ ತುಪ್ಪ ಎಣ್ಣೆ
ಹಾಕಿ ಉಂಡ ಮೇಲೆ, ಇವರ
ಮಾತು ಸಹಜವೇನೊ, ಬಸವಣ್ಣ

ತಾತ್ಪರ್ಯ: ಮನುಷ್ಯ ಚಪ್ಪಲಿ ಮುಟ್ಟಿದರೆ ತನ್ನ ಕೈ ತೊಳೆದುಕೊಳ್ಳುವನು. ಕಾರಣ ಅದು ತೊಗಲಿನದೆನ್ನುವ ಮಡಿವಂತಿಕೆ ಭಾವ. ಆದರೆ ಹದಗೊಳಿಸಿ ಮಾಡಿದ ಅದೇ ತೊಗಲಿನ ಚೀಲದಲ್ಲಿ ಹಾಕುವ ತುಪ್ಪ ಹಾಗೂ ಎಣ್ಣೆಯನ್ನು ಉಂಡು ಬದುಕುವವರಿಗೆ ತೊಗಲು ನೀಚವೆನಿಸದು. ಭಾವ ಮತ್ತು ಬದುಕಲ್ಲಿ ಹೀಗೆ ಭಿನ್ನವಾಗಿ ಬದುಕುವ ಇಂತವರ ಮಾತು ಮತ್ತು ನಡತೆ ಅಸಹಜವಾದದ್ದು ಹೊರತು ಸಹಜವಾದದ್ದಲ್ಲ.

೪೫೮

ಎತ್ತು ಎಮ್ಮಿಗೆ ಕುಲವು, ಕತ್ತೆ ಕುದುರೆಗೆ ಕುಲವು
ಸತ್ಯ ಶರಣರಿಗೆ ಯಾತರ ಕುಲವಯ್ಯ, ನಮ್ಮ
ನಿರ್ತು ಇದ್ದಲ್ಲಿ ಕೇಳಬಹುದು, ಬಸವಣ್ಣ

ತಾತ್ಪರ್ಯ : ಈ ಜಗತ್ತಿನಲ್ಲಿ ಪ್ರತಿಯೊಂದು ಪ್ರಾಣಿಗಳಿಗೆ ಹೇಗೆ ತನ್ನದೇ ಆದ ಜಾತಿ ಕುಲಗಳಿವೆಯೋ ಹಾಗೆ ಪ್ರಾಣಿಯಂತೆ ವಿವೇಕರಹಿತವಾಗಿ ಬದುಕುವ ಮನುಷ್ಯನಿಗೆ ಮಾತ್ರ ಕುಲದ ಮದ ಜಾತಿಮದ ಇರುತ್ತದೆ. ಹೊರತು ಇಂತಹ ಕುಲ ಮದ ಹಾಗೂ ಗುರುತುಗಳನ್ನು ಮೀರಿದ ಯೋಗಿಗೂ ಯಾವ ಕುಲದ ಹಂಗು ಇರುವುದಿಲ್ಲ. ಅವನು ಕುಲಾತೀತ ಮತ್ತು ಜಾತ್ಯಾತೀತ.

೪೫೯

ಕತ್ತಲೆ ಕಾಳಮ್ಮ ಹೊತ್ತದೆ ಪರಬ್ರಹ್ಮ
ಪೃಥ್ವಿಯೆಲ್ಲ ಜನಿಸಿದಳು, ಇದರೊಳಗೆ
ಆವಕುಲವೆಂದು ಬೆದಕಲಿ, ಬಸವಣ್ಣ

ತಾತ್ಪರ್ಯ : ಕತ್ತಲೆ ಕಾಳಮ್ಮನ ಸ್ವರೂಪವಾದರೆ ಹೊತ್ತು ಪರಬ್ರಹ್ಮದ ಸ್ವರೂಪ, ಅಂದರೆ ಅಜ್ಞಾನವೆಂಬ ಕತ್ತಲು ಬೆಳಕಾಗಿ ಆ ಬೆಳಕೆ ಪರಬ್ರಹ್ಮ ಸ್ವರೂಪಿಯಾಗಿ ಇಡೀ ಭೂಮಂಡಲವನ್ನು ಬೆಳಗಿತು. ನಿರ್ಗುಣ ಮತ್ತು ಸಗುಣ ಇವೆರಡೇ ಜಗತ್ತಿನ ಮೂಲ. ಇವುಗಳಲ್ಲಿ ವ್ಯಕ್ತ ಬ್ರಹ್ಮಾಂಡವೇ ಅಡಗಿದೆ. ಈ ಮೂಲಕ್ಕೆ ಹೋದಾಗ ಜಾತಿ ಕುಲಗಳಿಗೆ ಅರ್ಥವಿರುವುದಿಲ್ಲ. ದೇವಿಯೇ ಬ್ರಹ್ಮಾಂಡವನ್ನು ಆವರಿಸಿದ್ದಾಳೆ. ಅವಳೇ ಜೀವ ಚೈತನ್ಯ. ಹೀಗಿರುವಾಗ ಗಂಡು, ಹೆಣ್ಣು, ದೇವ, ದೇವಿ, ಕತ್ತಲು, ಬೆಳಕು ಎಂದು ಲಿಂಗ, ಜಾತಿ, ಕುಲಭೇದಗಳನ್ನು ಹುಡುಕದೇ ಮನುಷ್ಯ ಪೂರ್ಣತ್ವದತ್ತ ಸಾಗಬೇಕು.

೪೬೦

ಇಂದ್ರಿಯ ಸೂತಕವೊಂದೆ ಕಂದನ ಜನಿತಗಳೊಂದೆ
ಮಂದೆಲ್ಲ ಒಂದೆ ಮರಣಗಳು ಇದರೊಳು
ಕುಂದು ಕೊರತೆಗಳೆಂಬ ಪರಿಹ್ಯಾಗೆ ಎಂದಿನ್ನು
ನಂದಿಕೇಶ್ವರನ ವರಪುತ್ರ ಬಂದಿನ್ನು
ಸಂದು ಹೇಳುವನು ಸಭೆ ಮೆಚ್ಚಿ, ಬಸವಣ್ಣ

ತಾತ್ಪರ್ಯ : ಮನುಷ್ಯರಾಗಿ ಹುಟ್ಟಿ ಬಂದ ಮೇಲೆ ಅವನು ಯಾವ ಕುಲದವನಾಗಿರಲಿ ಹುಟ್ಟು ಸಾವು ನೋವು ಬ್ಯಾನಿಗಳೊಂದೆ. ಅವನ ಸಾಮಾಜಿಕ ಸ್ಥಾನಮಾನವನ್ನು ನೋಡಿ ಸಾವು ನೋವುಗಳು ಬರುವುದಿಲ್ಲ. ಹೀಗಿರುವಾಗ ಮನುಷ್ಯರಲ್ಲಿ ಅನಗತ್ಯ ಭೇದವೇಕೆ, ವಿಂಗಡಣೆ ಏಕೆ. ಎಷ್ಟೋ ಸಾಧಕರು ಈ ಕುರಿತು ಜನರಿಗೆ ತಿಳಿ ಹೇಳುತ್ತ ಬಂದಿದ್ದರೂ ಮಾನವರಲ್ಲಿನ ಕಲ್ಪಿತ ಜಾತಿ ಹಾಗೂ ಕುಲದ ಅಸಮಾನತೆಗಳು ದೂರವಾಗಿಲ್ಲ. ಇಂತಹ ಮೂಢರಿಗೆ ತಿಳಿ ಹೇಳಲು ನಂದಿಕೇಶ್ವರನ ವರಪುತ್ರ ಮೌನೇಶ್ವರರು ಮತ್ತೆ ಹುಟ್ಟಿ ಬರುವರು.

೪೬೧

ಆರು ದರುಶನದವರಿಗೆ ಅಹಂಕಾರವ್ಯಾಕೊ
ಹೋರು ರೋಹಿತದ ಹೊಲೆಯೊಳಗೆ ಬಂದವರಿಗೆ
ಬೇರೊಂದು ಕುಲವುಂಟೆ, ಲೋಕದ
ಹೋರಾಟವ ನೋಡು, ಬಸವಣ್ಣ

ತಾತ್ಪರ್ಯ : ಎಲ್ಲರ ಹುಟ್ಟು ತಾಯಿ ಗರ್ಭದಲ್ಲಿಯೇ ಆಗುವುದು ಸಹಜ. ಹೀಗೆ ಸಹಜವಾಗಿ ಹುಟ್ಟಿದವರು ತಮ್ಮ ಪಾಂಡಿತ್ಯದ ಅಹಂಕಾರದಿಂದಾಗಿ ಕುಲ ಭೇದಗಳನ್ನು ಕೃತಕವಾಗಿ ಸೃಷ್ಟಿಸಿ ಸಮಾಜದಲ್ಲಿ ಮೇಲು ಕೀಳನ್ನು ಹುಟ್ಟು ಹಾಕುತ್ತಾರೆ. ಆರು ದರುಶನ ಬಲ್ಲ ಪಂಡಿತರಿಗೊಂದು ಹುಟ್ಟು ಸಾವು, ಪಾಮರರಿಗೊಂದು ಹುಟ್ಟು ಸಾವು ಇರುವುದಿಲ್ಲ. ಎಲ್ಲರೂ ತಾಯಿ ಗರ್ಭದ ನೆತ್ತರದಲ್ಲಿಯೇ ಹೊರಬಂದವರು. ಎಲ್ಲರದೂ ಮನುಷ್ಯ ಕುಲವೆ. ಆದರೂ ಇಂತಹ ಶುಷ್ಕ ಪಾಂಡಿತ್ಯದ ಕಾರಣವಾಗಿ ಮನುಷ್ಯರಲ್ಲಿ ಉಚ್ಚ ನೀಚ ಎನ್ನುವ ಕುಲ ಮದದ ಬೀಜ ಬಿತ್ತಿ ಬಡಿದಾಡುವುದು ನಾಗರಿಕ ಸಮಾಜದ ಉದ್ದೇಶವಾಗಬಾರದು. ಎಲ್ಲ ಜಾತಿ ಧರ್ಮಗಳು ಒಂದೇ.

೪೬೨

ಆರು ದರುಶನದಾಟವು ತೀರಿಹೋದ ಮೇಲೆ
ಮೀರಿ ಮಾಡುವದೆಲ್ಲ ಮರುಳಾಟ
ಊರಾಟ ನೋಡಿ ಉಣಬೇಕು, ಹಿಂದಿನ
ಹೋರಾಟವೆಲ್ಲ ಬಿಡಬೇಕು, ಬಸವಣ್ಣ

ತಾತ್ಪರ್ಯ : ಷಡ್ದರುಶನಗಳು(ಸಾಂಖ್ಯ, ನ್ಯಾಯ, ಯೋಗ, ವೈಷೇಶಿಕ, ವೇದಾಂತ ಮತ್ತು ಮೀಮಾಂಸಾ) ಒಂದು ಕಾಲದ ಸಮಾಜದ ಭಾಗವಾಗಿದ್ದವು. ಪಾಂಡಿತ್ಯದ ಪ್ರತೀಕವಾಗಿದ್ದವು. ಕಾಲ ಸರಿದಂತೆ ಅವುಗಳ ಪ್ರಾಮುಖ್ಯತೆ ಕಡಿಮೆಯಾದರೂ ಅದೇ ಜ್ಞಾನವನ್ನಿಟ್ಟುಕೊಂಡು ಇಂದಿಗೂ ಮಾಡುವ ವಾದ ಹುಚ್ಚರಾಟವೆನಿಸುತ್ತದೆ. ಕಾಲಕ್ಕೆ ತಕ್ಕ ಹಾಗೆ ಹುಟ್ಟುವ ಹೊಸ ತಿಳುವಳಿಕೆಯನ್ನು ಪರಿವರ್ತನೆಗಳನ್ನು ನಮ್ಮದಾಗಿಸಿಕೊಳ್ಳಬೇಕೆ ಹೊರತು ಅರ್ಥಹೀನ ಆಚರಣೆಗಳಿಗೆ ಜೋತು ಬೀಳುವುದು ವ್ಯರ್ಥ ಹೋರಾಟವಾಗುತ್ತದೆ.

೪೬೩

ಪುನುಗದ ಕಸ್ತೂರಿಯನು ಹಣೆಗೆ ಧರಿಸಲು
ಹೀನಾಯಿತು ನಿಮ್ಮ ಶೀಲ ಹತವಾಯಿತು, ಬಸವಣ್ಣ

ತಾತ್ಪರ್ಯ : ಸಾಮಾನ್ಯವಾಗಿ ಕಸ್ತೂರಿ ಮೃಗದಿಂದ ಕಸ್ತೂರಿ ಹುಟ್ಟುತ್ತದೆ. ವ್ಯಂಗ್ಯಾರ್ಥವಾಗಿ ಮೌನೇಶ್ವರರು ಪುನುಗ(ಬೆಕ್ಕು)ದ ಕಸ್ತೂರಿಯನು ಹಣೆಗೆ ಹಚ್ಚಿಕೊಳ್ಳಲು ಮನುಷ್ಯನ ಶೀಲ ಚಾರಿತ್ರ್ಯಗಳು ಹೀನವಾಗುತ್ತವೆ ಎನ್ನುವಲ್ಲಿ ಮನುಷ್ಯನ ವಿವೇಕ ರಹಿತ ನಡೆಗಳು ಆತನ ಸಚ್ಚಾರಿತ್ರವನ್ನು ಹಾಳುಮಾಡುತ್ತವೆಂಬುದು ತಾತ್ಪರ್ಯ.

೪೬೪

ಶೀಲವಂತಿಕೆಯೆಂಬ ನೂಲು ಮಾಲೆಗಳೇಕೆ
ನೂರೊಂದು ಕೋಟಿ ಸುರರು ನರರು ಸತ್ತಂಥ

ರೋಹಿತವೆಲ್ಲವ ಉದಕವು ಉಂಡ ಮೇಲೆ
ಶೀಲವೆಲ್ಲೈತಿ, ಬಸವಣ್ಣ

ತಾತ್ಪರ್ಯ : ಶೀಲ ಎಂಬುದು ಸದ್ಗುಣವು. ಇದನ್ನರಿಯದೇ ಶೀಲವಂತರೆಂದು ಜುಟ್ಟು ಜನಿವಾರ ಧರಿಸಿ ನೀರಲ್ಲಿ ಮುಳುಗಿ ಏಳುವುದು ಸದಾಚಾರವಲ್ಲ. ನೂರೊಂದು ಕೋಟಿ ಸುರ ನರರು ಸತ್ತಂತಹ ರಕ್ತವು ನೀರ ಸೇರಿದ ಮೇಲೆ ಅದೇ ನೀರಿನಲ್ಲಿ ಸ್ನಾನ ಮಾಡಿ ಶುದ್ಧರಾಗಿದ್ದೇವೆ ಎಂದು ಭಾವಿಸಿರುವ ನರರ ಶೀಲವೆಲ್ಲಿ ಉಳಿಯುತ್ತದೆ. ಮನುಷ್ಯನ ಮಲಿನತೆಯನ್ನು ಮಲಿನಗೊಂಡ ನೀರು ತೊಳೆಯಲಾರದು. ದೇಹದ ಮಲಿನತೆಗಿಂತ ಮನದ ಮಲಿನತೆ ತೊಳೆಯಬೇಕು.

೪೬೫

ರೊಕ್ಕುಳ್ಳ ಕಾಲಕೆ ಮುಚ್ಚುವ ಪಾವಡಗಳು
ರೊಕ್ಕ ಹೋದ ಮರುದಿನ ಭಿಕ್ಷೆ ಬೇಡಿ ಉಣಬೇಕು
ಕುಟ್ಟಿಗಿನ್ನೆಲ್ಲಿ ಹೊಲೆಶೀಲ, ಬಸವಣ್ಣ

ತಾತ್ಪರ್ಯ : ಹಣವಿದ್ದಾಗ ಮನುಷ್ಯನಿಗೆ ಎಲ್ಲ ಬಗೆಯ ಗೌರವ ಮರ್ಯಾದೆಗಳು ದೊರಕುತ್ತವೆ. ಅನೇಕ ದುರ್ವರ್ತನೆಗಳು ದ್ರೋಹಗಳು ಸುಲಭವಾಗಿ ಮರೆಯಾಗುತ್ತವೆ. ಎಷ್ಟೇ ಅನಿರೀಕ್ಷಿತ ಘಟನೆಗಳು ನಡೆದಂತೆ ಅಹಂಕಾರವು ಮನುಷ್ಯನಲ್ಲಿ ಬೆಳೆಯುತ್ತದೆ. ಆ ಹಣ ಹೋದ ಮೇಲೆ ಹೊಟ್ಟೆ ತುಂಬಿಸಿಕೊಳ್ಳಲು ಭಿಕ್ಷೆ ಬೇಡಬೇಕು. ಇಂತಹ ಪರಿಸ್ಥಿತಿಯಲ್ಲಿ ಹೊಟ್ಟೆಗೆ ಹೊಲೆ ಶೀಲ ಮಡಿ ಮೈಲಿಗೆಗಿಂತ ಹೊಟ್ಟೆ ತುಂಬಿಸಿಕೊಳ್ಳುವುದು ಮುಖ್ಯವಾಗುತ್ತದೆ. ಇದ್ದಾಗ ವಸ್ತ್ರದಲ್ಲಿ ಮುಚ್ಚಿ ತಿನ್ನುವ ಮನುಷ್ಯ ಇಲ್ಲದಾಗ ಅದನ್ನೇ ಜೋಳಿಗೆಯಾಗಿಸಿಕೊಳ್ಳುವ ದಾರಿದ್ರ್ಯಕ್ಕಿಳಿಯುತ್ತಾನೆ.

೪೬೬

ಭಕ್ತಿಯೆಲ್ಲ ಭತ್ತದೊಳಗೈತಿ ಭತ್ತಗಳು ಹೋದ ಮರುದಿನ
ಎತ್ತಿನ ಜತ್ತಿಗೆಯ ಸುಟ್ಟು ಮೆಲಿಬೇಕು, ಲೋಕದ
ಹೊಟ್ಟು ಶಾಸ್ತ್ರವ ಬಿಡಬೇಕು, ಎಂದಿನ್ನು
ಕಕ್ಕಯ್ಯನ ವರಪ್ರಸಾದಿ, ಬಸವಣ್ಣ

ತಾತ್ಪರ್ಯ : ಭತ್ತ ಅಂದರೆ ಅನ್ನ ಮನುಷ್ಯನ ಅಗತ್ಯಗಳಲ್ಲಿ ಒಂದು. ಭತ್ತ ಸಮೃದ್ಧತೆಯ ಸಂಕೇತವೂ ಹೌದು. ಇಂತಹ ಭತ್ತ ಪ್ರಾಕೃತಿಕ ವಿಕೋಪಗಳು ಹಾಗೂ ಮನುಷ್ಯ ನಿರ್ಮಿತ ಕಲುಷಿತ ವಾತಾವರಣ ಹಾಗೂ ಮಳೆಯ ಕೊರತೆಯಿಂದ ಬೆಳೆಯದೆ ನಾಶವಾಗಿ ಹೋದಾಗ ಅನ್ನದ ಹಾಹಾಕಾರ ಉಂಟಾಗುತ್ತದೆ. ಆಗ ಭಕ್ತಿಯೂ ಇಲ್ಲ, ಶೀಲವೂ ಇಲ್ಲ. ತೊಗಲು ಎನ್ನುವುದನ್ನು ಮರೆತು ಹಸಿವಿನ ಭೀಕರತೆಯಿಂದ ಎತ್ತಿನ ಕೊರಳಿಗೆ ನೊಗವನ್ನು ಕಟ್ಟಲು ಬಳಸುವ ಚರ್ಮದ ಪಟ್ಟಿಕೆಯಾದ ಜತ್ತಿಗಿಯನ್ನೇ

ತಿಂದು ಬದುಕಬೇಕಾಗಬಹುದು. ಕಾರಣ ಹೊಟ್ಟಿನಂತಹ ಜೊಳ್ಳು ಶಾಸ್ತ್ರಗಳು ಹುಟ್ಟಿಸುವ ಹುಸಿ ಪಾಂಡಿತ್ಯ ಅವಾಸ್ತವವಾದುದು.

ಳಟ೭

ಶೀಲವಂತಿಕೆಯೆಲ್ಲ ಜೋಳದೊಳಗೈತಿ
ಜೋಳಗಳು ಹೋದ ಮರುದಿನ ಹೇಲ ಮೇಲಣ
ಕಾಳು ಆಯ್ದು ಮೇಲಿಬೇಕು, ಎಂದಿನ್ನು
ಹೇಳಿದನು, ಚೆನ್ನಬಸವಣ್ಣ

ತಾತ್ಪರ್ಯ : ಅಕಾಲಿಕ ಹಾಗೂ ಅಲ್ಪಕಾಲಿಕ ಮಳೆ ಮಾರುತಗಳಿಂದಾಗಿ ಮನುಷ್ಯನ ಅನ್ನಕ್ಕೆ ಆಧಾರವಾದ ಜೋಳದ ಇಳುವರಿ ಕಡಿಮೆಯಾಗುತ್ತದೆ. ಇದಕ್ಕೆ ಪರಿಸರದ ಅನೇಕ ಸಂಗತಿಗಳು ಕಾರಣವಾಗಿವೆ. ಬರದ ಬೇಗುದಿ ತಾಳದೆ ಅನ್ನದ ಅಗತ್ಯಕ್ಕಾಗಿ ಮನುಷ್ಯ ಮಲದ ಮೇಲಿನ ಕಾಳನ್ನು ಆಯ್ದು ತಿನ್ನುವಂತಹ ಹೇಯ ಸ್ಥಿತಿ ಬಂದಾಗ ಆತನ ಶೀಲ ಚಾರಿತ್ರ್ಯಗಳು ಜಾತಿ ಕುಲ ಶ್ರೇಷ್ಠತೆಗಳು ಮಣ್ಣುಪಾಲಾಗುತ್ತವೆ.

ಳಟ೮

ಮಾದಿಗರು ಮಾಡಿದ ಮಾಣಿಕದ ಮಡಿಕೆಯೊಳಗೆ
ಜಾಣ ಜಾಣರು ಉಣಬೇಕು, ಇದಕ್ಕೆ
ವಾಣಿಗಳೇತಕೆ ಇದಕೆ ಒಪ್ಪ ಬಣ್ಣ ಎರಡುಂಟೆ, ಲೋಕದ
ಮಾಣಿಯ ಮಕ್ಕಳು ಅರಿಯಿರೊ, ಬಸವಣ್ಣ

ತಾತ್ಪರ್ಯ : ಕುಲಭೇದ ಮೀರಿದವಗೆ ಕುಲಛಲದ ಮದವಿರದು. ಅಂತಹ ಸಾಧಕನು ಕುಲಭೇದವೆನ್ನದೆ ಕರೆದಲ್ಲಿ ಉಣ್ಣುವನು. ಇದಕ್ಕೆ ಯಾರ ಒತ್ತಾಯವು ಇರದು. ಎಲ್ಲವೂ ಒಂದೆ ಎಂದು ತಿಳಿದ ಸಾಧಕನಿಗೆ ಲೋಕ ಎರಡಲ್ಲ ಎಂಬುದನ್ನು ಅರಿಯಿರೋ ಎಂದು ಮೌನೇಶ್ವರರು ಹೇಳುತ್ತಾರೆ.

ಳಟ೯

ಎಲುಬಿನ ಶರೀರವು ತೊಗಲಿನ ಮಡತವು
ಕೆಲುಮಿ ಕೀಟಕದ ರಕ್ತವು ಇದರೊಳು
ಕುಲವೇನು ನಿಮ್ಮ ಛಲವೇನು, ಎಂದಿನ್ನು
ಹೇಳಿದನು, ಸಭೆ ಮೆಚ್ಚ ಕೇಳಿದನು
ಮಲಹರನ ಮನೆಯ ಪಡಿಲೆಂಕ, ಬಸವಣ್ಣ

ತಾತ್ಪರ್ಯ : ಈ ಶರೀರವೆಂಬುದು ಎಲುಬು ತೊಗಲಿನಿಂದ ಆವೃತವಾದದ್ದು, ಇದರೊಳಗೆ ರಕ್ತಮಾಂಸ ತುಂಬಿರುವುದು. ಹೀಗಿರುವಾಗ ಮನುಷ್ಯರಲ್ಲಿ ಹೀನಕುಲ

ಉತ್ತಮ ಕುಲ ಎಂದು ವಿಂಗಡಿಸಲುಬಾರದು ಎಂದು ಶಿವ ಸೇವಕರಾದ(ಭಕ್ತ) ಮೌನೇಶ್ವರರು ಹೇಳುತ್ತಾರೆ.

೪೭೦

ಕುಲದ ವಾಸಿಗೆ ಆಡಿ, ಹೊಲದ ಮೇರೆಗೆ ಆಡಿ
ಹೊಲೆ ಕೂಳಿಗಾಗಿ ಹೊಡೆದಾಡಿ ಸತ್ತಂಥ
ಹೊಲೆಯರ ಗೊಡವಿ ನಮಗೇಕೆ, ನಮ್ಮ ಶರಣರ
ಹೊಲಬು ಮರ್ತ್ಯರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಮನುಷ್ಯ ಬದುಕಿರುವ ವರೆಗೆ ಕೀರ್ತಿ, ಗೌರವ, ಜಾತಿ, ಕುಲ, ಹೊಲ, ಮನಿ ಸಂಪತ್ತಿಗಾಗಿಯೇ ಬಡಿದಾಡುತ್ತಾನೆ. ಅದನ್ನೇ ಬದುಕಿನ ಅಂತಿಮ ಸತ್ಯವೆಂದು ತಿಳಿದು ಅಜ್ಞಾನಿಯಾಗುತ್ತಾನೆ, ಸ್ವಾರ್ಥಿಯಾಗುತ್ತಾನೆ. ತುತ್ತು ಕೂಳಿಗಾಗಿ ಹೊಡೆದಾಡಿ ಸಾಯುವ ಹೊಲೆಯರ ಗೊಡವಿ ಸತ್ಯ ಶರಣರಿಗೆ ಸಲ್ಲದು, ನಿಜ ಶರಣರ ಮಾರ್ಗ ಇಂತಹ ಮಂದಮತಿಗಳಾದ ಮರ್ತ್ಯದ ಮಾನವರಿಗೆ ತಿಳಿಯುವುದಿಲ್ಲ.

೪೭೧

ಗಂಗೆಯೊಳು ಪುಳವಿರಲು, ಘನ ಹೇಸಿಕೆಗಳಿಲ್ಲ
ಅಂಗದೊಳು ಪುಳವಿರಲು, ಅದನು ಅತಿಗಳೆದು
ವಿಂಗಡಿಸುವರಲ್ಲಾ, ಬಸವಣ್ಣ

ತಾತ್ಪರ್ಯ : ಗಂಗೆ ಪವಿತ್ರಳು ಎಂಬುದು ಒಂದು ಕಾಲದ ಸತ್ಯವಾಗಿತ್ತು. ಇಂದು ಮಾನವನ ಅತಿಯಾದ ವಿಲಾಸಿ ಹಾಗೂ ವೈಭೋಗದ ಕಾರಣವಾಗಿ ಸ್ವಚ್ಛ ಮತ್ತು ಪವಿತ್ರವಾಗಿದ್ದ ನೀರು ತ್ಯಾಜ್ಯಗಳಿಂದ ಮಲಿನವಾಗಿ ಹುಳು ಮತ್ತು ಕೊಳಕಿನಿಂದ ತುಂಬಿರುವುದು. ಆದರೂ ಅದನ್ನು ಪವಿತ್ರವೆಂದೇ ಹಿಂದೂಗಳು ಭಾವಿಸುತ್ತಾರೆ. ಅದೇ ರೀತಿ ಮನುಷ್ಯನ ದೇಹದ ಅಂಗದೊಳಗೆ ಇಂತಹ ಕಲ್ಮಷ ಇದ್ದಾಗ ಅದನ್ನು ನಿಷ್ಕಲ್ಮಶಗೊಳಿಸುವ ಬದಲಾಗಿ ಹೀಗಳೆಯುವುದು ತಿರಸ್ಕರಿಸುವುದು ಆತ್ಮ ಮತ್ತು ದೇಹವೆಂದು ವಿಂಗಡಿಸುವುದು ಸರಿಯಾದ ಕ್ರಮವಲ್ಲ. ದೇಹ ಮತ್ತು ಆತ್ಮದ ಹೊಂದಾಣಿಕೆ ಮನುಷ್ಯ ಸಾಧನೆಗೆ ಪೂರಕ. ಅದರ ವಿಂಗಡಣೆ ಸಾಧನೆಗೆ ಮಾರಕವಾಗುತ್ತದೆ.

೪೭೨

ತವರ ತಾಮ್ರವನು ವಿವರದಲಿ ಕೂಡಿಸಿ
ಮಾಡಿದ ಹರನ ಓಂಕಾರದ
ಹರಿವಾಣದೊಳು ಬಿಟ್ಟು ಎಲೆಯ ಹೊಲಿದು

ತಿಂಬುವದು ಉಚಿತವೆ, ಇದು ನಮ್ಮ
ಕೆರವಿನ ಹೊಲಿಗೆಂದು ಅರಿಯರು
ಹೊಲೆ ಪಾಂಚಾಳರು, ಬಸವಣ್ಣ

ತಾತ್ಪರ್ಯ : ಕಲಾ ಜ್ಞಾನಿಯಾದ ಪಾಂಚಾಳನು ಲೋಹ ವಿದ್ಯೆಯಲ್ಲಿ ಪರಿಣಿತನು. ತವರ ತಾಮ್ರವನು ಹದವಾಗಿ ಮಿಶ್ರಣ ಮಾಡಿ ಪಂಚಲೋಹದಲ್ಲಿ ಹರನನ್ನೇ ಸೃಷ್ಟಿ ಮಾಡುವಂತ ಸೃಷ್ಟಿ ಪುರುಷ. ಇಂತಹ ಸೃಷ್ಟಿಕರ್ತನಾದ ಪಾಂಚಾಳನು ಓಂಕಾರದಿಂದ ಹರಿವಾಣದಲ್ಲಿ ಹರನಿಟ್ಟು ಪೂಜಿಸಿ ಎಲೆ ಹೊಲಿದು ತಿನ್ನುವುದುಚಿತವೆ. ಇಂತಹ ಹೊಲಿದ ಹೊಲಿಗೆಯು ಸಮಗಾರನೊಬ್ಬ ಕೆರವಿಗೆ ಹಾಕಿದ ಹೊಲಿಗೆಯಂತಿರುತ್ತದೆ. ಎರಕಹೊಯ್ದು ಮೂರ್ತಿಮಾಡುವ ಪಾಂಚಾಳರು ಹರಿವಾಣ ಬಿಟ್ಟು ಇಂತಹ ಹೊಲಿದ ಎಲೆಯೊಳು ಉಣ್ಣುವರು ಎಂದು ಮೌನೇಶ್ವರರು ವ್ಯಂಗ್ಯ ಮಾಡುತ್ತಾರೆ.

೪೭೩.

ಭೂಸುರರ ಕುಲವ ನಾಶ ಮಾಡಲಿಬೇಕೆಂದು
ನಾಶಿಯ ಗಿಡವನು ಕಳುಹಿದರು ಪ್ರಭುದೇವ
ಹೆಸರು ಯಾಕೊ, ತಮ್ಮ ಕುಲಗಳಿಗೆ ಇದು
ಕಾಸಿ ಕರಗಿಸುವ ಪರಿಯಂತೊ ಇದು
ಕಶ್ಯಪ ಕಳುಹಿದ ಪ್ರಸಾದ ಲೋಕದ
ವೇಶ್ಯೆಯರ ಮಕ್ಕಳಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಚಾತುರ್ವರ್ಣ ಪದ್ಧತಿಯಲ್ಲಿ ಮೇಲೆ ಬರುವ ಬ್ರಾಹ್ಮಣ ಕುಲ ಶ್ರೇಷ್ಠವೆಂದು ಉಳಿದ ಕುಲಗಳು ಅವರ ಆಜ್ಞಾಧಾರಕರಾಗಿ ಸೇವಾವೃತ್ತಿ ಮಾಡಬೇಕೆನ್ನುವ ನೀತಿ ಧರ್ಮ ಮತ್ತು ಪ್ರಭುತ್ವದ ಹೊಂದಾಣಿಕೆಯಿಂದಾಗಿ ಬೆಳೆದು ಬಂತು. ಇದು ಮನುಷ್ಯರಲ್ಲಿ ಶ್ರೇಷ್ಠ ಮತ್ತು ಹೀನ ಎನ್ನುವ ಜಾತಿ ಹಾಗೂ ಕುಲದ ಭೇದ ಬಿತ್ತಿ ಮನುಷ್ಯ ಕುಲವನ್ನು ಬೇರ್ಪಡಿಸಿತು. ಕುಲ ಮತ್ತು ಜಾತಿ ಕಾರಣವಾಗಿ ಸಮಾಜವನ್ನು ಒಡೆದ ಭೂಸುರರನ್ನು ನಾಶ ಮಾಡಲೆಂದು ಪ್ರಭುದೇವ ನಾಶ ಮಾಡುವ ಗಿಡ ಕಳುಹಿದನು. ಲೋಹವನ್ನು ಕಾಸಿ ಕರಗಿಸಿದಾಗ ಹೊಸರೂಪ ತಾಳುವಂತೆ ಕುಲಭೇದಗಳು ಕರಗಿ ನಾಶವಾಗಿ ಹೊಸ ಸಮಾಜ ಹುಟ್ಟಬೇಕು. ಅದಕ್ಕಾಗಿ ಮೌನೇಶ್ವರರಂತಹ ಹಲವು ಸಾಧಕರು ಹುಟ್ಟಿ ಬಂದು ಬೋಧಿಸಿದರೂ ಅಜ್ಞಾನಿಗಳಾದ ಈ ಲೋಕದ ಜನ ಅರ್ಥಮಾಡಿಕೊಳ್ಳಲಿಲ್ಲ. ಜಾತಿ ವಿನಾಶದ ಮಹತ್ವದ ಕಲ್ಪನೆಯನ್ನಿಲ್ಲಿ ಕಾಣಬಹುದು.

೪೭೪

ಗುಗ್ಗರಿ ತಿಂಬುವರು ಅಗ್ಗವಣಿ ಸಲಿಸುವರು
ಹುಗ್ಗಿಯ ಗಡಿಗಿ ಕಂಡರೆ ವಾರ್ಯಾಗಿ ಹೋಗುವರು ತಮ್ಮ
ಡೊಗ್ಗಾಲುತನ ಗುಣ ಬಿಡರು, ಬಸವಣ್ಣ

ತಾತ್ಪರ್ಯ : ಮನುಷ್ಯರಲ್ಲಿ ಕೆಲವರಿರುತ್ತಾರೆ. ಹುಗ್ಗಿಯಂತಹ ಸಿಹಿ ಪದಾರ್ಥ ಮಾಡಿ ಉಣ್ಣಲು ಕರೆದರೆ ಹೋಳುಬಿದ್ದು(ಮುಖತಿರುವಿ)ಹೋಗುತ್ತಾರೆ. ಅವರನ್ನು ಡಾಂಭಿಕ ಭಕ್ತರೆಂದು ಕರೆಯಬಹುದು. ಮೃಷ್ಟಾನ್ನ ಉಣ್ಣದೆ ಗುಗ್ಗರಿ ತಿಂದು ನೀರು ಕುಡಿದು ಯೋಗಿಯಂತೆ ಬಡಿವಾರ ಮಾಡುವ ಇವರು ಯಾವತ್ತೂ ಇನ್ನೊಬ್ಬರನ್ನು ಹೊಗಳಿ ಅವರ ಮುಂದೆ ಡೊಗ್ಗಾಲುಮಂಡಿ ಊರಿ ಅಧೀನರಾಗಿ ಬದುಕುತ್ತಾರೆ. ತನ್ನತನ ಕಳೆದುಕೊಳ್ಳುತ್ತಾರೆ.

೪೭೫

ಹಸಿಯ ತೊಗಲೊಳಗಣ ತುಪ್ಪ
ಬಸಿ ಬಸಿದು ಉಂಡ ಮೇಲೆ
ಕೊಸರ್ಯಾಡಬಹುದೆ ಕುಲಛಲಕೆ, ಲೋಕದ
ಮುಸುರಿಗೆ ಹತ್ತಿದ ನೊಣಗಳಿರ್ಯಾ ನಿಮ್ಮ
ಪಿಸರು ಶಾಸ್ತ್ರವ ಬಿಡರ್ಯಾಕೊ, ಬಸವಣ್ಣ

ತಾತ್ಪರ್ಯ : ಮಡಿ ಮಡಿ ಎಂದು ಅಡಿಗಡಿಗೆ ಹಾರುವ ಮಂದಿ ತೊಗಲಚೀಲ ದೊಳಗಿನ ತುಪ್ಪವನ್ನು ಬಸಿದು ಉಂಡ ಮೇಲೆ ಕುಲಗೋತ್ರಗಳ ಬಗ್ಗೆ ಮಾತನಾಡು ವುದು ಎಷ್ಟು ಸೂಕ್ತ. ಮಾತು ಮತ್ತು ಕೃತಿಯೊಳಗೆ ಹೊಂದಾಣಿಕೆ ಇರದ ಲೋಕದ ಮಂದಿ ಮುಸುರಿಗೆ ಹತ್ತಿದ ನೊಣಗಳಂತೆ ಕುಲ ಛಲಕ್ಕೆ ಅಂಟಿಕೊಳ್ಳುತ್ತಾರೆ. ಇನ್ನಾದರೂ ನಿಮ್ಮ ಹುಸಿ ಹಾಗೂ ಕೊಳಕು ಶಾಸ್ತ್ರದ ನಿಯಮಗಳ ಬಿಟ್ಟು ಸಾರ್ಥಕವಾಗಿ ಬಾಳಿರಿ ಎನ್ನುವಲ್ಲಿ ಜಾತಿ ವಿನಾಶದ ಪರಿಕಲ್ಪನೆಯನ್ನು ಕಾಣಬಹುದು.

೪೭೬

ಹೋರ ಮೇಲಿನ ಹುಣ್ಣು ಬಾಯಿ ಮೇಲೆ ಮೂಡಿದರೆ
ನಾಯಿಗಳಿಗೆಲ್ಲಿಯ ಕುಲವಯ್ಯ, ಲೋಕದ
ಹಾಳು ಶಾಸ್ತ್ರವ ಬಿಡಬೇಕು, ಬಸವಣ್ಣ

ತಾತ್ಪರ್ಯ : ಶಾಸ್ತ್ರದ ಹೆಸರಲ್ಲಿ ಜನರ ಶೋಷಣೆ ಮಾಡುತ್ತ ಜಾತಿ ಕುಲಗಳಲ್ಲಿ ಮೇಲು ಕೀಳು ಸೃಷ್ಟಿಸುತ್ತಾ ನಡೆ ಮತ್ತು ನುಡಿಯಲ್ಲಿ ಹೊಂದಾಣಿಕೆಯಿಲ್ಲದವರು ನಾಯಿಗಳಿಗಿಂತ ಕುಲಹೀನರು. ಅತಿ ಭೋಗ ಬಯಸುವವರ ಹೋರ ಮೇಲೆ

(ಯೋನಿ)ಹುಣ್ಣಾದಂತೆ ಅತಿ ಮಾತಾಡುವವರಿಗೂ ಮಾತು ತಪ್ಪುವವರಿಗೂ ವ್ಯತನೇಮ ಇಲ್ಲದವರ ಬಾಯಿಗೂ ಭಗಕ್ಕೂ ಅಂಥ ವ್ಯತ್ಯಾಸವಿಲ್ಲ. ಮಾತು ಮತ್ತು ಕೃತಿಗೂ ಹೊಂದಾಣಿಕೆ ಇಲ್ಲದ ಸ್ಥಿತಿಯನ್ನು ವಚನ ಹೇಳುತ್ತದೆ.

೪೭೭

ಹೋರಾಗ ಬಿದ್ದವರಿಗೆ ಬೇರೊಂದು ಕುಲವುಂಟೆ
ನೀರಿನ ಮಕ್ಕಳು ಜಗವೆಲ್ಲ ಹೋರಾಡುತಾರೆ
ಹೊಲೆಯರು, ಬಸವಣ್ಣ

ತಾತ್ಪರ್ಯ : ಅತಿಯಾದ ಸ್ತ್ರೀ ವ್ಯಾಮೋಹಕ್ಕೆ ಅಂಟಿಕೊಂಡು ತನ್ನ ಸುಖಸಂಪತ್ತು ಹಾಗೂ ವ್ಯಕ್ತಿತ್ವ ಕಳೆದುಕೊಂಡ ಕಪಟಿಗಳಿಗೆ ಬೇರೊಂದು ಬದುಕು ಮತ್ತು ಕುಲ ಇರಲಾರದು. ವಾರಾಂಗನೆಯರ ಸಂಗಮಾಡಿ ಕುಲಹೀನನಾಗಿ ಕುಲಸ್ಥರಂತೆ ನಟಿಸುವ ಹೊಲಿಯರನ್ನು ನಂಬಬಾರದು. ನೀರು ಸಕಲಚರಾಚರಗಳ ಸೃಷ್ಟಿಗೆ ಮೂಲವಾದದ್ದು. ಹೀಗಿರುವಾಗ ಕುಲ, ಛಲಗಳ ಚರ್ಚೆಯಿಂದ ಫಲವಿಲ್ಲ.

೪೭೮

ಊರ ಹಿಂದಿನ ಗುಂಡ ಕಂಡವರು ಕಾಲೆದ್ದಿ
ಕುಂಡಿ ಮುಂಡಗಳ ಅದರೊಳಗೆ ತೊಳೆದು
ಕಂಡ ನಾಯಿ ನರಿ ಕತ್ತೆ ಕಾಗೆಗಳು ಕೂಡಿ
ಉಂಡ ಮೇಲೆ ಛೀ ಆಯಿತಯ್ಯ ನಿಮ್ಮ ಆಚಾರ, ಬಸವಣ್ಣ

ತಾತ್ಪರ್ಯ : ಆಚಾರವಂತರೆಂದು ಹೇಳಿಕೊಂಡು ಜುಟ್ಟು ಜನಿವಾರ ಹಿಡಿದು ಊರ ಹಿಂದಿನ ಹೊಂಡದ ನೀರಿನಲ್ಲಿ ಮುಳಿಗೆದ್ದು ಮಡಿಯಾದೆವೆಂದು ಮೆರೆಯುವ ಮಂದಿಗೆ ಮತಿಯಿಲ್ಲ. ಏಕೆಂದರೆ ಊರ ಹಿಂದಿನ ಹೊಂಡದಲ್ಲಿ ಕಂಡವರು ಕಾಲೆದ್ದಿ ಕುಂಡಿ ಮುಂಡಗಳ ತೊಳೆದು ಕಲುಷಿತಗೊಳಿಸಿರುತ್ತಾರೆ. ಅಂತಹ ನೀರಲ್ಲಿ ಮುಳುಗಿ ಮಡಿಯಾದೆವೆಂದರೆ ಏನರ್ಥ. ಕಂಡ ನಾಯಿ ನರಿ ಕತ್ತೆ ಕಾಗೆಗಳಂತಹ ಗುಣಹೀನ ರೊಡನೆ ಕೂಡಿ ಉಂಡು ಕುಲಗೇಡಿ ಆದ ಆಚಾರವಂತರು ತಮ್ಮ ಕುಲದ ಸೊಕ್ಕು ಬಿಡಲಾರರು.

೪೭೯

ಸಕ್ಕರಿ ಬೆಲ್ಲದೊಳು ಸರ್ವರ ಎಂಜಲವು
ಹಕ್ಕಿಯ ಎಂಜಲವು ಹಣ್ಣು ಕಾಯಿ ಫಲವು
ಕುಕ್ಕನ ಎಂಜಲವು ಕೃಷ್ಣಾಜಿನ

ಕೊರಳೊಳಗೆ ಕಟ್ಟಲು ಠಕ್ಕಾಯಿತಯ್ಯ ನಿಮ್ಮ
ಆಚಾರವೆಲ್ಲ, ಬಸವಣ್ಣ

ತಾತ್ಪರ್ಯ : ವ್ಯಾಪಾರಿಯೊಬ್ಬ ಅಂಗಡಿಯಲ್ಲಿ ವ್ಯಾಪಾರಕ್ಕಾಗಿ ತೆರೆದಿಟ್ಟ ಸಕ್ಕರಿ ಬೆಲ್ಲವನ್ನು ಬಂದವರೆಲ್ಲ ತಿಂದು ರುಚಿ ನೋಡಿ ಕೊಳ್ಳುವಾಗ ಅದು ಸರ್ವರ ಎಂಜಲಾದಂತೆ, ಪೂಜೆಗೆ ಬಳಸುವ ಹಣ್ಣು ಕಾಯಿ ಫಲವು ಹಕ್ಕಿಯ ಎಂಜಲು, ಬಳಸುವ ಕೃಷ್ಣಾಜಿನ ನಾಯಿಯ ಎಂಜಲು. ಹೀಗೆ ಎಂಜಲಗೊಂಡ ಪದಾರ್ಥಗಳನ್ನೇ ಮೀಸಲು ವಸ್ತುವೆಂದು ಭ್ರಮಿಸಿ ದೇವರಿಗೆ ಅರ್ಪಿಸುವ ನಿಮ್ಮ ಆಚಾರ ಮೋಸದ್ದಲ್ಲವೆ. ಅದು ಪವಿತ್ರ ಮತ್ತು ಶ್ರೇಷ್ಠ ಹೇಗಾದೀತು.

೪೮೦

ಸತ್ತ ಪಶುವಿನ ತೊಗಲು ಜತ್ತಿಗಿ ಮಿಣಿ ಮಾಡಿ
ಹೊತ್ತು ಒಯ್ಯುವಿರಿ ನಿಮ್ಮ ಹೊಲ ಮನೆಗೆ
ಉತ್ತರಿಯ ಮಳೆ ಬಂದು ಸುತ್ತಿ ಸುತ್ತಿ ಬಡಿವಾಗ
ನೆತ್ತಿಯಿಂದಲಿ ನೀರು ಬಾಯಿಗೆ ಇಳಿದಾವು ಕಾಣಾ, ಬಸವಣ್ಣ

ತಾತ್ಪರ್ಯ : ಆಚಾರವಂತರೂ ಮಡಿವಂತರೂ ಎಂದು ಹೇಳುವ ಮಂದಿ ಸತ್ತ ಪಶುವಿನ ತೊಗಲಿಂದ ಮಾಡಿದ ಮಿಣಿಯನ್ನು ಕೃಷಿ ಕೆಲಸಕ್ಕಾಗಿ ಹೊಲದಿಂದ ಮನೆಗೆ ಮನೆಯಿಂದ ಹೊಲಕೆ ಹೊತ್ತೊಯ್ಯುತ್ತಿರುತ್ತಾರೆ. ಉತ್ತರಿಯ ಮಳೆ ಬಂದು ಸುತ್ತಿ ಬಡಿದಾಗ ನೆತ್ತಿಯ ಮೇಲಿನ ತೊಗಲ ಮಿಣಿಯ ನೀರು ನಿಮ್ಮ ಬಾಯಿಗಿಳಿದಾಗ ನಿಮ್ಮ ಶೀಲ ಆಚಾರ ಸತ್ತು ಹೋಗಲಿಲ್ಲವೆ?

೪೮೧

ಗಂಡೆರೆಳೆಯ ಪಿಡಕೊಂಡು ಗವಿಯಲ್ಲಿ ಒಯ್ದು
ಖಂಡ ಖಂಡವನು ಕಡಿದು ತಿಂದು ಮಿಕ್ಕ ತೊಗಲು
ತಂದು ಕಟ್ಟಿದರು ಎನ್ನ ಕೊರಳಿಗೆ ಕಟ್ಟಿ
ಕೊಂಡು ಹುರುಳಿಲ್ಲವಯ್ಯ ಎನ್ನ ಕುಲ ಕೇಳಿದರೆ
ಹೊಲೆಯರಿಗಿಂತ ಕಡಿಮೆಯಯ್ಯಾ ಬಸವಣ್ಣ

ತಾತ್ಪರ್ಯ : ಗಂಡು ಚಿಗುರೆಯ ಹಿಡಿದು ಗವಿಯಲ್ಲಿ ಒಯ್ದು ತುಂಡು ತುಂಡಾಗಿ ಕತ್ತರಿಸಿ ತಿಂದು ಅದರ ಮೈಯ್ಯ ತೊಗಲು ತಂದು ಎನ್ನ ಕೊರಳಿಗೆ ಕಟ್ಟಿದರು. (ಬ್ರಾಹ್ಮಣರು ಮಕ್ಕಳಿಗೆ ಉಪನಯನ ಮಾಡುವಾಗ ಚಿಗುರೆಯ ಚರ್ಮದ ತುಂಡನ್ನು ಜನಿವಾರದಲ್ಲಿ ಕಟ್ಟುವ ವಾಡಿಕೆ ಇದೆ). ಇದು ಪ್ರಯೋಜನವಿಲ್ಲ. ಕಾರಣ ಮನುಷ್ಯ ಹುಸಿ ಶ್ರೇಷ್ಠತೆಯ ಡಾಂಭಿಕತನದಿಂದ ಹೊರಬಂದು ಉಚ್ಚ ನೀಚ ಎನ್ನುವ ಮೇಲು ಕೀಳಿನ ಹಂಗನ್ನು ಮೀರಿ ನಿಲ್ಲಬೇಕು ಎನ್ನುವುದು ತಾತ್ಪರ್ಯ.

ಳಲ೨

ಇಲಿಯ ತಿಂಬುವ ಬೆಕ್ಕು ನಲಿಯುತಿದೆ ಮನೆಯೊಳಗೆ
ನಲವಿನಿಂದ ಪ್ರಸಾದವ ರುಚಿ ಮಾಡಿಕೊಂಡು
ಕುಲದಲಿ ಉತ್ತಮವೆಂದು ಆಡಿಕೊಳ್ಳಲಿ ಬೇಡ
ಹೊಲೆಗಲಿಸಿತಯ್ಯ ನಿಮ್ಮ ಆಚಾರವೆಲ್ಲ, ಬಸವಣ್ಣ

ತಾತ್ಪರ್ಯ : ಕುಲದಲಿ ಉತ್ತಮರೆಂದು ಹೇಳುವವರು ಆಚಾರಶುದ್ಧರೆಂದು ರುಚಿಯಾದ ಪ್ರಸಾದ ಮಾಡಿ ಶುಚಿಯಾಗಿ ತಿನ್ನುವರು. ಅಂತವರು ತಮ್ಮ ಮನದೊಳಗೆ ಇಲಿಯ ತಿನ್ನುವ ಬೆಕ್ಕಿನಂತೆ ತಮ್ಮ ಮನದ ಹೆಬ್ಬಯಕೆಗಳನ್ನು ಬೆಳೆಸಿಕೊಳ್ಳುವ ಮೂಲಕ ಅವಿಚಾರವಂತರಾಗಬಾರದು, ಕಪಟಿಗಳಾಗಬಾರದು.

ಳಲ೩

ಹೆಂಡಕ್ಕೆ ಖಂಡಕ್ಕೆ ದಂಡೆಲ್ಲ ನೆರೆವುದು
ಭೂಮಂಡಲಕಿದು ಘನವೆಂಬುವರು
ಕಂಡದ್ದನ್ನಾಡಿದರೆ ಕರ್ಮಿಪಾತಕನೆಂದು
ಚಾಂಡಾಲ ಹೊಲೆಯರು ಎನ್ನದನಕ ಬಿಡರು
ಇಂಥ ಆಗಮವನರಿಯದ ಅವಲಕ್ಷಣದ
ಕತ್ತೆಗಳಿಗೆ ಉಸುರಬಹುದೇ ಭುವನಕ್ಕೆ
ವಿಶ್ವನಾಥನೇ ದೈವ, ಬಸವಣ್ಣ

ತಾತ್ಪರ್ಯ : ಹೊಲಸು ಇದ್ದಲ್ಲಿ ನೊಣ ಮುತ್ತುವಂತೆ ಅವಿಚಾರವಿದ್ದಲ್ಲಿ ಜನ ಮುತ್ತುತ್ತಾರೆ. ಸುವಿಚಾರ ಅವರಿಗೆ ಆಗದು, ಹೆಣ್ಣು, ಹೆಂಡ, ಖಂಡಕ್ಕೆ ದಂಡಿಯಾಗಿ ನೆರೆವ ಭಂಡ ಮಂದಿ ತಮ್ಮ ನಡತೆಯೇ ಭೂಮಂಡಲಕೆ ಘನವೆನ್ನುವರು. ಇಂತಹ ಮಂದಮತಿಗಳಿಗೆ ಸುಬುದ್ಧಿ ಹೇಳ ಹೋದರೆ ಕರ್ಮಪಾತಕನೆಂದು ಕರೆಯುವಂತಹ ಚಾಂಡಾಲರವರು. ಬುದ್ಧಿ ಹೇಳಿದರೆ ಗುದ್ದಾಡ ಬರುವ ಬುದ್ಧಿಹೀನರು. ಇಂತಹ ವಿವೇಕಶೂನ್ಯರನ್ನು ತಿದ್ದಲಾಗದು.

ಳಲ೪

ತುಲ್ಲಾಗ ಬಿದ್ದವರಿಗೆ ಎಲ್ಲಿಯ ಕುಲವಯ್ಯ
ಬುಲ್ಲಿಯ ಮಕ್ಕಳು ಜಗವೆಲ್ಲ ಇವರ
ಗಿಲ್ಲಾಟವ ನೋಡು, ಬಸವಣ್ಣ

ತಾತ್ಪರ್ಯ : ಸ್ತ್ರೀ ಲೋಲುಪನಾಗಿ ಅತಿ ಕಾಮಿಯಾಗಿ ರತಿ ಸುಖದಲ್ಲಿ ತನ್ನ ತನವನ್ನೇ ಕಳೆದುಕೊಂಡವನಿಗೆ ತನ್ನ ಜಾತಿ ಕುಲಗಳ ಅರಿವು ಇರದು. ಭೋಗ ಸುಖ

ಕ್ಕಾಗಿಯೇ ಬದುಕುವ ಅಂತವರಿಗೆ ಹುಟ್ಟುವ ಅನಾಥ ಮತ್ತು ನತದೃಷ್ಟ ಮಕ್ಕಳೇ ಜಗವೆಲ್ಲ ತುಂಬಿದ್ದಾರೆ. ಹೀಗಿರುವಾಗ ಸದಾಚಾರಿಗಳಿಗೆ ಜಗವೆಲ್ಲಿಯದು.

೪೮೫

ಆಸಾದಿ ಗುರುಮೂರ್ತಿ ಪೋತರಾಜನೆ ದೈವ
ಜಾತವ ಕೇಳುವ ಹೊಲೆ ಕುಲದೊಳಗೆ
ಹೇತ ಹೇಲಿನವಳಗೆ ಇರುವ ಹುಳುವು ನಾನಯ್ಯ
ನೂತುಣ್ಣಲಾರದೆ ಒಡಲು ಹೊರೆವ ಪಾಪಿಗೆ
ಗೋತ್ರ ಉಂಟೇನು ಪ್ರಭುದೇವರೆ, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ಅಹಂಕಾರ ನಿರಸನದ ವಚನವಿದು. ಗುರುವಿನ ಅನುಗ್ರಹ ದಿಂದ ನನಗೆ ಪೋತರಾಜನೇ ದೈವ. ಹುಟ್ಟಿದ ಕುಲ ಕೇಳುವ ಹೊಲೆಯರ ಕುಲದೊಳಗೆ ಇರುವ ಸಣ್ಣ ಹುಳುವು ನಾನಯ್ಯ. ದುಡಿದುಣ್ಣಲಾರದೆ ಹೊಟ್ಟೆ ಹೊರೆವ ನನ್ನಂತವರಿಗೆ ಗೋತ್ರವಿಲ್ಲವೆನ್ನುವಲ್ಲಿ ವಿಶ್ವಮಾನವ ತತ್ತ್ವವನ್ನು ಮೌನೇಶ್ವರರು ಹೇಳಿದ್ದಾರೆ.

೪೮೬

ಕಳಗ್ಯಾಡು ಮಳ್ಳಾಡು ಬೋಳಾಡು ಬುಟ್ಟ್ಯಾಡು ನಮ್ಮ
ಅಜಗೊಂಡನ ಮನೆಯ ಹಿಕ್ಕೆಲ್ಲ ಒಂದೆ, ಬಸವಣ್ಣ

ತಾತ್ಪರ್ಯ : ಹರೆಯದ ಅಡಿನ ಮರಿಯಾಗಲಿ, ಮಳ್ಳು ಹಿಡಿದ ಆಡಾಗಲಿ, ಬೋಳು ಅಂದರೆ ಕೊಂಬಿಲ್ಲದ ಆಡಾಗಲೀ, ಬುಟ್ಟಾಡು ಇದ್ದರೂ ಅಜಗೊಂಡ ಅಂದರೆ ಕುರುಬಗೊಂಡನ ಮನೆಯ ಹಿಕ್ಕೆಲ್ಲ ಒಂದೇ. ಆಡುಗಳು ಯಾವ ಬಗೆಯವಾದರು ಯಾವ ವಯಸ್ಸಿನವಾದರೂ ಅವು ಹಾಕುವ ಹಿಕ್ಕಿ ಒಂದೇ. ಅದರಲ್ಲಿ ಭೇದವೆಣಿಸ ಲಾಗದು.

೪೮೭

ಜಗವು ಜನಿಸಿದ ಬಗೆಯಲ್ಲ ಬಲ್ಲಿರಿ
ಅಘಹರನಂತೆ ಶಿವಶರಣರೆಲ್ಲರೂ
ಭಗದಲ್ಲಿ ಬಂದದ್ದು ಜಗವೆಲ್ಲ
ತಿಗದಲ್ಲಿ ಯಾರೂ ಬರಲಿಲ್ಲ
ಈ ಕ್ರಮದ ಬಗೆಯಲ್ಲದೆ
ಹಗೆಯೆಲ್ಲಿ ಬಂತು, ಬಸವಣ್ಣ

ತಾತ್ಪರ್ಯ : ಜಗದ ಮನುಜರೆಲ್ಲರ ಸೃಷ್ಟಿಯೂ ತಾಯಿ ಗರ್ಭದಿಂದಲೇ ಆಗಿರುವಂತದ್ದು. ಶಿವನಾದಿಯಾಗಿ ಶಿವಶರಣರೆಲ್ಲರೂ ಯೋನಿ ಸಂಜಾತರು. ಯಾರು ತಿಗದಲ್ಲಿ ಅಸಹಜವಾಗಿ ಜನಿಸಲಿಲ್ಲ. ಅಯೋನಿಜರೂ ಅಲ್ಲ. ತಾಯಿ ಗರ್ಭದಿಂದ ಜನಿಸುವುದು ಸ್ವಾಭಾವಿಕ ಕ್ರಮ ಎಂದು ಹೇಳಿದೆ ವಿನಃ ಇದು ಹಗೆಯಿಂದ ವೈರತ್ವದಿಂದ ಹೇಳಿದ ಮಾತಲ್ಲ. ಅಯೋನಿಜರೆನ್ನುವವರೆಲ್ಲರೂ ತಿಳಿಯಲಿ. ಹುಟ್ಟಿನಲ್ಲಿ ಮೇಲು ಕೀಳು ಸಲ್ಲದು.

೪೮೮

ಬಣಜಿಗ ಭಕ್ತನಲ್ಲ ಹಣಜಿಯ ತೆನೆಯಲ್ಲ
ನೊಣದ ತಲೆಯೊಳಗೆ ವಿಷವುಂಟು
ಬಣಜಿಗರ ಕುಲಕೆ ನೆಲೆ ಇಲ್ಲ, ಬಸವಣ್ಣ

ತಾತ್ಪರ್ಯ : ಬಣಜಿಗರ ಸ್ವಭಾವವನ್ನು ವಚನ ಸೂಚಿಸುತ್ತದೆ. ಬಣಜಿಗರು ವ್ಯಾಪಾರಸ್ತರು. ಅವರಿಗೆ ವ್ಯಾಪಾರ ಧರ್ಮ ಮುಖ್ಯವೇ ಹೊರತು, ಭಕ್ತಿ ಪ್ರೀತಿ ಮುಖ್ಯವಾಗುವುದಿಲ್ಲ. ಅದೇ ರೀತಿ ಹಣಜಿ ಅಂದರೆ ಕಾಡು ಹುಲ್ಲು, ಜೋಳದ ಬೆಳೆಯೊಂದಿಗೆ ಎಷ್ಟೆತ್ತರ ಬೆಳೆದರೂ ತೆನೆ ಹಾಕಿದರೂ ಅದು ಜೋಳದಂತೆ ಅನ್ನ ಆಹಾರವನ್ನು ಕೊಡಲಾರದು. ನೊಣದ ತಲೆಯಲ್ಲಿ ಹೇಗೆ ವಿಷವುಂಟೋ ಹಾಗೆ ವ್ಯಾಪಾರ ಧರ್ಮದ ಬೆನ್ನುಹತ್ತಿ ಮೋಸ ವಂಚನೆ ಮಾಡುವ ವಿಷಕಂಠಕರಿಗೆ ಸರಿಯಾದ ನೆಲೆ ಸಿಗುವುದಿಲ್ಲ.

೪೮೯

ಜಾಡ ಊಂಕಿಯ ಹೂಡಿ ನಾಡ ಉಗುಳನೆ ಹಚ್ಚಿ
ಕೋಡಿನ ಲಾಳಿಯಲಿ ಹೊಕ್ಕು ನೆಯ್ದು ಕೂಡಿದ ಸತಿಯಳ
ಸೆರಗು ಬಾಯಿಲಿ ಕಚ್ಚಿದ ಮೇಲೆ ನಿಮ್ಮ
ನಾಡ ಶಾಸ್ತ್ರಗಳೆಲ್ಲ ಸುಡಬೇಕು, ಬಸವಣ್ಣ

ತಾತ್ಪರ್ಯ : ಜಾಡನ ಕೆಲಸ ನೇಯುವುದು. ಆತ ಊಂಕಿಯ ಸುತ್ತುವಾಗ ಚೆನ್ನಾಗಿ ಉಗುಳು ಹಚ್ಚಿ ಲಾಳಿಯಲ್ಲಿ ನೇಯ್ದಿರುತ್ತಾನೆ. ಆತನ ಉಗುಳು ಅಂದರೆ ಎಂಜಲು ನೂಲಿನೊಂದಿಗೆ ಇಡೀ ಸೀರೆಯ ಮೈಯ್ಗೆ ಅಂಟಿಕೊಂಡಿರುತ್ತದೆ. ಮೈಲಿಗೆ ಮಡಿ ಎಂದು ಸೋಗು ಮಾಡುವವರು ತಮ್ಮ ಸತಿಯೊಂದಿಗೆ ಬೆರೆತು ಕೂಡುವಾಗ ಅವಳ ಸೆರಗು ಬಾಯಲಿ ಕಚ್ಚಿ ಸರಸವಾಡಿದ ಮೇಲೆ ಮಡಿ ಮೈಲಿಗೆಗಳನ್ನು ಹೇಳುವ ನಿಮ್ಮ ಶಾಸ್ತ್ರಪುರಾಣಗಳು ನಿಷ್ಪ್ರಯೋಜಕವಾದವು. ನಿಮ್ಮ ಮಡಿ ಹಾರಿ ಹೋಯಿತು, ವಿಫಲವಾಯಿತು ಎಂದು ಹೇಳುತ್ತಾರೆ.

೪೯೦

ನಾಯಿದನ ಚಿಪ್ಪಿನೊಳು ನಾಡೆಲ್ಲ ಕೂಡುಂಡ ಮೇಲೆ
ನ್ಯಾಯಗಳು ಯಾತಕ್ಕೆ, ಸತ್ತ ನಾಯಿಯ ಹಾಗೆ ಇರಬೇಕು, ಬಸವಣ್ಣ

ತಾತ್ಪರ್ಯ : ಕುಲಸ್ಥರೆಂದು ಮಡಿವಂತರೆಂದು ಮಡಿ ಮಾಡುವ ಕುಲಶ್ರೇಷ್ಠರೇ ಕ್ಷೌರಿಕನ ಕಲ್ಲಿನ ಚಿಪ್ಪಿನಲ್ಲಿ(ಕಲ್ಗಡಗಿ)ಅಂದರೆ ಮುಖಕ್ಕೆ ತಲಿಗೆ ನೀರು ಹಚ್ಚಲು ಬಳಸುವ ಸಣ್ಣ ಬಟ್ಟಲಿನಲ್ಲಿ ನಾಡೆಲ್ಲ ಕೂಡಿ ಉಂಡ ಮೇಲೆ, ಅಂದರೆ ಊರವರೆಲ್ಲರ ಕ್ಷೌರ ಮಾಡಬೇಕಾದರೆ ಕ್ಷೌರಿಕ ಅದೇ ಬಟ್ಟಲಿನ ನೀರನ್ನು ಎಲ್ಲರಿಗೂ ಹಚ್ಚುತ್ತಾನೆ. ಹಾಗೆ ಮಡಿವಂತರಿಗೂ ಅದೇ ಬಟ್ಟಲಿನ ನೀರನ್ನು ಹಚ್ಚಿ ಕ್ಷೌರ ಮಾಡಿರುತ್ತಾನೆ. ಅಂದ ಮೇಲೆ ಯಾತಕ್ಕೆ ಮಡಿ ಮೈಲಿಗೆ ಮೇಲು ಕೀಳು ಎಂದು ಚೀರಾಡಬೇಕು. ಸತ್ತ ನಾಯಿಯ ಹಾಗೆ ಇರಲಾಗದೆ ವಿಪ್ರರಿಗೆ.

೪೯೧

ಚಿಪ್ಪಿನೊಳಗಣ ನೀರು ತೆಗೆದುಕೊಂಡು
ಹೆತ್ತ ತಾಯಿಯಂತೆ ಮುಖ ತೊಳಿವವನ
ಕುಲ ಕೆಟ್ಟದೆನಬಹುದೆ, ಬಸವಣ್ಣ

ತಾತ್ಪರ್ಯ : ಹಿಂದಿನ ವಚನದ ಮುಂದುವರಿಕೆಯನ್ನೇ ಇಲ್ಲಿ ಕಾಣಬಹುದು. ಕ್ಷೌರ ಮಾಡಬೇಕಾದರೆ ಅದರಲ್ಲೂ ಗಡ್ಡ ಬೋಳಿಸಬೇಕಾದರೆ ಕ್ಷೌರಿಕ ತನ್ನ ಬಟ್ಟಲದೊಳಗಿನ ನೀರಿನಿಂದ ಹೆತ್ತ ತಾಯಿಯಂತೆ ವಾತ್ಸಲ್ಯದಲ್ಲಿ ಕ್ಷೌರ ಮಾಡುವ ಮೊದಲು ಮತ್ತು ನಂತರ ಮುಖ ತೊಳೆಯುತ್ತಾನೆ. ಅಂತಹ ತಾಯಿಯ ವಾತ್ಸಲ್ಯ ನೀಡುವವನ ಕುಲವನ್ನು ಕಡಿಮೆ ಎನ್ನಬಹುದೇ ಎನ್ನುವಲ್ಲಿ ಕುಲ ಮದದ ಸೊಕ್ಕು ಮುರಿಯುವುದರ ಜೊತೆಗೆ ಕೆಳಕುಲಗಳ ಶ್ರಮವನ್ನು ಮೌನೇಶ್ವರರು ಎತ್ತಿ ಹಿಡಿಯುತ್ತಾರೆ.

೪೯೨

ಎಂಜಲು ಮೈಲಿಗಿ ಹೊಂದಿದ ಕಾರಣದಿಂದ
ಕೊಂಡರು ಮಧುವಯ್ಯನೆಂಬವನ ಮಗಳನು
ಮಧುವರಸನೆಂಬವನ ಮಗನಿಗೆ ಕೊಂಡರೆ
ಕುಂದು ಇನ್ನೇನು ಧರೆಯೊಳಗೆ, ಬಸವಣ್ಣ

ತಾತ್ಪರ್ಯ : ಬಹುಶಃ ಹನ್ನೆರಡನೇ ಶತಮಾನದಲ್ಲಿ ಶರಣ ಧರ್ಮ ಸ್ವೀಕರಿಸಿದ ಹರಳಯ್ಯನ ಮಗಳನ್ನು ಮಧುವರಸರ ಮಗನಿಗೆ ಮದುವೆ ಮಾಡಿದ ಸಂಗತಿಯನ್ನು ವಚನ ಸೂಚಿಸುತ್ತದೆ ಎನಿಸುತ್ತದೆ. ಪ್ರಗತಿಪರ ಮನೋಧರ್ಮದವರಾದ ಮೌನೇಶ್ವರರು ಈ ಮದುವೆ ನಡೆದದ್ದರಲ್ಲಿ ದೋಷವೇನು ಎಂದು ಕೇಳುತ್ತಾರೆ. ಆ ಮೂಲಕ ಜಾತಿ ಭೇದಗಳು ನೀಗಬೇಕೆನ್ನುವ ಭಾವ ಅವರದ್ದು.

೪೯೩

ಎತ್ತು ಎಮ್ಮೆ ಸತ್ತರೆ ಹೊರುವವರು ಇವರು
ಉತ್ತಮ ಮಾದಿಗರು
ಕತ್ತೆ ಆನೆಯು ಸತ್ತರೆ ಹೊರದವರು ಇವರು
ಎತ್ತಣ ಮಾದಿಗರು, ಬಸವಣ್ಣ

ತಾತ್ಪರ್ಯ : ಎತ್ತು ಎಮ್ಮೆ ಕತ್ತೆ ಆನೆ ಇವು ಶ್ರಮ ಬದುಕಿನ ಸಂಕೇತಗಳು. ಉಳುವ ಎತ್ತು, ಹಿಂಡುವ ಎಮ್ಮಿ ಸತ್ತರೆ ಮೆರವಣಿಗೆ ಮಾಡಿ ಮಣ್ಣು ಗೂಡಿಸುವರು. ಶ್ರಮದ ಪ್ರತೀಕವಾದ ಕತ್ತೆ ಮತ್ತು ಆನೆ ಸತ್ತರೆ ಉಪೇಕ್ಷೆ ಮಾಡುವರು. ಇವರೆತ್ತ ಕುಲವಂತರು. ಪ್ರಾಣಿಗಳ ಸಾವಿನಲ್ಲಿಯೂ ಭೇದ ತೋರುವ ಇವರು ಮಾದಿಗರಿಗಿಂತ ಕನಿಷ್ಠರು.

೪೯೪

ಎಲುವು ಇಲ್ಲದ ನಾಲಿಗೆ ಹಲವು ಶಾಸ್ತ್ರವನೋದಿ
ಫಲವಿಲ್ಲದಂತೆ ಕೆಲದಾಡಿ ಸತ್ತಂಥ
ಹೊಲಿಯರ ಗೊಡವಿ ನಮಗ್ಯಾತಕೆ, ಬಸವಣ್ಣ

ತಾತ್ಪರ್ಯ : ವೇದ ಶಾಸ್ತ್ರವು ಪುರಾಣಾದಿಗಳಂತಹ ಹಲವು ಶಾಸ್ತ್ರಗಳನ್ನು ವ್ಯಾಕರಣಾದಿ ಗ್ರಂಥಗಳನ್ನು ಓದಿದರೂ ಎಲುಬಿಲ್ಲದ ನಾಲಿಗೆಯಿಂದ ಅಪದ್ದ ನುಡಿಯುತ್ತ ಓದಿನ ಫಲವನ್ನು ಪಡೆಯದೇ ಅನುಭಾವಿಯಾಗದೆ ಹಾಗೆ ಸತ್ತು ಹೋಗುವ ಅಂದರೆ ಶುಷ್ಕ ಪಂಡಿತರ ಸಹವಾಸ ನಮಗ್ಯಾಕೆ. ಅಂತವರ ಸಹವಾಸಕ್ಕಿಂತ ಅಲ್ಲಮನಂತಹ ಜ್ಞಾನಿಗಳ ಸಹವಾಸವೇ ಸಾಕು ಎನ್ನುತ್ತಾರೆ ಮೌನೇಶ್ವರರು.

೪೯೫

ಕುಲುಮಿ ಇಲ್ಲದಿದ್ದರೆ ಕುಲವಿಲ್ಲ ಗೋತ್ರವಿಲ್ಲ
ಹಲವು ಪರಿಯ ಆಯುಧಗಳಿಲ್ಲ ಲೋಕದ
ಕಿಲುಮಿ ಕೀಟಕದ ಹುಳಗಳಿರಾ, ಬಸವಣ್ಣ

ತಾತ್ಪರ್ಯ : ಕುಲುಮಿ ಎನ್ನುವುದು ನಾಗರಿಕತೆಗೆ ಮುನ್ನುಡಿ ಬರೆದ ಸಾಂಸ್ಕೃತಿಕ ಪರಿಕಲ್ಪನೆ. ಕಬ್ಬಿಣದ ಆವಿಷ್ಕಾರ. ಮನುಷ್ಯನನ್ನು ಅಧೀಮತ್ವದಿಂದ ಬೇರ್ಪಡಿಸಿತು. ಅಂತಹ ಕುಲುಮಿ ಹುಟ್ಟದಿದ್ದರೆ ನಾಗರಿಕತೆ ಬೆಳೆಯುತ್ತಿರಲಿಲ್ಲ. ಹಲವು ಕುಲ ಗೋತ್ರಗಳು ಹಲವು ಬಗೆಯ ಆಯುಧಗಳು ಆವಿಷ್ಕಾರವಾಗುತ್ತಿರಲಿಲ್ಲ. ಕುಲುಮಿ ಆಯುಧಗಳ ಆವಿಷ್ಕಾರದೊಂದಿಗೆ ಹಲವು ಉದ್ಯೋಗಗಳನ್ನು ಸೃಷ್ಟಿಸಿತು. ಅಂತಹ ನಾಗರಿಕತೆಯ ಸ್ಪರ್ಶ ನೀಡಿದ ಕುಲ ಪಾಂಚಾಳರದು ಎನ್ನುವುದು ವಚನದ ಭಾವ.

೪೯೬

ಅಷ್ಟು ಹುಳಗಳನೆಲ್ಲ ಮೆಟ್ಟಿ ಗಾಣಕೆ ಹಾಕಿ
ಇಟ್ಟು ಶಿಡ್ಲಿಕೆಯ ತುಂಬಿ
ಬಟ್ಟಲೊಳು ತೆಗೆದುಕೊಂಡು ಬಾಯಿ ಸವಿದುಂಬಾಗ
ಸುಟ್ಟು ಹೋಯಿತು ನಿಮ್ಮ ಕುಲದ ಆಚಾರವೆಲ್ಲ, ಬಸವಣ್ಣ

ತಾತ್ಪರ್ಯ : ಅಷ್ಟು ಹುಳಗಳನ್ನೆಲ್ಲ ತುಳಿದು ಗಾಣಕೆ ಹಾಕಿ ಅದರಿಂದ ತಗೆದ ಎಣ್ಣೆಯನ್ನು ತೊಗಲಿನ ಚೀಲದೊಳಗೆ ತುಂಬಿಟ್ಟು ಬಳಕೆಗಾಗಿ ಅದರೊಳಗಿನ ಎಣ್ಣೆಯನ್ನು ಬಟ್ಟಲಲಿ ತಗೆದುಕೊಂಡು ಹದವಾದ ಅಡಿಗೆ ಮಾಡಿ ಬಾಯ್ತುಂಬ ಸವಿದು ಉಣ್ಣುವಾಗ ಸುಟ್ಟು ಹೋಯಿತು ನಿಮ್ಮ ಶೀಲ, ಕೆಟ್ಟು ಹೋಯಿತು ನಿಮ್ಮ ಕುಲದ ಆಚಾರವೆಲ್ಲ ಎಂದು ಡಾಂಭಿಕರು ಮಾಡುವ ಕುಲಾಚಾರದ ಸಂಗತಿಗಳನ್ನು ವಿಡಂಬಿಸುತ್ತಾರೆ.

೪೯೭

ಈತ ಹಿಂದೂ ಮುಸಲ್ಮಾನ ಹೋತೆ
ಬಾತ ಕರೇತೊ ಶಂಭುಸಮತೆ ಹೋತೆ
ಪುತ್ರಪೂಜಿ ತೋ ಖ್ಯಾಲ ಕಡೆಗಾಹಿ ಗಮ್ಮಾತ
ಪಂಚಮುಖ ಪರಮಾತ್ಮ ಹೋತೆ, ಬಸವಣ್ಣ

ತಾತ್ಪರ್ಯ :

೪೯೮

ಊರುಂಬ ಬಾವಿಯೊಳು ನೂರು ಕೋಟಿ ಹುಳವು
ಸಾಯುವ ಜಂತುಗಳು ಅದರೊಳಗೆ ಕೋಟಿ
ನೀರನೆ ತಕ್ಕೊಂಡು ಮಜ್ಜನಕ್ಕೆ ಎರೆವಾಗ ನಿಮ್ಮ
ಘೋರ ಶಾಸ್ತ್ರಗಳೆಲ್ಲ ಹಾರಿ ಹೋದವು, ಬಸವಣ್ಣ

ತಾತ್ಪರ್ಯ : ಊರು ಮಂದಿಯೆಲ್ಲರೂ ಬಳಸುವ ಬಾವಿಯ ನೀರಿನಲ್ಲಿ ನೂರು ಕೋಟಿ ಹುಳಗಳು, ಅದರೊಳಗೆ ಕೋಟಿ ಜಂತುಗಳು ಸತ್ತು ಹುಟ್ಟುವಂತವು. ಅಂತಹ ಜಂತುಗಳು ಸತ್ತು ಹುಟ್ಟುವ ಬಾವಿಯ ನೀರನ್ನೆ ತೆಗೆದುಕೊಂಡು ಮಜ್ಜನ, ಭೋಜನಗಳಿಗೆ ಬಳಸುವಾಗ ನಿಮ್ಮ ಘೋರ ಶಾಸ್ತ್ರಗಳೆಲ್ಲ ಹಾರಿ ಹೋದವು. ಬಾಹ್ಯ ಮಡಿವಂತಿಕೆ ಬಿಡಿರಯ್ಯ ವಿಪ್ರರೆ ಎನ್ನುವ ಭಾವ ವಚನದ್ದು.

೪೯೯

ಎದ್ದು ಬಿದ್ದ ಕ್ಷತ್ರಿಯರ ಎತ್ತುವ ಗುರುಬಂದ
ಮತ್ತೆ ಮರ್ತ್ಯಕ್ಕೆ ಉಳವಿಲ್ಲ ಪಂಚಾನನ
ಪುತ್ರರಿಗೆ ಕೌಲು ಕೊಡಬಂದ, ಬಸವಣ್ಣ

ತಾತ್ಪರ್ಯ : ಭಾರತ ಅಥವಾ ಕರ್ನಾಟಕ ಕ್ಷಾತ್ರ ತೇಜಸ್ಸಿಗೆ ಹೆಸರಾದದ್ದು ಕ್ಷತ್ರಿಯ ಎನ್ನುವುದನ್ನು ಕೇವಲ ಒಂದು ಕುಲವಾಗಿ ನೋಡುವುದಕ್ಕಿಂತ ಅದನ್ನು ಧೈರ್ಯ ಸಾಹಸಗಳ ಪರಿಕಲ್ಪನೆಯಾಗಿ ನೋಡಬೇಕು. ಹೋರಾಟದ ಮನೋಭಾವ ಎನ್ನುವುದು ಸಮಾಜಮುಖಿಯಾದಾಗ ಆ ಸಮಾಜ ರಕ್ಷಣಾತ್ಮಕವಾಗಿರುತ್ತದೆ. ಅದು ಜಾತಿ, ಧರ್ಮ, ವ್ಯಕ್ತಿಗೆ ಸಿಮೀತವಾದಾಗ ಸಮಾಜಕ್ಕೆ ಗಂಡಾಂತರ ಒದಗುತ್ತದೆ. ಅಂತಹ ಸಮಾಜ ಯಾವ ಕಾರಣಕ್ಕೂ ಉಳಿಯಲಾರದು ಎನ್ನುವ ಎಚ್ಚರಿಕೆ ನೀಡಲು ಮೌನೇಶ್ವರರು ಜನ್ಮ ಎತ್ತಿ ಬರುತ್ತಾರೆ.

೫೦೦

ಕಲೆಯು ಮಾಸುವದಿಲ್ಲ ಕುಲಕೆ ಕುಂದುಗಳಿಲ್ಲ
ಮಲ ಮಾಂಸ ರಕ್ತದೊಳಗಿರುವ ಜೀವನಕೆ ಲಕ್ಷಾಂತ್ರ
ಬೆಲೆಯಿಲ್ಲ, ಬಸವಣ್ಣ

ತಾತ್ಪರ್ಯ : ಮನುಷ್ಯ ಎಷ್ಟೇ ದೊಡ್ಡವನಾದರೂ ಸತ್ತ ನಂತರ ವಸ್ತುವಿಗಿರುವ ಬೆಲೆ ಅವನಿಗಿರುವುದಿಲ್ಲ. ನೆಲನಾಳ್ದನ ಹೆಣ ಬಂದರೆ ಒಂದಡಿಕಿಗೆ ಕೊಳ್ಳುವವರಿಲ್ಲ ಎನ್ನುವ ಬಸವಣ್ಣನವರ ಮಾತಿನಂತೆ ಮನುಷ್ಯನು ಸತ್ತಾಗಲೀ ಇದ್ದಾಗಲೀ ಅವನಿಗೆ ಹಣಕ್ಕಿರುವ ಬೆಲೆ ಇಲ್ಲ. ಗಾಯದ ಕಲೆ ಮಾಸುವುದಿಲ್ಲ ಕುಲಗಳಲ್ಲಿ ಯಾವುದೂ ಹೀನವಲ್ಲ. ಮಲ, ಮಾಂಸ, ರಕ್ತದಿಂದ ತುಂಬಿದ ಈ ದೇಹಕ್ಕೆ ಯಾವ ಗೌರವವೂ ಇಲ್ಲ. ಬೆಲೆ ಬರಬೇಕಾದರೆ ಅದನ್ನು ಸುಜ್ಞಾನ ಪಥದಲ್ಲಿ ನಡೆಸಬೇಕು.

೫೦೧

ಅಗ್ಗವಣಿ ಒಂದಾದ ಮೇಲೆ ಅನ್ನವು ಬ್ಯಾರ್ಯಾಗುವುದೆ
ಹಗರಣದ ಹಗೆಗೆ ಕೆಲಕೆಲದಾಡುವವರಿಗೆ
ಸ್ವರ್ಗವದು ದೂರ, ಲೋಕದ
ಡೊಗ್ಗಲ ಶಾಸ್ತ್ರವ ಬಿಡರ್ಯಾಕೆ, ಬಸವಣ್ಣ

ತಾತ್ಪರ್ಯ : ಅಕ್ಕಿ ಅನ್ನವಾಗಬೇಕಾದರೆ ನೀರು ಬೇಕೇ ಬೇಕು. ಅಂತಹ ನೀರು ಕುದಿದು ಅನ್ನದೊಂದಿಗೆ ಒಂದಾದ ಮೇಲೆ ಅನ್ನ ಬೇರಾಗುವುದೇ. ಬರಿ ಒಣ

ಹರಟೆ ಮಾಡುವ ಅಜ್ಞಾನಿಗಳಿಗೆ ಸ್ವರ್ಗ ಅಥವಾ ಆನಂದ ಬಹುದೂರ. ಶಾಸ್ತ್ರಗಳು ಹೇಳುವ ಮಡಿ ಮೈಲಿಗೆಯೇ ಹುಸಿಯಿರುವಾಗ ಅವನ್ನು ಪ್ರತಿಪಾದಿಸುವ ಶಾಸ್ತ್ರಗಳ ಹಂಗೇಕೆ.

೫೦೨

ಅತ್ತಿ ಆಲದ ಹಣ್ಣು ಮತ್ತ ಬೋರೆಯ ಹಣ್ಣು
ಸುತ್ತಿಕೊಂಡ ಹಿಪ್ಪೆಹುಳವು ಎಲ್ಲ
ನಿತ್ಯ ನಿತ್ಯ ಇವು ತಿಂದರೂ ಉತ್ತಮರೆಂಬಿರಿ
ವ್ಯರ್ಥವಾಯಿತು ನಿಮ್ಮ ಕುಲದಾಚಾರ, ಬಸವಣ್ಣ

ತಾತ್ಪರ್ಯ : ಅತ್ತಿಹಣ್ಣು ಆಲದಹಣ್ಣು ಮತ್ತೆ ಬಾರಿಹಣ್ಣು ತನ್ನನ್ನೇ ಸುತ್ತಿಕೊಂಡು ಸತ್ತು ನೂಲು ತೆಗೆಯುವ ಹಿಪ್ಪೆ ಹುಳು ಇಂತಹ ಹುಳುಗಳಿರುವ ಪದಾರ್ಥಗಳನ್ನು ಪ್ರತಿನಿತ್ಯ ತಿಂದರೂ, ಉಟ್ಟರೂ ಉತ್ತಮರು ಎಂದು ಬೊಗಳೆ ಬಿಡುತ್ತೀರಿ. ನಿತ್ಯ ಹಣ್ಣುಗಳ ಮೂಲಕ ಇಂತಹ ಹುಳುಗಳನ್ನು ತಿಂದು ನಿಮ್ಮ ಕುಲದ ಆಚಾರವು ವ್ಯರ್ಥವಾಯಿತು. ಉಳಿಯಲಿಲ್ಲ ನಿಮ್ಮ ಕುಲದ ಶೀಲವು.

೫೦೩

ಕಲ್ಲಿನೊಳಗಣ ಕನಕವು ಕಟಗಿಯೊಳಗಿನ ಬೆಂಕಿಯು
ಎಲ್ಲಾರ ಮನೆಯ ದೀವಿಗಿಯುವೊಂದೆ
ಅಲ್ಲವೆಂದವರಾರು ಅಪರಾಧ, ಬಸವಣ್ಣ

ತಾತ್ಪರ್ಯ : ಬಂಗಾರವು ಕಲ್ಲಿನ ಉತ್ಪತ್ತಿ(ಅದಿರು)ಬೆಂಕಿ ಕಟ್ಟಿಗೆಯ ಉತ್ಪತ್ತಿ. ಹಾಗೆ ಎಣ್ಣೆ ಬತ್ತಿ ಸಮೇತ ಎಲ್ಲರ ಮನೆಯಲ್ಲಿ ಉರಿಯುವ ದೀವಿಗಿ ಒಂದೇ. ಇದನ್ನು ಅರಿಯದೆ ಅಜ್ಞಾನದಿಂದ ಭೇದ ಭಾವ ಮಾಡುವವರು ಅಪರಾಧಿಗಳೇ ಹೊರತು ಆಪ್ತರಲ್ಲ.

೫೦೪

ಹಿಪ್ಪಿ ಹೀರಿದ ಮಿಕ್ಕ ತೊಗಲೊಳಗೆ
ತುಪ್ಪ ತೈಲವ ತುಂಬಿ ನಾಡೆಲ್ಲ ಉಂಡಮೇಲೆ
ವಿಪ್ರರ ಮಗಳ ಶರಣರು ಕೊಂಡರೆ
ತಪ್ಪೇನು ಇದರ ತಡಿಯೇನು ಎಂಬುತ
ಲೆಕ್ಕಕ್ಕೆ ಬಂದ, ಬಸವಣ್ಣ

ತಾತ್ಪರ್ಯ : ಸತ್ತ ಪ್ರಾಣಿಯ ತೊಗಲನ್ನು ಹಿಪ್ಪಿ ಹೀರಿ ತಿಂದು ತೇಗಿದ ಮೇಲೆ ಅದನ್ನ ತುಳಿದು ಬಡಿದು ಹದಗೊಳಿಸಿ, ತೊಗಲಿನ ಚೀಲವಾಗಿಸುವರು ಮಾದಿಗರು.

ಅಂತಹ ತೊಗಲ ಚೀಲದೊಳು ಎಣ್ಣೆಯ ತುಂಬಿ ನಾಡೆಲ್ಲ ಉಂಡ ಮೇಲೆ ವಿಪ್ರರ ಮಗಳು(ಬಹುಶಃ ಹರಳಯ್ಯರ ಮಗಳು ಮತ್ತು ಮಧುವರಸರ ಮಗನ ವಿವಾಹದ ವಿಚಾರ ಇದಾಗಿರಬಹುದು) ಶರಣರ ಮನೆಯ ಸೊಸೆಯಾದರೆ ತಪ್ಪೇನು? ತಡೆಯೇನು? ಎನ್ನುತ ಲೆಕ್ಕಕ್ಕೆ ಬಂದ ಬಸವಯ್ಯ ಎನ್ನುವಲ್ಲಿ ಮೌನೇಶ್ವರರ ಪ್ರಗತಿಪರ ಮನೋಧರ್ಮ ಎದ್ದು ಕಾಣುತ್ತದೆ.

೫೦೫

ಕುಂಟಿ ಕೂರಿಗಿಯ ಅಳೆದ ದಾರ ಒಂದಳತೆಯದು
ಧಾರುಣಿಯ ಅಳೆದ ಈ ದಾರ ಯಾರಿಗೆ ಸಲ್ಲುವದು
ವೀರ ಶೂರ ಉದಾರ ಗಂಭೀರ ವಿಚಾರ
ಮೂರು ದಾರ ಮಾರಿಕೊಂಬುವರು
ಮಗಳು ಮೈನೆರೆದರೆ ಮರುದಿವಸ ತ್ಯಾಗವ ಮಾಡುವರು
ಇವರ ಕೊರಳಲ್ಲಿ ದಾರ ಸಲ್ಲುವದೆ
ದಿನ ಬರುವ ತನಕ ಹಳೆದಾರ ಹಾಕೆಂದ, ಬಸವಣ್ಣ

ತಾತ್ಪರ್ಯ : ಜನಿವಾರದ ವಿಡಂಬಣೆಯನ್ನು ವಚನದಲ್ಲಿ ಕಾಣಬಹುದು. ಜನಿವಾರದ ಅರ್ಥ ತಿಳಿಯದೆ ಹುಸಿಯಿಂದ ವರ್ತಿಸುವ ಜನಗಳ ಬಗ್ಗೆ ತೀಕ್ಷ್ಣವಾಗಿ ಮೌನೇಶ್ವರರು ಮಾತನಾಡಿದ್ದಾರೆ.

ಬಡಿಗನಾದವನು ತಾನು ಹಾಸುವ(ತಯಾರಿಸುವ) ಕುಂಟಿ, ಕೂರಿಗೆಗಳ ಯಾಸಿ (ಡೊಂಕು)ತೆಗೆಯಲು ಕಡದು ಬಳದು ನೋಡಲು ಯಾಸಿದಾರವನ್ನು ಉಪಯೋಗಿಸಿ ಆ ಕುಂಟಿ ಕೂರಿಗೆಗಳು ಪ್ರಯೋಜನಕ್ಕೆ ಬರುವಂತೆ ಮಾಡುತ್ತಾನೆ. ವೀರ, ಶೂರ, ಉದಾರ ಗಂಭೀರ ವಿಚಾರಗಳನ್ನು ಮನುಷ್ಯ ಅಳವಡಿಸಿಕೊಳ್ಳದೆ ಮೂರೆಳೆ ದಾರವನ್ನು ಧರಿಸಿದರೆ ಪ್ರಯೋಜನವೇನು. ಇನ್ನು ಕೆಲವು ಸಂಪ್ರದಾಯವಾದಿಗಳು ಮಗಳು ಮೈನೆರೆದರೆ ಮೈಲಿಗೆಯಾಯಿತೆಂದು ಮರುದಿವಸ ಜನಿವಾರವನ್ನು ವಿಸರ್ಜಿಸುತ್ತಾರೆ. ಹಾಕುವ ತೆಗೆಯುವ ಇಂತಹ ಹುಸಿ ದಾರ ಹಾಗೂ ಹುಸಿ ಆಚರಣೆಗಿಂತ ಯಾವಾಗಲೂ ನಮ್ಮೊಂದಿಗಿರುವ ನಮ್ಮಲ್ಲಿ ಜ್ಞಾನವನ್ನು ವೃದ್ಧಿಸುವ ಜ್ಞಾನದ ದಾರವನ್ನು ಹಾಕಿ ಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ.

೫೦೬

ಯಾವಲ್ಲಿ ನೋಡಿದರೆ ವಾವಿಲ್ಲ ಕುಲವಿಲ್ಲ
ದೇವರುಯೆಂಬ ಹೆಸರಿಲ್ಲದಾಗಿನ್ನು
ದೇವ ಬಸವಣ್ಣನ ಉದಯವು, ಬಸವಣ್ಣ

ತಾತ್ಪರ್ಯ : ಯಾವಲ್ಲಿ ನೋಡಿದರು ಪ್ರೀತಿಯಿಲ್ಲ ವಿಶ್ವಾಸವಿಲ್ಲ ಕುಲವಿಲ್ಲ. ದೇವರು ಎಂಬ ಹೆಸರಿಲ್ಲದಾಗ ದೇವ ಬಸವಣ್ಣನ ಉದಯವಾಗುತ್ತದೆನ್ನುವಲ್ಲಿ ಕುಲ ಛಲಗಳು ಅಲ್ಲದೆ ಮುಕ್ಕೋಟಿ ದೇವರುಗಳು ನಾಶವಾಗಿ ದೇವ ಬಸವಣ್ಣನೊಬ್ಬನೆ ಹುಟ್ಟಿ ಬಂದು ಈ ಸೃಷ್ಟಿಯನ್ನು ಪುನರ್‌ಚಿಸುತ್ತಾನೆ, ಹೊಸದಾಗಿಸುತ್ತಾನೆ. ಎಲ್ಲ ಅನ್ಯಾಯ ಗಳಳಿದು ಒಳ್ಳೆಯ ದಿನಗಳು ಬರುವ ಸೂಚನೆಯನ್ನು ವಚನ ನೀಡುತ್ತದೆ.

೫೦೭

ಕುಲವೆಂಬೊ ಕೂತನವು ಹೊಲೆಯಂಬೊ ಹೊಲಿಗೇರಿ
ನೆಲೆಗಾನದಲಿ ಹೊಡದಾಡಿ ಧರ್ಮದ
ಫಲ ಪದವಿಯನೆಲ್ಲ ಕಳದೈತೆ, ಬಸವಣ್ಣ

ತಾತ್ಪರ್ಯ : ಕುಲ ಮದ ಎನ್ನುವುದು ಬಹಳ ಕೆಟ್ಟದ್ದು. ಇದು ಮನುಷ್ಯ ಮನುಷ್ಯರ ಮೇಲೆಯೇ ಹಗೆ ಸಾಧಿಸುವಂತೆ ಮಾಡುತ್ತದೆ. ಇಂತಹ ಕುಲಮದದ ಹುಚ್ಚು ಕುಣಿತದ ಬೆನ್ನು ಹತ್ತಿ, ಹೊಲಿಯಂಬೋ ಹೊಲಿಗೇರಿಯಲ್ಲಿಯೂ ಆಶ್ರಯ ಕಾಣದೆ ಅಜ್ಞಾನದಿಂದ ವೃಥಾ ಕಾಲಕಳೆದು ಧರ್ಮದ ಪುಣ್ಯವನ್ನೆಲ್ಲ ಕಳಕೊಳ್ಳಬಾರದು. ಕುಲದ ಅಹಂಕಾರಕ್ಕಿಂತ ಸಮಾಜದೊಂದಿಗೆ ಹೊಂದಿಬಾಳುವುದು ಮನುಷ್ಯ ಕುಲದ ಲಕ್ಷಣ.

೫೦೮

ಎತ್ತನು ಎಳಸುವಿರಿ ಕತ್ತೆಯ ಹೊರಸುವಿರಿ
ಬಟ್ಟನುಂಗುರದವರ ಬೆರಳಿಗೆರಗುವಿರಿ
ಕಟದ ಲಿಂಗವ ಕಟ್ಟಿ ಸೆಟ್ಟಿ ಎಂದೆಂಬಿರಿ
ಸುಟ್ಟು ಹೋಯಿತು ನಿಮ್ಮ ಕುಲದ ಆಚಾರವೆಲ್ಲ ಬಸವಣ್ಣ

ತಾತ್ಪರ್ಯ : ಮನುಷ್ಯರ ಡಾಂಭಿಕತನವನ್ನು ವಚನ ಹೇಳುತ್ತದೆ. ಬಸವನೆಂದು ಪೂಜಿಸುತ್ತಲೇ ದಯೆ ಇಲ್ಲದೆ ಅದನ್ನು ಗಾಡಿಗೆ ಹೂಡಿ ಎಳಸುವಿರಿ. ಕತ್ತೆಯ ಮೇಲೆ ಭಾರ ಹೊರಿಸಿ ಸಂಚರಿಸುವಿರಿ, ಬಟ್ಟನ ಬೆರಳ ಉಂಗುರಕ್ಕೆ ಎರಗಿ ಹುಸಿ ನಡುವಳಿಕೆ ಪ್ರದರ್ಶಿಸುವಿರಿ. ಕಟೆದು ಮಾಡಿದ ಲಿಂಗವನ್ನು ಕಟ್ಟಿಕೊಂಡು ಶೆಟ್ಟಿ ಎಂದು ಕರೆದುಕೊಳ್ಳುತ್ತೀರಿ. ನಿಮ್ಮ ಮೋಸ ವಂಚನೆಯಿಂದಾಗಿ ನಿಮ್ಮ ಕುಲದ ಆಚಾರಗಳೆಲ್ಲ ಸುಟ್ಟು ಹೋದವು. ಕುಲಕ್ಕೆ ಅಗೌರವ ತಂದಿರಿ. ಕಟಪ ನಡೆ ನುಡಿ ಗಳು ಮನುಷ್ಯತ್ವಕ್ಕೆ ಮಾರಕ.

೫

ಲಿಂಗಪ್ರಜ್ಞೆ

೫೦೯

ತೋರ ಲಿಂಗವ ಕಟ್ಟುವ ಪೋರ ಜಂಗಮ ನಾನಲ್ಲ
ಈರೇಳು ಭುವನದ ಒಡೆಯ ಅಲ್ಲಮನೆಂಬ
ನೀರ ಲಿಂಗವ ಧರಿಸಿದಾತನ ಕೂಡ
ಊರ ಮಾತೇನು, ಬಸವಣ್ಣ

ತಾತ್ಪರ್ಯ : ಲಿಂಗ ಎನ್ನುವುದು ನಿರಾಳ ನಿಶ್ಚಿಂತ ರೂಪದ್ದು, ಜ್ಯೋತಿ ಸ್ವರೂಪದ್ದು. ಅಂತಹ ಈರೇಳು ಭುವನದ ಒಡೆಯ ಅಲ್ಲಮಪ್ರಭು ನೀಡಿದ ನಿರಾಳ ಲಿಂಗವ ಧರಿಸಿ ಬಯಲೊಳು ಬಯಲಾದವ ನಾನು. ಸ್ಥಾವರಲಿಂಗ ಕಟ್ಟುವ ಎಳಸು ಮನಸಿನ ಅಜ್ಞಾನಿ ನಾನಲ್ಲ. ನಾನೇ ಲಿಂಗವಾದ ಮೇಲೆ ಊರ ಮಾತೇನು ಎನ್ನುವ ತಾತ್ಪರ್ಯ ಇಲ್ಲಿನದು.

೫೧೦

ಮೂರು ಕಾಸಿನ ಲಿಂಗವ ಕೊಳಲಿಕ್ಕೆ ಮಾರಲಾರೆ
ದಾರವ ಕಟ್ಟಿ ಧರಿಸಲಾರೆ
ಬಾಯೊಳಗೆ ಹುದುಗಿಡಲಾರೆ
ಸಂಗಯ್ಯಗೆ ಧಾರುಣಿಯುಂಟು ಭಯವುಂಟೆ, ಬಸವಣ್ಣ

ತಾತ್ಪರ್ಯ : ಲಿಂಗ ಎಂಬುದು ಸರ್ವಮಯವಾದದ್ದು, ಅದೊಂದು ಸತ್‌ಚೇತನ, ನಿರಾಳ ನಿಶ್ಚಿಂತ ಸ್ವರೂಪ. ಅಂತಹ ಸರ್ವವ್ಯಾಪ್ತಿಯಾದ ಸಂಗಯ್ಯನ ಸ್ವರೂಪಿ ಲಿಂಗವನ್ನು ಮೂರು ಕಾಸಿಗೆ ಕೊಳ್ಳುವುದು, ಮಾರುವುದು ದಾರವನ್ನು ಕಟ್ಟಿ

ಧರಿಸುವುದು ಬಾಯೊಳಗೆ ಹುದುಗಿಸಿ ಬಂದಿಸಿಡುವುದು ಸಾಧ್ಯವಿಲ್ಲ. ಅಂಗವೇ ಲಿಂಗವಾದ ಮೇಲೆ ತೋರಲಿಂಗದ ಹಂಗಿನ ಅಗತ್ಯವಿಲ್ಲ.

೫೧೧

ಆಕಾಶ ಭೂಕಾಂತಿ ಏಕಲಿಂಗವಾಗಿರಲಿಕ್ಕೆ
ಯಾಕೋ ಎನಗೊಂದು ಪ್ರತಿಲಿಂಗ, ಅಲ್ಲಮನೆಂಬ
ಸೂಕ್ಷ್ಮಲಿಂಗ ಎನಗುಂಟು ಲೋಕದ
ಮೂಖಲಿಂಗದ ಗೊಡವಿ ನಮಗೇಕ, ಬಸವಣ್ಣ

ತಾತ್ಪರ್ಯ : ಭೂಮಿ ಆಕಾಶದಂತಹ ಭೌತಿಕ ಎಲ್ಲೆಗಳನ್ನು ಮೀರಿದ ನಿರಾಳ ನಿರಾಕಾರ ಸ್ವರೂಪಿಯಾದ ಪರಮಾತ್ಮನಿಗೆ ಪ್ರತಿಯಾಗಿ ಎನಗೊಂದು ಸ್ಥೂಲ ಲಿಂಗ ಬೇಡ. ಅಲ್ಲಮನೆಂಬ ಸೂಕ್ಷ್ಮಲಿಂಗ ಎನಗುಂಟು. ಹೀಗಾಗಿ ಲೋಕದ ಮೂಖಲಿಂಗದ ಗೊಡವಿ ನನಗೆ ಬೇಡ ಎನ್ನುವಲ್ಲಿ ಇಷ್ಟಲಿಂಗಕ್ಕಿಂತ ಆತ್ಮಲಿಂಗ ಹಾಗೂ ಆತ್ಮಜ್ಞಾನದ ಪರಿಕಲ್ಪನೆ ವಚನದಲ್ಲಿ ಮುಖ್ಯವಾಗುತ್ತದೆ.

೫೧೨

ಸೂರ್ಯ ಚಂದ್ರರೆ ಲಿಂಗ ತಾರೆ ಮಂಡಲ ಲಿಂಗ
ಧಾರುಣಿಯು ಲಿಂಗ, ಮಳೆ ಲಿಂಗ, ಮರ್ತ್ಯಕೆ
ಧಾನ್ಯವೇ ಲಿಂಗ, ಬಸವಣ್ಣ

ತಾತ್ಪರ್ಯ : ಲಿಂಗ ಮಧ್ಯೆ ಜಗತ್ಸರ್ವಂ ಎನ್ನುವ ಮಾತಿನಂತೆ ದೇವರ ಸರ್ವಾಂತರ್ಯಾಮಿತ್ವ ಇಲ್ಲಿ ಕಾಣುತ್ತದೆ. ಪ್ರಾಕೃತಿಕ ಸತ್ಯಗಳು ಮತ್ತು ಪರಿವರ್ತನ ರೂಪಿ ನೆಲೆಗಳಾದ ಸೂರ್ಯ ಚಂದ್ರ ತಾರಾ ಮಂಡಲ ಭೂಮಿ ಮಳೆ ಇವು ತನ್ನ ಕ್ರಿಯಾಶೀಲತೆ ಮತ್ತು ಲೋಕೋಪಯೋಗಿ ಸ್ವಭಾವಗಳಿಂದಾಗಿ ದೈವೀ ಸ್ವರೂಪ ಪಡೆದಂತವು. ಇವುಗಳ ಆರಾಧನೆ ಭಕ್ತಿಯ ರೂಪವಾದರೆ ಇವೆಲ್ಲವುಗಳ ಉತ್ಪನ್ನವಾದ ಧಾನ್ಯ ಶಕ್ತಿ ಹಾಗೂ ಚೈತನ್ಯ ಸ್ವರೂಪವಾಗಿದೆ. ಅನ್ನ ದೇವರ ಕಲ್ಪನೆಯನ್ನಿಲ್ಲಿ ಕಾಣಬಹುದು.

೫೧೩

ಹತ್ತೊಂದಯ್ಯನ ಮುತ್ತಿನ ಗದ್ದುಗೆಯ
ಹತ್ತೇನೆಂಬುವವನ ಹೆಸರೇನು
ನೆತ್ತಿಲಿ ಮೂರು ಕಣ್ಣು ತಾಳಿದ ಶಿವನಾದರೇನು, ಕಡೆಯಲ್ಲಿ
ನಿಂತು ಮಾತಾಡು ಎಂದೆ, ಬಸವಣ್ಣ

ತಾತ್ಪರ್ಯ : ಹತ್ತೊಂದಯ್ಯ ಎನ್ನುವುದು ಒಂದು ಆಧ್ಯಾತ್ಮಿಕ ಪರಿಭಾಷೆ. ಪಂಚ ಪ್ರಾಣಗಳು ಪಂಚಮಹಾಭೂತಗಳಲ್ಲಿ ಅಡಗಿ ಈ ಮನುಷ್ಯ ದೇಹವಾಯಿತು.

ಮೌನೇಶ್ವರರ ಇನ್ನೊಂದು ವಚನದಲ್ಲಿ ಬರುವಂತೆ ಐದುಮಂದಿ ಕೂಡಿ ಬಂದರು. ಕೂಡಿ ಬಂದು ಐದಕ್ಕೈದು ಅಗಲದಾದರು ಎನ್ನುವಲ್ಲಿ ಪಂಚಪ್ರಾಣಗಳು(ಪ್ರಾಣ ಅಪಾನ, ಸಮಾನ, ಉದಾನ, ವ್ಯಾನ ಇವು) ಮತ್ತು ಪಂಚಭೂತಗಳು(ಪೃಥ್ವಿ, ಅಪ್ಪು ತೇಜ, ವಾಯು, ಆಕಾಶ) ಇವು ಸೇರಿ ಈ ಮನುಷ್ಯ ದೇಹ ನಿರ್ಮಾಣವಾಗಿದೆ. ಈ ಹತ್ತುಗಳಿಂದ ಕೂಡಿದ ದೇಹ ಮತ್ತು ಮನಸ್ಸನ್ನು(೧೦+೧=೧೧)ಯಾವನು ನಿಗ್ರಹಿಸಿ ಯೋಗಿಯಾಗುತ್ತಾನೋ ಅವನೇ ಪರಬ್ರಹ್ಮ ಪರಮಾತ್ಮ.

೫೧೪

ನೂರೊಂದಯ್ಯನ ವೀರ ಸಿಂಹಾಸನ
ಏರೆನೆಂಬುವನ ಹೆಸರೇನು ಮೂರು ಕಣ್ಣುಳ್ಳ ಶಿವನಾದರೆ
ಕಡೆಯಲ್ಲಿ ನಿಂತು ಮಾತಾಡು ಎಂದೆ, ಬಸವಣ್ಣ

ತಾತ್ಪರ್ಯ : ವೀರಶೈವ ತಾತ್ವಿಕತೆಯಲ್ಲಿ ನೂರೊಂದು ಸ್ಥಲಗಳು ನೂರೊಂದು ವಿರಕ್ತರು ಇರುವುದು ಗಮನಾರ್ಹ. ೧೦೧ ಸ್ಥಲಗಳಲ್ಲಿ ಅಂಗಸ್ಥಲ ಳಳಿ, ಲಿಂಗಸ್ಥಲ ೫೭ ಹೀಗೆ ಎರಡು ಭಾಗ ಮಾಡಲಾಗಿದೆ. ಅಂಗಸ್ಥಲ ಮತ್ತು ಲಿಂಗಸ್ಥಲ ೧೦೧ನ್ನು ಏರಿ ಮೀರಿ ಮೋಕ್ಷ ಸಾಧಿಸುವುದು ಸುಗಮವಲ್ಲ. ಅದನ್ನು ಏರಿ ಮೀರಿದವನೇ ಯೋಗಿಯಾಗುತ್ತಾನೆ ಶಿವನಾಗುತ್ತಾನೆ ಪರಮಾತ್ಮನಾಗುತ್ತಾನೆ.

೫೧೫

ಮಾಣೆಂಬುದು ಮಾಣಿಕದ ಲಿಂಗ
ಮೂಣೆಂಬುದು ಬಂಗಾರದ ಸೆಜ್ಜೆ
ಪ್ರಾಣಿ ಪ್ರಾಣಿಗಳು ಜನಿಸಿದವು
ಕಾಣಿರ್ಯಾಕಯ್ಯ ಕುರುಡರು
ಮಾಣಿಯ ಮಕ್ಕಳು ಜಗವೆಲ್ಲ, ಬಸವಣ್ಣ

ತಾತ್ಪರ್ಯ : ಹೆಣ್ಣು ಗಂಡು ಸೃಷ್ಟಿ ಕ್ರಿಯೆಯ ಪ್ರಧಾನ ಗುರುತುಗಳು, 'ತೊಗಲೊಳು ತೊಗಲೊಕ್ಕು ತಗಲಿ ಬಂದವ ನೀನು' ಎನ್ನುವ ತತ್ತ್ವಪದದಂತೆ ಹೆಣ್ಣು ಗಂಡಿನ ಕೂಡುವಿಕೆ ಇಲ್ಲದೆ ಜೀವೋತ್ಪತ್ತಿ ಸಾಧ್ಯವಿಲ್ಲ. ಸಕಲ ಜೀವ ಜಂತುಗಳ ಸೃಷ್ಟಿ ಇದೇ ಮಾದರಿಯದು. ಫಲವಂತಿಕೆ ಕಾರಣವಾಗಿ ಮಾಣಿ(ಪುರುಷ ಜನನೇಂದ್ರಿಯ) ಮತ್ತು ಮೂಣು(ಸ್ತ್ರೀ ಜನನೇಂದ್ರಿಯ)ಗಳಿಗೆ ದ್ರಾವಿಡ ಸಂಸ್ಕೃತಿಯಲ್ಲಿ ದೈವೀರೂಪ ಸಿಕ್ಕಿದೆ. ಶಿಶ್ನದ ಗುರುತಿನ ಲಿಂಗಮುದ್ರೆ ಕಲ್ಲುಗಳು ಭಗ ಪೂಜೆಯ ಕುರುಹಾಗಿ ಲಜ್ಜಾಗೌರಿ ಮೂರ್ತಿಗಳು ಇಂದಿಗೂ ಕರ್ನಾಟಕದಲ್ಲಿ ಕಾಣುವುದು ವಿಶೇಷ. ಲಿಂಗ ಮತ್ತು ಪಾಣಿಪೀಠ ಶಿಶ್ನಾರಾಧಕ ಹಾಗೂ ಯೋನಿ ಆರಾಧಕ ಪಂಥಗಳ

ಸಮೀಕರಣವೇ ಆಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ. ಅಂತಹ ಸೃಷ್ಟಿಕ್ರಿಯೆಯ ವಿಸ್ಮಯವನ್ನು ವಚನ ಅರಹುತ್ತದೆ.

೫೧೬

ಏಕಾಂತಕ್ಕೆ ಹೋದರೆ ಭೂಕಾಂತಿ ನೋಡಳೆ
ಈ ಕಂತಿಯ ಧರಿಸಿಕೊಂಡು ಇದ್ದ ಮೇಲೆ
ಲೋಕದಂತಿರಬೇಕು
ಇದಕೆ ಬೂಟಾಟಿಕೆ ಯಾಕೆ, ಬಸವಣ್ಣ

ತಾತ್ಪರ್ಯ : ಕಂತಿ ಲಿಂಗವ ಕಟ್ಟಿಕೊಂಡ ಮೇಲೆ ಮಾಯಾ ಮೋಹಗಳ ಹಂಗನ್ನು ಆಸೆ ಆಮಿಷಗಳ ಸಂಗವನ್ನು ತೊರೆಯಬೇಕು. ಲಿಂಗ ಕಟ್ಟಿಕೊಂಡು ಕಳ್ಳ ದಾರಿಯಲ್ಲಿ ನಡೆದು ಸ್ತ್ರೀ ಸಂಗದಲ್ಲಿ ಏಕಾಂತ ಬಯಸುವ ಭಂಡರನ್ನು ಸರ್ವಾಂತರ್ಯಾಮಿಯಾದ ಶಿವ ಹಾಗೂ ಶಿವೆ ನೋಡೆ ನೋಡುತ್ತಾರೆ. ಸನ್ಯಾಸಿಯಾದವರು ಬೂಟಾಟಿಕೆ ಬಿಡಬೇಕು.

೫೧೭

ಅಂಗ ಶೃಂಗಾರವಾದ ಜಂಗಮಕ್ಕೆ ಬಹು ಪ್ರೀತಿ
ಅಂಗದಲಿ ಸ್ವಯಂ ಜ್ಯೋತಿ ನಿಜರೂಪ
ಜಂಗಮದ ಹಂಗಿಲ್ಲ ಕಲ್ಲಿಗಿ, ಬಸವಣ್ಣ

ತಾತ್ಪರ್ಯ : ಸ್ವಯಂಜ್ಯೋತಿ ನಿಜರೂಪನಾದ ಪರಮಾತ್ಮನಿಗೆ ಯಾವುದರ ಹಂಗೂ ಇಲ್ಲ. ಪರಬ್ರಹ್ಮನು ಪರಂಜ್ಯೋತಿಯು ಪರಮಪಾವನನು ಆದ ಆ ಪರಮಾತ್ಮನನ್ನು ಅಂಗ ಲಿಂಗ ಎನ್ನುವ ಕುರುಹುಗಳಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಸಾಧಕನು ಲಿಂಗ–ಜಂಗಮದ ಕುರುಹುಗಳಲ್ಲಿ ಅಡಗದೆ ಅವನ್ನು ಮೀರಿ ನಿಂತಾಗ ತೇಜೋಮಯಿ ಆಗುತ್ತಾನೆ, ಸುಜ್ಞಾನಿಯಾಗುತ್ತಾನೆ.

೫೧೮

ಗದ್ಯ : ಮಾರದಾಕಿ ಅಲ್ಲಮನು ಬಂದು ಅಯ್ಯನು ತಾನು ಇಬ್ಬರೂ ಕೂಡಿ ಒಂದು ಹೊಲಕ್ಕೆ ಹೋದರು. ಆ ಒಕ್ಕಲು ಮಗನು ಆರು ಸೊಲಗಿ ಜೋಳವ ಕೊಟ್ಟರೆ ಒಂದು ಜೋಡು ಪಾಪೋಸು ಕೊಂಡರು. ತಲಾಗೊಂದು ಪಾಪೋಸು ಮೆಟ್ಟಿಕೊಂಡು ಕುಳಿತರು. ರುಮಾಲು ಹಿಂದಕ್ಕೆ ಮೋರೆಯಾಗಿ ಕಟ್ಟಿದರು. ಕೊಡಲಿಯಾ ಲಿಂಗವ ಮಾಡಿ ಕೊರಳಲ್ಲಿ ಧರಿಸಿದ್ದು ಇರಲಿಕ್ಕೆ, ಇಬ್ಬರು ಜಂಗಮರು ಬಂದು ಕರಕೊಂಡು ಹೋದರು. ಮಠದಾತನ ಬಾಗಿಲು ದಾಟಿ ಹೋಗಿ ನಿಂತ ಮೇಲೆ ಭಿಕ್ಷವ ತಿರಕೊಂಡು

ಈತನಿಗೇನು, ಅಕ್ಕಸಾಲೇರ ಮನೆಯೇನು. ಬಂದು ನಿಂತ ಮೇಲೆ ಲಿಂಗವಿಲ್ಲೆಂದು ಕೇಳಿದರು. ಲಕ್ಷ್ಮೇಶ್ವರದಾ ಜಂಗಮರ ಮಠದೊಳಗೆ ಆದ ಮಾತು.

ತಾತ್ಪರ್ಯ: ಅಂಗದ ಮೇಲೆ ಲಿಂಗವಿಲ್ಲದ ಭವಿ ಎಂದು ಮೌನೇಶ್ವರರನ್ನು ಹಳಿದ ಪ್ರಸಂಗವಿದು. ಅಲ್ಲಮ ಮತ್ತು ಮೌನೇಶ್ವರರು ಇಬ್ಬರು ಸೇರಿ ಒಂದು ಹೊಲಕ್ಕೆ ಹೋದರೆ ಆಯ ರೂಪದಲ್ಲಿ ಹೊಲದವ ಆರು ಸೊಲಗಿ(ಹನ್ನೆರಡು ಸೇರು) ಜೋಳವ ಕೊಟ್ಟರೆ, ಅವನ್ನು ಕೊಟ್ಟು ಒಂದು ಜೋಡು ಚಪ್ಪಲಿ ತಗೊಂಡು ಇಬ್ಬರು ಒಂದೊಂದು ಹಾಕಿಕೊಳ್ಳುತ್ತಾರೆ. ನಂತರ ತಲೆಯ ಮೇಲಿನ ರುಮಾಲನ್ನು ಹಿಂದಕ್ಕೆ ಓರೆಯಾಗಿ ಕಟ್ಟಿ, ಕೊಡಲಿಯ ಲಿಂಗವ ಮಾಡಿ ಕೊರಳಲ್ಲಿ ಧರಿಸಿರಲು ಇಬ್ಬರು ಜಂಗಮರು ಬಂದು ಲಕ್ಷ್ಮೇಶ್ವರದ ಜಂಗಮರ ಮಠಕ್ಕೆ ಕರೆದೊಯ್ಯುತ್ತಾರೆ. ತಲಬಾಗಿಲ ದಾಟಿ ಒಳನಿಂತ ಮೇಲೆ, ಅಕ್ಕಸಾಲೇರವನು ಜಂಗಮ ಹೇಗಾದ, ಲಿಂಗವೆಲ್ಲಿ ಎಂದು ಅವಮಾನಿಸಿದ ಪ್ರಸಂಗವಿದು. ಅಂಗವೇ ಲಿಂಗವಾದ ಮೇಲೆ ಲಿಂಗದ ಹಂಗೇಕೆ ಎನ್ನುವುದು ಮೌನೇಶ್ವರರ ಅಭಿಮತ. ಶರಣರ ಅನುಭಾವ ಮಾರ್ಗಿಗಳಾಗಿದ್ದರೂ ಮೌನೇಶ್ವರರು ಲಿಂಗಧಾರಿಗಳಾಗಿರಲಿಲ್ಲ ಎಂಬುದನ್ನು ವಚನ ಹೇಳುತ್ತದೆ. ಅಂದರೆ ಅಭೇದಕಲ್ಪನೆಯನ್ನಿಲ್ಲಿ ಕಾಣುತ್ತೇವೆ.

೫೧೯

ಅಕ್ಕಸಾಲೆನಾದ ಅಲ್ಲಮಪ್ರಭುರಾಯ
ತೆತ್ತೀಸಕೋಟಿ ದೇವಾನುದೇವರ್ಕಳ ನಿರ್ಮಿಸಿ
ಕಟ್ಟಿಟ್ಟ ಚೀಲದ ಒಳಗಿಟ್ಟಾನು ಕೂಡ
ಕಟ್ಟೇನು, ಇದರ ಕ್ರಮವೇನು, ನಾ
ಲಿಂಗ ಕೊಟ್ಟಲ್ಲದೆ ಇಲ್ಲ ನಿಮಗೆ, ಬಸವಣ್ಣ

ತಾತ್ಪರ್ಯ : ಅರ್ಕಸಾಲೆಯಾದವನು ಹಲವು ದೇವರ ಸೃಷ್ಟಿಕರ್ತ(ಕಟ್ಟಿಟ್ಟ ಚೀಲ ಎಂದರೆ ತೂಕದ ಬಟ್ಟುಗಳನ್ನು ಇಡುವ ಚೀಲ). ಮೂವತ್ತಾರು ಕೋಟಿ ದೇವಾನು ದೇವತೆಗಳನ್ನು ನಿರ್ಮಿಸಿ ಚೀಲದೊಳಗೆ ಕಟ್ಟಿಡುತ್ತಾನೆ. ಅಂಥವನ ಕೂಡ ಲಿಂಗದ ಚರ್ಚೆ ಮಾಡಬಹುದೇ, ಲಿಂಗದ ಕಟ್ಟೇನು ಅದರ ಕ್ರಮವೇನು ನಾ ಕೊಟ್ಟಲ್ಲದೆ ಲಿಂಗ ನಿಮಗೆ ದೊರೆಯದು. ಅವರೇ ಇನ್ನೊಂದೆಡೆ ಹೇಳುವಂತೆ 'ಕುಂಡಿಯ ಒರೆಸಿಕೊಂಬುವ ದುಂಡು ಕಲ್ಲಿನ ಮೇಲೆ ಅಂಗುಲದ ಉಳಿ ಸೋಂಕಲು ಅದು ಲಿಂಗವಾಗಿ ಪರಿವರ್ತನೆಯಾಗುತ್ತದೆ'. ಲಿಂಗ ನಿರ್ಮಿಸಿ ತಕ್ಕಡಿಯಲ್ಲಿ ತೂಗಿ ಚೀಲದಲ್ಲಿ ಕಟ್ಟಿಡುವವನಿಗೆ ಲಿಂಗದ ಕುರುಹು ಕೇಳುವುದು ಅಜ್ಞಾನದ ಪರಮಾವಧಿ ಎಂದು ಮೌನೇಶ್ವರರು ಹೇಳುತ್ತಾರೆ.

೫೨೦

ಪೃಥ್ವಿ ಆಕಾಶತತ್ವ ಶಿವಲಿಂಗದೊಳು
ಭಕ್ತ ಭವಿಗಳೆಂದು ಬೊಗಳಲಾರೆ
ಇಂತಪ್ಪ ಎಲುವು ತೊಗಲು ಮಾಂಸದ ಬೊಂಬೆ
ಉತ್ತಮರಿಗೆ ಹೊಲೆಯರೆಂದು ಎನಲಾರೆ
ಹತ್ತು ಹೊನ್ನನೆ ಕೊಟ್ಟು ಮಿತ್ರೆಯ ತಂದರೆ
ತೊತ್ತುಗರ್ತಿಯೆಂದು ಎನಲಾರೆ
ಆಗದು ಎನ್ನ ಕೈಯ್ಯ, ತೂಗದು ಎನ್ನ ಕೈಯ್ಯ
ನಿಮ್ಮ ಸಾಗರದನೆಂತು ಈಸಲೋ ಗುರುವೆ, ಬಸವಣ್ಣ

ತಾತ್ಪರ್ಯ : ಈ ದೇಹವೆಂಬುದು ಮೂಳೆ ಮಾಂಸದ ತಡಿಕೆ. ಭಕ್ತನಾಗಲಿ ಭವಿಯಾಗಲೀ ಉತ್ತಮನಾಗಲಿ ತೊತ್ತಾಗಲಿ ಎಲ್ಲರೂ ಮಾಂಸದ ಗೊಂಬೆಗಳೆ. ಹೀಗಿರುವಾಗ ಮನುಷ್ಯರಲ್ಲಿ ಮೇಲು ಕೀಳು, ಅರಸ ಆಳು, ಭಕ್ತ ಭವಿ ಎನ್ನುವ ವಿಂಗಡಣೆ ಏಕೆ? ಮನುಷ್ಯರನ್ನು ಒಡೆದಾಳುವ ನೀತಿಯು ಪ್ರಗತಿಯನ್ನು ಕುಂಠಿತ ಗೊಳಿಸುತ್ತದೆ. ಮನುಷ್ಯನ ಒಕ್ಕಟ್ಟು ಎಂತಹ ಭವಸಾಗರವನ್ನು ದಾಟಲು ಬಲ ನೀಡುತ್ತದೆ. ಒಗ್ಗೂಡದ ಬದುಕು ಒಡೆದು ಹೋಗುತ್ತದೆ.

೫೨೧

ಕುಂಡಿಯ ಒರೆಸಿಕೊಂಬುವ ದುಂಡ ಕಲ್ಲಿನ ಮೇಲೆ
ಅಂಗುಲದ ಉಳಿ ಸೋಂಕಲು
ಲಿಂಗವಾದದ್ದು ದಿಟವಯ್ಯ, ಲೋಕದ
ವ್ಯಂಗಿ ಶಾಸ್ತ್ರವ ಬಿಡರೇಕೆ, ಬಸವಣ್ಣ

ಅರ್ಥ : ವೇದ ಶಾಸ್ತ್ರ ಪುರಾಣಗಳ ಬೆಂಬಲದಿಂದ ಲಿಂಗ ಜಂಗಮದ ಪರಿಯನ್ನು ವಿವರಿಸಿಕೊಳ್ಳುವವರಿಗೆ ಲಿಂಗದ ಹುಟ್ಟಿನ ಮೂಲ ಗೊತ್ತಿರುವುದಿಲ್ಲ. ಲಿಂಗದ ಸೃಷ್ಟಿಕರ್ತ ಶಿಲ್ಪಿ ಅಂದರೆ ಪಾಂಚಾಳರು. ಕುಂಡಿಯ ಒರೆಸಿಕೊಂಡು ಬಿಸಾಕಿದ ನಿರುಪಯುಕ್ತ ದುಂಡುಕಲ್ಲು ಅಂಗುಲದ ಉಳಿಯ ಸ್ಪರ್ಶದಿಂದ ಲಿಂಗವಾದ ಬಗೆಯು ದೊಡ್ಡದೇ ಹೊರತು ಲಿಂಗ ಕಟ್ಟಿಕೊಂಡು ಪೂಜಿಸುವ ಹುಸಿ ಆಚರಣೆ ಮುಖ್ಯವಲ್ಲ.

೫೨೨

ಚಂದಕ್ಕೆ ಲಿಂಗವನು ಮಂದೆಲ್ಲ ಕಟ್ಟಿದರು, ನಮ್ಮ
ಚಂದಯ್ಯನಂತೆ ದೃಢವಿಲ್ಲ ಲೋಕದ
ಅಂಧಕರು ಧರಿಸಿದ ಫಲವೇನು, ಬಸವಣ್ಣ

ತಾತ್ಪರ್ಯ : ಜನ ಮರುಳೋ ಜಾತ್ರೆ ಮರುಳೋ ಎಂಬಂತೆ ಅಂಗದ ಗುಣವರಿಯದೆ ಮರ್ತ್ಯದ ಮಂದೆಲ್ಲ ಚಂದಕ್ಕೆ ಲಿಂಗ ಕಟ್ಟಿಕೊಂಡು ಕುರುಡರಾದರು, ಅಜ್ಞಾನಿಗಳಾದರು. ಇವರ ಭಕ್ತಿ ದೃಢಭಕ್ತಿಯಲ್ಲ. ನುಲಿಯ ಚಂದಯ್ಯನೊಮ್ಮೆ ಕಾಯಕದಲ್ಲಿ ನಿರತನಾದಾಗ ಕೊರಳಲ್ಲಿ ಕಟ್ಟಿದ ಲಿಂಗ ಕೆಳಗೆ ಬೀಳುತ್ತದೆ. ಅಂಗದ ಮೇಲೆ ಇರಬೇಕಾದ ಲಿಂಗಯ್ಯ ನೀನು ಕೆಳಗೆ ಬಿದ್ದಿರುವೆ ಎಂದು ಅಲ್ಲಿಯೇ ಬಿಟ್ಟು ಹೊರಡುತ್ತಾನೆ. ತಪ್ಪಾಯಿತೆಂದು ಲಿಂಗವೇ ಪರಿಪರಿಯಾಗಿ ಬೇಡಿಕೊಂಡರೂ ಎತ್ತಿಕೊಂಡು ಕಟ್ಟಿಕೊಳ್ಳದೇ ಅಲ್ಲಿಯೇ ಬಿಟ್ಟು ಹೋದ ದೃಢಭಕ್ತಿಯನ್ನು ಮೌನೇಶ್ವರರು ಹೇಳುತ್ತಾರೆ. ಲಿಂಗಧಾರಿಗಳಿಗೆ ಕಾಯಕದ ಮಹತ್ವದ ಜೊತೆಗೆ ಶುದ್ಧ ಹಾಗೂ ದೃಢಭಕ್ತಿ ಅನಿವಾರ್ಯ. ಲಿಂಗಧಾರಣೆ ಮೌಢ್ಯವಾಗಬಾರದು, ಅಂಧಾನುಕರಣೆಯಾಗ ಬಾರದು.

೫೨೩

ಏಳೇಳು ಲೋಕದ ಒಡೆಯಂಗೆ
ಕೀಳು ಒಪ್ಪವ ಹಾಕಿದವರುಂಟೆ
ಕಾಲನೆ ತೊಳೆದು ಉದಕವ ನೀಡಿ ಎನ್ನ
ಏಳಲವ ಮಾಡಿದರು ಭವಿಗಳು ಇವರು
ಕೂಳಿಗೆ ಮನೆ ಮನೆ ತಿರುಗಿದರು, ಬಸವಣ್ಣ

ತಾತ್ಪರ್ಯ : ಹದಿನಾಲ್ಕು ಲೋಕದ ಒಡೆಯನಾದ ಪರಮಾತ್ಮ ಸ್ವಭಾವತಃ ತೇಜೋಮಯಿ. ಈ ಜಗತ್ತಿಗೆ ಬೆಳಕು ಹಾಗೂ ಚೈತನ್ಯ ನೀಡುವ ಸ್ವಯಂಪ್ರಭೆಯುಳ್ಳವ ಲಿಂಗದ ರೂಪದಲ್ಲಿ ಅಂತಹ ಪರಮಾತ್ಮನಿಗೆ ಒಪ್ಪ(ಬಣ್ಣ) ಹಾಕುತ್ತಾರೆ, ಇದು ಸಾಧ್ಯವೆ? ಲಿಂಗಧಾರಿ ಜಂಗಮನೆಂದು ನನ್ನ ಪಾದವ ತೊಳೆದು ಪಾದೋದಕ ಮಾಡಿ ನನ್ನ ನಿಂದೆಗೆ ಗುರಿ ಮಾಡಿದರು ಈ ಭವಿಗಳು. ಇಂಥವರನ್ನು ಕೂಳಿಗಾಗಿ ಮನೆ ಮನೆ ತಿರುಗಿಸಿ ಅವರ ಗರ್ವ ಕಳೆದೆ ಬಸವಣ್ಣ ಎಂಬುದು ತಾತ್ಪರ್ಯ.

೫೨೪

'ತಾ' ಎಂದು ಬೇಡಿದರೆ 'ಕೋ' ಎಂದು ಕೊಡುವ
ದೇವನು ವರವಿಯ ಘನ ಲಿಂಗದಲ್ಲಿ
ಭಾವವಿಡದೆ ಕೆಡಬೇಡಿ, ಬಸವಣ್ಣ

ತಾತ್ಪರ್ಯ : ಶುದ್ಧ ಭಕ್ತಿ ಹಾಗೂ ಭಾವದಿಂದ ನಮಗೆ ಬೇಕಾದ ವರವನ್ನು ತಾ ಎಂದು ಬೇಡಿದರೆ ಪ್ರೀತಿಯಿಂದ ತಗೋ ಇಕೋ(ಹಿಡಿ) ಎಂದು ಕೊಡುವ

ಘನಮಹಿಮನಾದ ವರವಿಯ ಮೌನೇಶ್ವರರಲ್ಲಿ ಭಕ್ತಿಯಿಟ್ಟು ನಡೆದರೆ ಒಳ್ಳೆಯದಾಗುತ್ತದೆ. ಬಿಡದೆ ಹಿಡಿಯಬೇಕು ಅವರ ಪರಮಪಾದ.

೫೨೫

ಹಾಟವೇ ತೀರ್ಥ ಕೂಟವೇ ಪ್ರಸಾದ
ನಾಟಿ ಬಂದದ್ದೇ ನಿಜಲಿಂಗ ಜಗದೊಳು
ಬೂಟಾಟಿಕೆ ಯಾಕೋ, ಬಸವಣ್ಣ

ತಾತ್ಪರ್ಯ : ಹಾಟವೇ(ವೀರ್ಯ) ತೀರ್ಥ ಕೂಟವೇ ಪ್ರಸಾದ. ಹೀಗೆ ಹೆಣ್ಣು ಗಂಡಿನ ಸಮ್ಮಿಲನದ ಪಡಿಯಚ್ಚಿನಲ್ಲಿ ನಾಟಿ ಬಂದಿದ್ದು ಈ ಶರೀರ. ಅದರಲ್ಲಿ ಹೆಣ್ಣು ಗಂಡೆಂಬ ಲಿಂಗ ಭೇದ, ಮೇಲು ಕೀಳು ಎಂಬ ಬೂಟಾಟಿಕೆ ಯಾಕೆ. ಅಜ್ಞಾನಿಗಳಾದ ಭವಿಗಳಿಗೆ ಅಂಗ ಲಿಂಗದ ನಿಜ ರೂಪ ತಿಳಿಯದು.

೫೨೬

ಹಿತ್ತಲದೊಳಗೆ ಹತ್ತು ಬಾಳೆಯ ಬಿತ್ತಿ
ನಿತ್ಯ ನೀರೆರೆದರೆ ಕರ್ತ್ಯವಿಗೆ ಫಲವನುಣಿಸಬಹುದು
ಕಲ್ಲಿಗೆ ನೀರೆರೆದರೆ ಫಲವೇನು, ಬಸವಣ್ಣ

ತಾತ್ಪರ್ಯ : ಕಲ್ಲನಾಗರ ಕಂಡರೆ ಹಾಲನೆರೆಯುವರು, ಜೀವಂತ ಹಾವು ಕಂಡರೆ ಕೊಲ್ಲುವರು ಎಂಬ ಮಾತಿನಂತೆ ಪೂಜೆಯ ಹೆಸರಲ್ಲಿ ದೃಢಭಕ್ತಿಯಿಲ್ಲದೆ ಲಿಂಗದ ಕಲ್ಲಿನ ಮೇಲೆ ನೀರು ಸುರಿದರೆ ಹಾಲು ಹಣ್ಣು ಹಾಕಿ ಅಭಿಷೇಕ ಮಾಡಿದರೆ ಏನು ಪ್ರಯೋಜನ. ತಿನ್ನುವ ಆಹಾರ ವ್ಯರ್ಥವಾಗುತ್ತದೆ. ಲಿಂಗದ ಮುಂದೆ ಕುಳಿತು ವೃಥಾ ಕಾಲ ಕಳೆಯುವ ಬದಲು ಹಿತ್ತಲದೊಳಗೆ ಹತ್ತು ಬಾಳೆಗಿಡ ಹಚ್ಚಿ ನಿತ್ಯ ನೀರೆರೆದರೆ ಅದಕ್ಕೆ ತಕ್ಕ ಫಲವಾದರೂ ದೊರೆತೀತು. ಲೋಕಕ್ಕೆ ಅಗತ್ಯವಾದುದನ್ನು ವಿನಾಕಾರಣ ಹಾಳು ಮಾಡಬಾರದು.

೫೨೭

ಮುಂಡಾಸದೊಳಗೊಂದು ಗಂಧದ ಕೊರಡನಿಟ್ಟು
ಕಂದಾ ಜೋ ಜೋ! ಎಂದರೆ
ಉಂಬುವುದೆ ತನ್ನ ತಾಯ ಮೊಲೆ ಹಾಲ, ಲೋಕದ
ವ್ಯಂಗಿ ಶಾಸ್ತ್ರದ ಬಿಡಬೇಕು, ಬಸವಣ್ಣ

ತಾತ್ಪರ್ಯ : ಮಗು ತಾಯಿಯ ಮೊಲೆಯುಂಡು ಬೆಳೆಯುವುದು ಹೇಗೆ ಸಹಜವೋ ಭವಿ ಭಕ್ತನಾಗಬೇಕಾದರೆ ಕಾಯಕ ವ್ರತ ನೇಮಗಳ ಮೂಲಕ ಸಾಧನೆ ಮಾಡುವುದು

ಅಷ್ಟೇ ಸಹಜ. ಅದು ಬಿಟ್ಟು ಕಪಟತನದಿಂದ ತನ್ನ ತಲೆಗೆ ಸುತ್ತಿದ ರುಮಾಲದ ಸೆರಗಿನಲ್ಲಿ ಗಂಧದ ಕೊರಡನ್ನಿಟ್ಟುಕೊಂಡು ಜೋಗುಳ ಹಾಡಿದರೆ ತಾಯ ಮೊಲೆ ಹಾಲ ಉಂಡಂತಾಗುತ್ತದೆಯೆ? ಕಪಟತನದಲ್ಲಿ ಮಾಡುವ ಭಕ್ತಿ ಯಾವತ್ತೂ ವ್ಯಕ್ತಿ ಹಾಗೂ ಸಮಾಜವನ್ನು ತಪ್ಪು ದಾರಿಗೆಳೆಯುತ್ತದೆ. ಇದಕ್ಕೆ ಭವಿಯ ಅರಿವಿನ ಕೊರತೆ ಕಾರಣವಾಗುತ್ತದೆ. ಇಂತಹ ಅಜ್ಞಾನಕ್ಕೆ ಪ್ರೇರೇಪಿಸುವ ಸುಳ್ಳು ಶಾಸ್ತ್ರಗಳ ಬಿಡಬೇಕು ಎಂಬುದು ಮೌನೇಶ್ವರರ ಕಾಳಜಿಯಾಗಿದೆ.

೫೨೮

ಬಿಂದುವೆ ತೀರ್ಥ ಕಂದನೇ ಪ್ರಸಾದ
ಚಂದ್ರ ಸೂರ್ಯರೆಂಬ ನಿಜಲಿಂಗವೆನಿಸಿತ್ತು
ಅದು ತಾನೆ ಲಿಂಗ ತಾನೆ ಜಂಗಮ
ತಾನೆ ತಾನಾದ, ಬಸವಣ್ಣ

ತಾತ್ಪರ್ಯ : ಜೀವ ಸೃಷ್ಟಿಯ ಸಾಕಾರ ರೂಪವಾದ ಬಿಂದು(ವೀರ್ಯ್ಯ) ತೀರ್ಥದ ಸ್ವರೂಪ. ಅಂತಹ ಅಂಡಾಣುವಿನಿಂದ ಹುಟ್ಟುವ ಕಂದನೇ(ಜೀವ) ಪ್ರಸಾದ, ಸೂರ್ಯ ಚಂದ್ರರೇ ನಿಜ ಲಿಂಗಗಳೆನಿಸಿದರು. ತಾನೇ ಲಿಂಗ ತಾನೇ ಜಂಗಮ ತಾನೇ ತಾನಾದ ಪರಿ ಕುರುಹು ಮೀರಿದ ಅರಿವಿನ ಸಂಕೇತವಾಗಿದೆ.

೫೨೯

ಅಂಗಡಿಗೆ ಹೋಗಿ ಕೊಂಡು ತಂದ ಲಿಂಗವನು
ಶೃಂಗಾರಕೆ ಒಂದು ಶಿಲೆಯ ಧರಿಸಿದರಲ್ಲದೆ ನಮ್ಮ
ಸಂಗಯ್ಯನ ಸರಿಯಾರು, ಬಸವಣ್ಣ

ತಾತ್ಪರ್ಯ : ಗುರುವಿನ ಕೃಪೆಯಿಲ್ಲದೆ ದೃಢಭಕ್ತಿಯಿಲ್ಲದೆ ಚಂದಕ್ಕಾಗಿ ಅಂಗಡಿಗೆ ಹೋಗಿ ಕೊಂಡು ತಂದ ಲಿಂಗವನು ಕೊರಳಲ್ಲಿ ಕಟ್ಟಿಕೊಂಡರೆ ದೇಹ ಶೃಂಗಾರಕ್ಕಾಗಿ ಕಲ್ಲೊಂದನ್ನು ಕಟ್ಟಿಕೊಂಡಂತಾಗುತ್ತದೆ. ಹೊರತು, ಅದು ಸಂಗಯ್ಯನಾದ ಸರ್ವೇಶ್ವರನ ಸ್ವರೂಪವಾಗದು. ಅವನ ಪ್ರತಿರೂಪ ಎನಲಾಗದು. ಅದೊಂದು ಅಲಂಕಾರವಷ್ಟೆ.

೫೩೦

ಅಯ್ಯಾ ಬೇವಿನ ಕಾಯಿಯಷ್ಟು ಲಿಂಗವ ಧರಿಸಿದರೆ
ನಮ್ಮ ಸಂಗಯ್ಯನ ಸರ್ವರೂಪವಾದೀತೆ? ಅಪ್ಪಾ ನಿಮ್ಮ
ಕೊರಳಲ್ಲಿರುವದು ನೀವ್ಯಾಕೆ ಧರಿಸಿದಿರೊ
ಒಂದು ನೆಲ್ಲಿಕಾಯಿಯನ್ನು ಹೋಲಿಸಿದಿರಾ

ಒಂದು ನಿಂಬೆಕಾಯಿಯನ್ನು ಹೋಲಿಸಿದಿರಾ
ಒಂದು ಕುಂಬಳಕಾಯಿ ಪ್ರಮಾಣ ಲಿಂಗವಾದೀತೇನಯ್ಯ
ಕುಂಬಾರನು ಮಾಡಿದ ಒಡವಿಯಲ್ಲ
ಕಮ್ಮಾರ ಮಾಡಿದ ಒಡವಿಯಲ್ಲ
ಶಂಭು ಶಂಕರನು ನಿರ್ಮಿಸಿದ ಒಡವಿಯೊಳಗೆ
ಉಂಬುವದರೊಳಗೆ ಉಣಬೇಕು, ಇದು ನಮ್ಮ
ಸಂಗಯ್ಯನವರ ಒಡವಿ, ಬಸವಣ್ಣ

ತಾತ್ಪರ್ಯ : ನಿಷ್ಠೆಯಿಲ್ಲದ ಲಿಂಗಭಕ್ತಿಯ ಕುರಿತು ಈ ವಚನ ಹೇಳುತ್ತದೆ. ಬೇವಿನ ಕಾಯಿಯಷ್ಟು ಲಿಂಗವ ಕೊರಳಲ್ಲಿ ಧರಿಸಿ, ಅದು ಶಿವಸ್ವರೂಪಿಯಾದ ಸರ್ವಾಂತರ್ಯಾಮಿ ಸಂಗಯ್ಯನೆಂದು ಹೇಳಿದರೆ ಆಗದು. ವ್ರತಹೀನನಾದ ಭವಿಗಳು ಅದನ್ನು ಕೊರಳಲ್ಲೇಕೆ ಧರಿಸಿದಿರಿ. ಅದನ್ನೇನು ನೆಲ್ಲಿಕಾಯಿ ನಿಂಬೆಕಾಯಿ ಕುಂಬಳಕಾಯಿ ಎಂದುಕೊಂಡಿರಾ. ಕುಂಬಳಕಾಯಿ ಪ್ರಮಾಣ ಲಿಂಗವಾಗಲು ಸಾಧ್ಯವಿಲ್ಲ. ಕುಂಬಾರನಾಗಲೀ ಕಮ್ಮಾರ ನಾಗಲೀ ಮಾಡಿದ ಒಡವಿಯಲ್ಲ, ಶಂಭುಶಂಕರನು ನಿರ್ಮಿಸಿದ ಒಡವಿಯದು, ಸಂಗಯ್ಯ ನವರ ಒಡವಿ. ಈ ದೇಹ ಸಂಗಯ್ಯನ ಪ್ರಸಾದದಿಂದ ಬಂದದ್ದು. ಅಂಗ ಲಿಂಗದ ಕುರುಹು ಮೀರಿ ಸಂಗಯ್ಯನಾದ ಪರಿಯಿದು.

೫೩೧

ಸೃಷ್ಟಿಗೀಶ್ವರನ ಮೆಟ್ಟಿ ಕಟ್ಟಿದವರುಂಟೆ
ಬಟ್ಟಲಲಿ ಉದಕವ ಎರೆದೆರೆದು ಲೋಕದೊಳು
ಭ್ರಷ್ಟರಾದರು ಭವಿಗಳು ಇವರನ್ನು
ಹೊಟ್ಟೆಗಾಗಿ ಮನೆ ಮನೆ ತಿರುಗಿಸಿದನು, ಬಸವಣ್ಣ

ತಾತ್ಪರ್ಯ : ಜಗತ್ತಿನ ಒಡೆಯನಾದ ಪರಮಾತ್ಮನನ್ನು ಮೆಟ್ಟಿ ಕಟ್ಟಲುಬಹುದೆ. ಅವನನ್ನು ಹಿಡಿದು ನೀರಿನಿಂದ ಸ್ನಾನ ಮಾಡಿಸಬಹುದೆ. ನಿರಾಮಯನೂ ನಿರ್ಗುಣನೂ ನಿರಾಲಂಬನೂ ಆದ ಸರ್ವೇಶ್ವರನನ್ನು ಹೀನಗುಣದ ಭವಿಗಳು ಕಂಡಿರುವೆವೆಂದು ಕಪಟವಾಡುವರು. ಅಂತವರನ್ನು ಹೊಟ್ಟೆಪಾಡಿಗಾಗಿ ಮನೆ ಮನೆ ತಿರುಗಿಸಿದೆನು ಬಸವಣ್ಣ.

೫೩೨

ಆಡಿನ ಹಿಕ್ಕಿಯಲಿ ಮಾಡಿದರು ಲಿಂಗವನು
ರೂಢಿಗೀಶ್ವರ ಶರಣ ಸದ್ಭಕ್ತರಿಗಲ್ಲದೆ ಲೋಕದ
ಪೀಡೆಗಳಿಗೆ ಲಿಂಗ ಸಲ್ಲುವದೆ, ಬಸವಣ್ಣ

ತಾತ್ಪರ್ಯ : ಗೋಲಗೇರಿ ಗೊಲ್ಲಾಳ ಆಡಿನ ಹಿಕ್ಕಿಯಲ್ಲಿ ರೂಪಗೊಂಡವನು. ಕುರುಬನ ಮುಗ್ಧ ಭಕ್ತಿಗೆ ಒಲಿದು ಬಂದವನು. ಪರಮಾತ್ಮನು ಯಾವತ್ತೂ ಇಂತಹ ಸದಾಚಾರ ಸದ್ಭಕ್ತರಿಗೆ ಒಲಿವನಲ್ಲದೆ ಲೋಕದ ಪೀಡೆಗಳಿಗೆ ಒಲಿಯಲಾರ, ಕುರುಹು ತೋರಲಾರ.

೫೩೩

ಎತ್ತು ಎಮ್ಮಿಯೆ ಲಿಂಗ, ಜತ್ತಿಗಿ ಮಿಣಿ ಲಿಂಗ
ಬಿತ್ತುವ ಬೀಜ ಘನಲಿಂಗ, ಮರ್ತ್ಯಕ್ಕೆ
ಭತ್ತವೇ ಲಿಂಗ, ಬಸವಣ್ಣ

ತಾತ್ಪರ್ಯ : ಪರಮಾತ್ಮ ಸರ್ವಾಂತರ್ಯಾಮಿ, ಈ ಸಕಲ ಜೀವ ಜಂತುಗಳ ಚೈತನ್ಯಕ್ಕೆ ಕಾರಣನು. ಎತ್ತು ಎಮ್ಮಿ ಜತ್ತಿಗಿ ಮಿಣಿ ಬಿತ್ತುವ ಬೀಜ ಭತ್ತ ಇವು ಸಮೃದ್ಧ ಕೃಷಿ ಸಮಾಜದ ಪ್ರತಿಬಿಂಬಗಳು. ಸ್ವಾವಲಂಬಿ ಸಮಾಜದ ಕ್ರಿಯಾಶೀಲ ಪ್ರತೀಕಗಳು. ಇವು ವಿಭಿನ್ನವಾಗಿದ್ದರೂ ಅವುಗಳ ಶ್ರಮದ ಕ್ರಮಬದ್ಧ ಬಳಕೆ ಆಹಾರದ ಉತ್ಪಾದನೆ ಹಾಗೂ ವಿನಿಯೋಗಕ್ಕೆ ಸಹಕಾರಿಯಾಗುತ್ತದೆ. ಅನ್ನವಾಗಿ ಲೋಕದ ಜನರ ಹಸಿವನ್ನು ನೀಗಿಸುವ ಭತ್ತ ಅನ್ನದೇವರಾಗಿ ಪರಮಾತ್ಮನಿಗಿಂತಲೂ ಮಿಗಿಲೆನಿಸಿದೆ.

೫೩೪

ಆವು ಎಮ್ಮಿಯೆ ಲಿಂಗ, ವಾಯು ಅಗ್ನಿಯೆ ಲಿಂಗ
ಲೋಹವೆ ಲಿಂಗ ಮರ್ತ್ಯಕೆ ಶಿವಶರಣರ
ಧ್ಯಾನವೇ ಲಿಂಗ, ಬಸವಣ್ಣ

ತಾತ್ಪರ್ಯ : ಆಕಳು ಎಮ್ಮಿ ಇವು ದೇಸಿ ಕೃಷಿ ಬದುಕಿನ ಸಂಪದ್ಭರಿತ ನೆಲೆಗಳು. ಹಾಲು ಹೈನು ಒಂದು ಸಮಾಜದ ಪೌಷ್ಟಿಕತೆಯ ಪ್ರಮುಖ ನೆಲೆಗಳು. ಶ್ರಮ ಸಮಾಜದ ಸಜೀವ ಪ್ರತೀಕಗಳು. ವಾಯು ಅಗ್ನಿ ಲೋಹ ಇವು ಜೀವಂತ ಸಮಾಜದ ಉಸಿರು, ನಾಗರಿಕತೆಯ ಪ್ರತಿಬಿಂಬಗಳು. ಹಾಗಂತೆಯೇ ಇವುಗಳ ಪೂಜೆ ನಡೆಯುತ್ತದೆ. ಇಂತಹ ನಾಗರಿಕ ಸಮಾಜ ಕೇವಲ ಭೌತಿಕ ಸುಖಗಳಲ್ಲಿ ನೆಲೆ ನಿಲ್ಲದೆ ಕ್ರಿಯಾಶೀಲನಾದ ಪರಮಾತ್ಮನ ನಾಮಸ್ಮರಣೆಯಿಂದ ಧ್ಯಾನಸ್ಥ ಸ್ಥಿತಿಗೆ ತಲುಪಬೇಕು.

೫೩೫

ಐಕ್ಯ ಪರಬ್ರಹ್ಮ ಅನಂತ ಲೋಚನ
ಆದಿ ಪೀಠ ವರ್ಧನ ಅಮರ ಸಂಜೀವನ
ಆಗಮ ನಿಶ್ಚಿತ ತಾರಕಬ್ರಹ್ಮ

ಲಿಂಗಪ್ರಜ್ಞೆ ೨೨೫

ತತ್ತ್ವಪರಿಪೂರ್ಣ ತಾನೇ ತಾನಾದ
ಲಿಂಗಕ್ಕೆ ನಾನು ನೀನು ಎನಲಾರೆ, ಬಸವಣ್ಣ

ತಾತ್ಪರ್ಯ : ಋಗ್ವೇದದಲ್ಲಿ ವಿಶ್ವಕರ್ಮನನ್ನು 'ಚಕ್ಷುಷಃ ಪಿತಾ ವಿಶ್ವಶ್ಚಕ್ಷು' ಎಂದು ವರ್ಣಿಸಲಾಗಿದೆ. ಜಗತ್ತಿನ ಚೇತನ ಅಚೇತನಗಳಲ್ಲಿ ಚೈತನ್ಯ ತುಂಬುವ ವಿಶ್ವಕರ್ಮ ಸೃಷ್ಟಿಕರ್ತನಾದಂತೆ ಈ ಜಗತ್ತೇ ತಾನಾದ ಪರಬ್ರಹ್ಮ ಜಗತ್ತಿನ ಕಣ್ಣು. ಸರ್ವಾಂತರ್ಯಾಮಿ. ಜಗತ್ತಿನ ಸೃಷ್ಟಿಗೆ ಆಧಾರಸ್ಥಾನವಾದಂತೆ ಅದರ ವೃದ್ಧಿಗೂ ವಿಕಾಸಕ್ಕೂ ಕಾರಣವಾದ ಪ್ರಾಣರೂಪಿ ಜಗದೊಡೆಯ. ಅವನು ನಿಶ್ಚಿಂತನೂ ತತ್ತ್ವಪರಿಪೂರ್ಣನೂ ತಾನೇ ತಾನಾದ ಬೇರೆ ಯಾರೂ ಇಲ್ಲದ ಶುದ್ಧ ಅದ್ವೈತಿ. ಸತ್ಯದ ತೇಜಸ್ಸುಳ್ಳ ಪರತತ್ವನಾದಂಥವ ಎನ್ನುವ ಮೂಲಕ ವಿಶ್ವಕರ್ಮ ತತ್ತ್ವದ ವಿಶಿಷ್ಟತೆಯನ್ನು ಮೌನೇಶ್ವರರು ಇಲ್ಲಿ ಹೇಳಿರುವರೆಂದೆನಿಸುತ್ತದೆ.

೬

ಸನ್ಯಾಸ

ವಿಷಿ೬

ಹೆಣ್ಣಿನ ಮೇಲಣ ಆಸೆ ಸುಣ್ಣದ ಕಲ್ಲಿನ ರಾಶಿ
ಕಣ್ಣಿಲಿ ನೋಡಿ ಬಳಲುವ ಪಾಪಿಗೆ
ತಣ್ಣೀರೊಳು ಬಿದ್ದ ತೆರನಂತೆ, ಇವರಿಗೆ
ಸನ್ಯಾಸಿಯೆಂಬ ಬಿರುದೇಕೆ, ಇವರ ತಲೆಗೆ
ಸನ್ನಿಹತ್ತಿದೆಯೇನೊ, ಬಸವಣ್ಣ

ತಾತ್ಪರ್ಯ : ಸನ್ಯಾಸಿಯಾದವನು ಪ್ರಾಪಂಚಿಕ ವ್ಯಾಮೋಹಗಳನ್ನು ಮೀರಬೇಕು. ಸನ್ಯಾಸಿಯಾಗಿಯೂ ಹೆಣ್ಣನ್ನು ಆಸೆ ಪಡುವವನ ಬದುಕು ಸುಣ್ಣದ ಕಲ್ಲನ್ನು ಕಟ್ಟಿ ಕೊಂಡು ತಣ್ಣೀರೊಳು ಬಿದ್ದು ಬೆಂದಂತಾಗುತ್ತದೆ. ಹೆಣ್ಣಿನ ವ್ಯಸನ ಸನ್ಯಾಸಿಗೆ ಸಲ್ಲದು.

ವಿಷಿ೭

ಹೆತ್ತವರನರಿಯದಾತ ಮುತ್ತ್ಯಾನ ಬಲ್ಲನೆ
ಕತ್ತಲೆ ಕರ್ಮದ ವಿಧಿಯೊಳಗೆ ಸಿಲುಕಿದವರಿಗೆ
ಎತ್ತಣ ಉಪದೇಶ, ಲೋಕದ
ಕತ್ತೆಗಳ ಕಂಡೆಯಾ, ಬಸವಣ್ಣ

ತಾತ್ಪರ್ಯ : ಹೆತ್ತು ಹೊತ್ತು ಬೆಳೆಸಿದ ತಂದೆ ತಾಯಿಯರ ಮನಸ್ಸನ್ನು ಅರಿಯದವರು ತನ್ನ ಮುತ್ಯಾನ್ನ(ಅಜ್ಜ) ಹೇಗೆ ಅರ್ಥಮಾಡಿಕೊಳ್ಳುತ್ತಾರೆ. ಹೀಗೆ ಗತ ಮತ್ತು ವಂಶ ವಾಹಿನಿಯ ಅರಿವಿಲ್ಲದವರಿಗೆ, ಅಹಂಕಾರ ಅಜ್ಞಾನವೆಂಬ ಕರ್ಮಕತ್ತಲೆಯ ಬಂಧನದಲ್ಲಿ ಸಿಲುಕಿದವರಿಗೆ ಉಪದೇಶದ ಮಾತುಗಳು ಅರ್ಥವಾಗಲಾರವು. ಅಂತಹ ಮರ್ತ್ಯದ

ಮಾನವರು ಕತ್ತೆಯಂತೆ ಅಜ್ಞಾನಿಗಳಾಗುತ್ತಾರೆ ಏನಹಃ ಸುಜ್ಞಾನಿಗಳಾಗಲಾರರು. ಇಂಥವರಿಗೆ ಜ್ಞಾನೋಪದೇಶ ಮಾಡುವುದು ವ್ಯರ್ಥ.

೫೩೮

ಚೆನ್ನಂಗೆ ಕನ್ನಂಗೆ ಮುನ್ನ ಕೊಟ್ಟನು ಶೀಲ
ಅನ್ಯಾಯದೊಳಗೆ ಹೋಗಬೇಡ, ಲೋಕದ
ಹೆಣ್ಣುಗಳೆಲ್ಲ ಒಡಹುಟ್ಟಿ ಬಂದಂಥ
ಹೆಣ್ಣುಗಳ ಕಂಡು ತಪವ ಮಾಡಿದ
ಚೆನ್ನಸಂಗಯ್ಯನ ಹರಿಕಿಯುಂಟು, ಲೋಕದ
ಬಿನ್ನಾಣದೊಳು ಬಿದ್ದರೆ ಯಮಗೊಂಡ, ಬಸವಣ್ಣ

ತಾತ್ಪರ್ಯ : ಮಾದಾರ ಚೆನ್ನಯ್ಯ ಬೇಡರ ಕಣ್ಣಪ್ಪನಂತಹ ಪುರಾತನ ಶರಣರು ತಮ್ಮ ಸಾತ್ವಿಕ ಭಕ್ತಿಯಿಂದ ಸಚ್ಚಾರಿತ್ರ್ಯವಂತರಾದರು. ಅನ್ಯಾಯದ ಬದುಕು ಬದುಕ ಬಾರದು. ಲೋಕದ ಹೆಣ್ಣುಮಕ್ಕಳನ್ನು ಒಡಹುಟ್ಟಿದವರೆಂದು ತಿಳಿಯಬೇಕು. ಆವಾಗ ಶೀಲವಂತನೂ ಸಹೋದರ ಭಾವವನ್ನು ಹೊಂದಿದ ನೂತನ ಶರಣ ಚೆನ್ನಸಂಗಯ್ಯನು ಒಲಿವುದು. ಇಲ್ಲದೆ ಹೋದರೆ ಮೋಹ ಮಾಯೆಗಳ ಭ್ರಮಾತ್ಮಕ ಬದುಕಲ್ಲಿ ಬಿದ್ದು ಸಾಯಬೇಕಾಗುತ್ತದೆ. ಇಂತಹ ದುರ್ಮಾರ್ಗದಲ್ಲಿ ಹೋಗದೆ ಸನ್ಮಾರ್ಗದಲ್ಲಿ ನಡೆದು ಸುಶೀಲನಾದರೆ ಪರಮಾತ್ಮನು ಅನುಗ್ರಹಿಸುತ್ತಾನೆ.

೫೩೯

ಏಕಾಂತ ಮಾತಾಡಿ ನೂಕಂತ ಕೊಲ್ಲಿಸುವರು
ಸಾಕಂತ ಸಂಸಾರ ನೀಗಿ ದುರ್ಮರಣವಾಗಿ
ಭೂಕಾಂತಿ ನುಂಗಿ ನೀರ್ಗುಡಿವಳು, ಬಸವಣ್ಣ

ತಾತ್ಪರ್ಯ : ಇದು ಜೀವನದ ಮೋಹ ಮಾಯೆಯ ಭಯಾನಕತೆಯನ್ನು ತಿಳಿಸುವ ವಚನ. ವೇಶ್ಯೆಯಾದವಳು ಏಕಾಂತದಲ್ಲಿ ಬೆಲ್ಲದಂತೆ ಮಾತಾಡಿ ಬೆರೆಯುವಳು. ವಿಟರು ಬೇಡಿದ್ದನ್ನು ಕೊಡದಿದ್ದರೆ ಅವರನ್ನು ಬೆನ್ನ ಹಿಂದೆ ಕೊಲ್ಲಲು ಹೇಳುವಳು. ಈ ಯಾವ ಜಂಜಾಟವೂ ಬೇಡವೆಂದು ಸನ್ಯಾಸಿಯಾದರೆ ದುರ್ಮರಣವಾಗಿ ಭೂಕಾಂತಿ ನುಂಗಿ ನೀರು ಕುಡಿವಳು. ಹೀಗಾಗಿ ಮನುಷ್ಯ ಜನ್ಮ ಎನ್ನುವುದು ಸಾರ್ಥಕವಾಗ ಬೇಕಾದರೆ ಇಬ್ಬಂದಿತನವನ್ನು ನೀಗಿಕೊಂಡು ಸಚ್ಚಾರಿತ್ರ್ಯ ಬೆಳೆಸಿಕೊಳ್ಳ ಬೇಕು, ಏನನ್ನಾದರೂ ಸಾಧಿಸಬೇಕಾಗಿದ್ದರೆ ಪಟ್ಟುಹಿಡಿದು ನಿರಂತರ ಪ್ರಯತ್ನದಿಂದ ಗೆಲ್ಲಬೇಕು.

೫೪೦

ಬಣ್ಣಕ್ಕೆ ಭಸಿತವನಿಟ್ಟನಲ್ಲದೆ ಅನ್ಯಾಯವ ಬಿಡಲಾರೆ
ಸಣ್ಣ ರುದ್ರಾಕ್ಷಿ ಜಪತಪವೆಂಬ
ಸುಣ್ಣದ ಕಲ್ಲು ಉಡಿಯಲ್ಲಿ ಕಟ್ಟಿಕೊಂಡು
ತಣ್ಣೀರೊಳು ಬಿದ್ದ ತೆರನಂತೆ, ಪ್ರಭುದೇವರೆ
ಎನಗಳವಲ್ಲವಯ್ಯ ಜಪತಪವು, ಬಸವಣ್ಣ

ತಾತ್ಪರ್ಯ : ಜ್ಞಾನ ಮತ್ತು ವೈರಾಗ್ಯದ ಪ್ರತೀಕವಾದ ಭಸ್ಮವನ್ನು ಹಚ್ಚಿಕೊಂಡು ರುದ್ರಾಕ್ಷಿಯನ್ನು ಧರಿಸಿ ಜಪತಪ ಮಾಡಿದರೂ ತನ್ನ ಹೀನಗುಣಗಳನ್ನು ಬಿಡದವನ ಬಾಳು ಸುಣ್ಣದ ಕಲ್ಲು ಉಡಿಯಲ್ಲಿ ಕಟ್ಟಿಕೊಂಡು ತಣ್ಣೀರೊಳು ಬಿದ್ದು ನಾಶವಾದಂತೆ ಅಂತಹ ಡಾಂಭಿಕಬಾಳು ನನಗಳವಲ್ಲಯ್ಯ ಎಂದು ಹೇಳುವ ಆತ್ಮ ವಿಶ್ಲೇಷಣೆಯ ವಚನವಿದಾಗಿದೆ.

೫೪೧

ಜುಟ್ಟು ಜನಿವಾರ ಕಿತ್ತಿ, ಪಟ್ಟದ ಹೆಂಡತಿಯ ಬಿಟ್ಟು
ಹುಟ್ಟಿ ಬಂದಂತೆ ತಿರುಗುವುದು ಪೂರ್ವದ
ಕೆಟ್ಟ ದುಷ್ಕರ್ಮ, ಬಸವಣ್ಣ

ತಾತ್ಪರ್ಯ : ತುಂಬು ಬದುಕನ್ನು ಬಾಳಬೇಕಾದ ಮನುಷ್ಯ ತನ್ನ ಅಜ್ಞಾನದಿಂದಾಗಿ ಅರಿವಿನ ಕೊರತೆಯಿಂದಾಗಿ ತನ್ನ ಜುಟ್ಟು ಜನಿವಾರ ಕಿತ್ತು, ಕಟ್ಟಿಕೊಂಡ ಧರ್ಮ ಪತ್ನಿಯನ್ನು ಬಿಟ್ಟು ಬೆತ್ತಲೆ ತಿರುಗುವುದು ಪೂರ್ವಜನ್ಮದಲ್ಲಿ ಮಾಡಿದ ದುಷ್ಕರ್ಮದ ಫಲವೇ ಆಗಿದೆ. ಸನ್ಯಾಸ ಎನ್ನುವುದು ಆಧ್ಯಾತ್ಮದ ಅತ್ಯುನ್ನತ ಗುರಿಯಾದ ಮೋಕ್ಷಕ್ಕೆ ದಾರಿಯಾಗಬೇಕು. ಅದು ಸುಮ್ಮನೆ ಕಳದು ಹೋಗಬಾರದು.

೫೪೨

ಹುಟ್ಟಿದ ಯೋನಿಯ ಹಳಿದು
ಕೊಟ್ಟ ಮೊಲೆಗಳ ಹಳಿದು
ಎತ್ತಿ ಮುದ್ದಾಡಿದ ಮುಖಗಳ ಹಳಿದವಂಗೆ
ಎತ್ತಣ ಉಪದೇಶ, ಬಸವಣ್ಣ

ತಾತ್ಪರ್ಯ : ನವಮಾಸಗಳ ಹೊತ್ತು ಮೊಲೆಯುಣಿಸಿದ ತಾಯಿಯನ್ನು, ಎತ್ತಿ ಮುದ್ದಾಡಿ ಸಲುಹಿದ ತಂದೆ ಹಾಗೂ ಬಂಧು ಬಾಂಧವರನ್ನು ನಿಂದಿಸಿದವನಿಗೆ, ಯಾವ ಉಪದೇಶವೂ ಪ್ರಯೋಜನವಾಗದು. ಹುಟ್ಟಿದ ಯೋನಿ ಉಂಡ ಮೊಲೆಗಳನ್ನು

ನೀಚವೆಂದು ನೋಡುವ ವೈರಾಗ್ಯದ ರೀತಿಯೊಂದು ಭಾರತದಲ್ಲಿ ಬೆಳೆದು ಬಂದಿದೆ. ಸ್ತ್ರೀ ಪಾಪಿಜನ್ಮ, ಮೋಕ್ಷಕ್ಕೆ ಅನರ್ಹಳು. ಅಂಥವಳ ಗರ್ಭದಲ್ಲಿ ಜನಿಸಿ ಬರುವುದೆಂದರೆ ಮಹಾಪಾಪ ಎನ್ನುವ ಸ್ತ್ರೀ ದ್ವೇಷಿ ನೆಲೆಗಳನ್ನು ಮೌನೇಶ್ವರರು ಇಲ್ಲಿ ಖಂಡಿಸಿದ್ದಾರೆ.

೫೪೩

ತರುಗಿರಿಗಳೊಳು ತರಗೆಲೆಗಳ ಮೆದ್ದು
ಶಿರಗಳ ಅಡಿಯಾಗಿ ತಪವ ಮಾಡುವರೆಲ್ಲ
ಕುರಿಯ ಆತ್ಮದಲಿ ಜನಿಸುವರು, ಬಸವಣ್ಣ

ತಾತ್ಪರ್ಯ : ತನ್ನ ತಾನರಿಯದೆ ಹಿಮಾಲಯದಂತಹ ಉನ್ನತ ಗಿರಿ ಶಿಖರಗಳಲ್ಲಿ ತಿರುಗಿ ಒಣವಾಸ ಉಪವಾಸ ಬಿದ್ದು, ತಲೆ ಕೆಳಗಾಗಿ ನಿಂತು ತಪಸ್ಸು ಮಾಡುವ ಕುಹಕಿ ಮನುಜರು ಕುರಿಯ ಹೊಟ್ಟೆಯಲಿ ಕೀಳಾಗಿ ಹುಟ್ಟುವರು.

೫೪೪

ಹಿಪ್ಪಿದೆನು ಹೀರಿದೆನು, ಅಪ್ಪಿ ಮುದ್ದಾಡಿದೆನು
ಅಪ್ಪ ಭೋಗಿಸಿದ ಒಡವಿಯ ಭೋಗಿಸಿ
ಬಂದಂಥವರಿಗೆ ಸತ್ಪುರುಷರೆಂದರೆ
ಇವರ ತಲೆಗೆ ಪಿತ್ತ ಹತ್ತಿದೆಯೇನೋ, ಬಸವಣ್ಣ

ತಾತ್ಪರ್ಯ : ಅಪ್ಪ ಭೋಗಿಸಿದ ಒಡವಿಯನ್ನು(ಹೆಣ್ಣನ್ನು) ಹಿಪ್ಪಿ ಹೀರಿ ಅಪ್ಪಿ ಮುದ್ದಾಡಿದ ಕಾಮಾಂಧರಿಗೆ ಸತ್ಪುರುಷರೆನ್ನಲಾಗದು. ಹಾಗೊಂದು ವೇಳೆ ಅಂತಹ ಲಂಪಟರನ್ನು ಸತ್ಪುರುಷರೆಂದರೆ ಅಂತವರ ತಲೆಗೆ ಪಿತ್ತ ಹತ್ತಿರಬೇಕು, ತಲೆ ಕೆಟ್ಟಿರಬೇಕು ವೇಶ್ಯೆಗೆ ಹಣ ಮುಖ್ಯ. ತಂದೆ ಮಗ ಎನ್ನುವ ಸಂಬಂಧವಲ್ಲ. ಎಲ್ಲರೂ ಹಣ ಕೊಡುವ ಗಿರಾಕಿಗಳು. ಹೀಗೆ ಭೋಗ ಕೊಟ್ಟವರು ಮತ್ತು ಪಡೆದವರು ಸಚ್ಚಾರಿತ್ರ್ಯವಂತರಾಗ ಲಾರರು.

೫೪೫

ಹೆಣ್ಣು ಬಿಟ್ಟಿನೆಂದು ಮಣ್ಣು ಮೋರೆಗೆ ಪೂಸಿಕೊಂಡು
ಬಣ್ಣದ ತೊಗಲ ಬಿಗಿದುಟ್ಟಿನೆಂದರೆ
ಕನ್ನವ ಹಾಕಿ ಕಳವಳಿಸಿಕೊಂಡು ಹೋಗುವಂಥ
ಕನ್ಯೆಯ ಕಾಣಲರಿಯರು, ಜಗದೊಳಗೆ
ಹೆಣ್ಣು ಬಿಟ್ಟಿನೆಂಬುವರ ಹೆಸರೇನು, ಲೋಕದ
ಬಣ್ಣನೆಯ ಕಾಣಾ, ಬಸವಣ್ಣ

ತಾತ್ಪರ್ಯ : ಹೆಣ್ಣಿನಲ್ಲಿ ಅನುರಕ್ತನಾದವ ಹೆಣ್ಣಿನ ಸಂಗ ಬಿಟ್ಟಿರುವೆನೆಂದು ಅಂಗಕ್ಕೆ ಬೂದಿ ಹಚ್ಚಿಕೊಂಡು ಬಣ್ಣದ ತೊಗಲ ವೇಷ ಬಿಗಿದುಟ್ಟುಕೊಂಡು ಸನ್ಯಾಸಿಯಾದೇನೆಂದು ಹೇಳಿದರೆ ನಂಬಲಾಗದು. ಕಾರಣ ಒಳಗೇ ಕನ್ನ ಕೊರೆಯುವ ಕಳ್ಳನಂತೆ ಕಾಮದ ಕಳವಳವನ್ನು ಮನದೊಳಗೆ ತುಂಬಿಕೊಂಡಿರುತ್ತಾನೆ. ಅಂತವನ ಅಂತರಂಗವು ಕಳ್ಳ ಹೊಕ್ಕ ಮನೆಯಂತಿರುತ್ತದೆ. ಹೀಗಾಗಿ ಹೆಣ್ಣಿನ ಆಸೆ ಬಿಟ್ಟವರು ಜಗದೊಳಗ್ಯಾರು ಇಲ್ಲ. ಕಾಮವು ಪ್ರಕೃತಿ ನಿಯಮ. ಅದನ್ನು ಮೀರುವುದು ಮುಕ್ಕಣ್ಣನಿಂದಲೂ ಸಾಧ್ಯವಿಲ್ಲ. ಮೀರಿದೆ ಎನ್ನುವುದು ಕೇವಲ ಢೋಂಗಿತನವಷ್ಟೆ ಎಂದು ಮೌನೇಶ್ವರರು ಹೇಳುತ್ತಾರೆ.

೫೪೬

ಹೆಣ್ಣು ಬಿಟ್ಟವರಿಗೆ ಪುಣ್ಯದ ಫಲವಿಲ್ಲ
ಕಣ್ಣು ಮೂರುಳ್ಳದವ ಶಿವನಲ್ಲ, ಲೋಕದೊಳು
ಹೆಣ್ಣು ಬಿಟ್ಟೆನೆಂಬುವನ ಹೆಸರೇನು, ಲೋಕದ
ಬಣ್ಣನೆ ಕಾಣಾ, ಬಸವಣ್ಣ

ತಾತ್ಪರ್ಯ : ಸಾಧ್ವಿಯಾದ ಹೆಂಡತಿಯ ಬಿಡುವವನಿಗೆ ಪುಣ್ಯವಿಲ್ಲ. ಕಣ್ಣು ಮೂರುಳ್ಳದವ ಶಿವನಲ್ಲ. ಈ ಲೋಕದಲ್ಲಿ ಹೆಣ್ಣು ಬಿಟ್ಟೆನೆನ್ನುವನು ಸುಳ್ಳು ಹೇಳುತ್ತಾನೆ ಹೊರತು ಸತ್ಯವನ್ನಲ್ಲ. ಸನ್ಯಾಸದ ಹೆಸರಲ್ಲಿ ಹೆಣ್ಣನ್ನು ಹೀಗಳೆಯುವುದು ತುಚ್ಛವಾಗಿ ಕಾಣುವುದು ಗಂಡಿನ ಅಹಂಕಾರವೇ ಹೊರತು ನಿಜವಾದ ಬ್ರಹ್ಮಚರ್ಯವಲ್ಲ. ಶಿವನೇ ತನ್ನರ್ಧ ಭಾಗವನ್ನು ಸೀಳಿಕೊಟ್ಟು ಅರ್ಧನಾರೀಶ್ವರನಾಗಿರುವಾಗ ಹೆಣ್ಣು ಬಿಟ್ಟೆನೆಂಬುವುದು ಆತ್ಮದ್ರೋಹವೇ ಹೊರತು ಆತ್ಮ ಸಾಕ್ಷಾತ್ಕಾರವಲ್ಲ.

೫೪೭

ಹೆಣ್ಣು ಬೊಂಬೆಯ ಮೇಲೆ, ಕಣ್ಣು ನಟ್ಟಾಕ್ಷಣದಿ
ಬಣ್ಣ ಕೆಟ್ಟಿತು ಈ ದೇಹ, ಬರುತ ಮುಖ
ಸಣ್ಣದಾಯಿತು ನೋಡು, ಬಸವಣ್ಣ

ತಾತ್ಪರ್ಯ : ಇದು ಕಾಮದ ಪ್ರಬಲ ಶಕ್ತಿಯನ್ನು ಅದರ ಪ್ರಭಾವವನ್ನು ಹೇಳುವ ವಚನ. ಚಂದುಳ್ಳ ಹೆಣ್ಣಿನ ಮೇಲೆ ಲೋಭದ ಕಣ್ಣಿಟ್ಟಾಕ್ಷಣದಿ ಮನುಷ್ಯನ ವ್ಯಕ್ತಿತ್ವ ಹೀನವಾಗುತ್ತದೆ. ದೇಹದ ಅತಿಯಾದ ಬಯಕೆಯಿಂದ ಮುಖ ಕಳಾಹೀನವಾಗುತ್ತದೆ. ಮನುಷ್ಯ ತನ್ನ ತನವನ್ನೇ ಕಳೆದುಕೊಳ್ಳುತ್ತಾನೆ. ಅಂದರೆ ದೇಹದ ಅತಿಯಾಸೆ ಇಡೀ ಮನಸ್ಸು ಮತ್ತು ಮೈಯನ್ನು ರೋಗಿಷ್ಟವಾಗಿಸುತ್ತದೆ.

೫೪೮

ಆಶೆಯನಳಿದರೇನು ಸನ್ಯಾಸಿಯಾದರೇನು
ದೇಶಾಂತರವ ತಿರುಗಿದರೇನು, ದುಷ್ಕರ್ಮದ
ದೋಷ ತಪ್ಪುವುದೆ, ಬಸವಣ್ಣ

ತಾತ್ಪರ್ಯ : ಹೆಣ್ಣನ್ನು ಬಿಡುವುದು, ಸನ್ಯಾಸಿಯಾಗುವುದು ಭವಬಂಧನದಿಂದ ದೂರವಾಗುವುದನ್ನು ಮಾತ್ರ ವೈರಾಗ್ಯವೆಂದು ವೇದಾಂತ ಪರಂಪರೆ ನಮ್ಮ ತಲೆಯಲ್ಲಿ ತುಂಬುತ್ತ ಬಂದಿದೆ. ಇಹಲೋಕದ ವಿಮುಖತೆ ಪರಲೋಕದ ಪ್ರಾಪ್ತಿಗೆ ದಾರಿ ಎಂದು ಸಾರುತ್ತ ಬಂದಿದೆ. ಆದರೆ ಇದು ಪ್ರಕೃತಿ ವಿಮುಖವಾದದ್ದು. ಹೀಗಾಗಿ ಪಾಪ ಕರ್ಮ ಮಾಡಿ ಸನ್ಯಾಸಿಯಾದರೇನು, ದೇಶಾಂತರವ ತಿರುಗಿದರೇನು, ಸಂಸಾರದ ಹಂಗು ತೊರದರೇನು ಫಲ. ಮನುಷ್ಯ ಮಾಡುವ ಕೆಟ್ಟ ಕೆಲಸಗಳು ಆತನ ಬೆನ್ನು ಹತ್ತುತ್ತವೆ. ಹೀಗಾಗಿ ಸನ್ಮಾರ್ಗದ ಕೆಲಸ ಸಾರ್ಥಕವಾದುದು ಹೊರತು ಎಡಬಿಡಂಗಿತನ ಸಾರ್ಥಕವಾದ ಬದುಕಲ್ಲ.

೫೪೯

ಆಸೆಯೆಂಬ ವೇಶ್ಯೆ ಎನ್ನ ಘಾಸಿ ಮಾಡುತಾಳೆ
ಏಸೇಸು ದಿನಕೆ ತನ್ನ ಬಿಡಳಯ್ಯ, ಅಗೋಚರವ
ತನ್ನ ಒಡಲೊಳಗೆ ಇಟ್ಟುಕೊಂಡು
ಆಚಾರಿಯೆಂದು ಎನಿಸುವೆ ಪಾಪದ
ಕಾಚಿನ ಕಲಿಯು ತೊಳೆಯದು, ಬಸವಣ್ಣ

ತಾತ್ಪರ್ಯ : ಅತಿಯಾದ ಆಶೆ ಎಂಬುದು ವೇಶ್ಯೆ ಇದ್ದಂತೆ. ವೇಶ್ಯೆಯ ಸಂಗ ಮಾಡಿದವ ತನ್ನೆಲ್ಲ ಸರ್ವಸ್ವವನ್ನು ಕಳೆದುಕೊಂಡು ಕಂಗಾಲಾಗುತ್ತಾನೆ. ಇಂತಹ ಅತಿಯಾದ ಬಯಕೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮೇಲೆ ಸಂಭಾವಿತನಂತೆ ನಟಿಸುವವನಿಗೆ ಕಾಚಿನ ಕಲೆಯಂತೆ ಪಾಪ ಅಂಟಿಕೊಳ್ಳುತ್ತದೆ. ಅದು ಎಷ್ಟು ತೊಳೆದರೂ ಹೋಗದು. ಅಂತರಂಗದ ಶೋಧ ಶುದ್ಧಸಾಧಕನಿಗೆ ಬಹಳ ಮುಖ್ಯ.

೫೫೦

ಮನ್ಮಥನ ದೇಹವಿದು ಸನ್ಮತವೆ ಶಾಸ್ತ್ರಗಳು
ತನ್ನ ನಿಜ ಸ್ಮರಣೆ ತನಗಿಲ್ಲ, ಜಾರತ್ವಕ್ಕೆ
ಅನುಮಾನಗಳಿಲ್ಲ, ಬಸವಣ್ಣ

ತಾತ್ಪರ್ಯ : ಈ ದೇಹ ಎನ್ನುವುದು ಲೌಕಿಕ ಬಯಕೆ ಹಾಗೂ ಇಂದ್ರಿಯ ವಾಸನೆಗಳಿಂದ ತುಂಬಿದೆ. ಈ ದೇಹಕ್ಕೆ ಶಾಸ್ತ್ರಗಳು ಸಮ್ಮತವೆ? ಇಂತಹ ಇಂದ್ರಿಯ

ಸುಖದ ವಿಪರೀತತೆಯಲ್ಲಿ ಮನುಷ್ಯ ತನ್ನ ನಿಜ ರೂಪವನ್ನೇ ಮರೆತಿದ್ದಾನೆ. ಹೀಗಾಗಿ ಪಾವಿತ್ರ್ಯದ ಸುತ್ತ ಅನುಮಾನಗಳಿರುತ್ತವೇ ಹೊರತು ಅಪಾವಿತ್ರ್ಯ(ಜಾರತನ)ದ ಸುತ್ತ ಅನುಮಾನ ಗಳಿರುವುದಿಲ್ಲ. ತನ್ನ ನಿಜ ಸ್ವರೂಪ ತಾನರಿತು ನೀತಿವಿದನಾಗಬೇಕೆ ಹೊರತು ಮೋಹ ಮಾಯೆಗಳ ವಶನಾಗಬಾರದು. ದೇಹ ಗುಣಗಳನ್ನು ಮೀರಿದಾಗಲೇ ಜ್ಞಾನ ಎನ್ನುವುದು ತನ್ನದಾಗುತ್ತದೆ.

೫೫೧

ಮಾಯೆಯೊಳಗೆ ಹುಟ್ಟಿದೆನು ಮಾಯೆಯೊಳಗೆ ಬೆಳೆದೆನು
ಮಾಯೆಯ ಮುದ್ದಾಡಿ ಬಳಲುವ ಪಾಪಿಗೆ
ಮಹೇಶ್ವರನೆಂಬ ಬಿರುದೇಕೆ, ಇವರ ತಲೆಗೆ ಹುಚ್ಚು
ಹತ್ಯದೆಯೇನೊ, ಬಸವಣ್ಣ

ತಾತ್ಪರ್ಯ : ಮೋಹ ಮಾಯೆಯೊಳಗೆ ಹುಟ್ಟಿ ಮೋಹ ಮಾಯೆಗಳಲ್ಲಿಯೇ ಬೆಳೆದು ಸದಾ ಭೋಗ ವಿಲಾಸಗಳಲ್ಲಿಯೇ ಕಾಲ ಕಳೆದು ವಿಲಾಸಿ ಜೀವನ ಸಾಗಿಸುವ ಮನುಷ್ಯನನ್ನು ಮಹೇಶ್ವರನೆನ್ನಲಾಗದು. ಹಾಗನ್ನುವವರಿಗೆ ಹುಚ್ಚು ಹಿಡಿದಿರಬೇಕಷ್ಟೆ. ಕಾರಣ ಮಾಯಾ ಮೋಹ ಗೆದ್ದೆನೆನ್ನುವವನು ಶುದ್ಧ ಅಜ್ಞಾನಿ. ಅತಿಯಾದ ಆಸೆ ಮತ್ತು ಅವಲಂಬನೆ ಮನುಷ್ಯನನ್ನು ಆತ್ಮವಂಚಿತನನ್ನಾಗಿಸುತ್ತವೆ ಹೊರತು ಆತ್ಮಜ್ಞಾನಿಯನ್ನಾಗಿಸುವುದಿಲ್ಲ. ಮಾಯಾ ಮದಗಳ ತಿರಸ್ಕಾರಕ್ಕಿಂತ ನಿಯಂತ್ರಣ ಬಹಳ ಮುಖ್ಯ ಎನ್ನುವುದು ಇಲ್ಲಿನ ತಾತ್ಪರ್ಯ.

೫೫೨

ಜಡೆಯ ಬೆಳೆಸಿದರೇನು ಕೊಡಿಯ ಹಿಡಿಸಿದರೇನು
ಮೃಢರೂಪನೆಂದು ಪೊಡವಿಯೊಳು ತಿರುಗುವುದು
ಒಡಲಿಗಾಹಾರ, ಬಸವಣ್ಣ

ತಾತ್ಪರ್ಯ : ಜಡೆ ಬಿಟ್ಟು ಕೊಡೆಯ ಹಿಡಿದು ಶಿವನಂತೆ ವೇಷಧರಿಸಿ ಭೂಮಿಯ ಮೇಲೆ ತಿರುಗುವುದು ಹೊಟ್ಟೆ ಹೊರೆವ ಕೆಲಸವೇ ವಿನಃ ಅದು ನಿಜವಾದ ಸಾಧು ಸಜ್ಜನರ ಕೆಲಸವಲ್ಲ.

೫೫೩

ಆವ ಪ್ರಮಾಣವನರಿಯೆ ದೇವ ಪ್ರಮಾಣವ ಬಲ್ಲರು
ರಾಹು ಕೇತು ರವಿ ಶಶಿಗಳಿಗೆ ತೊಡಕಿದ
ಗ್ರಹಣ ಹೋಗದಯ್ಯ ನಿಮ್ಮ ಸಾಗರದೊಳು ವಿಭಾಗಿಸಲು
ಕಾಯಕ್ಕೆ ಹತ್ತಿದ ಕಪಟವ ಬಿಡದಯ್ಯ, ಬಸವಣ್ಣ

ತಾತ್ಪರ್ಯ : ತನ್ನ ನಿಜರೂಪವನ್ನೇ ತಾನರಿಯದ ಮನುಷ್ಯರು ದೇವರನ್ನು ಕಂಡೆವೆಂದು ಹೇಳುವುದು ಆತ್ಮವಂಚನೆಯ ಮಾತಾದೀತು. ಸೂರ್ಯ ಚಂದ್ರರಂತಹ ಪ್ರಕೃತಿ ಕಾಯಗಳಿಗೆ ಗ್ರಹಣಗಳು ಎಷ್ಟು ಸಹಜವೋ ಪಂಚಭೂತಗಳಿಂದ ನಿರ್ಮಿತವಾದ ಈ ದೇಹಕ್ಕೆ ಗುಣದೋಷಗಳು ಅಷ್ಟೇ ಸಹಜವಾದಂತವು. ಸಂಸಾರ ಸಾಗರದೊಳು ಬಿದ್ದು ದೇಹಭಾವಗಳಿಗೆ ಒಳಗಾಗಿ ತನ್ನ ವಿವೇಚನೆಯನ್ನು ಕಳೆದುಕೊಳ್ಳುವ ಮನುಷ್ಯರು ಅಪ್ರಮಾಣಿಕರಾಗಿ ತಮ್ಮ ಸ್ವಾರ್ಥ ಸಾಧನೆಗಾಗಿ ದೇವರ ಮೇಲೆ ಪ್ರಮಾಣ ಮಾಡುತ್ತಾರೆ. ಇಂತಹ ಸಾಮಾನ್ಯರ ಅವಿವೇಕವನ್ನು ಮೌನೇಶ್ವರರು ವಿಡಂಬಿಸಿದ್ದಾರೆ.

೫೫೪

ಸಿಡಿಗಟ್ಟಿದ ದನದಂತೆ ಅಡವಿಯಡವಿ ತಿರುಗುವರು
ಕಂಡಕಂಡವರ ಕಾಲ ಹಿಡಿವರು
ಕೊಡುವವನ ಕಾಲಿಲೊದೆಯುವರು. ಒದೆದಂಥಾ
ಪಾಪಿಗೆ ಕತ್ತೆಯನೇರಿಸಿ ಕುಳುಹುವರು, ಬಸವಣ್ಣ

ತಾತ್ಪರ್ಯ : ಬಡಿದಟ್ಟಿದ ದನದಂತೆ ಅಡವಿ ಅಡವಿ ತಿರುಗುವರು, ಕಂಡ ಕಂಡವರ ಕಾಲು ಹಿಡಿವರು, ಕೊಡುವವನ ಕಾಲಿಂದ ಒದೆಯುವರು. ಒದೆದವನನ್ನೇ ಕತ್ತೆಯ ಮೇಲೆ ಕೂಡ್ರಿಸಿ ಕಳಿಸುವರು. ಮಾನ ಅಭಿಮಾನಬಿಟ್ಟು ಬದುಕುವ ಬದುಕು ಹೀನ ವಾದದ್ದು ಅನ್ನುವ ತಿಳಿವು ವಚನದ್ದು.

೫೫೫

ಇಂದಿನದು ನಾಳಿಲ್ಲ ಹಿಂದಿನದು ಮುಂದಿಲ್ಲ
ತಂದದನು ತನ್ನ ಸಂಗಾತ ಒಯ್ಯುವ
ಸ್ವತಂತ್ರ ತನಗಿಲ್ಲ, ಬಸವಣ್ಣ

ತಾತ್ಪರ್ಯ : ಬದುಕಿನುದ್ದಕ್ಕೂ ತಾನು ತನ್ನದು ಎಂದು ಬಡಿದಾಡುವ ಮನುಷ್ಯ ಸತ್ತಾಗ ಏನನ್ನೂ ಒಯ್ಯುವುದಿಲ್ಲ. ಬದುಕು ಸ್ಥಿರವಾದುದಲ್ಲ. ಇಂದಿನದು ನಾಳೆಗಿಲ್ಲ ಹಿಂದಿನದು ಮುಂದಿಲ್ಲ. ಅದನ್ನು ಮೀರಿ ತಾನು ತಂದಿರುವೆನೆಂಬುದನ್ನು, ಗಳಿಸಿರುವೆ ನೆಂಬುದನ್ನು ತನ್ನ ಸಂಗಡ ಒಯ್ಯುವ ಸ್ವಾತಂತ್ರವೂ ಇಲ್ಲದ ಪರಕೀಯತೆ ಮನುಷ್ಯನದು. ಅಮೂರ್ತ ಮತ್ತು ಅರ್ಥ ಕಳೆದುಕೊಂಡ ಅತಂತ್ರತೆಯ ನಡುವೆಯೇ ಮನುಷ್ಯ ತನ್ನ ಜೀವನದೃಷ್ಟಿಯನ್ನು ನಿರ್ಮಿಸಿಕೊಳ್ಳಬೇಕು.

೫೫೬

ಅಳಿದರೆ ಹೋಗುವುದಲ್ಲ ಕಳೆದರೆ ಹುಡುಕುವುದಲ್ಲ
ಹಳೆದಾದ ದೇಹ ಯೌವನ ಮಾಡುವವರು
ಇಳೆಯೊಳಗಿಲ್ಲ, ಬಸವಣ್ಣ

ತಾತ್ಪರ್ಯ : ಹೊತ್ತು ಸರಿದರೆ ಮತ್ತೆ ಬರದು ಎನ್ನುವಂತೆ ದೇಹ ಅಥವಾ ಜೀವನ ಎನ್ನುವುದು ಜಾರಿಹೋದ ಮೇಲೆ ಮರಳಿ ಬರುವುದಿಲ್ಲ, ಹುಡುಕಿದರೂ ಸಿಗುವುದಿಲ್ಲ. ಅದನ್ನು ತಯಾರು ಮಾಡಲು ಬರುವುದಿಲ್ಲ. ಇರುವಾಗಲೇ ಸದುಪಯೋಗ ಮಾಡಿಕೊಳ್ಳಬೇಕು. ಹಳೆಯದಾದ ವಸ್ತ್ರವನ್ನು ನವೀಕರಿಸಿ ಹೊಸದು ಮಾಡುವಂತೆ ದೇಹಾದಿಗಳನ್ನು ಹೊಸದು ಮಾಡುವ ಅವಕಾಶ ಪ್ರಪಂಚದಲ್ಲಿ ಇಲ್ಲ. ಪದೇ ಪದೇ ಮನುಷ್ಯನಾಗಿಯೇ ಹುಟ್ಟಿ ಬರುವ ಅವಕಾಶ ನರಜನ್ಮಕ್ಕಿಲ್ಲ. ನರಜನ್ಮದಲ್ಲಿದ್ದಾಗಲೇ ಇಹ ಪರಗಳನ್ನು ಅರಿಯಬೇಕು.

೫೫೭

ಮೂರು ಹೊತ್ತಿನ ಊಟ ಆರು ಹೊತ್ತಿನ ಕೂಟ
ಸೀರೆ ಕುಪ್ಪಸ ಘನವಾಗಿ ನಡೆಸಿದರೆ
ರಾಯರಾಯರಿಗೆ ಅಳವಲ್ಲ ಹೆಣ್ಣೆಂಬ
ಮಾರಿಯನು ಆಳುವವನ ಹೆಸರೇನು, ಬಸವಣ್ಣ

ತಾತ್ಪರ್ಯ : ರಾಯ ರಾಯರೊಂದಿಗೆ ಯುದ್ಧ ಮಾಡಿ ಗೆಲ್ಲಬಹುದು. ಆದರೆ ಹೆಣ್ಣನ್ನು ಗೆಲ್ಲಲಾಗದೆನ್ನುವ ಭಾವ ಇಲ್ಲಿನದು. ಮೂರು ಹೊತ್ತಿನ ಊಟದೊಂದಿಗೆ ಆರು ಹೊತ್ತಿನ ಸ್ತ್ರೀ ಸಂಯೋಗ ಮಾಡುವುದಲ್ಲದೆ ಸಂಯೋಗಿಸಿದವಳಿಗೆ ಸೀರೆ ಕುಪ್ಪಸ ವಸ್ತ್ರ ವಡವಿ ಘನವಾಗಿ ಕೊಟ್ಟರೂ ಅವಳು ಸಾಕೆನ್ನಳು. ರಾಯರಿಗೆ ಕಪ್ಪ ಕಾಣಿಕೆ ಕೊಟ್ಟು ತೃಪ್ತಿಪಡಿಸಬಹುದು. ಆದರೆ ಹೆಣ್ಣೆಂಬ ಮಾರಿಯನು ತೃಪ್ತಿಪಡಿಸುವುದು ಅಸಾಧ್ಯ. ಮೂರು ಆರು ಎನ್ನುವುದು ಮಲತ್ರಯಗಳು ಮತ್ತು ಅರಿಷಡ್ವರ್ಗಗಳನ್ನು ಸೂಚಿಸುವುದು ಅದರ ದಾರ್ಶನಿಕ ಅರ್ಥವೂ ಆಗಿದೆ. ಅವುಗಳನ್ನು ನಿಯಂತ್ರಿಸದೆ ಮನುಷ್ಯನಿಗೆ ಸಾಧನೆ ಸಾಧ್ಯವಿಲ್ಲ ಎನ್ನುವ ನಿಲುವು ಇಲ್ಲಿಯದು.

೫೫೮

ಸದರಿಗೆ ಸಂತೋಷವಾಗಬೇಕು
ನೆದರಿರಬೇಕು ಉತ್ತಮರ ನೋಯಿಸಲಾಗದು
ಸಾಹೇಬರ ಸಭೆಯವರು ತಿಳಿದಿರ್ರಿ
ಸತ್ಯಕ್ಕೆ ಸವಾಯಿರಾತ್ರಿ ಸಲ್ಲದು
ದೋಷ ತಪ್ಪಿದರೆ ಆಯುಷ್ಯಕ್ಕೆ ವಂದೆ ಮಾತು, ಬಸವಣ್ಣ

ತಾತ್ಪರ್ಯ : ಅನ್ನ ಕೊಡುವ ದೊರೆಯ ಅಥವಾ ಒಡೆಯನನ್ನು ನಿಂದಿಸಬಾರದು. ಅವರಿಗೆ ಸಂತೋಷವಾಗುವ ಹಾಗೆ ನಡೆದುಕೊಳ್ಳಬೇಕು. ಸಾಹೇಬರ ನೆದರು

ಅಂದರೆ ಕೃಪೆ ಪ್ರಜೆಗಳ ಮೇಲಿರಬೇಕು. ಇದನ್ನು ಸಾಹೇಬರು ಮತ್ತು ಸಾಹೇಬರ ಸಭೆಯವರು ತಿಳಿದಿರಬೇಕು. ಪ್ರಜೆಗಳನ್ನು ಮಕ್ಕಳಂತೆ ನೋಡುವಂತೆ ಸಾಹೇಬರ ಸಭೆಯ ಮಂದಿ(ಅಧಿಕಾರಿಗಳು) ವ್ಯವಸ್ಥೆ ಮಾಡಬೇಕು. ಸತ್ಯವನ್ನು ಮಾತಾಡಲು ಸರಿ ರಾತ್ರಿ ಸಲ್ಲದು. ಪ್ರಜೆಗಳಿಗೆ ಒಳ್ಳೆಯದನ್ನು ಮಾಡಿ ದೋಷಗಳನ್ನು ಕಳೆದುಕೊಳ್ಳ ಬೇಕು, ಅದರಿಂದ ಆಯುಷ್ಯ ವೃದ್ಧಿಸಲಿದೆ.

೫೫೯

ಉಸುರು ನಿಲ್ಲಿಸುವರಿಲ್ಲ ಬಿಸಿಲು ನೆರಳು ಹಿಡಿಯುವರಿಲ್ಲ
ನೊಸಲ ನೇತ್ರುಳ್ಳ ಈಶ್ವರನ ಕಾಣುವಂಥ
ಕುಶಲ ಕೋವಿದರಿಲ್ಲ, ಬಸವಣ್ಣ

ತಾತ್ಪರ್ಯ : ಯೋಗದ ವಿಚಾರವನ್ನು ವಚನ ಸೂಚಿಸುವಂತಿದೆ. ಉಸಿರು ನಿಲ್ಲಿಸುವು ದೆಂದರೆ ಯೋಗ ವಿದ್ಯೆಯಿಂದ ಉಸಿರಿನ ಮೇಲೆ ಹತೋಟಿ ಸಾಧಿಸುವುದು. ಅಂತಹ ಹಠಯೋಗಿಗಳನ್ನು ಈಗ ಕಾಣಲಾಗುವುದಿಲ್ಲ. ಬಿಸಿಲು ನೆರಳು ಹಿಡಿಯುವ ವರಿಲ್ಲ, ಹಣೆಗಣ್ಣುಳ್ಳ ಈಶ್ವರನ ಕಾಣುವಂತಹ ಮಹಾನ್ ಸಾಧಕರಿಲ್ಲ. ಜ್ಞಾನಿಗಳಾಗ ಬೇಕು, ಯೋಗಿಗಳಾಗಿ ಸಮಾಜಕ್ಕೆ ಮಾರ್ಗದರ್ಶನ ಮಾಡಬೇಕೆನ್ನುವವರಿಗಿಂತ, ಸಂಪತ್ತು ಮಾಡಿಕೊಂಡು ಸುಖಭೋಗದಲ್ಲಿರುವ ಡೋಂಗಿ ಮಂದಿಯೇ ಜಾಸ್ತಿ ಆಗಿದೆ ಲೋಕದಲಿ.

೫೬೦

ಹೆಣ್ಣು ಗೆದ್ದವರಿಲ್ಲ ಮಣ್ಣು ಮೆದ್ದವರಿಲ್ಲ
ಕಣ್ಣು ಮೂರುಳ್ಳವರಿಲ್ಲ ಮೃಷ್ಟಾನ್ನ ಭೋಜನ
ಉಣ್ಣುವವರಿಲ್ಲ, ಬಸವಣ್ಣ

ತಾತ್ಪರ್ಯ : ಹೆಣ್ಣು ಮಣ್ಣು ಮನುಷ್ಯನ ಏಳ್ಗೆ ಮತ್ತು ನಾಶಕ್ಕೂ ಕಾರಣವಾಗಿವೆ. ಇವುಗಳ ಬಗೆಗಿನ ಅತಿಯಾದ ವ್ಯಾಮೋಹವು ನಮ್ಮ ಮೂರನೇ ಕಣ್ಣನ್ನು ಅಂದರೆ ಜ್ಞಾನ ಹಾಗೂ ವಿವೇಕದ ಕಣ್ಣನ್ನು ಮುಚ್ಚಿಬಿಡುತ್ತದೆ. ಇಂತಹ ಸಾಂಸಾರಿಕ ಜಂಜಡ ದೊಳಗೆ ವಿವೇಕಯುತವಾಗಿ ವರ್ತಿಸುವ ಮನುಷ್ಯ, ಸಾಧಿಸಬೇಕೆನ್ನುವ ಹಂಬಲವುಳ್ಳವ ಮಾತ್ರ ಯಶಸ್ವಿಯಾಗುತ್ತಾನೆ. ಅಂತವರ ಸಂಖ್ಯೆ ಬಹಳ ವಿರಳವಾಗಿದೆ.

೫೬೧

ಯೋಗಿ ಜೋಗಿ ಶ್ರವಣ ಸನ್ಯಾಸಿ ಪಶುಪತಿ
ಕಾಳಾಮುಖ ಆರು ದರ್ಶನವು, ಬಸವಣ್ಣ

ತಾತ್ಪರ್ಯ : ವೈದಿಕ ಷಡುದರುಶನಗಳ ಬದಲಾಗಿ ಮೌನೇಶ್ವರರು ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಪಶುಪತಿ, ಕಾಳಾಮುಖ ಎನ್ನುವ ಆರು ದರುಶನಗಳ ಬಗ್ಗೆ ಹೇಳುತ್ತಾರೆ. ಇದೊಂದು ವಿನೂತನ ಹಾಗೂ ಪರ್ಯಾಯ ಚಿಂತನೆಯ ಕ್ರಮವಾಗಿದೆ.

೭

ಚತುರೋಕ್ತಿ

ಶಿಟ್ಟಿ

ಕೈಗೆ ಬರುವ ಕಾಯಲ್ಲ ಹೂವಲ್ಲ
ರಾಯರಾಯರಿಗೆ ಮಥನವನಿಕ್ಕುವ
ಮಾಯವಾಸನದ ಒಡಿವಿಯಯ್ಯ, ಇದು ನಮ್ಮ
ದೇವಭಕ್ತರಿಗೆ ಸಲ್ಲುವುದೆ ಲೋಕದ
ನಾಯಿಗಳಿಗಲ್ಲದೆ ನಮಗ್ಯಾಕೆ, ಬಸವಣ್ಣ

ತಾತ್ಪರ್ಯ: ದೇಹವೆಂಬುದು ಮಾಯ ವಾಸನೆಯೆಂಬ ಬಯಕೆಗಳ ಗೂಡು. ಅದು ಕೈಗೆ ಬರುವ ಹೂ ಕಾಯಿಯಲ್ಲ. ರಾಯರಾಯರ ಮಧ್ಯ ಹಗೆಯನಿಕ್ಕುವ ಇಂತಹ ದೇಹ ಮತ್ತು ಬದುಕು ನಾಯಿಯಂತೆ ನೀಚವಾಗಿ ಬದುಕುವವರಿಗೆ ಮಾತ್ರ ಸಲ್ಲುತ್ತದೆ ಹೊರತು ದೇವಮಾನವರಿಗಲ್ಲ ಜ್ಞಾನಿಗಳಿಗಲ್ಲ.

ಶಿಟ್ಟಿ

ಕಚ್ಚಿದರೆ ಹುಳಿಯಿಲ್ಲ, ನೆಕ್ಕಿದರೆ ಸವಿಯಿಲ್ಲ
ಬೆಚ್ಚನೆ ತೋರಿ ಬಯಲಾಗಿ ಹೋಗುವ ಒಡವಿಯ
ನೆಚ್ಚಬಹುದೆ ಶರಣರು, ಲೋಕದ
ಹುಚ್ಚರಿಗಲ್ಲದೆ ನಮಗೇಕೆ, ಬಸವಣ್ಣ

ತಾತ್ಪರ್ಯ: ದೇಹಗುಣಗಳು ನಶ್ವರವಾದಂಥವು. ಅದರಲ್ಲಿ ಕಾಮವೂ ಒಂದು. ಬೆಚ್ಚನೆ ತೋರಿ ಬಯಲಾಗಿ ಹೋಗುವ ಕಾಮ ಎಂಬ ಒಡವಿಗೆ ಕಚ್ಚಿದರೆ ಹುಳಿಯಾಗಲೀ ನೆಕ್ಕಿದರೆ ಸವಿಯನ್ನಾಗಲೀ ಕೊಡುವ ಗುಣವಿಲ್ಲ. ಅಂತಹ ಕ್ಷಣಿಕ

ಸುಖದ ಈ ದೇಹವನ್ನು ಶರಣರು ನೆಚ್ಚಿಕೊಂಡಿರುವುದಿಲ್ಲ. ಅದೇನಿದ್ದರೂ ದೇಹ ಗುಣಗಳನ್ನು ಅತಿಯಾಗಿ ನೆಚ್ಚಿರುವ ಹುಚ್ಚರ ಕೆಲಸವೇ ಹೊರತು ಜ್ಞಾನಿಗಳ ಸ್ವಭಾವವಲ್ಲ.

೫೬೪

ಹೊಲಸು ದೇಹದಿ ಹೊಕ್ಕು, ನಿಲಿಸಲಾರೆನು ದೃಢವ
ಕಲಿಸಿತೇಳಯ್ಯ ಜಾರತ್ವ, ಜಾರಿಯರ ಯಮ
ಕೊಲ್ಲಿಸಿದನಯ್ಯ, ಬಸವಣ್ಣ.

ತಾತ್ಪರ್ಯ : ಮಾಯಾ ಮೋಹ ಮದಗಳಿಂದ ತುಂಬಿದ ಈ ದೇಹ ಸ್ಥಿರವಾದುದಲ್ಲ. ದೇಹದ ವಾಂಚಲ್ಯಗಳು ಹಲವು ರೀತಿಯ ವಿಷಮ ಬುದ್ಧಿಯನ್ನು ಪ್ರಚೋದಿಸುತ್ತವೆ. ಇಂತಹ ಮಾಯಾ ಮೋಹಗಳ ವಶದಲ್ಲಿ ಸಿಲುಕಿ ಅನರ್ಥ ಸತ್ತು ಹೋಗುವ ಜೀವವು ಸಾಧನೆಯನ್ನು ಮರೆಯುತ್ತದೆ.

೫೬೫

ಪಾಪ ಪುಣ್ಯಗಳೆರಡು, ರೂಪ ಯೌವನಗಳೆರಡು
ಶಾಪ ಉಶ್ಯಾಪ ತಾಪತ್ರಯ ಕಲಿಯುಗದ
ವ್ಯಾಪಾರ ನೋಡಯ್ಯ, ಬಸವಣ್ಣ

ತಾತ್ಪರ್ಯ : ಮೌನಯ್ಯನ ಮಾತು ಚಾಣದ ಹದನದಂತೆ ಹರಿತ. ಜಗತ್ತಿನ ಆಗು ಹೋಗುಗಳ ಕುರಿತು ಕಾಳಜಿ ಪೂರ್ವಕ ಎಚ್ಚರ ನೀಡಿದ್ದು ಈ ವಚನದ ಮುಖ್ಯ ವಿಚಾರ. ಕಲಿಯುಗದಲ್ಲಿ ಅತಿಯಾದ ಉಪಭೋಗಿ ಪ್ರವೃತ್ತಿ ಹಾಗೂ ಅವಿವೇಕಗಳಿಂದ ಮನುಷ್ಯ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ರೂಪ ಯೌವನದಿಂದಾಗಿ ಭೂಮಿ ಹಾಗೂ ಹೆಣ್ಣಿನ ಮೇಲೆ ನಡೆಯುವ ಆಕ್ರಮಣಗಳು, ರೋಗರುಜಿನಗಳು ಅತಿವೃಷ್ಟಿ ಅನಾವೃಷ್ಟಿಗಳಿಂದಾಗಿ ಮನುಷ್ಯ ಕುಲವೇ ಅಲ್ಲೋಲಕಲ್ಲೋಲವಾಗುತ್ತ ದೆಂಬುದು ವಚನದ ಭಾವ.

೫೬೬

ಸಸಿಗೆ ಕಸ ಮೂಲ ಸೊಸಿಗೆ ಅತ್ತಿಯು ಮೂಲ
ರಸವು ಮೂಲವಯ್ಯ ಕಬ್ಬಿಗೆ, ಚೋರಂಗೆ
ಶಶಿಪ್ರಭೆಯು ಮೂಲವಯ್ಯ, ಬಸವಣ್ಣ

ತಾತ್ಪರ್ಯ : ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಘಟನೆಗಳಿಗೆ ಕಾರ್ಯ ಕಾರಣ ಸಂಬಂಧಗಳು ಇರುವಂತೆ ಪ್ರೇರಕ ಮತ್ತು ಮಾರಕವಾದ ಸಂಗತಿಗಳೂ ಇರುತ್ತವೆ.

ನೆಟ್ಟ ಸಸಿಗೆ ಕಸ ಗೊಬ್ಬರವೂ ಆದಂತೆ ಅದರ ಬೆಳವಣಿಗೆಯನ್ನು ಕುಂಠಿತಗೊಳಿಸಲೂ ಬಹುದು. ಹಾಗೆ ಸೊಸೆಗೆ ಅತ್ತೆಯಾದವಳು ತಾಯಿಯೂ ಆಗಬಹುದು, ವೈರಿಯೂ ಆಗಬಹುದು. ಕಬ್ಬಿಗೆ ರಸವಿದ್ದರೆ ಮಾತ್ರ ಅದಕ್ಕೆ ಬೆಲೆ ಬರುವುದು. ಚಂದ್ರನ ಬೆಳದಿಂಗಳು ಪ್ರೇಮಿಗಳಿಗೆ ಕವಿಗಳಿಗೆ ಆಹ್ಲಾದವನ್ನು ನೀಡಿದಂತೆ ಕನ್ನ ಹಾಕುವ ಕಳ್ಳನಿಗೆ ಅನುಕೂಲವೂ ಆಗಬಹುದು. ಹಾಗೆಯೇ ಅಪಾಯವನ್ನು ಒಡ್ಡಬಹುದು. ಪ್ರಕೃತಿಯಲ್ಲಿನ ಚೇತನ ಅಚೇತನ ರೂಪಿಯಾದ ಪ್ರತಿಯೊಂದು ವಸ್ತುವಿನಲ್ಲಿ ಇಂತಹ ಪೂರಕ ಹಾಗೂ ಮಾರಕ ಸಂಗತಿಗಳು ಇದ್ದೇ ಇರುತ್ತವೆ. ಇದ್ದರೂ ಒಂದನ್ನೊಂದು ಪೋಷಿಸಿ ಪ್ರಭಾವಿಸಿ ಮೀರಿ ಬೆಳೆಯುವುದೇ ಪ್ರಕೃತಿಯ ನಿತ್ಯ ಸತ್ಯವಾಗಿದೆ. ಪ್ರಕೃತಿದತ್ತ ದೇಹವನ್ನು ಪಡೆದ ಮನುಷ್ಯನೂ ಇಂತಹ ದ್ವಂದ್ವಗಳನ್ನು ಮೀರಿ ಬೆಳೆಯಬೇಕು ಎಂಬುದು ವಚನದ ಭಾವ.

೫೬೭

ದೆಸೆಯು ಮುಂದೆ ನಡೆಸುತಿದೆ
ಹುಸಿಯು ಮುಂದೆ ಕೆಡಿಸುತಿದೆ
ಬಿಸಿಯಿಂದ ಬೆಣ್ಣೆ ಘೃತವಾಗಿ, ಭೋಜನಕ್ಕೆ
ಹಸನಾಗುತ್ತಿದೆ, ಬಸವಣ್ಣ

ತಾತ್ಪರ್ಯ : ದೇಹ ಎನ್ನುವುದು ಹಸಿ ಬೆಣ್ಣೆಯಿದ್ದಂತೆ, ಬಿಸಿಯಿಂದ ಬೆಣ್ಣೆ ತುಪ್ಪವಾಗುವಂತೆ, ಸಾಧನೆಯಿಂದ ಆತ್ಮಜ್ಞಾನದಿಂದ ಈ ದೇಹ ಪರಮಜ್ಞಾನಿಯಾಗಬೇಕು ಹಾಗೂ ಪರಿಪೂರ್ಣವಾಗಬೇಕು. ಶ್ರಮವಿಲ್ಲದೆ ಅದೃಷ್ಟ ಬಲದಿಂದ ಬರುವ ಯಾವ ಸುಖವೂ ಪ್ರಮಾಣವಲ್ಲ. ಅಂತಹ ಹುಸಿ ಸುಖ ಮನುಷ್ಯನನ್ನು ಭೋಗಿ ಹಾಗೂ ರೋಗಿಯನ್ನಾಗಿಸುತ್ತದೆ. ಕಾರಣ ಸತ್ಯ ಶರಣರ ಸಂಗದಿಂದ ಬದುಕನ್ನು ಹಸನಾಗಿಸಿಕೊಳ್ಳಬೇಕು, ಉಪಯುಕ್ತವಾಗಿಸಿಕೊಳ್ಳಬೇಕು ಎನ್ನುವುದು ಇಲ್ಲಿನ ಭಾವ.

೫೬೮

ಆನೆಗೆ ಅಂಕುಶವು, ಜ್ಞಾನಿಗೆ ಶಾಸ್ತ್ರವು
ಶ್ವಾನ ಗೃಹಗಳನು ಪೊಗುವಾಗ ಕಷ್ಟದ
ಧ್ಯಾನ ಅದುಕುಂಟೆ, ಬಸವಣ್ಣ

ತಾತ್ಪರ್ಯ : ಪ್ರಪಂಚದ ಎಂತಹ ಶಕ್ತಿಯುತ ಸಂಗತಿಗಳಿಗೂ ತನ್ನದೇ ಆದಂತಹ ಸ್ವ-ಸಾಮರ್ಥ್ಯವಿದ್ದಂತೆ ಅದನ್ನು ನಿಯಂತ್ರಿಸುವ ಅಥವಾ ಪೋಷಿಸುವ ಸಂಗತಿಗಳಿದ್ದೇ ಇರುತ್ತವೆ. ಆನೆಗೆ ಅಂಕುಶವಿದ್ದಂತೆ ಜ್ಞಾನಿಯಾದವನಿಗೆ ಶಾಸ್ತ್ರಜ್ಞಾನ ತಿಳುವಳಿಕೆ ಅಗತ್ಯವಾದದ್ದು. ಇಲ್ಲವಾದರೆ ಶ್ವಾನದಂತೆ ಮಂದಮತಿಯಾಗಿ ಅಜ್ಞಾನಿಯಾಗಿ ಮನುಷ್ಯ ಸಾಯಬೇಕಾಗುತ್ತದೆ.

೫೬೯

ಕಂಬವೊಂದರ ಮೇಲೆ ರಂಭೆ ನಾಟ್ಯವನಾಡಿ
ಅಂಬರದ ಗಣಿಯು ನಾಭಿಯಲ್ಲಿಟ್ಟು ತಿರುವಿದರೆ
ಕುಂಭ ಜನಿಸುವದು, ಬಸವಣ್ಣ

ತಾತ್ಪರ್ಯ : ಕುಂಬಾರನು ಕುಂಬ(ಕೊಡ) ಮಾಡುವ ಕೌಶಲವನ್ನು ಹೇಳುವ ಈ ವಚನ ದೇಹ ರಚನೆಯ ವಿಧಾನವನ್ನು ಹೇಳುವಂತಿದೆ. ಕಂಬವೆನ್ನುವುದು ಸೃಷ್ಟಿಗೆ ಆಧಾರಭೂತವಾದದ್ದು. ಸೃಷ್ಟಿ ಕ್ರಿಯೆಯ ವಿಕಸನವನ್ನು ಹೇಳುವಂತದ್ದು. ಅದನ್ನು ಸರಳವಾಗಿ ದೇಹಗುಣವೆಂದೂ ಗುರುತಿಸಬಹುದು. ಬಯಲು ಆಲಯವಾಗುವ ಚಮತ್ಕಾರವನ್ನಿಲ್ಲಿ ಕಾಣಬಹುದು. ಕಂಭ ರಂಭೆ ಅಂಬರ ನಾಭಿ ಕುಂಭ ಇವು ಪಂಚಭೂತಗಳ ಪ್ರತೀಕಗಳು. ಸೃಷ್ಟಿಕ್ರಿಯೆಯ ಸಶಕ್ತ ಗುರುತುಗಳು. ಇವೆಲ್ಲವೂ ಸೃಷ್ಟಿ ಮತ್ತು ವಿಕಾಸದ ಕ್ರಿಯಾಶೀಲ ಸಂಗತಿಗಳಾಗಿ ಇಲ್ಲಿ ಬಂದಿರುವುದು ಗಮನಾರ್ಹ.

೫೭೦

ಅದಕ್ಕದೇ ಸಾಕ್ಷಿ ಕದಕ್ಕೆ ನೂಕುವುದೆ ಸಾಕ್ಷಿ
ಬದುಕು ಬೈಲಾಗಿ ಹೋಗುವುದಕ್ಕೆ ದುಷ್ಕರ್ಮ
ಅದಕ್ಕೆ ಬಂತಯ್ಯ, ಬಸವಣ್ಣ

ತಾತ್ಪರ್ಯ : ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಂದು ವಸ್ತುವಿಗೂ ಅದರದೆ ಆದ ಸ್ವಭಾವ ಹಾಗೂ ಮಹತ್ವವಿರುತ್ತದೆ. ಯಾವುದೂ ಶ್ರೇಷ್ಠವೂ ಅಲ್ಲ ಕನಿಷ್ಠವೂ ಅಲ್ಲ. ಮಹತ್ತಿಗೆ ಮಹತ್ತೇ ಸಾಟಿ ಹಾಗೂ ಸತ್ಯವಾದಂತೆ, ಕದಕ್ಕೆ ನೂಕುವುದೇ ಸತ್ಯ ಹಾಗೂ ನಿಜಸ್ವಭಾವವಾಗಿರುತ್ತದೆ. ಇಂತಹ ತನ್ನದೇ ಅಸ್ತಿತ್ವ ಸ್ವಭಾವ ಹಾಗೂ ಮಹತ್ವವಿರುವ ಬದುಕನ್ನು ಸತ್ಕರ್ಮಗಳಿಂದ ರೂಪಿಸಿಕೊಳ್ಳಬೇಕೆ ಹೊರತು ದುಷ್ಕರ್ಮಗಳಿಂದ ಹಾಳುಮಾಡಿಕೊಳ್ಳಬಾರದು ಎನ್ನುವುದು ಇಲ್ಲಿನ ತಾತ್ಪರ್ಯ.

೫೭೧

ಅಂಗಿ ಅಂಗಕೆ ಲೇಸು ಭಂಗಿ ಕಾಯಕ ಲೇಸು
ಅಂಗಯ್ಯ ಮೀರಿ ಭಂಗಿಯ ತಿಂದರೆ, ಪುಕಳಿ
ವ್ಯಂಗಿ ಹೋದಂತೆ, ಬಸವಣ್ಣ

ತಾತ್ಪರ್ಯ : ಭೂಮಿಯ ಮೇಲಿನ ಯಾವುದೇ ಕೆಲಸ ಮತ್ತು ವಸ್ತುವಿಗೆ ಅದರದೇ ಆದ ರೂಪ ಪ್ರಮಾಣ ಹಾಗೂ ಮಿತಿಗಳಿರುತ್ತವೆ. ಅದು ಆ ನಿಯತಿಯನ್ನು ಮೀರಿದಾಗ ನಾಶಕ್ಕೆ ದಾರಿಯಾಗುತ್ತದೆನ್ನುವ ಭಾವ ವಚನದ್ದು. ಅಂಗಿ ಅಂಗವನ್ನು

ಮುಚ್ಚಿಕೊಳ್ಳಲು ಹೇಗೆ ಅಗತ್ಯವೋ ಭಂಗಿ ಸಾಧು ಸಂತರಂಥ ಭೈರಾಗಿಗಳ ಮಿತವ್ಯಯ ಸೇವನೆಗೆ ಅಗತ್ಯ. ಅದು ಮೀರಿದರೆ ಅಥವಾ ಅತಿಯಾದರೆ ಅನಾರೋಗ್ಯಕ್ಕೆ ಕಾರಣವಾಗುತ್ತದೆನ್ನುವ ವ್ಯಂಗ್ಯ ಇಲ್ಲಿನದು. ಜೊತೆಗೆ ಕಾಯಕದ ಗೌರವವನ್ನು ವಚನ ಎತ್ತಿ ಹಿಡಿಯುತ್ತದೆ.

೫೭೨

ಮಂಜು ಮಳೆಯಲ್ಲ ಹುಂಜ ಮಯೂರವಲ್ಲ
ಪಂಜು ದಿನಕರನ ಸರಿಯಲ್ಲ, ಮದಸೊಕ್ಕಿದ
ಕುಂಜರಕೆ ಆವುದು ಅಣಿಯಿಲ್ಲ, ಬಸವಣ್ಣ

ತಾತ್ಪರ್ಯ : ಭೂಮಿಯ ಮೇಲೆ ಬಿದ್ದ ಇಬ್ಬನಿ ಮಳೆಯಂತೆ ಭ್ರಮೆ ತರಿಸಿದರೂ ಅದು ನಿಜವಾದ ಮಳೆಯಲ್ಲ, ಹುಂಜವು ನವಿಲಿನಂತೆ ತುರಾಯಿ ಹೊಂದಿದರೂ ಅದು ನಿಜವಾದ ನವಿಲು ಆಗಲಾರದು, ಪಂಜು ಬೆಳಕು ನೀಡಿದರೂ ಅದು ಜಗತ್ತಿಗೆ ಬೆಳಕು ನೀಡುವ ಸೂರ್ಯನ ಸಮಕ್ಕೆ ಬಾರದು. ಮದವೇರಿದ ಆನೆಯ ಶಕ್ತಿಯು ಹೇಗೆ ನಿಷ್ಪ್ರಯೋಜಕವೋ ಹಾಗೆ ಮದವೇರಿದ ಮನುಷ್ಯ ದೇವಮಾನವ ನೆಂದು ಕಪಟತನ ತೋರಿದರೂ ಆ ದೇವರ ಯೋಗ್ಯತೆಯನ್ನು ಪಡೆಯಲಾರ. ಸ್ವಯಂ ದೇವಮಾನವರು ಯಾವತ್ತೂ ದೇವರ ಮಟ್ಟಕ್ಕೆ ಏರಲಾರರು. ಸತ್ಯದ ಹಲವು ಭ್ರಮೆಗಳು ಕಣ್ಣಿಗೆ ಕಂಡರೂ ಅವು ಭ್ರಮಿತ ಸತ್ಯಗಳೇ ಹೊರತು ನಿಜ ಸತ್ಯಗಳಲ್ಲ.

೫೭೩

ಕಸಗಾಡ ಹೊಲ ಹೀನ ದೆಸೆಗೇಡಿ ಹೆಣ್ಣು ಹೀನ
ಕುಸುಬಿಯ ಕಾಳು ಉಡಿಯಕ್ಕಿಗೆ ಹೀನ
ವಸುಧಿಯೊಳಗೆ, ಬಸವಣ್ಣ

ತಾತ್ಪರ್ಯ : ವಿಪರೀತ ಕಸ ಮತ್ತು ಕೊಳೆಯಿಂದ ಕೂಡಿದ ಹೊಲ ಯಾವತ್ತು ಒಳ್ಳೆಯ ಫಲವನ್ನು ನೀಡಲಾರದು. ದಾರಿ ತಪ್ಪಿದ ಹೆಣ್ಣು ಯಾವತ್ತೂ ಸಚ್ಚಾರಿತ್ರ್ಯ ವಂತಳಾಗಿ ಬಾಳಲಾರಳು. ಅದೇ ರೀತಿ ಹೆಣ್ಣಿನ ಉಡಿಯಕ್ಕಿಗೆ ಫಲಭರಿತ ಧಾನ್ಯಗಳನ್ನು ಹಣ್ಣುಗಳನ್ನು ಹಾಕುವ ಬದಲಿಗೆ ಕುಸುಬಿ ಕಾಳನ್ನು ಹಾಕಿದರೆ ಅದು ಯೋಗ್ಯವೆನಿಸದು. ಹೊಲ ಹೆಣ್ಣು ಉಡಿಯಕ್ಕಿ ಇವು ಫಲವಂತಿಕೆ ಹಾಗೂ ಸಮೃದ್ಧಿಯ ರೂಪಕಗಳು. ಇವುಗಳ ವಿವೇಕಯುತ ಬಳಕೆ ಬಹಳ ಮುಖ್ಯವಾದುದು.

೫೭೪

ಗೊಂಬಿ ಬಲ್ಲುದೆ ಡೊಂಬಿಗನ ಗುರುತ
ಡಿಂಬ ಬಲ್ಲುದೆ ಪರಮಾನ್ನದ ಗುರುತ

ವೇಣು ಬಲ್ಲುದೆ ಜಾಣನ ಗುರುತ
ಪ್ರಾಣ ಬಲ್ಲುದೆ ಪರಮಾತ್ಮನ ಗುರುತ, ಬಸವಣ್ಣ

ತಾತ್ಪರ್ಯ : ಮನ ಬುದ್ಧಿ ಚಿತ್ತ ಅಹಂಕಾರ ಮತ್ತು ಪ್ರಾಣ ಇವು ಜಡವಾದರೆ ಆತ್ಮಾನುಭವ ದಕ್ಕಲಾರದು ಎನ್ನುವುದು ಇಲ್ಲಿನ ಭಾವ. ಡೊಂಬನ ಕೆಲಸ ಸೂತ್ರ ಹಿಡಿದು ಗೊಂಬಿಯನಾಡಿಸುವುದು. ಆದರೆ ಗೊಂಬಿ ನಿರ್ಜೀವವಾಗಿರುವ ಕಾರಣ ಆತನ ಗುರುತನರಿಯದು. ಹಾಗೆಯೇ ರುಂಡವಿಲ್ಲದ ದೇಹ ಪರಮಾನ್ನಗಳ ಗುರುತು ಹಾಗೂ ಸ್ವಾದವನರಿಯಲಾರದು. ಕೊಳಲು ನುಡಿಸಿದವನ ಸ್ವರಕ್ಕೆ ಧ್ವನಿಯಾಗುತ್ತದೆ ಹೊರತು ಅವನ ನಿಜವನರಿಯಲಾರದು. ಆದರೆ ಚೈತನ್ಯದಾಯಕವಾದ ಪ್ರಾಣವು ಪರಮಾತ್ಮನ ಗುರುತನರಿಯದೇ ಜಡವಾಗಿ ಹೋದರೆ ಅದಕ್ಕೆ ಆತ್ಮಾನುಭವ ದೊರೆಯಲಾರದು. ನಾವು ಮಾಡುವ ಕೆಲಸಗಳು ಅವು ಸ್ವಾನುಭವವನ್ನು ದಕ್ಕಿಸಿ ಕೊಡಬೇಕಾದರೆ ಮನುಷ್ಯ ಕ್ರಿಯಾಶೀಲನಾಗಿರುವುದು ಮುಖ್ಯ.

೫೭೫

ಜಾಣರಿಗೆ ಜಾತ್ರೆಯು ಕೋಣರಿಗೆ ಕುಸ್ತಿ ಕಲಹ
ಓಣಿಯ ಶೃಂಗಾರರಿಗೆ ಒನಪು, ರಣದೊಳು ಖಡ್ಗ
ಕಾಣಲಂಜುವರು, ಬಸವಣ್ಣ

ತಾತ್ಪರ್ಯ : ಮಾತು ಬಲ್ಲಂಥ ಅಥವಾ ತಿಳಿದಂತಹ ಜ್ಞಾನಿಗೆ ಪ್ರಪಂಚ ಒಂದು ಸಮಸ್ಯೆ ಅಲ್ಲ. ಆದರೆ ಅಜ್ಞಾನ ಹಾಗೂ ಅರೆಜ್ಞಾನ ತುಂಬಿದ ಮನುಷ್ಯರು ತಾನಿದ್ದ ಜಾಗದಲ್ಲಿ ಸಮಸ್ಯೆಗಳನ್ನು ಹುಟ್ಟಿಸುತ್ತಾರೆ. ಕಲಹಪ್ರಿಯರಾದ ಅಂತಹವರು ಯುಕ್ತಿಗಿಂತ ಪಾಶವೀ ಶಕ್ತಿಗೆ ಮರುಳಾಗಿರುತ್ತಾರೆ. ಹಾಗೆ ಓಣಿಯ ರಸಿಕರು ಒನಪು ವೈಯ್ಯಾರ ಶೃಂಗಾರದಲ್ಲಿಯೇ ಮೈಮರೆತು ಬಿಡುತ್ತಾರೆ. ಇಂತಹವರನ್ನು ನಂಬಿ ಯುದ್ಧರಂಗಕ್ಕೆ ಅಥವಾ ಸಾಧನೆ ರಂಗಕ್ಕೆ ಕಳಿಸಿದರೆ ಹೆದರಿ ಹಿಂದಕ್ಕೆ ಬರುವ ಉತ್ತರನ ಪೌರುಷದವರಾಗಿರುತ್ತಾರೆ. ದುರ್ಜನರಿಗೆ ಸಜ್ಜನರ ಸಂಗ ಹಾಗೂ ಸಚ್ಚಾರಿತ್ರ್ಯಗಳಿಗಿಂತ ಅನಾಚಾರ ಬದುಕೇ ಪ್ರಿಯವೆನಿಸುತ್ತದೆ.

೫೭೬

ಹರನ ಹಡೆದವರಿಲ್ಲ, ಹರಿಗಿಂತ ಶ್ರೇಷ್ಠರಿಲ್ಲ
ಉರಿವಂಥ ಉರಿಯೊಳಗೆ ಮಲಗಿ ಬೆಳಗಾಗಿ ಎದ್ದು
ಬರುವವರಿಲ್ಲ, ಬಸವಣ್ಣ

ತಾತ್ಪರ್ಯ : ಜಗತ್ಕರ್ತನೂ ಜಗನ್ನಿಯಾಮಕನೂ ಆದ ಮಹದೇವನಿಗೆ ಜನ್ಮ ಕೊಡುವರುಂಟೆ. ಸೃಷ್ಟಿಯನ್ನೇ ಹೊಟ್ಟೆಯೊಳಿಟ್ಟುಕೊಂಡವ ಇನ್ನೊಬ್ಬರ ಹೊಟ್ಟೆಯಲ್ಲಿ

ಹುಟ್ಟಿ ಬರುವುದು ಸೋಜಿಗ. ಹೇಗೆ ಶಿವನಿಗೆ ಶಿವನೇ ಸಾಟಿಯೋ ಹಾಗೆಯೇ ಭಕ್ತವತ್ಸಲನಾದ ಹರಿಗೆ ಹರಿಯೇ ಸಾಟಿಯಾಗಿದ್ದಾನೆ. ಅಂತಹ ಹರಿಹರರ ಕೃಪಾ ದರ್ಶನವಾಗಬೇಕಾದರೆ ಭಕ್ತನಾದವನು ಸಾಧನೆ ಮಾಡಬೇಕು. ಉರಿವ ಉರಿಯೊಳು ಪಕ್ವಾನ್ನ ಬೇಯುವಂತೆ ಚಿನ್ನ ಕರಗಿ ಆಭರಣವಾಗುವಂತೆ ಸದೇಹಿಯಾದ ಮನುಷ್ಯ ಈ ಪ್ರಪಂಚದ ಎಲ್ಲ ವೈಪರಿತ್ಯಗಳ ಮಧ್ಯೆಯೇ ಬೆಂದು ಆತ್ಮಜ್ಞಾನಿಯಾಗಬೇಕು ಎಂಬುದು ಇಲ್ಲಿನ ಭಾವ.

೫೭೭

ಬರೆದಿದ್ದ ನೀಲಿಯ ತೊಳೆಯಲು ಅದು ತನ್ನ
ಕರದು ಹೋಗುವುದೆ, ನಿಲ್ಲದಲೆ ಚಿತ್ರದ ಬೊಂಬೆ
ಸೊರಗುವುದುಂಟೆ, ಬಸವಣ್ಣ

ತಾತ್ಪರ್ಯ : ಇದೊಂದು ಬೆಡಗಿನ ವಚನವಾಗಿದೆ. ಶುಭ್ರ ಕಾಗದ ಅಥವಾ ಗೋಡೆಯ ಮೇಲೆ ಮಸಿಯಿಂದ ಅಕ್ಷರ ಬರೆದು ಅಥವಾ ಚಿತ್ರ ಬಿಡಿಸಿ ಅದನ್ನು ನೀರಿನಿಂದ ತೊಳೆಯಲು ಅದು ತನ್ನ ಕಪ್ಪು ಗುಣವನ್ನು ಕಳೆದುಕೊಳ್ಳುವುದಿಲ್ಲ. ಬರೆದ ಚಿತ್ರವ ಅಳಿಸಲು ಅದರಲ್ಲಿನ ಗೊಂಬೆ ಸೊರಗಲು ಸಾಧ್ಯವಿಲ್ಲ. ಕಾರಣ ಮನುಷ್ಯನಲ್ಲಿ ತುಂಬಿದ ಅವಗುಣಗಳನ್ನು ಅಂತರಂಗ ಶುದ್ಧಿಯ ಮೂಲಕ ಕಳೆದುಕೊಳ್ಳಬಹುದೇ ವಿನಹಃ ಬಹಿರಂಗದಲ್ಲಿ ದೇಹ ತೊಳೆದು ಡಾಂಭಿಕತನ ಪ್ರದರ್ಶಿಸುವುದರಿಂದ ಸಾಧ್ಯವಿಲ್ಲ.

೫೭೮

ಎಲೆಗಳಿಲ್ಲದ ವೃಕ್ಷ ತಲೆಯಿಲ್ಲದ ಮೃಗವು
ಹುಲಿಯ ಗವಿಯೊಳು ಹೊಕ್ಕು ಆರ್ಭಟಿಸಲು
ನಿಲಲಾರದೆ ಹೋಯ್ತು ದೇಶಾಂತರ, ಬಸವಣ್ಣ

ತಾತ್ಪರ್ಯ : ಇದು ಕೂಡ ಬೆಡಗು ತುಂಬಿದ ಚತುರೋಕ್ತಿಯಾಗಿದೆ. ಆತ್ಮ, ಪರಮಾತ್ಮ ಹಾಗೂ ಜೀವಾತ್ಮರ ಸಂಬಂಧವನ್ನು ಈ ವಚನ ಹೇಳುವಂತಿದೆ. ಎಲೆಗಳಿಲ್ಲದ ವೃಕ್ಷ ಎಂದರೆ ಈ ದೇಹ. ಹಲವು ತತ್ವಪದಕಾರರು ಈ ದೇಹವನ್ನು ಮರಕ್ಕೆ ಹೋಲಿಸಿದ್ದು ಗಮನಾರ್ಹ. ತಲೆ ಇಲ್ಲದ ಮೃಗ ಎನ್ನುವುದನ್ನು ಸಂಸ್ಕಾರ ಹೀನ ಆತ್ಮ ಅಥವಾ ಅರಿಷಡ್ವರ್ಗಗಳೆಂದು ತಿಳಿಯಬಹುದು. ಇವು ಜೀವಾತ್ಮನೆಂಬ ಚೈತನ್ಯದ ಹುಲಿಯ ಗವಿ ಹೊಗಲು ತನ್ನ ಕರ್ಮಬಂಧನ ಕಳೆದುಕೊಂಡು ಮೋಕ್ಷಮಾರ್ಗಿಯಾದವು. ಅಂದರೆ ಕಾಯಗುಣವಳಿದ ಜೀವಗುಣ ಪಡೆದ ಪರಿ ಹಾಗೂ ಅಭೇದ ಸ್ಥಿತಿ.

೫೭೯

ಕಟಕಗಂತಃಕರಣವೆ ಕಟುಕರಿಗೆ ನಿಜ ವಾಕ್ಯವೆ
ಹಟಕಾರರಲ್ಲಿ ವಿದ್ಯೆಗಳು, ಧರಣಿಗೆ
ಮುಟ್ಟದ ವಾಕ್ಯವಿಲ್ಲ, ಬಸವಣ್ಣ

ತಾತ್ಪರ್ಯ : ಕಟಗನ ಕೆಲಸ ಪ್ರಾಣಿಗಳನ್ನು ಕಡಿಯುವುದು. ಅವನ ವೃತ್ತಿಗಾಗಲಿ ಅವನ ಮಚ್ಚು ಹಾಗೂ ಮನಸ್ಸಿಗಾಗಲಿ ದಯೆ ಇರದು. ಹಾಗೆ ಕಟುಕರೂ ಹಾಗೂ ನೀಚರೂ ಕ್ರೂರಿಗಳೂ ವಿಘ್ನಸಂತೋಷಿಗಳೂ ಆದ ಮನುಷ್ಯರಿಗೆ ಸತ್ಯ ಮಾರ್ಗ ಪ್ರಾಮಾಣಿಕ ನಡೆ ನುಡಿಗಳು ಇರುವುದಿಲ್ಲ. ಅದೇ ರೀತಿ ಹಟಕಾರರಲ್ಲಿನ ವಿದ್ಯೆಗಳು ಎಷ್ಟೆ ಇದ್ದರೂ ಅವು ಲೋಕದ ಬಳಕೆಗೆ ಬಾರವು ಎನ್ನುವ ಮೂಲಕ ವಿವಿಧ ಮನುಷ್ಯ ಸ್ವಭಾವವನ್ನು ವಚನ ಹೇಳುವಂತಿದೆ.

೫೮೦

ಹಲ್ಲು ಹದನಿದ್ದರೆ ಕಲ್ಲು ಹರಿಯುವುದುಂಟೆ
ಮಲ್ಲಿಗಿ ಪುಷ್ಪ ಬಾಯಿಂದ ಮೆದ್ದರೆ
ರುಚಿಯಲ್ಲವೇಳಯ್ಯ, ಬಸವಣ್ಣ

ತಾತ್ಪರ್ಯ : ಜಗತ್ತಿನ ಪ್ರತಿಯೊಂದು ವಸ್ತುವಿಗೂ ಅದರದೇ ಆದ ಗುಣ ಸ್ವಭಾವ ಗಳಿರುತ್ತವೆ. ಹಲ್ಲಿನ ಕೆಲಸ ಆಹಾರ ಜಗಿಯುವುದರ ಮೂಲಕ ದೇಹದ ಪೋಷಣೆಗೆ ನೆರವಾಗುವುದು. ಅದು ಬಿಟ್ಟು ಹಲ್ಲು ಹದನಾಗಿದೆ ಮತ್ತು ಚೂಪಾಗಿದೆ ಎಂದು ಕಲ್ಲು ಕಡಿಯ ಹೋದರೆ ಹಲ್ಲು ಮುರಿದುಕೊಳ್ಳಬೇಕಾಗುತ್ತದೆ. ಅದೇ ರೀತಿ ಮಲ್ಲಿಗೆ ಹೂ ಸುವಾಸನೆಗೆ ಪರಿಶುದ್ಧತೆಗೆ ಹೆಸರಾದದ್ದು. ಅದನ್ನು ಮಾಲೆಯಾಗಿ ಮುಡಿದು ಅದರ ಕಂಪನ್ನು ಉಪಭೋಗಿಸದೆ ಬಾಯಲ್ಲಿ ಅಗೆದು ನುಂಗಿದರೆ ಅದರ ಸೊಗಸು ದೊರೆಯುವುದಿಲ್ಲ. ವಸ್ತುವಿನ ಹದವರಿತ ಬಳಕೆಯು ಸಾರ್ಥಕತೆ ಯನ್ನು ನೀಡುತ್ತದೆ ಎಂಬುದು ವಚನದ ಭಾವ.

೫೮೧

ಹರಗಿ ಬಿತ್ತಿದ ಹೊಲವು ಉರಿದು ಆರಿದ ಮೇಲೆ
ಭರದಿ ಮಳೆ ಬರಲು ಫಲವೇನು, ಕಲಿಯ
ನರರಿಗೆ ದುರ್ಭಿಕ್ಷ ಕಾಣಾ, ಬಸವಣ್ಣ

ತಾತ್ಪರ್ಯ : ಕಾರ್ಯ ಕಾರಣ ಸಂಬಂಧವನ್ನು ವಚನ ಹೇಳುವಂತಿದೆ. ಒಕ್ಕಲಿಗನು ಹೊಲ ಹದ ಮಾಡಿ ಬೀಜ ಬಿತ್ತಿದ ಮೇಲೆ ಸಕಾಲಕ್ಕೆ ಮಳೆ ಬಂದರೆ ಆ ಬೀಜ

ಮೊಳೆತು ಪಸಲು ನೀಡುತ್ತದೆ. ಅದು ಬಿಟ್ಟು ಬಿರು ಬಿಸಿಲಿಗೆ ನೆಲ ಒಣಗಿ ಬೀಜ ಸುಟ್ಟು ನಾಶವಾದ ಮೇಲೆ ಮಳೆ ಬಂದರೆ ಏನೂ ಪ್ರಯೋಜನವಿಲ್ಲ. ಆ ನಾಡು ಬರಗಾಲದಿಂದ ನರಳುತ್ತದೆ. ಸಮಯವಿದ್ದಾಗಲೇ ಸಾಧನೆ ಮಾಡುವುದು ಒಳಿತು.

೫೮೨

ಹಸಿವು ಊಟಕೆ ಲೇಸು ರಸವು ಕಬ್ಬಿಗೆ ಲೇಸು
ಶಶಿಧರ ಲೇಸು ಗಗನಕ್ಕೆ, ತೊಟ್ಟಿಲೊಳು
ಶಿಶುವು ಲೇಸು, ಬಸವಣ್ಣ

ತಾತ್ಪರ್ಯ : ಔಚಿತ್ಯ ಪ್ರಜ್ಞೆಯನ್ನು ಮೌನೇಶ್ವರರು ಇಲ್ಲಿ ಹೇಳುತ್ತಾರೆ. ತನ್ನ ಬೆಳದಿಂಗಳಿಂದಲೇ ಜಗತ್ತಿನ ಸಕಲ ಜೀವರಾಶಿಗಳಲ್ಲಿ ಜೀವನೋತ್ಸಾಹ ತುಂಬುವ ಚಂದ್ರ ಆಕಾಶದಲ್ಲಿದ್ದರೆ ಅದು ಭೂಷಣ. ಅದೇ ರೀತಿ ತೊಟ್ಟಿಲೊಳು ಶಿಶು, ಕಬ್ಬಿನಲಿ ರಸವಿರುವುದು, ಹಸಿವಿಗೆ ಊಟ ಮಾಡುವುದು ಉಚಿತವಾದಂತಹ ಕ್ರಿಯೆಗಳು. ಇವು ಒಂದು ಇನ್ನೊಂದಕ್ಕೆ ಪೂರಕ ಮತ್ತು ಪ್ರೇರಕವೇ ಹೊರತು ಮಾರಕವಾಗಬಾರದು. ಮನುಷ್ಯ ದೇಹ ಮತ್ತು ಆತ್ಮಗಳು ಸಾಧನೆಗೆ ದಾರಿಗಳೇ ಹೊರತು ಶ್ರೇಷ್ಠ–ಕನಿಷ್ಠವೆಂದು ವಿಂಗಡಿಸಬಾರದು ಎನ್ನುವ ಅಭೇದ ಕಲ್ಪನೆಯನ್ನು ವಚನ ಹೇಳುತ್ತದೆ.

೫೮೩

ಸತಿಗೆ ನಾಶಿಕವಿಲ್ಲ ಪತಿಗೆ ಮಸ್ತಕವಿಲ್ಲ
ಚತುರ್ವೇದ ಪಂಚಾಂಗ ಮಾಡಿದ ಬ್ರಹ್ಮನು
ಕ್ಷಿತಿಯೊಳಗೆ ಸುಳ್ಳು, ಬಸವಣ್ಣ

ತಾತ್ಪರ್ಯ : ವಚನವು ವೀರಭದ್ರದೇವರ ಹುಟ್ಟಿನ ಸಂದರ್ಭದ ಪೌರಾಣಿಕ ಸಂಗತಿಯನ್ನು ಒಳಗೊಂಡಂತಿದೆ. ವೀರಭದ್ರನ ಹುಟ್ಟಿನ ಪರಿಯನ್ನು ಹೇಳುವ ವೀರಭದ್ರ ದೇವರ ಒಡಬಿನಲ್ಲಿ ವೀರಭದ್ರನು ಹುಟ್ಟುತ್ತಲೇ ರಣವಿಕ್ರಮನಾಗಿ ಹಲವು ಆಯುಧಗಳ ಧರಿಸಿ ರೌದ್ರಾವತಾರಿಯಾಗಿ ವಿಷ್ಣು ಮೊದಲಾದ ದೇವತೆಗಳನ್ನು ಸೆರೆಹಿಡಿದು, ದಕ್ಷಬ್ರಹ್ಮನ ಶಿರವನ್ನು ಕಡಿದು, ಅಗ್ನಿಗೆ ಆಹುತಿ ಕೊಟ್ಟು, ಸರಸ್ವತಿಯ ಮೂಗನ್ನು ಕೊಯ್ದು ಅಗ್ನಿಯ ನಾಲಿಗೆ ಹರಿದು ಸಪ್ತ ಭಾಗ ಮಾಡಿ, ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣಿನಿಂದ ಸುಡುತ್ತಾನೆ.

ಬಹುಶಃ ಮೌನೇಶ್ವರರ ವಚನ ಈ ಘಟನೆಯನ್ನು ಪ್ರಸ್ತಾಪಿಸುವಂತೆ ಕಾಣುತ್ತದೆ. ಬ್ರಹ್ಮನು ಚತುರ್ಮುಖನು ವಿಶ್ವಕರ್ಮನು ಪಂಚಮುಖನು. ಮೊದಲು ಬ್ರಹ್ಮನಿಗೂ ಐದು ತಲೆಗಳಿದ್ದು ಅದರಲ್ಲಿ ಒಂದನ್ನು ರುದ್ರ ಚಿವುಟಿ ಹಾಕಿ ಬ್ರಹ್ಮನ ಅಹಂ ಮುರಿದ ಪೌರಾಣಿಕ ಪ್ರಸಂಗವೂ ಇದೆ. ಮೂಗು ಮತ್ತು ತಲೆ ಮನುಷ್ಯನ ಪ್ರಜ್ಞೆ

ಮತ್ತು ಅಹಂಕಾರದ ಬಹುಮುಖ್ಯ ಅಂಗಗಳು. ಅವೇ ಇಲ್ಲವೆಂದರೆ ಮನುಷ್ಯನ ಆಲೋಚನಾ ಶಕ್ತಿಯೇ ಕುಂಠಿತಗೊಳ್ಳುತ್ತದೆ. ಬ್ರಹ್ಮನ ಸೃಷ್ಟಿ ಶಕ್ತಿ ಹಾಗೂ ಅವನ ಅಸ್ತಿತ್ವವನ್ನು ವಚನ ನಿರಾಕರಿಸುವುದು ಕುತೂಹಲದ ವಿಚಾರ. ಅಹಂನಿಂದಾಗಿ ಬ್ರಹ್ಮ ತನ್ನ ಶಿರವನ್ನು ಕಳೆದುಕೊಂಡ ಸಂಗತಿಯನ್ನು ದಧೀಚಿ ಮುನಿ ದಕ್ಷಬ್ರಹ್ಮನಿಗೆ ಹೇಳುವ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

೫೮೪

ನೋಡಿ ಮಾಡುವ ಶೀಲ ಕಾಡಿ ಬೇಡುವ ಗುರುವು
ನಾಡನಾಳುವ ಪ್ರಮಥರು, ರಾಜ್ಯಕ್ಕೆ
ಪೀಡೆಗಳು ಕಾಣಾ, ಬಸವಣ್ಣ

ತಾತ್ಪರ್ಯ : ಭಕ್ತಿ ಎಂಬುದು ತೋರುಂಬುವ ಲಾಭ ಎಂದು ಬಸವಣ್ಣನವರು ಹೇಳಿದಂತೆ, ಜನ ಮೆಚ್ಚುಗೆಗಾಗಿ ತೋರಿಕೆಗಾಗಿ ಮಾಡುವ ಶೀಲ ಭಕ್ತರನ್ನು ಶಿಷ್ಯರನ್ನು ಕಾಡಿ ಪೀಡಿಸುವ ಗುರು, ವಿವೇಕ ರಹಿತ ಮತ್ತು ನಿರಂಕುಶಮತಿ ಪ್ರಭುತ್ವ ಇವು ಮನುಷ್ಯ ಲೋಕದ ಕಂಟಕಗಳು. ಮೋಸ, ವಂಚನೆ, ಕಪಟ, ಹಿಂಸೆ, ದಬ್ಬಾಳಿಕೆ ಇವು ಮಾನವ ಜನಾಂಗದ ನಾಶಕ್ಕೆ ಕಾರಣವಾಗುತ್ತವೆ. ಅಂತಹ ದೇಶ ದುರ್ಭಿಕ್ಷಕ್ಕೆ ಈಡಾಗುತ್ತದೆ.

೫೮೫

ಧರಣಿಗೆ ಧಣಿ ಚೆನ್ನ ಮರಣ ವಿರಹಿತಸ್ವಾಮಿ
ಕರುಣ ಸಾಗರನೆ ಕಣ್ದೆರೆದು ಮಧುಮಥನ ಸುತನು
ಉರಿದು ಹೋಗುವನು, ಬಸವಣ್ಣ

ತಾತ್ಪರ್ಯ : ಧರಣಿಗೆ ಹಣವಂತನೂ ದಾನ ಗುಣವುಳ್ಳವನು ಜ್ಞಾನಿಯಾದ ಸಾಧಕನು ಭೂಷಣಪ್ರಾಯರು. ಶಿವನು ಹೇಗೆ ಅಮರನೋ ಅಂತಹ ದಾನಿಗಳು ಮತ್ತು ಜ್ಞಾನಿಗಳು ತಮ್ಮ ಲೋಕಕಾರ್ಯಗಳ ಮೂಲಕ ಸ್ಥಿರವಾಗುತ್ತಾರೆ. ಕಾಮ ಕ್ರೋಧಾದಿ ಗಳಿಂದ ತುಂಬಿದ ದೇಹವನ್ನು ಸರಿಯಾಗಿ ಪಳಗಿಸದಿದ್ದರೆ ಅದರ ದಳ್ಳುರಿಯಲ್ಲಿ ಬದುಕು ಉರಿದು ಹೋಗುತ್ತದೆಂಬುದು ಇಲ್ಲಿನ ಭಾವ.

೫೮೬

ಹಸ್ತ ಪ್ರಸಾದವು ಹರನ ಸಂತತಿ ಗಣಕ್ಕೆ
ಮಸ್ತ ಪ್ರಸಾದವು ಮಾನವರಿಗೆ, ಅನ್ಯಾಯ ಅಪರಾಧ
ಜಾಸ್ತಿ, ಸರಕಾರ ಶಿಕ್ಷಕರು, ಬಸವಣ್ಣ

ತಾತ್ಪರ್ಯ : ಸದಾಶಿವನೊಲುಮೆಯೇ ಶರಣಗಣಕ್ಕೆ ಪ್ರಸಾದ ಹಾಗೂ ಅಭಯವಾದರೆ ಮಂದಮತಿಗಳಾದ ಮರ್ತ್ಯದ ಮಾನವರಿಗೆ ಸುಜ್ಞಾನದ ಬೆಳಕು ಮಹಾಪ್ರಸಾದವಾಗುತ್ತದೆ. ತಪಸ್ಸಿನಿಂದ ಕೂಡಿದ ಜಡ ಲೋಕದ ಮನುಷ್ಯರು ಹಾಗೂ ಆಳುವ ವ್ಯವಸ್ಥೆ ಕ್ರಿಯಾಶೀಲರಂತೆ ಕಂಡರೂ ಸ್ವಾನುಭವ ಹಾಗೂ ಸ್ವಾವಲಂಬಿತನಗಳ ಕೊರತೆಯಿಂದ ಬಳಲುತ್ತಿದ್ದಾರೆ, ಅಪರಾಧಿಗಳಾಗುತ್ತಿದ್ದಾರೆ. ಸಮಾಜ ಕಂಟಕರಾಗುತ್ತಿದ್ದಾರೆ. ಅಂತಹ ಮನುಷ್ಯರಿಗೆ ಅವರ ತಿಳಿವು ವಿಕಾಸವಾಗುವಂತಹ ಗುರುಕರುಣೆ ಬೇಕು ಎನ್ನುವುದು ವಚನದ ಭಾವವಾಗಿದೆ.

೫೮೭

ಕಾಗಿ ಮೋತಿಯ ಗುರುವು ಗೂಗಿ ಮೋತಿಯ ಶಿಷ್ಯ
ಜೂಗನಾಯಿಯಂಥ ಸ್ತ್ರೀಯಳು ಮಾಡಿದ ದೋಷದಿ
ಜೋಗ ಬೇಡುವುದೆ ಶಿವಸಾಕ್ಷಿ, ಬಸವಣ್ಣ

ತಾತ್ಪರ್ಯ : ಮನಸ್ಸು ಮತ್ತು ಮೈಯ ವಿಕಾರತೆಯನ್ನು ವಚನ ಹೇಳುವಂತಿದೆ. ಗುರು ಶಿಷ್ಯ ಪರಂಪರೆ ಎಂಬುದು ಭಾರತೀಯ ಅನುಭಾವ ಪರಂಪರೆಯ ಬಹು ದೊಡ್ಡ ಕೊಡುಗೆ. ಅಂತಹ ಮಹಾನುಭಾವ ಪರಂಪರೆಯಲ್ಲಿ ಅರೆಜ್ಞಾನಿ ಅಜ್ಞಾನಿಗಳಾದಂತಹ ಕಾಗಿ ಮೋತಿ ಗುರು ಗೂಗಿ ಮೋತಿ ಶಿಷ್ಯರು ಬರುವ ಮೂಲಕ ಆ ಜ್ಞಾನ ಪರಂಪರೆಯ ಮಹತ್ವವನ್ನೇ ಕೆಡಿಸಿಬಿಟ್ಟರು. ತಮಸ್ಸು ಪ್ರವೃತ್ತಿಗೆ ಕಾಗೆಯು ಅಂಧಃಕಾರಕ್ಕೆ ಗೂಗೆಯು ಅಜ್ಞಾನದ ಪ್ರತೀಕ ಜೂಗನಾಯಿ. ಇಂತಹ ಪ್ರವೃತ್ತಿಯ ಮನುಷ್ಯರು ಮಾಡುವ ದೋಷದಿಂದಾಗಿ ಇಡೀ ಜಗತ್ತೇ ದುರ್ದೆಸೆಗೆ ಈಡಾಗುತ್ತದೆ.

೫೮೮

ಭೂಮಿ ಸ್ವಾಮಿಯ ಒಡವಿ, ಹೇಮ ಧನಿಕನ ಒಡವಿ
ಕಾಮ ಕಾಮಿನಿಯ ಒಡವಿ ಎಂಬುದು
ಸಾಮಘಾತಕರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಭೂಮಿ ಆಳುವವನ ಒಡೆತನಕ್ಕೆ ಸೇರಿದಂತೆ, ಬಂಗಾರ ಇದ್ದುಳ್ಳ ಶ್ರೀಮಂತನ ಸೊತ್ತಾಗಿರುತ್ತದೆ. ಅದೇ ರೀತಿ ಕಾಮ ಕಾಮಿನಿಯ ಸ್ವತ್ತು. ಈ ಸರಳ ಸತ್ಯ ಸಾಮವೇದಗಳನ್ನು ಓದಿ ಅರಗಿಸಿಕೊಂಡ ಮಹಾ ಪಂಡಿತರಿಗ್ಯಾಕೆ ತಿಳಿಯಲಿಲ್ಲ ಎಂಬುದು ವಚನದ ಭಾವವಾಗಿದೆ.

೫೮೯

ವಿಧಿಗೆ ಈಡಾಗದವರಿಲ್ಲ ನದಿಗಿಂತ ಶುಚಿಯಿಲ್ಲ
ಕದಿರಿಗೆ ಖಡ್ಗ ಸರಿಯಲ್ಲ, ದ್ವಯನೇತ್ರದ
ನರರಿಗೆ ಆವುದು ಸರಿಯಲ್ಲ, ಬಸವಣ್ಣ

ತಾತ್ಪರ್ಯ : ಈ ನರಜನ್ಮ ಹುಟ್ಟಿ ಬರುವುದೇ ದುರ್ಲಭ. ಹುಟ್ಟಿ ಬಂದ ಮೇಲೆ ವಿಧಿ ಲಿಖಿತವೆಂದು ಕರ್ಮಬಂಧನಗಳನ್ನು ಒಪ್ಪಿಕೊಂಡು ಬದುಕಲು ಆರಂಭಿಸುತ್ತದೆ. ಹೀಗಾಗಿ ಹುಟ್ಟಿ ಬಂದ ನರಜನ್ಮ ವಿಧಿ ಲಿಖಿತದಿಂದ ತಪ್ಪಿಸಿಕೊಳ್ಳುವುದಿಲ್ಲ. ಇಂತಹ ಕರ್ಮ ದೇಹ ಸಾಧನೆಗೆ ಅಡ್ಡಿಯಾಗುತ್ತದೆ. ಮದದಿಂದ ಕೊಬ್ಬಿದವನಿಗೆ ಯಾವುದೂ ಸರಿಯಾಗಿ ಕಾಣುವುದಿಲ್ಲ. ಸ್ವಚ್ಛವಾದ ನದಿ ನೀರನ್ನು ರಾಡಿ ನೀರಿಗೂ ಕದಿರನ್ನು ಖಡ್ಗಕ್ಕೂ ಹೋಲಿಕೆ ಮಾಡುವುದು ಸರಿಯಲ್ಲ. ದುರ್ಗುಣ ತುಂಬಿದ ಮನುಷ್ಯನನ್ನು ಸುಗುಣತ್ವ ತುಂಬಿದ ಮನುಷ್ಯನಿಗೆ ಹೋಲಿಸಲು ಸಾಧ್ಯವಿಲ್ಲ.

೫೯೦

ಹರನಿಕ್ಕಿದ ಮುಂಡಿಗಿ, ಹರಿಯದೊಬ್ಬರ ಕೈಯ್ಯ
ಪರಬ್ರಹ್ಮಮೂರ್ತಿ ಪ್ರಭುರಾಯನಿಕ್ಕಿದ ಮುಂಡಿಗಿ
ನರ ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ದೇಹ ಸೃಷ್ಟಿಯ ರಹಸ್ಯ ವಿಸ್ಮಯ ನಿಗೂಢತೆಗಳನ್ನು ನಿವಾರಿಸಲು ಇದುವರೆಗೂ ಎಂತಹ ಜ್ಞಾನಿಗಳಿಗೂ ಸಾಧ್ಯವಾಗಿಲ್ಲ, ಆ ಒಗಟನ್ನು ಅರ್ಥ ಮಾಡಿ ಕೊಳ್ಳಲಾಗಿಲ್ಲ. ಅಂತಹದ್ದರಲ್ಲಿ ಪರಬ್ರಹ್ಮ ಸ್ವರೂಪಿಯಾದ ಅಲ್ಲಮರಾಯ ನಿಕ್ಕಿದ ಬದುಕು ಹಾಗೂ ಸೃಷ್ಟಿಯ ಕುರಿತ ಒಗಟು ಅಥವಾ ರಹಸ್ಯ ಸಾಮಾನ್ಯ ಜನರಿಗೆ ತಿಳಿಯಲಾರದು.

೫೯೧

ಕಾಲೆರಡು ರಥಗಳು ಕೀಲೆಲ್ಲ ಸೂತ್ರಗಳು
ಮೇಲಿರುವ ಕೇರಿ ವೈಯಾಳಿ ಮಾಡುವಂಥ
ಜಾಲ ಸರ್ವರಿಗೆ ತಿಳಿಯಲುಂಟೆ, ಬಸವಣ್ಣ

ತಾತ್ಪರ್ಯ : ದೇಹವನ್ನೇ ರಥಕ್ಕೆ ಹೋಲಿಕೆ ಮಾಡಲಾಗಿದೆ. ದೇಹವೇ ರಥದ ಮೂಲ ಸ್ಫೂರ್ತಿ ಎಂಬುದು ರಥಶಿಲ್ಪದ ನಂಬಿಕೆ. ರಥ ಮತ್ತು ಚಕ್ರದ ಪರಿಕಲ್ಪನೆಯೇ ಚಲನಶೀಲ ಸ್ವರೂಪದ್ದು. ದೇಹವನ್ನು ಜಡ ಮತ್ತು ಸಾಧನೆಗೆ ಅಡ್ಡಿ ಎನ್ನುವ ವೈದಿಕ ಹಾಗೂ ವೀರಶೈವ ತಾತ್ವಿಕತೆಗಳಿಗಿಂತ ಭಿನ್ನವಾಗಿ ದೇಹವನ್ನೇ ಅದು ಇದ್ದ ರೂಪದಲ್ಲಿಯೇ ಸ್ವೀಕರಿಸಿ ಅದನ್ನೇ ಸಾಧನೆಯ ಮಾರ್ಗವಾಗಿಸಿಕೊಳ್ಳುವುದು ವಿಶ್ವಕರ್ಮ ತತ್ವದ ಮೂಲ ಶಕ್ತಿ. ಕಾಲೇ ರಥಗಳು, ಕೀಲೆಲ್ಲ ಸೂತ್ರಗಳು ದೇಹವೇ ರಥದ ಮೇಲ್ಭಾಗ. ಹೀಗೆ ಇಡೀ ದೇಹವನ್ನು ವಿಸ್ತರಿಸುವ ಹಾಗೂ ಚಲನಶೀಲ ಗೊಳಿಸುವ ಈ ಪರಿಯೇ ಜ್ಞಾನದ ಕೀಲಿ. ಜಾಲವೆಂದರೆ ಬಲೆ ಎನ್ನುವುದಕ್ಕಿಂತ

ಇಡೀ ದೇಹವನ್ನು ವಿವಿಧ ಕೋನಗಳಲ್ಲಿ ಹಿಡಿದಿಟ್ಟಿರುವ ಸೂತ್ರ ಅಥವಾ ಹಗ್ಗದ ಕಟ್ಟು. ನರವ್ಯೂಹಗಳ ರಚನೆಯೆಂದು ಭಾವಿಸಬಹುದು.

೫೯೨

ಅಷ್ಟದಿಕ್ಪಾಲಕರು ಮುನ್ನೂರಂಗುಲ ನಾಲ್ಕರ
ಮುನ್ನೂರಂಗುಲ ಮೂರರ ಮಧ್ಯದಲ್ಲಿಪ್ಪರು
ಕರ್ತರ ಲೆಕ್ಕಕ್ಕೆ ಐವರು ನವಬ್ರಹ್ಮರು, ಬಸವಣ್ಣ

ತಾತ್ಪರ್ಯ :

೫೯೩

ಓಜ ಒಕ್ಕಲು ದೊರೆಯು ಸಹಜದಿಂದ ಇದ್ದರೆ ಈ
ಮೂಜಗವೆಲ್ಲ ಯಾಕೆ ಕೆಡುವದು, ಬಸವಣ್ಣ

ತಾತ್ಪರ್ಯ : ವಿದ್ಯೆ ಕಲಿಸುವ ಗುರು ಆಳುವ ದೊರೆ ಮಾಡುವ ಕೃಷಿ ಆಡುವ ಮಾತು ಶುದ್ಧ ಮತ್ತು ಕ್ರಿಯಾಶೀಲವಾಗಿದ್ದಾಗ ಈ ಭೂಲೋಕವು ಕೆಡಲು ಸಾಧ್ಯವಿಲ್ಲ. ವಿದ್ಯಾಗುರು ಆಳುವ ದೊರೆ ಉಳುವ ರೈತ ಭ್ರಷ್ಟರಾದರೆ ಈ ಲೋಕ ಬಾಳದು ಮತ್ತು ಬೆಳೆಯಲಾರದು.

೫೯೪

ನಿಮ್ಮ ಆಸೆಗೆ ಬಂದ ಆಸಾದಿಯ ಮಗ ನಾನು
ಹಾಸ್ಯವ ಮಾಡಿ ಹಳಿದರೆ ದೋಷವ ತಾಳಬ್ಯಾಡಿ
ನಿಮ್ಮ ಮನಸಿನೊಳಗೆ ಶಿವಶರಣರು
ನಿಮ್ಮಿಂದ ಕೋಶವನು ಬಿಗಿದಪ್ಪಿಕೊ, ಬಸವಣ್ಣ

ತಾತ್ಪರ್ಯ : ಶರಣರ ಉದ್ದೇಶವನ್ನು ಸಾರಲು ಬಂದ ಆಸಾದಿ ಅಂದರೆ ಉಗ್ರಮಾರಿಯ ಪೂಜಾರಿಯ ಮಗ ನಾನು. ಯಾರಾದರೂ ನನ್ನನ್ನು ಹಾಸ್ಯವ ಮಾಡಿ ಹಳಿದರೆ ಶರಣರಾದವರು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಅಂತಹ ದುರುಳರಿಂದ ನಾಶವಾಗುತ್ತಿರುವ ಅನುಭಾವದ ಕೋಶವನ್ನು(ಗಂಟು–ನಿಘಂಟು, ವಚನಕಟ್ಟು ಕಾಲಜ್ಞಾನದ ಕಟ್ಟು) ಬಿಗಿದಪ್ಪಿಕೊಂಡು ಕಾಪಾಡಿರಿ, ನಾಶಮಾಡಲು ಬಿಡಬೇಡಿರಿ ಶರಣರು. ಶರಣರೆಂದರೆ ಇಲ್ಲಿ ಅನುಭಾವಿಗಳೆಂದು ಭಾವಿಸುವುದು ಉಚಿತ.

೫೯೫

ಬ್ರಹ್ಮಂಗೆ ಶಿರವಿಲ್ಲ ಭಾರತಿಗೆ ಮೂಗಿಲ್ಲ
ಚಮ್ಮಳಿಗೆ ಎಲ್ಲಿಯ ಕಳಸವಯ್ಯ

ನಮ್ಮ ಕಮ್ಮಾರನ ಕೂಡ ಹಮ್ಮುಗಳು ಮಾಡಿದರೆ
ನಿಮ್ಮ ಹಮ್ಮುಗಳ ಮುರಿವನು, ಬಸವಣ್ಣ

ತಾತ್ಪರ್ಯ : ವೀರಭದ್ರನ ಹುಟ್ಟಿನ ಸಂದರ್ಭವನ್ನು ವಚನ ಸೂಚಿಸುವಂತಿದೆ. ವೀರಭದ್ರ ಹುಟ್ಟಿದ ಕೂಡಲೇ ದಕ್ಷ ಬ್ರಹ್ಮನ ಶಿರವ ಕೊಯ್ದು ಸರಸ್ವತಿಯ ಮೂಗನ್ನು ಕೊಯ್ದು ತನ್ನ ರೌದ್ರ ರೂಪವನ್ನು ತೋರುತ್ತಾನೆ. ಶಿರೋಭಾಗವು ದೇಹಕ್ಕೆ ಕಳಸವಿದ್ದಂತೆ. ಮೂಗು ವಾಸನೆಗಳನ್ನು ಗ್ರಹಿಸುವ ದೇಹದ ಬಹುಮುಖ್ಯ ಅಂಗ. ಸೃಷ್ಟಿಕರ್ತನಾದ ಬ್ರಹ್ಮನಿಗೇ ತಲೆಯಿಲ್ಲ, ವಿದ್ಯೆಗೆ ಅಧಿಪತಿಯಾದ ಸರಸ್ವತಿಗೆ ಮೂಗಿಲ್ಲ ಎನ್ನುವುದು ಪಾರಂಪರಿಕ ಜ್ಞಾನದ ಬಹುಮುಖ್ಯ ಸಂಕೇತಗಳಾದ ಬ್ರಹ್ಮ ಹಾಗೂ ಸರಸ್ವತಿಯ ಅಸ್ತಿತ್ವವನ್ನೇ ಮೌನೇಶ್ವರರು ಮರು ನಿರ್ವಚಿಸುತ್ತಾರೆ. ಅಂತಹದರಲ್ಲಿ ಕ್ರಿಯಾಜ್ಞಾನದ ಪ್ರತೀಕವಾದ ಕಮ್ಮಾರನ ಕೂಡ ಬಿಗುಮಾನ ಮಾಡಿದರೆ ದಿಮಾಕು ಮಾಡಿದರೆ ಅವರ ಸೊಕ್ಕುಗಳ ಮುರಿಯುತ್ತಾನೆ. ಕರ್ಮಪ್ರಧಾನ ಸೈದ್ಧಾಂತಿಕ ಜ್ಞಾನಕ್ಕಿಂತ ಕ್ರಿಯಾ ಪ್ರಧಾನವಾದ ಪ್ರಾಯೋಗಿಕ ಜ್ಞಾನಕ್ಕೆ ಮೌನೇಶ್ವರರು ಮಹತ್ವ ಕೊಟ್ಟಿದ್ದಾರೆ.

೫೯೬

ಖಂಡುಗಕ್ಕೆ ಇಕ್ಕಳದ ಆಯಾ ಬಿತ್ತುವ ಬೀಜ
ಭೂಮಂಡಲವೆಲ್ಲ ಕೊಡದಿದ್ದರೆ
ಇಕ್ಕಳದಲಿ ಖಂಡವ ತೆಗಿದಾರು, ಬಸವಣ್ಣ

ತಾತ್ಪರ್ಯ : ಪಾಂಚಾಳರು ಮಾಡಿದ ಕೆಲಸಕ್ಕೆ ಆಯ ಅಂದರೆ ಪ್ರತಿಫಲ ಕೊಡಬೇಕೆನ್ನುವುದು ವಚನದ ತಾತ್ಪರ್ಯ. ಇಕ್ಕಳದ ಆಯ ಅಂದರೆ ಕಮ್ಮಾರಿಕೆ ಆಗಬಹುದು, ಪತ್ತಾರಿಕೆಯಾಗಬಹುದು. ಇಕ್ಕಳ ಉಪಕರಣವು ಸೃಷ್ಟಿಯ ಮೂಲಸೂತ್ರ. ಇಂತಹ ದುಡಿಮೆಗಾರರಿಗೆ ಆಯ ಅಂದರೆ ದುಡಿತದ ಭಾಗ ಕೊಡಬೇಕು. ಬಿತ್ತುವ ಬೀಜ ಎಂದರೆ ಶುದ್ಧವಾದ ಕಾಳು. ಮೊಳಕೆಯೊಡೆಯಲು ಶಕ್ತಿಯಿದ್ದ, ಸುಪುಷ್ಟವಾದ ಆಹಾರಧಾನ್ಯ ಕೊಡಬೇಕೇ ಹೊರತು ಆಯದ ನೆವದಲ್ಲಿ ಭಿಕ್ಷುಕರಿಗೆ ನೀಡಿದಂತೆ ಸೆರಗು ಮುರುಗು ಅಥವಾ ಕೆಟ್ಟುಹೋದ ಕಾಳುಗಳನ್ನು ಕೊಡಬಾರದು. ಒಂದು ವೇಳೆ ಕೊಡದಿದ್ದರೆ ಅದೇ ಇಕ್ಕಳದಲ್ಲಿ ಖಂಡವ ತೆಗೆದಾರು. ಎಂದರೆ ದುಡಿತದ ಪ್ರತಿಫಲವನ್ನು ಕೊಡುವ ತನಕ ಬಿಡರು. ಇಕ್ಕಳ ಗಟ್ಟಿ ಹಿಡಿತದ ಸಂಕೇತ ಹಾಗೂ ಸ್ವಾವಲಂಬನೆಯ ಪ್ರತೀಕವೂ ಆಗಿದೆ.

೫೯೭

ಕಿನ್ನರ ವಿರಕ್ತಯ್ಯ ರನ್ನದ ಕಂಬದ ಮೇಲೆ
ಪನ್ನಂಗಧರನು ಪವಡಿಸಿ ವಿರಕ್ತಯ್ಯ
ಚೆನ್ನಾಗಿ ಬ್ಯಾಟಿಯ ಹೊರಹೊಂಟನು, ಬಸವಣ್ಣ

ತಾತ್ಪರ್ಯ : ಕಿನ್ನರಯ್ಯನೆಂದರೆ ಹನ್ನೆರಡನೇ ಶತಮಾನದಲ್ಲಿ ಆಗಿಹೋದ ಕಿನ್ನರಿ ಬ್ರಹ್ಮಯ್ಯ. ಕಿನ್ನರಿ ವಿರಕ್ತಯ್ಯನ ರನ್ನ ಗಂಬದ ಮೇಲೆ ಫನ್ನಗಧರ ಪವಡಿಸಿದನೆಂಬುದು ಗೂಢಾರ್ಥವುಳ್ಳದ್ದಾಗಿದೆ.

'ರನ್ನಗಂಭ' ರತ್ನಕಂಭ ಎನ್ನುವುದು ಆಲಯ ನಿರ್ಮಿತಿಯ ಮೊದಲ ಮೆಟ್ಟಿಲು. 'ಕಂಭ ಸೂತ್ರ', 'ಕಂಬವ ನಿಲ್ಲಿಸಿ' ಎನ್ನುವ ಪದಪುಂಜ ಶರಣರಲ್ಲಿ ಬಳಕೆಯಾಗುತ್ತದೆ. ಈ ಶರೀರ ವೀಮಾಂಸೆ ಸಂಬಂಧದಲ್ಲಿ ದೇಹವೆಂಬ ಕಂಬದಲ್ಲಿ ಶಿವನು ಬಂದು ಪವಡಿಸುವಂತೆ ಕಿನ್ನರಯ್ಯನ ವಾಸವಾಗಿರುವಂತೆ ಸಾಧನೆ ಮಾಡಿದ್ದಾನೆ. ತನ್ನ ತಾನರಿದ ವಿಧಾನವಿದು. ಫನ್ನಂಗಧರನನ್ನು ಆತ್ಮದಲಿ ನಿಲ್ಲಿಸಿ ಬೇಟೆಗೆ ಹೋಗುವು ದೆಂದರೆ ಬಹುಶಃ ಅರಿತ ಜ್ಞಾನವನ್ನು ಜನರಿಗೆ ಬೋಧಿಸಲು ಹೋಗುವ ಪರಿಯಾಗಿರ ಬಹುದೆನಿಸುತ್ತದೆ. ಒಂದೇ ಮನಸ್ಸಿನಿಂದ ಧ್ಯಾನ, ತಪಸ್ಸು ಮಾಡುವುದರಿಂದ ಪರಮಾತ್ಮ ಒಲಿವನು ಎಂಬ ಆಶಯ ವಚನದ್ದು.

೫೯

ಎಂಟು ಎಸಳಿನ ಪಂಟಿಗೆಯ ಕಮಲದೊಳಗೆ
ಉಂಟುಯಿಲ್ಲವೆಂಬುವದು ಪರಿಪೂರ್ಣ ಸಕಲವು
ಒಂಟಿಯ ಮುಖದ ಪರಿಯಂತೆ
ಒಂಟಿಗನೆಂಬುವದು ಅರಿಯರು, ವೃಷಭೇಂದ್ರ

ತಾತ್ಪರ್ಯ : ಎಂಟು ದಳದ ಕಮಲವು ಭಾರತೀಯ ತತ್ವಜ್ಞಾನದಲ್ಲಿ ಹಲವು ಅರ್ಥಗಳಲ್ಲಿ ಹಲವು ವಿಧದಲ್ಲಿ ದೇಹ ಮತ್ತು ಮನಸ್ಸಿನ ಚಲನೆಗಳನ್ನು ವ್ಯಾಖ್ಯಾನಿಸಲು ಬಳಕೆಯಾದ ಪರಿಕಲ್ಪನೆಯಾಗಿದೆ. ಜೀವಾತ್ಮ ಪರಮಾತ್ಮದ ದೊಡ್ಡ ಚರ್ಚೆಯೆ ಈ ಅಷ್ಟದಳ ಕಮಲದಿಂದ ಸಾಧ್ಯವಾಗಿದೆ.

ಕಮಲದ ಸ್ವಭಾವವಾದ ನೀರೊಳಿದ್ದು ನೀರಿಗಂಟಿಕೊಳ್ಳದ ಗುಣವಿದೆಯಲ್ಲ ಅದು ಮನುಷ್ಯನ ಗುಣವಾಗಬೇಕು. ಸಂಸಾರ ಸಾಗರದಲ್ಲಿದ್ದು ಈಸಿ ದಡ ಸೇರಬೇಕು. ಪದ್ಮಪತ್ರದ ಜಲದಂತೆ ಲೋಕದ ಸುಖಕ್ಕೆ ಅಂಟಿಕೊಂಡರೂ ಅಂಟಿಕೊಳ್ಳದಂತಿರಬೇಕು. ಒಂಟಿಯ ಮುಖ ಹೇಗೆ ದೇಹದಿಂದ ಮೇಲೆ ಇರು ತ್ತದೆಯೋ ಜ್ಞಾನಿಯಾದವನ ಯೋಚನೆಗಳು ಸಂಸಾರ ಸಾಗರದಿಂದ ಮೇಲೆದ್ದು ಬರುವಂತಿರಬೇಕು. ನೀರಿನಲ್ಲಿದ್ದು ಕಮಲ ಪರಿಪೂರ್ಣತ್ವದ ಗುಣವನ್ನು ಪಡೆಯುತ್ತದೆ. ಜ್ಞಾನಿಯಾದವನು ಲೋಕದೊಳಗಿದ್ದೆ ತನ್ನ ಸಿದ್ಧಿ ಸಾಧನೆಗಳನ್ನು ಮಾಡಿ ಲೋಕಕ್ಕಿಂತ ಭಿನ್ನವಾಗಿ ಉಳಿಯಬೇಕು.

೫೯೯

ಏನಾದದ್ದು ತನ್ನ ಆನಂದ ತಾನೊಂದನಾಡಿದರೆ
ನಡೆಯದಯ್ಯ ಸಾವಲ್ಲಿಗೆ ಸಾವಿರ ನೆರೆವರು
ಸಾಹೇಬನೆಂದು ಕರೆವರು ಬಾಯೆಂದು ಕರೆದು
ಅನ್ನವ ನೀಡಿ ಛೀಯನ್ನದನಕ ಬಿಡರು ಕಾಣಯ್ಯ, ಬಸವಣ್ಣ

ತಾತ್ಪರ್ಯ : ಆನಂದಮಯನೂ ಜ್ಞಾನಭರಿತನೂ ಚಿದ್ರೂಪನೂ ಆದ ಪರಮಾತ್ಮನ ಸೇವೆಗೆ ನೆರೆವವರು ಕಡಿಮೆ. ಲೌಕಿಕ ಸುಖಭೋಗಗಳಿರುವಲ್ಲಿ, ಸಾವು ನೋವುಗಳಿದ್ದಲ್ಲಿ ಸಾವಿರ ಜನರು ನೆರೆವರು. ಇದ್ದವನನ್ನು ಸಾಹೇಬನೆಂದು ಮುಂದೆ ಬಾ ಎಂದು ಕರೆದು ಗೌರವಿಸುವರು. ಅಲ್ಲದೆ, ಉಣಿಸಿ ಉಡಿಸಿ ಛೀ ಎಂದು ಕಳಿಸುವರು. ಇಂತಹ ಮನುಜರು ಸುಜ್ಞಾನಿಯಾದಂತಹ ಮೌನೇಶ್ವರರನ್ನು ಹೇಗೆ ಅರಿತಾರು.

೬೦೦

ಆಕಾರ ಅದಕಿಲ್ಲ ಬೇಕಾದರೆ ಇರುವದು ಸಾಕಾದರೆ
ಹೊರಟು ಹೋಗುವದು ಓಂಕಾರ ಜೀವನವ
ಲೋಕದೊಳು ಪಿಡಿದವರಿಲ್ಲ, ಬಸವಣ್ಣ

ತಾತ್ಪರ್ಯ : ಓಂಕಾರ ತತ್ವವನ್ನು ವಚನ ಸೂಚಿಸುವಂತಿದೆ. ಸತ್ಯ ಮತ್ತು ದೇವರು ಇವಕ್ಕೆ ಆಕಾರವೆಂಬುದಿಲ್ಲ. ನಿರಾಕಾರ ನಿರ್ಗುಣತ್ವವೇ ಸತ್ಯದ ಮೂಲಮಂತ್ರ, ಬೇಕಾದರೆ ಇರುವದು ಬೇಡವಾದರೆ ಹೋಗುವುದು. ಸೃಷ್ಟಿಯ ಜೀವಸತ್ವವಾದ ಬೀಜರೂಪವಾದ ಓಂಕಾರವನ್ನು ಲೋಕದಲ್ಲಿ ಹಿಡಿದವರಿಲ್ಲ. ಎಲ್ಲ ತತ್ವಜ್ಞಾನಿಗಳು ಇಂತಹ ಸತ್ಯವನ್ನು ಹುಡುಕಿಯೇ ಹೈರಾಣಾದವರು. ಕೆಲವರಿಗೆ ದಕ್ಕಿರಬಹುದು, ಕೆಲವರಿಗೆ ಇಲ್ಲದಿರಬಹುದು. ಅವರವರ ಭಾವನೆಯಂತೆ ಅವಿಷ್ಕಾರವಾಗಿರಬಹುದು. ಒಂದು ಘನಾಕೃತಿ ಎಂಬುದು ಅದಕ್ಕಿಲ್ಲ.

೬೦೧

ಆಕಾಶ ಭೂಕಾಂತೆ ಏಕ ಮಾಡಿದ
ಲೋಕಪಾವನ ಪರಬ್ರಹ್ಮ ವಸ್ತುವಿಗೆ
ದೀಕ್ಷೆ ಬೇರುಂಟೆ ಕಡೆಯಲ್ಲಿ ನಾಲ್ಕು ಸ್ಥಳದಲಿ
ಸಾಕ್ಷಿತನಾಗಿರ್ದನು ಗುರುಮೂರ್ತಿ, ಬಸವಣ್ಣ

ತಾತ್ಪರ್ಯ : ಮೂರು ಲೋಕವನು ಒಂದೇ ಮಾಡಿ ಸಲುಹಿದ ಲೋಕಪಾವನ ಮೂರ್ತಿ ಪರಬ್ರಹ್ಮನಿಗೆ ದೀಕ್ಷೆಕೊಡಲು ಸಾಧ್ಯವೇ ಎನ್ನುವ ಮಾತು ಮೌನೇಶ್ವರರು

ಬಾಲ್ಯದಲ್ಲಿ ಜನಿವಾರ ನಿರಾಕರಿಸಿದ ಸಂಗತಿಯನ್ನು ನೆನಪಿಗೆ ತರುತ್ತದೆ. ವಿಶ್ವಸೃಷ್ಟಿಕರ್ತ ಮತ್ತು ನಿಯಾಮಕನಾದ ನಿರಾಕಾರನಾದ ನಿರ್ಗುಣ ಪರಮಾತ್ಮನಿಗೆ ಕಟ್ಟುಪಾಡುಗಳನ್ನು ನಿರ್ದಿಷ್ಟ ಧಾರ್ಮಿಕ ಸಂಕೇತಗಳನ್ನು ತೊಡಿಸುವುದು ಅಭಾಸವೆನಿಸುತ್ತದೆ. ನಾಲ್ಕು ಸ್ಥಲಗಳಿಗೆ ಸಾಕ್ಷಿಭೂತನಾದವನನ್ನು ಸಾಕ್ಷಿಯಾಗಿ ನಿಲ್ಲಿಸುವುದು ಉಚಿತವಲ್ಲ. ಸಾಮಾನ್ಯವಾಗಿ ಷಡುಸ್ಥಲಗಳ ಪರಿಕಲ್ಪನೆ ವೀರಶೈವರಲ್ಲಿ ಚಾಲ್ತಿಯಿದೆ. ನಾಲ್ಕು ಸ್ಥಳಗಳನ್ನು ಮಾತ್ರ ಮೌನೇಶ್ವರರು ಈ ವಚನದಲ್ಲಿ ಹೇಳಿದ್ದಾರೆ. ಅವನ್ನು ಗುರುತಿಸಬೇಕು.

೬೦೨

ಉತ್ತರಕ್ಕೆ ಉತ್ತವ ಕಂಡೆ ಉತ್ತಕ್ಕೆ ಮಾರ ಕಂಡೆ
ಚಿತ್ರದ ಕೆಲಸವಕಂಡೆ ನೆತ್ತರವಕಂಡೆ ನಿಜಕಂಡೆ
ಅಲ್ಲಮರಾಯ ಛತ್ರವಕಂಡೆ, ಬಸವಣ್ಣ

ತಾತ್ಪರ್ಯ :

೬೦೩

ಉರಗ ಭಕ್ಷಕನಿಗೆ ಕ್ಷೀರವ ಎರೆಯಲು ವಿಷವು ತಾ
ಹರಿದು ಹೋಗುವುದೆ ಇಲ್ಲದಲೆ ಶ್ರವಕ್ಕೆ ಖಡ್ಗ
ಹಿಡಿದರೆ ಅಂಜುವದೆ, ಬಸವಣ್ಣ

ತಾತ್ಪರ್ಯ : ಹಾವನ್ನೇ ತಿನ್ನುವವನಿಗೆ ಹಾಲು ಕುಡಿಸಲು ತಿಂದ ವಿಷವು ಹರಿದು ಹೋಗುವುದಿಲ್ಲ. ಹಾಗ ಹೆಣದ ಮುಂದೆ ನಿಂತು ಖಡ್ಗ ತೋರಿಸಿದರೆ ಅದು ಅಂಜಲಾರದು. ಸಾಧನೆಯಿಂದ ಪೂರ್ಣತ್ವ ಪಡೆದ ಅನುಭಾವಿಗೆ ಲೋಕದ ನಿಗ್ರಹಗಳು ಬಾಧಿಸಲಾರವು. ಅಂತಹ ನಿಗ್ರಹಗಳನ್ನು ಗೆದ್ದವ ಯಾವುದಕ್ಕೂ ಹೆದರಲಾರ. ಲೋಕದ ವಿಷಯಾದಿಗಳಲ್ಲಿ ಮುಳುಗಿ ಏಳುವವನಿಗೆ ಜ್ಞಾನಮಾರ್ಗ ಪತ್ಯಯಾಗಲಾರದು.

೬೦೪

ಎತ್ತಿನವರು ಎಮ್ಮೆಯವರು ಕತ್ತೆಯವರು ಕುದುರೆಯವರು
ಉತ್ತರಿಸಿದಂಥ ವಚನವು ಹೊತ್ತಿಗೆಯೊಳಗೆ ಇದ್ದವು
ಅವರ ತೊತ್ತಿನ ಮಗನು ಉತ್ಪೈಸಿದ ವಚನವು
ತುತ್ತು ನುಂಗುವಷ್ಟಕ್ಕೆ ಕುತ್ತಿಗಿ ಹಿಡಿವುತ್ತಿವೆ, ಬಸವಣ್ಣ

ತಾತ್ಪರ್ಯ : ಎತ್ತಿನವರು ಎಮ್ಮೆಯವರು ಕತ್ತೆಯವರು ಕುದುರೆಯವರೆನ್ನುವ ಸಂಗತಿಗಳು ಮೌನೇಶ್ವರ ಸಮಕಾಲೀನ ಸಂದರ್ಭದಲ್ಲಿ ಪ್ರಚಲಿತವಿದ್ದ ಕೊಡೇಕಲ್ಲ

ಬಸವಣ್ಣನ ಪರಂಪರೆ ಎಮ್ಮೆ ಬಸವಣ್ಣ ಮುಂತಾದ ಕಾಲಜ್ಞಾನಿಗಳ, ಅನುಭಾವಿಗಳ ಪರಂಪರೆಗಳನ್ನು ಸೂಚಿಸುತ್ತವೆನಿಸುತ್ತದೆ. ಅಂತಹ ಎಲ್ಲ ತ್ರಿಕಾಲ ಜ್ಞಾನಿಗಳು ಹೇಳಿದ ವಚನಗಳು ಹೊತ್ತಿಗೆಯಲಿ ದಾಖಲಾಗಿ ಉಳಿದಿದ್ದವು. ಅವರ ಪರಂಪರೆಯವನಾದ ಮೌನೇಶ್ವರರು ಹೇಳಿದ ವಚನಗಳು ತುತ್ತು ನುಂಗುವುದರೊಳಗೇ ಕುತ್ತಿಗೆ ಹಿಡಿಯುತ್ತಿವೆ. ಅಂದರೆ ಲಿಖಿತಗೊಳ್ಳುವ ಮೊದಲೇ ಪರಿಣಾಮಕಾರಿಯಾಗಿ ಪರಿಣಮಿಸಿವೆ. ಜಗದ ಅಧರ್ಮದ ಸ್ವರೂಪಕ್ಕೆ ಕನ್ನಡಿ ಹಿಡಿದಿವೆ. ಮಾತು ವಚನವಾಗಿ ದಾಖಲಾದಾಗ ಸ್ಥಾವರವಾಗುತ್ತದೆ. ಅದು ಅನುಭಾವವಾಗಿಯೇ ಉಳಿದಾಗ ಜ್ಯೋತಿಯಾಗುತ್ತದೆನ್ನುವ ಅರ್ಥ ಇಲ್ಲಿನದು.

೬೦೫

ಪಾತಾಳಕ್ಕೆ ಗಾಣ ಭೂತಳಕ್ಕೆ ದೋಟಿ
ನನ್ನಂತೆ ಹಿಡಿದು ನಸುನಗುತ ಲೋಕದ
ಪ್ರೇತಭೂತಗಳ ಬಿಡಬೇಕು, ಬಸವಣ್ಣ

ತಾತ್ಪರ್ಯ : ಈ ದೇಹ ಜ್ಞಾನಾನುಭಾವ ಪಡೆಯಬೇಕಾದರೆ ದೇಹ ಮನಸ್ಸುಗಳಿಗೆ ಅಂಟಿದ ಪ್ರೇತಭಾವವೆಂಬ ನಿಷ್ಕ್ರಿಯತ್ವ ಮತ್ತು ಅಜ್ಞಾನವನ್ನು ವಿಸರ್ಜಿಸಬೇಕು. ಇಲ್ಲಿ ಬಳಕೆಯಾಗಿರುವ ಪಾತಾಳ ಅಂತರಂಗಕ್ಕೂ ಭೂತಳ ಬಹಿರಂಗಕ್ಕೂ ಸಂಬಂಧಿಸಿವೆ. ಭೂಮಿಯ ತಳದಲ್ಲಿರುವ ಸಂಪತ್ತು ಪಡೆಯಬೇಕಾದರೆ ಗಾಣ ಅಥವಾ ಕೊಕ್ಕೆ ಅಗತ್ಯ. ಭೂಮಿಯ ಮೇಲಿನ ವಸ್ತುಗಳನ್ನು ಪಡೆಯಲು ದೋಟಿ, ಜೋಟಿ, ಕೈಕೋಲು ಅಗತ್ಯ. ರೂಪ ಮತ್ತು ಸ್ವರೂಪದಲ್ಲಿ ಎರಡೂ ವಂಕಿಗಳಾದರೂ, ಬಳಕೆಯ ಸಂದರ್ಭ ಮತ್ತು ಕ್ರಿಯೆಗಳು ಭಿನ್ನವಾದಂಥವು. ಹೀಗೆ ಮನುಷ್ಯನ ಮನಸ್ಸಿನಲ್ಲಿ ಅಡಗಿರುವ ಪಿಶಾಚಿಭಾವ ಅಂದರೆ ವಿಕಾರಗಳನ್ನು ಸೂಕ್ಷ್ಮ ಪ್ರಜ್ಞೆಯಿಂದಲೂ ದೇಹಕ್ಕಂಟಿದ ವಿಕಾರಗಳನ್ನು ಸ್ಥೂಲ ಪ್ರಜ್ಞೆಯಿಂದಲೂ ನಿವಾರಿಸಿ ಪೂರ್ಣಜ್ಞಾನಿಯಾಗಬೇಕೆನ್ನುವುದು ವಚನದ ಸಾರವಾಗಿದೆ.

೬೦೬

ಬರಬಂದು ಕೆಡುವುದಕೆ ಗಂಡನೆಂದೆನಿಸುವನು
ಗಂಡಭೇರುಂಡ ಗಜಸಿಂಹನೆಂಬುವ
ಪೆಂಡೇಯನಿಟ್ಟು ನಸುನಗುತ ಅಲ್ಲಮರಾಯ
ದಂಡನಾಯಕನು ಶರಭನು, ಬಸವಣ್ಣ

ತಾತ್ಪರ್ಯ : ಲೋಕಕ್ಕೆ ಒದಗುವ ಆಪತ್ತುಗಳನ್ನು ತಡೆಯಲು ಗಂಡಭೇರುಂಡ ಗಜಸಿಂಹನೆಂಬ ಬಿರುದಿನ ಕಾಲ ಪೆಂಡೇಯ ಧರಿಸಿ(ಗಗ್ಗರ) ನಸುನಗುತ ಅಲ್ಲಮನ ಅವತಾರಿ, ಮೌನೇಶ್ವರರು ಬಂದು ಜಗದ ನಾಶವ ತಡೆದರು.

ಪೆಂಡೆ ಎನ್ನುವುದು ಕಾಲಿನ ದೊಡ್ಡ ಗಗ್ಗರ. ಇದನ್ನು ಇವತ್ತಿಗೂ ಮೋಡಿಕಾರರು (ಮೋಡಿ ಆಟ ಆಡುವ ಸಮುದಾಯದವರು)ಕಾಲಿಗೆ ಹಾಕಿಕೊಂಡು ಪಾಂಚಾಳರ ಮನೆಗೆ ಭಿಕ್ಷಗೆ ಬರುತ್ತಾರೆ. ಇವರು ತಮ್ಮನ್ನು ಪಾಂಚಾಳರ ಶಿಶು ಮಕ್ಕಳೆಂದು ಕರೆದುಕೊಳ್ಳುತ್ತಾರೆ. ಇಂದಿಗೂ ಇವರು ಪಾಂಚಾಳರ ಅನುಮತಿಯಿಲ್ಲದೆ ತಮ್ಮ ಮೋಡಿ ಆಟವನ್ನು ಪ್ರದರ್ಶಿಸುವುದಿಲ್ಲ. ಇಂತಹ ದಂಡನಾಯಕ ಸ್ವರೂಪದ ಮೌನೇಶ್ವರರು ಲೋಕದ ನಾಶ ತಡೆಯಲು ಜನ್ಮವೆತ್ತಿ ಬರುವರು ಎನ್ನುವ ಭಾವ ವಚನದ್ದು.

೬೦೭

ಕನ್ಯೆ ಕಾವೇರಿಯು ಹೆಣ್ಣು ಚಾಮಲದೇವಿ
ಚನ್ನಿಗ ವಿರಕ್ತಯ್ಯ ಹೊರಹೊಂಟ ರುಮ್ಮಿಯ
ಕನ್ಯೆ ತರುವ ದಿನ ಬಂದವು, ಬಸವಣ್ಣ

ತಾತ್ಪರ್ಯ : ಬಹುಶಃ ಕನ್ಯೆಯರ ಅಭಾವವನ್ನು ವಚನ ಸೂಚಿಸುವಂತಿದೆ. ರುಮ್ಮಿ ಅಂದರೆ ಹಣ, ಪೈ. ಅಂದರೆ ಚನ್ನಿಗ ವಿರಕ್ತಯ್ಯನ್ನು ಹೊರ ಹೋಗಿ ತೆರವು ಕೊಟ್ಟು ಕನ್ಯೆಯನ್ನು ತರುವ ದಿನಗಳು ಇನ್ನು ಮುಂದೆ ಬರುವವು ಎನ್ನುವ ಸೂಚನೆ ವಚನದಲ್ಲಿದೆ ಎನಿಸುತ್ತದೆ. ಇಂದಿನ ಭ್ರೂಣಹತ್ಯೆ ಮತ್ತು ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯದ ಸ್ವರೂಪಗಳು ಹೆಣ್ಣು ಸಂತತಿಯ ಕ್ಷೀಣಿಸುವಿಕೆಗೆ ಕಾರಣವಾಗ ಬಹುದಾಗಿದೆ.

೬೦೮

ಗೋದಿ ಕಲ್ಲು ಒರಳಿನಿಂದ ಆದ ಪ್ರಸಾದವು
ಮೇದಿನಿಯೆಲ್ಲ ಉಣಬೇಕು ಲೋಕದೊಳಗಿನ
ಸಕಲ ದೇವರ್ಕರಿಗೆ ನೈವೇದ್ಯ ಅರ್ಪಿಸಬೇಕು
ಬಿರುದಿನ ವಾದ ತರ್ಕಗಳು ನಿಮಗ್ಯಾತಕೆ
ಓದಿದುದೆಲ್ಲ ಬರಿದಯ್ಯ, ಬಸವಣ್ಣ

ತಾತ್ಪರ್ಯ : ವಚನ ಲೌಕಿಕ ಮತ್ತು ಆಧ್ಯಾತ್ಮಿಕವಾದ ಎರಡು ಅರ್ಥಗಳನ್ನು ಹೊಂದಿದೆ. ಲೌಕಿಕ ಅಥವಾ ಭೌತಿಕ ಅರ್ಥದಲ್ಲಿ ಎರಡೂ ಕಲ್ಲುಗಳೇ ಅಲೌಕಿಕ ಮತ್ತು ಅಧ್ಯಾತ್ಮದ ಅರ್ಥದಲ್ಲಿ ಬ್ರಹ್ಮಾಂಡ ಪಿಂಡಾಂಡಗಳನ್ನು ಸಂಲಗ್ನಗೊಳಿಸಿರುವ ಜನಸಮ್ಮುಖ ದೃಷ್ಟಿಯನ್ನು ಕಾಣಬಹುದು. ಬೀಸುವ ಕಲ್ಲು ಮತ್ತು ಒರಳು ಪ್ರಗತಿ ಮತ್ತು ಮಂಥನದ ಸಂಕೇತಗಳು. ಗೋದಿಯನ್ನು ಬೀಸುಕಲ್ಲಿನಲ್ಲಿ ಬೀಸಿ ಹಿಟ್ಟು ಮಾಡಿದಂತೆ ಒರಳಿನಲ್ಲಿ ಕುಟ್ಟಿ ಹುಗ್ಗಿಯನ್ನು ಮಾಡಬಹುದು. ತಿರುಗುವ ಮತ್ತು ಹಣಿಯುವ

ಈ ಕ್ರಿಯೆಗಳು ದೇಹದಂಡನೆ ಹಾಗೂ ಮನಸ್ಸಿನ ಮಂಥನವನ್ನು ಹೇಳುತ್ತವೆ. ಇಂತಹ ಪ್ರಕ್ರಿಯೆಯಿಂದ ಪಡೆದ ಆತ್ಮಜ್ಞಾನದ ಅಡಿಗೆಯನ್ನು ಪ್ರಸಾದ ರೂಪದಲ್ಲಿ ಅಂದರೆ ಗುರೂಪದೇಶದ ಮೂಲಕ ಇಡೀ ಭೂಮಿಯೇ ಉಣಬೇಕು. ದೇವರಿಗೆ ನೈವೇದ್ಯ ರೂಪದಲ್ಲಿ ಮನುಷ್ಯರಿಗೆ ಪ್ರಸಾದ ರೂಪದಲ್ಲಿ ಅರ್ಪಿಸಿ ಉಣಬೇಕು. ಇಂತಹ ಅನುಭಾವದ ಅಡಿಗೆಗೆ ಹಾಗೂ ಊಟಕ್ಕೆ ಬರೆದಿಟ್ಟ ವೇದ ತರ್ಕಗಳು ಅದರ ಓದಿನ ಪಾಂಡಿತ್ಯಗಳ ಅಗತ್ಯವಿಲ್ಲ. ಕ್ರಿಯೆಯೇ ಜ್ಞಾನದ ಮೂಲಶಕ್ತಿ ಅನುಭಾವದ ಆಚರಣೆ ಎನ್ನುವುದು ವಚನದ ಸಾರ.

೬೦೯

ಮುಡಿ ಮುಂಡಿಗಿಯಲ್ಲ ಪೊಡವೆಲ್ಲ ಮಾಡಿತ್ತು
ನಡೆಯತೋರುವನೊಬ್ಬ ಒಡೆಯನಿಲ್ಲ, ಬಸವಣ್ಣ

ತಾತ್ಪರ್ಯ : ಮುಂಡಿಗಿ ಎಂದರೆ ಒಗಟು ಸವಾಲು, ಬೆಡಗು ನಿಗೂಢಾರ್ಥವುಳ್ಳದ್ದು. ಜಗತ್ತಿನಲ್ಲಿ ಎಲ್ಲರೂ ಇಂತಹ ಮುಂಡಿಗೆಗಳನ್ನು ಮಾಡಿಟ್ಟಿರುವರು. ಅವುಗಳನ್ನು ಒಡೆದು ತೋರುವವರು, ಅದರಂತೆ ನಡೆದು ತೋರುವ ಪ್ರಾಜ್ಞರು ವಿರಳವಾಗುತ್ತಿದ್ದಾರೆ ಎಂಬರ್ಥ.

೬೧೦

ನಿರ್ಮಳ ಹೃದಯನು ಹತ್ತುಹನ್ನೆರಡೆಂದಧಮರ ಕಡಿಯಣತ್ತ
ಮರ್ಮವು ತಿಳಿಯದು ಕುಶಲ ಬಸವಲಿಂಗಯೆಂದ
ದಯಹೀನರ ಬುದ್ಧಿಗವನಬಳಿಯ, ಬಸವಣ್ಣ

ತಾತ್ಪರ್ಯ : ಅವಧೂತ ಸ್ವಭಾವವೇ ಒಮ್ಮೊಮ್ಮೆ ಲೋಕದ ಜನತೆಗೆ ವಿಚಿತ್ರವಾಗಿ ಕಾಣುತ್ತದೆ. ನಿರ್ಮಳ ಹೃದಯನೂ ದಯಾಪರನೂ ಆದ ಪರಮಾತ್ಮನು. ಹತ್ತು ಹನ್ನೆರಡು ಎಂದು ಅಧಮರ ಕಡಿಯುವ ಮರ್ಮ ಯಾರಿಗೂ ತಿಳಿಯದು. ದಯ ಹೀನರಿಗೆ, ಮೂರ್ಖರಿಗೆ ಬುದ್ಧಿಗಲಿಸಲು ಇಂತಹ ಅವತಾರ ಎತ್ತಿರಬಹುದು ಎನ್ನುವ ಭಾವ ವಚನದ್ದು.

೬೧೧

ಆಕಾರದಂಗಕ್ಕೆ ನಾಲ್ಕೆಂಟು ಖಿಡ್ಗಗಳು
ಕಾಕು ಜ್ಞಾನಗಳ ವಿಸ್ತರಿಸಿ ತ್ರಿಭುವನದೊಳು
ಪಾಕವಾಗಿಹನು, ಬಸವಣ್ಣ

ತಾತ್ಪರ್ಯ : ದೇಹಕ್ಕೊಂದು ಆಕಾರವುಂಟು. ಆದರೆ ಇದಕ್ಕೆ ನಾಲ್ಕೆಂಟು ಖಿಡ್ಗಗಳುಂಟು ಅಂದರೆ ದೇಹವನ್ನೇ ಅಸ್ಥಿರಗೊಳಿಸುವ ಸಾಧನೆಯನ್ನು ಭಗ್ನಗೊಳಿಸುವ ಅಷ್ಟಮದ

ಗಳಂಥ ಅವಸ್ಥೆಗಳು ಅಂಟಕೊಂಡಿವೆ. ದೇಹದ ಈ ಚೋದ್ಯವನ್ನು ಅರಿಯಲು ಸಮಸ್ಯೆಯಿಂದ ಬಿಡಿಸಿಕೊಳ್ಳಲು ಕೊಂಕುನುಡಿವ ಜನರಿಗೆ ವಿವರಿಸುತ್ತ ತ್ರಿಭುವನದೊಳು ಜ್ಞಾನದ ಜಾಗೃತಿಯನ್ನು ಮೂಡಿಸಿದವರು ಮೌನೇಶ್ವರರು.

೬೧೨

ಇದ್ದಲ್ಲಿ ಇರುವುದಲ್ಲ ಕದ್ದು ಒಯ್ಯುವುದಲ್ಲ
ತಿದ್ದಿ ಮಾಡುವಂಥಾ ವಸ್ತುವಲ್ಲ ಇವು ಮೂರು
ಸಿದ್ಧೇಶ್ವರನೆ ಬಲ್ಲ, ಬಸವಣ್ಣ

ತಾತ್ಪರ್ಯ : ಮನಸ್ಸು, ವಿದ್ಯೆ ಮತ್ತು ಶರೀರದ ಸ್ವಭಾವಗಳ ಕುರಿತು ವಚನ ಗಮನ ಸೆಳೆಯುತ್ತದೆ. ಮನಸ್ಸು ಚಂಚಲವಾದದ್ದು. ಅದು ಒಂದೇ ಕಡೆ ನೆಲೆಗೊಳ್ಳಲಾರದು. ಅದೇ ರೀತಿ ಕಲಿತ ವಿದ್ಯೆಯನ್ನು ಜ್ಞಾನವನ್ನು ಕಳ್ಳರು ಕಾಕರು ಕದ್ದು ಒಯ್ಯಲು ಆಗುವುದಿಲ್ಲ. ಈ ಶರೀರವು ಮಣ್ಣಿನ ಮುದ್ದೆಯಂತೆ ತಿದ್ದಿ ಮಾಡುವ ಪರವಸ್ತುವಲ್ಲ. ಇವುಗಳ ಶಕ್ತಿಯನ್ನು ಸಿದ್ದೇಶ್ವರನೇ ಬಲ್ಲ. ಅಂದರೆ ಮನಸ್ಸು ಮತ್ತು ಶರೀರ, ದೇಹ ಮತ್ತು ಆತ್ಮ ಇವುಗಳ ಅನ್ಯೋನ್ಯ ಅನುಬಂಧವೇ ಸಾಧನೆಗೆ ದಾರಿಯಾಗುತ್ತದೆ. ದೇಹ ಮತ್ತು ಮನಸ್ಸನ್ನು ಅಗಲಿಸಿ ಸಾಧನೆ ಮಾಡಬಾರದು. ಅರಿವು ಮತ್ತು ಕ್ರಿಯೆ ಜ್ಞಾನಾನುಭವದ ವಿಶಿಷ್ಟ ಮಾರ್ಗಗಳು.

೬೧೩

ತಿಳಿದಂಥ ಜ್ಞಾನಿಗೆ ಕೆಳಗೇನು ಮ್ಯಾಲೇನು
ಒಳ ಹೊರಗೇನು ಸಂಕೋಚ ಮಹಾಪ್ರೌಢರಿಗೆ
ಪ್ರಳಯಾಗ್ನಿ ಹಾಗೆ, ಬಸವಣ್ಣ

ತಾತ್ಪರ್ಯ : ಒಳ ಮತ್ತು ಹೊರ ಅಂದರೆ ಅಂತರಂಗ ಮತ್ತು ಬಹಿರಂಗಗಳ ಶುಚಿತ್ವ ಮತ್ತು ಹೊಂದಾಣಿಕೆಯು, ತಿಳಿವಳಿಕೆಯ ಮೂಲ ಮೆಟ್ಟಿಲು. ಈ ಒಳ ಹೊರಗಿನ ಭೇದ ಹಾಗೂ ಬಾಹ್ಯ ಗುಣಗಳನ್ನು ತಿಳಿದು ಅಳಿದವನೇ ಜ್ಞಾನಿಯಾಗುತ್ತಾನೆ. ಅಂತಹವನಿಗೆ ಒಳ ಮತ್ತು ಹೊರಗು, ಶ್ರೇಷ್ಠ ಮತ್ತು ಕನಿಷ್ಠ ಎನ್ನುವ ಭೇದ ಗುಣಗಳು ನಗಣ್ಯ. ಇಂತಹ ಅಜ್ಞಾನಿಗಳಿಗೆ, ಅರಿವಿಲ್ಲದವರಿಗೆ ಜ್ಞಾನಿಗಳು ಪ್ರಳಯದ ಭಯವಾಗಿ ಕಾಡುತ್ತಾರೆ.

೬೧೪

ಆನೆಯ ಒಳನಡುವ ಆಯುಧವ ಮಾಡಿದ
ಜಾಣನ ಮೂಗಿಗಿದು ಸುಣ್ಣವೆಂಬಂಥ
ವಾಲಿಯ ತಂದ, ಬಸವಣ್ಣ

ತಾತ್ಪರ್ಯ :

೬೧೫

ಜಕ್ಕಮ್ಮ ಎನುತಲಿ ಜಲಧಿಯ ಹೊಕ್ಕನು
ದಕ್ಕಮ್ಮಯನಗೆ ಎನುತಲಿ ಶರಣೆಂದು
ಚಿಕ್ಕನು ಚನ್ನಬಸವಯ್ಯ ಶರಣೆನಲಿಕ್ಕೆ
ಉಕ್ಕೂತ ಬಂದಾಳು ಜಲದಮ್ಮ, ಬಸವಣ್ಣ

ತಾತ್ಪರ್ಯ : ಜಲದ ಉದ್ಭವ ಸಂಗತಿಯನ್ನು ವಚನ ಹೇಳುವಂತಿದೆ. ಮಳೆ ಅಥವಾ ನೀರು ವಿಶ್ವಕರ್ಮರ ಅಧಿದೇವತೆ. ಮಳಿಯಪ್ಪ ಮೌನೇಶ್ವರರ ಶಿಷ್ಯನ(ಗಂಗಪ್ಪಯ್ಯ) ಶಿಷ್ಯ. ಪೌರಾಣಿಕ ವ್ಯಕ್ತಿಗಳಾದ ಇಂದ್ರ ಮತ್ತು ಪರ್ಜನ್ಯ ವಿಶ್ವಕರ್ಮ ಗೋತ್ರದ ವರು. ಹೀಗಾಗಿ ಅಂತ ಕುಲದಲಿ ಜನಿಸಿದ ಮೌನೇಶ್ವರರು ಜಲದ ಅಭಾವ ತಲೆದೋರಿದ್ದಾಗ ಸ್ವತಃ ಜಲಪ್ರವೇಶ ಮಾಡಿ ಜಲೋದ್ಭವಕ್ಕೆ ಕಾರಣವಾಗಿರಬಹುದು. ಜಕ್ಕಮ್ಮ ಹಾಗೂ ಯಕ್ಷಿಯ ನೆನೆವುತ್ತ ದಕ್ಕಮ್ಮ–ನನ್ನ ವಶವಾಗು, ಕೃಪೆತೋರು ಎಂದು ಬೇಡಿಕೊಂಡಾಗ ಜಲದಮ್ಮ ಉಕ್ಕುತ ಮೇಲೆ ಬಂದಳು ಎಂಬುದು ಸಾರಾಂಶ. ಲಕ್ಷ್ಮೇಶ್ವರದಲ್ಲಿಯೂ ಮೌನೇಶ್ವರರು ಜಲಪವಾಡ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

೬೧೬

ಆಯವುಳ್ಳ ಮರ ಕಡಿದು
ಛಾಯದ ಬೊಂಬೆಯ ಮಾಡಿ
ಆಯ ಆಯದಲಿ ಕುಣಿದಾಡಿಸುವಂಥ
ಅಲ್ಲಮರಾಯ ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಬಡಿಗಿ ಅಂದರೆ ಮಯನು ನಿರ್ಮಿಸಿ ಕುಣಿಸಿದ ಸೂತ್ರದ ಗೊಂಬೆಯ ವಿಚಾರ ಇಲ್ಲಿದೆ. ಬಹುಶಃ ದೇಹ ನಿರ್ಮಿತಿಯ ಕುರಿತು ಮೌನೇಶ್ವರರು ಹೇಳಿದಂತಿದೆ. ಸೃಷ್ಟಿಕರ್ತನಾದ ಬಡಿಗಿಯು ಯೋಗ್ಯವಾದ ಮರ ಕಡಿದು ತನ್ನ ಛಾಯರೂಪದ ಅಂದರೆ ತನ್ನಂತೆ ಇರುವ ಗೊಂಬೆಗಳ ಮಾಡಿ ಅದನ್ನು ಆಯದಲ್ಲಿ ಅಂದರೆ ಪ್ರಮಾಣಭೂತವಾದ ತಾಳಕ್ಕೆ ತಕ್ಕಂತೆ ಕುಣಿಸಲು ಅಲ್ಲಮನ ಅವತಾರಿ ಮೌನೇಶ್ವರರು ಧರೆಗಿಳಿದು ಬಂದರೆಂಬುದು ಅರ್ಥ. ಈ ಶರೀರವೆಂಬ ಗೊಂಬೆಯ ಮಾಡಿ ಅದನ್ನು ಚಿಚಿತ್ಯಕ್ಕೆ ತಕ್ಕಂತೆ ಆಡಿಸಿದ ಬಗೆ ಇಲ್ಲಿದೆ. ಆಡಿಸುವವ ಶಿವ, ಆಡುವವ ಮನುಷ್ಯ... ಮನುಷ್ಯನೊಂದು ಸೂತ್ರದಗೊಂಬೆ.

೬೧೭

ಹದಿನೆಂಟು ಮಣವ ಹಿಡಿದು ಕಂಜರವ ಮಾಡಿದ
ಬಡಿಗಿಯ ಮೂಗಿಗಿದು ಸುಣ್ಣವೆಂಬಂಥ

ಬಿರುದಿನ ಚೀಟು ಹಿಡಿದು ತಾನು ನಸುನಕ್ಕು ನೋಡುವ
ವರವಿಯ ದೊರೆಯು ಘನಲಿಂಗ, ಬಸವಣ್ಣ

ತಾತ್ಪರ್ಯ :

೬೧೮

ಮದವೇರಿದವರಿಗೆ ಕರದೊಮ್ಮೆ ಪಟ್ಟವಕಟ್ಟಿ
ತಿರುಗಿದವನ ಮೂಗಿಗಿದು ಸುಣ್ಣವೆಂದಿನ್ನು
ಕರೆದು ಹೇಳಿದಾತ ಕಂಡು ನಸುನಕ್ಕ
ವರವಿಯ ದೊರೆಯು ಘನಲಿಂಗ, ಬಸವಣ್ಣ

ತಾತ್ಪರ್ಯ : ಅಧಿಕಾರದ ಹಪಾಹಪಿ ಇರುವವರನ್ನು ಕರೆದು ಪಟ್ಟವಕಟ್ಟಿ ಜವಾಬ್ದಾರಿ ವಹಿಸಿಕೊಟ್ಟ ಪ್ರಸಂಗಗಳು ಮೌನೇಶ್ವರರ ಬದುಕಲ್ಲಿ ಎರಡು ಮೂರು ಸಲ ನಡೆದಿವೆ. ಕಾರಣ ಆಳುವ ದೊರೆ ಪ್ರಜಾಪಾಲಕನಾಗಿರಬೇಕು. ಅದು ಬಿಟ್ಟು ಅಧಿಕಾರ ದುರುಪಯೋಗ ಮಾಡಿಕೊಳ್ಳುವುದೆಂದರೆ ಅದು ಸುಣ್ಣದೊಂದಿಗೆ ಸರಸವಾಡಿದಂತೆ. ಸುಣ್ಣದ ಬಳಕೆ ಉಪಕಾರಿಯೂ ಹೌದು, ಅಪಕಾರಿಯೂ ಹೌದು. ಅಧಿಕಾರ ಎನ್ನುವುದು ಸುಣ್ಣವಿದ್ದಂತೆ, ಅದನ್ನು ಪ್ರಮಾಣಭೂತವಾಗಿ ಬಳಸಿರಿ ಹುಚ್ಚರಿರ್ಯಾ ಎಂದು ಹಿತವಚನ ಹೇಳಿದ ಪ್ರಸಂಗವಿಲ್ಲಿ ಕಾಣುತ್ತದೆ.

೬೧೯

ಹರಕೊಟ್ಟ ಶಾಪದಿಂದ ಉರಿದು ಹೋದ ಮನ್ಮಥ
ಉರಗನ ಹೆದೆಗಟ್ಟಿ ತ್ರಿಪುರವನು ಯೆಸೆಯಲು
ಉರಗನ ದೇಹ ಹರಿದು ಮೇಲೆ ಬರಿಯ ಬಿಲ್ಲನೆ ಹೊತ್ತು
ತಿರಿದುಂಡ ಮೈಲಾರ, ಬಸವಣ್ಣ

ತಾತ್ಪರ್ಯ : ಕಾಮದಹನ ಪ್ರಸಂಗ, ತ್ರಿಪುರದಹನ ಮತ್ತು ಮೈಲಾರ ಪರಂಪರೆಯ ಸಂಗತಿಗಳನ್ನು ವಚನ ಸೂಚಿಸುತ್ತದೆ. ಶಿವನ ತಪೋಭಂಗ ಮಾಡಿದ್ದಕ್ಕಾಗಿ ಸಿಟ್ಟಿಗೆದ್ದ ಶಿವ ಕಾಮನನ್ನು ಸುಟ್ಟು ಬಿಡುತ್ತಾನೆ. ಹಾವನ್ನೇ ಹೆದೆ ಏರಿಸಿ ತ್ರಿಪುರವನ್ನೆ ಸಂಹಾರ ಮಾಡಲು ಬಿಲ್ಲಿನ ಹಗ್ಗ ಎಳೆದಾಗ ಹಾವಿನ ಹಗ್ಗ ಹರಿದು ಹೋಗುತ್ತದೆ. ಇಂತಹ ಹರಿದ ಮತ್ತು ಮುರಿದ ಬಿಲ್ಲನ್ನೇ ಹೊತ್ತು ಶಿವನ ಮತ್ತೊಂದು ರೂಪವಾದ ಮಲ್ಲಾರಿ, ಮೈಲಾರಿ ತಿರುದುಂಡು ಬದುಕಬೇಕಾಯಿತು. ಶಿವನ ಒಂದು ರೂಪವೇ ಮೈಲಾರ ಎನ್ನುವುದನ್ನು ವಚನ ಸೂಚಿಸುವಂತಿದೆ.

೬೨೦

ಕಡಲ ಸಮುದ್ರ ನುಡಿಯನೆಲ್ಲವ ತನ್ನ
ಒಡಲೊಳಗೆ ತಾಳಿದಾತನ ಪರಿಹಾಗೆ

ಬ್ರಹ್ಮಾಂಡದ ಒಡೆಯ ಊಳಿಗನಾದ
ಬಸವಯ್ಯನಲ್ಲದಲೆ ನಡೆವವರೊಬ್ಬರಿಲ್ಲ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಕಡಲ ಸಮುದ್ರ ಏನೆಲ್ಲವನ್ನು ತನ್ನ ಒಡಲೊಳಗಿಟ್ಟುಕೊಂಡವ ಶೇಷ ಶಯನನಾದ ವಿಷ್ಣು. ಅವನಂತೆಯೇ ಬ್ರಹ್ಮಾಂಡವನ್ನೇ ತನ್ನೊಡಲೊಳಗಿಟ್ಟುಕೊಂಡರೂ ಬ್ರಹ್ಮಾಂಡದ ಆಳು ಮಗನಾಗಿ ದುಡಿದು ಪಾಲಿಸುವ ಸರ್ವಶಕ್ತನೂ ಶ್ರಮಿಕನೂ ಆದ ಬಸವಣ್ಣನಿಗೆ ಇನ್ನೊಬ್ಬರು ಸರಿಯಾಗಲಾರರು. ಸೃಷ್ಟಿಸಿದರೆ ಸಾಲದು, ಸಲಹುವುದು ಕೂಡ ಹುಟ್ಟಿಸಿದವನ ಕರ್ತವ್ಯವೆಂಬ ಸೂಕ್ಷ್ಮ ಭಾವ ಇಲ್ಲಿದೆ.

೬೨೧

ನೀಲಕಿಂತಲಿ ಮುತ್ತು ಧರಣಿಗೆ ಘನವಲ್ಲ
ಕೀಲು ಬಲ್ಲವರು ಪರಾಮರ್ಶಿಸಿ ಬ್ರಹ್ಮಕ್ಕೆ
ಮೀರಿದ ವಸ್ತು ಗುರುವೆಂದು, ಬಸವಣ್ಣ

ತಾತ್ಪರ್ಯ : ಜಗತ್ತಿನಲ್ಲಿ ಮುತ್ತು ರತ್ನಗಳಂತಹ ಬೆಲೆಬಾಳುವ ವಸ್ತುಗಿಂತ ಮೀರಿದ್ದು ಗುರುವಿನ ಪರಿಕಲ್ಪನೆ ಎನ್ನುವುದು ವಚನದ ಭಾವ. ನೀಲಿರತ್ನವು ರತ್ನಗಳಲ್ಲೇ ಶ್ರೇಷ್ಠ. ಅದೇ ರೀತಿ ಮುತ್ತು ತನ್ನ ಶುಭ್ರತೆಯಿಂದ ಆಕರ್ಷಣೆ ಪಡೆದಿರುವಂಥದ್ದು. ಇನ್ನೊಂದರ್ಥದಲ್ಲಿ ನೀಲಿ ಆಕಾಶವೆಂದರೆ ಬಯಲು, ಶೂನ್ಯತ್ವ ಮುತ್ತು ನಿರ್ಮಲತೆ ನಿಷ್ಕಳಂಕತೆ ಅಂದರೆ ಪರಿಪೂರ್ಣತ್ವದ ಸಂಕೇತ. ಧರಣಿ ಮತ್ತು ಪರಬ್ರಹ್ಮನಿಗಿಂತಲೂ ಮಿಗಿಲು ಗುರುವು. ಗುರುವಿಗಿಂತ ದೊಡ್ಡವಸ್ತು ಈ ಲೋಕದಲ್ಲಿದ್ದರೆ ಕೀಲು ಬಲ್ಲವರು ಪರಾಮರ್ಶಿಸಿ ನೋಡಬಹುದು ಎನ್ನುವುದು ವಚನದ ಸಾರ.

೬೨೨

ಮಾತು ಮರುಳು ಹಿತ ತಿರಳು
ಪತಿ ಬಂದದೆ ದೈವ ಸಹಜ ಸನ್ಮತ
ಬೀಜದ ಕರ್ತರು ವಾಜಿ ಉಳ್ಳಾತನೆ ಒಡೆಯ
ಬಾಜಿಗಾರರ ಮಾತು ಭೈರೂಪ, ಬಸವಣ್ಣ

ತಾತ್ಪರ್ಯ : ಸಂತನ ಸ್ವರೂಪವನ್ನು ವಚನ ಸೂಚಿಸುವಂತಿದೆ. ಒಂದು ರೀತಿ ಮೌನೇಶ್ವರರು ತನ್ನ ಸಂತ ಸ್ವರೂಪವನ್ನೇ ಹೇಳಿಕೊಂಡಂತಿದೆ. ಮಾತು ಅಂದರೆ ಹೊರನೋಟದಲ್ಲಿ ಹುಚ್ಚನಂತೆ ಕಾಣುವ, ತನ್ನ ಪೂರ್ಣತ್ವದಿಂದಾಗಿ, ಮನಸ್ಸಿಗೆ ಹಿತ ನೀಡುವ, ಮುದ ನೀಡುವ ಗುರುವನ್ನೆ ದೈವವೆಂದು ಸ್ವೀಕರಿಸಿದ, ಓಂಕಾರವೆಂಬ ಬೀಜಮಂತ್ರದ ಕರ್ತೃ ಹಾಗೂ ಶಕ್ತಿ ಚೈತನ್ಯಯುಳ್ಳವನೇ ಒಡೆಯನಾಗುತ್ತಾನೆ. ಪರಿಪೂರ್ಣ ಜ್ಞಾನಿಯಾದವನೇ ಸಂತ ಮತ್ತು ಅನುಭಾವಿ ಎಂದೆನಿಸಿಕೊಳ್ಳುತ್ತಾನೆ.

ಸುಮ್ಮನೆ ಹುಸಿಯಿಂದ ಬೊಬ್ಬಾಟ ಮಾಡುವ, ಸದ್ದು ಮಾಡುವ ವೇಷ ಡಂಭಕರು ಎಂದೂ ಜ್ಞಾನಿಗಳಾಗಲಾರರು. ಅವರ ವ್ಯಕ್ತಿತ್ವವೇ ಹುಸಿಯಾಗಿರುತ್ತದೆ.

೬೨೩

ಮೇಟಿ ಮಾನ್ಯವನುಂಡು ನೀಟಾದೆನೆಂದರೆ
ಬ್ಯಾಟೆ ಗಂಡೆರಳೆ ಜನಸಿದ ತನ್ನ ಬಾಲದಲಿ
ಆಟವ ಆಡಿಸದೆ ಬಿಡದೆಂದ, ಬಸವಣ್ಣ

ತಾತ್ಪರ್ಯ : ಒಡೆಯನ ಸೇವೆಯಿಂದ ಪಡೆದ ಮಾನ್ಯದ ಹೊಲದ ಫಲವನ್ನು ಉಂಡು ನೀಟಾದೆನೆಂಬುವರು. ಅಂದರೆ ಶುದ್ಧ ಬದುಕು ಕಳೆದೆನೆಂದು ತೃಪ್ತಿ ಪಡುವರು. ಆದರೆ ಬ್ಯಾಟೆಗೆಂದು ಬೆನ್ನತ್ತಿ ಹೋದ ಗಂಡು ಜಿಂಕೆ ತನ್ನ ಬಾಲದ ಚುರುಕಿನಿಂದಾಗಿ ನಿಮ್ಮ ಓಡಾಡಿ ದಣಿಸದೆ ಬಿಡಲಾರದು. ಅದೇ ರೀತಿ ಆಯತಾಗಿ ಬಂದ ಯಾವ ವಸ್ತುವೂ ಉಪಭೋಗಕ್ಕೆ ಅರ್ಹವಲ್ಲ. ಕಾಯಕದಿಂದಲೇ ಅದನ್ನು ಪಡೆದು ಉಣಬೇಕು ಎನ್ನುವ ಭಾವ ಇಲ್ಲಿರಬಹುದು.

೬೨೪

ಸೂತಕನಾಸ್ತಿ ಶೂದ್ರಗೋತ್ರವನಾಸ್ತಿ ಗೋಳಕ ಶಾಸ್ತ್ರನಾಸ್ತಿ
ಸಾಮಗಾರ ವೇದನಾಸ್ತಿ ಮಾದಿಗ ಕುಲನಾಸ್ತಿ
ಕಲಮ ಪಂಚನಾಸ್ತಿ ಪರನಾರಾಯಣನಾಸ್ತಿ, ಬಸವಣ್ಣ

ತಾತ್ಪರ್ಯ : ಜಾತಿ ಸೂತಕಗಳ ವಿನಾಶದ ಸಂಗತಿಗಳನ್ನು ವಚನ ಸೂಚಿಸುವಂತಿದೆ. ಸೂತಕ ಅಂದರೆ ಮುಟ್ಟು ಹುಟ್ಟು ಸಾವಿನಿಂದ ಬರುವ ಮೈಲಿಗೆಗಳು. ನಾಸ್ತಿ ಎಂದರೆ ಸುಳ್ಳು. ಅದೇ ರೀತಿ ಸ್ಪೃಶ್ಯ ಅಸ್ಪೃಶ್ಯ ಕಲ್ಪನೆಗಳು, ಗೋತ್ರ, ಶಾಸ್ತ್ರಗಳು, ಮಾದಿಗ ಸಮಗಾರ ಹೊಲೆಯ ಎನ್ನುವ ಕುಲ ಭೇದಗಳು ಕೃತಕವಾದಂಥವು. ಇವುಗಳ ಅಧಿದೇವತೆ ಎನ್ನುವ ಪರನಾರಾಯಣನೊಬ್ಬ ಇರುವುದು ಸುಳ್ಳು. ಇವೆಲ್ಲ ಪುರೋಹಿತಶಾಹಿಗಳು ನಿರ್ಮಿಸಿದ ಅಸಮಾನತೆಗಳು. ಮನುಷ್ಯನ ಶೋಷಣೆಗೆ ಕಾರಣವಾಗುವ ಇವು ಜೀವ ವಿರೋಧಿ ಸಂಗತಿಗಳಾಗಿವೆ. ಮೂಲತಃ ಇವು ಇಲ್ಲ ಎಂಬುದು ಮೌನೇಶ್ವರರ ಅಭಿಮತವಾಗಿದೆ.

೬೨೫

ಸೀತೆಯಿಂದ ಶ್ರೀರಘುನಾಥ ರಾಮಗೆ ಅಳುಕು
ಖ್ಯಾತಿಯಾಯಿತು ದ್ವಾಪಾರದಲಿ ಅಂಜನಿಯ ಸುತನ
ಕೋತಿಯ ಮಾರ್ಬಲವು, ಬಸವಣ್ಣ

ತಾತ್ಪರ್ಯ : ಸೀತೆಯ ಸೆರೆ ಬಿಡಿಸುವಲ್ಲಿ ಕೋತಿಗಳ ಸೈನ್ಯ ವಹಿಸಿದ ಪಾತ್ರವನ್ನು ವಚನ ಹೇಳುವಂತಿದೆ. ಸೀತಾಪಹರಣ ರಾಮನ ಧೀಮಂತಿಕೆಯನ್ನು, ಪೌರುಷವನ್ನೇ ಅಲುಗಾಡಿಸಿತು. ಇಂತಹ ಸಂಕಟದಲ್ಲಿ ರಾಮನಿಗೆ ನೆರವಾಗಿ ಸೀತೆಯನ್ನು ಶೋಧಿಸಿ ರಾವಣನ ಸೋಲಿಗೆ ಕಾರಣರಾದವರು ಸುಗ್ರೀವ ಹನುಮಂತರಂತಹ ವಾನರ ಸೈನ್ಯದವರು. ಅಂಜನೇಯನ ತಾಯಿ ಅಂಜನಾದೇವಿಯು ದೀರ್ಘತಮಸ್ ಗೌತಮ ಮತ್ತು ಅಹಲ್ಯೆಯರ ಮಗಳು. ರಾಮಾಯಣ ನಡೆದದ್ದು ತ್ರೇತಾಯುಗದಲ್ಲಿ. ಅತ್ಯಂತ ಪ್ರಖ್ಯಾತ ಪ್ರಸಂಗವಾಗಿ ಜನಪ್ರಿಯತೆಗಳಿಸಿದ್ದು ಅದು ಹೆಸರಿಗೆ ಬಂದದ್ದು ದ್ವಾಪಾರದಲ್ಲಿ ಎನ್ನುವ ಆಶಯ ವಚನದ್ದಾಗಿರುವಂತಿದೆ.

೬೨

ಕಿಡಿಗಣ್ಣ ಶಿವನಿಂಗೆ ಮಡದಿಯರೀರ್ವರು
ಒಡಲಡಿಯವನ ಕರ್ಣದಲಿ ಇಡುವವನ ಆಲಯವು
ಸುಡುಗಾಡಿನ ಸುಖವೇನು, ಬಸವಣ್ಣ

ತಾತ್ಪರ್ಯ : ಶಿವನ ಸ್ಮಶಾನವಾಸಿ ಚಿತ್ರವನ್ನು ವಚನ ರೂಪಿಸುವಂತಿದೆ. ಕಿಡಿಗಣ್ಣ ಶಿವನಿಗೆ ಇಬ್ಬರು ಹೆಂಡಂದಿರು. ಮುಡಿಯ ಗಂಗೆ ಮತ್ತು ತೊಡೆಯ ಗೌರಿ. ಇಂತಹ ಶಿವನು ಉರಗಾಭರಣನು. ಕೊರಳಿಗೆ ಮತ್ತು ಕಿವಿಗೆ ಒಡಲಡಿಯವ ಅಂದರೆ ಹೊಟ್ಟೆ ಕೆಳಗೆ ಮಾಡಿ ನಡೆಯುವವ ಅಂದ್ರೆ ಹಾವು, ಹಾವನ್ನೆ ಕಿವಿಯಾಭರಣ ವನ್ನಾಗಿಸಿಕೊಂಡವನ ಆಲಯವೆಂದರೆ ಸುಡುಗಾಡು. ಸ್ಮಶಾನವು ಶಿವನ ವಾಸಸ್ಥಾನ. ತ್ರಿಮೂರ್ತಿಗಳಲ್ಲಿ ಇಬ್ಬರು ಸುಖದ ಸುಪ್ಪತ್ತಿಗೆಯಲ್ಲಿದ್ದರೆ, ಶಿವ ಮಾತ್ರ ಯಾವತ್ತೂ ಬಡವನೆ.

೬೨

ಅಸಭ್ಯ ಪಶುವನು ತಿಂದೆ ವಿಷವು ಖಾರವು ತಿಂದೆ
ಅಸ್ತಿಯನೆಲ್ಲ ಮುರಿದು ತಿಂದೆ ಪ್ರಭುರಾಯ
ಮಸಣವಂಟಿಕೆಯಲ್ಲವೆ ಎನ್ನ ಶರೀರವು, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ಸ್ವ ವಿಮರ್ಶನ ಗುಣವನ್ನಿಲ್ಲಿ ಕಾಣಬಹುದು. ಅಸಭ್ಯ ಅಥವಾ ಅಶುಭ ಪಶುವಿನ ಎಲುಬುಗಳನ್ನೆಲ್ಲ ಮುರಿದು ತಿಂದೆ ಎನ್ನುವಲ್ಲಿ ದೇಹಕ್ಕಂಟಿದ ಮಾಯಾ ಮಲಗಳನ್ನು ಅರಿಷಡ್ವರ್ಗಗಳನ್ನು ಜಯಿಸಿ ಜ್ಞಾನಿಯಾದೆ. ಅಂತಹವನ ಶರೀರವು ಬಯಲ ಸದೃಶ್ಯವಾದುದು. ಬಯಲೆಂದರೆ ಶೂನ್ಯ. ಏನಿಲ್ಲವೋ ಎಲ್ಲವೂ ಇರುವ, ಎಲ್ಲವೂ ಇದ್ದೂ ಏನಿಲ್ಲದಂಥ ಸ್ಥಿತಿ. ನಿರಂಜನತ್ವದ ಹಾದಿ ಎಂಬುದಾಗಿದೆ.

೮

ಕಾಲಜ್ಞಾನ

೬೨೮

ಕಾಲಜ್ಞಾನವ ತಂದ ಕಡೆಮೊದಲಿಗೆ ಹಾಸ್ಯದ ಮಾತಲ್ಲ
ಹುಚ್ಚ ಮೋನಯ್ಯ ಹೇಳಿದ ಮಾತು ಮೆಚ್ಚುವರುಂಟೆ
ಅಲ್ಲಮನ ಮನೆಯ ಹುಚ್ಚ ನಾಯಿ ಹೇಳಿದ ಮಾತು
ಮೆಚ್ಚಲಿ ಬೇಡ ಧರೆಯಲ್ಲಿ ಕಟ್ಟು ಕಟ್ಟೆಂದರೆ ಕಟ್ಟುವರುಂಟೆ
ಪಟ್ಟಗುಡುಮ ಮೋನಯ್ಯನ ಗುಡಿಯ ಕಟ್ಟುವರುಂಟೆ
ರೊಕ್ಕವನೆ ಕೊಟ್ಟು ಕಲ್ಲನೆ ಇಟ್ಟು ತಟ ತಟನೆ
ಕಟ್ಟೆನೆಂದರೆ ಕಟ್ಟುವರೆ, ಎನ್ನಳವಲ್ಲ
ಅಲ್ಲಮನಾಟವು ಕಾಲಜ್ಞಾನಕ್ಕೆ ತಂದ ಹೌಸೇದ ಪುತ್ರನ
ನಿರ್ಮಿಸಿ ಇಟ್ಟಂಥ ಗುರುವಿನ ಗುರುತವನರಿಯರು, ಬಸವಣ್ಣ

ತಾತ್ಪರ್ಯ : ಇದು ಕಾಲಜ್ಞಾನವನ್ನು ಮತ್ತು ಅಂತಹ ಶಕ್ತಿಯನ್ನು ದಯಪಾಲಿಸಿದ ಅಲ್ಲಮ ಪ್ರಭುವನ್ನು ಕೊಂಡಾಡುವ ವಚನ. ಕಡೆ ಮೊದಲಿನ ಆದಿ ಅಂತ್ಯದ ವಿಷಯಗಳ ಕಾಲಜ್ಞಾನವನ್ನು ಮೌನೇಶ್ವರರು ಹೇಳುತ್ತಿದ್ದಾರೆ. ಇದು ಹುಡುಗಾಟದ ಮಾತಲ್ಲ. ಸಾಮಾನ್ಯ ಹುಚ್ಚನಂತಿರುವ ನಾನು ಹೇಳಿದ್ದರೆ ಜನ ಮೆಚ್ಚುತ್ತಿರಲಿಲ್ಲ. ಆದರೆ ನಾನು ಅಲ್ಲಮ ಪ್ರಭುವಿನ ಅನುಭಾವ ಪರಂಪರೆಯ ನಿಯತ್ತಿನ ಮನುಷ್ಯ. ಆ ಗುರುವು ಹೇಳಿಸಿದಂತೆ ನಾನು ಹೇಳುತ್ತೇನೆ, ಜನರು ಮೆಚ್ಚಲಿ ಬಿಡಲಿ. ರೊಕ್ಕವನ್ನು ಕೊಟ್ಟು ಕಲ್ಲುಗಳನ್ನು ಜೋಡಿಸಿ ಕಟ್ಟು ಕಟ್ಟು ಎಂದರೆ ನಾನೇನು ಕಟ್ಟಬಲ್ಲೆ ಅಥವಾ ಸಾಧಾರಣ ಮೋನಪ್ಪಯ್ಯನ ಕೈಯಲ್ಲೇನಿದೆ. ದೇಹವನ್ನೇ ನಾನು ದೇವಾಲಯದಂತೆ ನಿರ್ಮಾಣ ಮಾಡಿದ್ದೇನೆಂದರೆ ಅದು ಗುರುದೇವ ಅಲ್ಲಮ ಪ್ರಭುವಿನ ಕೃಪೆ. ತನ್ನ

ಪ್ರೀತಿಯ ಮಗನನ್ನು ಆತ ಕಾಲಜ್ಞಾನ ಹೇಳುವಂಥ ವಿಶೇಷ ಶಕ್ತಿಯುಳ್ಳವನನ್ನಾಗಿ ರೂಪಿಸಿದ್ದಾನೆ. ಆ ಗುರುವಿನ ಸಾಮರ್ಥ್ಯವನ್ನು, ಮಹಿಮೆಯನ್ನು ಸಾಮಾನ್ಯ ಜನರು ಅರಿಯಲಾರರು.

೬೨೯

ಬೀಜಕ್ಕೆ ಮೊದಲಿಲ್ಲ ಬಿತ್ತಲಿಕ್ಕೆ ಹದವಿಲ್ಲ
ಕಟ್ಟೇನೆಂದರೆ ಬಸವನಿಲ್ಲ, ಮರ್ತ್ಯಕ್ಕೆ
ಸುಟ್ಟು ಹೋಗುವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಇದು ಮುಂದೆ ಭೀಕರ ಬರಗಾಲದ ಬರುವುದರ ಸೂಚನೆಯನ್ನು ತಿಳಿಸುತ್ತದೆ. ಮಳೆಗಾಲ ಸರಿಯಾಗಿಲ್ಲದೆ ಹೊಲವು ಬಿತ್ತಲು ಹದವಾಗುವುದಿಲ್ಲ. ಕೂಡಿಟ್ಟ ಬಿತ್ತುವ ಬೀಜಗಳು ಇಲ್ಲವಾಗುತ್ತವೆ. ಕಟ್ಟಿ ಬೇಸಾಯ ಮಾಡಬೇಕೆಂದರೆ ಎತ್ತುಗಳು ಇಲ್ಲ, ಎಂದರೆ ಅವುಗಳನ್ನೂ ಮೇವು ಇಲ್ಲದ್ದಕ್ಕೋ, ಹೊಟ್ಟೆ ಹೊರೆಯಲಿಕ್ಕೋ ರೈತ ಮಾರಿಕೊಂಡಿರಬಹುದು. ಭೂಮಿಯೇ ಸುಟ್ಟು ಹೋಗು ವಂತಹ ಭಯಂಕರವಾದ ಕೆಟ್ಟ ದಿನಗಳು ಬಂದಾವು ಎಂದು ಮೌನೇಶ್ವರರು ಎಚ್ಚರಿಸುತ್ತಾರೆ. ಇಂದಿನ ವೈಜ್ಞಾನಿಕ ಶೋಧಗಳು ಹೇಳುವ ಪರಿಸರ ಮಾಲಿನ್ಯ ಹಾಗೂ ಅದರ ನಾಶ, ಭೂಮಿಯ ಓಝೋನ್ ಪರೆಯಲ್ಲಿ ಆಗುತ್ತಿರುವ ಅಹಿತಕರ ನಡೆಗಳು ಭೂಮಿಯ ತಾಪಮಾನವನ್ನು ಹೆಚ್ಚಿಸುತ್ತಿವೆ. ಆ ಕಾರಣದಿಂದ ಮಳೆ ಬೆಳೆ ಇಲ್ಲದೆ ಜನ ಕಂಗಾಲಾಗು ತ್ತಿರುವ ಸಂಗತಿಗಳು ಮೇಲಿನ ಮಾತನ್ನು ಪುಷ್ಟೀಕರಿಸುತ್ತವೆ.

೬೩೦

ವಾಣಿಯೊಳು ಹೊಕ್ಕು ವಾಣಿ ಮಾತಾಡಬಹುದು
ಜಾಣ ಫಿರಂಗೇರು ಬರುವಾಗ, ಪ್ರಾಣ ನಿಲ್ಲುವುದು
ಕಡುಕಷ್ಟ ಕಾಣಾ, ಬಸವಣ್ಣ

ತಾತ್ಪರ್ಯ : ಮಾತುಗಳನ್ನು ಬೇಕಾದಷ್ಟು ಮಾತಾಡಬಹುದು. ಪರಂಗಿಯವರು ಅಥವಾ ಫಿರಂಗಿಯವರು(ಬ್ರಿಟೀಷರು) ನಮ್ಮ ದೇಶಕ್ಕೆ ಬರುತ್ತಾರೆ. ಅವರು ಬುದ್ಧಿ ವಂತರು. ಅವರ ಮುಂದೆ ನಮ್ಮ ಮಾತುಗಳು ನಡೆಯುವುದಿಲ್ಲ. ಅವರು ಆಕ್ರಮಣ ಮಾಡಿ ಯುದ್ಧಮಾಡುವಾಗ ನಮ್ಮವರಲ್ಲಿ ಅನೇಕರು ಪ್ರಾಣ ಕಳೆದು ಕೊಳ್ಳುತ್ತಾರೆ. ಇಲ್ಲಿ ಪ್ರಾಣ ಎಂದರೆ ಅರಸೊತ್ತಿಗೆ ಆಳ್ವಿಕೆ ಎಂದೂ ಅರ್ಥೈಸಬಹುದು. ನಮ್ಮ ದೇಶದವರ ಆಳ್ವಿಕೆಗಳು ಉಳಿಯುವುದು ಕಡುಕಷ್ಟ ಎಂಬ ಭವಿಷ್ಯವನ್ನು ಮೌನೇಶ್ವರರು ನುಡಿದಿದ್ದಾರೆ.

೬೩೧

ಸತ್ಯರು ಬರುವಾಗ ಅವರ ಹತ್ತಿಲಿ ನಾನಿದ್ದೆ
ಕರ್ತೃ ಅಲ್ಲಮನ ಭಜಿಸುತ್ತ ಶರಣರು ಅವರೆಂದು
ಅರ್ತಿಯಲಿ ಬಂದ ಬಗೆ ಬೇರೆ, ಬಸವಣ್ಣ

ತಾತ್ಪರ್ಯ : ಲೋಕದಲ್ಲಿ ಅಧರ್ಮ ಹೆಚ್ಚಿದಾಗ ಧರ್ಮಸಂಸ್ಥಾಪನೆಗಾಗಿ ಮಹಾತ್ಮರು ಅವತರಿಸಿ ಬರುತ್ತಾರೆಂಬ ಭಾರತೀಯರಲ್ಲಿ ನಂಬಿಕೆ ಇದೆಯಷ್ಟೇ! ಬಸವಾದಿ ಶರಣರು ಹಾಗು ಅಲ್ಲಮರು ಕೂಡಾ ಹಾಗೆಯೇ ಅವತರಿಸಿ ಬಂದವರು ಎಂಬ ನಂಬಿಕೆ ವೀರಶೈವರಲ್ಲಿದೆ. ಉಳಿದ ಶರಣರೆಲ್ಲ ಕ್ಷೆಲಾಸದ ಗಣಂಗಳಾಗಿದ್ದವರಾದರೆ ಅಲ್ಲಮ ಪ್ರಭುವಾಗಿ ಸಾಕ್ಷಾತ್ ಪರಮೇಶ್ವರನೇ ಅವತರಿಸಿ ಬಂದನೆಂಬ ನಂಬಿಕೆ ಇದೆ. ಹೀಗೆ ಅವರೆಲ್ಲ ಬಂದು ಸೇರಿ ಅಲ್ಲಮನನ್ನು ಶೂನ್ಯಸಿಂಹಾಸನದ ಅಧಿಪತಿಯನ್ನಾಗಿ ಮಾಡಿ ಪೂಜಿಸಿದರು. ಅವರ ಹತ್ತಿರದಲ್ಲೇ ನಾನಿದ್ದೆ ಎನ್ನುತ್ತಾರೆ ಮೌನೇಶ್ವರರು.

೬೩೨

ದೇಶವನಾಳುವವರು ನಾಶವಾದಾರು ಜಗ
ದೀಶ್ವರ ತಾನು ನುಡಿದ ಕಾರಣದಿಂದ
ಮೊಗಲರ ದಂಡು ಬರುತೈತಿ, ಬಸವಣ್ಣ

ತಾತ್ಪರ್ಯ : ಮೊಗಲರು ಉತ್ತರದ ದೆಹಲಿಯಲ್ಲಿ ಆಳಲು ಪ್ರಾರಂಭಿಸಿದಾಗಲೇ ಮೌನೇಶ್ವರರು ದಕ್ಷಿಣದ ಕರ್ನಾಟಕದಲ್ಲಿ ಅವತರಿಸಿರಬೇಕು ಅಥವಾ ಸ್ವಲ್ಪ ಮುಂಚೆಯೇ ಹುಟ್ಟಿರಬೇಕು. ಅವರ ದಂಡು ದಕ್ಷಿಣಕ್ಕೂ ಬರುತ್ತದೆ. ಇಲ್ಲಿಯ ದೇಸಿಯ ರಾಜರನ್ನು ಸೋಲಿಸಿ ನಾಶ ಮಾಡುತ್ತಾರೆ ಎಂಬ ಭವಿಷ್ಯವನ್ನು ಮೌನೇಶ್ವರರು ನುಡಿದಿದ್ದಾರೆ.

೬೩೩

ಅರ್ಜಿ ಕೇಳುವರಿಲ್ಲ ಮರ್ಜಿ ಮಾನಗಳಿಲ್ಲ
ದುರ್ಜನರಿಗೆ ದೌಲತ್ತು ಲೋಕದ ಪ್ರಜೆ
ನಿರ್ಜರರಯ್ಯ, ಬಸವಣ್ಣ

ತಾತ್ಪರ್ಯ : ಯಾವ ಅರಸೊತ್ತಿಗೆಯೇ ಇರಲಿ ಸಾಮಾನ್ಯ ಬಡವರು ನಿಸ್ಸಹಾಯಕರಾಗಿ ಸುಮ್ಮನೇ ಕಷ್ಟಗಳನ್ನು ಅನುಭವಿಸುತ್ತಾರೆ. ಅವರ ಸಂಕಟಗಳನ್ನು, ಸಮಸ್ಯೆಗಳನ್ನು ಕೇಳುವವರಿಲ್ಲ. ಅವರ ಮರ್ಜಿಕಾಯುವುದು ಅನುಕಂಪ ತೋರುವುದು ಅಥವಾ ಅವರಿಗೆ ಮರ್ಯಾದೆ ಕೊಡುವುದು ಇಂತಹ ಯಾವ ಪರಿಸ್ಥಿತಿಯೂ ಇರುವುದಿಲ್ಲ. ದುಷ್ಟರು ಮಾತ್ರ ದೌಲತ್ತಿನಿಂದ ಮೆರೆಯುತ್ತಾರೆ. ಇದು ಸಾರ್ವಕಾಲಿಕ ಕಾಲಜ್ಞಾನ. ಲೋಕದ ಪ್ರಜೆಗಳು ನಿರ್ಜರರು ಎನ್ನುವ ಮೂಲಕ ರಾಜಕೀಯ ವ್ಯವಸ್ಥೆಯನ್ನು ವ್ಯಂಗ್ಯ ಮಾಡುತ್ತಾರೆ.

೬೩೪

ನಾಡನಾಳುವವರಿಗೆ ಕೋಡಗನ ಬುದ್ಧಿ ಹುಟ್ಟಿ
ಕೇಡು ಮಾಡುವರಯ್ಯ ಲೋಕವ, ಅವರಿಗೆ
ಬೇಡಿ ಬದನಾಮಿ, ಬಸವಣ್ಣ

ತಾತ್ಪರ್ಯ : ನಾಡನ್ನಾಳುವ ರಾಜರು ಆಗಿನ ಕಾಲದಲ್ಲಿ ನಿರಂಕುಶ ಪ್ರಭುಗಳು. ಅವರು ಸತ್ಯ ಸದಾಚಾರ ಸಂಪನ್ನರಾಗಿದ್ದರೆ ಜನರಿಗೂ ನಾಡಿಗೂ ಸುಭದ್ರತೆ ನೆಮ್ಮದಿ ಇರುತ್ತಿದ್ದವು. ಅವರು ಸ್ವೇಚ್ಛಾಚಾರ ಹಾಗೂ ಅವಿವೇಕಗಳಿಂದಾಗಿ ಬೇಕು ಬೇಕಾದಂತೆ ವರ್ತಿಸುತ್ತ ಆಳಲು ತೊಡಗಿದರೆ ರಾಜ್ಯದಲ್ಲಿ ಅನೀತಿ ಅತ್ಯಾಚಾರಗಳು ಹೆಚ್ಚಾಗಿ ಅರಾಜಕತೆ ತಲೆದೋರುತ್ತಿತ್ತು. ಅಂತಹವರಿಗೆ ಕೆಟ್ಟ ಹೆಸರು ಬೇಡದಿದ್ದರೂ ಬರುತ್ತಿತ್ತು. ಮೌನೇಶ್ವರರು ರಾಜರ ನೀತಿಯನ್ನೇ ಹೇಳುತ್ತಾರೆ.

೬೩೫

ದೇಶ ದೇಶಿಕರಿಗೆ ವಾಸಿ ಪಂಥಗಳಿಂದ
ನಾಶವ ಮಾಡಿದರಯ್ಯ ಭೂಲೋಕವನು ಅವ
ದೆಸೆ ಬಂತಯ್ಯ, ಬಸವಣ್ಣ

ತಾತ್ಪರ್ಯ : ಮುಂದಾಳುಗಳಾದವರು ರಾಜಕೀಯವಿರಬಹುದು ಧಾರ್ಮಿಕವಿರ ಬಹುದು, ತಂತಮ್ಮ ನಡುವೆ ತಾನು ಹೆಚ್ಚು ನಾನು ಹೆಚ್ಚು ಎಂಬ ಪ್ರತಿಷ್ಠೆಯ ತಿಕ್ಕಾಟಗಳಿಂದಾಗಿ ಸಮಾಜವನ್ನು ಸಮಾಜದ ಸಮಗ್ರ ಸೌಖ್ಯವನ್ನು ಹಾಳು ಮಾಡು ತ್ತಾರೆ. ಅವರನ್ನು ಅನುಸರಿಸುವ ಹಿಂಬಾಲಕರ ಪಡೆಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡು ಹೊಡೆದಾಟಕ್ಕೆ, ಭೇದ ವೈಷಮ್ಯಗಳಿಗೆ ಹಚ್ಚುತ್ತಾರೆ. ಇದರಿಂದ ಭೂ ಲೋಕವೇ ನಾಶವಾಗುತ್ತದೆ. ಲೋಕಕ್ಕೆ ದುಸ್ಥಿತಿ ಬರುತ್ತದೆ. ಇದು ನಡೆದು ಬಂದಿರು ವುದೇ ಹೀಗೆ.

೬೩೬

ಬಡಗಲ ದೇಶದಿಂದ ಬಡಿಗನು ಬರುತಾನೆ
ಕಡದು ಬಳದುಗಳ ಸಹಜವ ಮಾಡಿ ಆಯ ಆಯದಲಿ
ನಡಸ್ಯಾಡುವ ಅಲ್ಲಮರಾಯ ಬರುತಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಇದು ಮುಂದೆ ಹೀಗಾಗುತ್ತದೆ ಎಂಬುದನ್ನೂ ಹೀಗಾಗಬೇಕು ಎಂಬ ಆಶಯವನ್ನೂ ಹೇಳುವ ಉನ್ನತ ಆದರ್ಶದ ವಚನ. ಸಮಾಜದಲ್ಲಿ ಮೇಲು ಕೀಳುಗಳು ಇರುವುದರಿಂದ ಅನೇಕ ಸಮಸ್ಯೆಗಳುಂಟಾಗಿವೆ. ಎಲ್ಲರೂ ಸಮಾನರು ಅಥವಾ ಅವರವರ ಕರ್ತವ್ಯಗಳನ್ನು ಸಮಾನ ನಿಷ್ಠೆಯಿಂದ ಮಾಡುವವರು ಎಂಬ

ಒಂದು ಆದರ್ಶ ಸಮಾಜ ನಿರ್ಮಾಣವಾಗಬೇಕಾಗಿದೆ. ಇಂತಹ ಒಂದು ಸಮಾಜ ನಿರ್ಮಾಣವಾಗುತ್ತದೆ ಎಂಬುದನ್ನು ಬಡಗಿಯ ಕಾಯಕದ ಹೋಲಿಕೆಯಿಂದ ನಿರೂಪಿಸಿದ್ದಾರೆ. ಅಲ್ಲಮರಾಯ(ಒಬ್ಬ ವಿಶ್ವಕರ್ಮ ಬಡಿಗಿ) ಉತ್ತರ ದೇಶದ ಕಡೆಯಿಂದ ಬರುತ್ತಾನೆ. ಬಡಿಗಿಯು ಮಡಿಕೆ ಕುಂಟೆಗಳ ಕಡದು ಬಳದುಗಳನ್ನು ಸರಿಮಾಡಿ ಕೃಷಿಯ ಕಾರ್ಯಕ್ಕೆ ತಕ್ಕಂತೆ ಆಯ ಪ್ರಮಾಣದಲ್ಲಿ ಶುದ್ಧಮಾಡಿ ಕೊಡುವಂತೆ ವ್ಯತ್ಯಸ್ಥಗೊಂಡು ಸಮಾಜವನ್ನು ಸರಿಪಡಿಸುತ್ತಾನೆ ಎಂಬ ಆಶಯವಿದೆ. ಅಂದರೆ ಕಡದು ಬಳದುಗಳೆಂಬ ಸಾಮಾಜಿಕ ವ್ಯತ್ಯಾಸಗಳನ್ನು ತಿದ್ದುತ್ತಾನೆನ್ನುವುದು ಅರ್ಥ.

೬೩೭

ಜ್ಞಾನಿಗಳು ಹೆಚ್ಚಾಗಿ ಬೋನಗಳು ಮಂದಾಗಿ
ನಾನಾ ಜೀನಸಿನ ಉದ್ಯೋಗಗಳು ಹದಗೆಟ್ಟು
ಮಾನ ಭಂಗಿಗಳಯ್ಯ, ಬಸವಣ್ಣ

ತಾತ್ಪರ್ಯ : ಜ್ಞಾನಿಗಳು ಎಂದರೆ ಇಲ್ಲಿ ನೈಚ್ಯಾರ್ಥದಲ್ಲಿ ದುಡಿಯಲ್ಲಾರದೆ ಸನ್ಯಾಸ ಮಾರ್ಗ ಹಿಡಿದ ಅಜ್ಞಾನಿಗಳು ಎಂಬ ವ್ಯಂಗಾರ್ಥ ಮಾಡಬೇಕಾಗುತ್ತದೆ. ದುಡಿಯದೆ ಉಣ್ಣುವ ಇಂತಹವರು ಹೆಚ್ಚಾದರೆ ಸಮಾಜದ ಆರ್ಥಿಕತೆ ಏರುಪೇರಾಗುತ್ತದೆ. ಅನೇಕ ಬಗೆಯ ಉದ್ಯೋಗಗಳು ಹದಗೆಟ್ಟು ಮಾನ ಇಲ್ಲದವರು ಅಥವಾ ಮಾನ ಭಂಗದ ಪ್ರಸಂಗಗಳು ಹೆಚ್ಚುತ್ತವೆ. ಬಹುಶಃ ಹುಸಿ ಸನ್ಯಾಸಿಗಳೇ ಹೆಚ್ಚಾದರೆ ಸಮಾಜದ ಸ್ಥಿತಿ ಹೇಗಿರುತ್ತದೆ ಎಂಬ ಸಾಧ್ಯತೆಗಳನ್ನು ಈ ವಚನ ಹೇಳುತ್ತದೆ. ಅಥವಾ ಅತೀ ಬುದ್ಧಿವಂತಿಕೆಯ ಅಪಾಯವನ್ನು ವಚನ ಹೇಳುವಂತಿದೆ.

೬೩೮

ಮುಪ್ಪಿನವರು ಬದುಕ್ಯಾರು ಪ್ರಾಯದವರು ಅಳಿದಾರು
ನಡುಪ್ರಾಯದವರು ಮಡಿದಾರು ಮರ್ತ್ಯದೊಳಗೆ
ಮುದುಕರಿಗೆ ಉಳಿವು, ಬಸವಣ್ಣ

ತಾತ್ಪರ್ಯ : ಬಹುಶಃ ಯುದ್ಧಗಳು ಹಾಗೂ ಜನರ ಮಧ್ಯದ ಪ್ರಕ್ಷುಬ್ಧ ವಾತಾವರಣ ಹೆಚ್ಚಾದಂತೆ ಸಂಘರ್ಷ ಕಾರಣವಾಗಿ ಯುವ ಪೀಳಿಗೆ ನಾಶದಂಚಿಗೆ ತಳ್ಳಲ್ಪಡುತ್ತದೆ. ಸೈನ್ಯಕ್ಕೆ ಸೇರಿ ಹೊಡೆದಾಡುವವರು ಯುವಕರು ಮತ್ತು ಮಧ್ಯವಯಸ್ಕರು. ಎಲ್ಲಾ ಕಡೆ ಯುದ್ಧಗಳು ಭಯೋತ್ಪಾದನಾ ಕೃತ್ಯಗಳು ಜಾತಿ ಧರ್ಮಗಳ ಮಧ್ಯದ ಜಗಳಗಳು ಮುಂತಾದುವು ಹೆಚ್ಚಾಗುತ್ತಿವೆ. ಆ ಮೂಲಕ ಯುವ ಪೀಳಿಗೆ ನಿಷ್ಕ್ರಿಯವಾಗುವ ಹಾಗೂ ನಾಶವಾಗುವ ಭವಿಷ್ಯವನ್ನು ವಚನ ಹೇಳುವಂತಿದೆ.

೬೩೯

ಓರಂಗಲ್ಲಿನ ಧಣಿಯು ವೀರ ಗಣಪತಿರಾಯ
ಪಾರ ಶೌಕಿಯಲಿ ಪರಾಕ್ರಮರ ಚರಣ ಪೆಂಡೇವ
ಚಾರರ ಶಿವ ತಾಗಿದ, ಬಸವಣ್ಣ

ತಾತ್ಪರ್ಯ : ಓರಂಗಲ್ಲಿನ ರಾಜ ವೀರ ಗಣಪತಿರಾಯನ ಸೈನ್ಯದ ಪರಾಕ್ರಮವನ್ನು ಈ ವಚನ ಬಣ್ಣಿಸುತ್ತದೆ. ಓರಂಗಲ್ಲಿನ ವೀರ ಗಣಪತಿರಾಯ ತನ್ನ ಪಹರೆಗಿದ್ದ ಸೈನ್ಯ ತುಕುಡಿಯ ವೀರರಲ್ಲಿ ಆತ್ಮವಿಶ್ವಾಸ ತುಂಬಲು ಹಾಗೂ ಗೌರವಯುತವಾಗಿ ನಡೆಸಿಕೊಳ್ಳುವ ಉದ್ದೇಶದಿಂದ ಅವರ ಕಾಲ ಕಡೆಯನ್ನು ಮುಟ್ಟಿ ಹುರುದುಂಬಿಸುವಂತೆ ಶಿವ ಕೂಡ ತಾನೊಲಿದ ಭಕ್ತರ ದಾಸನಾಗುತ್ತಾನೆ.

೬೪೦

ಮುಗಿಲು ಮಾಳಿಗೆ ಒಡೆದು ಹಗಲೆ ಕನ್ನವ ತೆಗೆದು
ಜಗದೊಳಗೊಂದು ಸೋಜಿಗವು, ವಿಪರೀತ ಬ್ಯಾಡನ
ಬಗೆಯು ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಚೋರತನವು ಆಗಿನ ಕಾಲದಲ್ಲಿ ಒಂದು ಕುಲ ಕಸುಬೇ ಆಗಿತ್ತು. ಶ್ರೀಮಂತರನ್ನು ಮಾತ್ರ ದೋಚುತ್ತಿದ್ದ ಅಂತಹ ಕಳ್ಳರು ಬಡವರ ದೃಷ್ಟಿಯಲ್ಲಿ ನಿರುಪ ದ್ರವಿಗಳೂ ಸ್ನೇಹಿತರೂ ಆಗಿರುತ್ತಿದ್ದರು. ಅಂತಹ ಕಳ್ಳತನದಲ್ಲಿ ವಿಶೇಷ ಸಾಮರ್ಥ್ಯವಿದ್ದ ಬೇಡನೊಬ್ಬನು ಹಾಡು ಹಗಲೇ ಕನ್ನ ಹಾಕಿ ಲೂಟಿ ಮಾಡಿದ ವಿಷಯ ಆಶ್ಚರ್ಯಕರ ವಾಗಿತ್ತು. ಅಂತಹ ಬೇಡನ ಜಾಣ್ಮೆ ಸಾಮಾನ್ಯರಿಗೆ ಗೊತ್ತಾಗುವುದಿಲ್ಲ. ಅಥವಾ ಇದು ನಿಗೂಢ ಆಧ್ಯಾತ್ಮಿಕ ಸಂಗತಿಯನ್ನು ಒಳಗೊಂಡಿರುವ ವಚನವೆನಿಸುತ್ತದೆ. ಜಗತ್ತಿನಲ್ಲಿ ರಾಜಕಾರಣಿಗಳು ಉದ್ಯಮಿಗಳು ರಿಯಲ್ ಎಸ್ಟೇಟ್ ಧನಿಗಳು ಮಾಡುತ್ತಿರುವ ಹಗಲು ದರೋಡೆಯನ್ನು ವಚನ ಪ್ರತೀಕಿಸುವಂತಿದೆ.

೬೪೧

ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ
ಕುಕ್ಕನ ಕೂಡ ಬೆರೆದುಂಡ ಕಾರಣದಿಂದ ಮರ್ತ್ಯಕ್ಕೆ
ಕೆಟ್ಟ ದಿನಗಳು ಬಂದೊದಗಿದವು, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ವಚನಗಳಲ್ಲಿ ತಾನು ಚೆನ್ನಬಸವಣ್ಣನ ಅವತಾರ ಎಂದು ಹೇಳಿಕೊಂಡಿರುವ ಸೂಚನೆಗಳು ಸಿಗುತ್ತವೆ. ಅಂತಹ ಅನುಭಾವಿಯಾದ ಜ್ಞಾನಿಯು ಹಸಿವಿಗಂಜಿ ನಾಯಿಯಂತೆ ಕೀಳಾಗಿ ಕೂಳಿಗಾಗಿ ವರ್ತಿಸುವದು ತರವಲ್ಲ. ಅಂತಹ ಹೀನವರ್ತನೆ ಕಾರಣದಿಂದಲೇ ಮರ್ತ್ಯಕ್ಕೆ ಕೆಟ್ಟದಿನಗಳು ಬಂದವು ಎಂಬ ಮಾತು ಅಸಹಜ ಹಾಗೂ ವಿಕೃತ ಮನಸ್ಸಿನ ಪರಿಣಾಮಗಳನ್ನು ತಿಳಿಸುತ್ತದೆ.

೬೪೨

ಏಳು ನೂರೆಪ್ಪತ್ತುವರಿ ವರುಷದ ಊಳಿಗದ
ದಿನ ಮುಗಿಯಿತು ಮರ್ತ್ಯಕ್ಕೆ ತಾಳ ಪ್ರಮಾಣ
ಉದ್ದ ರಕ್ತ ಹರಿವಂತೆ ಕಾಲಜ್ಞಾನ ಒದಗಿತು
ಸನಿಹಕ್ಕೆ ಎಂದಿನ್ನು ಸಾರ ಬಂದ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಬಹುಶಃ ಈ ವಚನವು ರಾಜ ಪ್ರಭುತ್ವದ ಅವನತಿಯನ್ನು ಪ್ರಜಾಪ್ರಭುತ್ವದ ಮತ್ತು ಸ್ವತಂತ್ರ ಭಾರತದ ಕಲ್ಪನೆಯನ್ನು ಕಟ್ಟಿಕೊಡುವಂತೆ ಕಾಣುತ್ತದೆ. ಅನ್ಯ ಹಾಗೂ ನಿರಂಕುಶ ಪ್ರಭುತ್ವಗಳ ದಾಸ್ಯದಿಂದ ಯುದ್ಧಕೋರರು ಹಾಗೂ ಭಯೋತ್ಪಾದಕರು ಪ್ರತ್ಯೇಕತಾವಾದಿಗಳಿಂದಾಗಿ ರಕ್ತಪಾತದಲ್ಲಿಯೇ ಮುಳುಗೇಳುತ್ತ ನಾಶಹೊಂದುತ್ತಿರುವ ಮನುಕುಲದ ದುರ್ದೆಸೆಯನ್ನು ಸೂಚಿಸುತ್ತಿದೆ ಎನಿಸುತ್ತದೆ.

೬೪೩

ವಿಜಾಪುರ ಸುಲ್ತಾನ ಸಾಹೇಬರಿಗೆ ಪಟ್ಟವ ಕಟ್ಟಿ
ಮೋನಯ್ಯನ ಕೇಳಿದರು, ಅಯ್ಯ ಉತ್ತರವ ಕೊಟ್ಟನು;
ದಾರಿದ್ರನ ಪಟ್ಟ ಧಾರುಣಿಗೆ ಸುಖವಿಲ್ಲ
ಕಾರಿಯ ಸೊಪ್ಪು ತಿಂದು ಅರಣ್ಯಕ್ಕೆ ಹೋಯಿತ್ತು
ಸೂಳಿಯ ಮಗ ಬಂದು ಆಳ್ಯಾರು ಪುರವನ್ನು
ಕಾಳಗವಿಲ್ಲದೆ ಮಡಿದನು ಅವನ ಕೋಟೆ
ಕೌಲು ಹೋಯಿತು ಕಾಣಾ, ಬಸವಣ್ಣ

ತಾತ್ಪರ್ಯ : ಐತಿಹಾಸಿಕ ಘಟನೆಯನ್ನು ಕುರಿತ ವಚನವಿದು. ವಿಜಯಪುರದ ಸುಲ್ತಾನನಿಗೆ ಮೌನೇಶ್ವರರು ಪಟ್ಟಕಟ್ಟಿದರು ಎಂಬುದು ಅವರ ಜೀವನ ಚರಿತ್ರೆಯ ದೃಷ್ಟಿಯಿಂದ ಮಹತ್ವದ ಸಂಗತಿ. ಎರಡನೆಯದಾಗಿ ಅವರು ಸುಲ್ತಾನನ ಸಿಂಹಾಸನದ ಭವಿಷ್ಯದ ವಿಷಯ. ಅನೈತಿಕ ಸಂಬಂಧಕ್ಕೆ ಹುಟ್ಟಿದವನೊಬ್ಬ ವಿಜಯಪುರದ ಸಿಂಹಾಸನಕ್ಕೆ ಬರುತ್ತಾನೆ. ಅವನು ಗುಣಗಳಿಂದ ದರಿದ್ರ ಅವನ ಆಳ್ವಿಕೆಯಲ್ಲಿ ಜನರಿಗೆ ಸುಖವಿಲ್ಲ. ಕಾರೆಯ ಸೊಪ್ಪನ್ನು ತಿಂದು ಅರಣ್ಯದಲ್ಲಿ ಜೀವಿಸುವಂತಹ ಕೆಟ್ಟ ಪರಿಸ್ಥಿತಿ ಬರುತ್ತದೆ. ಸುಲ್ತಾನನಾದರೋ ವೀರೋಚಿತವಾಗಿ ಯುದ್ಧದಲ್ಲಿ ಮಡಿಯದೆ (ರೋಗದಿಂದಲೋ, ಸಂಚಿನಿಂದಲೋ) ಸಾಯುತ್ತಾನೆ. ಅವನ ಕೋಟೆ ಸುಲಭವಾಗಿ ವೈರಿಗಳ ವಶವಾಗುತ್ತದೆ. ಇದು ವಿಜಯಪುರದ ಸುಲ್ತಾನರ ಆಳ್ವಿಕೆಯ ಕೊನೆಯ ಘಟ್ಟವನ್ನು ಕುರಿತ ಮೌನೇಶ್ವರರ ಭವಿಷ್ಯ ನುಡಿ.

೬೪೪

ಕರ್ಮಕ್ಕೆ ಕಡಿಯಾಟ ಧರ್ಮಕ್ಕೆ ಚೆಲ್ಲಾಟ
ಮರ್ಮ ಸಾಧನಕೆ ಹೊಡೆದಾಟ, ಶ್ರೀಗುರುನಾಥ ಅದಕೆ
ತಂದಿಟ್ಟ ಪಡಿಪಾಟ, ಬಸವಣ್ಣ

ತಾತ್ಪರ್ಯ : ಇದು ಮೌನೇಶ್ವರರ ಕಾಲಕ್ಕೂ ಅಂದಿಗೂ ಇಂದಿಗೂ ನಮ್ಮ ದೇಶಕ್ಕೆ ಹೊಂದುವ ಕಾಲಜ್ಞಾನದ ವಚನವಾಗಿದೆ. ಮಾನವರು ಅವರವರ ಕರ್ಮಗಳನ್ನು ಕಾಯಕಗಳನ್ನು ಮಾಡಿಕೊಂಡು ಹೋಗುವುದು ಕೊನೆಯಾಗುತ್ತದೆ. ಧರ್ಮ ಎಂದರೆ ಮತ ಪಂಥಗಳ ಮೇಲಾಟ ಪೈಪೋಟಿಗಳು ಜನರೊಡನೆ ಆಡುವ ಚೆಲ್ಲಾಟದಂತೆ ಆಗುತ್ತವೆ. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ ಎಂಬಂತೆ, ಮರ್ಮ ಸಾಧನೆಗೆ ಎಂದರೆ ಪ್ರಭಾವಶಾಲಿಯಾದ ಸ್ಥಾನಮಾನ, ಹಣ, ಪ್ರತಿಷ್ಠೆ ಮುಂತಾದವುಗಳಿಗಾಗಿ ಹೊಡೆದಾಟ ನಡೆಯುತ್ತವೆ. ಇದೆಲ್ಲ ಮಾನವನ ದುರಹಂಕಾರಗಳು ತಂದಿಟ್ಟ ಸಂಕಷ್ಟಗಳು. ಇಂದಿಗಂತೂ ಅಕ್ಷರಶಃ ಈ ಸಂಗತಿ ಅನ್ವಯವಾಗುತ್ತದೆ.

೬೪೫

ಕುಲದ ಉದ್ಯೋಗವ ಮಾಡಿ ಫಲವ ಸಾಗಿಸಿದರು
ಹಲವು ಜೀವನದ ಉದ್ಯೋಗ ಮಾಡಿ ಸರ್ವರು
ನೆಲೆಗಾಣಲಿಲ್ಲ, ಬಸವಣ್ಣ

ತಾತ್ಪರ್ಯ : ವೃತ್ತಿಗಳು ಮತ್ತು ಕುಲಗಳು ಜೊತೆಯಾಗಿ ಬೆಳೆದು ಬಂದಿರುವ ಸಮಾಜ ನಮ್ಮದು. ಆದರೂ ಅದೂ ಸಂಪೂರ್ಣ ಬದಲಾವಣೆಯೇನೂ ಅಲ್ಲ. ವೃತ್ತಿ ಆಧಾರಿತ ಜೀವನ ಪದ್ಧತಿ ಸಮಾಜದಲ್ಲಿ ಒಂದು ಬಗೆಯ ಭದ್ರತೆ ನೆಮ್ಮದಿಗಳನ್ನು ಕೊಟ್ಟಿತ್ತು. ಸ್ವಾವಲಂಬನೆ ಅಲ್ಲಿ ನೆಲೆಸಿತ್ತು. ಆ ಪದ್ಧತಿ ಕೆಟ್ಟರೆ ಅತಂತ್ರ ಪರಿಸ್ಥಿತಿ ತಲೆದೋರುತ್ತದೆ ಎಂಬುದು ಅಂದಿನ ಕಾಲದಲ್ಲಿ ಮೌನೇಶ್ವರರಿಗೂ ಅನಿಸಿತ್ತು.

೬೪೬

ನಂದಿಯ ಪೌರ್ಣಿಮೆಗೆ ಚಂದ್ರ ಗ್ರಹಣ ಕಾಣಲು
ಮುಂದೆ ತ್ರೈಮಾಸ ದುರ್ಭಿಕ್ಷ, ನಿಕ್ಷೇಪ ಉಣ್ಣುವ ಜನರಿಗೆ
ತಂದ ದುರ್ಮರಣ, ಬಸವಣ್ಣ

ತಾತ್ಪರ್ಯ : ಇದು ಚಂದ್ರಗ್ರಹಣಕ್ಕೂ ದೇಶದ ಸುಭಿಕ್ಷೆಗೂ ಸಂಬಂಧ ಕಲ್ಪಿಸಿ ಹೇಳುವ ವಚನ. ನಂದಿಯ ಹುಣ್ಣಿಮೆಯಂದು(ಇಂದು ಈ ಹೆಸರು ಬಳಕೆಯಲ್ಲಿಲ್ಲ. ಕಾರ ಹುಣ್ಣಿಮೆಯಲ್ಲಿ ಎತ್ತುಗಳ ಪೂಜೆ ನಡೆಯುತ್ತದೆ. ಬಹುಶಃ ಹಿಂದೆ ಇದನ್ನೇ

ನಂದಿ ಹುಣ್ಣಿಮೆ ಎನ್ನುತ್ತಿದ್ದರೇನೋ) ಚಂದ್ರಗ್ರಹಣವಾದರೆ ಬಹಳ ಕೆಟ್ಟ ಪರಿಸ್ಥಿತಿ, ಬರಗಾಲ ಬರುತ್ತದೆ. ಅಲ್ಲದೆ ಇದ್ದಂತವರು ಕೂಡಿಟ್ಟಿದ್ದನ್ನು ತಿನ್ನಲಾಗದೆ ದುರ್ಮರಣ ಹೊಂದುತ್ತಾರೆ ಎಂಬುದು ಇಲ್ಲಿ ಹೇಳಿರುವ ಕಾಲಜ್ಞಾನ.

೬೪೭

ಪಟ್ಟದ ದೊರೆ ತಾನು ಕೊಟ್ಟವರನರಿಯನು ಕುರಿ
ಹಟ್ಟಿಯ ದನವನೊಯ್ದಾರು ಮುದಗಲ್ಲ ಪಟ್ಟಣಕೆ
ಬಂದ ಪ್ರಳಯವು, ಬಸವಣ್ಣ

ತಾತ್ಪರ್ಯ : ಇದು ಮುದಗಲ್ಲು ಪಟ್ಟಣ ಹಾಳಾಗುವ ಭವಿಷ್ಯದ ಸೂಚನೆಯ ವಚನ. ಅಲ್ಲಿಯ ರಾಜನು ತಾನು ಕೊಟ್ಟ ಮಾತನ್ನು ತಪ್ಪುವುದರಿಂದ ಸಮಸ್ಯೆ ಶುರು ಆಗುತ್ತದೆ. ವೈರಿಗಳು ಪಟ್ಟಣವನ್ನು ಮುತ್ತಿ ಅಂದಿನ ಜನಜೀವನವನ್ನು ಸಂಪತ್ತಿನಂತಿದ್ದ, ಹಟ್ಟಿಯ ಕುರಿಗಳನ್ನು ದನಗಳನ್ನು ದೋಚಿ ಒಯ್ಯುತ್ತಾರೆ. ಬಹುಶಃ ರಾಜನನ್ನು ಅಂತ್ಯಗೊಳಿಸಿ ಪಟ್ಟಣವನ್ನು ಸೂರೆ ಮಾಡುವುದರಿಂದ ಪಟ್ಟಣಕ್ಕೆ ಪ್ರಳಯ ಬರುತ್ತದೆ, ಹಾಳಾಗುತ್ತದೆ ಎಂಬ ಅರ್ಥವಿರಬಹುದು. ಒಟ್ಟಿನಲ್ಲಿ ನಾಶದ ಸೂಚನೆಯನ್ನು ವಚನ ಹೇಳುತ್ತದೆ.

೬೪೮

ಬಡಗು ದಿಕ್ಕಿನಿಂದ ಬಡಿಗಿ ಬಂದೈದಿದಾನೆ
ಕಡದು ಬಳದುಗಳ ಸಜ್ಜು ಮಾಡಿ
ಆಯವಾದ ಮರನ ಕಡಿದು
ಛಾಯದ ಗೊಂಬಿಯ ಮಾಡಿ ಆಯ ಆಯದಲಿ
ಕುಣಿಸ್ಯಾಡುವ ಅಲ್ಲಮರಾಯ
ಬಂದಾನೊ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಅಲ್ಲಮಪ್ರಭು ಅವತರಿಸಿ ಬರುತ್ತಾನೆ. ಆತನು ಉತ್ತರ ದಿಕ್ಕಿನಿಂದ ಬರುವ ಒಬ್ಬ ಬಡಿಗಿ. ತನ್ನ ಕಾಯಕ ಜ್ಞಾನದಿಂದ ಬೇಸಾಯದ ಉಪಕರಣಗಳಲ್ಲಿನ ಕಡದು ಬಳದುಗಳನ್ನು ಸರಿ ಮಾಡುವಂತೆ ಸಮಾಜದ ಅಂಕು ಡೊಂಕುಗಳನ್ನು ತಿದ್ದುತ್ತಾನೆ. ಮತ್ತು ಸೂಕ್ತವಾದ ಮರವನ್ನು ಕಡಿದು ಅದರಿಂದ ಮಾಡಿದ ಗೊಂಬೆಗಳನ್ನು ಕ್ರಮಬದ್ಧವಾಗಿ ಆಯಾ ಸ್ಥಳಗಳಲ್ಲಿ ಕುಣಿಸ್ಯಾಡುವಂತೆ ಸೂಕ್ತವಾದ ವ್ಯಕ್ತಿಗಳನ್ನು ಆಯಾ ಸ್ಥಾನಗಳಲ್ಲಿ ನೆಲೆಗೊಳಿಸಿ ತನ್ನ ಅಪ್ಪಣೆಯಂತೆ ನಡೆಯುವಂತೆ ಮಾಡುತ್ತಾನೆ. ಇದಕ್ಕೆ ಹೊಂದುವಂತಹ ಲೀಲಾಪುರುಷ ಇದುವರೆಗೂ ಬಂದಂತಿಲ್ಲ. ಇನ್ನು ಮುಂದೆ ಏನಾದರೂ ಬರುವನೇನೋ ಎಂದು ಊಹಿಸುವಂತಿದೆ.

೬೪೯

ಲಳಗಿ ತಂಡಾಸ ಮುಸಿಯ ಇಳೆಯಲ್ಲ ಹಿಡಿದೀತು
ಹಳಿಯಲಿ ಬೇಡ ಕುಲವನು ಅಳಿಯ
ಬಸವಣ್ಣನ ನಿಜ ಪಟ್ಟಾ, ಬಸವಣ್ಣ

ತಾತ್ಪರ್ಯ : ಊದುಗೊಳವೆ, ಇಕ್ಕಳ, ತಂಡಾಸ, ಮುಸಿ(ಲಳಗಿ)ಮುಂತಾದ ಸಾಮಗ್ರಿಗಳು ವಿಶ್ವಕರ್ಮ ವಂಶದವರು ತಮ್ಮ ಕೆಲಸಕ್ಕಾಗಿ(ಪಾಂಚಾಲರು, ಬಡಗಿ, ಕಮ್ಮಾರ, ಅಕ್ಕಸಾಲಿಗ ಮುಂತಾದವರು) ಬಳಸುವ ಉಪಕರಣಗಳು. ಇವುಗಳನ್ನು ಹಿಯ್ಯಾಳಿಸ ಬೇಡ. ಮುಂದೆ ಇಡೀ ಪ್ರಪಂಚವೇ ಇವುಗಳನ್ನು ಹಿಡಿಯುತ್ತದೆ. ಇದು ಆಧುನಿಕ ತಂತ್ರಜ್ಞಾನ ಕಾರ್ಖಾನೆಗಳು ಸಂವಹನ ಸಾಧನಗಳು ವಿಜ್ಞಾನ ಪ್ರಯೋಗಗಳು ಮುಂತಾದವುಗಳಿಗೆಲ್ಲ ಅನ್ವಯವಾಗುತ್ತದೆ. ಈ ಮಾತು ಆಧುನಿಕ ಯುಗಕ್ಕೆ ಹೊಂದುತ್ತದೆ.

೬೫೦

ದಿಕ್ಕು ದಿಕ್ಕಿಗೆಲ್ಲ ಅಕ್ಕಸಾಲೆಯರಾದಾರು
ಒಕ್ಕಲುತನಕ್ಕೆ ದಿಕ್ಕಿಲ್ಲ ಇಳೆಯ
ಪ್ರಪಂಚಗಳ ಅಳಿಯಲಿ ಬೇಕೆಂದು
ಅಳಿಯ ಬಸವಣ್ಣನ ಹೋಗೆಂದು ಕಳುಹಿದರು
ತಿಳಿಯರ್ಯಾಕಯ್ಯ ಕುರುಡರು, ಬಸವಣ್ಣ

ತಾತ್ಪರ್ಯ : ಭೂಲೋಕದಲ್ಲಿ ಎಲ್ಲ ಕಡೆಗಳಲ್ಲೂ ಅಕ್ಕಸಾಲಿಗಳೇ ಮೆರೆಯತೊಡಗುತ್ತಾರೆ. ಒಕ್ಕಲುತನಕ್ಕೆ ದಿಕ್ಕಿಲ್ಲದಂತಾಗುತ್ತದೆ ಎನ್ನುವ ಮಾತಂತೂ ಇಂದಿಗೂ ಬಹುಪಾಲು ಹೊಂದುತ್ತದೆ. ಇಳೆಯ ಪ್ರಪಂಚಗಳನ್ನು ಅಳಿಯಬೇಕೆಂದು ಎಂದರೆ ಲೋಕದಲ್ಲಿರುವ ಪ್ರಾಪಂಚಿಕ ಭೇದಗಳನ್ನು ಇಲ್ಲದಂತೆ ಮಾಡಲು ಸತ್ಯ ಶರಣರು ಕಳಿಸುವುದರಿಂದ ಚೆನ್ನಬಸವಣ್ಣ ಮರ್ತ್ಯಲೋಕಕ್ಕೆ ಬರುತ್ತಾನೆ ಎಂಬ ಭವಿಷ್ಯ ಇಲ್ಲಿದೆ.

೬೫೧

ಬೇಡುವ ಜನ ಘನವಾಯಿತು
ನೀಡುವ ಜನ ಕಡಿಮೆಯಾಯಿತು
ಮಾಡಿ ಉಂಬುವ ಜನರಿಗೆ ಮಳೆ ಬೆಳೆ
ತಡೆದಲ್ಲಿ ಕೇಡು ಬಂತಯ್ಯ, ಬಸವಣ್ಣ

ತಾತ್ಪರ್ಯ : ಬೇಡುವ ಜನ ಹೆಚ್ಚಾದರು ನೀಡುವ ಜನ ಕಡಿಮೆಯಾದರು. ದುಡಿದು ಉಣ್ಣುವ ರೈತರಿಗೆ ಮಳೆ ಬೆಳೆ ಸರಿಯಾಗದಿದ್ದರೆ ಲೋಕಕ್ಕೆ ಕೇಡು ಬರುತ್ತದೆ.

ಜನರಲ್ಲಿ ಬೇಡುವ ಜನರು ನೀಡುವ ಜನರು ಎಂದು ಎರಡು ಗುಂಪು ಮಾಡುತ್ತಾರೆ ಮೋನಪ್ಪಯ್ಯ. ದೇಶದ ಬೆನ್ನೆಲುಬಾದ ದುಡಿದು ಉಣ್ಣುವ ರೈತರೇ ನೀಡುವ ವರ್ಗ. ಬೇಡುವ ವರ್ಗದಲ್ಲಿ ನಿರ್ಗತಿಕರಾದ ಭಿಕ್ಷುಕರು, ದೇವರ ಹೆಸರಿನಲ್ಲಿ ಭಿಕ್ಷೆಯನ್ನು, ಕಸುಬುಗಳನ್ನು ಮಾಡಿಕೊಂಡವರು, ಜಂಗಮರು, ಸನ್ಯಾಸಿ ಸಾಧುಗಳು, ಸ್ವಾಮಿಗಳು ಮುಂತಾದವರೆಲ್ಲ ಬೇಡುವವರು. ಇವರ ಸಂಖ್ಯೆ ಹೆಚ್ಚಾಯಿತು. ಇಂತಹವರನ್ನೆಲ್ಲ ಸಾಕುವ ಶ್ರಮಿಕರು ರೈತರು. ಇವರ ಸಂಖ್ಯೆ ಕಡಿಮೆಯಾಯಿತು. ಮಳೆ ಬೆಳೆ ಸರಿಯಾಗಿ ನಡೆದರೆ ನೀಡುವವರು ಬೇಡುವವರನ್ನು ಸಾಕುತ್ತಾರೆ. ಅವೇ ಕೈಕೊಟ್ಟರೆ ಈ ಸಾಮಾಜಿಕ ವ್ಯವಸ್ಥೆಯೆಲ್ಲ ಕೆಟ್ಟು ಹೋಗುತ್ತದೆ. ಪಲ್ಲಟವಾಗುತ್ತದೆ. ಉತ್ಪಾದನೆ ಮತ್ತು ವಿನಿಮಯದ ಸಂಕೀರ್ಣತೆಯನ್ನು ಇಲ್ಲಿ ಕಾಣಬಹುದು.

ಟಿಪ್ಪಿ

ಸೂಜಿ ನುಂಗಿದ ಎಮ್ಮಿ ಆಗಲೆ ಸಾಯುವದೆ
ರೋಗ ಬಂದಂತೆ ನವೆನವೆದು ಸಾಯುವದು
ಅದರಂತೆ ಪಂಡಿತರಿಗೆ ಬರುವದು, ಬಸವಣ್ಣ

ತಾತ್ಪರ್ಯ : ಸೂಜಿ ನುಂಗಿದ ಎಮ್ಮೆ ಕೂಡಲೇ ಸಾಯುವುದಿಲ್ಲ. ರೋಗಬಂದಂತೆ ದಿನದಿನವೂ ಸಣ್ಣಗಾಗುತ್ತ ಕೊನೆಗೆ ಸಾಯುತ್ತದೆ. ಹಾಗೆಯೇ ಬಡಾಯಿ ಪಂಡಿತರೆನ್ನುವವರೂ ನರಳಿ ನರಳಿ ಸಾಯುತ್ತಾರೆ. ಪಂಡಿತರು ಎಂದು ಕೇವಲ ಮಾತಿನ ಬಂಡವಾಳದಿಂದ ಹೊಟ್ಟೆ ಹೊರೆಯುವವರು, ಶಾಸ್ತ್ರಿಗಳು, ಜೋತಿಷ್ಯಗಾರರು, ಕಾನೂನು, ವೈದ್ಯ ಮುಂತಾದ ಸಲಹೆ ಕೊಡುವವರು, ಆಧ್ಯಾತ್ಮ ಹಾಗೂ ಮೋಕ್ಷದ ಮಾತುಗಳನ್ನು ಬೋಧಿಸುವವರು ಮುಂತಾದವರನ್ನು ಸೂಜಿಯನ್ನು ನುಂಗಿದ ಎಮ್ಮೆಗೆ ಮೌನೇಶ್ವರರು ಹೋಲಿಸಿದ್ದಾರೆ. ಅವರಿಗೆ ಕಾಯಕ ಜೀವನವು ಮಾರ್ಗವಲ್ಲ. ದುಡಿದವರನ್ನು ಶೋಷಿಸಿ ಅನ್ಯಾಯದಿಂದ ಕುಳಿತು ತಿನ್ನುವವರು. ಇದು ನಿಧಾನ ರೋಗವಿದ್ದಂತೆ ಎಂಬ ಅದ್ಭುತ ಪ್ರತಿಮೆಯ ಮೂಲಕ ಡಾಂಭಿಕರನ್ನು ವಿಡಂಬಿಸಿದ್ದಾರೆ.

ಟಿಪ್ಪಿ

ಹಾಳೂರನೆ ತುಂಬಿಸಿ ಬೀಳ ಹೊಲವನೆ ಮಾಡಿ
ಪಾಳು ಪಟ್ಟನವ ಸಜ್ಜು ಮಾಡಿದಂಥ
ಕಾಳೇಶ್ವರ ಲಿಂಗವನರಿಯರು, ಅರಿಯದ ಕಾರಣದಿಂದ
ಕಾಳಗವ ತಂದ ಕಲಕಿಗೆಲ್ಲ, ಬಸವಣ್ಣ

ತಾತ್ಪರ್ಯ : ಕಾಳೇಶ್ವರ ಲಿಂಗ ಪಾಂಚಾಲರ ಮನೆ ದೈವ. ಒಂದು ಊರಿನ ಎಲ್ಲ ಕಸುಬುದಾರರಿಗೂ ಬೇಕಾದ ಸಾಮಗ್ರಿಗಳನ್ನು ದೇವರುಗಳನ್ನು ಮಾಡಿಕೊಟ್ಟು

ಬದುಕಿನ ಎಲ್ಲ ಆಯಾಮಗಳಿಗೆ ಮೂಲ ಕಾರಣಶಕ್ತಿಯಾಗಿರುವವರು. ಪಾಂಚಾಳರ ಕ್ರಿಯಾಶೀಲತೆಯಿಂದ ಹಾಳೂರು ಸಹ ಜೀವಂತ ಊರಾಗುತ್ತದೆ. ಹಾಳಾದ ಪಟ್ಟಣವೂ ಮತ್ತೆ ತನ್ನ ನಿಜ ಸ್ವರೂಪವನ್ನು ಪಡೆಯುತ್ತದೆ. ಹೊಲಗಳಲ್ಲಿ ಬೆಳೆ ಬೆಳೆದು ಎಲ್ಲರಿಗೂ ಅನ್ನ ಹಾಕುವ ಒಕ್ಕಲಿಗರಿಗೂ ಸಹ ಕಮ್ಮಾರಿಕೆ, ಬಡಿಗತನ ಮುಂತಾದ ಐದು ಕಸುಬುಗಳನ್ನು ಮಾಡುವ ಪಾಂಚಾಳರೇ ಮೂಲಾಧಾರ. ಅವರ ಮಹತ್ವವನ್ನು ಸಮಾಜ ಅರಿಯಬೇಕು. ಅರಿಯದಿರುವುದರಿಂದಲೇ ಈ ಕಾಲದಲ್ಲಿ ಕಾಳಗಗಳು ಸಂಘರ್ಷಗಳು ನಡೆಯುತ್ತಿವೆ ಎನ್ನುತ್ತಾರೆ ಮೌನೇಶ್ವರರು.

೬೫೪

ಮಾಡಿಕೊಂಡ ಮನೆಗೆ ಹೂಡಿಕೊಂಡ ವ್ಯವಸಾಯಕ್ಕೆ
ಆಡಿಕೊಂಡ ಅಪರಾಧಕ್ಕೆ
ತೋಡುತಲಿಹನು ನೆಲವ, ಬಸವಣ್ಣ

ತಾತ್ಪರ್ಯ : ಮನುಷ್ಯ ಮನೆ ಮಾಡಿಕೊಂಡು ಬಾಳುವೆ ಮಾಡುವುದಕ್ಕೆ, ಹೊಟ್ಟೆಗೆ ಧಾನ್ಯವನ್ನು ಬೆಳೆಯಲು ನೆಲವನ್ನು ಉತ್ತಲು ಬಿತ್ತಲು ಬಸವಣ್ಣ ನೆಲವನ್ನು ತೋಡುತ್ತಿದ್ದಾನೆ, ಭಾರವನ್ನು ಎಳೆಯುತ್ತಿದ್ದಾನೆ ಎಂಬ ಮಾತುಗಳು ಹೊಂದಿಕೆಯಾಗುತ್ತವೆ. ರೈತರ ಭಾರವನ್ನೆಲ್ಲ ಹೊರುವುದು ಬಸವಣ್ಣ(ಎತ್ತುಗಳು) ಎಂಬ ಮಾತು ಸತ್ಯವೇ. ಆದರೆ ಆಡಿಕೊಂಡ ಅಪರಾಧಕ್ಕೆ ಬಸವಣ್ಣ ನೆಲ ತೋಡುತ್ತಿದ್ದಾನೆ ಎಂಬ ಮಾತುಗಳು ಕೂಡಲೇ ಅರ್ಥ ಬಿಟ್ಟುಕೊಡುತ್ತಿಲ್ಲ. ಬಸವಣ್ಣ ಹಿಂದೆ ಯಾರ ಮುಂದೆ ಯಾರ ಬಗ್ಗೆ ಏನೆಂದು ಆಡಿಕೊಂಡಿದ್ದ. ಅದಕ್ಕಾಗಿ ಇಂತಹ ಶಿಕ್ಷೆ ಉಂಟಾಯಿತೆ ಎಂಬುದು ಯಾವುದೋ ಜಾನಪದ ಕಥೆಯ ಹಿನ್ನೆಲೆಯನ್ನು ಹೊಂದಿರುವಂತಿದೆ.

೬೫೫

ಭಂಡಾರಿ ಬಸವಣ್ಣ ಅಲ್ಲಮ ಪ್ರಭುರಾಯ
ಬಂಡು ಗೆಲುವುತ ಬರುವಾಗ ಲೋಕದ
ನಡೆಗೆಟ್ಟು ಕಾಕು ಪುರಾಣ ಹೆಚ್ಚಿ ಶಿವ ಪುರಾಣ
ಸಾಕು ಸಾಕೆನಿಸಿತ್ತು, ಬಸವಣ್ಣ

ತಾತ್ಪರ್ಯ : ಬಸವಣ್ಣ ಅಲ್ಲಮಾದಿ ಶರಣರು ಅಲ್ಲಿಯವರೆಗೆ ಪ್ರಬಲವಾಗಿದ್ದ ಜೈನ ಮತ್ತು ಬ್ರಾಹ್ಮಣ್ಯ ಜಡತ್ವದ ವಿರುದ್ಧ ಪ್ರಭುತ್ವದ ವಿರುದ್ಧ ಸಮರ ಸಾರಿದಾಗ ಅದಕ್ಕೆ ವಿರುದ್ಧವಾದ **ಪ್ರತಿರೋಧ**ಗಳು ಬಂದಾಗ ಅವುಗಳನ್ನು ಗೆಲ್ಲುತ್ತ ಶರಣತತ್ತ್ವ ಜನಪ್ರಿಯವಾಗತೊಡಗಿತು. ಬರುಬರುತ್ತ ಶರಣರ ಮೂಲ ವಿಚಾರಗಳಿಗೆ ಭಿನ್ನವಾದ ರೀತಿಯ ಪುರಾಣ ಪರಂಪರೆ ಬೆಳೆದು ಬಂತು. ಇದು ಕಾಕು(ಕೆಟ್ಟ) ಪುರಾಣಗಳಿಗೆ ದಾರಿ

ಮಾಡಿಕೊಟ್ಟಿತು. ಜನರ ನಡೆ ನುಡಿಗಳು ಕೆಡುತ್ತ ಸಮಾಜ ಅವನತಿಯ ದಾರಿ ಹಿಡಿಯಿತು. ಇಂತಹ ನಿರುಪಯುಕ್ತ ಶಿವ ಪುರಾಣಗಳು ಸಾಕಪ್ಪ ಸಾಕು ಎಂಬಂತೆ ಸತ್ಯ ಶರಣ ಮಾರ್ಗಿಗಳಿಗೆ ಅನಿಸುತ್ತದೆ. ಇದು ಮೌನೇಶ್ವರರ ಕಾಲಕ್ಕೇ ಕಂಡುಬರುತ್ತಿದ್ದ ಪರಿಸ್ಥಿತಿ ಎಂಬುದನ್ನು ಯೋಚಿಸಿದಾಗ ಮೌನೇಶ್ವರರ ದೂರದೃಷ್ಟಿಯ ಮಹತ್ವ ಗೊತ್ತಾಗುತ್ತದೆ.

೬೫೬

ನಿಬ್ಬಣ ನೆರೆದೀತು ಹಂಪೆಯ ಹೊಳೆಯಲಿ
ಬೊಬ್ಬೆ ಹೊಯ್ಯಲು ಸಾಕ್ಷಿ
ಅಬ್ಬರದಲಿ ವೀರಬಸವಣ್ಣ ಬರುವಾಗ
ಸಂಭ್ರಮವೇ ಸಾಕ್ಷಿ, ಬಸವಣ್ಣ

ತಾತ್ಪರ್ಯ : ಹಂಪೆ ಆಗಿನ ಕಾಲದ ವಿಜಯನಗರ ರಾಜಧಾನಿ. ಅಲ್ಲಿಯ ವೈಭವದಿಂದ ನಡೆಯುತ್ತಿದ್ದ ಮದುವೆ ಮುಂತಾದ ಶುಭಕಾರ್ಯಗಳಿಗೆ ಜನಸಂದಣಿ ಸೇರಿದಾಗ, ಪರಕೀಯರ ಆಕ್ರಮಣದಿಂದ, ಜನರು ಬೊಬ್ಬೆ ಹೊಡೆಯುವುದು ಕೂಗಾಡುವುದು ಹುಯ್ಯಲಿಡುವುದು ಕಂಡುಬರುತ್ತದೆ. ಇದೊಂದು ಭಾಗ, ಇನ್ನೊಂದು ಭಾಗ ವೀರಬಸವಣ್ಣ ಬರುವಾಗ ಸಂಭ್ರಮ ಕಂಡುಬರುತ್ತದೆ ಎಂದು ಹೇಳುತ್ತದೆ. ಬಹುಶಃ ಆ ದಾಳಿಯನ್ನು ಎದುರಿಸಿ ಜನರಲ್ಲಿ ಮತ್ತೆ ಸಂಭ್ರಮ ನೆಲೆಗೊಳಿಸಲು ವೀರಬಸವಣ್ಣ ಬರುತ್ತಾನೆ ಎನ್ನುವುದು ವಚನದ ಅರ್ಥ. ಅಥವಾ ಮುಂದೆ ವೀರಬಸವಣ್ಣ ಬಂದು ಅಲ್ಲಿ ಶಾಂತಿ ನೆಮ್ಮದಿಯನ್ನು ನೆಲೆಗೊಳಿಸುತ್ತಾನೆ, ಆಗ ಜನರಲ್ಲಿ ಸಂಭ್ರಮವೇ ಕಂಡುಬರುತ್ತದೆ ಎಂಬ ಅರ್ಥವೂ ಬರುತ್ತದೆ. ಇಲ್ಲಿ ಹೇಳುವ ಐತಿಹಾಸಿಕ ಘಟನೆ ಮತ್ತು ವೀರಬಸವಣ್ಣ ಯಾರು ಎಂಬ ಬಗ್ಗೆ ನಿಗೂಢತೆ ಇದೆ.

೬೫೭

ಬಸವ ಪಟ್ಟಣದಲ್ಲಿ ಭೈರೂಪ ಕಂಡರೆ
ಕುಶಲ ಮೌನೇಶ ಕುಳಿತಿರಲಿ ಮರ್ತ್ಯದ
ಕೆಲಸ ನೋಡು ಗುರುರಾಯ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಬಸವಕಲ್ಯಾಣಕ್ಕೋ ಅಥವಾ ಬಸವ ಪಟ್ಟಣ ಎಂಬ ಹೆಸರಿನ ಯಾವುದೋ ಊರಿಗೆ ಹೋದಾಗ ಅಲ್ಲಿ ಭೈರೂಪ-ಹಗಲುವೇಷದ ಆಟವನ್ನು ನೋಡುತ್ತಾರೆ. ನೋಡುತ್ತ ಕುಳಿತುಕೊಂಡು ದೇವರೇ ಈ ಲೋಕದ ವಿಚಿತ್ರ ಲೀಲೆಯನ್ನು ನೋಡು ಜಗವೇ ಒಂದು ನಾಟಕ ರಂಗ. ಸೂತ್ರಧಾರ ಆಡಿಸಿದಂತೆ ನಟ ನಟಿಯರಾಗಿ ಜನರು ಆಡುತ್ತಾರೆ ಎಂಬ ತತ್ತ್ವವನ್ನು ಮೌನೇಶ್ವರರು ಸೂಚಿಸಿದಂತಿದೆ.

೬೫೮

ತಿಳವಳ್ಳಿ ಸ್ಥಳದಲ್ಲಿ ಇಳಿದಾರು ಶರಣರು
ಮಳೆಗಾಲನೆಲ್ಲ ಕಳೆದಾರು, ಕಳೆದ ಕಾರಣದಿಂದ
ಅಳಿಗಾಲ ಬಂತು, ಬಸವಣ್ಣ

ತಾತ್ಪರ್ಯ : ತಿಳವಳ್ಳಿ ಎಂಬ ಊರಿನಲ್ಲಿ ಶರಣರು ಇಳಿಯುತ್ತಾರೆ. ಅಲ್ಲೇ ಉಳಿದುಕೊಂಡು ಮಳೆಗಾಲವನ್ನೆಲ್ಲ ಕಳೆಯುತ್ತಾರೆ. ಮಳೆಗಾಲ ಬಂದಾಗ ಸಾಧು ಸಂತರು ಸನ್ಯಾಸಿಗಳು ಯೋಗಿಗಳು ಶರಣರು ಎಲ್ಲೋ ಒಂದು ಕಡೆ ನೆಲೆಸಿ ಅನುಷ್ಠಾನ ಮಾಡುವುದು ಒಂದು ಪ್ರಾಚೀನ ಸಂಪ್ರದಾಯ. ಉಳಿದಂತೆ ಅವರು ಲೋಕ ಸಂಚಾರಿಗಳು, ಪರಿವ್ರಾಜಕರು. ಹಾಗೆ ಅವರು ನೆಲೆಸಿದ ಸ್ಥಳದಲ್ಲಿ ಶಾಂತಿ, ಸಮೃದ್ಧಿಗಳು ನೆಲೆಗೊಳ್ಳುತ್ತವೆ ಎಂಬ ನಂಬಿಕೆಯೂ ಇದೆ. ಆದರೆ ಈ ವಚನದಲ್ಲಿ ತಿಳವಳ್ಳಿ ಎಂಬ ಊರಿನಲ್ಲಿ ಶರಣರು ಮಳೆಗಾಲದಲ್ಲಿ ಹೀಗೆ ಉಳಿದುಕೊಂಡ ಕಾರಣದಿಂದಲೇ ಅಳಿಗಾಲ ಬಂತು ಅಥವಾ ಬರುತ್ತದೆ ಎಂದು ಮೌನೇಶ್ವರರು ಹೇಳಿರುವುದು ಸಂಪ್ರದಾಯಕ್ಕಿಂತ ಭಿನ್ನವಾದುದು ಘಟಿಸುತ್ತದೆ ಎಂದು ಹೇಳಿದ ಭವಿಷ್ಯವಾಗಿದೆ.

೬೫೯

ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮಕ್ಕೆ
ನಿಚ್ಚ ಭೋಜನ ಮಾಡಿಸಿದೆನೆಂಬ ಅಹಂಕಾರದಲ್ಲಿ
ಠಕ್ಕು ಬಂತು ನಿನ್ನ ಭಕ್ತಿಗೆ, ಮರ್ತ್ಯಕ್ಕೆ ಹೋಗೆಂದು
ಕುಕ್ಕನ ಕೂಡ ಬೆರೆದುಂಡಲ್ಲದೆ, ನಿನ್ನ
ಹತ್ತಿದ ಪಾಪ ಹರಿಯದು, ಬಸವಣ್ಣ

ತಾತ್ಪರ್ಯ : ಬಸವಣ್ಣ ಮಾಡಿದ ಧಾರ್ಮಿಕ ಸಂಘಟನೆಯಿಂದ ಅನೇಕ ಶರಣರು ದೇಶದ ಎಲ್ಲ ಕಡೆಯಿಂದಲೂ ಬಂದು ಕಲ್ಯಾಣದಲ್ಲಿ ಸೇರಿದರು. ಅವರೊಡನೆ ವಚನ ಸಾಹಿತ್ಯದ ಪ್ರಚಾರ ಮಾಡುವ ಜಂಗಮರ ಒಂದು ಪಡೆಯೇ ಸೃಷ್ಟಿಯಾಯಿತು. ಅಂತಹವರ ಸಂಖ್ಯೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ. ಅಂತಹ ಜಂಗಮರಿಗೆ ಪ್ರತಿನಿತ್ಯ ಪ್ರಸಾದದ ವ್ಯವಸ್ಥೆ ಅಲ್ಲಿ ನಡೆಯುತ್ತಿತ್ತು. ಈ ಬಗ್ಗೆ ಬಸವಣ್ಣನಿಗೆ ಅಹಂಕಾರ ತಲೆದೋರಿತ್ತು. ಅಲ್ಲಮಪ್ರಭು ಆತನ ಅಹಂಕಾರವನ್ನು ಕಳೆದನೆಂಬ ಕಥೆ ಕಾವ್ಯಗಳಲ್ಲಿ ದಾಖಲಾಗಿದೆ. ಮೌನೇಶ್ವರರು ಬಸವಣ್ಣನ ಅಹಂಕಾರದ ಪಾಪಕ್ಕೆ ಪರಿಹಾರವಾಗಿ ಹೇಳಿರುವ ರೀತಿ ಭಿನ್ನವಾಗಿದೆ. ಅಹಂಕಾರ ನಿರಸನದ ಭಾಗವಾಗಿ ಆತನು ಮುಂದೆ ಮರ್ತ್ಯಲೋಕದಲ್ಲಿ ಹುಟ್ಟಿ ನಾಯಿಗಳ ಜೊತೆಯಲ್ಲಿ ಊಣಬೇಕು ಎಂಬುದು. ಆತನು ಯಾವ ರೂಪದಲ್ಲಿ ಈ ಲೋಕದಲ್ಲಿ ಹುಟ್ಟಿ ಬಂದು ಈ ಶಾಪ ಪರಿಹಾರ ಮಾಡಿಕೊಂಡ ಎಂಬುದು ಒಗಟಾಗಿದೆ.

೬೬೦

ಅನ್ನ ಪ್ರಸಾದವ ನೀಡಿದೆನೆಂಬ ಬಣ್ಣದ ಹಮ್ಮಿಲಿ
ನೀ ಹೋಗೆಂದು ಕುನ್ನಿಯ ಕೂಡ ಬೆರೆದುಂಡಲ್ಲದೆ
ನಿನ್ನ ಹತ್ತಿದ ಪಾಪ ಹರಿಯದು, ಬಸವಣ್ಣ

ತಾತ್ಪರ್ಯ : ಈ ವಚನ ಹಿಂದಿನ ವಚನದ ವಿಷಯವನ್ನೇ ಚಿಕ್ಕದಾಗಿ ಸರಳವಾಗಿ ಹೇಳುತ್ತದೆ. ಇಲ್ಲಿ ಬಸವಣ್ಣ ಮತ್ತು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರ ಪ್ರಸ್ತಾಪವಿಲ್ಲ. ಆದರೆ ಅನ್ನಪ್ರಸಾದವನ್ನು ನೀಡಿದೆನೆಂಬುದು ಅಹಂಕಾರದ ಮಾತು. ಮಾಡಿದೆನೆಂಬುದು ನೀಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ ಎಂದು ಬಸವಣ್ಣನವರ ವಚನವೇ ಇದೆ. ದಾನ ಮಾಡಿದರೂ ಮಾಡಿದೆ ಎಂಬ ಅಹಂಕಾರ ಮನದಲ್ಲಿರಬಾರದು ಎಂಬ ಸಿದ್ಧಾಂತವಿದೆ. ಆದರೆ ಅಂತಹ ಅಹಂಕಾರ ಮನದಲ್ಲಿ ಬಂದರೆ ನಾಯಿಯೊಡನೆ ಕೂಡಿ ತಿನ್ನುವಂತಹ ಹೀನ ಜನ್ಮ ಬರುತ್ತದೆ ಎಂಬುದು ಈ ವಚನದ ನೀತಿ. ಬಹುಶಃ ಬಸವಣ್ಣನಿಗೆ ಇಂತಹ ಅಹಂಕಾರ ಬಂದಾಗ ಅಲ್ಲಮಪ್ರಭು ಈ ರೀತಿ ಹೇಳಿರಬಹುದು. ಅದಕ್ಕೆ ಬಸವಣ್ಣ ಪಶ್ಚಾತ್ತಾಪದಿಂದ ಪ್ರಾಯಶ್ಚಿತ ಮಾಡಿಕೊಂಡಿರಬಹುದು ಎಂದು ಊಹಿಸ ಬಹುದು.

೬೬೧

ಹೆಬ್ಬಾವು ಸಿಂಹಕೆ ಗುಬ್ಬಿ ಗುಟುಕಾಕುವದೆ
ಅರ್ಭಟಿಸಿ ಬಂದ ಅರಸಗೆ ಒಬ್ಬ ನಿಲ್ಲುವುದು
ಅಪರೂಪ ಮರ್ತ್ಯಕ್ಕೆ ಕೊಬ್ಬು ಮುರಿಯಲು
ಬಂದಾನೆ ನರಸಿಂಹನಾಗಿ, ಬಸವಣ್ಣ

ತಾತ್ಪರ್ಯ : ಈ ವಚನ ಮೌನೇಶ್ವರರು ತನ್ನನ್ನು ವಿರೋಧಿಸಿದವರನ್ನು ಕುರಿತು ಹೇಳಿರಬಹುದಾದ ವಚನ ಎನಿಸುತ್ತದೆ. ಸಣ್ಣತನ ಸಂಕುಚಿತ ಮನೋಬುದ್ಧಿಯ–ವರನ್ನೆಲ್ಲ ಅವರು ತಮ್ಮ ವ್ಯಕ್ತಿತ್ವದ ಉನ್ನತಿಯಿಂದ ಸುಲಭವಾಗಿ ಸೋಲಿಸಿ ಶರಣಾಗುವಂತೆ ಮಾಡಿಕೊಂಡರು. ಅದಕ್ಕೆ ಗುಬ್ಬಿಯೊಂದು ಹೆಬ್ಬಾವಿಗಾಗಲೀ ಸಿಂಹಕ್ಕಾಗಲಿ ಆಹಾರವನ್ನು ಹಾಕಬಹುದೇ; ಎಂದೂ ಬಲಶಾಲಿಯಾದ ರಾಜನನ್ನು ಯಾರೋ ಒಬ್ಬ ಸಾಮಾನ್ಯನು ಎದುರಿಸಿ ಹೋರಾಡಿ ಗೆಲ್ಲಲು ಸಾಧ್ಯವೆ! ಎಂಬ ಹೋಲಿಕೆಗಳಿಂದ ಹೇಳಿದ್ದಾರೆ. ತಾನು ನರಸಿಂಹನಂತೆ ಲೋಕದ ಜನರ ಕೊಬ್ಬನ್ನು ಅಜ್ಞಾನವನ್ನು(ಮದ, ಗರ್ವ) ಮುರಿಯಲು ಬಂದಿರುವುದಾಗಿ ಹೇಳಿಕೊಂಡಿದ್ದಾರೆ.

೬೬೨

ಹಿಂದು ತುರುಕರು ಒಂದಾಗಿ ನಡದಾರು
ದೀನ್‌ದಾರ ಬಸವಣ್ಣ ಬರುವಾಗ, ಲೋಕದ
ಅಂಧಕರಿಗೇನು ತಿಳಿಯದು, ಬಸವಣ್ಣ

ತಾತ್ಪರ್ಯ : ಮಹಾತ್ಮನಾದ ಚೆನ್ನಬಸವಣ್ಣ ದೀನ್‌ದಾರ ರೂಪದಲ್ಲಿ ಅವತರಿಸಿ ಬರುತ್ತಾನೆ. ಆಗ ಹಿಂದೂಗಳೂ ಮುಸಲ್ಮಾನರೂ ಅನ್ಯೋನ್ಯವಾಗಿ ಬದುಕುತ್ತಾರೆ. ಇದರ ಮರ್ಮ ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಇದು ಮುಂದೆ ನಡೆಯುವ ಭವಿಷ್ಯದ ಮಾತಾದರೂ ಇದರ ಕಾರಣಕರ್ತ ಮೌನೇಶ್ವರರೇ ಆಗಿದ್ದಾರೆ. ಅಂತವರ ಪ್ರಯತ್ನದಿಂದಾಗಿಯೇ ಇತ್ತೀಚಿನವರೆಗೂ ಹಿಂದೂ ಮುಸ್ಲಿಂ ಸಾಮರಸ್ಯದ ಜೀವನ ನಡೆಯುತ್ತಲೇ ಬಂದಿದೆ. ದೀನ್‌ದಾರ್ ಚೆನ್ನಬಸವಣ್ಣ ಎಂದು ಹೇಳಿರುವುದನ್ನು ಮೌನೇಶ್ವರರ ಗುಡಿಗಳಲ್ಲಿ 'ಮೌನದೀನ್' ಎಂದು ಘೋಷಿಸುವ ಮಂತ್ರದೊಡನೆ ಹೋಲಿಸಿಕೊಳ್ಳಬೇಕು. ಒಂದು ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ದೀನ್‌ದಾರ್ ಚೆನ್ನಬಸವಣ್ಣನ ಪಂಥ ಜೀವಂತವಾಗಿದ್ದದ್ದು ಗಮನಾರ್ಹ.

೬೬೩

ಆಚಾರ ಅನುಭಾವ ಸೂಚನೆ ಸೂಕ್ಷ್ಮ ದೀಕ್ಷೆ
ದಿವ್ಯ ಪುರುಷ ಪಾವನ ಸಾಕ್ಷಿಯ
ಕೊಂಡು ಧರೆಗಿಳಿದ, ಬಸವಣ್ಣ.

ತಾತ್ಪರ್ಯ : ಈ ವಚನ ಕೂಡ ಮೌನೇಶ್ವರರಿಗೆ ಅನ್ವಯವಾಗುವಂತಿದೆ. ಸ್ಥೂಲವಾದ ದೀಕ್ಷೆಯಿಂದ ಬಾಹ್ಯ ಆಚಾರಗಳಾದ ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ, ವಿಭೂತಿ, ರುದ್ರಾಕ್ಷಿ ಮುಂತಾದವುಗಳು ಇರುವಂತೆ ಮಾರ್ಗದರ್ಶನವನ್ನು ಕೊಡುತ್ತದೆ. ಆದರೆ ಸೂಕ್ಷ್ಮ ದೀಕ್ಷೆಯು ಅಂತರಂಗದ ಆಚಾರ ಅನುಭಾವಗಳ ಕುರಿತಾದ ಸೂಚನೆಗಳನ್ನು ನೀಡುತ್ತದೆ. ಇದು ಅವತಾರ ಪುರುಷನೂ ಮಹಾತ್ಮನಾದವನೂ ಮಾತ್ರ ಪರಮಾತ್ಮನ ಸಾಕ್ಷಿ ರೂಪವಾಗಿ ಇಂತಹ ದೀಕ್ಷೆಯನ್ನು ಪಡೆದು ಭೂಲೋಕಕ್ಕೆ ಇಳಿದು ಬರುತ್ತಾನೆ. ಇಂತಹವರಿಂದ ಮಾತ್ರ ಜನಮನದ ಅಂತರಂಗ ಶುದ್ಧಿಯಾಗಿ ಸಾಮಾಜಿಕವಾಗಿ ಬಹಳಷ್ಟು ಸುಧಾರಣೆಗಳಾಗುತ್ತವೆ. ಮೌನೇಶ್ವರರಿಂದ ಇಂತಹ ಸುಧಾರಣೆಯಾಗಿರುವುದನ್ನು ನಾವು ಅರಿಯಬಹುದು.

೬೬೪

ಬಿತ್ತಿದ ರಾಜಾನ್ನ ಕಿತ್ತಿದ ಶಿಲೆಯ
ಸತ್ಯರು ಇದ್ದಂಥ ಮುಕ್ತ
ನಾಗಿ ಬಂದ ಮುನಿರಾಯ, ಬಸವಣ್ಣ

ತಾತ್ಪರ್ಯ : ಮುನಿರಾಯ ಎಂದರೆ ಮೌನೇಶ್ವರರು ಅಲ್ಲಲ್ಲಿ ಹೇಳಿರುವಂತೆ ಅಲ್ಲಮನೇ ಆಗಿದ್ದಾನೆ. ಮುನಿರಾಯ ಎನ್ನುವುದು ಮುಕ್ತನಾದವನು, ಸತ್ಯವಂತರು ಇರುವ ರೀತಿಯಲ್ಲಿ ಇರುವವನು ಎನ್ನುವುದು ಇಲ್ಲಿಯ ಮುಖ್ಯ ವಾಕ್ಯ. ಅವರು ಇದಕ್ಕೆ ಹೋಲಿಕೆ ಕೊಟ್ಟಿರುವುದು ಬಿತ್ತಿದ ರಾಜಾನ್ನ ಮತ್ತು ಕೆತ್ತಿದ ಶಿಲೆಗಳು. ರಾಜಾನ್ನ ಎಂದರೆ ಅಕ್ಕಿಗಳ ಪ್ರಕಾರದಲ್ಲಿಯೇ ಶ್ರೇಷ್ಠವಾದುದು. ಬಿತ್ತಿದ್ದೇ ಬೆಳೆಯುವಂತೆ ರಾಜಾನ್ನ ಹುಟ್ಟಿ ಬೆಳೆಯುತ್ತದೆ. ಅದು ಶ್ರೇಷ್ಠವಾದ ಫಸಲು. ಕೆತ್ತಿದ ಶಿಲೆಯು–ಕೆತ್ತನೆಗೆ ಉಪಯೋಗವಾಗುವಂತಹುದು. ಅದೊಂದು ಎಲ್ಲರೂ ಪೂಜಿಸುವ ಮೂರ್ತಿಯಾಗಿ ರೂಪುಗೊಳ್ಳುತ್ತದೆ. ಸತ್ಯಶರಣರು ಹೀಗೆ ಲೋಕಕಲ್ಯಾಣಾರ್ಥವಾಗಿ ಜನ್ಮ ತಳೆಯುತ್ತಾರೆ. ಅಲ್ಲಮ ಮುನಿರಾಯ ಹೀಗೆ ಹುಟ್ಟಿ ಬಂದು, ಉಣ್ಣುವ ರಾಜಾನ್ನದಂತೆ ಸುಖ ನೀಡಿದ ಶಿಲಾಮೂರ್ತಿಯಂತೆ ಪೂಜ್ಯನಾದ ಎಂಬುದು ಅಂತರಾರ್ಥ.

೬೬೫

ಯಾಸಿಗಿಕ್ಕಿದ ಕಲ್ಲು ಅದರ ಆಸರವೇನು
ಬಿರುದಿಗೆ ಲೋಕದ ಆಸೆಗೆ, ಜಂಗಮರ
ಹೊಡೆದಾಟದಿಂದಲಿ ವ್ಯವಸಾಯ
ಮುಂದೆ ನಡೆಯದು, ಬಸವಣ್ಣ

ತಾತ್ಪರ್ಯ : ಅಳತೆಗೆ ಸರಿಯಾಗಿ ಇಡದಿರುವ ಅಂದರೆ ಸೊಟ್ಟದಾಗಿ ಇಟ್ಟ ಕಟ್ಟಡದ ಕಲ್ಲು ಭದ್ರವಾಗಿರುವುದೇನು! ಲೋಕದ ಪ್ರತಿಷ್ಠೆಯ ಆಸೆಯಿಂದ ಜಂಗಮರು ಹೊಡೆದಾಡುವುದರಿಂದ ಮುಂದೆ ಜನರ ವ್ಯವಸಾಯ ವ್ಯವಹಾರಗಳು ಸರಿಯಾಗಿ ನಡೆಯುವುದಿಲ್ಲ.

ಸಮಾಜದ ಕಟ್ಟಡದಲ್ಲಿ ಬೇರೆ ಬೇರೆ ಜಾತಿಗಳು ಬೇರೆ ಬೇರೆ ಕಲ್ಲುಗಳಂತೆ ಅವು ಆಯಾ ಸ್ಥಾನಗಳಲ್ಲಿ ಅಳತೆಗೆ ಸರಿಯಾಗಿ ನೆಲೆಗೊಂಡರೆ ಕಟ್ಟಡ ಭದ್ರವಾಗಿರುತ್ತದೆ. ಇರದಿದ್ದರೆ ಸಮುದಾಯಗಳೆಂಬ ಕಲ್ಲಿನಿಂದ ಕಟ್ಟಿದ ಇಡೀ ಕಟ್ಟಡ ಅಭದ್ರವಾಗುತ್ತದೆ. ಅದೇ ರೀತಿ ಜಂಗಮರು ಸಾಮಾಜಿಕ ವ್ಯವಸ್ಥೆಯಲ್ಲಿ ಮಾರ್ಗದರ್ಶಕವಾದ ಬುನಾದಿ ಕಲ್ಲಿನಂತೆ. ಅವರೇ ತಮ್ಮ ತಮ್ಮೊಳಗೆ ಬಿರುದಿಗೆ, ಲೋಕದ ಆಶೆಗೆ ಹೊಡೆದಾಡಿದರೆ ಸಾಮಾಜಿಕ ಭದ್ರತೆ ನೆಮ್ಮದಿಗಳು ಹಾಳಾಗುತ್ತವೆ ಎಂಬುವ ಅರ್ಥ ಇಂದಿಗೂ ಪ್ರಸ್ತುತವಾದ ಭವಿಷ್ಯವಾಗಿದೆ.

೬೬೬

ಉದ್ದವಾದುದು ಮುರಿದೀತು ಹಿಗ್ಗಿದುದು ಹರಿದೀತು
ಅಗ್ಗವಾದುದು ಪ್ರಿಯವಾದೀತು, ಮುಂದಿನ್ನು
ಅಗ್ಞಾನಿಗಳಿಗೇಕೆ ತಿಳಿಯದು, ಬಸವಣ್ಣ

ತಾತ್ಪರ್ಯ : ಆಗಿನ ಕಾಲದ ರಾಜಕೀಯ ವಿದ್ಯಮಾನಗಳು, ಸಾಮಾಜಿಕ ಧಾರ್ಮಿಕ ಬೆಳವಣಿಗೆಗಳು ಮುಂದೆ ಏನಾಗಬಹುದು ಎಂಬ ಸೂಚನೆಗಳನ್ನು ಈ ವಚನ ಧ್ವನಿಸುತ್ತದೆ. ನಿರಂಕುಶ ರಾಜಕೀಯ ಪ್ರಭುತ್ವ ಅತಿ ಎತ್ತರವಾಗಿ ಉದ್ದವಾಗಿ ಬೆಳೆದರೆ ಮುರಿಯುವುದು ಸಹಜ. ಧಾರ್ಮಿಕವಾಗಿ ಆಚರಣೆಗಳ ವ್ಯಾಪ್ತಿಯನ್ನು ಹಿಗ್ಗಿಸುತ್ತಾ ಹೋಗುವುದರಿಂದ ಧರ್ಮದ ಮೂಲವೇ ಹರಿದು ಹೋಗುತ್ತದೆ. ಇದು ಎಲ್ಲ ಮತ ಧರ್ಮಗಳಿಗೂ ಅನ್ವಯಿಸುವ ಮಾತು. ಇವುಗಳಿಗೆ ಭಿನ್ನವಾಗಿ ಜನರಿಗೆ ಸುಲಭವಾಗಿ ಆಚರಣೆ ಯೋಗ್ಯವಾದಂಥ ಸಂತೋಷ ಕೊಡುವಂತಹ ವಿಷಯಗಳು ಜನಪ್ರಿಯವಾಗುತ್ತವೆ. ಕಲಿಗಾಲದಲ್ಲಿ ಅಗ್ಗದ ಬದುಕು ಹಾಗೂ ವ್ಯವಹಾರ ಮುನ್ನೆಲೆಗೆ ಬರುತ್ತದೆ.

೬೬೭

ಸಜ್ಜನ ಶರಣರಿಗೆ ಹೆಜ್ಜೆ ಹುಸಿಕನೆಂದರೆ
ಸೆಜ್ಜೆಗಳು ಬೆಳೆಯುವವೆ, ಜಗದೊಳಗೆ ಮುಂದಿನ್ನು
ಮಜ್ಜಿಗೆ ವಾಗರ ಅಪರೂಪ, ಬಸವಣ್ಣ

ತಾತ್ಪರ್ಯ: ಸಜ್ಜನರು ಇರುವುದರಿಂದಲೇ ಅವರಿಗೆ ತಕ್ಕ ಮಾನ್ಯತೆಯನ್ನು ಸಮಾಜ ಕೊಡುವುದರಿಂದಲೇ ಜಗತ್ತಿನಲ್ಲಿ ಮಳೆ ಬೆಳೆಗಳ ಸಮೃದ್ಧಿಯಾಗಿ ಜನರು ಸುಖವಾಗಿರುತ್ತಾರೆ ಎಂಬುದು ನಮ್ಮ ಜನರು ನಂಬಿಕೊಂಡು ಬಂದಿರುವ ಒಂದು ಸಿದ್ಧಾಂತ. ಸತ್ಯ ಧರ್ಮ ನ್ಯಾಯ ನೀತಿ ಮುಂತಾದುವೆಲ್ಲ ಸಮಾಜದಲ್ಲಿ ಸಜ್ಜನ ಶರಣರ ಆದರ್ಶಗಳಿಂದಲೇ ರೂಪಿತವಾಗಿರುತ್ತವೆ. ಅವರಿಗೆ ಮಾನ್ಯತೆ ಇರುವಂಥ ಸಮಾಜವೆಂದರೆ ಅಂತಹ ಮೌಲ್ಯಗಳಿಗೆ ಬೆಲೆಯಿರುವಂತದ್ದು. ಅಂತವರನ್ನೇ ಸುಳ್ಳುಗಾರನೆಂದು ನಿಂದಿಸಿದರೆ ಮಳೆ ಬೆಳೆಗಳು ಬಾರದೆ ಅನ್ನ ಮಜ್ಜಿಗೆ ಕೂಡ ಅಪರೂಪವಾಗುವಂತಹ ಬರಗಾಲ ಪರಿಸ್ಥಿತಿ ಬರುತ್ತದೆ.

೬೬೮

ಏಳೇಳು ಲೋಕವ ಗಾಳಿಯ ಮಾಡಿದ
ದಾಳಿಯ ತಂದ ಧರೆಗೆಲ್ಲ ಅಲ್ಲಮರಾಯನ
ಏಳಲವ ಮಾಡಿ ನುಡಿದ ಕಾರಣದಿಂದ
ಕೂಳು ನೀರು ಅಪರೂಪ, ಬಸವಣ್ಣ

ತಾತ್ಪರ್ಯ : ತನ್ನ ಚಿಂತನೆಗಳ ಮೂಲಕ ಹದಿನಾಲ್ಕು ಲೋಕಗಳಲ್ಲಿ ಅಲ್ಲೋಲ ಕಲ್ಲೋಲ ಮಾಡಿದ ಮಹಾತತ್ತ್ವಜ್ಞಾನಿ ಅಲ್ಲಮಪ್ರಭುವನ್ನು ಶರಣರೆಲ್ಲ ಕೂಡಿ ಗೌರವಿಸಿದರು. ಆತನ ತತ್ವಗಳಂತೆ ಮಾತುಗಳಂತೆ ಎಲ್ಲರೂ ನಡೆದರೆ ಲೋಕದ ಭೇದಗಳು, ಛಿದ್ರಕ ಶಕ್ತಿಗಳು ಎಲ್ಲವೂ ಕಡಿಮೆಯಾಗಿ ಲೋಕ ಕಲ್ಯಾಣವಾಗುತ್ತದೆ.

ಆತನ ಮಾರ್ಗದಲ್ಲಿ ನಡೆದರೆ ಲೋಕವು ಶಾಂತಿ ಸಮೃದ್ಧಿಗಳಿಂದ ಬಾಳುತ್ತದೆ. ಆತನನ್ನು ಆತನ ಬೋಧೆಗಳನ್ನು ಅಲ್ಲಗಳೆದು ನಡೆದುಕೊಂಡರೆ ಮಳೆ ಬೆಳೆಗಳು ಕೂಡ ಸರಿಯಾಗಿ ಸಿಗದೆ ಬರಗಾಲ ಬರುತ್ತದೆ. ಇದು ಹಿಂದಿನ ವಚನದ ವಿಸ್ತೃತ ರೂಪದಂತಿದೆ.

೬೬೯

ಆರು ದರುಶನದ ಮಾರಿಯ ಮುರಿದಾನೆ
ನೂರೊಂದು ಕುಲವ ಅಳಿದಾನೆ, ಮರ್ತ್ಯಕ್ಕೆ
ವೀರ ಮಹಾತ್ಮರು ಬರುವಾಗ
ನೂರೊಂದು ಬಾವಿಯೊಳು ಮುಳಿಗ್ಯಾರು, ಬಸವಣ್ಣ

ತಾತ್ಪರ್ಯ : ಮರ್ತ್ಯಕ್ಕೆ ವೀರ ಮಹಾತ್ಮನು(ರು) ಬರುವಾಗ ಸಾಂಖ್ಯ, ವೈಶೇಷಿಕಾದಿ ಆರು ದರ್ಶನಗಳು ಇಲ್ಲದಂತಾಗುತ್ತವೆ. ಅಸಂಖ್ಯ(ನೂರೊಂದು) ಕುಲಗಳು ಇಲ್ಲವಾಗಿ ಮಾನವ ಕುಲವೊಂದೇ ಎಂಬ ಸ್ಥಿತಿ ನೆಲೆಗೊಳ್ಳುತ್ತದೆ. ಇಂತಹ ಕ್ರಾಂತಿಯನ್ನು ವಿರೋಧಿಸುವವರು(ನೂರೊಂದು) ಬಾವಿಗಳಲ್ಲಿ ಮುಳುಗುತ್ತಾರೆ ಎಂದರೆ ನಾಶವಾಗುತ್ತಾರೆ. ಮತ ಪಂಥ ಕುಲ ಭೇದಗಳಿಲ್ಲದ ಒಂದು ಅದ್ಭುತ ಸಾಮಾಜಿಕ ಕ್ರಾಂತಿಯನ್ನು ಒಬ್ಬ ಮಹಾತ್ಮ ಅವತರಿಸಿ ತರುತ್ತಾನೆ ಎಂಬ ದೂರದೃಷ್ಟಿ ಇದರಲ್ಲಿದೆ.

೬೭೦

ಸೂರ್ಯನು ಬರುವಾಗ ತಾರೆಗಳು ಅಡಗ್ಯಾವು
ಧಾರುಣಿಗೆ ಚೆನ್ನಬಸವಣ್ಣ ಬರುವಾಗ
ಆರು ದರುಶನವು ಅಡಗ್ಯಾವು ಎಂದಿನ್ನು
ಶರಣರಿಗೆ ಸಾರ ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಸೂರ್ಯ ಹುಟ್ಟಿ ಬಂದಾಗ ಆಕಾಶದಲ್ಲಿ ಕಾಣುವ ನಕ್ಷತ್ರಗಳು ಕಣ್ಮರೆಯಾಗುತ್ತವೆ. ಹಾಗೆಯೇ ಮಹಾಜ್ಞಾನಿಯಾದ ಚೆನ್ನಬಸವಣ್ಣನು ಭೂಲೋಕಕ್ಕೆ ಹುಟ್ಟಿ ಬಂದಾಗ ಆರು ದರ್ಶನಗಳು(ವೈಶೇಷಿಕ, ನ್ಯಾಯ, ಸಾಂಖ್ಯ, ವೇದಾಂಗ, ಯೋಗ, ಮೀಮಾಂಸೆ ಎಂಬ ಆರು ದರ್ಶನಗಳು) ಅಡಗುತ್ತವೆ. ಭಾರತೀಯ ಧಾರ್ಮಿಕ ತಾತ್ತ್ವಿಕ ಹಾಗೂ ಬೌದ್ಧಿಕ ಲೋಕದಲ್ಲಿ ಈ ಆರು ದರ್ಶನಗಳು ಬಹಳ ಮಹತ್ವವಾಗಿದ್ದವು. ಚೆನ್ನಬಸವಣ್ಣನ ಅವತಾರಿಯಾದ ಮೌನೇಶ್ವರರು ಮತ್ತೆ ಈ ಲೋಕದಲ್ಲಿ ಹುಟ್ಟಿ ಬಂದಾಗ ಇಂತಹ ಶುಷ್ಕಶಾಸ್ತ್ರಗಳು ಮಂಕಾಗುತ್ತವೆ.

೬೭೧

ಹಿಂದಿನ ಶೀಲವು ಮುಂದತ್ತ ನಡೆಯವು
ಹಂದಿಯ ತಿಂದು ವ್ರತಗೆಟ್ಟು ಹೋಗುವ

ಕುಂದಿನ ದಿನಗಳು ಬರುವಾಗ ಅಂದು ನೋಡುವೆ
ನಿಮ್ಮ ನಿಜ ನುಡಿಯ, ಬಸವಣ್ಣ

ತಾತ್ಪರ್ಯ : ಹಿಂದೂ ಧರ್ಮದ ಶ್ರೇಷ್ಠತೆಯ ಬಹಳಷ್ಟು ಅಂಶಗಳು ಮಾಂಸಾಹಾರದ ವಿರೋಧದ ಮೇಲೆ ನಿಂತಿವೆ. ಮಾಂಸಾಹಾರಿಗಳು, ಕಪ್ಪು ಮತ್ತು ಕೀಳು ಜನರೆಂದು ಸಸ್ಯಾಹಾರಿಗಳು, ಮೇಲು ಜಾತಿಯವರೂ ಎಂದು ಜಾತಿಗಳನ್ನು ವರ್ಗೀಕರಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ. ಮುಂದೆ ಮೇಲು ಜಾತಿಯವರ ನಿತ್ಯ ನೇಮ ವ್ರತ ಮಡಿವಂತಿಕೆಗಳು ನಡೆಯುವುದಿಲ್ಲ. ಮಾಂಸಾಹಾರ ವನ್ನು ಮೇಲು ಜಾತಿಯವರೂ ಅನುಸರಿಸುತ್ತಾರೆ. ಆಗ ನಿಮ್ಮ ಶೀಲವಂತಿಕೆ ಹೇಗಿರುತ್ತದೆ ಎಂಬುದನ್ನು ನಾನು ನೋಡುತ್ತೇನೆ.

೬೭

ಕ್ಷಯನಾಮ ಸಂವತ್ಸರದಲ್ಲಿ ಆಡಿದ ಆಟ
ಲಕ್ಷೇಶ್ವರದಲ್ಲಿ ಭಾವವುಳ್ಳವರೆ ಭಕ್ತರು
ಬೆಲೆಯುಳ್ಳವರೆ ಲಿಂಗ
ಸ್ಥಾವರವುಳ್ಳವರೆ ಗುರುಮೂರ್ತಿ, ಲೋಕದ
ಗಾವಳಕ್ಕೆಲ್ಲಿಯ ದೈವವು, ಬಸವಣ್ಣ

ತಾತ್ಪರ್ಯ : ಇದೊಂದು ಐತಿಹಾಸಿಕ ದಾಖಲೆಯ ವಚನ. ಯಾವ ಕ್ಷಯನಾಮ ಸಂವತ್ಸರ ಎಂಬುದನ್ನು ಸಂಶೋಧಿಸಬೇಕಾಗಿದೆ. ಭಾವವಿದ್ದರೆ ಶ್ರದ್ಧೆ ಬಲಿತರೆ ಭಕ್ತ ಎಂಬ ಮಾತಂತೂ ಸರಿ, ಬೆಲೆಯುಳ್ಳವರು ಲಿಂಗ, ಸ್ಥಾವರವುಳ್ಳವರು ಗುರು ಎಂಬ ಮಾತುಗಳು ಸಂದಿಗ್ಧವಾಗಿವೆ. ಸಮಾಜದಲ್ಲಿ ಅಮೂಲ್ಯವಾದ ಅತ್ಯಂತ ಪೂಜ್ಯವಾದ ವ್ಯಕ್ತಿ ಲಿಂಗದಂತೆ ಎಂದೂ ಸ್ಥಿರವಾದ ಬುದ್ಧಿ ಚಿರಮೌಲ್ಯಗಳನ್ನು ಅನುಸರಿಸುವವರೇ ಗುರುಮೂರ್ತಿಯೆಂದು ಅರ್ಥೈಸಿಕೊಳ್ಳಬೇಕಾಗುತ್ತದೆ.

೬೭

ಕುಲರತ್ನ ಚಿಂತಾಮಣಿ ಕಲಿಯುಗಕ್ಕೆ ಬಂದಾನು
ಮಲಹರನ ಪಟ್ಟದ ಮದಕರಿಯು ಚೆನ್ನಬಸವಣ್ಣ
ಸಲೆ ಭಕ್ತರ ಪ್ರಾಣದ ಘನಲಿಂಗ
ಒಲಿದು ಮುಕ್ತಿ ಕೊಡ ಬಂದ
ಕಲಿಯುಗಕೆ ತಂದ ಹೊಸ ನಾಣ್ಯ, ಬಸವಣ್ಣ

ತಾತ್ಪರ್ಯ : ಮಾನವ ಕುಲಕ್ಕೆ ರತ್ನಪ್ರಾಯನಾಗಿರುವವನೂ, ಬೇಡಿದವರಿಗೆ ಬೇಡಿದ್ದನ್ನು ಕೊಡುವ ಶಕ್ತಿಯುಳ್ಳವನೂ ಚಿಂತಾಮಣಿಯಂತೆ ಅನರ್ಘ್ಯವಾಗಿ ಇರುವವನೂ

ಶಿವನ ಪಟ್ಟದಾನೆಯಂತಿರುವವನೂ ಆದ ಚೆನ್ನಬಸವಣ್ಣ ಕಲಿಯುಗದಲ್ಲಿ ಹುಟ್ಟಿ ಬರುತ್ತಾನೆ. ಭಕ್ತರಲ್ಲಿ ಪ್ರಾಣದ ಘನಲಿಂಗದ ಅರಿವನ್ನು ಮೂಡಿಸಿ ಮುಕ್ತಿಯನ್ನು ನೀಡುತ್ತಾನೆ. ಕಲಿಯುಗಕ್ಕೆ ಹೊಸ ಮೌಲ್ಯ(ನಾಣ್ಯ)ಗಳನ್ನು ತರುತ್ತಾನೆ.

ಇದು ಚೆನ್ನಬಸವಣ್ಣನವರ ದಿವ್ಯ ವ್ಯಕ್ತಿತ್ವವನ್ನು ಬಣ್ಣಿಸುತ್ತದೆ. ಕಲಿಯುಗದಲ್ಲಿ ಅವತರಿಸಿ ಬಂದು ಭಕ್ತರನ್ನು ಉದ್ಧರಿಸುತ್ತಾರೆ ಮತ್ತು ಹೊಸ ನೀತಿ ನಿಯಮಗಳನ್ನು ಮಾನವೀಯ ಮೌಲ್ಯಗಳನ್ನು ಪುನರ್ ಸ್ಥಾಪಿಸುತ್ತಾರೆ ಎಂಬ ಆಶಯವನ್ನು ವ್ಯಕ್ತ ಮಾಡುತ್ತದೆ. ಶರಣರ ಪೈಕಿ ಮೌನೇಶ್ವರರು ಪದೇ ಪದೇ ನೆನೆಯುವುದು, ಅಲ್ಲಮ ಮತ್ತು ಚೆನ್ನಬಸವಣ್ಣನವರನ್ನು. ಅವರು ಅವತರಿಸಿ ಲೋಕವನ್ನು ತಿದ್ದಿ ಬೆಳಗಲು ಬರುತ್ತಾರೆ ಎಂಬುದನ್ನು ಸಾರುತ್ತಾರೆ.

೬೭೪

ಆಚೆ ಈಚೆಗೆ ತಿರುಗುವ ಕೋತಿಗಳಾಗಬೇಡಿ
ಆಚಾರ್ಯ ಚೆನ್ನಬಸವಣ್ಣ ಬರುವಾಗ ನಿಮ್ಮ
ಕೋತಿ ಬುದ್ಧಿ ಬಿಡಿರಿ, ಬಸವಣ್ಣ

ತಾತ್ಪರ್ಯ : ಚೆನ್ನಬಸವಣ್ಣ ೧೨ನೆ ಶತಮಾನದ ಎಲ್ಲ ಶರಣರ ಪೈಕಿ ಷಡುಸ್ಥಲ ಬ್ರಹ್ಮ ಎಂದೂ ಮಹಾಜ್ಞಾನಿ ಎಂದು ಗುರುತಿಸಲ್ಪಟ್ಟಿದ್ದಾರೆ. ವೀರಶೈವ ಧರ್ಮಕ್ಕೆ ಸೈದ್ಧಾಂತಿಕ ನೆಲೆಗಟ್ಟನ್ನು ಕೊಟ್ಟವನು ಎಂದೂ ಕರೆಯಲಾಗುತ್ತದೆ. ಆ ಧರ್ಮದ ಪುನರುಜ್ಜೀವನ ಮಾಡಲು ಆತನು ಬಂದೇ ಬರುತ್ತಾನೆ. ಜನರಲ್ಲಿರುವ ಚಂಚಲವಾದ, ಅನೇಕ ಭೇದಗಳನ್ನು ಮಾಡಿಕೊಂಡು ಅಚೀಚೆ ಹರಿದಾಡುವ ಮನಸ್ಸನ್ನು ಸರಿಪಡಿಸಿ ವಿಶಾಲ ಧರ್ಮವನ್ನು ಸ್ಥಾಪಿಸುತ್ತಾನೆ ಎಂಬ ಆಶಯ ಇಲ್ಲಿದೆ.

೬೭೫

ಸಾರಿ ಹೇಳಿದವಗೆ ಸೇರಲರಿಯವು ದೋಷ
ಮೀರಿದವರಿಗೆ ಹಿರಿಯಕ್ಕ ದುರ್ಗಿ ತಾನು
ಸಂಹರಿಸುವಳು ಕಾಲ ಗಳಿಗೆಯೊಳು, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ವಚನಗಳು ಸತ್ಯವನ್ನು ಜನರ ಮುಂದೆ ಸಾರಿ ಸಾರಿ ಹೇಳುವ ಗುಣವನ್ನು ಹೊಂದಿವೆ. ಯಾರ ಭಯವೂ ಇಲ್ಲದೆ ಭಿಡೆಯೂ ಇಲ್ಲದೆ ಹೇಳುವ ಅವರಲ್ಲಿ ಯಾವ ದೋಷಗಳೂ ಇರುವುದಿಲ್ಲ. ಅವರ ಮಾತಿಗೆ ಬೆಲೆಕೊಟ್ಟು ಅವರು ಹೇಳಿದಂತೆ ನಡೆದುಕೊಳ್ಳಬೇಕಾದ್ದು ಜನರ ಕರ್ತವ್ಯ. ಅದನ್ನು ಮೀರಿ ಸತ್ಯವನ್ನು ಸಾರಿದವರನ್ನೇ ನಿಂದಿಸುವುದಾಗಲಿ, ಅದರಂತೆ ನಡೆಯದೆ ತಾತ್ಸಾರ ಮಾಡುವುದಾಗಲಿ, ಮಾಡಿದರೆ ಹಿರಿಯಕ್ಕನಂತಿರುವ ದುರ್ಗಾದೇವಿಯು ಶಿಕ್ಷಿಸುತ್ತಾಳೆ ಎಂದು ಮೌನೇಶ್ವರರು ಎಚ್ಚರಿಕೆ ನೀಡುತ್ತಾರೆ.

೬೭೬

ವಜ್ರದ ಬಂಡೆಯಲಿ ಹೆಜ್ಜುಂಟು ಗುರುವಿನ
ಸಜ್ಜನರುಂಟು ಸ್ಥಳದಲ್ಲಿ, ಅವರೆಡೆಗೆ
ಬಿಜ್ಜಣಿಗನಾಗಿ ಬಂದ ಮುನಿರಾಯ, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ಯಾವುದೋ ಪವಾಡ ಮಾಡಿದ ಹಿನ್ನೆಲೆಯಲ್ಲಿ ವಜ್ರದ ಬಂಡೆ(ಬಹುಶಃ ಇಂದಿನ ಲಿಂಗನ ಬಂಡಿ ಎಂಬ ಸ್ಥಳವಿರಬಹುದು) ಯಲ್ಲಿ ಹೆಜ್ಜೆ ಗುರುತುಗಳಿವೆ. ಅಂತಹ ಸ್ಥಳದಲ್ಲಿ ಇರುವವರೆಲ್ಲ ಸಜ್ಜನರಾಗಿರುತ್ತಾರೆ. ಅಂತಹವರ ಕಡೆಗೆ ಬಿಜ್ಜಣಿಗ(ಬೀಸಣಿಗೆ)ನಾಗಿ ತಂಗಾಳಿ ಬೀಸುವವನಂತೆ ಅಂದರೆ ಆತ್ಮೀಯ ಬಂಧುವಾಗಿ ಪ್ರೀತಿಯ ಸ್ನೇಹಿತನಾಗಿ ಮುನಿರಾಯ ಬಂದ(ಬರುತ್ತಾನೆ) ಎಂದು ಅವರು ತಮ್ಮ ಆಗಮನದ ಬಗ್ಗೆಯೇ ಹೇಳಿಕೊಂಡಿರುವ ಕುರುಹಿನಂತಿದೆ ವಚನ.

೬೭೭

ಕೊಟ್ಟುದ ಬೇಡ ಬಂದರೆ ಖೊಟ್ಟಿ ಮಾತುಗಳೇಕೆ
ಕೊಟ್ಟವರು ಸುಮ್ಮನಿರರಣ್ಣ, ಮುಂದಿನ್ನು
ಕಟ್ಟ್ಯಾರು ಕಣ್ಣುಗಳ, ಅವರು
ಸೃಷ್ಟಿಗೆ ಕರ್ತರೆನಿಸುವರು, ಬಸವಣ್ಣ

ತಾತ್ಪರ್ಯ : 'ಸೃಷ್ಟಿಕರ್ತರೆನಿಸಿಕೊಂಡವರು' ಎನ್ನುವುದು ವಿಶ್ವಕರ್ಮ ಜನಾಂಗಕ್ಕೆ ಅನ್ವಯವಾಗುವ ಪದ. ಕಬ್ಬಿಣದ ಆಯುಧಗಳು, ಕಟ್ಟಿಗೆಯ ಮನೆ, ಪೀಠೋಪಕರಣ ಗಳು, ಕಂಚು, ತಾಮ್ರ ಪಾತ್ರೆಗಳು ಪ್ರತಿಮೆ ಇತ್ಯಾದಿಗಳು, ಕಲ್ಲಿನ ಮೂರ್ತಿಗಳು, ಗುಡಿಗಳು, ಬಂಗಾರ ಬೆಳ್ಳಿಯ ಕಿರೀಟ, ಆಭರಣ ಮುಂತಾದವುಗಳನ್ನು ಮಾಡಿ ಕೊಡುವ ವರ್ಗವನ್ನು ಸೃಷ್ಟಿಕರ್ತರೆನ್ನಲಾಗುತ್ತದೆ. ಅವರು ಮಾಡಿಕೊಟ್ಟದ್ದಕ್ಕೆ(ಕೂಲಿ) ಅದರ ಪ್ರತಿಫಲವನ್ನು ಕೇಳುತ್ತಾರೆ. ಅವರಿಗೆ ಯೋಗ್ಯವಾದ ಮೌಲ್ಯವನ್ನು ಕೊಡದಿದ್ದರೆ ಕಣ್ಣು ಕಟ್ಟುವಂತಹ ದುಸ್ಥಿತಿಗೆ ತಂದಿಡಬಲ್ಲರು. ಅವರ ಬಗ್ಗೆ ಕೆಟ್ಟ ಮಾತುಗಳನ್ನಾಡುವುದು ಸರಿಯಲ್ಲ.

೬೭೮

ಎಚ್ಚರವ ತಪ್ಪಿದವರ ಕೊಚ್ಚುವ ಕೈ ಬಾಚಿಯಲಿ
ಹುಚ್ಚ ಮುಖದಯ್ಯ ಅವನಿಗೆ ಬಾಚಿ ಕೈಯಪ್ಪ
ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಈ ವಚನ ಮೌನಪ್ಪಯ್ಯ ತಮ್ಮ ಬಗ್ಗೆಯೇ ಹೇಳಿಕೊಂಡಿರುವಂಥದ್ದು. ತಾನು ಬಾಚಿ ಕಾಯಕದವನು, ಕೈಯಲ್ಲಿ ಬಾಚಿಯನ್ನು ಹಿಡಿದುಕೊಂಡು ಎಚ್ಚರ

ತಪ್ಪಿದವರನ್ನು ಕೊಚ್ಚಲು ಹುಚ್ಚು ಆವೇಶದ ಅಯ್ಯನಾಗಿ ಬಂದಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಅವರ ಸಾತ್ವಿಕ ಕೋಪವೆಲ್ಲ ಧರ್ಮ, ನೀತಿ, ನ್ಯಾಯ, ಸತ್ಯ ಮಾನವೀಯತೆ ಇವುಗಳನ್ನು ಬಿಟ್ಟು ಎಚ್ಚರ ತಪ್ಪಿ ನಡೆದುಕೊಳ್ಳುವ ಮಾನವರ ಮೇಲೆ. ಅಂತಹವರನ್ನು ತಮ್ಮ ಕಾಯಕದ ಆಯುಧದಿಂದ ಕೊಚ್ಚುವಷ್ಟು ಆಕ್ರೋಶ ಅವರಿಗೆ.

೬೭೯

ಅಂದಕ್ಕೆ ಆದವಾನಿ, ಚಂದಕ್ಕೆ ಕಂದನವಳ್ಳಿ
ನಂದಿಯ ಬೆಟ್ಟ ಕೈವಸೆಯಾದಾವು
ತಂದೆ ನಂಬಿಯಯ್ಯನ ಕೃಪೆಯಿಂದ, ಬಸವಣ್ಣ

ತಾತ್ಪರ್ಯ : ಆದವಾನಿ, ಕಂದನವಳ್ಳಿ, ನಂದಿ ಬೆಟ್ಟಗಳನ್ನು ಕೈವಶ ಮಾಡಿಕೊಳ್ಳುವುದೆಂದರೆ ಮೌನೇಶ್ವರರು ರಾಜರೇನಲ್ಲ. ಲೋಕ ಸಂಚಾರಿಗಳೂ ಲೀಲಾಮೂರ್ತಿಗಳೂ ಆದ ಅವರು ಅಲ್ಲೆಲ್ಲ ತಿರುಗಾಡಿ ಅವುಗಳ ಅಂದ ಚೆಂದಗಳನ್ನು ನೋಡಿ ಸಂತೋಷ ಪಟ್ಟರು. ರಮ್ಯವಾದ ಪ್ರಶಾಂತವಾದ ಪ್ರಕೃತಿ ಸೌಂದರ್ಯವನ್ನು ಸವಿದರು. ಆ ದೃಷ್ಟಿಯಿಂದ ಅವರ ಕೈವಶವಾದಂತೆ ದರ್ಶಿಸಲು ಸಾಧ್ಯವಾದದ್ದು ನಂಬಿಯಣ್ಣನ ಅಯ್ಯನಾದ ಶಿವನ ಒಲುಮೆಯಿಂದ.

೬೮೦

ಮಂಡಲವನಾಳುವನೆಲ್ಲ ಖಂಡಿತರಾದಾರು
ಪಂಡಿತ ರಾಜ್ಯಕ್ಕೆ ಅಳಗಾಲ ಬಂತು, ಮರ್ತ್ಯವು
ಖಂಡಿತವಾಗುವ ದಿನ ಬಂತು, ಬಸವಣ್ಣ

ತಾತ್ಪರ್ಯ : ದೇಸೀ ರಾಜರುಗಳ ವಿಶಿಷ್ಟವಾದ ಆಡಳಿತ, ಸಾಮಾಜಿಕ ರೀತಿ–ನೀತಿಗಳು, ಒಂದು ಬಗೆಯ ವ್ಯವಸ್ಥೆ ವಿಘಟನೆ ಹೊಂದುತ್ತಿದ್ದ ಕಾಲದಲ್ಲಿ ಮೌನೇಶ್ವರರು ಇದ್ದರು. ಪಂಡಿತರು, ಶಾಸ್ತ್ರಿಗಳು ರಾಜರನ್ನು, ಪ್ರಜೆಗಳನ್ನು ನಿಯಂತ್ರಿಸುವ ವಿಶಿಷ್ಟ ವ್ಯವಸ್ಥೆಯನ್ನು ನೋಡಿದ್ದರು. ಅವರು ಪರಕೀಯ ಆಕ್ರಮಣಗಳಿಂದ ನಾಶವಾಗುತ್ತಾ ಹೊರಟಿರುವುದು ಅವರು ಕಂಡ ಅನುಭವವಾಗಿತ್ತು. ಮುಂದೆ ಕೂಡ ಇದೇ ಸ್ಥಿತಿಯೇ ಮುಂದುವರಿಯುತ್ತದೆ. ಆ ರೀತಿಯ ಮರ್ತ್ಯಲೋಕದ ವ್ಯವಸ್ಥೆಯೇ ನಾಶವಾಗುತ್ತದೆ ಎಂಬುದು ಮೌನೇಶ್ವರರ ಭವಿಷ್ಯವಾಣಿಯಾಗಿದೆ.

೬೮೧

ಹೊಲೆ ಮಾದಿಗರ ಹೆಣ್ಣು ಸುಲಭದಲಿ ಮದಿವ್ಯಾಗಿ
ಕುಲ ಹದಿನೆಂಟು ಒಡಗೂಡಿ, ಪರಬ್ರಹ್ಮ
ನೆಲೆಯಾದ ವರವಿ ಪುರದಲ್ಲಿ, ಬಸವಣ್ಣ

ತಾತ್ಪರ್ಯ : ಬಸವಾದಿ ಶರಣರು ಬಂದು ನಿಂತು, ಜಾತಿಗಳನ್ನೆಲ್ಲ ಮೀರಿದ ಮಾನವ ಕುಲವನ್ನು ಒಂದುಗೂಡಿಸುವ, ಕ್ರಿಯಾತ್ಮಕ ಹಂತದಿಂದ ಮೌನೇಶ್ವರರು ಆಲೋಚಿಸುತ್ತಾರೆ. ಹೊಲೆಯರನ್ನು ಹಿಡಿದುಕೊಂಡು ಉಳಿದಂತೆ ಕುಲ ಹದಿನೆಂಟು ಜಾತಿಗಳೆಲ್ಲ ಒಂದುಗೂಡಬೇಕು. ಮಾನವತೆಯ ಒಂದು ವಿಶಾಲ ಧರ್ಮಸ್ಥಾಪನೆಯಾಗ ಬೇಕು. ಇಂತಹ ಆದರ್ಶ ಸಮಾಜ ನಿರ್ಮಾಣ ಪರಬ್ರಹ್ಮ ನೆಲೆಸಿರುವ ವರವಿ ಯಲ್ಲಿಯೇ ಪ್ರಾರಂಭವಾಗುತ್ತದೆ ಎಂಬ ಆಶಯವನ್ನು ವಚನ ಹೇಳುತ್ತದೆ.

೬೮೨

ನಾಗಲಿಂಗಯ್ಯನ ಭೋಗ ಮಂಟಪದೊಳು
ಬಾಗಿ ಮಜ್ಜನವ ನೆರೆಯಲಿ, ಮರ್ತ್ಯವು
ಬಾಗಿ ಬಂದವರಿಗೆ ಭಯವಿಲ್ಲ
ಬಾರದಿದ್ದರೆ ಹಲ್ಲು ಮುರಿದಾನು, ಬಸವಣ್ಣ

ತಾತ್ಪರ್ಯ : ಇದು ನಾಗಲಿಂಗಯ್ಯ ಎಂಬ ಮಹಾಪುರುಷನ ಪುಣ್ಯಕ್ಷೇತ್ರದ ಬಗ್ಗೆ ಮೌನೇಶ್ವರರು ಹೇಳಿದ ವಚನವಾಗಿದೆ. ನವಲುಗುಂದದ ನಾಗಲಿಂಗಯ್ಯನ ಬಗ್ಗೆ ಹೇಳಿದ ವಚನವೋ ೧೬–೧೭ ಶತಮಾನಕ್ಕೂ ಮುಂಚಿನಿಂದಲೂ ಪ್ರಸಿದ್ಧವಾಗಿದ್ದ ಕರಸ್ಥಲ ನಾಗಲಿಂಗದೇವರ ಕುರಿತು ಹೇಳಿದ್ದೋ ಸ್ಪಷ್ಟವಾಗುವುದಿಲ್ಲ. ಒಟ್ಟಿನಲ್ಲಿ ನಾಗಲಿಂಗನು ಹುಟ್ಟಿದ ಈ ಭೂಮಿಯಲ್ಲಿ ಬಾಗಿ ಬಂದವರಿಗೆ ಅಂದರೆ ಸಾತ್ವಿಕರಾದ ಸಾಧಕರಿಗೆ ಭಯವಿಲ್ಲ. ಆದರೆ ದುರಹಂಕಾರದಿಂದ ಮೆರೆಯುವವರು ಶಿಕ್ಷೆಗೆ ಒಳಗಾಗುತ್ತಾರೆ.

೬೮೩

ಹೆಂಡಗಾರರು ಬಂದು ಮಿಂಡಿಯರ ಹಿಡಿದಾರು
ಕಂಡ ಕಂಡಲ್ಲಿ ಕರೆದೊಯ್ದು, ಲೋಕದ
ಬಂಡಾಟ ನೋಡು, ಬಸವಣ್ಣ

ತಾತ್ಪರ್ಯ : ಇದು ಬಹುಶಃ ಮುಸ್ಲಿಮರ ದುರಾಕ್ರಮ ಹಾಗೂ ದೌರ್ಜನ್ಯಗಳ ಆಡಳಿತದ ಚಿತ್ರಣ ಇರಬಹುದು ಎನಿಸುತ್ತದೆ. ಏಕಪತ್ನಿವ್ರತ, ಪತಿವ್ರತಾಧರ್ಮ ಮುಂತಾದ ಮೌಲ್ಯಗಳು ಹಿಂದೂಧರ್ಮದಲ್ಲಿ ಪ್ರಾಚೀನ ಕಾಲದಿಂದ ಬಂದಂತವು. ಇವುಗಳಿಗೆ ಭಿನ್ನವಾದ ರೀತಿಯ ಮೌಲ್ಯಗಳನ್ನು ಹೊಂದಿರುವವರು ಇಲ್ಲಿ ಹೆಂಡ ಗಾರರು ಎಂದು ಸೂಚಿತರಾಗಿದ್ದಾರೆ. ಅವರು ಇಂತಹ ಭಂಡತನದ ಕೆಲಸ ಮಾಡುತ್ತಾರೆ ಎಂಬ ನಿಸ್ಸಹಾಯಕ ಹೇಳಿಕೆ ಇಲ್ಲಿದೆ. ಭೋಗ ಜೀವನದ ವಿಕಾರ ಮುಖದ ದರ್ಶನವನ್ನಿಲ್ಲಿ ಕಾಣಬಹುದು.

೬೮೪

ಕುಲ ಛಲಗಳ ಬಿಡಿರಿ, ಕುಲುಮಿಗೆ ಚಪಟಿ ಬಂದೀತು
ಪರಬ್ರಹ್ಮನಾಣೆ ಪುಸಿಯಿಲ್ಲ, ಪಂಚಾನನ ಕುಲ
ಉದ್ಧಾರ ಮಾಡುವ ಗುರು ಬಂದ, ಬಸವಣ್ಣ

ತಾತ್ಪರ್ಯ : ಕನ್ನಡ ಸಾಹಿತ್ಯದಲ್ಲಿ ವಿಶ್ವಕರ್ಮರ(ಪಂಚಾನನ ಪಾಂಚಾಲ) ಕುಲದ ಹಿರಿಮೆಯನ್ನು ಎತ್ತಿ ಹಿಡಿಯುವ ಮೌನೇಶ್ವರರಂತಹ ಇನ್ನೊಬ್ಬ ವ್ಯಕ್ತಿ ಸಿಗುವುದಿಲ್ಲ. ಆ ಕುಲವನ್ನು ಉದ್ಧಾರ ಮಾಡುವ ಗುರು ಬಂದ ಎಂಬ ಮಾತು ಅವರಿಗೇ ಅನ್ವಯವಾಗುತ್ತದೆ. ಕುಲುಮೆ ಶ್ರೇಷ್ಠ. ಅದನ್ನು ಅವಲಂಬಿಸಿ ಉಳಿದೆಲ್ಲ ಕುಲಗಳು ತಂತಮ್ಮ ಕಸುಬುಗಳನ್ನು ಮಾಡುತ್ತ ಹೋಗಬೇಕು. ಇದರಲ್ಲಿ ಎಲ್ಲರ ಕಾಯಕಗಳೂ ಸಮಾನ, ಯಾರೂ ಶ್ರೇಷ್ಠರಲ್ಲ ಕನಿಷ್ಠರಲ್ಲ(ಕುಲ–ಛಲಗಳನ್ನು ಬಿಡಿರಿ). ಕುಲುಮೆಯ ಆಧಾರದಿಂದ ಕಮ್ಮಾರ, ಬಡಿಗ, ಕಂಚುಗಾರ, ಅಕ್ಕಸಾಲಿ, ಶಿಲ್ಪಿ ಈ ಪಂಚಾನನರ ವೃತ್ತಿಗಳು ನಡೆಯುತ್ತವೆ. ಅವರಿಗೆ ಸಿಗಬೇಕಾದ ಯೋಗ್ಯಸ್ಥಾನ ಇನ್ನು ಮುಂದೆ ಪರಬ್ರಹ್ಮನಾಣೆಗೂ ಸಿಗುತ್ತವೆ.

೬೮೫

ಭೂತಳ ಜಲಧಿಗೆ ಓತು ಸಿಂಪಿಲಿ ಮುಗಿದು
ಭೂತಳವೆಲ್ಲ ಉರಿದೆದ್ದು ಹಂಪಿಯ
ಗೋಪುರ ಅಳಿವ ದಿನ ಬಂದವು, ಬಸವಣ್ಣ

ತಾತ್ಪರ್ಯ : ಇದು ಕಾಲಜ್ಞಾನ ಸೂಚಕವಾದ ವಚನ. ಪ್ರಳಯದ ವಿವಿಧ ಸಾಧ್ಯತೆಗಳನ್ನು ಹೇಳುವಂತಿದೆ. ಭೂಮಿಯು ಸಾಗರದಲ್ಲಿ ಸಿಂಪಿಯಂತೆ ಮುಳುಗುತ್ತದೆ. ಇದು ಜಲಪ್ರಳಯದ ರೀತಿ, ಭೂತಳವೆಲ್ಲ ಉರಿಯುತ್ತದೆ ಎಂಬುದು ಅಗ್ನಿ ಪ್ರಳಯದ ರೀತಿ. ಇಂತಹ ಮಹಾಪ್ರಳಯಗಳಲ್ಲಿ ಹಂಪಿ ಗೋಪುರ ಅಳಿಯುತ್ತದೆ ಎನ್ನುವಲ್ಲಿ ಜಗತ್ಪ್ರಸಿದ್ಧವಾಗಿದ್ದ ಒಂದು ಕಟ್ಟಡದ ನಾಶವನ್ನೂ ಸೂಚಿಸಲಾಗಿದೆ.

೬೮೬

ಉಕ್ಕಿನ ಕೌಪವ ಧರಿಸಿ, ಈರೇಳು ಭುವನ ಚರಿಸಿ
ಮತ್ತೆ ಮರಳಿ ಗವಿಯೊಳಗೆ ಇದ್ದಂಥ
ಬಿಸಿ ಅಗ್ಗವಣಿ ಕರ್ತ ಬಂದಾನೆ, ಬಸವಣ್ಣ

ತಾತ್ಪರ್ಯ : ಉಕ್ಕಿನ ಕೌಪೀನ ಧರಿಸಿದಂತೆ ಕಠೋರ ಬ್ರಹ್ಮಚರ್ಯವನ್ನು ಅನುಸರಿಸುತ್ತ, ಹದಿನಾಲ್ಕು ಲೋಕಗಳನ್ನು ಸಂಚರಿಸಿ, ಕುಲುಮೆಯಲ್ಲಿ ಸುಡುವ ಲೋಹದಿಂದ

ಅಗ್ಗವಣಿ ಪಾತ್ರೆಗಳನ್ನು ಸೃಷ್ಟಿ ಮಾಡುವಂಥ, ಗವಿಯೊಳಗೆ ವಾಸ ಮಾಡುವಂಥ ಕರ್ತನು ಬಂದಿದ್ದಾನೆ. ಈ ವಚನವು ಮೌನೇಶ್ವರರು ಜೀವಿಸಿದ್ದ ಪರಿಯನ್ನು ಬಿಂಬಿಸುತ್ತದೆ.

೬೮೭

ಅಲ್ಲಮನ ಪಡಿಲೆಂಕನಿಲ್ಲದೆ ವಾಲೆಯ ತಂದನು
ಅಲ್ಲ ಅಹುದೆಂಬ ನಿರ್ಣಯ ತಂದಾನೆ
ಬಲ್ಲವರು ಬನ್ನಿ ಬೈಲಿಗೆ, ಬಸವಣ್ಣ

ತಾತ್ಪರ್ಯ : ಅಲ್ಲಮನ ಪ್ರತಿರೂಪನೂ ಆತನ ಅನುಭಾವವದ ಪಥಿಕರು ಆದ ಮೌನೇಶ್ವರರು ಅಧರ್ಮದಲ್ಲಿ ಮುಳುಗಿದ ಈ ಪೃಥ್ವಿಗೆ ನಿತ್ಯ ನಿಜದ ಸತ್ಯ ಸಂದೇಶವುಳ್ಳ ಓಲೆಯನ್ನು ತಂದಿರುವರು. ಅಲ್ಲ ಅಹುದು ಹಾಗೂ ಸತ್ಯ ಸುಳ್ಳುಗಳನ್ನು ನಿರ್ಧರಿಸಲು ಬಂದಿರುವರು. ಬಲ್ಲವರು ಆಸಕ್ತರು ಬಂದು ಸತ್ಯ ಸಂದೇಶದ ಪ್ರಯೋಜನ ಪಡೆದು ಕೊಳ್ಳಿರಿ ಎನ್ನುವುದು ಇಲ್ಲಿನ ಭಾವ.

೬೮೮

ಆದಿ ಅಲ್ಲಮ ಪ್ರಭುವಿನ ಭೇದವ ತಿಳಿಯದೆ
ನಾಗಲೋಕಕ್ಕೆ ಬೇರು ಇಳಿದಂತೆ
ಲಂಕೆಯ ಪರ್ವತ ಸಾಗಿ ಬರುವಂಥ
ಘಾತಕದ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಲೋಕದ ಜನತೆಯನ್ನು ಉದ್ಧಾರ ಮಾಡಲು ಬಂದ ಆದಿ ಅಲ್ಲಮನ ಗುರುತು ತಿಳಿಯದೆ ಜನ ಮೂಢರಾದರು. ಇದರಿಂದಾಗಿ ಮನುಷ್ಯ ಲೋಕ ದಾರಿತಪ್ಪಿದ ದನದಂತೆ ಅಲ್ಲೋಲ ಕಲ್ಲೋಲವಾಗಿದೆ. ಪ್ರಾಕೃತಿಕ ಸತ್ಯಗಳಾದ ಲಂಕೆಯ ಪರ್ವತಗಳೇ ಸಾಗಿಬರುವ, ಅಂದರೆ ಮನುಷ್ಯನ ಉಪಭೋಗಿ ಪ್ರವೃತ್ತಿಗೆ ಸಿಕ್ಕು ನಾಶವಾಗುವ ಘಾತುಕ ದಿನಗಳು ಬರುತ್ತವೆಂಬ ಅರ್ಥ ಇಲ್ಲಿನದು.

೬೮೯

ತಂದಿ ಅಲ್ಲಮನ ನಿಂದಿಸಿದ ಕಾರಣದಿಂದ
ನಿಂದಿರಲಿಕ್ಕೆ ನೆರಳಿಲ್ಲ ನೋಡಿನ್ನು
ಹೊಂದಿರಲಿಕ್ಕೆ ಮನಿಯಿಲ್ಲ ಲೋಕದ
ಚೆಂದವ ನೋಡು, ಬಸವಣ್ಣ

ತಾತ್ಪರ್ಯ : ಬ್ರಹ್ಮಜ್ಞಾನ ಸ್ವರೂಪಿಯೂ ಸಾಕ್ಷಾತ್ ಶಿವರೂಪಿಯೂ ಆದ ಅಲ್ಲಮನನ್ನೇ ಅರ್ಥಮಾಡಿಕೊಳ್ಳದೆ ಅಜ್ಞಾನಿಗಳು ನಿಂದಿಸಿದ ಪರಿಣಾಮವಾಗಿ ಅವರಿಗೆ ನೀರು, ನೆರಳು, ಮನೆ, ನೆಮ್ಮದಿ ಸಿಗಲಾರದು. ದುರಹಂಕಾರ ಮತ್ತು ಮನುಷ್ಯನ ಮೂರ್ಖತನ ದಿಂದಾಗುವ ಅನಾಹುತಗಳು ಒಂದು ಸಮೂಹ ಸಂಸ್ಕೃತಿಯನ್ನೆ ಹೇಗೆ ಬಲಿ ತೆಗೆದುಕೊಳ್ಳುತ್ತವೆನ್ನುವ ವಿಚಾರ ಇಲ್ಲಿದೆ.

೬೯೦

ಚೆನ್ನಬಸವಣ್ಣನು ಇನ್ನು ತಾ ಬರುವಾಗ
ಅಣ್ಣ ತಂಗಿಯರಿಗೆ ಲಗ್ನವ ಮಾಡುವ
ಪುಣ್ಯದ ದಿನವು ಪ್ರಭುರಾಯ, ಬಸವಣ್ಣ

ತಾತ್ಪರ್ಯ : ಮಸಳಿಯವರಲ್ಲಿ ಪುಣ್ಯದ ದಿನ ಎನ್ನುವುದಕ್ಕೆ 'ಪಣ್ಯದ ದಿನ' ಎನ್ನುವ ಪಾಠಾಂತರವಿದೆ(ಮೌ.ತ್ರಿ.ಪು.೧೯೫, ಪ.೭೪೩). ಪಣ್ಯ ಎಂದರೆ ಬೆಲೆಕೊಟ್ಟು ಕೊಳ್ಳಬಹುದಾದ ವಸ್ತು. ವೈಜ್ಞಾನಿಕ ಲೆಕ್ಕಾಚಾರಗಳ ಪ್ರಕಾರ ಈಗಲೇ ಜಗತ್ತಿನಲ್ಲಿ ೧೦೦೦ ಗಂಡುಗಳಿಗೆ ೯೦೦ ಹೆಣ್ಣುಗಳಿರುವುದು ಹೆಣ್ಣು ಸಂತತಿಯ ಅವಸಾನವನ್ನು ತೋರಿಸುತ್ತದೆ. ಇಂದು ನಡೆಯುತ್ತಿರುವ ಭ್ರೂಣ ಹತ್ಯೆ, ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು, ಹೆಣ್ಣು ಸಂತತಿಯ ಕೊರತೆಗೆ ಕಾರಣವಾಗಬಹುದು. ಹೀಗಿರುವಾಗ ಸಂತಾನ ವೃದ್ಧಿಗಾಗಿ ಅಣ್ಣ ತಂಗಿಯರೇ ಮದುವೆಯಾಗುವ ವಿಚಿತ್ರ ದಿನಗಳು ಬರಬಹುದು ಎನ್ನುವ ಸೂಚನೆಯಿದೆ. ತಂದೆ ಮಗಳನ್ನೆ ಮದುವೆಯಾಗುವ, ಅಣ್ಣ ತಂಗಿಯನ್ನು ಮದುವೆಯಾದ, ತಾಯಿ ಮಗನನ್ನು ಪ್ರೀತಿಸಿದ ಸಂಗತಿಗಳು ಜಗತ್ತಿನ ಸಾಹಿತ್ಯ ಸಂಸ್ಕೃತಿಯಲ್ಲಿ ಕಾಣುತ್ತವೆ. 'ಶ್ರೀರಾಮನ ನಲವತ್ತೆರಡನೇ ತಲೆಮಾರಿನ ಹಿಂದೆ ಅದೇ ರಾಜವಂಶದಲ್ಲಿ ಮಾಂಧಾತನ ಮಗ ಪುರುಕುತ್ಸನಿಗೂ ಮತ್ತು ಮಗಳಾದ ಪುರುಕುತ್ಸಾನಿಗೂ ಲಗ್ನವಾಗಿತ್ತು. ಹೀಗಾಗಿ ಪುರಾಣ ಕಾಲದಲ್ಲಾದಂತೆ ಕಲಿಯುಗದ ಕೊನೆಯಲ್ಲಿ ಇಂತಹ ಸಂಬಂಧಗಳು ಸಾಧ್ಯವಾಗಬಹುದೆನ್ನುವ ಸೂಚನೆ ಇಲ್ಲಿ ಇದ್ದಂತಿದೆ.

೬೯೧

ಅಗಣಿತದ ಶರಣರು ಒಂದೆ ವಿಗಡದಿಂದಳಿದರು
ಟಗರು ತಾಕಿದ ಹಾಗೆ ತಾಕ್ಯಾರು
ಭಗಭಗನೆ ಉರಿವರು ಗಗನಕ್ಕೆ ಮುಚ್ಚಳವನಿಕ್ಕುವರು
ಹೊಗಗೊಡರು ತಮ್ಮ ಗರಡಿಯ, ಬಸವಣ್ಣ

ತಾತ್ಪರ್ಯ : ಲೋಕದ ನಾಶವನ್ನು ತಡೆಯಲು ದೊಡ್ಡ ಪ್ರಮಾಣದಲ್ಲಿ ಶರಣರು ವೈರಿಗಳೊಂದಿಗೆ ಕೆಚ್ಚಿನಿಂದ ಹೋರಾಡಿ ಅಳಿದರು. ಟಗರು ಒಂದಕ್ಕೊಂದು ಕಾದಾಡಿ ಕೊಂಡು ಇರಿವಂತೆ, ಎದುರಾಳಿಗಳೊಂದಿಗೆ ಕಾದಾಡಿದರು. ಸಿಟ್ಟಿನಿಂದ ಭಗಭಗನೆ ಉರಿದರು. ತಮ್ಮ ನೆಲೆಗಳಿಗೆ ವೈರಿಗಳು ನುಗ್ಗಬಾರದೆಂದು ಗಗನಕ್ಕೆ ಮುಚ್ಚಳ ಮುಚ್ಚುವ ಸಾಹಸ ಮಾಡುತ್ತಾರೆ. ಅಂದರೆ ಲೋಕವನ್ನು ರಕ್ಷಿಸಲು ಲೋಕದ ಹಿತಾಸಕ್ತಿಗಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ವೀರಶರಣರು ಕಾದಾಡಿದರು.

೬೯೨

ಅಂದದಾಭರಣ ಚಂದದ ಭೂಷಣ
ಅಂದಚಂದದ ಮಡದಿಗೆ ಮೋನಯ್ಯ
ಅಂದಣ ಕಳುಹುವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಅಂದವಾದ ಆಭರಣ ಚಂದವಾದ ಭೂಷಣ ಅಂದಚಂದವಾದ ಮಡದಿಯ ಕರೆಯಲು ಮೌನೇಶ್ವರರು ಪಲ್ಲಕ್ಕಿ ಕಳಿಸುವ ದಿನ ಬಂದವು ಎನ್ನುವಲ್ಲಿ ಹೆಣ್ಣಿಗೆ ಸಿಗುವ ಗೌರವ ಮರ್ಯಾದೆಗಳ ಸೂಚನೆಯಿದೆ.

೬೯೩

ಆಯವಾದಾಭರಣ ಛಾಯವಾದ ಭೂಷಣ
ಆಯವಾಯವಾದ ಮಡದಿಗೆ ಮೋನಯ್ಯ
ಆನೆಯ ಕಳುಹುವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಆಯ ಅಂದರೆ ಮಾಟವಾದ ಪ್ರಮಾಣಬದ್ಧವಾದ ಆಭರಣ, ಹೊಳೆಯುವ ಛಾಯವಾದ ಭೂಷಣ, ಅಂದ ಚಂದದಿಂದ ತುಂಬಿದ ಮಡದಿಯ ಕರೆಯಲು ಆನೆಯ ಕಳಿಸುವ ದಿನಗಳು ಬರುವವು ಎನ್ನುವಲ್ಲಿ. ಬಹುಶಃ ಹೆಣ್ಣಿಗೆ ದೊರೆಯುವ ಭಿನ್ನಾನದ ಮಾನ್ಯತೆಯನ್ನು ವಚನ ಸೂಚಿಸುವಂತಿದೆ.

೬೯೪

ಅಂತರದಲವರೀರ್ವರು ನಿಂತುಳಿಗೆ ಅಷ್ಟಂಜನ
ಕುಂತಿಸುವ ಪೂಜೆ ದಶಭುಜ ಫಣಿನೇತ್ರವುಳ್ಳವನ
ತಂತ್ರ ಸರ್ವರಿಗೆ ತಿಳಿಯಲುಂಟೆ, ಬಸವಣ್ಣ

ತಾತ್ಪರ್ಯ : ಅಂತರದಲವರೀರ್ವರು ಅಂದರೆ ಆಕಾಶದಲ್ಲಿ ತೇಲುತ್ತಿರುವ ಸೂರ್ಯ, ಚಂದ್ರ ಹಾಗೂ ಅಷ್ಟದಿಕ್ಪಾಲಕರು ತಮ್ಮ ಕಾರ್ಯಮಾತ್ರದಿಂದ ಪೂಜಿತಗೊಂಡವರು. ಇದು ಸೃಷ್ಟಿಕರ್ತನ ವಿಸ್ಮಯಗಳಲ್ಲಿ ಒಂದು. ಇಂತಹ ಸೃಷ್ಟಿಯ ನಿರ್ಮಾಪಕನಾದ

ದಶಭುಜನೂ ಫಣಿನೇತ್ರನೂ ಆದ ಶಿವಸ್ವರೂಪಿ ವಿಶ್ವಕರ್ಮನ ವಂಶಜನಾದ ಮೌನೇಶ್ವರರ ಮಹತ್ವ ಅಜ್ಞಾನಿಗಳಿಗೆ ಅರ್ಥವಾಗದು.

೬೯೫

ಅಂತಸ್ತ ಬಹಿರಂಗ ಸಂತೋಷದ ಹಣವಲ್ಲ
ಎಂತೆಂಥವರನ್ನು ಕೆಡಿಸಿತು ದುಷ್ಕರ್ಮದ ದೋಷ
ಬಂದು ಸರ್ವರಿಗೆ ಬಿಡಲಿಲ್ಲ, ಬಸವಣ್ಣ

ತಾತ್ಪರ್ಯ : ಸಂಪತ್ತು ಮತ್ತು ದರ್ಪ ಆ ಕಾರಣದಿಂದ ಬರುವ ಸೊಕ್ಕು ಎಂತೆಂಥ ವರನ್ನೂ ಕೆಡಿಸುತ್ತದೆ. ಮನುಷ್ಯನ ಅಂತರಂಗ ಮತ್ತು ಬಹಿರಂಗಗಳನ್ನು ಭ್ರಷ್ಟಗೊಳಿಸಿ ಅಧರ್ಮಕ್ಕೆ ತಳ್ಳುತ್ತದೆ. ಅದರಿಂದಾಗಿ ಸನ್ಯಾಸಿ ಪಾಪ ಸರ್ವರಿಗೆ ಎನ್ನುವಂತೆ ಒಬ್ಬನ ಅಜ್ಞಾನ ಹಾಗೂ ಅಹಂಕಾರದಿಂದಾಗಿ ಇಡೀ ಮನುಕುಲವೇ ದುಷ್ಕರ್ಮದಲ್ಲಿ ತೊಡಗುವಂತಾಗಿದೆ. ಲೋಕ ಉಳಿಯಬೇಕೆಂದರೆ ಮನುಷ್ಯ ಸ್ವತಃ ದುಡಿದು ಹಂಚಿ ತಿನ್ನುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

೬೯೬

ಅಂದಿನಾ ಸುತ್ತಿಗೆಯ ಹಸ್ತದಿ ಪಿಡಿದು
ಅಂಧಕಾರನು ಬಂದ ಮರ್ತ್ಯಕ್ಕೆ ಸುತ್ತಿಗೆಯಲಿ
ನಿಂದಕರ ಹಲ್ಲು ಮುರಿವುತ್ತ ಬಂದಾನೆ, ಬಸವಣ್ಣ

ತಾತ್ಪರ್ಯ : ಸುತ್ತಿಗೆ ಪಾಂಚಾಳರ ಕ್ರಿಯೆ ಮತ್ತು ಜ್ಞಾನದ ಸಂಕೇತವಾಗಿದೆ. ಅಂತಹ ಕ್ರಿಯಾಜ್ಞಾನದ ಸುತ್ತಿಗೆ ಹಿಡಿದು ನಿಷ್ಕ್ರಿಯೆಯಾಗಿದ್ದ, ಜಡವಾಗಿದ್ದ ಈ ಪ್ರಪಂಚವನ್ನು ಜಂಗಮವಾಗಿಸಲು, ಅಜ್ಞಾನದಲ್ಲಿ ಮುಳುಗಿ ನಿಂದೆ ಸ್ತುತಿಗಳಲ್ಲೇ ಕಾಲಕಳೆಯುತ್ತಿದ್ದ ಸೋಮಾರಿ ಜನರನ್ನು ತಿದ್ದಲು ಸುತ್ತಿಗೆ ಹಿಡಿದು ಅವರ ಹಲ್ಲು ಮುರಿಯಲು ಅವತಾರ ಎತ್ತಿ ಬಂದವರು ಮೌನೇಶ್ವರರಾಗಿದ್ದಾರೆ.

೬೯೭

ಅಂಡುತುಂಡವಕಂಡೆ ದುಂಡಕಿರುವುದು ಕಂಡೆ
ಎಲ್ಲಿ ಕಂಡಯ್ಯ ಶಿವಭಕ್ತರು
ಹೆಂಡ ಕುಡಿವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಕಾಲಚಕ್ರದಲ್ಲಿ ಸಿಲುಕಿ ಸಜ್ಜನ ಶಿವಭಕ್ತರೂ ದುರ್ಮಾರ್ಗಕ್ಕಿಳಿಯುವ ದಿನಗಳು ಬರುವುದನ್ನು ವಚನ ಸೂಚಿಸುತ್ತದೆ. ಜಗತ್ತಿಗೆ ನೀತಿ ಬೋಧೆ ಮಾಡುವ

ಹಾಗೂ ಆಚಾರ ಸಂಪನ್ನರಾದ ಶಿವಭಕ್ತರೂ ಹೆಂಡ ಕುಡಿದು ಕಂಡ ತಿನ್ನುವ ದಿನಗಳು ಬರುವುದೆಂದರೆ ಧರ್ಮ ಮತ್ತು ನೀತಿಯ ಅಧಃಪತನದ ಸೂಚನೆಯಾಗಿದೆ.

೬೯೮

ಬ್ಯಾಸಿಗಿ ಬ್ಯಾಸಿಗಿ ಎಷ್ಟೊಂದು ಬ್ಯಾಸಿಗಿ
ಬ್ಯಾಸಿಗಿಯು ನಮಗೆ ಮಳೆಗಾಲ ಶಿವಭಕ್ತರು
ಮಾಂಸ ತಿಂಬುವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಜನ ಬದುಕಿನ ಸಾತ್ವಿಕತೆ ಮತ್ತು ನೈತಿಕತೆ ಅಧಃಪತನಗೊಳ್ಳುತ್ತಿರುವ ಸೂಚನೆ ವಚನದಲ್ಲಿದೆ. ನಗರದ ಆಕರ್ಷಣೆಗೆ ಒಲಿದ, ಹಣದ ಬೆನ್ನು ಹತ್ತಿದ ಮನುಷ್ಯ ಹೇಗೆ ತನ್ನ ಅಂತಃಸತ್ವವನ್ನು ತನ್ನ ನೈತಿಕತೆಯನ್ನು ಕಳೆದುಕೊಳ್ಳುತ್ತಾನೆ ಎಂಬುದು ಇಲ್ಲಿನ ಅರ್ಥ. ಶಿವಭಕ್ತರು ಸಸ್ಯಾಹಾರಿಗಳು. ಅಂತಹವರೇ ಮಾಂಸ ತಿನ್ನುವ ಕೆಟ್ಟ ದಿನಗಳು ಆರಂಭವಾದಂತೆ, ಋತುಮಾನಗಳು ತನ್ನ ನಿಯತಿ ಹಾಗೂ ನಿಯಮವನ್ನು ಕಳೆದುಕೊಳ್ಳುತ್ತವೆ. ಮಳೆಗಾಲಕ್ಕೂ ಬೇಸಿಗೆ ಕಾಲಕ್ಕೂ ವ್ಯತ್ಯಾಸವಿಲ್ಲದ ಸ್ಥಿತಿಯೊದಗಿದೆ.

೬೯೯

ಅಸಮಾಯದ ದುರ್ಗಿಯು ವಸುಧಿಯೊಳು ಬ್ಯಾಟಿಯನು
ಕಸಕರ್ಮಕಾಷ್ಟ ಸಂಹರಿಸಿ ಸಾವಿರದೊಳಗೆ
ದಶಯೇಕ ಮಹಿಮ ತೋರುವಳು, ಬಸವಣ್ಣ

ತಾತ್ಪರ್ಯ : ಅಪ್ರತಿಮಳು ಅಸಮಾನಳು ಎಣೆಯಿಲ್ಲದವಳೂ ಆದ ದುರ್ಗೆಯು ವಸುಧೆಯೊಳು ಅವತರಿಸಿ, ಕಸಕರ್ಮಗಳನ್ನು ಅಂದರೆ ಅಶುದ್ಧವಾದ, ಕೆಟ್ಟ ಕೆಲಸ ಮಾಡುವ ಅವಿವೇಕಿಗಳನ್ನು ಲೋಕಕಂಟಕರನ್ನು ಸಂಹರಿಸಿ ತನ್ನ ಹನ್ನೊಂದು ಲೀಲೆಗಳನ್ನು ತೋರುವಳು. ಅಜ್ಞಾನ ಅಧಃಕಾರವೆಂಬ ಲೋಕ ಕಂಟಕವನ್ನು ನಾಶ ಮಾಡಿ ಸುಜ್ಞಾನದ ಜ್ಯೋತಿಯನು ಬೆಳಗುವ ದುರ್ಗಿ ಅಂದರೆ ಚೈತನ್ಯ ದಾಯಕಳಾದ ದೇವಿ ಬರುತ್ತಾಳೆ.

೭೦೦

ಅಳವುಯಿಲ್ಲದ ಕಲ್ಲಿಗೆ ಉಳಿ ಕೊಡತಿಯ ಹಿಡಿದಾನೆ
ಅಳಿವುದಕ್ಕೆ ಹಿಡಿದ ಕೊಡ್ಲಿಯ ಮರ್ತ್ಯದಿ
ಉಳಸಿಕೊಂಬಂತ ದೈವವ ನೋಡುವೆನೆಂದು
ಅಳಿಯ ನಿಂತಾನೆ ಕಡೆಯಲ್ಲಿ, ಬಸವಣ್ಣ

ತಾತ್ಪರ್ಯ : ಅಳವು ಅಂದರೆ ಅಪ್ರಮಾಣ, ಪ್ರಮಾಣಕ್ಕೆ ನಿಲುಕದವ ಅಪ್ರಮಾಣ ನಾಗಿದ್ದಾನೆ. ಸರ್ವಾಂತರ್ಯಾಮಿಯಾದ ದೇವನನ್ನು ಶಿಲೆಯಲ್ಲಿ ಸೃಷ್ಟಿಸಲು ಉಳಿ ಕೊಡತಿಯ ಅಗತ್ಯ ಶಿಲ್ಪಿಗಿದೆ. ಅಂತಹ ಸೃಷ್ಟಿಕರ್ತನಾದ ಶಿವ ಈ ಸೃಷ್ಟಿಯನ್ನು ಮರು ನಿರ್ಮಿಸಲು ಚೆಣ್ಣಬಸವಣ್ಣನವರ ರೂಪದಲ್ಲಿ ಉಳಿ ಕೊಡತಿ ಕೊಡ್ಲಿ ಹಿಡಿದು ಬರುತ್ತಾನೆ ಎನ್ನುವಲ್ಲಿ ಸೃಷ್ಟಿ, ಸ್ಥಿತಿ, ಲಯದ ನೆಲೆಗಳನ್ನು ಕಾಣಬಹುದು.

೭೦೧

ಅರವಿ ಕುಂಚಿಗೆಯೆಲ್ಲ ಶಳದು ಕೌದಿಯ ಹೊಲಿದು; ಗುರುರಾಯ
ಮಳಿವುಂಟು ಬೆಳೆಯಿಲ್ಲ ಇಳೆವುಂಟು ದೊರೆಯಿಲ್ಲ
ಅಳಗಾಲ ಬಂತು ಸುಖವಿಲ್ಲ ಉಳಿವುಂಟು ಶರಣರಿಗೆ
ಉಳಿವಿಲ್ಲ ಮಿಕ್ಕಿನ ನರಗುರಿಗಳಿಗೆ, ಬಸವಣ್ಣ

ತಾತ್ಪರ್ಯ : ಮರುಬಳಕೆಯ ಸಾಧ್ಯತೆಗಳನ್ನು ವಚನ ಹೇಳುವಂತಿದೆ. ಮನುಷ್ಯ ತೊಟ್ಟು ಬಿಟ್ಟ ಹತ್ತಿಬಟ್ಟೆ(ಕಾಟನ್) ಮಕ್ಕಳಿಗೆ ಕುಂಚಿಗಿ ಕುಲಾಯಿಯಾಗಿ ಉಪಯೋಗ ವಾಗುತ್ತಿತ್ತು. ಬಟ್ಟೆ ಹಳೆಯದೆಂದು ಉಪೇಕ್ಷೆಗೆ ಗುರಿಯಾಗುತ್ತಿರಲಿಲ್ಲ. ಹಳ್ಳಿಯಲ್ಲಿ ತಾಯಂದಿರು ಉಡುವ ಬಟ್ಟೆ ಹಳೆಯದಾದ ತಕ್ಷಣ ಅದನ್ನು ಬಿಸಾಡದೆ ವಿವಿಧ ಬಳಕೆಗೆ ಅದನ್ನು ಸಂಗ್ರಹಿಸುತ್ತಿದ್ದರು. ಅದರಿಂದ ಕೂಸಿಗೆ ಕುಲಾಯಿ, ಕುಂಚಿಗಿ, ಕೌದಿ ಹೊಲಿಯುತ್ತಿದ್ದರು. ಇಂದು ನಾವು ಧರಿಸುವ ಟೆರಿಲಿನ್ ಟೆರಿಕಾಟು ಬಟ್ಟೆಗಳು ಮರುಬಳಕೆಗೆ ಬರುವುದಿಲ್ಲ. ಹಾಗೆ ಮಳೆ ಬಂದರೂ ಬೆಳೆಯಿಲ್ಲ. ಭೂಮಿ ಇದ್ದರೂ ಅದನ್ನು ಆಳುವವನಿಲ್ಲ, ಉಳುವವನಿಲ್ಲ. ಹೀಗಾಗಿ ಕೆಡುಗಾಲ ಬಂದು ಜನ ಅಲ್ಲೋಲ ಕಲ್ಲೋಲರಾಗುತ್ತಾರೆ. ಇಂತಹ ಕೆಡುಗಾಲದಲ್ಲಿ ನಿಜಶರಣರಿಗೆ ಮಾತ್ರ ಉಳಿವಿದೆ. ಮಿಕ್ಕ ದುರಾಚಾರಿಗಳಿಗೆ ನರಗುರಿಗಳಿಗೆ ಯಾವ ಅಸ್ತಿತ್ವವೂ ಇರುವುದಿಲ್ಲ.

೭೦೨

ಅನ್ಯ ಕಳಸಕ್ಕೆ ಹೆಣಗುವ ಕುನ್ನಿಗಳು ನೀವು ಕೇಳಿರೊ
..... ಕಳಸವಲ್ಲವೇನು ಬಸವಣ್ಣ

ತಾತ್ಪರ್ಯ : ಪದ್ಯ ಅಪೂರ್ಣ ಇರುವ ಕಾರಣ ಅರ್ಥ ಅಪೂರ್ಣವೆನಿಸುತ್ತದೆ.

೭೦೩

ಅಳಿವ ಅಳತಿಯ ಕೊಂಡು ಕೊಳಗವ ಪಿಡಿದುಕೊಂಡು
ಕೊಳು ಬಂದನೀತ ಕೊಡು ಬಂದ ಮರ್ತ್ಯಕ್ಕೆ
ಅಳು ಬಂದ ನಗು ಬಂದ ಲೋಕವು ತಾನು
ಅಳಿಯನು ಚೆನ್ನಬಸವಯ್ಯ ಬಂದದ್ದು ನೋಡಿ

ಸತ್ಯ ಶರಣರುಯೆಂದಿನ್ನು
ಇಳೆಗೆ ಡಂಗುರ ಹೊಯ್ಸಿದ, ಬಸವಣ್ಣ

ತಾತ್ಪರ್ಯ : ಬಸವಣ್ಣನವರ ಅಳಿಯನಾದ ಚೆನ್ನಬಸವಣ್ಣನು ಅವತಾರ ಎತ್ತುವ ಕಲ್ಪನೆ ಇಲ್ಲಿದೆ. ಮನುಷ್ಯನಲ್ಲಿನ ಅತಿಯಾದ ಸ್ವಾರ್ಥ ಪ್ರತಿಯೊಂದರಲ್ಲೂ ಅಪ್ರಮಾಣಿಕತೆಯನ್ನು ಹುಟ್ಟು ಹಾಕಿದೆ. ಮೋಸ ವಂಚನೆಗಳು ಸಹಜವೆಂಬಂತಾಗಿರುವ ಕಲಿಯುಗಕ್ಕೆ ಅಳವ ನಿರ್ದಿಷ್ಟ ಪ್ರಮಾಣದ ಅಳತೆಗಳೊಂದಿಗೆ ಈ ಲೋಕದ ಜನರ ವ್ಯವಹಾರವನ್ನು ಅಳೆದು ಸುರಿದು ಪರೀಕ್ಷಿಸಿ, ಮೋಸಮಾಡುವವರನ್ನು ದಂಡಿಸಿ, ಪ್ರಾಮಾಣಿಕರನ್ನು ರಕ್ಷಿಸಲು, ದುಃಖದಲ್ಲಿ ಮುಳುಗಿದ ಲೋಕವನ್ನು ಸಂತೈಸಲು ಚೆನ್ನಬಸವಣ್ಣ ಅವತಾರ ಎತ್ತಿ ಬರುವನು.

೭೦೪

ಆಚೆ ಈಚೆಗೆ ಮಾಡಿ ನಾಚಿಕೆಯ ಕೊಂಡನು
ಆಚಾರ್ಯ ಚೆನ್ನಬಸವಣ್ಣನ ಮಾತಿನ
ಕೋಟ ನರರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಇಲ್ಲ ಸಲ್ಲದ್ದನ್ನು ಮಾಡಿ ನಾಚಿಕೆ ಅವಮಾನಗಳಿಂದ ತಲೆ ತಗ್ಗಿಸುವುದಕ್ಕಿಂತ ತನ್ನ ತಾನರಿತು ನಡೆದರೆ, ಮಹಾಜ್ಞಾನಿ ಚೆನ್ನಬಸವಣ್ಣನಂತೆ ಸಾಧಕರಾಗಬಹುದು. ಆದ್ದರಿಂದ ಮನುಷ್ಯರು ಸಂತ ಶರಣರ ನಡೆ ಹಾಗೂ ನುಡಿಗಳ ಅರ್ಥವರಿತು ಬಾಳಬೇಕು.

೭೦೫

ಆಟ ತೋಟವ ಮಾಡಿ ನೇಟಿನ ಬೇಲಿಯ ಹೂಡಿ
ಆಟವು ಒದಗಿತು ಬಸವಣ್ಣನ
ಮಾಟ ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ: ಸೃಷ್ಟಿಕರ್ತನ ತಂತ್ರ ಸಾಮಾನ್ಯರಿಗೆ ತಿಳಿಯದು. ಬದುಕೆಂಬ ತೋಟವನು ಹಸನುಮಾಡಿ ಸರಿಯಾದ ಫಸಲು ನೆಟ್ಟು ಅದು ಅನ್ಯರ ಪಾಲಾಗದಂತೆ ಬೇಲಿಯ ಹೂಡಿ ಕಾಯುವನು. ಅಂತಹ ಮಹಾಮಹಿಮನ ಆಟ(ಲೀಲೆ) ಲೋಕದ ಜನರಿಗೆ ಅರ್ಥವಾಗದು. ಹುಸಿ ಎಂಬ ಬದುಕಿನ ತೋಟಕ್ಕೆ ಸತ್ಯದ ಬೇಲಿ ಹಾಕಿ ಅದನ್ನು ಮಾಟ ವಾಗಿಸಿದ, ಪ್ರಯೋಜನಕ್ಕೆ ಬರುವಂತೆ ಮಾಡಿದ ಪರಮಾತ್ಮನ ಲೀಲೆಯನ್ನು ವಚನ ಹೇಳುತ್ತದೆ.

೭೦೬

ಆರು ದರುಶನದಳಿಯ ನೂರಾವಂದು ಕುಲದಳಿಯನೆ
ಮರ್ತ್ಯದ ರಾಯರಾಯರ ಮನೆ ಅಳಿಯ ಬಂದದ್ದು

ಮುಕ್ಕಣ್ಣನಾಣೆ ಸಟೆಯಲ್ಲ ದಿಟವೆಂದೂ
ಸಾರಲಿ ಬಂದೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : 'ಅಳಿ' ಎನ್ನುವ ಪದ ಪುನರಾವರ್ತನೆಯಿಂದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಅಳಿ ಎಂದರೆ ನಾಶವು ಹೌದು, ಸೃಷ್ಟಿಯೂ ಹೌದು. ಚೆನ್ನಬಸವಣ್ಣನವರ ಅವತಾರಿಯಾದ ಮೌನೇಶ್ವರರು ಆರು ದರುಶನ ನೂರಾವಂದು ಕುಲ, ಲೋಕದ ರಾಯರಾಯರಲ್ಲಿ ಹುಟ್ಟಿದ ಅಹಂಕಾರವನ್ನು ಕಳೆಯಲು ಭೂಮಿಯಲ್ಲಿ ಹುಟ್ಟಿ ಬಂದರು.

೭೦೭

ಆಯ ಹನ್ನೆರಡರ ರಾಯಬಸವಯ್ಯ ತಾನು
ದಾಯ ಪಂಚಪಗಡಿಯ ಲೋಕದ ಘಾಯಕ್ಕೆ ಕರ್ತನು
ಅಲ್ಲಮನಗೂಡ ಘಾಯಕತನ ನಡೆಯದು
ಮೀರಿ ಮೀರಿದರೆ ಘಾಯವಾಗದೆ ಬಿಡದು
ಧರ್ಮದ ನ್ಯಾಯ ತಿಳಿಯದು ಪ್ರಭುರಾಯನಲ್ಲದಲಿ
ಸಾಹೇಬತನವು ಸಟೆಯೆಂದನು, ಬಸವಣ್ಣ

ತಾತ್ಪರ್ಯ : ಮಹಾಜ್ಞಾನಿಗಳಾದ ಅಲ್ಲಮನಂತವರ ಕೂಡ ಹುಡುಗಾಟ ಮಾಡಬಾರದು. ಸಜ್ಜನರ ಸಂಗ ಹೆಜ್ಜೇನು ಮೆಲಿದಂತೆ ದುರ್ಜನರ ಸಂಗ ಕಲ್ಲು ಹೊಯ್ದು ಕಿಡಿಯ ಕೊಂಡಂತೆ ಆಗುತ್ತದೆ. ಧರ್ಮದ ನೀತಿ ನಿಯಮ ಹಾಗೂ ಅದರ ಸಾತ್ವಿಕ ಸೂಕ್ಷ್ಮಗಳನ್ನು ಅರಿತು ನಡೆಯಬೇಕು. ಅದನ್ನು ಮೀರಿದರೆ ಆಪತ್ತು ಬರುತ್ತದೆ. ಧರ್ಮದ ಸೂಕ್ಷ್ಮ ತಿಳಿಯದೆ ದರ್ಪದಿಂದ ಹಿರಿಯರೆನಿಸಿಕೊಂಡವರ ದೊಡ್ಡಸ್ತಿಕೆ ಡಂಭಾಚಾರಗಳೇ ಹೊರತು ಅವು ನಿಜ ಗುಣಗಳಲ್ಲ.

೭೦೮

ಆಶೆ ಅಳಿಯಲಿ ಬಂದ ಮೋಸ ತಿಳಿಯಲಿ ಬಂದ
ಶಾಸನದ ಒಡೆಯ ಪ್ರಭುದೇವರು ಅಲ್ಲಮನೆಂಬೊ
ಮೀಸಲುಳ್ಳವರು ಉಳಿಯಬೇಕು, ಬಸವಣ್ಣ

ತಾತ್ಪರ್ಯ : ಆಸೆಗೆ ಸತ್ತುದು ಕೋಟಿ ಆಮಿಷಕ್ಕೆ ಸತ್ತುದು ಕೋಟಿ ಎನ್ನುವಂತೆ ಜಗತ್ತಿನ ಜನ ಲೌಕಿಕ ಹಿತಾಸಕ್ತಿಯ ಬೆನ್ನುಹತ್ತಿ ಅಜ್ಞಾನಿಗಳಾಗಿದ್ದಾರೆ. ಅಂತಹವರ ಅತಿಯಾಸೆ ಮಹತ್ವಾಕಾಂಕ್ಷೆಯನ್ನು ಅರಿತು ಅವರ ಮೋಸ ವಂಚನೆಗಳನ್ನು ತಿಳಿದು ಅವರನ್ನು ತಿದ್ದಿ ತೀಡಲು ಶಾಸನದ ಒಡೆಯನಾದ ಅಲ್ಲಮ ಪ್ರಭುವೇ ಅವತಾರವೆತ್ತಿ ಬರುತ್ತಾನೆ; ಅಲ್ಲಮನಂತಹ ಮಹಾಮಹಿಮರಿಗೆ ಮಾತ್ರ ಉಳಿಗಾಲ ಹೊರತು ಅಜ್ಞಾನಿಗಳಿಗಲ್ಲ.

೭೦೯

ಇಕ್ಕಳ ಸುತ್ತಿಗೆ ಲೆಕ್ಕಕ್ಕೆ ಬರುತಾವೆ
ಮುಕ್ಕಣ್ಣನಾಣೆ ಸಠೆಯಲ್ಲ
ಅಪಾರ ನಿಷ್ಠೆಯಿಂದ ನೀವು ನೆರೆನಂಬಿ, ಬಸವಣ್ಣ

ತಾತ್ಪರ್ಯ : ಕೆಲಸವಿಲ್ಲೆಂದು ಕೈಹಿಡಿದ ಇಕ್ಕಳ ಸುತ್ತಿಗೆಯನ್ನು ಬಿಟ್ಟರೆ ಕೆಟ್ಟು ಹೋದೀರಿ. ಪಾಂಚಾಳರಿಗೆ ಇಕ್ಕಳ ಸುತ್ತಿಗೆಯೇ ಅನ್ನ ಹಾಗೂ ಅರಿವಿನ ಆಧಾರಗಳು. ಕಾಲಗತಿಯಲ್ಲಿ ಕೆಲಸಗಳು ಕಡಿಮೆಯಾದವೆಂದು ವೃತ್ತಿ ಮೂಲವಾದ ಸಾಮಾನು ಗಳನ್ನು ತ್ಯಜಿಸಿದರೆ ಸ್ವಾವಲಂಬನೆ ಹೋಗಿ ಪರಾವಲಂಬನೆ ಪ್ರಾಪ್ತಿಯಾಗುತ್ತದೆ. ಕಾಯಕ ನಿಷ್ಠೆ ಮನುಷ್ಯನನ್ನು ಬಾಳಿಸುತ್ತದೆ ಬೆಳೆಸುತ್ತದೆ. ನಂಬಿಕೆ ಮುಖ್ಯ.

೭೧೦

ಇರುವಿ ಮೊದಲು ಆನೆ ಕಡೆಯಾಗಿ
ಎಂಭತ್ನಾಲ್ಕು ಲಕ್ಷ ಜೀವನಕ್ಕೆ
ಕಿರಿದಾಗದವನೆಂದು ಉರ್ವಿಸಾರುತ್ತದೆ
ಪ್ರತಿಪಾಲಿಪ ಮಹಾ ದ್ರೋಹಿಗಳ ತೆರನ
ಇದೇನು ಕೇಳು, ಬಸವಣ್ಣ

ತಾತ್ಪರ್ಯ : ಇರುವಿ ಮೊದಲಾಗಿ ಆನೆ ಸಹಿತ ಎಂಬತ್ನಾಲ್ಕು ಲಕ್ಷ ಜೀವರಾಶಿಗಳನ್ನು ಸಲಹುವ ಮೂಲಕ ಅವುಗಳಿಗಿಂತ ಹಿರಿದಾದವನನ್ನು ಲೋಕದ ಜನ ಗುರುತಿಸದೆ ಆತನ ಜ್ಞಾನದ ಉದ್ದೇಶವನ್ನು ಅರ್ಥಮಾಡಿಕೊಳ್ಳದೇ ಇರುವ ದ್ರೋಹಿಗಳಿಂದಾಗಿ ಜಗತ್ತು ಕ್ಷುಲ್ಲಕವಾಗಿದೆ ಎಂಬುದರ್ಥ.

೭೧೧

ಉಡುಗಿಯ ಉಟ್ಟಾರು ತೊಡುಗಿಯ ತೊಟ್ಟಾರು
ಉಡುಗಿಯ ಮೇಲೆ ಸಂಪಿನ ಉಡಗಿ ಉಡುವಂಥ
ಕೆಡಗಾಲ ಬಂತು ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಶ್ರೀಮಂತಿಕೆ ಎನ್ನುವುದು ಎರಡು ರೀತಿಯ ಅನಾಹುತಕ್ಕೆ ಕಾರಣವಾಗುತ್ತದೆ. ಒಂದು ಶ್ರೀಮಂತಿಕೆಯನ್ನು ತೋರಿಸಲು ವಿವಿಧ ಬಗೆಯ ಉಡುಗೆ ತೊಡುಗೆಗಳನ್ನು ಒಂದರ ಮೇಲೊಂದು ಹಾಕಿಕೊಳ್ಳುವುದು, ಮತ್ತೊಂದು ಇಂದಿನ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಶ್ರೀಮಂತಿಕೆಯ ಒಣಆಡಂಬರದಲ್ಲಿ ಅರೆಬೆತ್ತಲೆ ತಿರುಗುವುದು. ಕಾಲ ಮತ್ತು ಮನಸ್ಸಿನ ವಿಪರೀತತೆಯನ್ನು ವಚನ ಹೇಳುವಂತಿದೆ.

೭೧೨

ಉತ್ತರದೇಶದಲಿ ಕಿತ್ತುವ ಮಾರ್ಬಲಗಳು
ಒಂಬತ್ತು ಲಕ್ಷಗಳು ದಕ್ಷಿಣ ಕಾಶಿ ಪರಿಯಂತ್ರ
ರಕ್ತದೋಕುಳಿಯು, ಬಸವಣ್ಣ

ತಾತ್ಪರ್ಯ : ಉತ್ತರದಿಂದ ನಡೆಯುವ ದಾಳಿಯ ಸೂಚನೆ ವಚನದಲ್ಲಿದೆ. ಮುಸ್ಲಿಂ ದಾಳಿಗಳಾಗಬಹುದು, ಇಂದು ಕುದಿಯುತ್ತಿರುವ ಭಾರತ ಪಾಕಿಸ್ತಾನದ ಮನಸ್ಥಿತಿ ಯಾಗಿರಬಹುದು, ಉತ್ತರ ಭಾರತದಿಂದ ನುಗ್ಗುವ ಸೇನಾಬಲಗಳಿಂದಾಗಿ ಅಥವಾ ಭಯೋತ್ಪಾದಕರಿಂದ ಆಗಬಹುದು. ದಕ್ಷಿಣಕಾಶಿ ಉದ್ದಕ್ಕೂ ರಕ್ತದೋಕುಳಿ ಚೆಲ್ಲಬಹುದೆ ನ್ನುವ ಅಪಾಯದ ಸೂಚನೆ ಇಲ್ಲಿದೆ.

೭೧೩

ಎಂಟು ದಿಕ್ಕಿಗೆಲ್ಲ ಕಂಟಕವು ಬಂದೀತು
ಮಂಟೆವಾಯಿತು ಮರ್ತ್ಯವು ತುರುಕರು
ದಂಟುಮಾಡಿ ತುಳಿಸ್ಯಾರು, ಬಸವಣ್ಣ

ತಾತ್ಪರ್ಯ : ಮುಸಲ್ಮಾನರ ಆಳ್ವಿಕೆಯ ಅಪಾಯವನ್ನು ವಚನ ಹೇಳುತ್ತದೆ. ಭರತ ಖಂಡದ ಇಡೀ ಭೂಭಾಗ ಮುಸ್ಲಿಂರ ಆಡಳಿತದಿಂದ ಹಾಗೂ ಆಕ್ರಮಣದಿಂದ ತತ್ತರಿಸಿ ಹೋಗುತ್ತದೆ. ಸಂಘರ್ಷ ಜಾಸ್ತಿಯಾಗುತ್ತದೆ. ಜನರನ್ನು ಪ್ರಕೃತಿಯನ್ನು ಒಣಗಿದ ದಂಟಿನಂತೆ ಸೈನ್ಯದ ಕಾಲಡಿಯಲ್ಲಿ ಹಾಕಿ ತುಳಿಸಿ ಹೊಸಕಿ ಹಾಕುವ ಅಮಾನವೀಯ ಸಂದರ್ಭ ಬರುತ್ತದೆನ್ನುವ ಅರ್ಥ ಇಲ್ಲಿದೆ. ಪ್ರಕೃತಿ ಮತ್ತು ಮನುಷ್ಯ ಲೋಕದ ನಾಶದ ಸೂಚನೆ ಇಲ್ಲಿದೆ.

೭೧೪

ಎತ್ತು ಮಾರುವವನಿಗೆ ಮುತ್ತಿನಾ ಬೆಲೆಯಿಲ್ಲ
ಅಟ್ಟಗೋಲನು ಸುಡಬೇಕು ಮುಂದೆ
ರಟ್ಟು ಕಟ್ಟೇನು ಅಲ್ಲಮಪ್ರಭು
ರಟ್ಟು ಮಾಡುವ ದಿನ ಬಂದಾವು
ರೊಟ್ಟಿಗೆ ಕೊರಳು ಕೊಯ್ವರು, ಬಸವಣ್ಣ

ತಾತ್ಪರ್ಯ : ಒಂದು ರೀತಿ ರೈತ ಹಾಗೂ ಕೃಷಿ ಬದುಕಿನ ಅವನತಿಯನ್ನು ವಚನ ಹೇಳುವಂತಿದೆ. ಬರಗಾಲ ದೇಶದ ಬೆನ್ನೆಲುಬಾದ ಕೃಷಿ ಹಾಗೂ ರೈತನ ಬೆನ್ನೆಲುಬಾದ ಎತ್ತಿನ ನಾಶಕ್ಕೆ ಕಾರಣವಾಗುತ್ತದೆ. ಎತ್ತು, ರೈತ, ಭೂಮಿ, ರೊಟ್ಟಿ, ಮಸೆಯುವ ಅಟ್ಟುಗೋಲು ತನ್ನ ಸ್ವಭಾವವನ್ನು ಕಳೆದುಕೊಂಡು ಜಡವಾಗುತ್ತವೆ. ನಿಷ್ಪ್ರಯೋಜಕ

ವಾಗುತ್ತವೆ. ಕೃಷಿಯ ನಾಶ ಎಂಬುದು ಆಹಾರದ ಅಭದ್ರತೆಯನ್ನು ಮತ್ತು ಬದುಕಿನ ಅಸ್ಥಿರತೆಯನ್ನು ಸೃಷ್ಟಿಸುತ್ತದೆ.

೭೧೫

ಏಳೇಳು ಲೋಕವನು ಗೂಳಿಯ ಮಾಡಿದ
ದಾಳಿಯ ತಂದ ಧರೆಗೆಲ್ಲ ಅಲ್ಲಮರಾಯ
ಏಳಲವ ಮಾಡಿದ ಫಲದ ಪಾತಕದಿಂದಲಿ
ಕೂಳು ನೀರುಗಳು ಅಪರೂಪ, ಬಸವಣ್ಣ

ತಾತ್ಪರ್ಯ : ಅನ್ನ ಆಹಾರಗಳ ಅಭಾವವನ್ನು ವಚನ ಧ್ವನಿಸುತ್ತದೆ. ಮನುಷ್ಯನ ಸ್ವಾರ್ಥ ಹಾಗೂ ಅವಿವೇಕತನಗಳು ಭೂಲೋಕವನ್ನು ಮಾತ್ರವಲ್ಲ ಏಳೇಳು ಅಂದರೆ ಹದಿನಾಲ್ಕು ಲೋಕಗಳನ್ನು ಘಾಸಿ ಮಾಡಿವೆ. ಗೂಳಿಯ ಸ್ವಭಾವದ ಮನುಷ್ಯನ ಮನಸ್ಸಿನ ದಾಳಿಯಿಂದಾಗಿ ಜಗತ್ತೇ ನಡುಗಿದೆ. ದೇವರು ಧರ್ಮ ಎನ್ನುವ ಪ್ರಾಕೃತಿಕ ಸತ್ಯಗಳನ್ನು ಅಪಹಾಸ್ಯ ಮಾಡಿದ, ನಿಕೃಷ್ಟ ಮಾಡಿದ ಕಾರಣದಿಂದಾಗಿ ಅನ್ನ ಆಹಾರ ಗಳಿಗಾಗಿ ಮನುಷ್ಯ ಹೊಡೆದಾಡಬೇಕಾಗಿದೆ.

೭೧೬

ಒಂದು ಹೊನ್ನು ಇದ್ದವರಿಗೆ
ಕೊಂದಾರು ಬಡಿದಾರು
ಇಂದಿಗೆ ಈ ಒಂದು ಹೊನ್ನು
ನೀಗುವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಅತಿಯಾದ ಸಂಪತ್ತು ಜೀವಕ್ಕೆ ಕುತ್ತು ತರುತ್ತದೆ. ಅದನ್ನು ಒಂದೆಡೆ ಕ್ರೋಢೀಕರಿಸದೆ, ವಿನಿಯೋಗಿಸಿ ಉಪಯೋಗಿಸಬೇಕು. ಇಲ್ಲದೆ ಹೋದರೆ ಜೀವಕ್ಕೆ ಅಪಾಯ ತರುತ್ತದೆ. ನಾನಾ ಕಾರಣಗಳಿಂದ ಹೀಗೆ ಕೂಡಿಟ್ಟ ಹೊನ್ನನ್ನೇ ಬಿಟ್ಟು ಹೋಗುವ ದಿನಗಳು ಬರುತ್ತವೆ. ತಾನು ಕೂಡಿಟ್ಟಿದ್ದು ತನಗೆಸಿಗದೆ ಅನ್ಯರ ಪಾಲಾಗ ಬಹುದು. ಜೀವವನ್ನೇ ಬಲಿ ತೆಗೆದುಕೊಳ್ಳಬಹುದು. ಇಂದಿನ ರಾಜಕಾರಣಿಗಳನ್ನು ಇದಕ್ಕೆ ನಿದರ್ಶನ ಕೊಡಬಹುದು.

೭೧೭

ಕಂದು ಕಾವಿಯ ವಸ್ತ್ರ ಸರ್ವಾಂಗ ಧೂಳಿತ
ಕುರುವಿನ ಚರ್ಮವ ಪಾವನ ಮಾಡುವ
ಗುರುವಿನ ಗುರುತವ ಅರಿಯಿರೊ, ಬಸವಣ್ಣ

ತಾತ್ಪರ್ಯ : ಕಾವಿಬಣ್ಣದ ಬಟ್ಟೆ ಧರಿಸಿ ಶರೀರದ ಎಲ್ಲ ಭಾಗಗಳಿಗೆ ವಿಭೂತಿಯ ಹುಡಿಯನು ಧರಿಸಿ, ಎಳೆ ಚಿಗರಿ ಮರಿಯ ಚರ್ಮವನ್ನು ಆಸನ ಮಾಡಿಕೊಂಡು ಅವತರಿಸಿ ಬಂದ ಮೌನೇಶ್ವರರ ಗುರುತನ್ನು ನರರು ಅರಿಯಲಾರರು. ಗುರುವು ಪರಮಾತ್ಮನಿಗಿಂತಲೂ ಶ್ರೇಷ್ಠ ಎಂಬುದು ಇಲ್ಲಿನ ಭಾವ.

೭೧೮

ಕಂಡು ಮಾಡಿದ ಅಲ್ಪವ್ಯವಹಾರ ಕೊಂಡು ಮುಳುಗುವುದು
ದಂಡಾಧೀಶ್ವರನ ನಿರ್ದಯದಿ ದುರ್ಜನರು ಮನ
ಗಂಡು ಮಾಡುವರು ಅಪಮೃತ್ಯು, ಬಸವಣ್ಣ

ತಾತ್ಪರ್ಯ: ಲೋಕದ ಜನರು ಮಾಡುವ ಅಲ್ಪವ್ಯವಹಾರ ಹಾಗೂ ಅವ್ಯವಹಾರದಿಂದ ಭ್ರಷ್ಟರಾಗಿ ಅನೀತಿಯಲ್ಲಿ ಮುಳುಗುವರು. ಅಂತವರನ್ನು ದಂಡಾಧೀಶನಾದ ಶಿವನು ನಿರ್ದಯದಿಂದ ಮನಗಂಡು ಶಿಕ್ಷಿಸುವನು.

೭೧೯

ಕಲ್ಲು ನೀರೊಳಗಿರಲು ಕೈವಡದವರಿಲ್ಲ
ಬಿಲ್ಲನೆ ನೆಗಹಿದ ಲಕ್ಷ್ಮಣನು ಹಣ್ಣು ಹನ್ನೆರಡು ವರುಷ
ಮೆಲ್ಲದೆ ನಿರಾಹಾರವು, ಬಸವಣ್ಣ

ತಾತ್ಪರ್ಯ :

೭೨೦

ಕಾಡು ಮೃಗಂಗಳು ಎಸೆದು ಉಣಿಸಿತು
ಬ್ಯಾಡಗೆ ಅಪ್ಪಣೆ ಕೊಟ್ಟರೆ
ಆಡು ಕುರಿ ಕೋಣನ ಕಡಿದು ತಿಂದ ಕಾರಣದಿಂದ
ಕೇಡು ಬಂದೈತೆ ಜಗಕೆಲ್ಲ, ಬಸವಣ್ಣ

ತಾತ್ಪರ್ಯ : ಪ್ರಾಣಿವಧೆ ಅಥವಾ ಪ್ರಾಣಿಬಲಿಯ ಪ್ರಸಂಗಗಳನ್ನು ವಚನ ವಿರೋಧಿಸುವಂತಿದೆ. ಬೇಟೆಯ ಹೆಸರಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುವುದು, ದೇವರ ಹೆಸರಿನಲ್ಲಿ ಆಡು ಕುರಿ ಕೋಣಗಳನ್ನು ಕಡಿದು ತಿನ್ನುವುದು ಸಲ್ಲದು. ಪ್ರಾಣಿದಯೆ ದೊಡ್ಡದು. ಜೀವಹಿಂಸೆ ಎನ್ನುವುದು ಸದ್ಭಕ್ತರಿಗೆ ಸಲ್ಲದು. ಕಾರಣ ಇಂತಹ ಪ್ರಾಣಿವಧೆಯಿಂದಾಗಿಯೇ ಜಗತ್ತಿಗೆ ಕೇಡು ಬಂದಿರುವುದು. ಮೂಢನಂಬಿಕೆಗಳ ಅಪಾಯವನ್ನು ವಚನ ಹೇಳುತ್ತದೆ.

೭೨೧

ಕಾಡಿಬೇಡಿ ಉಂಬುವ ನರರು ನಾಡನಾಳುವರು
ಪೀಡೆಗಳೆಂದ ಪ್ರಭುರಾಯ ಎನ್ನ ಕೂಡ

ಮಾಡಿ ಉಣಬೇಕು ಸರಿಯಾಗಿ ಎಂದಿನ್ನು
ಜೋಡೆತ್ತ ಬೆದಕವರ ಹೊರಹೂಟೇನು, ಬಸವಣ್ಣ

ತಾತ್ಪರ್ಯ : ಪ್ರಜೆಗಳನ್ನು ಕಾಡಿಸಿ ಪೀಡಿಸಿ ಆಳುವ ನಾಯಕರು ಬರುತ್ತಾರೆ. ಸ್ವ ಲಾಭದಾಸೆಗೆ ಅಧಿಕಾರ ಹಿಡಿಯುವ ಇಂತಹ ನಾಯಕರು ಜನರನ್ನು ಪೀಡಿಸುವ ಪೀಡಕರು. ಅಂತಹವರ ಅಧರ್ಮ ಅನೀತಿಯನ್ನು ಅಡಗಿಸಿ ಜನರನ್ನು ವಿಮೋಚನೆ ಮಾಡಲು, ಅವರಿಗೆ ಧ್ವನಿ ನೀಡಲು ಬಂದವರು ಮೌನೇಶ್ವರರು. ನಾಡನಾಳಲು ಅರ್ಹತೆ ಪಡೆಯಬೇಕಾದರೆ ಉಳುಮೆ ಮಾಡಲು ಕಲಿಯಬೇಕು. ಅಂತಹವನು ಪ್ರಜಾಪಾಲಕ ಪ್ರಭುವಾಗುತ್ತಾನೆ. ಇಲ್ಲದಿದ್ದರೆ ಪೀಡಕನಾಗುತ್ತಾನೆ.

೭೨

ಕಾಲ ಮಹಿಮೆಗಳಿಂದ ಶೀಲ ಶಕುನವು ಸುಳ್ಳು
ಓಲೆಯೊಳು ಕುಳಿತು ವೈಯಾಳಿಯ ಮಾಡುವ
ಕೀಲು ಅವರಿಗುಂಟೆ, ಬಸವಣ್ಣ

ತಾತ್ಪರ್ಯ : ವಚನ ವೈಚಾರಿಕತೆಯನ್ನು ಬಿಂಬಿಸುವಂತಿದೆ. ಮನುಷ್ಯ ತನ್ನ ಎಲ್ಲ ಎಚ್ಚರಗಳನ್ನು ಕಳೆದುಕೊಂಡು ನಿರ್ವೀರ್ಯ ಹಾಗೂ ಪರಾವಲಂಬಿಯಾಗುತ್ತಿದ್ದಾನೆ. ಸುಳ್ಳು ಶಕುನ ಹಾಗೂ ಜ್ಯೋತಿಷ್ಯ ನಂಬಿ ಮೋಸಹೋಗುತ್ತಿದ್ದಾನೆ. ಓದಲು ಬರೆಯಲು ಬಾರದವರೆಲ್ಲ ಓಲೆಗರಿಯನ್ನು ಎದುರಿಟ್ಟುಕೊಂಡು ಜನರಿಗೆ ಶಕುನ ಹೇಳುವ ನಾಟಕವಾಡುತ್ತಿದ್ದಾರೆ. ಓದುಬಲ್ಲ ಪಂಡಿತರು ಪಾಮರರನ್ನು ಉಪೇಕ್ಷಿಸುವ ಕೀಳುತನಕ್ಕಿಳಿದಿದ್ದಾರೆ. ಅಂತವರು ಸಮಾಜ ಸುಧಾರಿಸಲು ಶಕ್ತರಾಗಲಾರರು.

೭೩

ಕುಟ್ಟ ಹೋದವರ ಮನೆಯ ಮತ್ತೆ ಹಾಡುವನಲ್ಲಾ
ಕಕ್ಕಯ್ಯನ ವರಪ್ರಸಾದವೇ ಗತಿಯೆಂದು
ಉತ್ಪ್ರೇಯಿಸಿ ಹೇಳಿದ ವಚನವು ಓಂಕಾರದ
ಸತ್ಯ ಮಹಾತ್ಮರು ನೀವು ಕೇಳಿ, ಬಸವಣ್ಣ

ತಾತ್ಪರ್ಯ : ಮಾತು ಮತ್ತು ನಡೆ ಶುದ್ಧತೆಯನ್ನು ವಚನ ಪ್ರತಿಪಾದಿಸುವಂತಿದೆ. ಸತ್ಯ ಮಹಾತ್ಮರಿಗೆ ಈ ಲೋಕದ ಪರಿಯನ್ನು ವಿವರಿಸುತ್ತದೆ. ದುರಾತ್ಮರಾದವರಿಗೆ ಒಂದುಬಾರಿ ಹೇಳಬಹುದು. ಮಗದೊಮ್ಮೆ ಹೇಳಲಾಗದು. ಕಾರಣ ಪುರಾತನ ಶರಣನಾದ ಅನುಭಾವಿ ಕಕ್ಕಯ್ಯನ ವರಪ್ರಸಾದದಿಂದ ನುಡಿದ ಅನುಭಾವದ ನುಡಿಗಳನ್ನು ಅನುಭಾವಿಗಳೊಂದಿಗೆ ಹಂಚಿಕೊಳ್ಳುವುದು, ಹೇಳುವುದು ಉಚಿತವೇ ಹೊರತು ಅನುಭಾವಿಗಳಲ್ಲದವರಿಗಲ್ಲ.

೭೪೪

ಕೋರ ಹೆಣ್ಣಿಗೆ ಲೀಲೆ ಕೊಡಗೂಸು ಹೆಣ್ಣಿಗೆ
ಘನಲೀಲೆ, ದೊಡ್ಡ ಹೆಣ್ಣಿಗೆ ಬಾಲಲೀಲೆ
ಉಳವಿಯ ಲೆಂಡ ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಹೆಣ್ಣಿನ ಬೆಳವಣಿಗೆಯ ವಿವಿಧ ಅವಸ್ಥಾಭೇದಗಳನ್ನು ವಚನ ಹೇಳುವಂತಿದೆ. ಕೋರಹೆಣ್ಣಿಗೆ ಅಂದರೆ ಅದೇತಾನೆ ಹಲ್ಲು ಬಂದ ಸಣ್ಣ ಕೂಸಿನ ಆಟ ಅಥವಾ ಲೀಲೆ ಮುದ್ದು ಬರುವಂತಿರುತ್ತದೆ. ಅದೇ ಕೂಸು ಕನ್ಯೆಯಾದಾಗ ಪ್ರೌಢಾವಸ್ಥೆಗೆ ಬಂದಾಗ ಇನ್ನೂ ಹೆಚ್ಚಿನ ತುಂಟಾಟಗಳನ್ನು ಆಡುತ್ತಾಳೆ. ಈ ಎರಡು ಅವಸ್ಥೆಗಳನ್ನು ಮೀರಿದ ಹೆಣ್ಣಿಗೆ ಆಟದ ಅವಕಾಶವನ್ನೇ ಕಸಿದುಕೊಳ್ಳಲಾಗಿದೆ. ಅವಳು ಏನಿದ್ದರು ಬಾಲ್ಯದಲ್ಲಿ ಆಡಿದ ಆಟಗಳನ್ನು ನೆನೆಸಿಕೊಂಡು ಬದುಕಬೇಕಷ್ಟೆ. ಮೌನೇಶ್ವರರು ಹೆಣ್ಣಿನ ಇಂತಹ ಬಂಧನ ಸ್ಥಿತಿ ಬಗ್ಗೆ ಪ್ರತಿರೋಧ ತೋರಿಸುವಂತಿದೆ.

೭೪೫

ಗಂಧ ಬಂಡಾರದ ಒಡೆಯ ಬಂದಾನೆ
ದಿಂಡೆಯರು ನಿಮಗಿನ್ನು ತಿಳಿಯದು ವಾಲಿಯ
ಭಂಡಾರಕ್ಕೆ ಬಂತು ಬಡಗಿಚ್ಚು, ಬಸವಣ್ಣ

ತಾತ್ಪರ್ಯ : ಶಿವಶರಣರು ಕಲ್ಯಾಣದಿಂದ ಚದುರಿದಾಗ ಒಂದಷ್ಟು ಜನ ಹಂಪಿಯ ಪ್ರದೇಶಕ್ಕೆ ಬಂದು ನೆಲೆಸುತ್ತಾರೆ. ಅವರು ತಂದ ವಚನ ಸಂಕಲನಗಳ ಓಲೆಗರಿಗಳನ್ನು ಒಂದೆಡೆ ಸಂಗ್ರಹಿಸಿ ಇಟ್ಟಿದ್ದು ಅದನ್ನೇ ವಾಲಿ ಭಂಡಾರ ಅಥವಾ ಓಲೆ ಭಂಡಾರ ಎಂದು ಕರೆಯುವ ರೂಢಿಯಿದೆ. ಇಂತಹ ಗ್ರಂಥಭಂಡಾರಕ್ಕೆ ಬಡಬಾಗ್ನಿಯಿಂದ(ಉತ್ತರ ದಿಕ್ಕಿನಿಂದ ಬಂದ ಬೆಂಕಿ) ಅಪಾಯವಿದೆ ಎಂದು ಗಂಧ ಭಂಡಾರದ ಒಡೆಯನಾದ ಚೆನ್ನಬಸವಣ್ಣನ ಅವತಾರಿ ಮೌನೇಶ್ವರರು ಬಂದು ಹೇಳಿದರೂ ಬೊಜ್ಜು ದೇಹದ ಅಜ್ಞಾನಿಗಳಿಗೆ ತಿಳಿದುಕೊಳ್ಳುವ ತಹತಹ ಇಲ್ಲ.

೭೪೬

ಗದಗುನಾಡ ಗಾವುದಿ ಎಲುಬುರಗಿನಾಡ ಹೊಲೆಯ
ಕುಷ್ಟಗಿ ನಾಡ ನಷ್ಟ ತಾವರಗೇರಿ ತಡಾಕಿ
ಮುದಗಲ್ಲುನಾಡು ಮೂಲ ಸಗರನಾಡು ವಸ್ತಾದಿ
ಬಲ್ಲದಾದರೆ ಬಂಕಾಪುರ ನೆಲೆಗೊಂಡರೆ ಮುದೆನೂರು
ಸಾಲಾವಳಿಯಾದರೆ ಸಗರಶಾಪುರದಲ್ಲಿ
ನೆಲೆಗೊಳಿಸಿದರು ನಮ್ಮ ಹಿರಿಯರು ಕಾಣಾ, ಬಸವಣ್ಣ

ತಾತ್ಪರ್ಯ : ಮೌನಯ್ಯನವರ ಸಂಚರಿಸಿದ ಊರುಗಳ ಸ್ಥೂಲನಕ್ಷೆ ಈ ವಚನದಲ್ಲಿದೆ. ಗದಗು ನಾಡು ಗಾವುದ ಎಂದರೆ ಹರದಾರಿ ದೂರದಲ್ಲಿರುವ ವರವಿ ಗ್ರಾಮ. ಯಲಬುರ್ಗಿ ನಾಡು ಹೊಲೆಯ ಎನ್ನುವಲ್ಲಿ ಇಂದಿನ ಲಿಂಗನಬಂಡಿ ಗ್ರಾಮ ಕುಪ್ಪಗಿಯ ತಾವರಗೇರಿ, ಲಿಂಗಸೂರಿನ ಮುದಗಲ್ಲು, ಸಗರನಾಡಿನ ದೇವರಗೋನಾಳ, ತಿಂತಿಣಿ, ಶಹಪೂರ, ಇಂದಿನ ಶಿಗ್ಗಾವಿಯ ಬಂಕಾಪುರ, ಮುದೆನೂರು ಇವೆಲ್ಲ ಮೌನೇಶ್ವರರು ಸಂಚರಿಸಿದ ಹಾಗೂ ಲೀಲೆಗೈದು ನೆಲೆನಿಂತ ಸಂಗತಿಗಳನ್ನು ಹೇಳುತ್ತವೆ.

೭೨

ಗಾಣಿಗೇರ ಪರಪ್ಪಶೆಟ್ಟಿಯು
ಮೋನಪ್ಪಯ್ಯನನ್ನು ಗ್ರಾಮದಲ್ಲಿ ಕರೆದು
ಜುಟ್ಟು ನೇವರಿಸಿ ಇದು ಯೇನು ಮೊಮ್ಮಗನೆ
ಕತ್ತೆಯಲ್ಲ ಕುದರೆಯಲ್ಲಾ ನೆತ್ತೀಲಿ ಬಾಲಯೆಂದರೆ
ಅಹುದಹುದು ಮುತ್ಯಾ
ವಾಳೆಲ್ಲ ವದಕಳೆಲ್ಲ ಕೊರಳಲ್ಲಿ ದಾವಣಿ ಎನಲಿಕ್ಕೆ
ಮೋನಯ್ಯನ ಕೈಯನ್ನು ಹಿಡಿದುಕೊಂಡು
ತಾಯಿ ಹತ್ತಿರಕ್ಕೆ ಕರದೊಯ್ದು ಹಾವಕ್ಕ ಈ ತಮ್ಮನ್ನ
ಜೋಕೆಮಾಡೆಂದು ಆಡಿದರೆ
ನಾನೇನು ಜೋಕೆಮಾಡಲಪ್ಪೆನು
ಆ ಪರಮೇಶ್ವರನು ಜೋಕೆ ಮಾಡ್ಯಾನು
ಭಾಳಾಕ್ಷನ ಮನೆಯ ವಾಲಿಯ ತಳವಾರ
ಕೋಳಿ ನಾನು ಅಹುದಯ್ಯ ಬಡನಾಯಿ
ಶಿವಶರಣರ ಮನೆಯ ಊಳಿಗಕ್ಕೆ ಬಂದ ಮಗನಯ್ಯ
ಎಂದಿನ್ನು ಹೇಳು ಕಂಡ್ಯಾ ಧರೆಯೊಳಗೆ
ಎಂದಿನ್ನು ನರಕೋಳಿ ಮಾಡಿ ಮರ್ತ್ಯಕ್ಕೆ ಕಳಹುವರು, ಬಸವಣ್ಣ

ತಾತ್ಪರ್ಯ : ಸೂಕ್ಷ್ಮವಾಗಿ ಜನಿವಾರ ಮತ್ತು ಶಿವದಾರದ ಜಟಾಪಟಿ ಹಾಗೂ ಮೌನೇಶ್ವರರ ಆತ್ಮ ವಿಮರ್ಶೆಯ ನೆಲೆಯನ್ನಿಲ್ಲಿ ಕಾಣಬಹುದಾಗಿದೆ. ಮೌನೇಶ್ವರರ ಸ್ವಭಾವ ಮತ್ತು ಗುಣಲಕ್ಷಣವನ್ನು ತಿಳಿಸುವ ವಚನವಿದಾಗಿದೆ. ಗಾಣಿಗೇರ ಪರಪ್ಪಶೆಟ್ಟಿ ಮೌನೇಶ್ವರರನ್ನು ಕರೆದು ಪ್ರೀತಿಯಿಂದ ತಲೆ ನೇವರಿಸಿ ಅವರ ಜುಟ್ಟು ನೋಡಿ ಇದೇನು ಮಗನೆ ಕತ್ತೆಯಲ್ಲ ಕುದುರೆಯಲ್ಲ ನೆತ್ತಿಯಲಿ ಬಾಲ ಎನಲು ಮೌನಯ್ಯ ವಾಳಿಯಲ್ಲ ವದಕಳೆಲ್ಲ ಕೊರಳಲ್ಲಿ ದಾವಣಿ ಎಂದು ಮರು ಪ್ರಶ್ನೆ ಮಾಡುತ್ತಾರೆ.

ತಾಯಿ ಹತ್ತಿರ ಕರೆದು ಮಗನ ಜೋಕೆ ಮಾಡೆಂದು ಹೇಳಿದರೆ ಪರಮೇಶ್ವರನೇ ಅವನನ್ನು ಸಲಹುತ್ತಾನೆ ನಾನು ಸಲಹುವುದೇನು. ಅವನು ಭಾಳಾಕ್ಷನ ಮನೆಯ ವಾಲಿಯ ತಳವಾರನ ಕೋಳಿಯಮಗ, ಶಿವಶರಣರ ಮನೆಯ ಊಳಿಗದವ, ನಾನೊಬ್ಬ ನರಕೋಳಿ ಎಂದು ಮೌನೇಶ್ವರರು ಹೇಳುತ್ತಾರೆ.

೭೨೮

ಗುದ್ದಯ್ಯನ ಹಾಗೆ ಮುದ್ದಿ ಮಾಡುವಾತನಲ್ಲ
ಶುದ್ಧಾತ್ಮ ಚೆನ್ನಬಸವಣ್ಣ ಅಲ್ಲಮಪ್ರಭುವಿನ
ವಿದ್ಯೆದ ಖಣಿಯು ಇದು ನೋಡಬೇಕಲ್ಲದೆ ನಿಮ್ಮ
ನಿದ್ದಿಗಣ್ಣಿಂದ ಕೆಡಬೇಡವೆಂದು
ಬುದ್ಧಿವಂತ ರುದ್ರ ಹೇಳಿದ ನಿಜನುಡಿಯು, ಬಸವಣ್ಣ

ತಾತ್ಪರ್ಯ : ಮೌನೇಶ್ವರರ ಮಾತೆಂದರೆ ಚಾಣದ ಹರಿತದಂತೆ ಮೊಣಚು. ಮುದ್ದು ಮುದ್ದಾಗಿ ಮಾತಾಡಿ ಕಾರ್ಯಸಾಧಿಸಿಕೊಳ್ಳುವ ಸ್ವಭಾವ ಅವನದಲ್ಲ. ಆತನೊಬ್ಬ ಖಂಡಿತವಾದಿ; ಆದರೆ ಆತ್ಮಶುದ್ಧಿ ಮನುಷ್ಯ. ವಿದ್ಯೆಯ ಖಣಿ. ಚೆನ್ನಬಸವಣ್ಣ ಮತ್ತು ಅಲ್ಲಮನ ಅನುಭಾವಮಾರ್ಗ ಹಿಡಿದು ಪರಿಪೂರ್ಣನಾದವ. ಅಂತಹ ದಿವ್ಯಜ್ಞಾನಿಯನ್ನು ನಿದ್ದಗಣ್ಣಿನಿಂದ ನೋಡಿ ಕೆಡದೆ ವಿವೇಕದ ಕಣ್ಣಿನಿಂದ ನೋಡಿ ತಿಳಿದುಕೊಳ್ಳಬೇಕೆಂದು ರುದ್ರನಾದ ಮೌನೇಶ್ವರರು ಹೇಳಿದ್ದಾರೆ.

೭೨೯

ಗುದ್ಲಿ ಸಲಕಿಯು ಕಲ್ಲು ವಜ್ರಮಾಣಿಕ ಕಲ್ಲು
ಸಿದ್ಧಶೀಲವಂತಯ್ಯಗೆ ಕಲ್ಲು ಮಾಡಿದ
ಭದ್ರ ಬೇರೆ ಹಾನೆ ಕಡೆಯಲ್ಲಿ ಲೋಕದ
ಭದ್ರರಿಂದೇನು ನಡೆದಾವು, ಬಸವಣ್ಣ

ತಾತ್ಪರ್ಯ : ಈ ಲೋಕ ನಿರ್ಮಿತಿ ಮಾಡಿ ಮುನ್ನಡೆಸುವವ ಬೇರೆ ಇದ್ದಾನೆ. ನಾನು, ನನ್ನಿಂದಲೇ ಎಲ್ಲ ಎನ್ನುವ ಮೂರ್ಖರಿಂದ ಅಹಂಕಾರಿಗಳಿಂದ ಏನೂ ಸಾಧಿಸಲಾಗದು. ಪ್ರಾಕೃತಿಕ ವಸ್ತುಗಳನ್ನು ನಿರ್ಮಿಸಿದವ ಶಿವನಾದರೆ ಆ ಪ್ರಕೃತಿಯಿಂದ ಸಿಗುವ ಖನಿಜ, ಲೋಹ ಹಾಗೂ ಕಲ್ಲುಗಳಿಂದ ವಿವಿಧ ಆಕೃತಿ ನಿರ್ಮಿಸುವವರು ಪಾಂಚಾಳರು. ಶೀಲವಂತರಿಗೆ ಕಲ್ಲು ಮಾಡಿದವರೆಂದರೆ, ಶಿವಸ್ವರೂಪನಾದ ಲಿಂಗವನ್ನು ಲಿಂಗವಂತರಿಗೆ ರೂಪಿಸಿಕೊಟ್ಟವನೂ ಅವನೇ. ಕಾರಣ ಅಂತಹ ಸೃಷ್ಟಿ ನಿರ್ಮಾತೃಗಳನ್ನು ಕಡೆಗಣಿಸಬಾರದು.

೭೩೦

ಗುಳೇದ ಗುರುಮನಿಗೆ ದಾಳಿಗಳು ಸಲ್ಲುವವೆ
ಪಾಳೆಪಟ್ಟಣಕೆ ಅಳಗಾಲ ಬಂತೆಂದು
ಹೇಳಿದನು ಚೆನ್ನಬಸವಣ್ಣ ಅಲ್ಲಮರಾಯನು
ಅಳಿಗೊಂಬವರಿಗೆ ಶರಣಾರ್ಥಿ ಬಸವಣ್ಣ

ತಾತ್ಪರ್ಯ : ಪ್ರಭುತ್ವದ ಅಳಿಗಾಲವನ್ನು ಶರಣತ್ವದ ಉಳಿಗಾಲವನ್ನು ವಚನ ಸೂಚಿಸುತ್ತದೆ. ಸಂಪತ್ತು ಮತ್ತು ಅಧಿಕಾರದ ಕೇಂದ್ರಗಳಿಂದ ಪಾಳೆಪಟ್ಟಣಗಳು ಅಜ್ಞಾನವಶಾತ್ ಹಾಳಾಗಿ ವಿರಕ್ತ ಹಾಗೂ ಸಕಲಜನೋಪಕಾರಿಯಾದ ಗುರು ಮನೆಗಳು ಉಳಿಯುತ್ತವೆ. ಅಂದರೆ ಅಜ್ಞಾನವಳಿದು ಸುಜ್ಞಾನ ಉಳಿಯುತ್ತದೆ ಎನ್ನುವ ಭಾವ ಇಲ್ಲಿನದು.

೭೩೧

ಜಗದ ವೇಸಿಯಕೂಡ ನಗಿಯನಾಡುತಿರ್ದು
ಜಗಳ ಬೇಡವೆಂದೆನುತಲಿ ನೀವು ನಿಮ್ಮ
ಹಗೆಯಿಂದಲೆನ್ನ ಪಡೆದಿರಿ ಇದರಿಂದ
ನಗರ ನಗರಗಳು ಅಳಿದವು ಎಂದಿನ್ನು
ಅಘಹರ ಹೇಳಿದ ನಿಜ ನುಡಿಯು
ಕೇಳದಲೆ ಕೆಡಬೇಡಿ, ಬಸವಣ್ಣ

ತಾತ್ಪರ್ಯ : ಅಕ್ರಮ ಹಾಗೂ ಅನೈತಿಕವಾದ ಯಾವ ನಡುವಳಿಕೆಯೂ ಮನುಷ್ಯನ ನ್ನಾಗಲೀ ಸಮಾಜವನ್ನಾಗಲಿ ಮುನ್ನಡೆಸಲಾರದು. ಇದರಿಂದ ನಗರ ನಗರಗಳೇ ನಾಶವಾಗಿವೆ. ಹೀಗಾಗಿ ಇಂತಹ ಅನೈತಿಕ ವ್ಯವಹಾರಗಳಿಗೆ ಮನಸ್ಸನ್ನು ಹರಿಬಿಡದೇ ಅಧರ್ಮಕ್ಕಿಳಿಸದೆ ನೀತಿ ಧರ್ಮಗಳನ್ನು ಪಾಲಿಸಿ ಆರೋಗ್ಯವಂತ ಹಾಗೂ ಪ್ರಗತಿಶೀಲ ಸಮಾಜವನ್ನು ಕಟ್ಟಿಕೊಳ್ಳಬೇಕು. ಅದಕ್ಕಾಗಿ ಬಲ್ಲವರ ಮಾತನ್ನು ಕೇಳಬೇಕು.

೭೩೨

ಜಾಣಜಾಣರಿಗೆಲ್ಲ ಮ್ಯಾಣದ ಶೂಲವ ತಂದ
ಕೇಣವ ತಂದ ಜಗಕೆಲ್ಲ ಅಲ್ಲಮರಾಯ
ಅಳಗಾಲ ತಂದ ಮರ್ತಕ್ಕೆ, ಬಸವಣ್ಣ

ತಾತ್ಪರ್ಯ : ಜಾಣರೆಂದು ಪಂಡಿತರೆಂದು ಬೀಗುತ್ತಿದ್ದಂತವರಿಗೆ ಮೇಣದ ಶೂಲ ಅಂದರೆ ಕರಗುವ, ಪ್ರಾಣ ಹೀರುವ ಉಪಕರಣದಿಂದ ಬುದ್ಧಿ ಕಲಿಸಿದ, ಜಗದ ಜನರೆಲ್ಲ ಮಾತ್ಸರ್ಯದಿಂದ ಜಗಳಾಡಿ ಅಳಿಗಾಲವಾಗುವ ದಿನ ಬಂದಾವು. ಅಜ್ಞಾನಿಗಳಾ ದವರು ಎಚ್ಚೆತ್ತುಕೊಳ್ಳಬೇಕು.

೭೩೩

ಜೀವಿ ನಾನ್ಯವ ಬಿಟ್ಟು ಗೋಣೆ ಹೊದಕಿಯ ಹೊದ್ದಿಹರು
ನಿಮ್ಮ ಪ್ರಾಣಕ್ಕೆ ಬಂತು ಹತಗಾಲ
ದೇವತೆಯ ಕೋಣಗಳೆ ನಿಮಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಮನುಷ್ಯನ ಅಜ್ಞಾನ ಮತ್ತು ಜಿಪುಣತನವನ್ನು ವಚನ ವಿವರಿಸುವಂತಿದೆ. ಹಣವಿದ್ದರೂ ಖರ್ಚುಮಾಡಿ ಸರಿಯಾದ ಬಟ್ಟೆಯನ್ನು ಹಾಕಿಕೊಳ್ಳದೇ ಗೋಣಿ ತಟ್ಟು ಹೊದ್ದು ತಿರುಗುವವರ ಪ್ರಾಣಕ್ಕೆ ಅವಸಾನ ಬರುತ್ತದೆ. ಸಾವು ಸಮೀಪಿಸಿದರೂ ದೇವರಿಗೆ ಬಿಟ್ಟ ಕೋಣಗಳಂತೆ ಮದವೇರಿರುವ ಮನುಷ್ಯರು ತಮ್ಮ ಅಹಂಕಾರ ದಲ್ಲಿಯೇ ಇರುತ್ತಾರೆ. ಅಂತವರಿಗೆ ದುರ್ದೆಸೆ ತಪ್ಪದು.

೭೩೪

ತನ್ನ ಪಾಪ ಪುಣ್ಯ ಬೆನ್ನುಹತ್ತದೆ ಬಿಡದಯ್ಯ
ಇನ್ನಾವ ಜನ್ಮಕ್ಕೆ ಬಿಡದು ಶುನಕನ ಕುನ್ಯಾಗಿ
ಜನಿಸುವದು ಸಾಕ್ಷಿ, ಬಸವಣ್ಣ

ತಾತ್ಪರ್ಯ : ಮಾಡಿದ ಪಾಪ ಪುಣ್ಯಗಳು ಬೆನ್ನುಹತ್ತದೆ ಬಿಡುವುದಿಲ್ಲ. ಮಾಡಿದ್ದನ್ನು ಉಣ್ಣಲೇಬೇಕು. ಅವು ಯಾವ ಜನ್ಮದಲ್ಲಿಯೂ ಕಾಡದೆ ಬಿಡಲಾರವು. ಮಾಡಿದ ಪ್ರಾಯಶ್ಚಿತಕ್ಕೆ ನಾಯಿಕುನ್ಯಾಗಿ ಹೀನ ಜನ್ಮದಲಿ ಜನಿಸುವುದು ತಪ್ಪಲಾರದು.

೭೩೫

ದೇಶದೇಶಗಳೆಲ್ಲ ಫಾಸ್ಯಾಗಿ ಪೋಪಾಗ
ಶಾಸನದ ಧರ್ಮ ಕೆರಿಕಟ್ಟಿ ಮರ್ತ್ಯವ
ಭಾಷೆಯ ಕೊಟ್ಟು ಉಳುಹಿದನು, ಬಸವಣ್ಣ

ತಾತ್ಪರ್ಯ: ರಾಜನೆಂಬ ಅಹಂಕಾರ ಹಾಗೂ ಮಹತ್ವಾಕಾಂಕ್ಷೆ ಮತ್ತು ಯುದ್ಧ ನೀತಿಗಳಿಂದಾಗಿ ದೇಶದೇಶಗಳೆಲ್ಲವು ಫಾಸಿಯಾಗಿ ನಾಶವಾಗಿ ಹೋಗುವ ಹೊತ್ತಿನಲ್ಲಿ ಶಾಸನ ಧರ್ಮದಿಂದ ಅಂದರೆ ನೀತಿ ನಿಯಮ ಶಿಸ್ತುಗಳಂತೆ ನೈತಿಕ ಮೌಲ್ಯಗಳಿಂದ ಸಂಕಷ್ಟದಲ್ಲಿದ್ದವರನ್ನು ಮೇಲೆತ್ತುವ ಧರ್ಮಕಾರ್ಯಗಳಿಂದ ಈ ಸೃಷ್ಟಿಯನ್ನು ಪ್ರಮಾಣಭೂತವಾಗಿ ಸಲುಹಿದನು ಹಾಗೂ ಚೈತನ್ಯಗೊಳಿಸಿದನು.

೭೩೬

ಧರೆ ಮೂರುಲೋಕವೆಲ್ಲ ಉರಿದು ಹೋದೀತೆಂದು
ಅರುಹಿನ ಬಿಲ್ಲು ಹಿಡಿದಾನ ಹಿಡಿದು ನಿಂತಿರ್ದಾತ
ಧರೆಗೆ ತಾ ಬಂದನು, ಚೆನ್ನಬಸವಣ್ಣನು

ತಾತ್ಪರ್ಯ: ಅಜ್ಞಾನ ಅಂಧಃಕಾರ ಪ್ರಕೃತಿ ವಿಕೋಪಗಳಿಂದ ಲೋಕ ಉರಿದು ಹೋಗುವ ಅಪಾಯದಿಂದ ತಪ್ಪಿಸಲು ಅರುವೆಂಬ ಬಿಲ್ಲು ಹಿಡಿದು ಅದನ್ನು ಜನರಿಗೆ ತಿಳಿಸಲು ಜನಿಸಿ ಬಂದವರು ಮೌನೇಶ್ವರರು. ಪ್ರಳಯ ಎನ್ನುವುದು ಪ್ರಕೃತಿ ನಿರ್ಮಿತಿ ಗಿಂತ ಮನುಷ್ಯನ ಅಜ್ಞಾನದ ನಿರ್ಮಿತಿ ಎನ್ನುವುದು ಈ ಎರಡು ವಚನಗಳ ಸಂದೇಶವಾಗಿದೆ.

೭೩೭

ಸೃಷ್ಟಿ ಬೀಡಾರವು ಸುಟ್ಟು ಹೋದೀತೆಂದು
ಹುಟ್ಟಿನ ಬಿಲ್ಲು ಹಿಡಿದಾನೆ ಹಿಡಿದು ನಿಂತಿರ್ದಾತ
ಸೃಷ್ಟಿಗೆ ಕರ್ತನು ನೋಡು, ಚೆನ್ನಬಸವಣ್ಣ

ತಾತ್ಪರ್ಯ : ಜಗತ್ತಿನ ಜೀವ ಜಂತುಗಳು ಹಾಗೂ ಮನುಷ್ಯ ಕುಲದ ಅವನತಿಯನ್ನು ವಚನ ಸೂಚಿಸುವಂತಿದೆ. ಈ ಜಗತ್ತು ಪ್ರಕೃತಿ ವಿಕೋಪಗಳಿಂದ ಮನುಷ್ಯ ನಿರ್ಮಿತ ಸಮಸ್ಯೆಗಳಿಂದ ಅತಿಯಾದ ವಿಜ್ಞಾನ ತಂತ್ರಜ್ಞಾನದ ಅಪಾಯಕಾರಿ ಸಂಗತಿಗಳಿಂದ ಸುಟ್ಟು ಹೋಗಬಹುದು. ಹೀಗಾಗಿ ಸೃಷ್ಟಿನಾಶವನ್ನು ತಡೆಯಲು ಹುಟ್ಟಿನ ಬಿಲ್ಲು ಹಿಡಿದು ಜೀವಸಂಚಾರಕ್ಕೆ ಕಾರಣನಾದ ಸೃಷ್ಟಿಕರ್ತನ ಸ್ತುತಿ ಇಲ್ಲಿದೆ.

೭೩೮

ನಮ್ಮದು ನಮಗೆ ನೀಡಿರಿ
ನಿಮ್ಮದು ನೀವು ಉಣ್ಣಿರಿ
ಅನ್ಯಾಯದ ಬದುಕು ಅರಮನೆಗೆ ಆದೀತೆಂದು
ಚೆನ್ನಬಸವಣ್ಣ ಉಸುರಿದನು ಲೋಕದ
ಕುನ್ನಿಗಳಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಪ್ರಭುತ್ವ ಯಾವತ್ತು ಸಂಪತ್ತು ಮತ್ತು ಯುದ್ಧದ ಬೆನ್ನುಹತ್ತಿ ಸದಾ ಅನ್ಯಾಯ ಎಸಗುತ್ತಿರುತ್ತದೆ. ಸಾಮಾನ್ಯ ಪ್ರಜೆಗಳಿಗೆ ಅಲ್ಲಿ ಸರಿಯಾದ ಗೌರವ ಸಿಗುವುದಿಲ್ಲ. ಆದರೆ ಮೌನೇಶ್ವರರು ನಮ್ಮದು ನಮಗೆ ನೀಡಿರಿ ನಿಮ್ಮದು ನೀವು ಉಣ್ಣಿರಿ ಎಂದು ಹೇಳುವ ಮೂಲಕ ಶ್ರಮದ ತಕ್ಕ ಫಲವನ್ನು ಶ್ರಮಿಕರಿಗೆ ನೀಡಬೇಕು ದುಡಿದವರ ಕೂಲಿಯನ್ನು ಕಬಳಿಸಬಾರದು. ಅಂತಹ ಅನ್ಯಾಯ ಎನಿದ್ದರೂ ಅರಮನೆಗೆ ಸೀಮಿತ. ಕಾರಣ ಸಮಪಾಲು ಹಾಗೂ ಸಮಬಾಳು ಜನ ಬದುಕಿನ ಮಂತ್ರವಾಗ ಬೇಕು ಎಂಬ ನಿಲುವು ಅವರದಾಗಿತ್ತು.

೭೩೯

ನೀನೆ ನುಂಗಬ್ಯಾಡ ಮೋನಯ್ಯನೆನಬೇಡ
ಕಾದುಂಡ ನಾಯಿಗೆ ಕಣಕದ ರೊಟ್ಟಿ

ಕಳ್ಳ ನಾಯಿಗೆ ಕಲ್ಲು ಪೆಟ್ಟು
ಹಲಾಲಕೋರಗೆ ಹಚ್ಚಡ ಹರಾಮಕೋರಗೆ ಕಚ್ಚಡ
ತೋಟವ ಮಾಡಿ ಉಣ್ಣಿ, ತೊಂಟತನವ ಮಾಡಬೇಡಿ
ಒಕ್ಕಲುತನವ ಮಾಡಿ ಉಣ್ಣಿ, ವಾಳಿತನವ ಮಾಡಬೇಡಿ
ಇದು ಮೀರಿದರೆ ಮೀರಾಸಾಹೇಬನ ತಂದು ಇಟ್ಟೇನು
ನಿಮ್ಮ ಬಟ್ಟಿ ಕೋರಿಯ ದಕ್ಕಿಸಿಕೊಂಡರೆ ನೀವೆಬ್ಯಾಡರು
ನಿಮ್ಮ ಕತ್ತಿ ಕಠಾರಿ ಸುರಗಿಗಳು ಕೊಡಬೇಕು
ಎರಡು ಎತ್ತು ಮಾಡಿಕೊಂಡು ಒಕ್ಕಲುತನ ಮಾಡಿಕೊಂಡು ಉಣಬೇಕು
ವಾಳಿತನವ ಮಾಡಬೇಡಿ
ಪ್ರಧಾನಿ ಬಾದಶಹನ ಕೌಳು ಕಳ್ಳನ ಕೈಕಾಲು ಸುಳ್ಳನ ತಲೆ ಮನಿ
ತಳ್ಳಿಕೋರರಿಗೆ ನೆಲಯಿಲ್ಲವು
ಒಳ್ಳೆಯವರಿಗೆ ಉಳಿವುಂಟು, ಬಸವಣ್ಣ

ತಾತ್ಪರ್ಯ : ಕಾಯಕದ ಮಹತ್ವವನ್ನು ವಚನ ಹೇಳುತ್ತದೆ. ಮನುಷ್ಯನಿಗೆ ಬೇಕಾದದ್ದು ಕ್ರಿಯೆ ಮತ್ತು ಜ್ಞಾನದಿಂದ ಹುಟ್ಟುವ ಅನ್ನ ಹಾಗೂ ವಿವೇಕಗಳು. ನೀಡಿದಾಗ ಉಣ್ಣುವ ನಾಯಿಗೂ ಕಳ್ಳತನದಿಂದ ತಿಂದು ಕಲ್ಲಿನಿಂದ ಹೊಡೆಸಿಕೊಳ್ಳುವ ನಾಯಿಗೂ ವ್ಯತ್ಯಾಸವಿದೆ. ಹಾಗೆ ಹಲಾಲಕೋರ ಅಂದರೆ ಮೋಸಗಾರನಿಗೂ, ಹರಾಮಕೋರ ಅಂದರೆ ಸೋಮಾರಿಗೂ ವ್ಯತ್ಯಾಸವಿದೆ. ಇಬ್ಬರೂ ಕಳ್ಳರೆ. ಕಾರಣ ತೋಟವ ಮಾಡಿ ಊಟ ಮಾಡಿರಿ, ತೊಂಟತನ ಅಂದರೆ, ನೀತಿಬಾಹೀರರಾಗಿ ಉಣಬೇಡಿ, ಒಕ್ಕಲುತನ ಮಾಡಿ ಉಣ್ಣಿರಿ ವಾಳಿತನ ಅಂದರೆ ದುಡಿಯದೆ ಉಣಬೇಡಿ. ಅನೈತಿಕ ಗಳಿಕೆ ಹಾಗೂ ಅನ್ನ ವಿಷದ ಸಮಾನ. ಹೀಗೆ ದುಡಿದುಣ್ಣುವ ಸ್ವಾವಲಂಬಿ ಬದುಕು ಮನುಷ್ಯನದಾಗಬೇಕು. ದುಡಿದುಣ್ಣದೆ ಇನ್ನೊಬ್ಬರ ಗಳಕೆಯಲ್ಲಿ ಬದುಕು ಸವೆಸುವ ಪ್ರಧಾನಿ, ಬಾದಶಹ(ರಾಜ)ನಂತಹ ಅರಸರಿಗೂ ಕದ್ದು ವಂಚಿಸಿ ಬದುಕುವ ಕಳ್ಳ ಸುಳ್ಳರಿಗೂ ಈ ಜಗತ್ತಿನಲ್ಲಿ ನೆಲೆ ಸಿಗಲಾರದು. ದುಡಿದು ನೀತಿಯಿಂದ ಬದುಕುವವರಿಗೆ ಮಾತ್ರ ಉಳಿಗಾಲ ಉಂಟು.

೭೪೦

ನೀರಿನ ಕುಣಿಗಳೆಲ್ಲ ನಿಂದುರಿದು ಹೋದಾವು
ಉಪ್ಪಿನ ಕಟ್ಟೆಗಳೆಲ್ಲ ಕೆಟ್ಟಳಿದು ಮರ್ತ್ಯಕ್ಕೆ
ಉಪ್ಪು ಹುಟ್ಟದು ಕಾಣಾ, ಬಸವಣ್ಣ

ತಾತ್ಪರ್ಯ : ಇದು ಕೂಡ ಲೋಕದ ಅಲ್ಲೋಲ ಕಲ್ಲೋಲವನ್ನು ತಿಳಿಸುತ್ತದೆ. ಮಳೆಯ ಅಭಾವದಿಂದಾಗಿ ನೀರಿನ ಮೂಲಗಳಾದ ಕೆರೆ ಬಾವಿ ವರತಿಗಳೆಲ್ಲ ಬತ್ತಿ

ಹೋಗುತ್ತವೆ. ಬಿಸಿಲಿನ ತಾಪಕ್ಕೆ ಇರುವ ನೀರೆಲ್ಲ ಉರಿದು ಆವಿಯಾಗಿ ಹೋಗುತ್ತದೆ. ನೀರಿನ ಉತ್ಪನ್ನವಾದ ಉಪ್ಪು ಹುಟ್ಟಲಾರದೆ ಉಪ್ಪಿನ ನೀರು ನಿಲ್ಲಲು ಕಟ್ಟಿದ ಕಟ್ಟಿಗಳೆಲ್ಲ ಹಾಳಾಗಿ ಮರ್ತ್ಯದ ಜನರಿಗೆ ಅಡಿಗೆಗೆ ಪ್ರಮುಖವಾದ ಉಪ್ಪು ಸಿಗಲಾರದಂತಾಗುತ್ತದೆ ಎನ್ನುವ ಭಾವ ಇಲ್ಲಿನದು.

೭೪೧

ಪಟ್ಟಕ್ಕೆ ಅರಸಿಲ್ಲ ಕೊಟ್ಟಾರಕ್ಕೆ ಮಾನ್ಯೇರಿಲ್ಲ
ಕಟ್ಟೇನಂದರೆ ಕರುವಿಲ್ಲ ರಾಜ್ಯವು
ಹಿಟ್ಟಾಗುವ ದಿನ ಬಂದಾವು, ಬಸವಣ್ಣ

ತಾತ್ಪರ್ಯ : ಕಲಿಕಾಲದಲ್ಲಿ ರಾಜಕೀಯ ವ್ಯವಸ್ಥೆ ಎಂಬುದೇ ನಾಶವಾಗಿ ಅವ್ಯವಸ್ಥೆ, ಅನಾಯಕತ್ವ, ಅಧರ್ಮ ವಿಜೃಂಭಿಸುವುದನ್ನು ವಚನ ಸೂಚಿಸುತ್ತದೆ. ರಾಜ ಪಟ್ಟಕ್ಕೆ ವಾರಸುದಾರರೇ ಇಲ್ಲ. ರಾಜ್ಯದ ಭಾಗಗಳನ್ನು ನೋಡಿಕೊಳ್ಳುವ ಮಾನ್ಯರು ಹಾಗೂ ಪಾಳೆಗಾರರು ಇಲ್ಲ. ಹಗ್ಗ ಹಚ್ಚಿ ಕಟ್ಟೇನೆಂದರೆ ಒಂದು ಎಳೆಗರು ಇಲ್ಲ. ಹಿಟ್ಟಾಗುವ ದಿನ ಅಂದರೆ ಸೃಷ್ಟಿಯೇ ನಾಶವಾಗಿ ಪುಡಿ ಪುಡಿಯಾಗುವ ದಿನಗಳು ಬರುತ್ತವೆ. ಎಂಬುದು ವಚನದ ಭಾವ.

೭೪೨

ಪಚ್ಚೆದ ಪಲ್ಲಕ್ಕಿ ಮುತ್ತಿನ ತುರಾಯಿ
ಮಾಯಮುರತಾಪಗ ಡೊಳ್ಳು ಡಿಳ್ಳಿಯ ಖಾನರು
ಅಳಿವ ದಿನಗಳು ಬಂದಾವು, ಬಸವಣ್ಣ

ತಾತ್ಪರ್ಯ : ಒಂದು ಕಡೆ ಉತ್ತರದ ಕಡೆಯಿಂದ ದಂಡೆತ್ತಿ ಬರುವ ಡಿಳ್ಳಿಖಾನರ ಬಗ್ಗೆ ಹೇಳುತ್ತಲೇ ಅವರ ಅವಸಾನದ ಬಗ್ಗೆಯೂ ವಚನ ಗಮನ ಸೆಳೆಯುತ್ತದೆ. ಹಸಿರು ಬಣ್ಣದ ಪಲ್ಲಕ್ಕಿ ಮುತ್ತಿನ ತುರಾಯಿ ವಿವಿಧ ರೀತಿಯ ವಾಲಗದೊಂದಿಗೆ ಮೆರವಣಿಗೆ ಬರುವ ದಿಲ್ಲಿಯ ಖಾನರು ನಾಶವಾಗುವ ದಿನಗಳು ಬಂದಾವು. ಅರಸೊತ್ತಿಗೆ ನಾಶವಾಗಿ ಪ್ರಜಾಪ್ರಭುತ್ವ ನೆಲೆಗೊಳ್ಳುವ ಮುನ್ಸೂಚನೆಯನ್ನು ವಚನ ನೀಡುತ್ತದೆನಿಸುತ್ತದೆ.

೭೪೩

ಪಣೆಯಲ್ಲಿ ಬರದುದಕ್ಕೆ ಅಣೆಯಿಲ್ಲ ಭುವನದಲಿ
ಹೆಣಗಿದರೆ ಹೋಗಲರಿಯದು ದುಷ್ಕರ್ಮವು
ಉಣದ್ಹೋಗಲಿಲ್ಲ ಸರ್ವರಿಗೆ, ಬಸವಣ್ಣ

ತಾತ್ಪರ್ಯ : ಮನುಷ್ಯನ ಹಣೆಬರಹ ಕುರಿತು ವಚನ ಹೇಳುತ್ತದೆ. ಬ್ರಹ್ಮ ಬರೆದ ಲಿಖಿತವನ್ನು ಯಾರಿಂದಲೂ ಅಳಿಸಲಾಗುವುದಿಲ್ಲ. ಮನುಷ್ಯ ಮಾಡಿದ ದುಷ್ಕರ್ಮವು ಅಂದರೆ ಅಲ್ಲದ ಕೆಲಸಗಳಿಂದಾಗಿ ಏನೇ ಪ್ರಯತ್ನ ಮಾಡಿದರೂ ವಿಧಿ ಬರಹದಲ್ಲಿ ರುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಅನುಭವಿಸಲೇಬೇಕು.

೭೪೪

ಪ್ರಥಮ ಚರಣದೊಳಗೆ ವಿಪರೀತ ಕರ್ಮವು
ತ್ರಿಪುರಸಂಹಾರನ ಮರೆದು ತ್ರಿಭುವನದೊಳು
ಕಪಿ ಬಲದಂತೆ ದುರ್ಜನರು, ಬಸವಣ್ಣ

ತಾತ್ಪರ್ಯ : ಕಲಿಯುಗ ಎನ್ನುವುದೇ ಪಾಪಕರ್ಮಗಳ ಸತ್ಕರ್ಮಗಳ ನಾಶದ ಕಾಲ ಎನ್ನುವುದು ಎಲ್ಲ ಅನುಭಾವಿಗಳ ಅಭಿಮತ. ಅದೇ ರೀತಿ ಮೌನೇಶ್ವರರೂ ಕೂಡ ವಿಪರೀತ ದುಷ್ಕರ್ಮಗಳಿಂದಾಗಿ ಮೂರು ಲೋಕವೂ ನಾಶದಂಚಿಗೆ ಬಂದು ನಿಂತಿದೆ. ಮನುಷ್ಯನ ಅತಿಯಾದ ಉಪಭೋಗಿ ಪ್ರವೃತ್ತಿಯು ಮೂರು ಲೋಕಗಳ ನಾಶಕ್ಕೆ ಕಾರಣವಾಗುವುದಲ್ಲದೆ, ಮಂಗಗಳಂತೆ ಅಜ್ಞಾನಿ ಜನರು ವಿವೇಕರಹಿತರಾಗಿ ವರ್ತಿಸುವರೆನ್ನುವುದು ಇಲ್ಲಿನ ಮತ.

೭೪೫

ಪಾಕಿಯು ಬರಬೇಕು ಪ್ರಜೆಯು ನೆರಿಯಲಿಬೇಕು
ಪಾಪವ ಹರಿಯಬೇಕು, ಬಸವಣ್ಣ

ತಾತ್ಪರ್ಯ : ಲೋಕದ ಪಾಪಗಳು ಹರಿದು ಪ್ರಜೆಗಳು ಸುಖದಿಂದಿರಬೇಕಾದರೆ ಸೃಷ್ಟಿಕರ್ತನಾದ ಪರಮಾತ್ಮನ ಕೃಪಾದೃಷ್ಟಿ ಇರಲೇಬೇಕಾಗುತ್ತದೆ. ಭಕ್ತಪ್ರಿಯನಾದ ಭಗವಂತ ಈ ಲೋಕಕ್ಕೆ ಬಂದಾಗ ಭವಲೋಕದ ಭಾಗ್ಯ ತೆರೆಯುತ್ತದೆ.

೭೪೬

ಪಾಠದ ಶಾಲೆಯ ಪುಟ್ಟ ಕನ್ನೆಯರು ಕೇಳಿರಿ
ಬಟ್ಟೆಗಳು ನಿಮಗಿನ್ನು ದೊರೆಯವು ಗಾಳಿಪೂಜೆ
ಸೊಪ್ಪುಟ್ಟು ನೀವು ಮೆರೆಯಿರಿ, ಬಸವಣ್ಣ

ತಾತ್ಪರ್ಯ : ವಚನ ತುಂಬ ಸಂಕೀರ್ಣ ಹಾಗೂ ಅಶುದ್ಧವಾಗಿದೆ ಎನಿಸುತ್ತದೆ. ಪಾಠದ ಶಾಲೆ ಬಾಲೆಯರು, ಬಟ್ಟೆಗಳು ದೊರೆಯದೆ ಸೊಪ್ಪುಟ್ಟು ಮೆರೆಯಬೇಕೆನ್ನುವಲ್ಲಿ ಬಟ್ಟೆಯ ಅಭಾವವನ್ನು ಸೂಚಿಸುತ್ತಿರಬಹುದೇ? ಅಥವಾ ಕನ್ಯೆಯರನ್ನು ದೇವದಾಸಿ ಯನ್ನಾಗಿಸುವ, ಬೇವಿನ ಉಡಿಗೆ ಉಡಿಸುವ ಪದ್ಧತಿಯನ್ನು ಸೂಚಿಸುತ್ತಿರಬಹುದೇ? ಎನ್ನುವ ಕುತೂಹಲ.

೭೪೭

ಪೃಥ್ವಿಗಧಿಪನು ಬಸವ ಪರಶಿವನಹುದಹುದು
ಶ್ರುತಿ ಸಾರುತಾವೆ ಸರ್ವ ಶಾಸ್ತ್ರದಲಿ
ಸ್ಥಿತಿಯೊಳಗೆ ಎಳೆಹೂಟಿ ಮಾಳ್ಪುದನು ಕಂಡು
ಮತಿಹೀನ ಭಕ್ತರು ಮಹಾತ್ಮರ ತೆರನಿದೇನು ಕೇಳು, ಬಸವೇಶ

ತಾತ್ಪರ್ಯ : ಈ ಪೃಥ್ವಿಗೆ ಅಧಿಪತಿ ಶಿವನೇ ಎಂದು ಎಲ್ಲ ಶ್ರುತಿ ಶಾಸ್ತ್ರ ಪುರಾಣಗಳು ಸಾರುತ್ತ ಬಂದಿವೆ. ಆಂತಹವನನ್ನು ಈ ಅವನಿಯೊಳಗೆ ಎಳೆಹೂಟಿ, ಅಂದರೆ ನೊಗದ ಮತ್ತೊಂದು ತುದಿಗೆ ಮನುಷ್ಯನನ್ನು ಕಟ್ಟಿ ಎಳೆಸಿ ಸಾಯಿಸುವುದು. ಪರಶಿವನ ಅವತಾರವಾದ ಬಸವನನ್ನು ಹಾಗೆ ಎಳೆಸಿ ಹಿಂಸಿಸುತ್ತಾರೆ. ಆತನ ಶಕ್ತಿಯನ್ನು ಅರಿಯದೆ ಮತಿಹೀನ ಭಕ್ತರು ಮೂಢರಾಗಿದ್ದಾರೆ. ಹುಟ್ಟಿಸಿದವನಿಗೆ ಪೋಷಿಸುವ ಜವಾಬ್ದಾರಿಯೂ ಇರುತ್ತದೆನ್ನುವುದು ಇಲ್ಲಿನ ತರ್ಕ.

೭೪೮

ಪ್ಯಾಟಿಯ ಶೃಂಗಾರ ಪೇಳಲೆನ್ನಳವಲ್ಲ
ಆಟವು ಒದಗಿತು ಬಸವಯ್ಯನ
ಮಾಟ ಮರ್ತ್ಯದ ಮಾನವರಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ನಗರದ ಥಳುಕು ಬಳುಕು ಮತ್ತು ಅದರೊಳಗೆ ಅಡಗಿದ ಹುಸಿ ಹಾಗೂ ಭ್ರಮೆಗಳ ಕುರಿತು ವಚನ ವಿವರಿಸುತ್ತದೆ. ದೀಪದ ಆಕರ್ಷಣೆಗೆ ಪತಂಗ ತನ್ನ ಜೀವವನ್ನೆ ಸುಟ್ಟುಕೊಂಡಂತೆ ಪ್ಯಾಟಿಯ ಶೃಂಗಾರ ಮತ್ತು ಆಕರ್ಷಣೆ ಅಂತಹ ಅಪಾಯಕಾರಿಯಾದದ್ದು. ಜನ ಹುಚ್ಚೆದ್ದು ಪ್ಯಾಟೆ ಕಡೆಗೆ ಆಕರ್ಷಿತರಾಗುವ ಮೂಲಕ ಮೋಸ ವಂಚನೆಗಳಿಗೆ ಬಲಿಯಾಗುತ್ತಿದ್ದಾರೆ. ಅಜ್ಞಾನದಿಂದಾಗಿ ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಬೀದಿಪಾಲಾಗುತ್ತಿರುವುದನ್ನು ಹಾಗೂ ಸೋಮಾರಿಗಳಾಗುತ್ತಿರುವುದನ್ನು ವಚನ ಹೇಳುತ್ತದೆ.

೭೪೯

ಬರ್ಚಿ ಹಿಡಿದಿಹನೆಂದು ಅರ್ತಿಯ ಶರಣನು
ಮರ್ತ್ಯದ ಕುರಿಗಳ ಇರಿವುದಕೆ ಶರಣನು
ಅರ್ತಿಯಲ್ಲಿ ಬಂದ ಬಗೆ ಬೇರೆ, ಬಸವಣ್ಣ

ತಾತ್ಪರ್ಯ : ಅಜ್ಞಾನಿಗಳ ಮದ ಇಳಿಸಲು ಬರ್ಚಿ ಹಿಡಿದು ಪ್ರೀತಿಯಿಂದ ತಿದ್ದಲು ಶರಣನು ಮರ್ತ್ಯಕ್ಕೆ ಬಂದನು. ಕುರಿಯಂತಿರುವ ಮಂದಮತಿಗಳನ್ನು ಜಾಗೃತಿಗೊಳಿಸಲು ಮೌನೇಶ್ವರರು ಬಂದ ರೀತಿಯೇ ವಿಭಿನ್ನ ಹಾಗೂ ವಿಶಿಷ್ಟವಾದದ್ದು.

೭೫೦

ಬಡಗಲ ದೇಶದಿಂದ ದಂಡು ಬೆಡಗಿನಿಂದ ಬರುತ್ಯೈತೆ
ಗಿಡಗಿಡಕ್ಕೊಂದು ಗುಡಾರವನು ಹೊಯಿಸುತಲಿ
ಬಡಗಲನಾಡ ಸಾಹೇಬ ಬಂದಾನೆ ಮರ್ತ್ಯಕ್ಕೆ, ಬಸವಣ್ಣ

ತಾತ್ಪರ್ಯ : ಎಲ್ಲ ಕಾಲಜ್ಞಾನಿಗಳಲ್ಲಿ ಉತ್ತರ ದಿಕ್ಕಿನ ಹಾವಳಿಯ ಬಗ್ಗೆ ಹೆಚ್ಚಿನ ಒತ್ತು ಬಿದ್ದಿದೆ. ಮೌನೇಶ್ವರರ ವಚನಗಳಲ್ಲಿಯೂ ದೇಶಕ್ಕೆ ಬರುವ ಗಂಡಾಂತರಗಳೆಲ್ಲವೂ ಉತ್ತರದಿಕ್ಕಿನ ಮೂಲಕವೇ ಬರುವ ಸೂಚನೆಯಿದೆ. ಉತ್ತರದ ಕಡೆಯಿಂದ ದಂಡು ಬರುವಾಗ ಗಿಡಗಿಡಕ್ಕೊಂದು ಡೇರೆ(ಗುಡಾರ) ಹೊಡೆಯುತ್ತ ಉತ್ತರದೇಶದ ಸಾಹೇಬ ಭೂಮಿಗೆ ಬರುತ್ತಾನೆ ಎನ್ನುವಲ್ಲಿ, ಗಿಡಗಳ ನಾಶ ಎನ್ನುವುದು ತೀವ್ರ ನಗರೀಕರಣದ ಸಂಗತಿಗಳನ್ನು ನಿರಂಕುಶ ಆಡಳಿತದ ಸೂಚನೆಗಳನ್ನು ಸೂಚಿಸುವಂತಿದೆ.

೭೫೧

ಬಲ್ಲಬಲ್ಲವರೆಲ್ಲ ಬಲ್ಲ ಸ್ಥಾನಿಕರಾಗಿ
ಒಳ್ಳೆ ದಿನಗಳು ಮುನ್ನಿಲ್ಲ ಅಲ್ಲಮರಾಯ
ಕಳ್ಳ ಬಂದಾನೆ ಕಲಿಯುಗದಿ, ಬಸವಣ್ಣ

ತಾತ್ಪರ್ಯ : ಇದು ಕೂಡ ಭವಿಷ್ಯದ ಸೂಚನೆಯನ್ನು ನೀಡುವ ವಚನವಾಗಿದೆ. ಪ್ರಜ್ಞಾವಂತರು ಬಲ್ಲವರೆಲ್ಲರೂ ಸ್ಥಾನ ಬಲದಿಂದ ಜಡವಾಗಿ ಅಜ್ಞಾನಿಗಳಾಗಿದ್ದಾರೆ. ಭ್ರಷ್ಟರಾಗುತ್ತಿದ್ದಾರೆ. ಈ ಜಗತ್ತಿಗೆ ಮಾರ್ಗದರ್ಶನ ಮಾಡುವವರು ಇಲ್ಲದಂತಾಗಿದೆ. ಕಳ್ಳ ಸುಳ್ಳರೆಲ್ಲರು ಕಾರುಬಾರು ಮಾಡುವಂತಾಗಿ ಲೋಕವೇ ಅಧಃಪತನದತ್ತ ಸಾಗುತ್ತಿರುವ ಭಾವವನ್ನು ವಚನ ಹೇಳುತ್ತದೆ.

೭೫೨

ಬಾಜಾರ ಬಂದೀತು ಓಜು ಉಂಡ್ಯಾದೀತು
ಸೂಜಿ ಒಂದು ಹೊನ್ನಿಗೆ ಮಾರೀತು ಲೋಕದ
ಸೋಜಿಗವ ನೋಡು, ಬಸವಣ್ಣ

ತಾತ್ಪರ್ಯ : ಬಾಜಾರ ಅಂದರೆ ನಗರೀಕರಣ ಮತ್ತು ಜಾಗತೀಕರಣದ ಮುಕ್ತ ಮಾರುಕಟ್ಟೆಯ ಸಮಸ್ಯೆಗಳನ್ನು ವಚನ ಸೂಚಿಸುತ್ತಿದೆಯೆ? ಬಾಜಾರ ಇದ್ದಲ್ಲಿ ಇರುವುದು, ಸಂತೆ ನಡೆಯುವುದು ಭಾರತದಲ್ಲಿ ಹೊಸದೇನಲ್ಲ. ಮೌನೇಶ್ವರರು ಪಾಶ್ಚಾತ್ಯ ರಾಷ್ಟ್ರಗಳಿಂದ ಮುಕ್ತ ಮಾರುಕಟ್ಟೆಯ ರೂಪದಲ್ಲಿ ಬಂದು ಬೀಳುವ ವಸ್ತು ಸಾಮಗ್ರಿಗಳಿಂದ ದೇಸಿ ಉದ್ಯಮಗಳ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ವಿವರಿಸುವಂತಿದೆ. ಸರಕು ಸಂಸ್ಕೃತಿಯಿಂದಾಗಿ ಮನುಷ್ಯ ಹಣದ ಬೆನ್ನು ಹತ್ತಿ ತನ್ನ ಸ್ವಂತ ನೆಲೆ ಮತ್ತು ಸ್ವಾವಲಂಬಿತನವನ್ನೇ ಕಳೆದುಕೊಳ್ಳುತ್ತಿದ್ದಾನೆ. ಸ್ಥಳೀಯ ಕುಶಲ

ಕರ್ಮಿಯೂ ಜಗತ್ತಿನ ಎಲ್ಲ ಕ್ರಿಯೆಗಳಿಗೆ ಮೂಲಸ್ವರೂಪನೂ ಆದ ಓಜ ಅಂದರೆ ವಿಶ್ವಕರ್ಮ ಶಿಲ್ಪಿಯು, ಕೆಲಸಬಿಟ್ಟು ಉಂಡಾಡಿ ಗುಂಡನಂತೆ ತಿರುಗುವಂತಾಗಿದೆ. ಕದರು, ಸೂಜಿಗಳು ಕಂಬಾರರ ಅಂದರೆ ಸ್ಥಳೀಯ ಗುಡಿ ಕೈಗಾರಿಕೆಗಳ ಉತ್ಪಾದನೆಗಳು. ಜಾಗತೀಕರಣ ಹೊತ್ತಿನಲ್ಲಿ ಒಂದು ಸೂಚಿ ಒಂದು ಹೊನ್ನಿಗೆ ಮಾರುವ ಬೆಲೆಯನ್ನು ಪಡೆಯುತ್ತದೆ. ಇದು ಲೋಕದ ಸೋಜಿಗವೆಂದು ಮೌನೇಶ್ವರರು ಹೇಳುತ್ತಾರೆ. ಅಂದರೆ ಸ್ಥಳೀಯ ಸ್ವಾವಲಂಬಿ ಸಂಸ್ಕೃತಿ ನಾಶವಾಗಿ ಪರಾವಲಂಬಿ ಬದುಕು ಮನುಷ್ಯನದಾಗುತ್ತದೆಂಬ ಸೂಚನೆ ಇಲ್ಲಿರುವಂತಿದೆ.

೭೫೩

ಬಾಲಕರುಗಳಿಗೆಲ್ಲಿ ಕಾಲಮಹಿಮೆಯ ಚಿಂತೆ
ನೂಲುವ ಹೆಂಗಸರು ಶೀಲ ಶಕುನ ಶಾಸ್ತ್ರವನೋಡರು
ನೀಲಲೋಹಿತ ನೋಡುವನು, ಬಸವಣ್ಣ

ತಾತ್ಪರ್ಯ : ಬಾಲ್ಯಸಹಜ ವಯೋಮಾನಗಳಿಗೆ ಕಾಲಗಣನೆ ಇರದು. ನಿರ್ಬಂಧ ಹಾಗೂ ನಿಯಂತ್ರಣವಿಲ್ಲದ ಬದುಕದು, ಮುಕ್ತತೆಯೇ ಅಲ್ಲಿ ಪ್ರಧಾನ. ಅದೇ ರೀತಿ ಹೊಟ್ಟೆ ಪಾಡಿಗಾಗಿ ಶ್ರಮವಹಿಸಿ ದುಡಿವ ಮಂದಿಗೆ ಶೀಲ ಶಕುನ ಶಾಸ್ತ್ರಗಳು ಅಪ್ರಸ್ತುತ. ಕಾಯಕದ ಮೂಲಕ ಕೈಲಾಸ ಕಾಣುವ ಅಂದರೆ ಸತ್ಯ ಹಾಗೂ ಶಿವನನ್ನು ಆರಾಧಿಸುವ ಹೆಣ್ಣುಮಕ್ಕಳಿಗೆ ಪುರುಷ ನಿರ್ಮಿತವಾದ ಶೀಲ ಶಕುನ ಶಾಸ್ತ್ರಗಳು ಅಪ್ರಯೋಜಕ ಎನ್ನುವಲ್ಲಿ ಮೌನೇಶ್ವರರ ಸುಧಾರಣವಾದಿ ಮನೋಧರ್ಮ ವನ್ನು ಕಾಣಬಹುದು.

೭೫೪

ಬೆಳೆಗೆ ಬೆಂಗುಡಿಗಿಕ್ಕಿ ಹುಳುವು ಹತ್ತಿದವೆಂದು
ಪ್ರಳಯ ಬಂದೈತೆ ಗುರುಮೂರ್ತಿ ಎಂದರೆ
ಮಳಲೊಳು ಕಸವಾಲುವನೆತ್ತ ಧರ್ಮದ
ಬೆಳೆಯ ಬೆಳಸು ಅರಿಯರು ವಜ್ರದ
ಬಂಡಿಯೊಳಗೆ ಹಾನೆ ಎನ್ನ ಗುರುಮೂರ್ತಿ, ಬಸವಣ್ಣ

ತಾತ್ಪರ್ಯ : ಮನುಷ್ಯ ಕುಲವೇ ಹುಳುಹತ್ತಿದ ಬೆಳೆಯಂತೆ ರೋಗಿಷ್ಟವಾಗುತ್ತಿದೆ, ಫಲರಹಿತವಾಗುತ್ತಿದೆ. ಅತಿಯಾದ ಹಾಗೂ ವಿವೇಕರಹಿತ ವರ್ತನೆಗಳಿಂದಾಗಿ ಮನುಷ್ಯನಷ್ಟೆ ಅಲ್ಲ ಇಡೀ ಪ್ರಕೃತಿಯೇ ಬರಡಾಗುತ್ತಿದೆ. ಪಾಪಕಾರ್ಯಗಳು ಹೆಚ್ಚಾಗಿ ಪುಣ್ಯದ ದಾರಿಗಳು ಕಿರಿದಾಗಿವೆ. ಮನುಷ್ಯನ ಸ್ವಾರ್ಥತನವು ವ್ಯಕ್ತಿ ಹಾಗೂ ಸಮಾಜದ ನೀತಿ ಧರ್ಮವನ್ನೇ ನಾಶಮಾಡಿದೆ. ಇದರಿಂದಾಗಿ ಮನುಷ್ಯ ದುಡಿಮೆ ಹಾಗೂ ದೇವರನ್ನು ಮರೆತು ಡಾಂಭಿಕನಾಗಿದ್ದಾನೆ.

೭೫೫

ಬೇಡಿದರೆ ಭರವಸವಾಗದು
ಒಲ್ಲೆನೆಂದರೆ ಬಿಡದು ಬಲ್ಲೆನೆಂದರೆ ತಿಳಿಯದು
ಅಲ್ಲಮನಾಟ ವಿಪರೀತವು, ಬಸವಣ್ಣ

ತಾತ್ಪರ್ಯ : ಅಲ್ಲಮ ಮತ್ತು ಅವನ ಅನುಭಾವ ಪಥವೇ ತುಂಬ ನಿಗೂಢವಾದದ್ದು. ಮೇಲುನೋಟಕ್ಕೆ ಅದು ದಕ್ಕದು. ಬೇಡಿದರೆ ಸಿಗದು, ಒಲ್ಲೆನೆಂದರೆ ಬಿಡದು, ತಿಳಿದೇನೆಂದರೆ ಅರ್ಥವಾಗದು. ಆತನ ಲೀಲೆ ತುಂಬ ಘನವಾದಂತವು. ಸಾಮಾನ್ಯ ನೋಟ ಹಾಗೂ ಅರ್ಥಕ್ಕೆ ದಕ್ಕಲಾರವು.

೭೫೬

ಬ್ಯಾಡರಿಗೆ ಪಟ್ಟವನು ರೂಢಿಗೀಶ್ವರ ಕೊಟ್ಟನು
ನಾಡಿಗರಿಗೆ ಬಂತು ಪ್ರಳಯವು
ನೋಡು ನೋಡು ಈ ಪರಿಯು
ಬೇಡಿದವರಿಗೆ ಕೊಡದಂಥ ಪೀಡೆಗಳ ಬದುಕನು
ಬ್ಯಾಡರಿಗೆ ಹಚ್ಚಿ ಸುಲಿಸುವೆನು
ನಾಡಿನಿಂದಿಳಿಸುವೆನು, ಬಸವಣ್ಣ

ತಾತ್ಪರ್ಯ : ಮೌನೇಶ್ವರರು ತನ್ನ ಸಮಕಾಲೀನ ಸಂದರ್ಭದಲ್ಲಿ ಆಳಿದ ಸುರುಪುರ ನಾಯಕರ ಕುರಿತು ಈ ವಚನ ಹೇಳುವಂತಿದೆ. ಸಗರ ನಾಡಿನಲ್ಲಿ ಆಳಿದ ಬೇಡನಾಯಕ ರೆಂದರೆ ಸುರಪುರದ ನಾಯಕರು ಮಾತ್ರ.

ಗಡ್ಡಿಪಿಡ್ಡ ನಾಯಕ ಕ್ರಿ.ಶ.ಸು.೧೬೫೯–೬೬ರ ತನಕ ಸುರಪುರವನ್ನು ಆಳುತ್ತಾನೆ. ಅಲ್ಲಿಂದ ಮುಂದೆ ಕ್ರಿ.ಶ.೧೮೦೮ರವರೆಗೆ ಈ ವಂಶದ ಒಂಭತ್ತು ಜನ ರಾಜರು ಮೌನೇಶ್ವರರ ಕೃಪೆ ಯಿಂದ ರಾಜ್ಯಭಾರ ಮಾಡುತ್ತಾರೆ. ಇದಕ್ಕೆ ಸಾಕ್ಷಿಯಾಗಿ ಕ್ರಿ.ಶ.೧೭೫೩–೧೭೭೪ರಲ್ಲಿ ಆಳಿದ ಪಾಮನಾಯಕನ ಮಂತ್ರಿಯಾಗಿದ್ದ ನಿಶತಿ ವೀರಪ್ಪನು ಗೋನಾಳ ಮತ್ತು ತಿಂತಿಣಿಯಲ್ಲಿ ದೇವಾಲಯ ಕಟ್ಟಿಸಿದ್ದು ತಿಳಿದುಬರುತ್ತದೆ. ಇಂದಿಗೂ ತಿಂತಿಣಿ ಜಾತ್ರೆ ಸಂದರ್ಭದಲ್ಲಿ ನಾಯಕರ ಮನೆಯಿಂದ ಬೆಳ್ಳಿಪಲ್ಲಕ್ಕಿ, ಹೂ, ಕಾಯಿ ಬರುವುದು ವಿಶೇಷ.

೭೫೭

ಭಕ್ತಿವಾಲದಯ್ಯ ಕರ್ತೃನಿರ್ವಾಣಯ್ಯ
ಮತ್ತೆ ಮೂರುಳ್ಳವರ ಒಡಗೂಡಿ
ಬಿಸಿ ಅಗ್ಗವಣಿಕರ್ತೃ ಬಂದಾನೆ, ಬಸವಣ್ಣ

ತಾತ್ಪರ್ಯ : ಭಕ್ತಿ ಜ್ಞಾನ ಕರ್ಮಗಳ ವಿಚಾರ ಕುರಿತು ವಚನ ಸೂಚಿಸುವಂತಿದೆ. ಭಕ್ತಿವಾಲದಯ್ಯ ಅಂದರೆ ಶ್ರೇಷ್ಠ ನಂಬಿಕೆಯ ಭಕ್ತ ಆಂಜನೇಯ(ಬಾಲದಯ್ಯ) ಕರ್ತೃ ನಿರ್ವಾಣಯ್ಯ, ಅಂದರೆ ಮೋಕ್ಷ ಕೊಡುವವನು, ವಿರಕ್ತನಾದವನು. ಮತ್ತೆ ಮೂರುಳ್ಳವರು ಒಡಗೂಡಿ ಅಂದರೆ ಸೃಷ್ಟಿ, ಸ್ಥಿತಿ, ಲಯ ಈ ಮೂರು ಕಾರ್ಯಗಳಿಗೆ ಕ್ರಿಯೆಯಾದವರು, ಕಾರಣರಾದವರು, ಬ್ರಹ್ಮ, ವಿಷ್ಣು, ಮಹೇಶ್ವರರು. ಇವರೊಂದಿಗೆ ಕೂಡ ಅಂದರೆ ಈ ಮೂರುಶಕ್ತಿಗಳ ಅಪರಾವತಾರನಾದ ಬಿಸಿ ಅಗ್ಗವಣಿಕರ್ತ ಅಂದರೆ ಅಗ್ನಿದೇವ, ನೀರಿನ ಸೃಷ್ಟಿಗೆ ಕಾರಣನಾದವ, ಮಳೆಯ ಅಧಿದೇವತೆ, ಮಳಿಯಪ್ಪನ ಪೂರ್ವಾವತಾರ ಮೌನೇಶ್ವರರು ಧರೆಗೆ ಬಂದರು. ಹರಿವ ನೀರು ಮತ್ತು ಸುಡುವ ಅಗ್ನಿಗಳು ವಿಶ್ವಕರ್ಮ ಕ್ರಿಯೆ ಹಾಗೂ ಜ್ಞಾನದ ಪ್ರಮುಖ ಪರಿಕಲ್ಪನೆಗಳು. ನೀರು(ಸೃಷ್ಟಿ) ಭೂಮಿ(ಸ್ಥಿತಿ) ಅಗ್ನಿ(ಲಯ) ಅಂದರೆ ಭಕ್ತಿ ಜ್ಞಾನ ಕರ್ಮ ಇವುಗಳ ಮೂಲಕ ಸಾಧನೆ ಮಾಡುವುದೇ ಮಾನವ ಜೀವನದ ಪರಮಗುರಿ. ಅಂತಹ ಇಚ್ಛಾಶಕ್ತಿಯ ಮುಖ್ಯ ಚೇತನವೇ ವಿಶ್ವಕರ್ಮ ತತ್ತ್ವವಾಗಿದೆ. ಅಂತಹ ತತ್ತ್ವ ಪ್ರತಿಪಾದನೆ ಇಲ್ಲಿದೆ.

೭೫೮

ಭೂಮಿಯ ಪಾಲಿಪ ಸೋಮ ಸೂರ್ಯರು
ಏನು ಬಗೆಯಿಂದ ಕರೆಸಿದರೆಂದು ಮರ್ತ್ಯಕ್ಕೆ
ರಾಮಸೋನಾರ ಇಳಿದು ಬಂದಾನೆಂಬುವದು
ಹೇಮಾದ್ರಿಗಳಿಗೆ ತಿಳಿಯದು, ಬಸವಣ್ಣ

ತಾತ್ಪರ್ಯ : ಹೇಮಾದ್ರಿ ಧರ್ಮಶಾಸ್ತ್ರಜ್ಞ, ಆತನ ಚತುರ್ವರ್ಗ ಚಿಂತಾಮಣಿಯು ನಾಲ್ಕು ವರ್ಣಗಳ ಆಚಾರ–ವಿಚಾರಗಳನನ್ನು ಆಯಾ ವರ್ಣಗಳ ಅರ್ಹತೆಗಳನ್ನು ತಿಳಿಸುವ ಗ್ರಂಥ. ಅದರಲ್ಲಿ ಸ್ವರ್ಣಶಿಲ್ಪಿಯ ಚಿನ್ನವನ್ನು ಕದಿಯಬಹುದಾದ ಅವಕಾಶವಿರುವುದಿರಂದ 'ಸ್ವರ್ಣಸ್ತೇಯ' ಅಪರಾಧವಾಗಿದ್ದು, ಆ ವೃತ್ತಿ ಮಾಡುವವರ ಬ್ರಾಹ್ಮಣ್ಯವು ಅಪರಾಧ ಭೂಯಿಷ್ಠವಾಗಿರುತ್ತದೆ. ಆದ್ದರಿಂದ ವಿಶ್ವಬ್ರಾಹ್ಮಣರಿಗೆ ಸ್ವರ್ಣಸ್ತೇಯ ದೋಷದಿಂದ ಬ್ರಾಹ್ಮಣ್ಯದ ಅರ್ಹತೆ ಇರುವುದಿಲ್ಲ ಎಂದು ತೀರ್ಮಾನಿಸಿದ್ದ ವಿಶ್ವಕರ್ಮ ಬ್ರಾಹ್ಮಣರು ಸ್ವರ್ಣಶಿಲ್ಪದೊಂದಿಗೆ ಇತರ ನಾಲ್ಕು ಬಗೆಯ ಶಿಲ್ಪಗಳನ್ನು ಮಾಡುತ್ತಾರೆ ಎಂಬ ವಿಷಯ ಸ್ಪಷ್ಟವಾಗಿದ್ದರೂ ಆ ಎಲ್ಲಾ ಶಿಲ್ಪಿಗಳಿಗೂ ಸ್ವರ್ಣಸ್ತೇಯ ಅನ್ವಯವಾಗುವುದಿಲ್ಲ ಎಂಬುದು ಗೊತ್ತಿದ್ದೂ ವಿಶ್ವಬ್ರಾಹ್ಮಣರಿಗೆ ಬ್ರಾಹ್ಮಣ್ಯವು ದೋಷ ಭೂಯಿಷ್ಠವಾದದ್ದು ಎಂದು ತೀರ್ಮಾನಿಸಿದ್ದ. ಈ ರೀತಿ ಪೂರ್ವಗ್ರಹ ಪೀಡಿತನಾಗಿರುವ ಶಾಸ್ತ್ರಿಗೆ ರಾಂಸೋನಾರರ ಮಹತ್ತ್ವನು ತಾನೆ ಗೊತ್ತಿರಲು ಸಾಧ್ಯ? ರಾಂ ಸೋನಾರರು ಸ್ವರ್ಣಶಿಲ್ಪಾಧಿದೇವನಾದ ಸೂರ್ಯನಾರಾಯಣ

ನಿಂದಲೇ ಭೂಮಿಗೆ ಕಳುಹಿಸಲ್ಪಟ್ಟ ಮಹನೀಯ 'ಸ್ವರ್ಣಸ್ತೇಯ' ದೋಷ ವ್ಯಕ್ತಿಗೆ ಸೇರಿದ್ದೇ ಹೊರತು ಜಾತಿಯದಲ್ಲ ಎಂಬುದು ಮನವರಿಕೆ ಮಾಡಿಸಿ ದೇವಿಯ ಕೃಪಾಶೀರ್ವಾದ ಈ ವೃತ್ತಿ ನಿರ್ವಾಹಕರಿಗೆ ಇದೆ ಎಂಬುದನ್ನು ರಾಂಸೋನಾರ್ ಸಾಬೀತುಗೊಳಿಸಿದ. ಇದೆಲ್ಲಾ ಪೂರ್ವಗ್ರಹ ಪೀಡಿತ ಸಾಮಾನ್ಯ ಶಾಸ್ತ್ರಿಗೆ ಹೇಗೆ ತಾನೇ ಗ್ರಹಿಕೆಗೆ ಬಂದೀತು?

ಹಿನ್ನೆಲೆ : ಹೇಮಾದ್ರಿ ಎಂಬ ಶಾಸ್ತ್ರಜ್ಞನು ಚತುರ್ವರ್ಗ ಚಿಂತಾಮಣಿ ಎಂಬ ಧರ್ಮಶಾಸ್ತ್ರ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ. ಅದರಲ್ಲಿ ಸ್ವರ್ಣಶಿಲ್ಪವನ್ನು ಮಾಡುವವರಿಗೆ ಸುವರ್ಣಸ್ತೇಯ(ಚಿನ್ನವನ್ನು ಕದಿಯುವ) ದೋಷಾರೋಪಣೆ ಇರುವುದರಿಂದ ಈ ವೃತ್ತಿ ಮಾಡುವ ಶಿಲ್ಪಿಗಳನ್ನು ಬ್ರಾಹ್ಮಣದಿಂದ ಬಹಿಷ್ಕರಿಸಬೇಕು ಎಂದು ಬರೆದಿದ್ದಾನೆ. ಇದರ ಫಲವಾಗಿ ಅಕ್ಕಸಾಲಿ ಅಕ್ಕನ ಬಂಗಾರವನ್ನೂ ಕದಿಯುತ್ತಾನೆ ಎಂಬ ಗಾದೆಯು ರೂಢಿಗೆ ಬರುವಂತಾಯಿತು. ಬಹುಶಃ ಸ್ವರ್ಣಶಿಲ್ಪ ಮಾಡುವವ ಚಿನ್ನ ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ಮಾಡುವಷ್ಟು ತೂಕ, ಪರೀಕ್ಷೆಗಳು ಇತರ ಶಿಲ್ಪದ ಸಂಬಂಧದಲ್ಲಿ ಇರುವುದಿಲ್ಲ. ಹೀಗಿದ್ದರೂ 'ಚಿನ್ನ ಕದಿಯುತ್ತಾರೆ' ಎಂಬುದನ್ನು ವಿಶ್ವಕರ್ಮ ಬ್ರಾಹ್ಮಣ ಶಿಲ್ಪಿಗಳಿಗೆಲ್ಲಾ ಇದು ಅನ್ವಯಿಸಿ ಧರ್ಮಶಾಸ್ತ್ರದಲ್ಲಿ ಸ್ವರ್ಣಸ್ತೇಯ ದೋಷ ವಿಶ್ವಕರ್ಮ ಬ್ರಾಹ್ಮಣರಿಗೆ ಅನ್ವಯವಾಗುವುದರಿಂದ ಆ ವಂಶಜರೆಲ್ಲಾ ದೋಷಿಗಳು ಎಂಬ ಆರೋಪವನ್ನು ಮಾಡಿ ಅವರು ಬಹಿಷ್ಕಾರಕ್ಕೆ ಅರ್ಹರೆಂದು ಬರೆದ. ಎಂದರೆ ವಿಶ್ವಕರ್ಮ ಬ್ರಾಹ್ಮಣ ಸ್ವರ್ಣಶಿಲ್ಪವನ್ನು ಮಾಡದೆ ಇದ್ದರೂ ದೋಷ ಆ ಜಾತಿಗಳಿಗೆ ಅನ್ವಯವಾಗುತ್ತದೆ ಎಂಬುದು ಹೇಮಾದ್ರಿಯ ನಿರ್ಣಯ.

ವಾಸ್ತವ ಸ್ಥಿತಿ ಎಂದರೆ ವಿಶ್ವಕರ್ಮ ಬ್ರಾಹ್ಮಣ ಶಿಲ್ಪಿಗಳು ಮಾಡುವ ಐದು ಶಿಲ್ಪ ವೃತ್ತಿಗಳಲ್ಲಿ ಸುವರ್ಣಶಿಲ್ಪ ಕೇವಲ ಒಂದು ಭಾಗ ಮಾತ್ರವೇ ವಿಶ್ವಕರ್ಮ ಬ್ರಾಹ್ಮಣ ಶಿಲ್ಪಿಯು ಮಾಡುತ್ತಾನೆ. ಉಳಿದಿರುವ ಬಹುಭಾಗವನ್ನು ಇತರ ಜಾತಿಗಳ ಸುವರ್ಣ ಶಿಲ್ಪಿಗಳೇ ಮಾಡುತ್ತಾರೆ. ಚಿನ್ನದ ಕಳುವು ಪ್ರಧಾನವಾಗಿ ವೈಯಕ್ತಿಕವಾದದ್ದು. ಒಬ್ಬ ವ್ಯಕ್ತಿಯ ಕೆಟ್ಟ ಚಾಳಿಯನ್ನು ಆ ಜಾತಿಗೆಲ್ಲಾ ಅನ್ವಯಿಸಿ ಅಪಾದಿಸುವುದು ಸರಿಯಲ್ಲ.

ಮಹಾರಾಷ್ಟ್ರದಲ್ಲಿ ರಾಂಸೋನಾರ್ ಎಂಬ ಹೆಸರಿನ ಸ್ವರ್ಣಶಿಲ್ಪಿ ಇದ್ದ. ತುಂಬಾ ಒಳ್ಳೆಯ ಸ್ವರ್ಣಶಿಲ್ಪಿ. ಆತನ ಆಭರಣಗಳ ಶಿಲ್ಪವನ್ನು ಮೆಚ್ಚಿದವರು ಅನೇಕರು. ಇದರಿಂದ ಸದಾ ಆತನಲ್ಲಿ ಅಭಿಮಾನಿಗಳ ಗುಂಪಿರುತ್ತಿತ್ತು. ಇದಕ್ಕಿಂತಲೂ ಮಿಗಿಲಾಗಿ ರಾಂಸೋನಾರ್ ದೈವಭಕ್ತ. ಸಾಧು–ಸಂತರ, ಭಕ್ತರ, ದೀನರ ಬಗ್ಗೆ ವಿಶೇಷವಾದ ಗೌರವ ಉಳ್ಳವನು. ಆತನ ಮನೆಯಲ್ಲಿ ಸದಾ ದಾಸೋಹ ನಡೆಯುತ್ತಿತ್ತು. ಅಷ್ಟು ಮಾತ್ರವೇ ಅಲ್ಲ ಬಂದವರನ್ನು ಸತ್ಕರಿಸಿ ಕಳುಹಿಸುವುದು ಆತನ ಬದುಕಿನ ಭಾಗ

ವಾಗಿತ್ತು. ದಿನೇ ದಿನೇ ರಾಂಸೋನಾರನ ದಾಸೋಹದ ಸಂಖ್ಯೆ ನೂರನ್ನು ದಾಟಿ ಸಾವಿರದತ್ತ ಬೆಳೆಯಿತು.

ಇದನ್ನು ಕಂಡವರಿಗೆ ಪರಮಾಶ್ಚರ್ಯವಾಗುತ್ತಿತ್ತು. ಸ್ವರ್ಣಶಿಲ್ಪಿ ಮಾಡುತ್ತಿರುವ 'ಇವನು' ನಿತ್ಯವೂ ಸಾವಿರಾರು ಮಂದಿಗೆ ದಾಸೋಹ–ಸತ್ಕಾರಗಳನ್ನು ನಡೆಸುತ್ತಿದ್ದಾರೆ ಎಂದರೆ ಈತನ ಆದಾಯ ಮೂಲ ಆತನ ಗಿರಾಕಿಗಳು ಕೊಡುವ ಚಿನ್ನವಲ್ಲದೆ ಇನ್ನೇನು ಆಗಿರಲು ಸಾಧ್ಯ? ಆದರೆ ರಾಂಸೋನಾರನನ್ನು ಕೇಳಿದರೆ ಆತನು ಮಾತ್ರ 'ಅಯ್ಯ, ಈ ದಾಸೋಹ ನಾನು ನಡೆಸುತ್ತಿದ್ದೇನೆ ಎಂದು ಯಾವಾಗ ಹೇಳಿದ್ದೇನೆ? ಕಾಳಿಕಾ ಮಾತೆಯೇ ಇದೆಲ್ಲಾ ನಡೆಸುತ್ತಿದ್ದಾಳೆ. ನಾನು ಆಕೆಯ ಸೇವಕನಾಗಿ ಆಕೆ ಹೇಳಿರುವಂತೆ ಈ ಕೆಲಸ ಮಾಡುತ್ತಿದ್ದೇನೆ. ವ್ಯವಹಾರದಲ್ಲಿ ರಾಂಸೋನಾರ್ ಮಾಡಿಕೊಡುವ ಆಭರಣಗಳ ಅಲಂಕಾರ, ಶುದ್ಧತೆ ಎಲ್ಲಾ ಲೆಕ್ಕದ ಪ್ರಕಾರವೇ ಇರುತ್ತಿತ್ತು. ಶ್ರೀಸಾಮಾನ್ಯರಿಗೆ ಮಾತ್ರ ಅನುಮಾನ. ಯಾವುದೋ ರೀತಿಯಲ್ಲಿ ಕಣ್ಕಟ್ಟು ಮಾಡಿ ಜನರು ಕೊಟ್ಟ ಚಿನ್ನವನ್ನು ಕದ್ದು ಈ ದಾಸೋಹ ನಡೆಸುತ್ತಿದ್ದಾನೆ ಎಂದುಕೊಳ್ಳುತ್ತಿದ್ದರು. ಈ ಬಗೆ ರಾಂಸೋನಾರ್ ಯಾವ ರೀತಿಯಲ್ಲೂ ವಿಚಲಿತನಾಗದೆ ತನ್ನ ಸೇವೆಯನ್ನು ಅವ್ಯಾಹತವಾಗಿ ನೆರವೇರಿಸುತ್ತಿದ್ದ.

ರಾಂಸೋನಾರ್ ಕಾಳಿಯ ಪರಮಭಕ್ತ. ಕಾಳಿಕಾದೇವಿಯಲ್ಲಿ ಅಚಲ ಶ್ರದ್ಧೆ ಮತ್ತು ವಿಶ್ವಾಸ. ಆಕೆಯೇ ಜಗದ್ರಕ್ಷಕಿ ಎಂದು ಹೇಳುತ್ತಿದ್ದ. ಕ್ರಮಕ್ರಮವಾಗಿ ಈತನ ಖ್ಯಾತಿ ಅದರೊಂದಿಗೆ ಅನುಮಾನವು ನವಾಬನನ್ನು ತಲುಪಿತು. ರಾಜನ ಕಿವಿಯಲ್ಲೂ ನಾನಾ ಬಗೆಯ ಅನುಮಾನಗಳನ್ನು ತುಂಬಿದರು. ನವಾಬನು ರಾಂಸೋನಾರ್ ಮಾಡಿದ್ದ ಆಭರಣಗಳನ್ನು ನೋಡಿ ಮೋಹಿತನಾಗಿದ್ದ. ಆದ್ದರಿಂದ ಹಲವು ಆಭರಣಗಳ ತಯಾರಿಕೆಯನ್ನು ರಾಂಸೋನಾರ್‌ಗೆ ವಹಿಸಿದ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ನವಾಬನ ಊಳಿಗದಲ್ಲಿದ್ದ ಬ್ರಾಹ್ಮಣನೊಬ್ಬ ಚಿನ್ನವನ್ನು ತೂಕ ಮಾಡಿ ಲೆಕ್ಕ ಬರೆದು ಕೊಂಡು ಆಭರಣಗಳ ಯಾದಿಯನ್ನು ಬರೆದುಕೊಟ್ಟ.

ರಾಂಸೋನಾನರ್ ನಿಗದಿತ ಅವಧಿಯಲ್ಲಿಯೇ ಆಭರಣಗಳನ್ನು ತಯಾರಿಸಿ ತಂದು ನವಾಬನ ಮುಂದೆ ಇರಿಸಿದ. ಅಸೂಯಾಗ್ರಸ್ತನಾಗಿ ಬ್ರಾಹ್ಮಣನು ಆ ಆಭರಣಗಳಲ್ಲಿ ಒಂದನ್ನು ಕದ್ದು ಮರೆಯಾಗಿರಿಸಿದ. ತರುವಾಯ ತೂಕ ಮಾಡಲು ತಕ್ಕಡಿ ಇತ್ಯಾದಿಗಳನ್ನು ತಂದಿರಿಸಿದ. ಆಭರಣಗಳನ್ನು ತೂಗಿದಾಗ ಮೊದಲು ಕಡಿಮೆಯಾಗಿದ್ದು ಮರುಕ್ಷಣದಲ್ಲಿಯೇ ತೂಕವು ಸರಿಯಾಯಿತು.

ಇದನ್ನು ಮೇಲ್ಮಾಳಿಗೆಯಿಂದ ನೋಡುತ್ತಿದ್ದ ರಾಜಕುಮಾರಿ ತನ್ನ ಚೇಟಿಗೆ ತಕ್ಕಡಿಯಲ್ಲಿರುವ ಚಿನ್ನದ ಗೊಂಬೆಯನ್ನು ತೋರಿಸಿ ಅದನ್ನು ತಂದುಕೊಡು ಎಂದು

ಕಳುಹಿಸಿದಳು. ಆ ಚೇಟಿ ಬಂದು ಗೊಂಬೆಯನ್ನು ಕೇಳಿದಳು. ತಕ್ಕಡಿಯಲ್ಲಿ ಯಾವುದೇ ಚಿನ್ನದ ಗೊಂಬೆ ಕಾಣಿಸಲಿಲ್ಲ. ಆ ಚೇಟಿಯು ಅಲ್ಲೆಲ್ಲಾ ಹುಡುಕಿದಾಗ ಒಂದು ಆಭರಣ ಸಿಕ್ಕಿತು. ಅದು ಹೆಚ್ಚುವರಿ ಎಂಬುದು ನವಾಬನಿಗೂ ಅಲ್ಲಿದ್ದವರೆಲ್ಲರಿಗೂ ಗ್ರಹಿಕೆಗೆ ಬಂತು. ಮತ್ತೆ ತೂಕ ಮಾಡಿದರು. ತೂಕ ಹಿಂದಿನಷ್ಟೇ ಇತ್ತು. ಎಂದರೆ ಸಿಕ್ಕಿದ ಆಭರಣ ಇಲ್ಲದೆಯೂ ತೂಕ ಸರಿಯಾಗಿತ್ತು. ಅದು ಸಿಕ್ಕಿದ ನಂತರವೂ ಅಷ್ಟೇ ತೂಕವಿದೆ ಎಂದರೆ ರಾಜಕುಮಾರಿ ಚೇಟಿ ನೋಡಿದ ಚಿನ್ನದ ವಿಗ್ರಹ ಯಾವುದು?

ಇದು ಬಹುದೊಡ್ಡ ವಿಶೇಷವಾಗಿ ನವಾಬನಿಗೆ ಕಾಣಿಸಿತು. ಸ್ವರ್ಣಶಿಲ್ಪಿ ದೇವಿ ಭಕ್ತ ಎಂದು ಕೇಳಿದವನಿಗೆ ಆ ವಿಗ್ರಹ ದೇವಿಯಾಗಿರದೆ ಮತ್ತೆ ಯಾರದಾಗಿರಲು ಸಾಧ್ಯ? ವೃಥಾ ಅಪರಾಧಿಯಾಗುತ್ತಿದ್ದ ರಾಂಸೋನಾರನನ್ನು ಕಾಯಲು ದೇವಿಯೇ ಸ್ವಯಂ ಬಂದು ರಕ್ಷಿಸಿದ್ದಾಳೆ ಎಂಬುದು ಭಾಸವಾಯಿತು. ಕೂಡಲೇ ನವಾಬ ರಾಂಸೋನಾರನನ್ನು ಬಹು ಗೌರವದಿಂದ ಸತ್ಕರಿಸಿ ಕಳುಹಿಸಿದ. ಇದು ರಾಂಸೋನಾರನನ್ನು ಕಂಡು ಮತ್ಸರಗ್ರಸ್ಥರಾಗಿದ್ದವರ ಪಾಲಿಗೆ ಗಂಟಲಲ್ಲಿ ಸಿಲುಕಿದ ಮುಳ್ಳಾಯಿತು.

ರಾಂಸೋನಾರ್ ತಾನು ಪೂಜಿಸುತ್ತಿದ್ದ ಯಂತ್ರ, ಬೀಜಾಕ್ಷರಗಳು ತಾನು ಪೂಜೆಯಲ್ಲಿ ಅನುಸರಿಸುತ್ತಿದ್ದ ಕ್ರಮ ಇತ್ಯಾದಿಗಳನ್ನು ಸ್ವರ್ಣಶಿಲ್ಪಿಗಳಾಗಿದ್ದ ಇತರ ವಿಶ್ವಕರ್ಮ ಬ್ರಾಹ್ಮಣರಿಗೆ ಉಪದೇಶಿಸಿ ಸ್ವರ್ಣಸ್ತೇಯದ ಆರೋಪದಿಂದ ಮುಕ್ತರಾಗಬೇಕೆಂದು ಹೇಳಿದ.

ನಂತರದ ಧರ್ಮಶಾಸ್ತ್ರಕಾರರು ಹೇಮಾದ್ರಿಯ ಮಾತನ್ನು ಖಂಡಿಸಿ ವೃತ್ತಿಯಲ್ಲಿ ನಡೆಯಬಹುದಾದ ಚೌರ್ಯ ಅದು ವ್ಯಕ್ತಿಗತವಾಗಿದ್ದು ಸಾಮೂಹಿಕ ಆರೋಪ ಸಲ್ಲದು. ಚೋರನಿಗೆ ಶಿಕ್ಷೆಯೇ ಹೊರತು ಅದನ್ನು ವ್ಯಾಪಕವಾಗಿ ಅನ್ವಯಿಸಿ ಜಾತಿಯನ್ನೇ ನಿಂದಿಸುವುದು ಸೂಕ್ತವಲ್ಲ ಎಂಬ ತೀರ್ಮಾನವನ್ನು ಧರ್ಮಶಾಸ್ತದಲ್ಲಿ ಬರೆದಿದ್ದಾರೆ.

ಇಂದಿಗೂ ಅನೇಕ ವಿಶ್ವಬ್ರಾಹ್ಮಣ ಸ್ವರ್ಣಶಿಲ್ಪಿಗಳು ರಾಂಸೋನಾರ್ ಪೂಜಾ ಯಂತ್ರವನ್ನು, ಬೀಜಾಕ್ಷರ ಜಪವನ್ನು, ರಾಂಸೋನರ್ ಮೊಳೆಯನ್ನೂ ಪೂಜಿಸಿ ಅನುಷ್ಠಾನ ಮಾಡುತ್ತಿರುತ್ತಾರೆ.

ಹೀಗೆ ಧರ್ಮಶಾಸ್ತ್ರಗಳು 'ಸ್ವರ್ಣಸ್ತೇಯ'ವನ್ನು ವಿಶ್ವಬ್ರಾಹ್ಮಣ ಶಿಲ್ಪಿಗಳ ಮೇಲೆ ಹೊರಿಸಿದ್ದು ರಾಂಸೋನಾರರಿಂದ ವೈಯಕ್ತಿಕ ದೋಷವಾಗಿ ಪರಿಗಣಿತವಾಗುವಂತಾಗಿದೆ. ಇಲ್ಲಿ ನವಾಬನನ್ನು ಹಲವರು ಅಕ್ಬರ್‌ಚಕ್ರವರ್ತಿ ಎಂದು ಹೇಳುತ್ತಾರೆ. ಇದು ನಡೆದಿರುವ ಕಾಲ ಹದಿಮೂರು–ಹದಿನಾಲ್ಕನೆಯ ಶತಮಾನ ಎಂದು ಅಂದಾಜು ಮಾಡಿದ್ದಾರೆ.

ಸ್ವರ್ಣಶಿಲ್ಪಿಗಳನ್ನೆಲ್ಲಾ ಅನಾಯಾಸವಾಗಿ ಕಳ್ಳರು ಎಂದು ಹೇಳುವುದನ್ನು ತಪ್ಪಿಸಿ ಕಳ್ಳನಿಗೆ ಮಾತ್ರವೇ ಶಿಕ್ಷೆ ಎಂಬ ಪದ್ಧತಿಯು ರೂಢಿಗೆ ಬರಲು ರಾಂಸೋನಾರ್ ಕಾರಣವಾಗಿದ್ದಾರೆ. ಆದ್ದರಿಂದ ಸ್ವರ್ಣಶಿಲ್ಪದ ಅಧಿಷ್ಠಾತೃ ದೇವನಾಗಿರುವ ಸೂರ್ಯನೇ ರಾಂಸೋನಾರರನ್ನು ಭೂಮಿಗೆ ಕಳುಹಿಸಿ ಸ್ವರ್ಣಶಿಲ್ಪವನ್ನು, ಸ್ವರ್ಣಶಿಲ್ಪಿಗಳನ್ನು ಕಾಪಾಡಿದ್ದಾನೆ ಎಂಬುದು ಮೌನೇಶ್ವರರ ಮಾತು.

೭೫೯

ಮಂಟುದಾತರ ತಂಟಿಯ ಸಂಸಾರ
ಗಂಟುಮುಡಿ ಇದುವೆ ಬಿಡದಯ್ಯ ಪಾಪದಾ
ಗಂಟಲಕೆ ಗಾಣ ತಾಕುತೈತೆ, ಬಸವಣ್ಣ

ತಾತ್ಪರ್ಯ : ಸಂಸಾರವೆಂಬುದು ಸುಖದಿಂದ ಸಾಗಬೇಕು. ಅದಕ್ಕೆ ಗಂಡ ಹೆಂಡಿರಲ್ಲಿ ವಿವೇಕವಿರಬೇಕು. ಇಂತಹ ಹೊಂದಾಣಿಕೆ ಇಲ್ಲದಾಗ ಆ ಸಂಸಾರವು ತಂಟೆ ತಕರಾರುಗಳಿಂದ ತುಂಬಿರುತ್ತದೆ. ಇಂತಹವರ ಸಂಸಾರ ಸಮಸ್ಯೆ ಎಂದರೆ ಗಂಟಲಿಗೆ ಗಾಳ ಸಿಕ್ಕಿಸಿಕೊಂಡು ಒದ್ದಾಡುವ ಮೀನಿನಂತೆ. ಕಾರಣ ಜ್ಞಾನ ಮತ್ತು ವಿವೇಕಗಳು ಮನುಷ್ಯನ ಬದುಕನ್ನು ಬೆಳಗಿಸುವ ಮಹತ್ವದ ಕ್ರಿಯೆಗಳಾಗಬೇಕು. ಅಂತಹ ಬದುಕು ಮನುಷ್ಯನದಾಗಬೇಕು.

೭೬೦

ಮಳೆಗಾಲ ಹೋದೀತು ಹೊಳೆ ಬಾವಿ ಬತ್ಯಾವು
ಪ್ರಳಯವು ಲೋಕದ ಪ್ರಜೆಗಳಿಗೆ ಇದರೊಳಗೊಂದು
ಉಳಿದದ್ದೆ ಬೀಜ, ಬಸವಣ್ಣ

ತಾತ್ಪರ್ಯ : ಪ್ರಕೃತಿ ಮೇಲೆ ಮನುಷ್ಯ ನಡೆಸುತ್ತಿರುವ ವಿವಿಧ ರೀತಿಯ ದೌರ್ಜನ್ಯ ಗಳಿಂದಾಗಿ ಇಡೀ ಪರಿಸರವೇ ಕಲುಷಿತವಾಗಿದೆ. ಜಗತ್ತೇ ಇಂದು ಪರಿಸರ ಮಾಲಿನ್ಯ ದಿಂದ ನರಳುತ್ತಿದೆ. ಹೀಗಾಗಿ ಭೂಮಿಯ ಮೇಲೆ ಬೀಳುವ ಇಂತಹ ಅಧಿಕ ಒತ್ತಡದಿಂದಾಗಿ ಮಳೆಗಾಲ ಹೋಗಿ ನೀರಿನ ಮೂಲಗಳಾದ ಕೆರೆ ಬಾವಿ ಹೊಳೆ ಹಳ್ಳಗಳು ಬತ್ತುತ್ತಿವೆ. ಬರಗಾಲ ಹಾಗೂ ಪ್ರಳಯದಿಂದಾಗಿ ಮನುಕುಲವೇ ನಾಶದ ಸ್ಥಿತಿಯಲ್ಲಿದೆ. ಇಂತಹ ಪ್ರಳಯದಲ್ಲಿ ಜೊಳ್ಳಾದದ್ದು ನಾಶವಾಗಿ ಗಟ್ಟಿಯಾದದ್ದು ಅಂದರೆ ನಿಜವಾದ ಬೀಜ(ವಂಶವಾಹಿನಿ) ಬದುಕುಳಿದು ಸೃಷ್ಟಿ ಮುಂದುವರಿಕೆಗೆ ಕಾರಣ ವಾಗುತ್ತದೆ.

೭೬೧

ಮಳೆ ಮಾರು ಬೆಳೆ ಬಿತ್ತು ಪ್ರಳಯಕಾಲಗಳೈದು
ಇಳೆಯ ಜನರಿಗೆ ಇವು ತಿಳಿವುದುಂಟಾದರೆ
ಬಳಲುವರ್ಯಾಕೆ, ಬಸವಣ್ಣ

ತಾತ್ಪರ್ಯ : ಪ್ರಕೃತಿಯಲ್ಲಿ ನಡೆಯುವ ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಸ್ವಾಭಾವಿಕ ವಾದಂಥವು. ಆದರೆ ಭೂಮಿಯ ಮೇಲೆ ಬದುಕುವ ಜನರು ಇವನ್ನು ಪ್ರಕೃತಿ ಕ್ರಿಯೆಗಳೆಂದು ತಿಳಿಯದೆ ಕರ್ಮ ಹಣೇಬರಹ, ಪ್ರಳಯ ಎಂದು ಭಯಗೊಂಡು ಬಳಲುತ್ತಾರೆ. ಇದು ಕೂಡದು. ಪ್ರಕೃತಿಯ ಏರುಪೇರುಗಳನ್ನು ಮನುಷ್ಯ ಅರ್ಥಮಾಡಿ ಕೊಳ್ಳಬೇಕು.

೭೬೨

ಮಾರಿ ಮಕ್ಕಮಾರಿ ನೂರೆಂಟು ದುರ್ಗಿಗಳು
ಮಾರಹರನ ಕೃಪೆ ಹಿಡಿದು ದುಷ್ಕರ್ಮ
ಸಂಹಾರ ಮಾಡುತ್ತ ಬರುವರು, ಬಸವಣ್ಣ

ತಾತ್ಪರ್ಯ : ಲೋಕದಲ್ಲಿ ನಡೆಯುತ್ತಿರುವ ದುಷ್ಕರ್ಮವನ್ನು ನಿಲ್ಲಿಸಿ ಸತ್ಕರ್ಮವನ್ನು ಸ್ಥಾಪಿಸಲು ಮಾರಿ ಮಕಮಾರಿ ದುರ್ಗಿಯರಂತಹ ಉಗ್ರದೇವತೆಗಳು ಶಿವನ ಆಜ್ಞಾನುಸಾರ ಹುಟ್ಟಿ ಬರುವರು. ಕಿಲವಾಗುತ್ತಿರುವ ನ್ಯಾಯ ಧರ್ಮಗಳನ್ನು ರಕ್ಷಿಸಲು ಬರುವರು. ಮನುಷ್ಯ ಎಸಗುವ ಪಾಪಕರ್ಮಗಳ ಬೃಹತ್ತ್ರಮಾಣವನ್ನು ಕೆಡುಗಾಲದ ದಿನಗಳನ್ನು ವಚನ ಸಂಕೇತಿಸುವಂತಿದೆ.

೭೬೩

ಮುಂದುಗಾಣದೆ ನೀವು ನಿಂದಿಸಲಿ ಬೇಡಿ
ಬಂದು ಕಚ್ಚ್ಯಾವು ಸರ್ಪಗಳು
ಹಂದಿಯ ಶಿರದ ರಕ್ತ ತಿಂದಿರುವಿರಿ
ಬೆಂದು ಹೋಯ್ತು ನಿಮ್ಮ ಕುಲದಾಚಾರ, ಬಸವಣ್ಣ

ತಾತ್ಪರ್ಯ : ಕುಲಸ್ಥರೆಂದು ಕುಲಗೇಡಿತನ ಮಾಡಿ ಹಿಂದೆ ಮುಂದೆ ನೋಡದೆ ಮತ್ತೊಬ್ಬರನ್ನು ನಿಂದಿಸಬೇಡಿರಿ. ಹಾಗೊಂದು ವೇಳೆ ನಿಂದಿಸಿದರೆ ಸರ್ಪಗಳು ಬಂದು ಕಚ್ಚುವವು. ಕಾರಣ ನೀವೇ ಮೊದಲು ಹಂದಿಯ ಶಿರದ ರಕ್ತ ಕುಡಿದು ಮಲಿನವಾಗಿರುವಿರಿ. ನಿಮ್ಮ ಕುಲಾಚಾರವೆಲ್ಲ ನಾಶವಾಗಿ ಹೋಗಿವೆ. ವೇಷ ಡಂಭಕತನ ಬಿಟ್ಟು ನೀತಿವಂತರಾಗಿರಿ ಎನ್ನುವ ಭಾವ ಇಲ್ಲಿನದು.

೭೬೪

ಮುಂದೆ ಮೂರು ಲೋಕವೆಲ್ಲ
ಇನ್ನು ತಲೆ ಕೆಳಗಾಗುವಾಗ
ಬೆನ್ನು ಬಿದ್ದವರ ಕೊಡೆನೆಂದಾತ
ಚೆನ್ನಬಸವಣ್ಣನ ಬಿರುದಿನವನು ಎಂದಿನ್ನು
ಚಿನ್ನ ಕಹಳೆಯ ಹೊಡಿಸಿದ ನೋಡಯ್ಯ, ಬಸವಣ್ಣ

ತಾತ್ಪರ್ಯ : ಮೂರು ಲೋಕಗಳಾದ ಭೂಮಿ ಆಕಾಶ ಪಾತಾಳಗಳು ತಲೆ ಕೆಳಗಾಗುವುದೆಂದರೆ ಸೃಷ್ಟಿ ತತ್ವವೇ ಹೊಲಬುದಪ್ಪುವುದೆಂದರ್ಥ. ಇಂತ ಹೊತ್ತಿನಲ್ಲಿ ನೀತಿವುಳ್ಳ ನಿಜಶರಣರಿಗೆ ಅಪಾಯಗಳಾದಾವು. ಅಂತವರನ್ನು ಆ ಪರಶಿವ ಕಾಯುತ್ತಾನೆ. ಅಂದರೆ ಜ್ಞಾನವುಳ್ಳವರಿಗೆ ಅರಿವುಳ್ಳವರಿಗೆ ಅಳಿಗಾಲವಿಲ್ಲ ಅಜ್ಞಾನಿಗಳಿಗೆ, ಹೊಣೆಗೇಡಿಗಳಿಗೆ ಈ ಸೃಷ್ಟಿಯಲ್ಲಿ ಉಳಿಗಾಲವಿಲ್ಲವೆಂದರ್ಥ.

೭೬೫

ಮದ್ದು ಮಂತ್ರವನಳಿದ ಸಿದ್ಧವಿರಕ್ತನು
ವಿರಕ್ತನ ಸಿದ್ಧಿ, ಮಾನವರಿಗೆ ತಿಳಿಯದು
ಹೀಗೆಂದು ಕರ್ತೃ ವಿರಕ್ತಯ್ಯ ನುಡಿದನು, ಬಸವಣ್ಣ

ತಾತ್ಪರ್ಯ : ಸಿದ್ಧರೆಂದರೆ ಸಾಮಾನ್ಯವಾಗಿ ಮದ್ದು ಮಂತ್ರಗಳನ್ನು ಮಾಡುವ ಜಾದೂಗಾರರೆಂದು ಜಗತ್ತು ಸರಳವಾಗಿ ಭಾವಿಸಿದ ಪ್ರಸಂಗವನ್ನು ವಚನ ಸೂಚಿಸುತ್ತದೆ. ಅಂತಹ ಹೊತ್ತಲ್ಲಿ ಹುಟ್ಟಿಬಂದ ಮೌನೇಶ್ವರರು ಸಿದ್ಧರೆಂದರೆ ಕೇವಲ ತಂತ್ರ ಮಂತ್ರ ಮಾಡುವ ಅತಂತ್ರರಲ್ಲ. ಅವರು ಸಾಧಕರು, ಸಿದ್ಧಿ ಪುರುಷರು, ಮಹಾ ಜ್ಞಾನಿಗಳು. ಅಂತವರ ದಿವ್ಯ ವ್ಯಕ್ತಿತ್ವ ನರಮಾನವರಿಗೆ ತಿಳಿಯದು. ಅದನ್ನು ತಿಳಿಸಲು ಕರ್ತೃವಿರಕ್ತಯ್ಯನು ಅಂದರೆ ಸೃಷ್ಟಿಕರ್ತೃವಾದ ಮೌನೇಶ್ವರರು ಭುವಿಗೆ ಬಂದಿರುವರು.

೭೬೬

ಮೂಡಲನಾಡ ಕುದುರೆಗಳು ಓಡಿ ಬರುತಾವೆ
ಯಾವಲ್ಲಿ ಹೋಗುವನು ಬಸವಯ್ಯ
ಗಾಳಿಪೂಜೆ ಸಿದ್ಧಯ್ಯನಿದ್ದ ಗವಿಗಾಗಿ, ಬಸವಣ್ಣ

ತಾತ್ಪರ್ಯ : ಉತ್ತರ ಮತ್ತು ಪೂರ್ವಗಳು ಕಾಲಜ್ಞಾನ ವಚನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಅನ್ಯ ಆಕ್ರಮಣದ ನೆಲೆಗಳಾಗಿ ಚಿತ್ರಣಗೊಂಡಿವೆ. ಪೂರ್ವ ಮಾತ್ರ ತನ್ನ ತನದ, ದೇಸೀಯ ಅಸ್ಮಿತೆಯಾಗಿ ಚಿತ್ರಿತವಾಗಿರುತ್ತದೆ. ಬಹುಶಃ ಇಲ್ಲಿ ಕೂಡ ಮೂಡಲದ ಕುದುರೆ ಎಂದರೆ, ಅನುಭಾವಿಗಳ ಅರ್ಥದಲ್ಲಿ ಕುದುರೆ ಸವಾರಿ

ಎಂದರ್ಥ. ಕುದುರೆಗಳು ಓಡಿಬಂದು ಗಾಳಿ ಪೂಜೆ ಸಿದ್ಧಯ್ಯನಿದ್ದ ಗವಿಗೆ ಬಂದು ಹೋಗುವುದನ್ನು ನೋಡಿದರೆ ನಾಶವಾಗುತ್ತಿರುವ ಈ ಲೋಕವನ್ನು ಉಳಿಸಲು ಒಬ್ಬ ದೇಸೀ ಅವಧೂತ ಜನ್ಮವೆತ್ತಿ ಬರುತ್ತಾನೆನ್ನುವ ಅರ್ಥ ಇರುವಂತಿದೆ.

೭೬೭

ರವಿ ಗ್ರಹಣ ಭಯವಾಗಿ ಭುವನದೊಳಗೆ, ಬಿಡದು
ಶಿವನು ಬೇಸರಿಸಲು ಊರ್ವಿಯ ಜನರು
ಗೋವು ರಕ್ಷಣಾ ನೆವನೆವದಲಿ ಮಾಡುವರು, ಬಸವಣ್ಣ

ತಾತ್ಪರ್ಯ : ಮನುಷ್ಯನಲ್ಲಿ ಹುಟ್ಟುವ ಭ್ರಮೆ ಹಾಗೂ ಡಾಂಭಿಕತನವನ್ನು ವಚನ ವಿವರಿಸುತ್ತದೆ. ಸೂರ್ಯನಿಗೆ ಉಂಟಾಗುವ ಗ್ರಹಣ ಸಹಜ ಹಾಗೂ ಸ್ವಾಭಾವಿಕ ವಾದರೂ ಭೂಮಿಯ ಮೇಲೆ ಬದುಕುವ ಜನರು ಅದನ್ನು ಭಯದಿಂದ ಸ್ವೀಕರಿಸಿ ಮೂಢರಾಗುವರು. ಗೋವು ರಕ್ಷಣೆಯ ಹೆಸರಿನಲ್ಲಿ ಇಂದು ನಡೆಯುತ್ತಿರುವ ರಾಜಕೀಯ ಸಾಮಾಜಿಕ ಹಾಗೂ ಧಾರ್ಮಿಕ ಸಂಘರ್ಷಗಳು ಮಾನವ ಕುಲದ ನಾಶಕ್ಕೆ ದಾರಿಯಾಗುತ್ತಿವೆ. ಆಧುನಿಕ ಮನುಷ್ಯ ವಿವೇಕಿಯಾಗುವ ಬದಲು ಅವಿವೇಕಿ ಯಾಗುತ್ತಿರುವ ಅವೈಚಾರಿಕನಾಗುತ್ತಿರುವ ಸಂಗತಿಗಳನ್ನು ವಚನ ಹೇಳುತ್ತದೆ.

೭೬೮

ರಾಜ ರಾಜರಿಗೆಲ್ಲ ಗೋಜು ತಡವುವದ್ಯಾಕೆ
ವಾಜಿಮಿ ನಿರ್ಣಯ ಬಿಟ್ಟಲ್ಲಿ ವಿಘ್ನಮುಖ
ತೇಜನ ವ್ಯಾಜ್ಯವು, ಬಸವಣ್ಣ

ತಾತ್ಪರ್ಯ : ಸಂಪತ್ತು ಮತ್ತು ಅಧಿಕಾರ ಇವು ಯಾವತ್ತು ಮನುಷ್ಯರ ಮಧ್ಯದ ಸಂಘರ್ಷಕ್ಕೆ ಕಾರಣವಾಗುತ್ತವೆ. ಪುರಾಣ ಇತಿಹಾಸ ಕಾಲದಿಂದಲೂ ಆಳರಸರು ಇಂತಹ ಪ್ರಸಂಗಗಳಿಗಾಗಿಯೇ ಯುದ್ಧ ಮಾಡಿದ್ದನ್ನು ನೋಡಿದ್ದೇವೆ. ಅದು ಬಿಟ್ಟು ವಾಜಮಿ ರೀತಿ ರಿವಾಜಿನಿಂದ ಮನುಷ್ಯ ಮನುಷ್ಯರು ಸರಿಯಾಗಿ ಹಾಗೂ ಹೊಂದಾಣಿಕೆ ಯಿಂದ ಬದುಕಿದಲ್ಲಿ ಬದುಕು ಬಂಗಾರವಾಗುವುದು, ನಿರ್ವಿಘ್ನವಾಗುವುದು ಎಂದರ್ಥ.

೭೬೯

ರಾಷ್ಟ್ರ ಆಳುವಂಥಾ ಪಟ್ಟಕರ ಕಂಡೀರ್ಯಾ
ಅವರ ಕಟ್ಟಿಯ ಕಲ್ಲು ಕಳಚಲಿ ಎಂದೆನುತ
ದೃಷ್ಟ ವಿರಕ್ತಯ್ಯ ನುಡಿದನು, ಬಸವಣ್ಣ

ತಾತ್ಪರ್ಯ : ಕಲಿಗಾಲದಲ್ಲಿ ಅರಸುತನ ಅಳೆದು ಪ್ರಜಾಪ್ರಭುತ್ವ ಸ್ಥಾಪನೆಯಾಗಬೇಕೆಂಬ ಸೂಚನೆ ವಚನದಲ್ಲಿದೆ. ಪಟ್ಟ ಏರುವ ರಾಜಕುಟುಂಬದವರು ಯಾರಾದರೂ ಇದ್ದರೆ ಅವರ ಕಟ್ಟಿಯ ಕಲ್ಲು ಕಳಚಲಿ ಎಂದರೆ ವಂಶ ಇಲ್ಲವಾಗಲಿ, ಕೊನೆಯಾಗಲಿ ಎಂದು ಆತ್ಮಜ್ಞಾನಿಯಾದ ವಿರಕ್ತಯ್ಯ ನುಡಿಯುತ್ತಾನೆ. ಮೌನಯ್ಯನಂತವರು ನಿರಂಕುಶ ಆಳ್ವಿಕೆಗಿಂತ ತನ್ನ ತಾನರಿವ ತನ್ನ ತಾನು ಆಳಿಕೊಳ್ಳುವ ಸಮಾನತೆ ಹಾಗೂ ಸ್ವಾತಂತ್ರ್ಯದ ಹಂಬಲ ಹೊಂದಿದ್ದು ಇಲ್ಲಿ ಸ್ಪಷ್ಟವಾಗುತ್ತದೆ.

೭೭೦

ರೊಕ್ಕ ಉಳ್ಳವರಿಗೆ ಮಕ್ಕಳಾದಾವು
ಮಕ್ಕಳುಳ್ಳವರಿಗೆ ಅನುವರಿತು
ದಕ್ಕನೆ ಬಂದಾವು ಆಪತ್ತಿನ ದಿನಗಳು
ಕಕ್ಕಯ್ಯನಾಣೆ ಸಟೆಯಲ್ಲ, ಬಸವಣ್ಣ

ತಾತ್ಪರ್ಯ : ಇಂದಿನ ಬಾಡಿಗೆ ತಾಯ್ತನದ ಸಂಗತಿಗಳನ್ನು ವಚನ ಸೂಚಿಸುತ್ತಿದೆಯೆ? ಪರಿಸರ ನಾಶದ ಭೀತಿ ಮನುಷ್ಯನ ಹಾರ್ಮೋನುಗಳ ಮೇಲೆಯೂ ಪರಿಣಾಮ ಬೀರುತ್ತಿದೆ. ಆಧುನಿಕ ಕಾಲದ ಆಹಾರ, ಕೆಲಸದ ಸ್ವರೂಪ ಹಾಗೂ ಒತ್ತಡದ ಪರಿಣಾಮದಿಂದ ಗಂಡಸಿನಲ್ಲಿ ವೀರ್ಯವೃದ್ಧಿ ಕಡಿಮೆಯಾಗುತ್ತಿರುವ ಕುರಿತು ಅನೇಕ ಸಂಶೋಧನೆಗಳು ನಡೆದಿವೆ. ವೀರ್ಯ ಸಂಸ್ಕರಣದಿಂದ ಇಂದು ಬಾಡಿಗೆ ತಾಯಿಯರಿಗೆ ಹಣ ನೀಡಿ ಅವರಲ್ಲಿ ಸಂತಾನ ಪಡೆಯುವ ಶ್ರೀಮಂತರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲೇ ಇದೆ. ಶ್ರೀಮಂತರಿಗೆ ಮಕ್ಕಳ ಹಪಾಹಪಿ ಇದ್ದರೆ, ಮಕ್ಕಳಿದ್ದವರಿಗೆ ಕಠಿಣ ಬಡತನ ಹಾಗೂ ಆಪತ್ತಿನ ಗೊಡವೆ ಇರುತ್ತದೆ. ಬದುಕಿನ ನಿರ್ವಹಣೆಗೆ ಪಾಡು ಪಡಬೇಕಾಗುತ್ತದೆ.

೭೭೧

ಯತ್ನ ತಪ್ಪಲು ಮನದಿ ಮನ್ನಾಪ ಮಹಮೇರು
ಹತವಾಗೆ ಅವರನ್ನು ಭ್ರಮಿಸಿದರೆ ಪಾರ್ವತಿಯ
ಪತಿಯು ಒಲಿದರೆ ಒದಗುವದು, ಬಸವಣ್ಣ

ತಾತ್ಪರ್ಯ : ಮಾಡಿದ ಗಂಭೀರ ಪ್ರಯತ್ನಕ್ಕೆ ಫಲ ತಪ್ಪಲು ಮನಸ್ಸು ಬಹಳ ಸಂಕಟಕ್ಕೆ ಒಳಗಾಗುತ್ತದೆ. ನೋವು ಸಂಕಟ ಅನುಭವಿಸುತ್ತದೆ. ಜ್ಞಾನವುಳ್ಳವರಾಗಿ ಧೈರ್ಯದಿಂದ ಶಿವನ ನಂಬಿದರೆ ಶಿವ ಒಲಿದು ಕಾಯುವನು ಹಾಗೂ ಕೃಪೆ ತೋರುವನು.

೭೭೨

ಯಾಸಿ ಮಾತಾಡುವ ವೇಷಡಂಬಕನಲ್ಲ
ಪಾಷಾಣದ ಬವರೆ ಎದೆಶೂಲ

ತ್ರಾಸು ಕಟ್ಟಳೆಯ ಹಿಡಿದುಕೊಂಡು ಇರುವಾತನ ಕೂಡ
ಏಸೊಂದು ಮಾತು ನಿಮಗ್ಯಾತಕೆ, ಬಸವಣ್ಣ

ತಾತ್ಪರ್ಯ : ಅಕ್ಕಸಾಲಿ ವೃತ್ತಿ ಎನ್ನುವುದೇ ಪ್ರಾಮಾಣಿಕ ಮತ್ತು ನಿಷ್ಠುರವಾದುದು. ಉಳಿದ ನಾಲ್ಕು ವೃತ್ತಿಗಳು ಇದೇ ಬಗೆಯವು. ನಡೆ ಮತ್ತು ನುಡಿಶುದ್ಧತೆ ಪಾಂಚಾಳ ವೃತ್ತಿಗಳ ಜೀವಾಳ. ಹೀಗಾಗಿ ಮೌನೇಶ್ವರರು ಯಾಸಿ ಮಾತಾಡುವ ವೇಷಡಂಬಕನಲ್ಲ, ಒರೆಗಲ್ಲು ಎದೆಶೂಲ ತ್ರಾಸು ತಕ್ಕಡಿ ಹಿಡಿದು ಅಳತೆ ಪ್ರಮಾಣಗಳನ್ನು ನಿರ್ಧರಿಸುವವ. ಒರೆಗೆಹಚ್ಚಿ ನೋಡುವವನ ಕೂಡ ಕಾಲಹರಣದಂತಹ ಅಜ್ಞಾನದ ಮಾತುಗಳು ಸಲ್ಲವು.

೭೭೩

ವರುಷಕ್ಕೆ ಒಂದು ಜನಸಿ ಪರುಷವಾಯಿತು ಪ್ರಜೆಯು
ಅರಸುಗಳು ಐದುಸಾವಿರವು ಗ್ರಾಮಪತಿಗಳ ಮೆಚ್ಚ
ತರಸುತ್ತಾರಯ್ಯ, ಬಸವಣ್ಣ

ತಾತ್ಪರ್ಯ :

೭೭೪

ಶೀಲವು ತಪ್ಪಿದರೆ ಶೂಲವು ತಪ್ಪುವುದೆ
ಓಲೆ ಬಂದೈತೆ ಜಗಕೆಲ್ಲ ಲೋಕದಲಿ
ಕಾಲನ ದಾಳಿ ಕಡಗನವು ಯೆಂದಿನ್ನು
ಕೂಡಲಸಂಗಯ್ಯನು ಸಾರಿದನು, ಬಸವಣ್ಣ

ತಾತ್ಪರ್ಯ : ಕಾಲನ ದಾಳಿಗೆ ಎಲ್ಲರೂ ಒಳಗಾಗುವವರೆ. ಯಾರೂ ಅಮರರಲ್ಲ ಎನ್ನುವ ಸೂಚನೆ ವಚನದಲ್ಲಿದೆ. ಶೀಲವುಳಿಸಿಕೊಳ್ಳಬಹುದು, ಆದರೆ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದೊಂದು ರೀತಿ ಲಿಖಿತವಾದ ಪ್ರಮಾಣಪತ್ರ. ಹುಟ್ಟಿದವರು ಸಾಯಲೇಬೇಕು. ಕಾಲನ ದಾಳಿಯಿಂದ ಕಡೆಹಾಯುವವರು, ಅಂದರೆ ಪಾರಾಗುವವರು ಯಾರೂ ಇಲ್ಲ ಎನ್ನುವ ಜೀವನ ತತ್ತ್ವವನ್ನು ವಚನ ಹೇಳುತ್ತದೆ. ಆ ಮೂಲಕ ವೈದಿಕ ಮೂಲದ ಅಮರತ್ವದ ಕಲ್ಪನೆಯನ್ನು ನಿರಾಕರಿಸುತ್ತದೆ.

೭೭೫

ಶಾಸ್ತ್ರದ ಪರಾಕ್ರಮವು ಸೂತ್ರ ಆಧಾರಕ್ಕೆ
ವಸ್ತ್ರ ಪಾತ್ರಗಳು ಧನಧಾನ್ಯ ವಿದ್ಯಾರತ್ನ
ಶಾಸ್ತ್ರ ಅತಿಗಳಿವರು, ಬಸವಣ್ಣ

ತಾತ್ಪರ್ಯ : 'ಸೂತ್ರ' ಎನ್ನುವುದು ತತ್ತ್ವನಿರ್ಣಯ ಮಾಡುವ ಅಥವಾ ಕಟ್ಟುವ ಕ್ರಿಯೆಗೆ ಆಧಾರವಾದ ವಿಶ್ವಕರ್ಮ ತತ್ತ್ವ. ಸೂತ್ರ ಅಂದರೆ ದಾರ, ಅಳತೆ, ಕಂಬ ಎನ್ನುವ ಅರ್ಥಗಳು ಶಿಲ್ಪಶಾಸ್ತ್ರದಲ್ಲಿ ಬರುತ್ತವೆ. ಶಾಸ್ತ್ರ ಹಾಗೂ ಪರಾಕ್ರಮಗಳಿಗೆ ಆಧಾರ ಭೂತವಾದದ್ದು ಸೂತ್ರ. ಈ ಸೂತ್ರದಿಂದಲೇ ವಸ್ತ್ರ, ಪಾತ್ರೆ, ಧನ, ಧಾನ್ಯ, ವಿದ್ಯೆ, ಸಂಪತ್ತು, ಅಧಿಕಾರ ಎಲ್ಲವು ಹುಟ್ಟುತ್ತವೆ. ಸೃಷ್ಟಿಯ ಮೂಲವೇ ಸೂತ್ರ. ಪಂಚಾಳರ ಎಲ್ಲ ಕೆಲಸಗಳಲ್ಲಿ ಸೂತ್ರ ಅಂದರೆ ದಾರ, ಅಳತೆ,. ಬಹುಮುಖ್ಯ. ಚಾಲುಕ್ಯರ ಕಾಲದಲ್ಲಿ ಪ್ರಮುಖ ಶಿಲ್ಪಿಗೆ ಸೂತ್ರದಾರ ಎಂದು ಕರೆದದ್ದು ಶಾಸನಗಳಲ್ಲಿ ಉಲ್ಲೇಖವಿದೆ. ಇಡೀ ಬಯಲಾಟವನ್ನು ಶಿಸ್ತು ಬದ್ಧವಾಗಿ ನಡೆಸುವವನಿಗೂ ಸೂತ್ರ ದಾರ ಎಂದು ಕರೆಯಲಾಗುತ್ತದೆ.

೭೭೬

ಷಡುದರುಶನದಾಟ ಕಡಿಯಾಗಿ ಹೋದ ಮೇಲೆ
ಜಡೆಮುಡಿಗಳು ಯಾತಕ್ಕೆ ಬಿರುದಿಗೆ ಮರ್ತ್ಯದೊಳು
ಬೆಡಗು ಬಂದೈತೆ, ಬಸವಣ್ಣ

ತಾತ್ಪರ್ಯ : ಆರು ದರುಶನಗಳ ಆಟ ಅಥವಾ ಬೋಧೆ ಮುಗಿದು ಹೋದ ಮೇಲೆ ಜಡೆ ಮುಡಿಗಳು ಯಾತಕ್ಕೆ. ವೈದಿಕ ದರ್ಶನಗಳು ಹಾಗೂ ಅದರ ಜ್ಞಾನವಳಿದು ಹೋದರೂ ಅದರ ಗುರುತಾಗಿ ಜಡೆ ಮುಡಿಗಳಿರುವುದು ಅದು ವೇಷ ಡಂಬಕರ ಲಕ್ಷಣ. ಮರ್ತ್ಯಕ್ಕೆ ಭಿನ್ನಕಾಲ ಬಂದಿರುವಾಗ ಷಡ್‌ದರುಶನಗಳಾಟ ನಡೆಯಲಾಗದು. ಆ ಮೂಲಕ ವೈದಿಕ ದರ್ಶನಗಳ ಅಪ್ರಸ್ತುತತೆಯನ್ನು ಅನುಭಾವದ ಮಹತ್ವವನ್ನು ವಚನ ಹೇಳುತ್ತದೆ.

೯

ಗದ್ಯಾತ್ಮಕ ವಚನಗಳು

೭೭೭

ಸದರ ಸಾಹೇಬನ ಕೌಲು
ಅಲ್ಲಮರಾಯ ಪರಶಿವನಾಣೆ
ಮೀರಿ ನಡೆದರೆ ನೆಲವೆದ್ದು ಬಡಿಯುವದು
ಸದರಿಗೆ ಸಂತೋಷವಾಗಲಿ
ಸಾಹೇಬರ ನಜರಾಗಲಿ
ಸತ್ಯಕ್ಕೆ ಸರಸವು ಸಲ್ಲದು ಉತ್ತಮರ ನೋಯಿಸಲಾಗದು
ದೋಷ ತಪ್ಪುವುದೆ ಆಯುಷಕ್ಕೆ ಒಂದೇ ಮಾತು
ಪಾರೆ ದೊಡ್ಡದಲ್ಲ ಪರಾಮರಿಕೆ ದೊಡ್ಡದು
ಅರ್ಥ ದೊಡ್ಡದಲ್ಲ ಅರುವಿಕಿ ದೊಡ್ಡದು
ನಡಿಸಿಕೊಂಡವ ನಾಡಿಗ
ದುಡಿಸಿಕೊಂಡವನೇ ಸಾಬ ಶಾಯಿ
ಕೆಡಿಸಿಕೊಂಡವ ಕೇಡಿಗ ಕರ್ತರ ಕಡಿಗಿಟ್ಟು
ವ್ಯರ್ಥರ ನಡುವಿಟ್ಟರು ಗುರುಹಿರಿಯರ ಮರತರು
ವೇಶಿ ಮೆರೆವಳಲ್ಲದೆ ಉಪದೇಶಿ ಮೆರೆವಳೆ
ಲೆಂಡ ಮೆರವನಲ್ಲದೆ ಮನೆ ಹೆಂಡತಿ ಮೆರೆವಳೆ
ಸೂಳೆ ಮೆರೆವಳಲ್ಲದೆ ಗರ್ತಿ ಮೆರೆವಳೆ
ಇಕ್ಕಳದ ಲೆಕ್ಕ ಕೊಡದಿದ್ದರೆ
ಜಗಕ್ಕೆ ಇಕ್ಕಳ ತಪ್ಪುವದು

ಸೃಷ್ಟಿಯ ಶಿವನಾದರೆ ಬಿಡದು
ಲಕ್ಷ್ಮೀಯ ಪುತ್ರನಾದರೆ ಬಿಡದು
ಸೂರ್ಯ ಚಂದ್ರಾದಿಗಳು
ತಮ್ಮ ಆಯಕ್ಕೆ ಬಂದವರು
ಅವರಿಬ್ಬರಿಗೆ ಹೊರ್ತು ರಾಯರಾಗಲಿ
ಪಾಚ್ಯರಾಗಲಿ ನಮ್ಮ ಆಯವನು ಬಿಡೆವು
ನಾಡಿಗ ದೇಸಾಯಿ ಗೌಡ ಕುಲಕರ್ಣಿ ಓಜ ವಕ್ಕಲು
ಇಂತು ಸಹಿತವಾಗಿ ಆರುದರುಶನದವರು
ನೂರಾವಂದು ಕುಲದವರು
ಜೋಗಿ ಗೋರವ ಜಂಗಮ ದಾಸಿ ದೋಷ
ಮುಲ್ಲಾ ಖಾಜಿ ಇಂತೀ ಸಹಿತವಾಗಿ
ಇಕ್ಕಳ ಜಗದ ಕೈಗೆ ಇಕ್ಕಳ
ಹೊಕ್ಕಳ ಕೊಯ್ದ ಕುಡುಗೋಲು
ತೆತ್ತೀಸಕೋಟಿ ದೇವತೆಯರು
ಸುತ್ತಿಗೆಯ ಮಕ್ಕಳು
ಪುಚ್ಚಿಯ ಮಕ್ಕಳು ಜಗವೆಲ್ಲ
ನಾನಾ ದೇವರು ಚಾಣದ ಮಕ್ಕಳು
ಯೋನಿಯ ಮಕ್ಕಳು ಜಗವೆಲ್ಲ
ಹುಚ್ಚರಾಗಿ ಕೆಡಬೇಡಿರಿ
ಕುಲಮಿ ಇಲ್ಲದಿದ್ದರೆ ಕುಲವಿಲ್ಲ ಗೋತ್ರವಿಲ್ಲ
ಅನೇಕ ಕುಲವು ಕುಲಮಿ ಮಾತ್ರದಲ್ಲಿ ಪುಟ್ಟಿದವೆಂದು
ಒಕ್ಕಲುತನಕ್ಕೆ ಕುಲವುಂಟು ವಾಳಿತನಕ್ಕೆ ಕುಲವಿಲ್ಲ
ಕಳ್ಳತನಕ್ಕೆ ಕೈ ಕಾಲು ಸುಳ್ಳನ ತಲೆ ಮನೆ
ತಳ್ಳಿಕೋರರಿಗೆ ಉಳಿವಿಲ್ಲ ಧರ್ಮವ ಕೇಳಿರೆಂದು
ನಿರ್ಣಯಕ್ಕೆ ಅರಮನೆ ಹುಟ್ಟಿಸಿದರು
ಕರ್ಮ ಮುನಸೀಫ ಮಾಡಬೇಕಂತ
ಮುನಸೀಫ ಮಾಡದಿದ್ದರೆ
ಮಳೆ ಹೋದೀತು ಬೆಳೆ ಕೆಟ್ಟೀತು
ಜಗವು ಭ್ರಷ್ಟವಾದೀತು
ಮುನಸೀಫ ಮಾಡಿದವನೆ ಮುಲ್ಲಾ

ಆರೋಪ ಮಾಡಿದವನೆ ಅರಸು
ಮೂಕಾರಿ ಮಾಡಿದವನೆ ಮುಡದಾರ
ಅರ್ತವರಿಗೆ ಸದರು ಮರ್ತವರಿಗೆ ಮರಣ
ಸಾಹೇಬರ ಸಭೆಗೆ ಶರಣು ಶರಣಾರ್ಥಿ, ಬಸವಣ್ಣ

ತಾತ್ಪರ್ಯ : ಸದರ ಸಾಹೇಬನ ಕೌಲು ಅಂದರೆ, ರಾಜಾಜ್ಞೆಯನ್ನು ಮೀರಿ ನಡೆದರೆ ನೆಲವೆದ್ದು ಬಡೆವದು, ರಾಜಸಾಹೇಬರಿಗೆ ಸಂತೋಷವಾಗಲಿ, ಸಾಹೇಬರ ದಯಾ ದೃಷ್ಟಿ ಪ್ರಜೆಗಳ ಮೇಲೆ ಇರಬೇಕು. ರಾಜನಂತಹ ಪ್ರಜಾಪಾಲಕನ ಹಾಗೂ ಸತ್ಯದ ಪರಿಪಾಲಕನ ಜೊತೆ ಸರಸ ಸಲ್ಲದು, ಉತ್ತಮರನ್ನು ನೋಯಿಸಬಾರದು, ನೋಯಿಸಿದರೆ ಪಾಪ ಹತ್ತುತ್ತದೆ, ಆಯುಷ್ಯ ಕಡಿಮೆಯಾಗುತ್ತದೆ.

ಪಾಕಿ ಅಂದರೆ ತಾಮ್ರದ ದುಡ್ಡು ದುಡ್ಡಿಗಿಂತ, ಸಂಪತ್ತಿಗಿಂತ ಸಂಬಂಧ ಬಹಳ ದೊಡ್ಡದು. ಹಣಕ್ಕಿಂತ ತಿಳುವಳಿಕೆ ದೊಡ್ಡದು. ನಡೆಸಿಕೊಳ್ಳುವುದಕ್ಕಿಂತ ದುಡಿಸಿಕೊಳ್ಳುವುದು ದೊಡ್ಡದು. ಅರಸನ ಕೆಳಗಿನ ಅಧಿಕಾರಿಗಳು ನಿಷ್ಪರಾಗಿರಬೇಕು. ಕರ್ತೃ ಅಂದರೆ ನಿರ್ಮಿಸುವವನನ್ನು ಹಿಂದಕ್ಕಿಟ್ಟು, ನಿರುಪಯುಕ್ತರ ನಡುವಿಟ್ಟು ಗುರು ಹಿರಿಯರಾದ ಜ್ಞಾನಿಗಳನ್ನು ಕಲಿಯುಗದಲ್ಲಿ ಜನ ಮರೆತರು.

ಕಲಿಯುಗದಲ್ಲಿ ವೇಶ್ಯ ಮೆರೆವಳಲ್ಲದೆ ಸಾತ್ವಿಕಳು ಮೆರೆಯಲಾರಳು, ಭಂಡರಿಗೆ ಬೆಲೆ ಬರುವುದಲ್ಲದೆ ಮನೆ ಹೆಂಡತಿಗೆ ಬೆಲೆಯಿಲ್ಲ. ಸೂಳೆಗೆ ಬೆಲೆ ಹಾಗೂ ಗೌರವ ದೊರೆಯುತ್ತವೆ ಹೊರತು ಪತಿವ್ರತೆಗೆ ಗೌರವಗಳು ದೊರೆಯುವುದಿಲ್ಲ. ಅಂದರೆ ಸಾತ್ವಿಕರು ಹಾಗೂ ಜ್ಞಾನಿಗಳಿಗಿಂತ ತುಂಡ, ಲೆಂಡ, ಮತಿಹೀನ ಮಂದಿಗೆ ಈ ಕಾಲದಲ್ಲಿ ಗೌರವ ಮರ್ಯಾದೆಗಳು ಜಾಸ್ತಿ.

ಯಾವುದೇ ಶ್ರೇಷ್ಠ ಮನುಷ್ಯನಾಗಲೀ ದೇವರಾಗಲಿ ತಾನು ಮಾಡಿಕೊಂಡ ಕೆಲಸಕ್ಕೆ ಪ್ರತಿಯಾಗಿ ಪ್ರತಿಫಲ ಕೊಡಬೇಕು, ಇದು ಧರ್ಮ. ಇಕ್ಕಳವು ಕಸುಬುದಾರ ಪಾಂಚಾಳರ ಬಹುದೊಡ್ಡ ಅಸ್ತ್ರ. ಅದರಿಂದಲೇ ಲೋಹಗಳಲ್ಲಿ ಕಟ್ಟಿಗೆಗಳಲ್ಲಿ ಜನೋಪಯೋಗಿ ವಸ್ತುಗಳನ್ನು ಸೃಷ್ಟಿಸುವುದು. ಅಂತಹ ದುಡಿಮೆಗಾರ ಪಾಂಚಾಳರ ಆಯವನ್ನು(ಕೂಲಿ)ಮುಳುಗಿಸಿಕೊಳ್ಳುವವನಿಗೆ ಬಾಧೆ ತಪ್ಪದು. ಇದಕ್ಕೆ ಮನುಷ್ಯರಷ್ಟೇ ಅಲ್ಲ, ಸ್ವತಃ ಶಿವನೂ ಆಯ ಕೊಡಬೇಕು. ಜಗತ್ತಿಗೆ ಬೆಳಕು ನೀಡುವ ಜೀವಚರಗಳ ಸೃಷ್ಟಿಗೆ ಕಾರಣವಾಗುವ ಸೂರ್ಯ ಚಂದ್ರರನ್ನು ಹೊರತುಪಡಿಸಿ ಜಗತ್ತಿನಲ್ಲಿ ರಾಜರಾಗಲಿ ಬಾದಶಹ(ಅರಸ)ನಾಗಲೀ ಎಲ್ಲರೂ ದುಡಿದವನ ಕೂಲಿ ಕೊಡಲೇಬೇಕು, ಕೊಡದಿದ್ದರೆ ಪಾಂಚಾಳರು ಬಿಡಲಾರರು. ನಾಡಿಗ, ಊರ ಗೌಡ, ದೇಸಾಯಿ, ಕುಲಕರ್ಣಿ, ಓಜ, ಒಕ್ಕಲು ಇಂತು ಆರು ದರುಶನದವರು, ಜೋಗಿ, ಗೊರವ, ಜಂಗಮ, ದಾಸಿ, ದೋಷಿ, ಮುಲ್ಲಾ, ಖಾಜಿ, ಇಂತಿ ಸಹಿತವಾಗಿ ನೂರೊಂದು

ಕುಲದವರಿಗೆ ಇಕ್ಕಳ ಮತ್ತು ಅದರಿಂದ ರೂಪಗೊಳ್ಳುವ ಕುಡುಗೋಲು ಬೇಕು. ಹೆತ್ತ ತಾಯಿಯಿಂದ ಮಗುವನ್ನು ಬೇರ್ಪಡಿಸಲು ಕರಳು ಹುರಿ ಕೊಯ್ಯಲು ಕುಡುಗೋಲು ಜಗದ ಕೈಗೆ ಬೇಕೆ ಬೇಕು.

ಮೌನೇಶ್ವರರು ಆರು ದರ್ಶನ ಮತ್ತು ನೂರೊಂದು ಕುಲಗಳಿಗೆ ಇಲ್ಲಿ ಹೊಸ ಭಾಷ್ಯ ಬರೆದಂತಿದೆ. ಆರು ದರುಶನಗಳೆಂದರೆ ಷಟ್‌ದರುಶನಗಳೆಂದು ಪ್ರಚಲಿತವಾಗಿದ್ದ ವೈದಿಕ ಮೂಲದ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವ ಹಾಗೂ ಉತ್ತರ ಮೀಮಾಂಸೆಗಳನ್ನು ನಿರಾಕರಿಸಿ, ಜನಪ್ರತಿನಿಧಿಗಳಾದ ನಾಡಿಗ, ದೇಸಾಯಿ, ಗೌಡ, ಕುಲಕರಣಿ, ಓಜ, ಒಕ್ಕಲಿಗ ಇವರನ್ನು ಆರು ದರುಶನದವರು ಎಂದು ಕರೆಯುತ್ತಾರೆ. ಹೊಲಿ ಹದಿನೆಂಟು ಜಾತಿ ಎಂದು ಪ್ರಚಲಿತವಾಗಿದ್ದ ಹದಿನೆಂಟು ಜಾತಿಗಳಿಗೆ ಪ್ರತಿಯಾಗಿ ನೂರಾವಂದು ಕುಲಗಳನ್ನು ಹೇಳುತ್ತಾರೆ. ಅದರಲ್ಲೂ ಸಾಮಾಜಿಕ ಸ್ಥರಗಳಲ್ಲಿ ತೀರ ಉಪೇಕ್ಷಿತವಾದ ಜೋಗಿ, ಗೊರವ, ಜಂಗಮ, ದಾಸಿ, ದೋಷಿ, ಮುಲ್ಲ, ಖಾಜಿ ಇಂತೀ ಸಹಿತವಾದ ನೂರಾವಂದು ಕುಲಗಳನ್ನು ಹೆಸರಿಸುತ್ತಾರೆ. ಮೌನೇಶ್ವರರು ವರ್ಗ ಮತ್ತು ವರ್ಣ ವ್ಯವಸ್ಥೆಯನ್ನು ಅದರ ತಿಳುವಳಿಕೆಗಳನ್ನು ವಿಸರ್ಜಿಸಿ ಕುಲಮೂಲ ಸಂಸ್ಕೃತಿಯನ್ನೇ ಎತ್ತಿ ಹಿಡಿಯುತ್ತಾರೆ. ಕುಲಪದ್ಧತಿ, ಜಾತಿ ಸಮುದಾಯಕ್ಕಿಂತ ಭಿನ್ನ ಹಾಗೂ ಸ್ವತಂತ್ರ.

ಮೂವತ್ಮೂರು ಕೋಟಿ ದೇವತೆಗಳು ಸುತ್ತಿಗೆಯ ಮಕ್ಕಳಾದರೆ ಜಗತ್ತಿನಲ್ಲಿ ಹುಟ್ಟಿದವರೆಲ್ಲರೂ ತಾಯಿ ಗರ್ಭದಿಂದ ಬಂದವರು. ಹಾಗೆ ಜಗತ್ತಿನಲ್ಲಿ ಪೂಜೆ ಗೊಳ್ಳುವ ವಿವಿಧ ದೇವರೆಲ್ಲರೂ ಚಾಣದ ಮಕ್ಕಳು. ಇದನ್ನು ಹುಚ್ಚರಂತೆ ಅಲ್ಲಗಳೆಯಲಾಗದು ಕುಲಮಿಯಿಲ್ಲದಿದ್ದರೆ ಕುಲಗೋತ್ರಗಳ ಬೆಳವಣಿಗೆಯಾಗುತ್ತಿರಲಿಲ್ಲ. ನಾಗರಿಕತೆಯ ಮೂಲವೇ ಕುಲಮೆ ಹಾಗೂ ಕಬ್ಬಿಣ. ಹೀಗಿರುವಾಗ ಶ್ರೇಷ್ಠ, ಕನಿಷ್ಠ ಅಯೋನಿಜ, ಯೋನಿಜ, ನರ ಹರ ಎನ್ನುವ ಭೇದಗಳು ಮನುಷ್ಯ ವಿರೋಧಿ ಯಾದಂಥವು.

ಒಕ್ಕಲುತನಕ್ಕೆ ಕುಲವುಂಟು, ವಾಳಿತನ ಅಂದರೆ ಬೇಡಾದವ, ಜಗಳಗಂಟನಿಗೆ, ಅಜ್ಞಾನಿಗೆ ಕುಲವಿಲ್ಲ. ಕಳ್ಳರಿಗೆ ಸುಳ್ಳರಿಗೆ ಜಗಳಗಂಟರಿಗೆ ಈ ಲೋಕದಲ್ಲಿ ಉಳಿವಿಲ್ಲ. ಕಾರಣ ನ್ಯಾಯ ನೀತಿಗಳು ಉಳಿಯಬೇಕೆಂದು ಅರಮನೆ ಹುಟ್ಟಿಸಿದರು. ಮೌನೇಶ್ವರರು ಪ್ರಭುತ್ವವನ್ನು ವಿರೋಧಿಸುತ್ತಲೇ ಪರ್ಯಾಯ ಪ್ರಭುತ್ವವನ್ನು ನಿರ್ಮಿಸುತ್ತಾರೆ. ನ್ಯಾಯ, ನೀತಿ, ಸತ್ಯ, ಧರ್ಮ, ತತ್ವ, ಸುಖ, ಸಂತೋಷ, ಪ್ರಜಾಕಾಳಜಿಯುಳ್ಳ ಅರಸೊತ್ತಿಗೆ ಅದು. ಆ ಅರಸೊತ್ತಿಗೆಯಲ್ಲಿ ಅಧರ್ಮ, ಅನೀತಿಗಳಿಗೆ, ಜಡತ್ವಕ್ಕೆ ದರ್ಪಕ್ಕೆ ಅವಕಾಶಗಳಿಲ್ಲ. ಅದು ಸಮೃದ್ಧ ಸಂತೃಪ್ತ ಸಮಾನತೆಯ ಅರಮನೆ.

ಜಗತ್ತಿನ ನ್ಯಾಯ ನೀತಿಗಳ ತೀರ್ಮಾನವನ್ನು ನ್ಯಾಯಾಧೀಶನೇ ಮಾಡಬೇಕು. ಬೇರೆಯವರು ಅದರಲ್ಲಿ ತಲೆ ಹಾಕಬಾರದು. ಅರಸನಿಗೂ ಪ್ರಧಾನಿಗೂ ಅದರ ಮೇಲೆ ಸವಾರಿ ಮಾಡುವ ಹಕ್ಕಿಲ್ಲ. ಅಂತಹ ನ್ಯಾಯಾಧೀಶನನ್ನು ನೇಮಿಸಿದವನೇ ದೇವರು ಹಾಗೂ ಸತ್ಯದ ಪ್ರತೀಕವಾದ ಮುಲ್ಲಾ. ಆಳುವವನೇ ಆರೋಪಿಯಾದಾಗ ಸತ್ಯದ ಪ್ರತಿನಿಧಿಯಾದ ಮುನ್ಸೀಪನೆ ನ್ಯಾಯದಾನ ಮಾಡಬೇಕು. ನ್ಯಾಯಾಂಗ ವ್ಯವಸ್ಥೆ ಮತ್ತು ಅದರ ಸ್ವಾತಂತ್ರ್ಯವನ್ನು ವಚನ ಎತ್ತಿ ಹಿಡಿದಿದೆ. ಈ ವಚನ ಇಂದಿನ ರಾಜಕೀಯ ವ್ಯವಸ್ಥೆಯನ್ನು ಬಿಂಬಿಸುವಂತಿದೆ. ಇಂದು ಧೀಮಂತ ನಾಯಕರಿಗಿಂತ ಕಿಂಗ್‌ಮೇಕರ್‌ಗಳ ಹಾವಳಿ ಜಾಸ್ತಿಯಾಗುತ್ತಿದೆ. ಹಣವಂತರು ಅನೀತಿವಂತರು ಪುಡಾರಿಗಳು ತಮ್ಮ ಸ್ವಾರ್ಥಸಾಧನೆಗಾಗಿ ನಾಯಕನನ್ನು, ಯಜಮಾನನನ್ನು ಸೃಷ್ಟಿ ಮಾಡುತ್ತಾರೆ. ಅವರನ್ನು ಆಯತವಾದ ಜಾಗದಲ್ಲಿ ಕೂಡ್ರಿಸಿ ತಮಗೆ ಅನುಕೂಲವಾಗುವ ತೀರ್ಮಾನಗಳನ್ನು ರೂಪಿಸುವಂತೆ ಮಾಡುತ್ತಾರೆ. ಅಂಥವರು ಮೌನೇಶ್ವರರ ಕಾಲ ದಲ್ಲಿಯೂ ಇದ್ದರು. ಪುಡಾರಿಗಳಿಗೆ ಹೊಂದಿಕೊಂಡವರು ಬದುಕುತ್ತಾರೆ. ಹೊಂದಿ ಕೊಳ್ಳದೆ ಪ್ರಾಮಾಣಿಕವಾಗಿ ಉಳಿದವನ ಮೇಲೆ ಇಲ್ಲಸಲ್ಲದ ಆಪಾದನೆ ಹೊರೆಸಿ ಅವರನ್ನು ಇದ್ದು ಸತ್ತಂತೆ ಮಾಡಿಬಿಡುತ್ತಾರೆ. ಹೀಗಾಗಿ ಸಾಹೇಬರ ಸಭೆ ಅಂದರೆ ಅರಸನ ಸಭೆ ಎಂಬುದು ಇಂತಹ ಪುಡಾರಿಗಳಿಂದ ಅಧರ್ಮಿಗಳಿಂದ ತುಂಬದೆ ಜ್ಞಾನಿಗಳಿಂದ, ಪ್ರಜ್ಞಾವಂತರಿಂದ ತುಂಬಿರಬೇಕು. ಅಂತಹ ಸಭೆಗೆ ಶರಣಾರ್ಥಿ ಎಂದು ಮೌನೇಶ್ವರರು ಹೇಳುತ್ತಾರೆ.

೭೭೮

ಸಂಕೋಲಿಯ ಬೀಳಲು ಶಂಕರನ ಕೃಪೆಯಾಯ್ತು
ಲಂಕೆಯ ಪಟ್ಟಣ ನಮಗಾಯ್ತು, ಎಳ್ಳಷ್ಟು
ಸಂಕೋಚವಿಲ್ಲ, ಬಸವಣ್ಣ

ತಾತ್ಪರ್ಯ : ಇದೊಂದು ಪೌರಾಣಿಕ ಸಂಗತಿಯನ್ನು ಹೇಳುವ ವಚನವಾಗಿದೆ. ಜೀವಣ್ಣ ಮಸಳಿಯವರು ಅರ್ಥೈಸುವಂತೆ "ಲಂಕೆಯ ಪಟ್ಟ ನಮಗಾಯಿತು" ಎಂಬುದಕ್ಕೆ ಸ್ವಾರಸ್ಯಕರವಾದ ಹಿನ್ನೆಲೆಯಿದೆ. ವಿಷ್ಣು ಲಂಕೆಯ ಮೇಲೆ ಪದೆ ಪದೆ ದಾಳಿ ಮಾಡಿದನು. ಆಗ ಲಂಕೆಯಲ್ಲಿ ಮಾಲಿ ಸುಮಾಲಿ ಮಾಲ್ಯವಂತರೆಂಬ ಮೂವರು ವೈಶ್ವಕರ್ಮಣ ರಾಜಬಂಧುಗಳು ರಾಜರಾಗಿದ್ದರು. ವಿಷ್ಣುವಿನ ಕಾಟ ದಿಂದಾಗಿ ಇವರು ರಾಜಭ್ರಷ್ಟರಾಗಿ ದಕ್ಷಿಣ ಪೂರ್ವ ಕರಾವಳಿಯ ಪ್ರದೇಶದಲ್ಲಿ ನೆಲೆಸಿದ್ದರು. ಅರಾಜಕವಾದ ಲಂಕೆಗೆ ಸುಮಾಲಿಯ ಮಗಳಾದ ಕೈಕಸಿಯು ತನ್ನ ಮಗ ರಾವಣನನ್ನು ರಾಜನನ್ನಾಗಿ ಮಾಡಿದಳು. ವಿಶ್ವವಸು ಕೈಕಸಿ ದಂಪತಿ ರಾಜ–

ರಾಣಿಯರು ದೇವಿಕಾ ನದಿಯ ದಡದಲ್ಲಿ ವೀರನಗರ ಎಂಬ ರಾಜಧಾನಿಯಲ್ಲಿದ್ದರು. ಅರಾಜಕವಾದ ರಾಜ್ಯಕ್ಕೆ ವಿಶ್ವಕರ್ಮನಾದ ರಾವಣನೇ ಅರಸನಾದ ಬಗೆಯನ್ನು ವಚನ ವಿವರಿಸುತ್ತದೆ.

೭೭೯

ಸತ್ಯವು ಮುಳಗೀತು ಅಸತ್ಯವು ಬೆಳದೀತು
ಉತ್ತಮರಿಗೆ ತಿಳಿದೀತು ಉಳವಿ ಮಹಾಮನಿ ಗವಿಯು
ಗೊತ್ತು ಅಲ್ಲವೆ, ಬಸವಣ್ಣ

ತಾತ್ಪರ್ಯ : ಕಲಿಯುಗದಲ್ಲಿ ಸತ್ಯವು ನಾಶವಾಗಿ ಅಸತ್ಯವೇ ವಿಜೃಂಭಿಸುವುದು. ನಿಜಶರಣರ ತತ್ವ ಹಾಗೂ ಧರ್ಮಗಳು ಅಳಿದು ಡಾಂಭಿಕತನ ಹಾಗೂ ಸುಳ್ಳು ಬದುಕಿನ ಭಾಗವಾಗುವ ಆ ಮೂಲಕ ವ್ಯಕ್ತಿ ಹಾಗೂ ಸಮಾಜದ ನೈತಿಕ ಅಧಃಪತನ ವಾಗುವುದನ್ನು ವಚನ ಬಿಂಬಿಸುತ್ತದೆ.

೭೮೦

ಸಾರಿ ಕೊಲ್ಲಲಿ ಬಂದ ಸಾರಭೂಪತಿಗಳನು
ಬಾಗಿ ಹಿಡಿದವರಿಗೆ ಉಳಿವುಂಟು
ಸಕಲದೈವದ ಪದವುಂಟು ಸಕಲ ಸುಖ ಭೋಗವುಂಟು
ದೇವೇಂದ್ರನ ಪದವಿ ನಿಮಗುಂಟು ಹಿಡಿದು
ಬಿಟ್ಟವರಿಗೆ ಉಡುಗು ಮುತ್ತಿಗೆವುಂಟು ಬಿಡದೆ
ಹಿಡಿದವರ ಮುಡಿಗೆ ಮುತ್ತಿನ ಸರವುಂಟು, ಬಸವಣ್ಣ

ತಾತ್ಪರ್ಯ : ಅನ್ಯಾಯ ಅನೀತಿ ಅಧರ್ಮ ಅಜ್ಞಾನ ಪರವಶರಾದ ಸಾರಭೂಪತಿ ಗಳನ್ನು ಕೊಲ್ಲಲು ಹೇಳಿ ಕೇಳಿ ಬಂದವನು. ಅಂತಹ ಅಂಧಕರು ದುರ್ಮಾರ್ಗವನ್ನು ಹಿಡಿಯದೇ ತಿದ್ದಿಕೊಂಡು ನಡೆದರೆ ಅಂತವರಿಗೆ ಉಳಿಗಾಲವುಂಟು. ಸಕಲ ದೈವಗಳ ಸಕಲ ಸುಖ ಭೋಗಗಳ ಫಲವುಂಟು, ದೇವೇಂದ್ರನ ಪದವಿಯೇ ಅಂತಹ ಸಾಧಕರಿಗೆ ದೊರೆಯುತ್ತದೆ. ಅದು ಬಿಟ್ಟು ಅಹಂಕಾರದಿಂದ ಮೆರೆದರೆ ಅಂತವರು ನಾಶವಾಗುತ್ತಾರೆ, ಮುಳುಗಿ ಹೋಗುತ್ತಾರೆ.

೭೮೧

ಸಿದ್ಧ ಸಾಧುವು ತನ್ನ ಇಂದ್ರಗೃಹದೊಳಗೆ
ಮದ್ದುಕಂಡು ಮರನಂತೆ ಅಲ್ಲಮರಾಯ
ಸಿದ್ಧನಾಡಿದನು ಜಗದೊಳಗೆ, ಬಸವಣ್ಣ

ತಾತ್ಪರ್ಯ : ಪರಿಪೂರ್ಣತ್ವವೆಂಬುದು ಸಿದ್ಧರಿಗೆ ಭೂಷಣವು. ಹೃದಯ ಶ್ರೀಮಂತಿಕೆ ಹೆಚ್ಚಿ ಸದಾ ಬೇಡಿದವರಿಗೆ ಜ್ಞಾನ ನೀಡುವ ದಿವ್ಯ ಔಷಧಿಯಾಗುತ್ತಾನೆ. ಅಂಥ ಸಿದ್ಧನ ಪೂರ್ಣತ್ವದ ಪ್ರತೀಕ ಮೌನೇಶ್ವರರಾಗಿದ್ದಾರೆ. ಇಂಥವರಿಂದ ಲೋಕ ಮಾನವೀಕರಣಗೊಳ್ಳುತ್ತದೆ ಹಾಗೂ ನೀತಿ ಪಥದತ್ತ ಸಾಗುತ್ತದೆ.

೭೮೨

ಸೂಳೆಯ ಮಕ್ಕಳಿಗೆ ತಾಯಿವುಂಟು ತಂದಿಲ್ಲ
ಅನ್ಯಾಯವುಂಟು ನಿಜವಿಲ್ಲ ಇವರಿಗೆ
ರಾಯಪಟ್ಟ ಸಲ್ಲುವದೆ ಕೇಳಿದವರು ಛೀಯನರೆ, ಬಸವಣ್ಣ

ತಾತ್ಪರ್ಯ : ಸದ್ಗುಣ ಸಂಪನ್ನನೂ, ಪ್ರಜ್ಞಾವಂತನೂ ಮಹತ್ವಾಕಾಂಕ್ಷಿಯೂ ಆದ ಅರಸ ಪ್ರಜೆಗಳನ್ನು ಕಾಳಜಿಯಿಂದ ನೋಡಿಕೊಳ್ಳಬಲ್ಲ. ಆದರೆ ಮೈಮಾರಿಕೊಂಡು ಬದುಕುವ ಸೂಳೆಯರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೆ ತಾಯುಂಟು ಆದರೆ ತಂದಿಲ್ಲ, ಅಂಥವರಿಗೆ ಅನ್ಯಾಯವಾಗಿರಬಹುದು. ಆದರೆ ಅಂತಹ ಮಕ್ಕಳಿಗೆ ಅರಸನ ಪಟ್ಟ ಕಟ್ಟಿದರೆ ಅವಿವೇಕತನದಿಂದ ಪಟ್ಟಣವನ್ನೇ ಹಾಳುಮಾಡ್ಯಾರು. ಇದನ್ನು ಕೇಳಿದವರು ಛೀ ಎನ್ನದೇ ಇರಲಾರರು. ಅನೈತಿಕ ಅರಸುಗಾರಿಕೆ ಅಧಃಪತನಕ್ಕೆ ದಾರಿ ಎಂಬುದು ಇಲ್ಲಿನ ತಾತ್ಪರ್ಯ.

೭೮೩

ಸೆಟ್ಟಿ ಪಟ್ಟಣವ ಸುಟ್ಟಂಥ ಕಾರಣದಿಂದ
ನಷ್ಟವಾಯಿತು ಕಾಣಾ ನರರಿಗೆ। ಪ್ರಭುರಾಯ
ಬಿಟ್ಟಿನೆಂಬಂಥ ಬಿರುದಿಲ್ಲ
ಪಾಪದ ಕೆಟ್ಟ ಕೋಪವ ಸುಡಬೇಕಲ್ಲದೆ
ಪಟ್ಟದ ಗುದ್ದೆಯ ಸುಡಬಹುದೆ
ಸುಟ್ಟಂತ ಕಾರಣದಿಂದ
ಪಟ್ಟಕ್ಕೆ ಬಂತು ಪ್ರಳಯವು ಶಿವಶರಣರ ವಿದ್ಯೆ
ಕಟ್ಟಿಕೊಳ್ಳಿ ಆ ನಿಮ್ಮ ಶರಗಿಲಿ ಇದು ನಿಮ್ಮ
ತೊಟ್ಟಿಲ ಶಿಶುವಿನ ಹರಕೆಯಲಿ ಸಂತೋಷವು
ಮುಟ್ಟೀತು ಮೂರು ಜಗಕೆಲ್ಲ, ಬಸವಣ್ಣ

ತಾತ್ಪರ್ಯ : ಶೆಟ್ಟಿ ಪಟ್ಟಣದ ಮುಖ್ಯಸ್ಥ. ಅಂತಹ ಶೆಟ್ಟಿ ಪಟ್ಟಣವ ಸುಟ್ಟ ಕಾರಣದಿಂದ ಎಲ್ಲವೂ ನಾಶವಾಯಿತು. ಕೋಪ ಎನ್ನುವುದು ಬೆಂಕಿಗಿಂತ ಅಪಾಯಕಾರಿ ಅಂತಹ

ಸಿಟ್ಟನ್ನು ಸುಡಬೇಕಲ್ಲದೆ ಪಟ್ಟಗದ್ದೆಯ ಸುಡಬಾರದು. ಸುಟ್ಟ ಕಾರಣದಿಂದ ಪಟ್ಟಕ್ಕೆ ಪ್ರಳಯಬಂತು. ಕಾರಣ ಶಿವಶರಣರ ಅನುಭಾವ ಪಥವನ್ನು ಹಿಡಿದು ಸಾತ್ವಿಕರಾಗಿರಿ. ಇದು ಸಣ್ಣವನಾದ ನಿಮ್ಮ ಶಿಶುವಿನ ಹರಕೆ ಎಂದು ಮೂಜಗವು ಸಂತೋಷದಿಂದ ಸ್ವೀಕರಿಸುವಂತಾಗಲಿ ಎಂದು ಪ್ರಶ್ನಿಸುತ್ತಾರೆ.

೭೮೪

ಸರ್ವೇಶ್ವರನೆನುತಲಿ ಹರಿದು ಗುಡ್ಡವನೇರಿ
ಕರದನು ಕೈಲಾಸದ ಮಳೆಗಳನು ಬಸವಯ್ಯ
ಕುರುಹು ತೋರಿದನು ಸರ್ವರಿಗೆ ಅಲ್ಲಮಪ್ರಭುವಿನ
ಬಿರುದಿನ ಡಂಕೆಯ ಹೊಯಿಸುತಲಿ, ಬಸವಣ್ಣ

ತಾತ್ಪರ್ಯ : ಮಳೆ ಬಾರದಾಗಿ ಸೃಷ್ಟಿ ಕಂಗಾಲಾಗಿದ್ದ ಹೊತ್ತಿನಲ್ಲಿ ಸರ್ವೇಶ್ವರನಾದ ಶಿವನನ್ನು ಸ್ಮರಿಸುತ್ತ ಗುಡ್ಡವನೇರಿ ಕರೆದಾಗ ಕೈಲಾಸದಿಂದ ಮಳೆ ತರಿಸಿ ಕುರುಹು ತೋರಿ ಸರ್ವರಿಗೆ ಎಚ್ಚರಿಕೆ ಗಂಟೆಯಾಗಿ ಬಿರುದಿನ ಡಂಕೆಯನ್ನು ಬಾರಿಸಿದರು ಮೌನೇಶ್ವರರು.

೭೮೫

ಸೋಗು ಸಂಚನೆಯಮಾಡಿ ಪಾಗಕ್ಕೆ ಕುದುರಿಯ ಕಟ್ಟಿ
ಭಾಗ್ಯವುಳ್ಳವರ ದೊರೆ ತಾನು ಬಸವಯ್ಯ
ಬಾಗಿ ಬಂದವರಿಗೆ ಭಯವಿಲ್ಲ
ಬೀಗಿದವರ ಹಲ್ಲು ಮುರಿದಾನು, ಬಸವಣ್ಣ

ತಾತ್ಪರ್ಯ : ಪರಿಪೂರ್ಣತ್ವ ಹೊಂದಿದ ಮನುಷ್ಯ ಯಾವತ್ತೂ ಬೀಗುವುದಿಲ್ಲ. ಗರ್ವಪಡುವುದಿಲ್ಲ. ಅಂತವರೊಂದಿಗೆ ವಿನಯದ ರೂಪದಲ್ಲಿ ಭಗವಂತನಿರುತ್ತಾನೆ. ಹಣದ ಆಸೆಗೆ ಬಿದ್ದು ಸೋಗು ಕಪಟತನಗಳಿಗೆ ಈಡಾಗಿ ಕೆಲಸವಿಲ್ಲದೆ ಬಳಸುವ ಕುದುರೆಯನ್ನು ಲಾಯದೊಳಗೆ ಕಟ್ಟಿ ಸೋಮಾರಿಗಳಾಗುವ ಜನರಿಗೆ ತಿಳಿವು ನೀಡಲು ಅವತಾರಿ ಮೌನೇಶ್ವರರು ಬಂದಿರುವರು. ಬಾಗಿದವರಿಗೆ ಭಯವಿಲ್ಲ. ಗರ್ವಿಸಿದವರ ಹಲ್ಲು ಮುರಿದು ಬುದ್ಧಿ ಕಲಿಸುವ ಭಾವ ವಚನದ್ದು.

೭೮೬

ಹರನೆ ಕರ್ಮಾರನಾಗಿ ನರರೂಪ ತಾಳಿ
ಸರ್ವಕಾಯಕಕ್ಕೆ ಉಪದೇಶ ಕೊಟ್ಟಂಥ
ಗುರುವಿನ ಮುಂದೆ ಗುರು ಉಂಟೇನು, ಬಸವಣ್ಣ

ತಾತ್ಪರ್ಯ : ಮನು(ಕಂಬಾರ) ನಾಮವು ಶಿವನ ಪ್ರತೀಕ. ಅಂತಹ ಮನು ಬ್ರಹ್ಮನಾದ ಶಿವನೇ ಸರ್ವಕಾರ್ಯಗಳನ್ನು ಮಾಡಲು ಉಪದೇಶಿಸಿದನು. ಇಂತಹ ಗುರುವಿನ ಅನುಗ್ರಹ ಪಡೆದು ತಾನು ಹಾಗೂ ತನ್ನೊಂದಿಗೆ ಸಮಾಜದ ಉದ್ಧಾರ ಮಾಡ ಬೇಕೆನ್ನುವುದು ಇಲ್ಲಿನ ಭಾವ. ಅಂತಹ ಕ್ರಿಯಾಜ್ಞಾನಿ ಗುರುವಿನ ಮುಂದೆ ಇನ್ನೊಬ್ಬ ಗುರುವಿಲ್ಲ. ಗುರುವೇ ಹರನಿಗಿಂತ ದೊಡ್ಡವ ಎನ್ನುವ ಭಾವ ಇಲ್ಲಿದೆ.

೭೮೭

ಹರಕಿಗಳು ತಡದರೆ ಖರೆಖರೆಗಳಾದಾವು
ತಿರುಕತನವು ಎಡೆಗೊಂಡರೆ ಮುಂದಿನ್ನು
ನರಕ ಭಾಜನಕ್ಕೆ ಎಳಸ್ಯಾರು ಕಾಣಾ, ಬಸವಣ್ಣ

ತಾತ್ಪರ್ಯ : ದೇವರು ಮತ್ತು ಗುರುವಿನ ಅನುಗ್ರಹವಾದರೆ ಆ ಮೂಲಕ ಪರಿಪೂರ್ಣತ್ವ ಪಡೆದರೆ ಸಾಧನೆಯ ದಾರಿ ನಿಜವಾಗುವುದು, ಸತ್ಯಗೋಚರಿಸುವುದು. ಅದು ಬಿಟ್ಟು ತಿರುಕತನ, ಅಂದರೆ ಅಲೆಮಾರಿತನ, ಅಜ್ಞಾನ ಅಹಂಕಾರಗಳು ನೆಲೆಗೊಂಡರೆ ಬದುಕು ನರಕ ಸದೃಶವಾಗುತ್ತದೆ.

೭೮೮

ಹಿರಿಯರ ಮಕ್ಕಳಿಗೆ ಬಿರು ನುಡಿಯು ಸಲ್ಲದು
ಬರನುಣ್ಣ ಅನುಗಾಲ ಲೋಕದ
ಕುರಿಯ ಕಾಯ್ವಂಥಾ ಶುನಕನ ಮಾಡಿದನು
ಸೆರಿ ಅಂಬಲಿಯನಿಟ್ಟು ಸಲಹಿದನು
ಧರ್ಮದ ಸಂಗಯ್ಯನ ಹರಿಕುಂಟು ಮೀರಿದರೆ
ಇರವಿಯ ಮರಕೆ ಎಳಸುವರು, ಬಸವಣ್ಣ

ತಾತ್ಪರ್ಯ : ಪ್ರಾಜ್ಞರಾದ ಗುರುಹಿರಿಯರ ಮಕ್ಕಳಿಗೆ ಸಂಸ್ಕಾರ ಬಲದಿಂದ ಕಿರಿಯ ವಯಸ್ಸಿನಿಂದಲೇ ತಿಳುವಳಿಕೆ ಬಂದಿರುತ್ತದೆ. ಅಂತವರು ಇನ್ನೊಬ್ಬರ ಮನಸ್ಸು ನೋಯುವಂತಹ ಸಲ್ಲದ ಮಾತುಗಳನ್ನು ಆಡಬಾರದು. ಆಡಿದರೆ ಧರ್ಮದ ಸಂಗಯ್ಯ ಬಂದು ಕುರಿಗಾರರ ನಾಯಿಯ ಮಾಡಿ ಅಂಬಲಿ ಇಟ್ಟು ಸಲಹುವನು, ತಪ್ಪಿದರೆ ನರಕಕ್ಕೆ ಎಳಸುವನು.

೭೮೯

ಹುಸಿಯ ಮಾತಾಡುವನಲ್ಲ ಹೇಸಿಯ ಮಾತಲ್ಲ
ಈಶನ ಶರಣ ಸದ್ಭಕ್ತರಿಗೆಲ್ಲ
ಉಪದೇಶಿಸ ಬಂದನು ಕಾಣಾ, ಬಸವಣ್ಣ

ತಾತ್ಪರ್ಯ : ಮಾತು ಜ್ಯೋತಿರ್ಲಿಂಗ ಎನ್ನುವ ತತ್ವ ಇಲ್ಲಿನದು. ಹುಸಿಯನಾಡುವು ದಾಗಲಿ ಅನಗತ್ಯ ಮಾತನಾಡುವುದಾಗಲೀ ನನಗಾಗದು. ಈಶನ ಶರಣರ ಸದ್ಭಕ್ತರಿಗೆಲ್ಲ ಉಪದೇಶಿಸಲು ಬಂದವನು. ಶರಣರ ಅನುಭಾವ ಪಥವನ್ನು ಶಿವಭಕ್ತರಿಗೆ ತಿಳಿಸ ಬಂದವ ಮೌನಯ್ಯ ಎನ್ನುವ ಅರ್ಥ ಇಲ್ಲಿನದು.

೭೯೦

ಹೇಲನು ತೊಳೆವಂಥ ಜಾಲಗಾರನು ನಾನು
ಜಾಲಿಸಿ ನೋಡುವ ಸಂಗಯ್ಯನೆಂಬ ಅಭವನ್ನು
ಬೆದಕೆಂದ ನಾಗಲಿಯ ಮಗನು, ಬಸವಣ್ಣ

ತಾತ್ಪರ್ಯ : ಇದೊಂದು ಆಧ್ಯಾತ್ಮಿಕ ಅನುಭಾವದ ವಚನವಾಗಿದೆ. ಹೇಲು ತೊಳೆಯುವ ಜಾಲಗಾರನು ನಾನು ಎನ್ನುವಲ್ಲಿ ಈ ದೇಹಕ್ಕಂಟಿದ ಅಣವಮಲ, ಕಾರ್ಮಿಕ ಮಲ, ಮಾಯಾ ಮಲಗಳೆಂಬ ಮಲತ್ರಯಗಳನ್ನು ತೊಳೆಯುವ ಜಾಲಗಾರ. ಅಂದರೆ ಕಸದಲ್ಲಿ ರಸ ತೆಗೆಯುವವ. ಅಶುದ್ಧ ಲೋಹಗಳನ್ನು ಶುದ್ಧೈಸಿ ಆಭರಣ ವಾಗಿಸುವ ಅಕಲಗಾರ ಅಕ್ಕಸಾಲಿಗನು ಮೌನೇಶ್ವರರು.

ಜಾಲಿಸಿ ನೋಡುವ ಜಾಲಗಾರನೆಂದರೆ ಅಕ್ಕಸಾಲಿಗ. ಕಸದಿಂದ ಚಿನ್ನವನ್ನು ಬೇರ್ಪಡಿಸುವ ಕುಶಲಕರ್ಮಿ. ಅಂಥವನ ನಿಜರೂಪ ಶೋಧಿಸುವ ಶೋಧಕ ಮನುಷ್ಯನಾಗಬೇಕೆಂದು ಅಕ್ಕನಾಗಲಿಯ ಮಗ ಚೆನ್ನಬಸವನ ಅವತಾರಿ ಮೌನೇಶ್ವರರು ಹೇಳುತ್ತಾರೆ.

೭೯೧

ಗದ್ಯ : ಲಕ್ಷ್ಮೇಶ್ವರದಲ್ಲಿ ಸಜ್ಜನಯ್ಯನು ಒಬ್ಬ ಕುಲದವಗೆ ಪ್ರಾಯಶ್ಚಿತ್ತವ ಮಾಡಲಿಕ್ಕೆ ಐಯ್ಯನ ಕೇಳಲಿಕ್ಕೆ, ಆವ ತೀರ್ಥಕ್ಕೆ ಹೋಗಬೇಕೆಂದು ನುಡಿದರೆ, ಅಗಸ್ತ್ಯ ತೀರ್ಥಕೆ ಹೋಗಬೇಡಿರಿ, ಅಮೃತ ತೀರ್ಥಕ್ಕೆ ಹೋಗೆಂದ. ಅಯ್ಯನ ಮಾತು ಮೀರಿ ಹೋದರು. ಅಲ್ಲಿಗೆ ಇಬ್ಬರು ವೇದ ಪಾಠಕರು ಬಂದು ದಾವ ಮುಖದಲ್ಲಿ ಪ್ರಾಯಶ್ಚಿತವ ಮಾಡುತ್ತಿದ್ದಿ ಎಂದು ಕೇಳಿದರೆ ಅವನು ಆನುದಪ್ಪಿದುದಕ್ಕೆ ಮಾಡುತ್ತೀನಿ ಎಂದರೇನು ನಿಮಗೆ ಪ್ರಾಯಶ್ಚಿತ್ತ ಸಲ್ಲುವದೆ ಕರ್ಮಹರನಿಂದವೆಂದು ನುಡಿದರು. ಆಗ ಸಜ್ಜನಯ್ಯನು ಬೆದರಿ ಅಲ್ಲಿ ಒಬ್ಬ ಕುಲದ ಅಯ್ಯನ ಹಂತ್ಯಕ್ಕೆ ಹೋಗಿ ಅಯ್ಯನ ಗುರುವಿನ ಮುಖ ಇಳಂಬವಾಯಿತು. ಆಗಲೇ ಹೇಳಿದನು ಮಣ್ಣು ಎತ್ತು ಆದರು ತನ್ನ ಎತ್ತು ಗೆಲಿಸ ಬೇಕೆಂದು ಆಡಿದರೆ ಬಂದ ಮನುಷ್ಯನ ಸಂಗಡ ನಡೆಗೊಂಡು ಬರುವಾಗ ಆವಾಗ ಒಂದು ಬಡಿಗೆ ಸಿಕ್ಕಿದರೆ ಹಿಡಿದುಕೊಂಡು ಹಿಂಡಾಡು ಕಾಯಲಿಕ್ಕೆ ಒಂದೇ ಟೊಣ್ಣೆ. ಆ ಅಯ್ಯನು ಬಂದು ಸಜ್ಜನಯ್ಯನ ಬೆದರಿಸಿ ಏನೆನ್ನ ಬೇಡಿರಿ ಬಂದರೆ ರುವ್ವಿ

ದುಗ್ಗಾಣಿ ಕೊಟ್ಟು ಕಳಿಸಬೇಕು, ನೀನು ಗೋತ್ರವ ಕೇಳಲಿಕ್ಕೆ ಹೆಣ್ಣು ಗಂಡು ಕೊಡುತಿದಿಯಾ ಎಂದರೆ ಆಗ ನಿಂತುಮಾತಾಡಿದನು. ಜ್ಞಾನ ಗುರುವೊ ಅಜ್ಞಾನ ಗುರುವೊ ಎಂದು ನುಡಿದರು. ಜಾತ ಜಾತಕೆಲ್ಲ ಪೋತರಾಜನೆ ಗುರುವು ಮಾತಂಗಿಯ ಮಗನಾದವನು ಪರಬ್ರಹ್ಮನ ಗೋತ್ರವ ಕೇಳುವವನ ಹೆಸರೇನು? ಆವಿನ ಮೂತ್ರವ ಕುಡಿವವನ ಕುಲವೇನು? ನಿನ್ನ ಮುಖ ಕಂಡರೆ ಅಪಶಕುನ, ಪೇತು ನಿನಗೆ ಇಷ್ಟು ಮಾತು ನಿನಗ್ಯಾತಕ್ಕೆ ನನ್ನ ಕುಲ ಆವಿನಕುಲ ನಿನ್ನ ಕುಲ ವಿಪ್ರಕುಲವೇನು? ಅವು ಹೇಲನು ತಿಂಬುತದೆ ಎಂದರೆ ಆವು ಹೇಲನೆ ತಿಂದು ಹಾಲನ್ನೆ ಕೊಡುವುದು. ವಾಯಿಯಿಲ್ಲದೆ ಕೂಡಿ ವಸ್ತು ಬೆರೆದಂತೆ ನಾಯತ್ತ ನರನೆತ್ತ ನಿಮ್ಮ ಹಳಿದರೆ ಪಾಪ ಹತ್ತಿತು ಈತನ್ನ ನಂಬಬೇಕು ಸಜ್ಜನಯ್ಯ.

೭೯೨

ಗದ್ಯ: ಲಕ್ಷ್ಮೇಶ್ವರದ ಜಪದ ಬಾವಿಗೆ ಮಣ್ಣು ತಗಿಯಲಿಕ್ಕೆ ಬಡವರು ಬಲ್ಲಿದರು ಬುಟ್ಟಿಯ ಹಿಡಿದುಕೊಂಡು ಹೋಗುವಾಗ, ಅಯ್ಯ ತಾನು ಕೂಡಿದನು, ನಾನು ಬಿಟ್ಟಿಯ ಮಾಡಲೆಂದು ಕೇಳಿದರೆ, ಕೇಳಿದ ಮಾತಿಗೆ ಆರಾದರೇನು ಎಂಬುತ್ತ–ರಕೊಂಡ ಹೋಗಲಿಕೆ ಅತ್ತಲಿಂದೆ ಇಬ್ಬರು ಬಸುಳಿಪಲ್ಲೆದ ಮೂಟಿಯ ಹೊತ್ತು ಕೊಂಡು ಬರಲಿಕ್ಕೆ ಅಯ್ಯನ ಕಂಡು ಮೂಟಿಯ ಹಾಕಿದರು, ಮೋನಯ್ಯನ ಕರದು ಬಸಳಿಪಲ್ಲೆ ಕೊಳ್ಳಯ್ಯ ಎಂದು ಕೊಟ್ಟರು, ಹಿಡಿದುಕೊಂಡು ಹೋಗಿ ಸರದಾರ ಒಡೆಯರ ಸದರ ಮೇಲೆ ಚೆಲ್ಲಿದನು, ಚೆಲ್ಲಿದರೆ ಹಿಗ್ಯಾಕೊ ದಿವಾನಿ ಎಂದು ಅರಸನು ಆಡಿದನು. ಅಯ್ಯ ದಿವಾನಿಯಾದವರಿಗೆ ಬುದ್ಧಿ ಹೇಳಲಿಕ್ಕೆ ಬಂದೀನಿ. ನಾನು ಫಿರಿಯಾದಿಗೆ ರೋಜೆ ಹೀನಿ, ಎಂದರೆ ದೊರೆಯಂದ, ಚಾರ ಟೋಕರಿ ಕಾಲೊ, ನಾನು ನಾಲ್ಕು ಹೆಡಗಿ ಮೂರು ಹೆಡಗಿ ತಗೆಯಲಿಕ್ಕೆ ಬಂದಿಲ್ಲ. ತಳಮುಟ್ಟ ಬುಡಮುಟ್ಟ ಶೋಧಿಸಿ ಬೇರು ಕಿತ್ತಿ ಬೀಸಾಕಲಿಕ್ಕೆ ಬಂದೀನಿ ಎನುತಲಿ ಹೋಗಿ ಬಾವಿಯ ಒಳಗೆ ಇಳಿದನು. ಇಳಿದು ಮಂದಿಯನೆಲ್ಲ ನಾಲ್ಕು ಕಡಿಗೆ ಸೇರಿವಿ ಮಾಡಿ ನಿಲಿಸಿದನು. ಆಗ ಗುದ್ದಲಿಯಕೊಂಡು ಖೋ ಎಂದು ಕೂಗಿ ಅಗಿದನು, ಮಣ್ಣು ಮಣ್ಣು ಕಡಿಸಿ ಹೊರಾಂಗಣಕ್ಕೆ ಚೆಲ್ಲಿಸಿದನು. ಒಂಬತ್ತು ತಾಸಿಗೆ ಮಣ್ಣು ಕಿತ್ತಿ ಕಡೆಗಾಯಿತು. ಆಗ ಒಂದು ತಾಮ್ರದ ಕೊಡಾ ಸಿಕ್ಕಿತು. ಆಗ ಒಂದು ನೊಗದ ಗಾತ್ರ ಸೆಲೆ ಹೊರಟಿತು. ಆ ತಾಮ್ರದ ಕೊಡವನ್ನು ಮಾರಿಸಿ ಕಡ್ಲೆಯ ತರಿಸಿ ರಾಶಿಯ ಹೊಯಿಸಿಕೊಂಡನು. ಅರಸು ಅಲ್ಲಿದ್ದವರು ಮೋನಯ್ಯನ ಕಯ್ಯಲಿ ಮಣ್ಣು ತಗಿಸುವರೆ ಎಲ್ಲಿ ಹಾನೆ ಕರಿಯಿರಿ ಎಂದೆನಲು, ಆಗ ಅಯ್ಯ ಬರುತ ಕಟ್ಟಿಗಿ ಹಿಡಕೊಂಡು ನಿಂತು ಸಾರುತಾನೆ. ಹೊಟ್ಟೆಗೆ ಇಲ್ಲದವರ ಕೈಲೆ ಬಿಟ್ಟಿಯ ಕೊಂಡರೆ ಇಂತಹ ಪಟ್ಟದ ಅರಸನಿಗೆ ಪ್ರಳಯ ಬಂದೀತೆಂದು ಕಟ್ಟಿಗಿ ಹಿಡಿದು ಇದು

ಸಾರಬೇಕೆಂದು ಕೊಟ್ಟು ಕಳುಹಿದನು ಪ್ರಭುದೇವರು. ನಿನ್ನ ಬಿಟ್ಟಿಗೆ ಬಂದಂತಹ ಹೊಲೆಯನೆ ನಾನು, ಪಟ್ಟಗುಡಮ ನಿನಗೆ ತಿಳಿಯಲಿಲ್ಲವೆ. ನಿನ್ನ ರಾಜ್ಯದೊಳಗೆ ಆಡಿದ ಕಾಲವಿಲ್ಲ ಆಳು ಮಕ್ಕಳಿಗೆ ಪಡಿಯಿಲ್ಲವೆಂದು ಕಾಳೆ ಸಾರುತ್ತಾವೆ. ಇದರಾಗಿ ಖೂಳ ನಿನ್ನ ಬದಕು ಕಾನನದ ಬೆಳದಿಂಗಳ ಎಂಬುದನು ಅರಿಯ, ನಿನ್ನ ಹಿಂದಿನ ಸುದ್ದಿ ಮರತ್ಯಾ. ದಂಡದ ಪಾಕಿಗಳನುಂಡು ತಾನು ದಂಡಿಗಿಯನೇರಿಕೊಂಡು ಖಂಡೇದ ಕರಕ್ಕೆ ಲೋಕದ ಮಂಡರೆಂಬವರು ನೀವೀಗಲೆ ಮೋನಪ್ಪಗೆ ಬೊಗಸೆ ತುಂಬ ಕಡ್ಲೆಯ ಕೊಡು ಎಂದು ಆಡಿದನು. ಅರಸನು ಕಡ್ಲಿ ಹಿಡಿದುಕೊಂಡು ಬಂದರೆ ಕಡ್ಲೆಯ ಕುದುರಿಗೆ ಮೇಸಬೇಕು, ಗಿಳಿಗೆ ಮೇಸಬೇಕು ಚಿಕ್ಕವರಿಗೆ ಕೊಡಬೇಕು ಹಿರಿಯರು ಕಡ್ಲೆಯನು ತಿನ್ನಬಾರದು, ನಾಲ್ಕು ದುಡ್ಡು ಪಾಕಿ ಕೊಡು ಎಂದು ಕಳುಹಿದರೆ ಕೈಯಲ್ಲಿ ಕೊಟ್ಟರು, ಆಗ ಅಯ್ಯನೋಡಿ ಅರಸು ಒಲಿದರೆ ಬಡವನಿರಬೇಕು, ಅರಸು ಮುನಿದರೆ ಅವನು ಹೇಳ ಹೆಸರಿಲ್ಲದೆ ಹೋಗಬೇಕು, ನೀನೆಲ್ಲಿ ಕಟ್ಟಿಗಿ ಮಾರಿಕೊಂಡು ತಿಂಬುವರಿಗೆ ಬಿದ್ದಿದ್ಯಾ(ಹುಟ್ಟರುವಿಯೊ) ನಿನ್ನ ಅರಸುತನಕ್ಕೆ ದಾರಿದ್ರ ಬಂದೀತು ಕಾಣು.

೭೯೩

ಭಂಡಾರವನ್ನು ಧರಿಸಿ
ಅಮ್ಮನ ವಚನಾರ್ಥವನು ಕೊಂಡಾಡುತ್ತ
ಅಗ್ನಿ ಕೊಂಡವನೆ ಪೊಕ್ಕು ದೃಷ್ಟ ತಾನೆನಿಸುವ
ಖಂಡಗ ಹುಳಕನೆ ಕಾಣದ
ತುಂಡ ಮುಂಡಿಗೆ ಒಳ್ಳೆ ಭಂಡಾರ ದೊರಕುವದೆ
ಅಂಗಡಿಯೊಳಗಿನ ಅರಿಷಿಣವನ್ನೇ ತಂದು
ಗುಂಡುಗಲ್ಲಿಲಿ ಕುಟ್ಟಿ ಪುಡಿಮಾಡಿ ಧರಿಸಿಕೊಂಡು
ಎಲ್ಲ ಭಕ್ತರ ವಿಂಗಡಿಯ ಮಾಡಿ
ತುತ್ತು ಬುತ್ತಿಗೆ ಆಶೆ ಮಾಡುವ
ಮೂಕ ಮುಂಡೆಯರಿಗೆ
ಒಳ್ಳೇ ಭಂಡಾರ ದೊರಕುವುದೆ
ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ
ಆರ್ಕಸಾಲೆರ ಒಡಲೊಳು ಜನಿಸಿ
ರಕ್ಷಿಸುವ ಕರ್ತನಾಗಿ ಬಂದು
ಭಂಡಾರದ ಲಕ್ಷಣವನು ಕೇಳಲು
ಮಾತಿಗೆ ಮಾತು ಕೊಟ್ಟರೆ ಮಹಾತ್ಮರೆಂಬನು

ಮಾತಿಗೆ ಮಾತು ಕೊಡದಿದ್ದರೆ
ಹಬ್ಬದ ಹೋತ ಮಾಡಿ
ಪೋತರಾಜನ ಕೈಯಲ್ಲಿ ಕೊಟ್ಟು
ಭೂಪಾರಕ್ಕೆ ಬಲಿಯ ಹಾಕುವ ತೆರನು ಬಂತು
ಜೋಕಿಯಿಂದ ತಿಳಿದುಕೊಳ್ಳಿರಿ
ಜೋಗಿ ಗೊರವ ಒಗ್ಗಪ್ಪಗಳು
ನಿಮ್ಮ ಭಂಡಾರದ ಲಕ್ಷಣವನ್ನು, ಬಸವಣ್ಣ

ತಾತ್ಪರ್ಯ : ಜೋಗಿ ಗೊರವಪ್ಪ ಒಗ್ಗಪ್ಪಗಳ ಡಾಂಭಿಕತನವನ್ನು ವಚನ ವಿವರಿಸುತ್ತದೆ. ಎಲ್ಲಮ್ಮನ ಕೊಡ ಹೊತ್ತು ಭಂಡಾರ ಚೀಲ ಬಗಲಲ್ಲಿ ಧರಿಸಿ ಭಂಡತನದಿಂದ ಭಂಡಾರ ಹಚ್ಚುತ್ತ ತಿರುಗುವವರು ವೇಷಡಂಬಕರು. ಮನದೊಳಗಿರುವ, ಖಂಡುಗ ಹುಳುಕುಗಳನ್ನು ಕಾಣದೆ ತನ್ನ ತಪ್ಪನ್ನು ಅರಿತುಕೊಳ್ಳದ ತುಂಡುಮುಂಡೆಗೆ(ಗಂಡನಿಲ್ಲದವಳು) ಒಳ್ಳೆಯ ಭಂಡಾರ ಅಂದರೆ ಜ್ಞಾನ ಸಂಪತ್ತು ದೊರೆಯಲಾರದು. ಅಂಗಡಿಯ ಅರಿಷಿಣ ತಂದು ಗುಂಡುಕಲ್ಲಲಿ ಕುಟ್ಟಿ ಹಚ್ಚಿಕೊಂಡು ತುತ್ತುಬತ್ತಿಗಾಗಿ ತಿರುಗುವ ಜೋಗತಿಗೆ ಭಂಡಾರದ ನಿಜವಾದ ಫಲ ದೊರಕದು. ಅಕ್ಕಸಾಲೆಯರ ಹೊಟ್ಟೆಯಲಿ ಹುಟ್ಟಿದ ಮೌನಯ್ಯನು ಬಂದು ಭಂಡಾರದ ಲಕ್ಷಣವ ಕೇಳಿದಾಗ ಸರಿಯಾದ ಅರ್ಥ ಹೇಳಿದರೆ ಮಹಾತ್ಮನೆಂದು ಒಪ್ಪಿಕೊಳ್ಳುವನು. ಇರದಿದ್ದರೆ ಹಬ್ಬದ ಹೋತು ಮಾಡಿ ಪೋತರಾಜನ ಕೈಯಲ್ಲಿ ಕೊಟ್ಟು ಭೂಮಿ ಒಡೆಯ(ಶಿವ)ನಿಗೆ ಬಲಿ ಹಾಕುವನು. ಈ ಮಾತನ್ನು ಎಚ್ಚರಿಕೆಯಿಂದ ಸ್ವೀಕರಿಸಬೇಕೆಂದು ಜೋಗಿ, ಗೊರವ, ಒಗ್ಗಪ್ಪ, ಜೋಗಿತಿ ಮುಂತಾದ ವೇಷಡಂಬಕರಿಗೆ ಮೌನೇಶ್ವರರು ಹೇಳುತ್ತಾರೆ.

೭೯

ಗಂಧಾಕ್ಷತೆಯ ಧರಿಸಿ ಸಂಧ್ಯಾವಂದನೆ ಜಪತಪವ ಮಾಡುತ
ಕುಂಭಿನಿ ನರಕದೊಳು ಕುಳಿತುಕೊಂಡು
ಅಂದ ಚಂದದಿ ಮಹಾಚದುರರೆನಿಸುವ
ಹಂದಿ ಮಾನವರಿಗೆ ಒಳ್ಳೆ ಗಂಧಾಕ್ಷತೆ ದೊರಕುವುದೆ
ಇಂಜನ ಮಲೆಯೊಳಗೊಂದು ಗಂಧದ ಕೊರಡನೆ ತಂದು
ಗಂಧಾಕ್ಷತೆಯ ಮಾಡಿ ಫಣಿಯೊಳು ಕೀಸಿ ಕೀಸಿ ಧರಿಸಿಕೊಂಡ
ಮಸಣ ಮಾನವರಿಗೆ ಒಳ್ಳೆ ಗಂಧಾಕ್ಷತೆ ದೊರಕುವುದೆ
ಹಸರು ಹಳದಿ ತೊಟ್ಟು ಶಶಿಮುಖದವನು ಚೆನ್ನಬಸವಣ್ಣ ಬಂದು
ಗಂಧಾಕ್ಷತೆಯ ಕುಶಲವನು ಕೇಳಲು
ಭೇದವ ಹೇಳಿದರೆ ಅಧಿಪತಿಯಂದಪ್ಪಿಕೊಂಬುವನು

ಭೇದವ ಹೇಳದಿದ್ದರೆ ನಿಮ್ಮ ಗೂದಿ ಹಾಯ ಬಡಿದು
ಯಮನ ಬಾಧೆಗೆ ಹಾಕುವತೆರನ ಬಂತು
ಬೇಗನೆ ತಿಳಿದುಕೊಳ್ಳಿರೊ
ಗಂಧಾಕ್ಷತೆಯ ಪರಿಯನೆಲ್ಲವ, ಬಸವಣ್ಣ

ತಾತ್ಪರ್ಯ : ಹಿಂದಿನ ವಚನದ ಆಶಯವೇ ಇಲ್ಲಿ ಅಡಗಿದೆ. ಗಂಧಾಕ್ಷತೆಯ ಧರಿಸಿ ಸಂಧ್ಯಾವಂದನೆ ಮಾಡುತ್ತ ಇರುವ ಭೂಮಿಯನ್ನೇ ತಮ್ಮ ಅಜ್ಞಾನ, ಅಂಧಕ್ಕಾರ, ಮೂಢತನದಿಂದಾಗಿ ನರಕವಾಗಿಸಿಕೊಂಡು ಅಂದಚಂದದಿಂದ ಮೆರೆವ ಮಹಾಚತುರ ರೆನಿಸಿಕೊಂಬುವ ಬ್ರಾಹ್ಮಣರು ಹಂದಿಗಿಂತ ಕಡೆ. ದಟ್ಟಾರಣ್ಯದೊಳಗಿನಿಂದ ಗಂಧದ ಕೊರಡು ತಂದು ತೇದು ತೀಡಿ ತೀಡಿ ಹಣೆಯಲ್ಲಿ ಧರಿಸಿಕೊಂಡರೆ ಪ್ರಯೋಜನವಿಲ್ಲ. ಗಂಧಾಕ್ಷತೆಯನ್ನು ಕುಲ ಲಾಂಛನವಾಗಿ ಬಳಸಿದಂತೆ ಪರಿಪೂರ್ಣತ್ವದ ಗುರು ತಾಗಿಯೂ ಮೌನೇಶ್ವರರು ಬಳಸಿದ್ದಾರೆ. ಇಂತಹ ವೇಷಡಂಬಕರನ್ನು ಅಜ್ಞಾನಿಗಳನ್ನು ಪ್ರಶ್ನಿಸಲು ಶಿಕ್ಷಿಸಲು, ಹಸಿರು ಹಳದಿತೊಟ್ಟ ಚಂದ್ರಕಳೆ ಹೊಂದಿದ ಚೆನ್ನಬಸವಣ್ಣ ಬರುವನು. ಬಂದಾಗ ನಿಮ್ಮ ಹುಸಿ ವೇಶವ ಕಂಡು ಗೂದಿ ಹಾಯುವಂತೆ ಬಡಿದು ಯಮಪಾಶಕ್ಕೆ ಹಾಕುವನು. ನೀವು ಜ್ಞಾನಿಗಳೆಂದು ಕಂಡರೆ ನಿಮ್ಮನ್ನು ಸಾಧಕನೆಂದು ಒಪ್ಪಿಕೊಳ್ಳುವನು. ಜೋಕೆಯಿಂದಿರಬೇಕು ಹುಸಿ ಸಲ್ಲದು ಎನ್ನುವ ಎಚ್ಚರಿಕೆ ಇಲ್ಲಿದೆ.

೭೯೫

ವಿಭೂತಿಯ ಧರಿಸಿ ಪಂಚಾಕ್ಷರಿ ಮಂತ್ರ ಓದುತ
ಗಾದಿಯ ಮಾತು ಕಲಿತುಕೊಂಡು
ವೇದ ಶಾಸ್ತ್ರದಿ ಮಹಾಜ್ಞಾನಿ ಎನಿಸುವ
ವಾದಹೀನರಿಗೆ ಒಳ್ಳೆ ವಿಭೂತಿ ದೊರಕುವದೆ
ಕಾದ ಬೂದಿಯನೆ ತಂದು ಕಲಿಸಿ ಮುದ್ದಿಯ ಮಾಡಿ
ಬಾಜಾರದೊಳಗಿಟ್ಟು ಮಾರುವ ಆಧಾರ ಆಗಮವ ತಿಳಿಯದೆ
ನಾನು ಶಿವ ಭಕ್ತ ತಾನು ಶಿವ ಭಕ್ತ
ಸೀಮೆಯ ಮೇಲೆ ಶಿವ ಭಕ್ತರಾದರು
ಆನೆಯ ಮಹರ್ಬಲವನೇರಿ ಚೆನ್ನಬಸವಣ್ಣ ಬಂದು
ಕಾನನದೊಳು ಕರೆದೊಯ್ದು ಕೈಯನೆ ಕಟ್ಟಿ ತೂಗು ಹಾಕಿ
ಮಾನಭಂಗ ಮಾಡುವಾಗ ಜವಾಬು ಕೊಡದಿದ್ದರೆ
ನಿಮ್ಮ ಬೊಬ್ಬಿಯ ಹೇಳಲವಲ್ಲ ಜೋಕೆಯಿಂದ ತಿಳಿದುಕೊಳ್ಳಿರಿ
ವಿಭೂತಿಯ ಪಟ್ಟದವರೆಲ್ಲರೂ, ಬಸವಣ್ಣ.

ತಾತ್ಪರ್ಯ : ಇಲ್ಲಿ ವಿಭೂತಿ ಎನ್ನುವುದನ್ನು ಹಣೆಯ ಮೇಲೆ ಧರಿಸುವ ಲಾಂಛನವಾಗಿ ಬಳಸಿದಂತೆ ವಿಭೂತಿ ಪುರುಷ, ಅಂದರೆ ಜ್ಞಾನಿ, ತಿಳಿದವ, ಪಂಡಿತ ಎನ್ನುವ ಅರ್ಥದಂತೆಯೂ ಮೌನೇಶ್ವರರು ಬಳಸಿದ್ದಾರೆ. ವಿಭೂತಿ ಅಂದರೆ ಲಾಂಛನ ಮತ್ತು ಜ್ಞಾನ ತೋರಿಕೆಯದಾಗಬಾರದು. ಕಪಟತನವನ್ನು ಬಿಂಬಿಸಬಾರದು. ಗಿಳಿಪಾಠ ದಂತೆ ಕಲಿತಜ್ಞಾನ ಅಂಧಾನುಕರಣೆಯ ಆಚರಣೆಗಳು ಮನುಷ್ಯನನ್ನು ಪರಿಪೂರ್ಣ ವಾಗಿಸಲಾರವು. ಪರಿಪೂರ್ಣತ್ವ ಎನ್ನುವುದು ನಿಜ ಸಾಧನೆಯಿಂದ ಸ್ವಾನುಭವದಿಂದ ದಕ್ಕುವಂಥದ್ದು. ಇಂತಹ ಅರೆಸಾಧಕರನ್ನು ಪರೀಕ್ಷಿಸಲು ಆನೇ ಮಾರ್ಬಲವನ್ನೇರಿ ಬರುವ ಚೆನ್ನಬಸವಣ್ಣನು ದಟ್ಟಾರಣ್ಯದಲ್ಲಿ ಕರದೊಯ್ದು ಕೈಕಟ್ಟಿ ಗಿಡಕ್ಕೆ ತೂಗುಹಾಕಿ ಮಾನ ಕಳೆಯುವನು, ಶಿಕ್ಷಿಸುವನು. ಒಣವಾದ ತರ್ಕ ಸರಣಿಯ ಬೊಬ್ಬೆಗಿಂತ ಆತ್ಮಜ್ಞಾನ ಪರಿಪೂರ್ಣತ್ವವನ್ನು ಕೊಡುತ್ತದೆ. ಹೀಗಾಗಿ ವಿಭೂತಿ ಪುರುಷರೆಂದು ಬೊಬ್ಬೆ ಹೊಡೆಯುವ ಶುಷ್ಕ ಬುದ್ಧಿ ಜೀವಿಗಳು ಎಚ್ಚರವಾಗಿರಬೇಕೆನ್ನುವುದು ಇಲ್ಲಿನ ಅರ್ಥ.

೭೯೬

ಬಿಜ್ಜಳನ ಕೂಡ ಸಜ್ಜತನವ್ಯಾಕೆ ದುರ್ಜನತನವ್ಯಾಕೆ
ಕಲ್ಯಾಣದ ಹೆಜ್ಜೆ ಬಂದೈತೆ ಪರಾಮರಿಕೆ
ಅರ್ಥಕ್ಕೆ ಪ್ರಾಣಕ್ಕೆ ಕರ್ತರು ಬರುತಾರೆ
ಮರತಿರಬ್ಯಾಡಿ ಮನದೊಳಗೆ
ದುರಿತ ದೋಷದೊಳು ದೊಡ್ಡವನಾಗಬೇಕೆಂದರೆ
ನಮ್ಮ ಕಂಡದ್ದೆ ಕೂನ ಗುರುತ
ನಿಮ್ಮ ನುಡಿಗೆ ಶರಣಾರ್ಥಿ, ಬಸವಣ್ಣ

ತಾತ್ಪರ್ಯ : ರಾಜರೊಂದಿಗೆ ಗೆಳೆತನವು ಬೇಡ ಹಗೆತನವೂ ಬೇಡ, ಶರಣರಾದವರಿಗೆ ಕಲ್ಯಾಣದಿಂದ ಹೊಸ ದಾರಿ ಮೂಡಿ ಹಣ ಮತ್ತು ಪ್ರಾಣಕ್ಕೆ ಲೆಕ್ಕ ಕೇಳುವವರು ಬರುತಾರೆ. ಮೈಮರೆಯ ಬೇಡಿ, ಮನದೊಳಗೆ ಎಚ್ಚರವ ಹಿಡಿಯಿರಿ. ದುರಿತ ದೋಷಗಳ ಮೀರಿ ಸಾಧಕರಾಗಬೇಕೆಂದರೆ ನಮ್ಮ ಕೂನ ಗುರುತ ಅರಿತು ಅರ್ಥ ಮಾಡಿಕೊಳ್ಳಿರಿ ಜಾಗೃತರಾಗಿರಿ.

೧೦

ಐಕ್ಯಸ್ಥಲದ ವಚನ

ಓಂ ಪರಮ ಗುರು ನಿರಂಜನ ನಿರಾಕಾರ
ಪರಂಜ್ಯೋತಿ ಜಗದ್ಗುರು ರಾಜಾಧಿರಾಜ ಮಹಾರಾಜ
ಪರಬ್ರಹ್ಮ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ
ಶ್ರೀ ಪರಶಿವ ವಿಶ್ವಬ್ರಹ್ಮ ಸರ್ವಜ್ಞ ನಿರಂಜನ ಉದ್ಭವಮಸ್ತು
ಶ್ರೀಮತ್ತತಿಹಸ್ತ ದೇವತಾಲೋಕ ವಿಸ್ತಾರಕ ತ್ರಿಭುವನ ನಿರ್ಮಿತಾಕಾರ
ಶ್ರೀಪರಂಜ್ಯೋತಿ ಅಲಂಕಾರ ಅನಂತವೇದ ಶಬ್ದ ಶಾಸ್ತ್ರ ಪುರಾಣ
ಪಾರಾವಾರ ಗಂಭೀರ ಧೀರ ಧೀರೋದ್ಧರಣ ಜಗತ್ ಹಿತಕಾರಣ
ತ್ರೈಲೋಕ್ಯ ನಿರ್ಮಿತಾಧಾರ ಅಂಡಜ ಪಿಂಡಜ ಸ್ವೇದಜ ಉದ್ಭಿಜ ನಿರ್ಮಿತ
ಅತಳ ವಿತಳ ಸುತಳ ಮಹೀತಳ ಸ್ಥಳಾಸ್ಥಳ ಮಹಾಸ್ಥಳ
ಪಾತಳ ಭೂಲೋಕ ಭುವರ್ಲೋಕ ಸುರಲೋಕ ಜನಲೋಕ
ಮಹರ್ಲೋಕ ತಪಃಲೋಕ ಸತ್ಯಲೋಕ
ಈ ಚತುರ್ದಶ ಭುವನ ನಿರ್ಮಿತಾಧಾರ

ಪೃಥ್ವಿ ಆಪ್ ತೇಜ ವಾಯು ಆಕಾಶ ಪಂಚಭೂತ
ಬ್ರಹ್ಮಾಂಡ ನಿರ್ಮಿತ ಸ್ಥಾಪನಾಚಾರ್ಯ ಶ್ರೀ ಪರಶಿವ ವಿಶ್ವಬ್ರಹ್ಮ
ಪಟ್ಟದ ಮೋನಯ್ಯ ವೀರಬಸಂತರಾಯ ಜಗದ್ಗುರು
ರಾಜಾಧಿರಾಜ ಶ್ರೀ ಓಂಕಾರ ಗುರುವೇ ನಮಃ॥

ಮನು ಮಯ ತ್ವಷ್ಟ ಶಿಲ್ಪ ವಿಶ್ವಜ್ಞ
ಏಹೋ ಪಾಚೋ ಪೈಗಂಬರ ಮಲ್ಕು ಸುಲ್ತಾನ

ಮನು ಕಾ ಘರ್ ಲಂಕಾ ಮಯಾ ಕಾ ಘರ್ ದ್ವಾರಕಾ
ತ್ವಷ್ಟೃಕಾ ಘರ್ ಕಾಶಿ ಶಿಲ್ಪಿಕಾ ಘರ್ ಅಮರಾವತಿ
ವಿಶ್ವಜ್ಞ ಕಾ ಘರ್ ಮೇರು ಚಕ್ರಾವತಿ॥

ಅವಲ್ ಆಯಾಕಾ ಇಬ್ರಾಹಿಂ ಘರ್ ದಾವತ ಪೈಗಂಬರುಲ್ವ ಹಕೀಮ ಘರ್
ದಾವತ ಪೈಗಂಬರ ಬಡಾ ಮೂಸಾ ದಾವತ ಪೈಗಂಬರಕಾ ಸಾರಾ
ಸುಲೇಮಾನ ದಾವತಿ ಪೈಗಂಬರ ಸಂಗತರಾಸ ಜಗದ್ಗುರು ದಾವತ ಪೈಗಂಬರ
ಸುನಾರ ಏಹೋ ಈ ಪಾಚೋ ಪೈಗಂಬರ
ಮಿಲ್ಕರವಕಮೌನ ಹಕೀಮ ವೋಯಿ ಆಯಾ
ಏ ವೋಹಿ ಹಿಂದು ವೋಹಿ ಮುಸಲ್ಮಾನ ಏಹೋ ಪಾಚೋ ಪೈಗಂಬರ
ಮೌನದೀನ್॥

ಓಂಕಾರ ಪರಬ್ರಹ್ಮ ಜಗದ್ಗುರು ದೇವದುರ್ಗಕ್ಕೆ
ಪ್ರಭು ಬರುವುದೇ ಸಹಜ
ಸಾಹೇಬರ ಸಭೆಯವರು ತಿಳಿದಿರಬೇಕು
ಹಾವಳಿ ಬರುವದನರಿದು ಕಾಯ್ದಾತನೆ ಜಗದಕರ್ತ

ಅಲ್ಲಮ ಪ್ರಭುವಿನ ಸೊಲ್ಲೆಲ ಒಂದೆ
ಅಲ್ಲ ಅಹುದೆನಿಸಲಿಲ್ಲ ಧರ್ಮಕ್ಕೆ
ಮುಲ್ಲಾ ಮಹಮ್ಮದನಾಗಿ ಬರುತ್ತಾನೆ ಆವಾಗ
ದಿಲ್ಲಿ ಮಸೂದಿ ನಿಜ ಪಟ್ಟಾ॥

ಮಕಾರವೇ ಮುಡದಾರ ಲೆಕ್ಕಕ್ಕೆ ಹಲಾಲ
ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ
ಅರ್ಕಸಾಲೆರ ಒಡಲೊಳಗೆ ಜನಿಸಿ
ರಕ್ಷಿಸುವ ಕರ್ತನಾಗಿ ಬರುತ್ತಾನೆ॥

ಕರ್ತರಿಗೆ ಒಕ್ಕಲಾದವರು ಉಳಿದಾರು
ಸೊಕ್ಕಿದವರು ಅಳಿದಾರು ಕಕ್ಕಯ್ಯ ನಾಣೆ
ಸಟೆಯಲ್ಲ ಕೇಳಲಿಕ್ಕೂ ಕೇಳದವರಿಗೆ
ಮಿಗೆ ಮೀರಿದವರಿಗೆ ಮೀರಾ ಸಾಹೇಬರ ಆಜ್ಞೆ॥

ಹತ್ತು ಕೇಳಬೇಕು ತತ್ತ್ವ ತಿಳಿಯಬೇಕು
ದುಃಶ್ಚಿಂತೆ ಹಿಡಿಯಬೇಡಿರಿ ನಿಶ್ಚಿಂತೆ ಹಿಡಿಯಿರಿ

ಆಕಾರವು ಗುರುವಲ್ಲ ನಿರಾಕಾರವೇ ಗುರು
ಗುರುವಿನ ಗುರು ಪರಮಗುರು ಫಕೀರ ಪ್ರಧಾನಿ
ಸೈಯ್ಯದ ಖಾಜಿ ಮೌನದೀನ ಅಮೀನಖಾಜಿ ಮೌನದೀನ॥

ಅವಲ್ಹಾದಿ ಆತ್ಮನಬಿ ಮಹಾನಬಿ ಸಬಿ ರುಹು
ಇಸನ್ನಬಿ ಸಹನ್ನಬಿ ರಸೂಲಿಲ್ಲಾ ಅಲ್ಲಾನಬಿ ಲಾ ಇಲ್ಲಲ್ಲಾ
ಕಲ್ಲಿಮುಲ್ಲಾ ಮುಸನ್ನಬಿ ಮಹಮ್ಮದ ಕಾತ್ಮನಬಿ
ಆವಲ ಮೌನದೀನ ಆವಲದೀನ
ಅಕ್ಕೈರದೀನ ಬಕ್ಕೈರದಿನ॥
ದೀನ ದೀನ ಮೊಹಮ್ಮದ ಸರ್ವ ಜಿತಾಪೀರ ಮೌನದೀನ
ಹಮೇಷಾ ಡಂಕಾ ಬಜಾದಾವುದವಲ್ ಪೈಗಂಬರ
ಸುಲೇಮಾನ ಫೈಗಂಬರ ಈಸಾ ಪೈಗಂಬರ. ಮೂಸೆ ಫೈಗಂಬರ್
ಸರ್ವರ ಫೈಗಂಬರು ಕಲಿಂದರ ಬಾದಶಾಹ
ಆಕಾಶವೇ ಡಂಕಾ ಕೈಲಾಸವೇ ವಲಿ
ಸೂರ್ಯ ಚಂದ್ರಾದಿಗಳು ತಮ್ಮ ಆಲಯಕ್ಕೆ ಬಂದವರು॥

ಅಲ್ಲಮಪ್ರಭು ಆಗಮದರಸು ಚೆನ್ನಬಸವಣ್ಣ ಕನ್ನಡಿಯ ಜಾಣ
ಕಲಿಯುಗಕೆ ಗುರು ಮನ್ನಣೆಯ ಮಹಾತ್ಮೆ
ಮನಸುಖರಾಯ ಮಡಿವಾಳಯ್ಯ ಮಕ್ಕಳೊಂದಿಗ ಮಾಧವಹರಿ॥

ಈ ಲೋಕದ ಹೊಂಕಳ ಕೊಯ್ದ ಕುಡುಗೋಲು
ಲೆಕ್ಕದ ಬಾಬಯ್ಯನೆ ಲೇಸುಳ್ಳ ದೊರೆಯ
ಆಸೆಗಾರನ ಗಂಡ ಮೋಸಗಾರನ ಮಿಂಡ
ದೂಷಕರ ಗಂಡ ದುರ್ಜನರ ಮಿಂಡ
ಭಾಷೆ ಪಾಲಿಪದೇವ ಭಕ್ತರಿಗೆ ಸಂಜೀವ
ಶ್ರೇಷ್ಠ ಪ್ರಸಾದಿ ಸೇವಕರ ದೇವ
ದಾನ ಉದಾಸಿ ದೋಷ ಪರಿಹಾರ
ಕಾಶೀಪತಿ ಕನಕನಾಥ ಗುಪ್ತಶೀಲ ಗುಣಮಣಿ
ನಿತ್ಯ ಸಂಧ್ಯಾವಂದನೆ ವಿಶ್ವಕುಂಟುಂಬಿ
ವಿರೂಪಾಕ್ಷದೇವರ ಪಾದವೇ ಗತಿ॥

ಪರಮ ಗುರುವಿನ ಪ್ರಸಾದವೇ ಗತಿ
ಪಾಪ ವಿನಾಶ ಪ್ರತಿಷ್ಠಾಪನಾಚಾರ್ಯರು ರೂಪವ ತೋರುವರು
ಪ್ರಾಣಲಿಂಗಾಂಗಿಗಳ ಪರಿವಾರಕ್ಕೆ ಶರಣು
ಸಾಧನವುಳ್ಳವರಿಗೆ ಶರಣು, ಸದ್ಭಕ್ತರಿಗೆ ಬಾಲಕನು
ಇಟ್ಟಂಥಾ ಆಡದಾಸು ಹತ್ತು ಕೇಳಬೇಕು
ಹರುಷವ ಮಾಡಬೇಕು ಪರುಷವ ಪಡೆಯಬೇಕು
ಘಾತಕತನವ ಬಿಡಬೇಕು ನೀತಿಯ ಹಿಡಿಯಬೇಕು
ನಿರ್ಮಳವ ಮಾಡಬೇಕು ಮಾತಿನ ಮಾಲೆಯ ಬಿಡಬೇಕು
ಮಹಾತ್ಮರ ಕೂಡಬೇಕು
ಹಡೆದ ಮಕ್ಕಳಿಗೆಲ್ಲ ಎಡಗಣ್ಣು ಬಲಗಣ್ಣು
ನಡೆ ನುಡಿ ನೋಡಿ ನಡೆಸಿಕೊಂಬುವದು
ಸಡಗರ ಸಂಪತ್ತು ಒಡೆವಿಯಲ್ಲ ಒಂದೆ
ಒಡಗೂಡಿಕೊಂಬುವದು ಒಡೆಯನಬೇಡಿ
ಬಡವನ ಬಿನ್ನಹ ಕೇಳಿ ಬದುಕಿ ಬಾಹತ್ವಕ್ಕೆ(?) ಶರಣು॥

ಅನುಭಾವಿಗಳಿಗೆ ಮೋಹ ಮತ್ಸರ ಸಲ್ಲದು
ಎಚ್ಚರ ತಪ್ಪಿದರೆ ಯಮನಿಗೆ ಈಡಾಗುವರು
ಸತ್ಯವು ಪಾರಂಪತ್ಯ ಸಮರಂತ(?) ಸಲ್ಲದು
ಉತ್ತಮರ ನೋಡಿಸಲಾಗದು॥

ದೇವರು ರಾಯರು ಪಂಚೈವರು
ಅರದೇಶಿ ಪರದೇಶಿ ಜೋಗಿ ಜಂಗಮ
ಮುಲ್ಲಾ ಖಾಜಿ ಊರಗೌಡ ಸರನಾಡಗೌಡ
ಶಾನಭಾಗ ಖಾಸನೀಸ ಸಬೀ ಟೂಟಕರನಾ॥

ಆಲಿ ಮುಲ್ಕ ಸುಲ್ತಾನ ಆದ್ಮಿ ಕಾ ಹಾತ ಪಕಡ್ನಾ
ಕೌಲಚಲನಾ ಮುಲ್ಕ ಛಪ್ಪನ್ನ ರಾಜನ್ ಪೋಟದೇಣಾ
ಕರ್ಮಕಂಟಕ ದೂರ ಹೋಣಾ॥

ಹಾಥಿ ಪರಡಾಲೆ ಚಲನಾ ಖಾಜಿ ಅಮೀನದೀನ
ಹಿಂದೂ ವಲಿ ಆತಹೈ ರಸುಲಿಲ್ಲಾ ಮೊರೆಕಮಚಿ
ಧೋಡೆ ಕುಪರ ಮೌನದೀನ ಅಲೇವ್ ಸಲಾಮ॥

ನೀವು ಮಾಡಿದ ಫಲದಿಂದ ಕಳಕೊಳ್ಳಬೇಡಿರಿ
ಉಕ್ಕು ತಿಳಿದರೆ ತಿಳಿವದು ಉದಕ ತಿಳಿದರೆ ತಿಳಿವದು
ಕಳವಳ ಸಲ್ಲದು ಸರ್ವರು ನಿಬ್ಬೆರಗಾಗಬೇಡಿರಿ
ಒಬ್ಬರು ಹೇಳಿದರೆ ಕೇಳಬೇಕು ಒಬ್ಬುಳಿಯಾಗಿ ನಡೆಯಬೇಕು
ನಡೆ ನುಡಿಯಲ್ಲಿ ಇಷ್ಟರನ್ನು ವಾಯಿಯಲ್ಲಿ
ಇಷ್ಟರ ಅನುಬಂಧಿಕೆಯಲ್ಲಿ ಬಹು ಬಂಧನವ ಮಾಡಿಕೊಳ್ಳಬೇಡಿರಿ
ಬಾಧೆಯೊಳಗೆ ಬೀಳಬೇಡಿರಿ ಆಕ್ಷೇಪ ಅಲ್ಲಮ ಪ್ರಭುವಿನಾಜ್ಞೆ.

ಪ್ರಧಾನಿ ಪಾಶ್ಚಾನ ಕೌಲು. ಆಕಾಶವೇ ಡಂಕಣಿ ಕೈಲಾಸ ಅಲ್ಲಿ
ಸೂರ್ಯ ಚಂದ್ರಾದಿಗಳು ಮನು ಮುನಿ ಆದಿಗಳು ತಮ್ಮ
ಆಯಕ್ಕೆ ಬಂದವರೆ ರಾಯರು ಕೊಟ್ಟ ವಾಕ್ಯವ ತಪ್ಪಬಾರದು
ಕೌಲು ಒರಸಿ ಕೌಲು ನಡೆಯಲಿಲ್ಲ ನಡೆಗೆಡಬೇಡಿರಿ
ಒಡೆಯ ಕೌಲು ಎಂದು ಒಡಲೊಳಗೆ ಎಚ್ಚರವಾಗಿರಲಿ
ಮಾತಿನ ಮಾಲೆಯೆಂದು ಮನದೊಳಗೆ ಉದಾಶೀನವ ಮಾಡಬೇಡಿರಿ
ಕಾಲಾನುಕಾಲ ದೇಶಾನುದೇಶ ದೇಶಿಗರೆಲ್ಲ ದೇವರೆಂದು ಕಾಣಬೇಕು
ದೇಹ ಪ್ರಾಣ ಕೊಡಬೇಕು ಕೊಟ್ಟದ್ದು ಅಲ್ಲ ಅಹುದೆಂದು
ನಿರ್ಣಯ ಕೇಳಿ ಪ್ರಜಾಪಾಲಿಪನೆ ರಾಜರು ಸರನಾಡಿಗರು
ಸಮಸ್ತ ಕೀಲಿ ಕೈಕೊಟ್ಟಂಥ ಕೋರಭಾವ
ವಿಚಾರಣೆಕೊಂಬ ಅರಸು, ರಾಯರು ದೇವರು
ಪಾಶ್ಚಾರು ಸಬ್ ಲೂಟ ಹುವಾ
ಆತ್ಮಲಿಂಗ ಅನುಭಾವಿಕ ಅರುವಿನ ಲಿಂಗ ಆದಿಮೂರ್ತಿ
ಪಾಕಿದೊಡ್ಡದಲ್ಲ ಪರಾಮರಿಕೆ ದೊಡ್ಡದು

ಮಕಾರವೇ ಮುಡದಾರ ಲೆಕ್ಕಕ್ಕೆ ಹಲಾಲ
ಪಟುಗಳಿಗೆ ಪರ್ವತ ಕುಟಿಲಗಳಿಗೆ ಕುಭೃತ್ಯ
ಕುರುಡರಿಗೆ ತರ್ಕ ಹುಡುಗರಿಗೆ ಮೂರ್ಖ
ಅದರಿಂದ ಅಲ್ಲಮಪ್ರಭುವಿನ ಆಜ್ಞೆ
ಪುರಾತನರ ಮಕ್ಕಳಾದವರು ಕಿರಾತಕರ ಮಕ್ಕಳಾಗಬೇಡಿ
ಕಾಗೀ ಕುಲಕ್ಕೆ ಕಪಟವು ಬೇಡ
ಕಾಳೇಶ್ವರ ಲಿಂಗವೇ ಕರುಣವಾಗು ನಿರಂಜನ ಪ್ರಭು
ಓಂ ಪ್ರಥಮತಃ ಪ್ರತಿಷ್ಠಾಪನಾಚಾರ್ಯರು ಪರಮ

ವೈಶ್ಯಾನರರು ಪ್ರಸಿದ್ಧವುಳ್ಳ ಯೋಗ್ಯರು
ಮುಕ್ತಿಯ ಭಾಗವಂತರು ಮೂಜಗದ ಕರ್ತರು
ಸ್ವಾಮಿಗೆ ಸ್ವತಂತ್ರವೆಲ್ಲವು ಭೂಮಿ ಪಾಲಿಪರು
ಬುದ್ಧಿ ವಿಧಾನರು ತಾಮಸವಳಿದವರು
ತತ್ವ ವಿಧಾನವುಳ್ಳವರು ತಾವೇ ಪ್ರಸಿದ್ಧರು
ಗುರುವಿನ ಮರೆಯಲಿಬೇಡಿ ಗರ್ವದಲ್ಲಿರಬೇಡಿ
ಸರ್ವರ ಕೂಡ ಹಗೆತನ ಬೇಡ
ಅನುದಿನ ಸತ್ಯವ ಬಿಡಬೇಡಿ
ಪರಾಮರಿಕೆಯುಳ್ಳರೆ ಪರಮಾತ್ಮ ತನ್ನವನಾದ
ಮರವು ಇಲ್ಲದಂತೆ ಇರುವುದು ಲೋಕಕೆ
ಹೊರೆಯಾಗದಂತೆ ನಡೆವದು ಸ್ಥಿರಮಂತ್ರ
ಗುಣಾಚಾರ್ಯ ತಿರುಮಲ್ಲೇಶ ತಿಳಿದು ನೋಡುವದು

ತೀರ್ಥದೆಡೆ ಹರಳಯ್ಯನದು ಪ್ರಸಾದದೆಡೆ ಕಕ್ಕಯ್ಯನದು
ಭಕ್ತಿಯೆಡೆ ಬಸವಯ್ಯನದು ಲಿಂಗದೆಡೆ ನೀಲಮ್ಮನದು
ಜಂಗಮದೆಡೆ ಮಡಿವಾಳನದು ಕೀರ್ತಿಯೆಡೆ ಕಿನ್ನರಯ್ಯನದು
ಘನದೆಡೆ ಘಟಿವಾಳಯ್ಯನದು ಶಬ್ದದೆಡೆ ಸಂಗಯ್ಯನದು
ಇಂತಿವರ ಕಂಡಾತನೇ ಶರಣ ಅಲ್ಲವೆಂದಾತನೇ ಅಪರಾಧಿ
ಪುರಾತನರ ಮಕ್ಕಳಾದ ಮೇಲೆ ಕಿರಾತಕರ ಮಕ್ಕಳಾಗಬೇಡಿ
ಕರ್ತನ ಮಾತು ಕಳೆಯಬೇಡಿ ಕಡಿಮೆಯಿದ್ದದ್ದು ಹಿಡಿಯಬೇಡಿ
ಕಾಳೇಶ್ವರ ಲಿಂಗವೇ ಕರುಣವಾಗು ಮೌನೇಶ್ವರಗೆ

ಶಕ್ತಿಗೆ ಸಾಧನ ಯುಕ್ತಿಗೆ ಮೋಹನ
ಭಕ್ತಿಗೆ ಸಂಪನ್ನ ವಿಶ್ವಕುಟುಂಬಿ
ವೀರಭದ್ರನಾಜ್ಞೆ ಆಚಾರ ವಿಚಾರ ನಿಶ್ಚೈಯಿಸಿಕೊಳ್ಳುವಾತನೆ
ತಾನೇ ತಾನಾದ ಮೇಲೆ ಜಪ ತಪ ಹಾನಿ ಹೀನ ಬಯಸಬೇಡ
ಆನೆ ಏರಿದ ಮೇಲೆ ಅನ್ಯಾಯದ ಕಾನನ ಹೊಗಬೇಡಿ
ಕಾಳೇಶ್ವರಲಿಂಗ ಜ್ಞಾನ ಜ್ಯೋತಿಗೆ ಗೆಲುವು ದೋರುವುದು

ಧರ್ಮ ಗುರುವು ದಾರಿಯ ತೋರುವ
ಪರಮ ಗುರುವು ಪದವಿಯ ತೋರುವ

ಕರ್ಮಗುರುವು ಕಷ್ಟವ ತೋರುವ
ಮರ್ಮಗುರುವು ವಸ್ತುವ ತೋರುವ

ಇಂತಿವರ ಕಂಡಾತನೇ ಖಾಜಿ
ಕಾಣದಾತನೇ ಪಾಜಿ ತೋರಿದಾತನೆ ಸಾಜಿ
ಖಾಜಿ ಅಯ್ಯ ಫಾಜಿ ದೂರಕಾಣಾ

ಹಿತಕ್ಕೆ ಬಂದವರು ಹಿರಿಯರು
ಹೀನತನಕ್ಕೆ ಬಂದವರು ಕಿರಿಯರು
ಹೇನು ಶೀರು ಸರಿಯೆಂದ ಆನಂದಮೂರ್ತಿಗೆ
ಆಚರಿಸಿದಾತನೆ ಶರಣ ನೀಚರ ಎದೆ ತಲ್ಲಣ
ಸ್ವಯಂಭು ವಿಶ್ವಕರ್ಮ

ಭಕ್ತರ ಮೇಲೆ ವಿಚಾರವಿರಲಯ್ಯ
ಆತ್ಮದೊಳಗಣ ಲಿಂಗ ಅರುಹಿನ ದೊರೆಯೆ
ರುದ್ರಗಣಂಗಳಲ್ಲಿ ರುದ್ರಾಚಾರ್ಯರು
ಭದ್ರಗಣಂಗಳಲ್ಲಿ ಭದ್ರಾಚಾರ್ಯರು
ದೇವಗಣಂಗಳಲ್ಲಿ ದೇವಬ್ರಾಹ್ಮಣರು
ಮೂರೆಳೆಯ ಜನಿವಾರ ಮೂರು ಹೊತ್ತಿನ ಜಳಕ
ವೀರಶೈವ ಮಾರ್ಗ, ವಿಶ್ವಬ್ರಹ್ಮಕುಲದೀಕ್ಷೆ ಮೋಕ್ಷ ದಿವಾಕರ
ಸಾಕ್ಷಾತ್ ಸಂಜೀವನ ಸಪ್ತಲೋಕದಾಧಾರ

ಸಾಕ್ಷಾತ್ ಗುರು ಲೋಕಾಚಾರ್ಯ
ಸನ್ಮತ ಸಂಪೂರ್ಣ ಮನ್ಮಥ ಕೋಲಾಹಲ
ಜನ್ಮ ಜನ್ಮ ನಿವಾರಣ ಜಾತಿಸಂಗಮ ನೀತಿಜಂಗಮ
ಸೂತಕನಾಸ್ತಿ ಸುವರ್ಣ ಗೋತ್ರದಾತ ದಯಾಪರ
ಜ್ಯೋತಿ ಪ್ರಕಾಶ ಜೋಕುಳಲಿಂಗ

ಕಾಕು ಮಾತುಗಳನೊಪ್ಪ ಕರ್ಮ ನಿವಾರಣೆ
ಮುಖ್ಯ ದೈವಕೆಲ್ಲ ಮುಕ್ತಿ ಫಲದಾಯಕ
ಏಕಾಂಗ ಧೀರ ಎಲ್ಲದೇವರಿಗೆ ದೇವ ಅಲ್ಲಮನೆ ಅರಸು
ಅಡ್ಡಮಾತುಗಳ ಸಲ್ಲ ಧರ್ಮ ಗುರುವಿನ ದಾರಿ

ಧಾತುಗಳ ವೈರಾಗ್ಯ ಸುಖವ ತೋರುವದು
ಚಾತುರ್ಯತನವ ಕೆಡಿಸುವದು
ಚತುರಗುಣ ಚಪಳಂಗವಾಕಾರ ತೋರುವದು
ಕಪಿ ಮಾಡಿ ಕುಣಿಸುವದು ಸಜ್ಜನ ಸದಾಚಾರಣೆಗೆ
ಸನ್ಮತಾಚಾರ್ಯ ಸಂಗಯ್ಯ

ಸಂಗಯ್ಯ ಸಾಕಾರ ಭಾಗ್ಯದ ನಿಧಿಯೆ
ಭವರೋಗ ವೈದ್ಯ ದೋಷ ನಿವಾರಣೆ
ದೊರೆಗಳಿಗೆ ದಾತ ವಿಶ್ವಕರ್ತ ವಿಶ್ವರೂಪ
ಅನೇಕ ಮುಕ್ತಿ ಸಂಜೀವ

ಅರಿಕೆ ಅರಿತು ನಡೆಯಬೇಕು ಲೆಕ್ಕವನೊಪ್ಪಿಸಬೇಕು
ಒಡೆಯನೊಬ್ಬನಾದ ಮೇಲೆ ಹೊಡೆದಾಟ ಸಲ್ಲದು
ಆತ ಒಬ್ಬರಾಶ್ರಿತನೂ ಅಲ್ಲ
ಕಡಿಮೆಯಾದದ್ದು ಹಿಡಿಯಬೇಡಿ
ಕರ್ತೃ ಅಲ್ಲಮಪ್ರಭುದೇವರು ನಡೆನುಡಿಗಳ ಶರಣ

ನಂಬು ನಂಬು ಸೂಜಿ ಹಿಂದಿನ ದಾರದಂತೆ
ವಾಜಿಯಲ್ಲಿರಬೇಕು ಬಾಜಿಗಾರಿಕೆ ಸಲ್ಲ
ಬದ್ಧದಲ್ಲಿರಬೇಕು ಹತ್ತಕ್ಕನೊಪ್ಪ ಹರನಿಗೆ ಒಪ್ಪ
ಉತ್ತಮ ಹಿಡಿವ ಉಚ್ಛಿಷ್ಟ ಬಿಡುವ
ತತ್ವ ಸುಜ್ಞಾನಿ ತಾರಕಬ್ರಹ್ಮ

ಮೂರ್ಖತ್ವಕ್ಕೆ ಬಂದವರು ಮಕ್ಕಳಲ್ಲ
ಹುಡಿಯನಾಡಿದವರು ಶಿಷ್ಯರಲ್ಲ
ಸಭೆಗೆ ತಪ್ಪಿದವರು ಶರಣರಲ್ಲ
ಕುಲಕಂಟಕದವರು ಕುಲವಲ್ಲ
ಮದ ಮತ್ಸರದವನು ಮಗನಲ್ಲ

ಹಿತದಿಂದ ನಡೆವದು ಹಿರಿತನ ಪಡೆವದು
ಅತಿ ಪುಣ್ಯ ಕೊಡುವನು ಆದಿಸಂಗಯ್ಯ
ಅರಿತವರಿಗೆ ಅರುವು ಮರೆತವರಿಗೆ ಮರವು

ಮೇಲೆ ಗುರುವು ತಂದೆಯ ಕರುಣ
ದಡ್ಡನಾದವರ ನೊಲ್ಲ ಪುಂಡಕಾಯಕದವನೊಲ್ಲ ಪುಣ್ಯನಿರ್ಮಳ
ಭಂಡ ಮಾನವರನೊಪ್ಪ ಭಕ್ತಿಗೆ ಪರಿಪೂರ್ಣ
ಚಾಡಿಯವರ ಮಾತು ಕೇಳನು ಕೋವಿದ ಅರಸು
ತುಂಡ ಮೂಳರನೊಪ್ಪ ಮೋಹನದೇವ

ಪಾಂಡುರಂಗ ವಿಠ್ಠಲ ಪರಮಗುರು ತಾನೆ
ಸಹಜ ಬೀಜವ ಕೊಟ್ಟು ವಾಜ ಒಕ್ಕಲು ಹೊರೆಯಾದವರು
ಸಹಜದಲ್ಲಿದ್ದರೆ ಈ ಜಗವೆಲ್ಲ ಯಾಕೆ ಕೆಟ್ಟೀತು ಹೇಳು ಬಸವಣ್ಣ

ಬಾಜಿಗಾರಿಕೆ ಬಿಡ ಹೇಳಿದ
ಧರ್ಮದ ಖಾಜಿ ಕೊಟ್ಟಂಥ ಅಭಯಹಸ್ತ
ಸ್ವಾಮಿ ಮಜಾರಕ್ಕೆ ಕರ್ತ ಸದರಿಗೆ ಸಾಹೇಬ
ಭೂಲೋಕದ ಒಡೆಯ ತೆತ್ತೀಸಕೋಟಿ ದೇವರ್ಕಳ ಒಡೆಯ
ಆತ್ಮದೊಳಗಣ ಲಿಂಗ ಅರುಹಿನ ದೊರೆಯ
ಸ್ವಯಂಭು ವಿಶ್ವಕರ್ಮ, ದೇವರಿಗೆ ದೇವ ಶಿಖಾಮಣಿಯೆ

ಆದಿ ಅಲ್ಲಮ ಧೀರಗಣ ತಿಂತಿಣಿ
ಸ್ವಯಂಭು ವಿಶ್ವಕರ್ತ, ಓ ಜಗದ್ಗುರು
ಚೆನ್ನಬಸವೇಶ್ವರ ದೇವರು
ಓಂಕಾರ ಪರಬ್ರಹ್ಮ ನಮಸ್ತೆ ನಮಃ॥

ಈತ ಹಿಂದು ಮುಸಲ್ಮಾನ ಹೋತೆ
ಬಾತಕರೇತೋ ಶಂಭು ಸಮತೆ ಹೋತೆ
ಪುತ್ರ ಪೂಜೆ ತೊ ಖ್ಯಾಲ(ಬ್ಯಾಲ) ಕಡೆಗಾಗಿ ಗಮ್ಮಾತ
ಪಂಚಮುಖ ಪರಮಾತ್ಮ ಹೋತೆ॥

ಹಿಂದು ತುರುಕರು ಒಂದಾಗಿ ನಡೆದಾರು
ದೀನದಾರ ಚೆನ್ನಬಸವಣ್ಣ ಬರುವಾಗ ಲೋಕದ
ಅಂಧಕರಿಗೇನೂ ತಿಳಿಯದು
ಮೂಸ್ಯಾ ಅಲ್ಲಮ ಮೂಸ್ಯಾ ಪೂಜೆ ಅಲ್ಲ॥

ಮೂಸೆ ಪೈಗಂಬರ ಪಾಷಾಣವನೊಡೆದು
ಸಾಸಿರ ನಾಮವ ಇಳುಹಿದನು

ಶೀಲವಂತನೇ ಭವಿ, ಹಾರುವನೇ ಶೂದ್ರ
ಧರಣಿ ಆಳುವ ಅರಸು ದರಿದ್ರ ಈ
ಮೂರು ಮನೆಯ ಭಿಕ್ಷವು ವರ್ಜ್ಯ ಬಸವಣ್ಣ॥

ಕಸಲತ ಮಸಲತ ಹುಷಾರ ಬೇಹುಷಾರ
ಖಬರ ಬೇಖಬರ ಮಸ್ತಿ ಬೇಮಸ್ತಿ
ಕಾಮನೋ ಸುಮಾನೊ ಕಂಡಾತನೇ ಖಾಜಿ
ಕಾಣದಾತನೇ ಫಾಷಿ ತೋರದಾತನೇ ಸಹಜ
ಖಾಜಿ ಅಯ್ಯ ಫಾಜಿಕಿತ್ತ ದೂರಕರೋ॥

ಮಸ್ತ ಮದನಾ ಚಿಸ್ತಿ ದೇಖಿಣಾ
ಬಸ್ತ ಬಾಲಕು ಜಠದೇಣಾ ಲವಣಕಿ ಖಾಣಾ॥

ಸಾತ ಮುಲ್ನಾ(ಲ್ಲಾ) ಸಾತುಹರಕ ಮುಲ್ದಾರ
ಖಿಜಮತು ಪರವಾದಿಗಾರ್
ಖಾದ ಸೈಪೇಕಿ ದಾವಲ ಪೀರಕು॥

ಆಟಕ ಆಟದಮ್ಮ ಪೀಕು ಬಾಗದಮ್ಮ
ಮುಶಾರ ಆಡದಮ್ಮ ಚಾಂದ ಚಾಂದಕು ದೇಣ
ಸಾತ ಪಾಕಿ ತಂಬಾಕು ದೇಣಾ ಚಾರಪಾಕು ಸುಪಾರಿ ದೇಣಾ
ಸೈಯ್ಯದ ಸಾಹೇಬನ್ ಮೈತೊಮಾ ಅಲ್ಲಾಕು॥

ಜಾತ ಸುವ್ವರ ಛೋಡ ಮೇರ ಬಚನ ಬೇದೊ ದೂಟಮೆ
ಮೇಲೆ ಲೇಣ ಕಾಣಿ ಕೀರ್ತಿಸ ಬೋಲ್ ಬೋಲ್
ಮು ಮುಡದಾರ ಕಾನಕಾಟನ್ ಜಾತತನ್ಪಕ್
ಅಜಮಾನಕಿ ಕಾಣ ದಿವಾನ ಕುತ್ತಕಿ ಕ್ಷಣ
ದಿವಾನಿ ಕುಲ ಡಾಲಚ ಬೈಟಿ ಛೋಡ
ನೀಟ ಬಾಟ ಪಕಡೊ ಗಾಡಾ ದುರಸ್ತಾ ಕರೋ
ಝಾಟ ಜಬೆಕರೊ ಮಾ–ಬಾಪ ಅಲ್ಲಾ ಖುದಾ
ಪುಸಿದಿ ಸಹಜ ಕರೊ ಮರ್ದಾನಿ ಪಾದಿಶಾ ಕರೊ
ಖಾಜಿ ಬಾತ ಸುನಕಾ ಪೀರುಬಾತ ಸುನೊ॥

೧೧

ಡಂಗುರ ಪದಗಳು

ಗುರುವಿಟ್ಟ ಮುಂಡಿಗಿ ಗುರುತದಿ ಮಾಡಿದ ॥ಹೊಯ್ಯಲಿ ಡಂಗುರ॥
ನರರಿಗೆ ತಿಳಿಯದಿನ್ಯಾರಿಗೆ ಉಳವಿಲ್ಲ ॥ಹೊ ಡಂ॥

ಪ್ರಾಣಿ ಮಾತ್ರಕೆಲ್ಲ ಪರಮಾತ್ಮನೊಬ್ಬನ ॥ಹೊ ಡಂ॥
ಕಾಣದ ಮಾತನು ಕಂಡು ಹೇಳತೀನಿ ॥ಹೊ ಡಂ॥

ಗಮ್ಮನೆ ಗಜವೇರಿ ನಿಮ್ಮೊಳು ತೀರ್ಥಪ್ರಸಾದವಕೊಳ್ಳಿ ॥ಹೊ ಡಂ॥
ಕಾಮನ ಕಣ್ಣು ಕಳೆದು ಸುಮ್ಮನಾಗಿರಿ ॥ಹೊ ಡಂ॥

ನಮ್ಮ ಶೂಲಧರನ ಸುಳುವು ನೋಡಿರಿ ॥ಹೊ ಡಂ॥
ಮುಂಜೂರ ತುದಿಯಲಿ ಸೂಸುತ ಲಾಹನೆ ॥ಹೊ ಡಂ॥

ನಿಜ ಮುಂಡೆ ತಾನು ಮೂಗುತಿಯ ನಿಟ್ಟಾಳು ॥ಹೊ ಡಂ॥
ಸಂಜೀವ ಮೋನೇಶ ಸಾಕಾರವಾದಾನು ॥ಹೊ ಡಂ॥

ತಾತ್ಪರ್ಯ : ಇದು ಗುರುವಿಟ್ಟ ಮುಂಡಿಗೆ(ಒಗಟು, ಭವಿಷ್ಯ ಸೂಚಕ) ಗುರುವಿನ ಅಪ್ಪಣೆಯ ಗುರುತಿನಿಂದ ಮಾಡಿದ್ದು. ಸಾಮಾನ್ಯರಿಗೆ ಇದು ತಿಳಿಯುವುದಿಲ್ಲ. ಯಾರೂ ಸ್ಥಿರವಲ್ಲ.

ಕಾಣದ ಮಾತನ್ನು ಕಂಡು ಹೇಳುತ್ತೇನೆ ಪ್ರಾಣಿ ಮಾತ್ರಕ್ಕೆಲ್ಲ(ಸಕಲ ಜೀವಿಗಳಿಗೂ) ಪರಮಾತ್ಮನೊಬ್ಬನೆ.

ಆನೆಯ ಮೇಲೇರಿದವರೂ ಹಮ್ಮು ಮರೆತು ಪರಮಾತ್ಮನ ತೀರ್ಥಪ್ರಸಾದವನ್ನು ವಿನಯ ಭಕ್ತಿಗಳಿಂದ ತೆಗೆದುಕೊಳ್ಳಿರಿ. ಕಾಮ ಭಾವನೆಯನ್ನು ಅಳಿದು ಸ್ಥಿರಭಾವನೆಯಿಂದ ಸುಮ್ಮನೇ ಇರಿ. ಕಾಮಾರಿ ಶೂಲಧರ ಶಿವನ ಮಹಿಮೆಯನ್ನು ತಿಳಿಯಿರಿ. ಮುಂದಿನ(ಮನದ) ತುದಿಯ ತುತ್ತ ತುದಿಯಲ್ಲಿ ಆತನು ತೋರುತ್ತಿದ್ದಾನೆ. ನಿಜವಾದ ಮುಂಡೆಯು(ವಿಧವೆ) ಮೂಗುತಿಯಿಟ್ಟು ಮುತ್ತೈದೆಯಾಗುತ್ತಾಳೆ. ಸಂಜೀವನಾದ ಮೌನೇಶ್ವರರು ಸಾಕಾರವಾಗುತ್ತಾರೆ.

೧೨

ಹುಷಾರ ವಚನಗಳು

೧

ಭಕ್ತ ಗಣಂಗಳಿಗೆ ಯುಕ್ತ ಗಣಂಗಳಿಗೆ
ಮುಕ್ತ ಗಣಂಗಳಿಗೆ ಬಹು ಹುಷಾರ

ತಾತ್ಪರ್ಯ : ಭಕ್ತ ಗಣಗಳಿಗೆ ಯುಕ್ತ ಗಣಗಳಿಗೆ ಮುಕ್ತ ಗಣಗಳಿಗೆ ಹುಷಾರ, ಭಕ್ತರು ಭಕ್ತಿ ಮಾರ್ಗದಲ್ಲಿ ನಡೆಯುವವರು. ಯುಕ್ತರು ಎಂದರೆ ಯೋಗದಲ್ಲಿ ತೊಡಗಿರುವವರು. ಮುಕ್ತರು ಸರ್ವಸಂಗ ಪರಿತ್ಯಾಗಿಗಳಾಗಿ ಸಂಸಾರವನ್ನು ದೂರ ಮಾಡಿ ತುರೀಯವಾದ ಐಕ್ಯ ಸ್ಥಿತಿಯನ್ನು ತಲುಪಿರುವ ಮಹಾತ್ಮರು –ಎಲ್ಲರೂ ಎಚ್ಚರ.

೨

ನಾ ಹೆಚ್ಚು ನೀ ಹೆಚ್ಚು ಎಂದು ನುಡಿಯ ಬೇಡಿ
ಹೆಚ್ಚಿನ ರುದ್ರರು ಬಂದಾರು
ಬಚ್ಚಿಟ್ಟ ನಿಮ್ಮ ದೇಹ
ಹೆಚ್ಚಿ ಹೋಳನೆ ಮಾಡಿ
ಕಿಚ್ಚನೆ ಇಕ್ಕುವರು ಬಹು ಹುಷಾರ

ತಾತ್ಪರ್ಯ : ಅಹಂಕಾರ ಎಂಬುದು ಒಳ್ಳೆಯದಲ್ಲ. ನಾನೇ ಹೆಚ್ಚು ನಾನೇ ಹೆಚ್ಚು ಎನ್ನುವ ಮೇಲಾಟದ ಮಾತಾಡಬೇಡಿ. ಎಲ್ಲರೂ ಸಮಾನರು ಎಂಬ ತಿಳುವಳಿಕೆ ಒಳ್ಳೆಯದು. ಎಲ್ಲರಿಗೂ ಹೆಚ್ಚಿನವರಾದವರು ಶಿವಭಕ್ತರು. ಅವರು ಶಿವಗಣ–ರುದ್ರಗಣದವರು. ಅವರು ಶಿವನ ಆಪ್ಪಣೆಯಿಂದ ಭೂಲೋಕಕ್ಕೆ ಬಂದವರು.

ಅವರ ಮುಂದೆ 'ನಾನು' ಎಂಬ ಅಹಂಕಾರ ಉಳಿಯುವುದಿಲ್ಲ. ಬಹಳ ಪ್ರೀತಿಯಿಂದ ಜೋಪಾನ ಮಾಡಿಕೊಂಡು ಬಂದ ದೇಹವನ್ನು ಹಾಗೂ ದೇಹ ಭಾವನೆಯನ್ನು ಅವರು ಕೊಚ್ಚಿ ಹಾಕಿ ಬೆಂಕಿ ಹಚ್ಚುತ್ತಾರೆ. ಎಂದರೆ ದೇಹ ನಶ್ವರ, ಶಿವ ಶಾಶ್ವತ ಎಂಬ ಸತ್ಯವನ್ನು ತೋರಿಸಿಕೊಡುತ್ತಾರೆ.

೩

ಎಲ್ಲ ಬಲ್ಲೆನೆಂಬ ಬಲ್ಲತನವ ಬೇಡ
ಹಲ್ಲುಗಳ ಮುರಿಯಲಿಕ್ಕೆ ಅಲ್ಲಮಪ್ರಭು ಬಂದಾನು
ಖಿಲ್ಲ ಮಾನವರಿಗೆ ತಿಳಿಯದು ಬಹು ಹುಷಾರ

ತಾತ್ಪರ್ಯ: ನಾನೇ ಹೆಚ್ಚು, ನನಗೆಲ್ಲ ತಿಳಿದಿದೆ ಎಂಬುದು ಸಾಮಾನ್ಯ ಜನರ ಧೋರಣೆ. ಜ್ಞಾನ ಸಾಗರದ ವಿಶಾಲ ಹರವನ್ನು ತಿಳಿದವನು ತನಗೆಷ್ಟೇ ವಿಷಯಗಳು ಗೊತ್ತಿದ್ದರೂ ಅದು ಸಾಗರದ ಒಂದು ಹನಿಯಷ್ಟು ಎಂಬ ಸತ್ಯವನ್ನು ಅರಿತಿರುತ್ತಾನೆ. ನಾನು ಎಂಬ ಅಹಂಕಾರದಿಂದ ಮೆರೆಯುವವರನ್ನು ಸರ್ವಜ್ಞನಾದ ಪರಮಾತ್ಮನು ಬಂದು ಅವರ ಹಲ್ಲು ಮುರಿಯುತ್ತಾನೆ. ಅವರ ಹಮ್ಮನ್ನು ಅಡಗಿಸುತ್ತಾನೆ ಎಚ್ಚರ.

೪

ಎಚ್ಚರವ ಹೇಳಲಿಕ್ಕೆ ಅಚ್ಯುತನು ಬಂದಾನು,
ನಿಮ್ಮ ಕಿಚ್ಚುಗಣ್ಣಿನವನ ಕೂಡ ಮತ್ಸರ ಸಲ್ಲದು
ಹುಚ್ಚು ಶಾಸ್ತ್ರವ ಬಿಟ್ಟು ಬಚ್ಚಿಟ್ಟು ನಂಬಿರೊ
ಭಕ್ತರಾದವರು ಬಹು ಹುಷಾರ

ತಾತ್ಪರ್ಯ: ಶಾಸ್ತ್ರಗಳು ಇದೇ ಸತ್ಯ ಹೀಗೇ ನಡೆಯಬೇಕು, ಇಲ್ಲದಿದ್ದರೆ ನರಕ ಪ್ರಾಪ್ತಿ ಮುಂತಾಗಿ ಜನರಲ್ಲಿ ಭಯ ತುಂಬುತ್ತಾ ಪರಮಾತ್ಮನಿಂದ ದೂರ ಮಾಡುತ್ತವೆ. ಅಂತಹ ಹುಚ್ಚು ಶಾಸ್ತ್ರಗಳನ್ನು ನಂಬದೆ ಪರಮಾತ್ಮನನ್ನು ಮಾತ್ರ ಭಕ್ತರಾದವರು ನಂಬಬೇಕು.

೫

ಪತ್ತಾರರಿಗೆ ಪಟ್ಟವಾಗುವುದೆ ಸಹಜ
ದಿಟ್ಟರಾದವರು ಗಟ್ಟ್ಯಾಗಿ ನೆಲೆಗೊಳ್ಳಿ
ಬಿಟ್ಟರೆ ಕೆಟ್ಟು ಹೋದೀರಿ ನೀವು
ಸೃಷ್ಟಿಗೆ ಕಾರಣಕರ್ತರು ಹೌದೆಂದು
ಗಟ್ಟ್ಯಾಗಿ ನಂಬಿರೊ ಭಕ್ತರಾದವರು ಬಹು ಹುಷಾರ

ತಾತ್ಪರ್ಯ : ಪತ್ತಾರರಿಗೆ(ವಿಶ್ವಕರ್ಮರಿಗೆ) ಪಟ್ಟವಾಗುವುದು ಸಹಜ ಎನ್ನುವಲ್ಲಿ ಬಂಗಾರವು ತುಟ್ಟಿಯಾಗಿ ಅಕ್ಕಸಾಲಿಗರಿಗೆ ಹೆಚ್ಚಿನ ಉದ್ಯೋಗಗಳು ಸೃಷ್ಟಿಯಾಗಿ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಕೆಲಸ ಮಾಡುವವರಿಗಾಗಿ ಹುಡುಕಬೇಕಾಗುತ್ತದೆನ್ನುವ ಅರ್ಥ ಒಂದಾದರೆ, ಈ ವಚನ ವಿಶ್ವಕರ್ಮರನ್ನೇ ನೇರವಾಗಿ ಸಂಬೋಧಿಸಿ ಆತ್ಮವಿಶ್ವಾಸವನ್ನು ತುಂಬುತ್ತದೆ. ಪತ್ತಾರರಿಗೆ ಪಟ್ಟವಾಗುವುದು ಎಂದರೆ ಹಿಂದೂ ಧರ್ಮದ ಗುರು ಪಟ್ಟ ಎಂದೂ ತಿಳಿಯಬೇಕು. ರಾಜಕೀಯ ಪಟ್ಟವಲ್ಲ, ಆ ಸ್ಥಾನಕ್ಕೆ ಬೇಕಾದ ಭಕ್ತಿಯನ್ನು ಧೀರತ್ವವನ್ನು, ದೃಢತೆಯನ್ನು ಅವರು ಪಡೆಯಬೇಕು. ಆಲಸ್ಯ ತಾತ್ಸಾರ ಮಾಡಿದರೆ ಕೆಟ್ಟು ಹೋಗುವಿರಿ ಎಂದೂ ಎಚ್ಚರಿಸಿದ್ದಾರೆ. 'ನೀವು ಸೃಷ್ಟಿಗೆ ಕಾರಣ ಕರ್ತರು' ಎಂಬುದಕ್ಕೆ ವೇದಗಳ ಕಾಲದಿಂದಲೂ ಆಧಾರಗಳಿವೆ. ಇದನ್ನು ಗಟ್ಟಿಯಾಗಿ ನಂಬಿ ಎನ್ನುತ್ತಾರೆ.

೬

ಹೇಸಿಗೆಯ ಮಾತೆಂದು ಬೇಸರ ನುಡಿಯಲಿಬೇಡ
ಸಾಸಿರ ನಾಮದ ಒಡೆಯ ಹೌದೆಂದು ನಿಮ್ಮ
ವಾಸಿ ಪಂಥವ ಬಿಟ್ಟು ಭಾಷೆ ಪಾಲಿಪ ದೇವನ
ಭಕ್ತರಾದವರು ಬಹು ಹುಷಾರ

ತಾತ್ಪರ್ಯ: ಸಾಸಿರ ನಾಮದ ಒಡೆಯನೆಂದು ಕೃಷ್ಣ ರಾಮ ವಿಠಲನ ಭಕ್ತರು ದೇವರನ್ನು ಕರೆಯುತ್ತಾರೆ. ಅಂಥವರು ಬೇರೆ ಮತ ಪಂಥಗಳವರೊಡನೆ ಸಹಿಷ್ಣುತೆಯಿಂದ ಇರಬೇಕು. ವಾಸಿಪಂಥ ಎಂದರೆ ದ್ವೇಷ ಭಲಗಳನ್ನು ಸಾಧಿಸಬಾರದು. ತಾವು ಹೇಳುವ ಮಾತುಗಳು ಗ್ರಾಮ್ಯವಾಗಿವೆ ಎಂದು ಬೇಸರ ಪಡಬೇಡಿ ಎಂದು ಬುದ್ಧಿವಾದ ಹೇಳಿದ್ದಾರೆ.

೭

ಮೋನಯ್ಯನ ವಚನವು ಚಾಣದ ಹದನದಂತೆ
ನಾನು ನೀನೆಂಬ ಮಥನವ ಬಿಟ್ಟು
ಜ್ಞಾನವುಳ್ಳವರು ಬೇಕಾದರೆ ಬೆರಕೊಳ್ಳಿ ಸಾಕಾದರೆ ಸರಕೊಳ್ಳಿ
ಏಕವಾದರೆ ತಿಳಕೊಳ್ಳಿ ಲೋಕದಂತಾದರೆ
ಕರಕೊಳ್ಳಿ ಬಹು ಹುಷಾರ

ತಾತ್ಪರ್ಯ: ಮೌನೇಶ್ವರರು ತಮ್ಮ ವಚನಗಳು ತೀಕ್ಷ್ಣವಾಗಿರುತ್ತವೆ ಎಂದು ಹೇಳಿದ್ದಾರೆ. ಏಕೆಂದರೆ ಅವು ಕಠೋರ ಸತ್ಯವನ್ನು ಖಡಾಖಂಡಿತವಾಗಿ ಹೇಳುತ್ತವೆ. ಭೇದಗಳನ್ನು

ಬಿಡಿರಿ ಜ್ಞಾನಿಗಳಾಗಿರಿ ಎಂಬುದು ಅವರು ಪದೇ ಪದೇ ಹೇಳುವ ಬೋಧೆ. ಐಕ್ಯತೆಯ ತತ್ವ ಅವರದು. ಲೋಕ ಕಲ್ಯಾಣಕ್ಕೆ ಉಪಯುಕ್ತವಾದುದನ್ನೇ ಅವರು ಹೇಳಿದ್ದಾರೆ. 'ಬೇಕಾದವರು ಬೆರಕೊಳ್ಳಿ' ಎಂಬ ಮಾತಿನಲ್ಲಿ ಹೊಂದಾಣಿಕೆ ಗುಣ ಮನುಷ್ಯನಿಗೆ ಮುಖ್ಯವಾದುದೆಂಬ ಭಾವ ಇದೆ.

೧೩

ಪರಾಕು ವಚನಗಳು

೧

ಆದಿ ಮೂರುತಿ ಅಲ್ಲಮಪ್ರಭು ಮುಲ್ಲ ಮಹಮ್ಮದ
ರಸೂಲಿಲ್ಲ ಬಹು ಪರಾಕು॥.

ತಾತ್ಪರ್ಯ : ಹಿಂದೂ ಮುಸ್ಲಿಮರ ಸಾಮರಸ್ಯ ಸಾಧಿಸಿದ ಮಹಾತ್ಮರು ಮೌನೇಶ್ವರರು. ಶ್ಲೋಕ-ಜಯಘೋಷದಂತಿರುವ ಈ ಪರಾಕು ವಚನದಲ್ಲಿ ಅಲ್ಲಮಪ್ರಭು ಮತ್ತು ಮಹಮ್ಮದ ಇಬ್ಬರನ್ನೂ ಒಂದೇ ಎಂಬಂತೆ ಸ್ತುತಿಸಲಾಗಿದೆ. ಅವರ ಗುಡಿಗಳಲ್ಲಿ ಇಂದಿಗೂ ನಡೆಯುತ್ತಾ ಬಂದಿರುವ ಸ್ತುತಿ ಘೋಷವೂ ಮುಸ್ಲಿಮರ ಅಲ್ಲಾಹುವನ್ನೂ ಹಿಂದೂಗಳ ಕಾಶಿಪತಿ ಹರಹರ ಮಹಾದೇವನನ್ನೂ ಒಂದೇ ಎಂದು ಸಾರುತ್ತದೆ.

೨

ಉನ್ಮನಿಯ ದೇವದುರ್ಗಕ್ಕೆ ಪ್ರಭು ಬರುವದೇ ಸಹಜ
ಯರಮಲ ದೊರೆಯು ವರವಿ ಪಾಚ್ಛಾ ಮೌನ ಬಹು ಪರಾಕು

ತಾತ್ಪರ್ಯ : ಮನದ ಉನ್ನತ ಸ್ಥಿತಿ ಉನ್ಮನಿ. ಇಲ್ಲಿ ಉನ್ನತವಾದ, ಶ್ರೇಷ್ಠವಾದ ಎಂಬರ್ಥವಿದೆ. ಶ್ರೇಷ್ಠವಾದ ದೇವದುರ್ಗಕ್ಕೆ ಪ್ರಭು(ಅಲ್ಲಮ) ಬರುವುದು ಸಹಜ. ಆತನು ಎರಮಲ(?) ಸೀಮೆಯ ದೊರೆ ಮತ್ತು ವರವಿಯ ಒಡೆಯ(ಪಾಚ್ಚಾ-ಬಾದಶಾಹ) ಆತನಿಗೆ ಜಯವಾಗಲಿ(ಪರಾಕು).

ಎರಮಲ ಎನ್ನುವುದು ಮಲೆನಾಡನ್ನು ಅಥವಾ ಎರೆಭೂಮಿಯ ಸೀಮೆಯನ್ನು ಸೂಚಿಸುವಂತಿದೆ. ಆತನು ವರವಿ ಕ್ಷೇತ್ರದ ಒಡೆಯ, ಮುಸ್ಲಿಮರ ಪಾಚ್ಛಾ. ಆತನು ಉನ್ನತ ಮಹಿಮೆಯ ದೇವದುರ್ಗಕ್ಕೆ ಬರುವನು. ಅಲ್ಲಿಗೆ ಬರುವ ಪ್ರಭು ಎಂಬುದು ಮೌನೇಶ್ವರರಿಗೇ ಅನ್ವಯವಾಗುತ್ತದೆ. ಅಲ್ಲಮಪ್ರಭು ಎಂಬ ಅರ್ಥವನ್ನೂ ಕೊಡುತ್ತದೆ.

ತಾವು ದೇವರೆಂದು ಭಾವಿಸುವ ಅಲ್ಲಮ ಪ್ರಭುವಿಗೆ ಜಯವಾಗಲಿ ಎಂದು ಮೌನೇಶ್ವರರು ಪರಾಕು ಹೇಳಿರುವಂತಿದೆ.

೩

ಕಾರಣಿಕದ ಪುತ್ರ ಕಾರುಣ್ಯ ನಿಧಿಯೆ ಪಿಡಿದಯ್ಯ
ಧಾರುಣಿ ಪತಿ ಅರಸ ಚೆನ್ನಬಸವಣ್ಣ ಬಹುಪರಾಕು

ತಾತ್ಪರ್ಯ : ಕಾರಣಿಕ ಪುತ್ರನೂ ಕಾರುಣ್ಯನಿಧಿಯೂ ಕೈಹಿಡಿದು ನಡೆಸುವವನೂ ಧರಣೀಪತಿ ರಾಜನೂ ಆದ ಚೆನ್ನಬಸವಣ್ಣನಿಗೆ ಬಹುಪರಾಕು.

ಕಾರಣಿಕ ಎಂದರೆ ನುಡಿದದ್ದು ನಿಜವಾಗುವುದು ಎಂದರ್ಥ. ದೇವರ ವರದಿಂದ ಹುಟ್ಟಿದವನೂ ದೇವರ ವರ ಪಡೆದವನೂ ಎಂಬರ್ಥಗಳೂ ಉಂಟು. ಚೆನ್ನ ಬಸವಣ್ಣ ಕಾರಣಿಕ ಪುತ್ರ, ಕಾರಣ ಪುರುಷ. ಆತನು ಕಾರುಣ್ಯ ನಿಧಿಯೂ ಕೈ ಹಿಡಿದು ನಡೆಸುವ ಅಯ್ಯನೂ ಆಗಿದ್ದಾನೆ. ಇವೆಲ್ಲ ಸರಿ. ಆದರೆ ಧಾರಿಣೀಪತಿ ಅರಸ ಎಂಬುದು ಸಾಮಾನ್ಯಾರ್ಥಕ್ಕೆ ಹೊಂದುವುದಿಲ್ಲ. ಆಧ್ಯಾತ್ಮ ಲೋಕಕ್ಕೆ, ಧಾರ್ಮಿಕ ಸಾಮ್ರಾಜ್ಯಕ್ಕೆ ಚೆನ್ನಬಸವಣ್ಣನಂಥವರೇ ಆಳರಸರು. ಆ ಲೋಕದಲ್ಲಿ ಭೌತಿಕವಾದ ರಾಜರುಗಳೂ ಅವರಿಗೆ ತಲೆಬಾಗುತ್ತಾರೆ. ಇಂತಹ ಚೆನ್ನಬಸವಣ್ಣನಿಗೆ ಬಹುಪರಾಕು.

೪

ನರಜನ್ಮಕೆ ನರಸಿಂಹ ನರರೊಳಗೆ ಅವತರಿಸಿ
ಧರೆಗೆ ಬಂದನಯ್ಯ ನಂದಿ ನಾರಾಯಣ ಬಹುಪರಾಕು

ತಾತ್ಪರ್ಯ : ನರರಲ್ಲಿ ಶ್ರೇಷ್ಠನಾದವನು ನರಸಿಂಹ ಪುರುಷ ಸಿಂಹ. ಅಂತಹ ನಂದಿ ನಾರಾಯಣನು ಭೂಲೋಕದಲ್ಲಿ ಮಾನವ ರೂಪದಲ್ಲಿಯೇ ಅವತರಿಸಿ ಬಂದಿದ್ದಾನೆ. ಇದೊಂದು ಅಪರೂಪದ ಶಬ್ದ ಜೋಡಣೆ. ಈಶ್ವರನ ವಾಹನ ನಂದಿಯನ್ನೂ ವಿಷ್ಣುವಿನ ಒಂದು ಹೆಸರಾದ ನಾರಾಯಣ ಎಂಬುದನು ಜೋಡಿಸಿರುವುದು ಶೈವ ವೈಷ್ಣವ ಪಂಥಗಳ ಜೋಡಣೆಯಾಗಿದೆ. ಬಹಳ ಹಿಂದೆಯೇ ಹರಿಹರ (ಹರಿಹರೇಶ್ವರ) ಎಂಬ ಪಂಥವೊಂದು ಜಾರಿಗೆ ಬಂದಿತ್ತು. ಬಸವಣ್ಣನವರು ನಂದಿಯ ಅವತಾರ ಎಂಬುದು ಶೈವರ ನಂಬಿಕೆ. ನರರೊಳಗೆ ಜನಿಸಿ ಬಂದ ನರಸಿಂಹನಾಗಿ ಬಂದದ್ದು ಬಸವಣ್ಣನವರಿಗೆ ಸರಿ ಹೊಂದುತ್ತದೆ. ಆತನು ನಾರಾಯಣನೂ ಹೌದು ಎಂಬುದು ಮೌನಪ್ಪಯ್ಯನವರದೇ ಆದ ಪರಿಭಾವನೆ.

೫

ಉಳವಿಯ ಮಹಾಮನೆಯಲ್ಲಿ ದಂಡು ಇಳಿದು ಜಗಕೆಲ್ಲ ಅದರೊಳಗೆ
ಬಳಲಿ ಬಂದ ಶರಣ ಗಣಂಗಳಿಗೆ ಬಹುಪರಾಕು

ತಾತ್ಪರ್ಯ : ಕಲ್ಯಾಣ ಕ್ರಾಂತಿಯ ವಿಷಯ ಜನಜನಿತವಾಗಿರುವಂಥದ್ದು. ಬಿಜ್ಜಳನ ಕೊಲೆಯಾದ ಮೇಲೆ ಶರಣರ ಜಂಗಮರ ಬೇಟೆಯಾಡುತ್ತ ಬಿಜ್ಜಳನ ದಂಡು ಹೊರಟಾಗ ಚೆನ್ನಬಸವಣ್ಣ ಅಕ್ಕನಾಗಮ್ಮರ ಮುಂದಾಳತ್ವದಲ್ಲಿ ಶರಣರ ದಂಡು ಕಲ್ಯಾಣದಿಂದ ಹೊರಟು ಉಳಿದುಕೊಳ್ಳಲು ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡುತ್ತ ಕೊನೆಗೆ ಧಾರವಾಡದ ಮಾರ್ಗವಾಗಿ ಉಳವಿಯ ಕಡೆಗೆ ಸಾಗಿತು. ದಟ್ಟ ಅರಣ್ಯದಲ್ಲಿ ವೈರಿ ಸೈನ್ಯದ ಕೈಗೆ ಸಿಗದೆ ಉಳಿದುಕೊಂಡಿತು. ಉಳವಿಯ ಮಹಾಮನೆಯ ದಣಿದು ಬಳಲಿದ ಶರಣರ ದಂಡನ್ನು ಮೌನೇಶ್ವರರು ಇಲ್ಲಿ ನೆನೆಯುತ್ತಾರೆ.

೬

ಅಮರ ಕಲ್ಯಾಣದೊಳು ಅಮರರ ಲೆಕ್ಕಕ್ಕೆ
ಅನುವಾಗಿ ನಿಂತಿಯಯ್ಯ ದೊರೆ ರಾಜೇಂದ್ರ ಬಹುಪರಾಕು

ತಾತ್ಪರ್ಯ : ೧೨ನೆ ಶತಮಾನದ ಶರಣರು ದಿಕ್ಪಾಲಾಗಿ ಹೋದ ಮೇಲೆ ಶರಣರ ವಿಚಾರ ಕ್ರಾಂತಿ ಅಡಗಿ ಹೋಯಿತು. ೧೫ನೆ ಶತಮಾನದಲ್ಲಿ ವಿಜಯ ನಗರದಲ್ಲಿ ಪ್ರೌಢದೇವರಾಯನ ಮುಕ್ತಚಿಂತನೆಯ ಪ್ರೋತ್ಸಾಹದಿಂದ ಅಡಗಿಸಿಟ್ಟಿದ್ದ ವಚನಗಳನ್ನು ಹುಡುಕಿ ತೆಗೆದು ಅವುಗಳಿಗೆ ಅರ್ಥ ಟೀಕೆ ಸಂಪಾದನೆ ವರ್ಗೀಕರಣ ಮಾಡುವ ಮುಂತಾದ ಕಾರ್ಯಗಳು ಪ್ರಾರಂಭವಾದವು. ಶರಣ ಧರ್ಮದ ದೃಷ್ಟಿಯಿಂದ ಅದೊಂದು ಮಹತ್ವದ ಘಟ್ಟ, ಅದರಿಂದ ವಿಜಯನಗರ 'ವಿಜಯ ಕಲ್ಯಾಣ'ವೆನಿಸಿ ಕೊಂಡಿತು. ಮತ್ತೆ ವಿಜಯನಗರ ಸಾಮ್ರಾಜ್ಯ ಪತನವಾಗಿ ಮುಸ್ಲಿಮರ ಆಡಳಿತ ಪ್ರಾರಂಭವಾದಾಗ ಹಿಂದೂ ಧರ್ಮವನ್ನು ಉಳಿಸಿಕೊಳ್ಳುವ, ಪರಧರ್ಮದೊಡನೆ ಸಾಮರಸ್ಯ ಸಾಧಿಸ ಬೇಕಾದ ಜರೂರು ಒದಗಿದಾಗ ಗುಲಬರ್ಗಾ ಜಿಲ್ಲೆಯ ಕೊಡೇಕಲ್ಲಿನ ಬಸವಣ್ಣ ನವರಿಂದ ಇನ್ನೊಂದು ಕ್ರಾಂತಿಯಾಯಿತು. ಕೊಡೆಕಲ್ಲನ್ನು 'ಅಮರ ಕಲ್ಯಾಣ'ವೆಂದು ಕರೆಯಲಾಗುತ್ತದೆ.

೭

ಇರುವುದು ವರವಿ ಮೆರೆವುದು ಲಿಂಗನ ಬಂಡಿ
ಸ್ಥಿರವಾದದ್ದು ತಿಂಥಣಿ, ನಮ್ಮ ನರಕುರಿಗಳ ಕಾಯ್ವ
ಪ್ರಭುದೇವ ಮೌನ ಬಹುಪರಾಕು

ತಾತ್ಪರ್ಯ : ಮೌನೇಶ್ವರರ ಜೀವನ ಚರಿತ್ರೆಯ ಬಗ್ಗೆ ಹೇಳುವ ಅನೇಕ ಕೃತಿಗಳು ಬಂದಿವೆ. ಗುಲಬರ್ಗಾ ಜಿಲ್ಲೆಯ ಗೋನಾಳದಲ್ಲಿ ಹುಟ್ಟಿದ ಮೌನೇಶ್ವರರು ತಮ್ಮ

ದೈವಿಶಕ್ತಿಯಿಂದಲೂ ಸಾಧನೆಗಳಿಂದಲೂ ಉತ್ತರ ಕರ್ನಾಟಕದಲ್ಲಿ ಪವಾಡ ಪುರುಷ ರಾಗಿ ಬೆಳೆದು ಸಾಕ್ಷಾತ್ ಪರಮಾತ್ಮನ ಅವತಾರ ಎಂಬಂತೆ ಪ್ರಸಿದ್ಧರಾಗಿ ವರವಿ, ಲಿಂಗನ ಬಂಡಿಗಳಲ್ಲಿ ಲೀಲೆಗಳನ್ನು ಮೆರೆದು, ತಿಂತಿಣಿಯಲ್ಲಿ ಸ್ಥಿರವಾಗಿ ನೆಲೆಗೊಂಡು ಅಲ್ಲೇ ಐಕ್ಯರಾದವರು. ತಾವು ನರ ಕುರಿಗಳನ್ನು ಕಾಯುವ ಪ್ರಭುದೇವ (ಅಲ್ಲಮ) ಮೌನ ಎಂದು ಹೇಳಿಕೊಂಡಿದ್ದಾರೆ. ಅಲ್ಲಮ ಪ್ರಭುವಿನ ಅವತಾರ ಮೌನೇಶ್ವರರು ಎಂಬ ಅರ್ಥ ಇಲ್ಲಿದೆ.

೧೪

ಮೌನೇಶ್ವರ ದಂಡಕ

ಹರನಿಟ್ಟ ಮುಂಡಿಗಿ ಹರಿಯದೊಬ್ಬರ ಕೈಲಿ
ಪರಮಾತ್ಮ ಅಲ್ಲಮಪ್ರಭು ಮೌನನಿಟ್ಟ ಮುಂಡಿಗಿ
ತಾನೇ ಬಂದು ತಾನೇ ಎತ್ತಬೇಕಲ್ಲದೆ
ನರಮಾನವರಿಗೆ ಅಳವಲ್ಲ

ಹಕ್ಕಲಾಗಬೇಡಿ ಗುರುವಿನ ಒಕ್ಕಲಾಗಿರಿ
ಅಡಸುಟ್ಟ ಸ್ವಾರಿ ಹೊರಗಿಡಿರಿ
ಹೊಸಸ್ವಾರಿ ತಂದು ಒಳಗಿಡಿರಿ
ಊಟಕ್ಕೆ ಬಂದಾರು ಊಟವ ಮಾಡಿಸಿರಿ
ನಿಮ್ಮನ್ನು ಉದ್ಧಾರ ಮಾಡ್ಯಾರು
ನಿಮ್ಮ ಬುದ್ಧಿ ತಪ್ಪಿದರೆ ತಿದ್ದಿಕೊಟ್ಟಾರು
ನಿಮ್ಮ ಬುದ್ಧಿ ಕೇಳದಿದ್ದರೆ
ಇದ್ದದ್ದು ಬಿದ್ದದ್ದು ರದ್ದು ಮಾಡಿಬಿಟ್ಟಾರು

ಹಳೇ ಗುದ್ದಿನ ಶೋಧ ಮಾಡ್ಯಾರು
ಗುಡಿಯವರು ಗುಡಿಗೆ ಬಂದಾರು
ಮನೆಯವರು ಮನೆಗೆ ಬಂದಾರು
ಕಟ್ಟೆಯ ಕಲ್ಲು ಕಟ್ಟಿಗೆ ಹೊಂದೀತು
ಗಟ್ಟಾಗಿ ನೀವೆ ತಿಳಕೊಳ್ಳಿರಿ
ಮುದ್ದು ಮುಖದ ಮೋನಯ್ಯನ ಮಾತು

ಬುದ್ಧಿವಂತರು ತಿಳಿಯಿರಿ
ಹಗಲಗಡಾ ತೊಗಲ ಟೊಪ್ಪಿಗೆ
ಮುಗಲ ಮುತ್ಯಾನ, ಮುಂದ
ಏಳು ಲಕ್ಷ, ಏಳು ಲಕ್ಷ ಹಿಂದೆ
ಏಳು ಲಕ್ಷ ನಟ್ಟ ನಡುವೆ
ದಿಟ್ಟ ಮೋನಯ್ಯ ಹಸಿರು ಕುದುರೆ
ಹಸಿರು ಪಾಲಕಿಯನೇರಿ
ಹಸುಮಗನಾಗಿ ಬರುತ್ತಾನೆ ಹಸನಾಗಿ ಮೌನದೀನ॥

೧೫

ಮೋನಪ್ಪನವರ ಪಾತೆ

ನಾಥನಾಥ ಕೊಹಿ ನೈ(ನಹಿ) ನಾಥ ಜಮೀನ ಅಸ್ಮಾನೈ ನಾಥ
ಸೂರ್ಯಚಂದ್ರ ನಹಿನಾಥ ತಾರಕನಹಿ ನಾಥ ಚೌದಾತುಬಕ ನಹಿನಾಥ॥

ಓಂಕಾರವೆಂಬ ಶಬ್ದದೊಳಗೆ ಆದಿ ಆಧಾರವಿಲ್ಲ
ಶೂನ್ಯ ನಿಃಶೂನ್ಯ ಆದಿಶಕ್ತಿ ಅಲ್ಲಮಪ್ರಭು

ಮೂರು ಲೋಕದ ಗಂಡ ಮೌನ ಏಕದೇವ
ಪರಬ್ರಹ್ಮ ಜಗದ್ಗುರು ನೀನಲ್ಲದೆ ಮತ್ತೊಬ್ಬರುಂಟೆ?

ಪಾಚೋ ಪೀರ ಪೈಗಂಬರ ಜಿತಾಪೀರ ಜಗದ್ಗುರು
ಸಾಕ್ಷಾತ್ ಸದ್ಗುರು ಏಕಲಾಕ ಐಂಶಿ ಹಜಾರ
ಪಾಚೋ ಪೀರ ಪೈಗಂಬರ ಮೌನದೀನ

ಡಂಕಾ ಹಮೇಷ(ಶ) ಬಜಾವೆ ಫೈಲೆವೊ
ಪೃಥ್ವಿಗಧಿಕವಾದಂಥ ಕರ್ತೃ ಮೌನದೀನ॥

೧೬

ಸಲಾಮ್

ಬಡೆ ಬಡೆ ಮಹಾಲದಾರ ದಫೆದಾರ ಸಬ್ ಚೌಕಿದಾರ
ಚೌಕಿಗೆ ಮಹಾಲದಾರ ಮೇಹಬ್ರಾನ ಸಲಾಮ್

ಅಪ್ಪಯ್ಯನ ಕೊರಳಾಗ ಅಚ್ಚ ಮುತ್ತಿನ ಹಾರ
ಛಪ್ಪನ್ನ ದೇಶಕ್ಕೆ ಹೆಪ್ಪುಕೊಟ್ಟಂಥ
ಅಪ್ಪಾಜಿ ಚೆನ್ನಬಸವೇಶ್ವರಗೆ
ಮೆಹಬ್ರಾನ ಸಲಾಮ್

ಅಲ್ಲಮಮಹಾಪ್ರಭು ಮಹಮ್ಮದ್ಗುರು ಜಗದ್ಗುರು
ದಿವಾಲ್‌ದೀನ ಧರ್ಮಕ್ಕೆ ತಾ
ಸರ್ವರ ಜಿತಾಫೀರ ಸಮಂದರ ಪಾಶ್ಚಾ
ಮೇರೆ ಮೆಹಬ್ರಾನ ಸಲಾಮ್

ದೇಖೋ ಯಾರ ಭಗವಾನ ಕಾ ದಿನದಾರ ಪೈಗಂಬರ ಸುನೊ
ಏನಕ ಖಿರಾರ ಉಜಲಾ ಫೋಡಾಹುವೇಸವ್ವಾ
ಗಲ್ಲೆ ಮಾಲಚಾಂದ ತೀನಸಾತ ರೋಜಾ
ಅಂದೇರಾ ಪಡೇಗಾ ಗಾಲೀಬ ಖೇಲಾ
ತುಮಾರಾ ಮೌಲಾ ಪರವರ್ದಿಗಾರ ಮೆಹಬ್ರಾನ ಸಲಾಂ

ಹಿಂದೂಮೆ ವಲಿ ಮೌಲಾವಲಿ। ಪಾತಾಳಗಂಗಿ
ಪರವರ್ದಿಗಾರ ಚೆಂಬೇಲಿ ಕಾ ಮೌಲಾ ಸಾಹೇಬ
ಮೇರೆ ಮೆಹಬ್ರಾನ ಸಲಾಂ

ಸುಲೆಮಾನ್ ದೇಖಲೇ ತಮಾಮ್ ಕಿತಾಬಸೇ ಹಾಜೀರ್
ಮೇದಲ್ ಸುಭಾಹ ಜಮೀನ ಅಸಮಾನಪರ್
ಚಲ ಆವೆ ಇಮಾಮ ತೆತ್ತೀಸ ಕೋಟಿ
ದೇವಕು ಬುಲಾವ್। ಇಮಾಮ್ ಕಲಂದರ
ಬಾದಾಶಾ ಮೆಹರ್ಬಾನ ಸಲಾಂ

ತಯಾರ ಪತ್ರ ಅತ್ರೇಸೋ ತೆ ನಕೋ ಕಾಡಿಂಗೆ
ಬಾರಮ್ ಭುಕ್ಕೆ ಮತ ನಿಕಾಲ್ಹಿ
ಖಿರಣು ದರಿಯಾ ಮಿಠ್ಠಾ ಹೋಯೇನಾ
ಇಮಾಮ ಹತ್ಯಾರ ಪತ್ನದೇವೆ ಇಮಾಮ ಪಾನಿ
ನಿಕಾಲ ಡಾಲೆ ಇಮಾಮ ಖಲಂದರ ಪಾಶಾ ಮೆಹರ್ಬಾನ ಸಲಾಂ

೧೭

ಸುವ್ವಿ ಹಾಡು

ಸುವ್ವಿ ಬಾ ಸಂಗಯ್ಯ ಸುವ್ವಿ ಬಾ ಲಿಂಗಯ್ಯ
ಸುವ್ವಿ ಬಾ ಬಸವಯ್ಯ
ಸುವ್ವಿ ಬಾ ಚೆನ್ನಬಸವಯ್ಯ ಬರುವಾಗ
ಹೊಯ್ಯಲಿ ಬೊಬ್ಬಿ ಜಗವೆಲ್ಲ ॥ಸುವ್ವಿ॥ಪಲ್ಲ॥

ತಾತ್ಪರ್ಯ : ಸುವ್ವಿ ಪದಗಳು ಜಾನಪದ ಹಾಡುಗಳಲ್ಲಿ ಒಂದು ಪ್ರಕಾರ. 'ಸುವ್ವಿ' ಎಂಬುದು ಶಿವನನ್ನು ನೆನೆಯುವ ಜಾನಪದರ ಒಂದು ಸ್ವರೂಪವಾಗಿಯೂ 'ಶುಭವಾಗಲಿ' ಎಂಬ ಸದಾಶಯ ಒಂದು ಸೊಲ್ಲಿನ ಉಚ್ಚಾರವಾಗಿಯೂ ಬಳಕೆಯಾಗುತ್ತದೆ. ಸಂಗಯ್ಯ ಲಿಂಗಯ್ಯ ಎಂದು ಶಿವಧ್ಯಾನವನ್ನು ಮಾಡುತ್ತ ಚೆನ್ನಬಸವಯ್ಯನಿಗೂ ಶುಭವಾಗಲಿ ಎಂದು ಹಾರೈಸುತ್ತ ಬೇರೆ ಬೇರೆ ವಿಷಯಗಳನ್ನು ಈ ಮೂಲಕ ಹೇಳಲಾಗುತ್ತದೆ. ಚೆನ್ನಬಸವಯ್ಯನು ಹೇಳುವ ಮಾತು ಘೋಷಣೆಯಾಗಿ ಎಲ್ಲರಿಗೂ ತಲುಪಲಿ ಎಂಬ ಆಶಯವಿದೆ.

೧

ಕಾಯವೇ ಕಮ್ಮಾರ ಜೀವವೇ ಮನಿದೈವ
ವಾಯು ಅಗ್ನಿಯು ಪರಬ್ರಹ್ಮ
ವಾಯು ಅಗ್ನಿಯು ಪರಬ್ರಹ್ಮ ಇದ್ದಲ್ಲಿ
ಸಾವಿರ ದೈವಗಳು ನಿರ್ಮಿತವು ॥ಸುವ್ವಿ॥

ತಾತ್ಪರ್ಯ : ಏಕದೇವನಿಂದ ಅನೇಕ ದೇವಗಳು ಸೃಷ್ಟಿಯಾದ ಬಗೆಯನ್ನು ಈ ವಚನ ಹೇಳುತ್ತದೆ. ಪಂಚಭೂತಗಳು ಸೃಷ್ಟಿಗೆ ಕಾರಣ ಎನ್ನುವುದು ಆಧ್ಯಾತ್ಮದ

ಪರಿಭಾಷೆ. ಇಲ್ಲಿ ಆಕಾಶದ ಸ್ವರೂಪನಾದ ಪರಬ್ರಹ್ಮ ವಾಯು ಅಗ್ನಿಗಳೇ ತಾನಾಗಿ ದ್ದಾನೆ(ಭೂಮಿ ಜಲತತ್ವಗಳನ್ನು ಒಳಗೊಂಡಂತೆ). ಕಾಯ ಜೀವಗಳು ಮರ್ತ್ಯ ಲೋಕದಲ್ಲಿ ಪರಮಾತ್ಮನ ಸಾಕಾರ ರೂಪಗಳು. ಕಮ್ಮಾರನು ವಾಯು ಅಗ್ನಿಗಳ ತತ್ವಗಳಮೂಲಕ ಅನೇಕ ದೈವಗಳ ಸೃಷ್ಟಿಗೆ ಕಾರಣ ಕರ್ತನಾಗಿದ್ದಾನೆ.

೨

ಇಕ್ಕಳವೇ ಕುಲದೈವ। ಸುತ್ತಿಗೆಯು ಮನಿದೈವ।
ಬೊಕ್ಕಸಗೋಲು ಜಗದಂಡ
ಬೊಕ್ಕಸಗೋಲು ಜಗದಂಡ ।ಇದ್ದಲ್ಲಿ।
ಲಕ್ಷ ದೈವಗಳು ನಿರ್ಮಿತವು ॥ಸುವ್ವಿ॥

ತಾತ್ಪರ್ಯ : ಹಿಂದೂ ಧರ್ಮದಲ್ಲಿರುವ ಅನೇಕ ದೇವರುಗಳ ನಿರ್ಮಾಣಕ್ಕೆ ಮೂಲತಃ ವಿಶ್ವಕರ್ಮರೇ ಕಾರಣ ಎಂಬುದು ಈ ವಚನದ ಇಂಗಿತ. ಇಕ್ಕುಳ, ಸುತ್ತಿಗೆ ಬೊಕ್ಕಸ ಗೋಲು ಮುಂತಾದ ಆಯುಧಗಳಿಂದಲೇ ಕಲ್ಲು ಮಣ್ಣು ಕಟ್ಟಿಗೆ ಲೋಹಾದಿಗಳಲ್ಲಿ ಪ್ರತಿಮೆಗಳನ್ನು ಮಾಡಲಾಗುತ್ತದೆ. ಈ ಆಯುಧಗಳೇ ಅವರಿಗೆ ಕುಲದೈವ ಮನೆ ಹಾಗೂ ದೈವಗಳು(ಕುಲುಮೆ ಉಳಿ ಕೊಡತಿ ಬಾಣಗಳನ್ನೂ ಮೂಲವೆಂದು ಬೇರೆ ಕಡೆಗಳಲ್ಲಿ ಹೇಳಲಾಗಿದೆ).

೩

ಕಮ್ಮಾರ ತಾನಾದ। ಕಮಲಲೋಚನ ಆದ।
ಚೆಮ್ಮಟಗಿ ಆದ ದೈತ್ಯರಿಗೆ
ಚೆಮ್ಮಟಗಿ ಆದ ದೈತರಿಗೆ। ಪರಬ್ರಹ್ಮನ।
ಹಮ್ಮ ಕೇಳುವವನ ಹೆಸರೇನು ॥ಸುವ್ವಿ॥

ತಾತ್ಪರ್ಯ : ಪರಬ್ರಹ್ಮ–ಪರಮಾತ್ಮ ಎಂಬುದು ಉಪನಿಷತ್ತುಗಳು ಹೇಳುವ ನಿರಾಕಾರ, ನಿರ್ಗುಣ, ವಿಶ್ವಂಭರ, ವಿಶ್ವ ನಿಯಾಮಕ 'ಬ್ರಹ್ಮ' ಈಶ್ವರ ತತ್ವವೇ ಆಗಿದೆ. ಅದರ ಸೃಷ್ಟಿ ಸ್ಥಿತಿ ಲಯ ಕಾರ್ಯಗಳನ್ನು ಗುರುತಿಸಲು ಬ್ರಹ್ಮ ವಿಷ್ಣು ಶಿವ ಎಂಬ ತ್ರಿಮೂರ್ತಿ ರೂಪಗಳನ್ನು ಹಿಂದೂ ಧರ್ಮದಲ್ಲಿ ಕಲ್ಪಿಸಲಾಗಿದೆ. ಪುರುಷ ಪ್ರಕೃತಿ ತತ್ವಗಳು ಕೂಡಿ ಬ್ರಹ್ಮಾಂಡವೆಲ್ಲ ಸೃಷ್ಟಿಯಾಗಿದೆ ಎಂಬುದನ್ನು ಸೂಚಿಸಲು ಶಿವ–ಪಾರ್ವತಿ, ವಿಷ್ಣು–ಲಕ್ಷ್ಮಿ, ಬ್ರಹ್ಮ–ಸರಸ್ವತಿ ಹೀಗೆ ದಂಪತಿ ದೈವಗಳನ್ನು ಕಲ್ಪಿಸಲಾಗಿದೆ. ಇದನ್ನು ಮಾನವೀಯಗೊಳಿಸಲು ಅವರಿಗೆ ಮನೆ(ಲೋಕ) ಮಕ್ಕಳನ್ನೂ ಕಲ್ಪಿಸಲಾಗಿದೆ. ಇನ್ನೂ ದೇವಾನು ದೇವತೆಗಳೆಲ್ಲ ಇದ್ದಾರೆ. ಆದರೆ ಈ ಎಲ್ಲ ಬಹುತ್ವದ ಹಿಂದೆ

ಏಕದೇವ ಪರಬ್ರಹ್ಮ ತತ್ವವೇ ಇದೆ. ಅದರ ಮಹಿಮೆ ಅಗಾಧ ವಾದುದು. ಆತನ ಮಹಿಮೆಯನ್ನು ಯಾವನೂ ಪ್ರಶ್ನಿಸಲು ಸಾಧ್ಯ?

೪

ಅಂಗಕ್ಕೆ ವಸ್ತ್ರನಾದ। ಲಿಂಗಕ್ಕೆ ಪೀಠಾದ।
ಜಂಗಮನು ತಾನಾದ ಜಗಕೆಲ್ಲ
ಜಂಗಮನು ತಾನಾದ ಜಗಕೆಲ್ಲ। ಪರಬ್ರಹ್ಮನ।
ಅಂಗ ಹೋಲುವವನ ಹೆಸರೇನು ॥ಸುವ್ವಿ॥

ತಾತ್ಪರ್ಯ : ಪರಬ್ರಹ್ಮನೇ ಅಂಗ ಲಿಂಗ ಜಂಗಮಗಳ ವಿಭಿನ್ನ ರೂಪಗಳನ್ನು ತಳೆದ. ಅಂಗ ಮುಚ್ಚುವ ಬಟ್ಟೆಯೂ ಅವನೆ, ಲಿಂಗದ ಆಧಾರವಾದ ಪೀಠವೂ ಅವನೆ, ಅವನ ಅಂಗವನ್ನು ಹೋಲುವವನ ಹೆಸರೇನು? ಎಂದರೆ ಅವನು ಅನುಮಪ ಏಕಮೇವ ಅದ್ವಿತೀಯ.

೫

ಅಲ್ಲಗಧಿಕವಾದ। ಮುಲ್ಲಗ ಚೂರ್ಯಾದ।
ಕಲ್ಲು ತಾನಾದ ಜಗಕೆಲ್ಲ
ಕಲ್ಲು ತಾನಾದ ಜಗಕೆಲ್ಲ ಪರಬ್ರಹ್ಮನ।
ಸೊಲ್ಲು ಕೇಳುವವನ ಹೆಸರೇನು ॥ಸುವ್ವಿ॥

ತಾತ್ಪರ್ಯ : ಮುಸ್ಲಿಮರ ದೈವ ಅಲ್ಲಾನಿಗೂ ಹಿಂದೂಗಳ ಏಕದೇವ ಪರಬ್ರಹ್ಮನಿಗೂ ತಾದಾತ್ಮ್ಯವಿದೆ. ಪರಬ್ರಹ್ಮ ಪರಿಕಲ್ಪನೆ ಅಲ್ಲಾನಿಗಿಂತ ವಿಶಾಲವಾದುದು. ಮುಲ್ಲಾ (ಮುಸ್ಲಿಮರ ಗುರುವರ್ಗ)ನ ಆಯುಧ ಚೂರಿಯೂ ಆತನೇ, ಜಗತ್ತಿನ ಕಲ್ಲುಗಳೆಲ್ಲ (ಬೆಟ್ಟಗಳೆಲ್ಲ) ಅವನೇ ಕಲ್ಲಿನ ದೇವರುಗಳೆಲ್ಲ ಅವನೇ. ಆತನ ಬಗ್ಗೆ ವಿವರಗಳನ್ನು ಬಣ್ಣಿಸಲು ಸಾಧ್ಯವಿಲ್ಲ. ಆತನನ್ನು ಪ್ರಶ್ನಿಸುವುದೂ ಸಾಧ್ಯವಿಲ್ಲ.

೬

ಅಪ್ಪಗ ಜೀವನ ಕೊಟ್ಟ। ಮುಪ್ಪಿಗೆ ಕೋಲನ ಕೊಟ್ಟ।
ಕಪ್ಪರ ಕೊಟ್ಟ ಜಗಕೆಲ್ಲ
ಕಪ್ಪರ ಕೊಟ್ಟ ಜಗಕೆಲ್ಲ। ಪರಬ್ರಹ್ಮನ।
ತಪ್ಪು ಕೇಳುವವನ ಹೆಸರೇನು ॥ಸುವ್ವಿ॥

ತಾತ್ಪರ್ಯ: ಮಾನವರಿಗೆಲ್ಲ(ಜಗದ ಜೀವರಾಶಿಗೆಲ್ಲ) ಆತನೆ ಜೀವ ಕೊಟ್ಟ, ಅನ್ನ ಬದುಕು ಬಾಳುಗಳನ್ನು ಕೊಟ್ಟ, ಕೊನೆಗೆ ಮುಪ್ಪಿನಲ್ಲಿ ಆಸರೆಯಾಗುವ ಊರು

ಗೋಲನ್ನೂ ಕೊಟ್ಟ, ತಿರಿದುಣ್ಣುವ ಭಿಕ್ಷಾಪಾತ್ರೆಯನ್ನೂ(ಮಾಡಿ ಉಣ್ಣುವ ಪಾತ್ರೆಗಳಿಂದ ಹಿಡಿದು) ಆತನೇ ಕೊಟ್ಟ, ಜಗತ್ತಿನ ಜೀವ ಬದುಕು ಆಸರೆ ಎಲ್ಲವೂ ಆತನು ಕೊಟ್ಟಂಥವೇ. ಆತನಲ್ಲಿ ತಪ್ಪು ಹುಡುಕಲು ನಾವೆಷ್ಟರವರು!

೭

ಹೆಡಗಿ ಬುಟ್ಟಿಯ ಕೊಟ್ಟ| ಗಡಿಗಿ ಕೋಲನೆ ಕೊಟ್ಟ|
ಬಡಿಯುವದು ಕೊಟ್ಟ| ಕಲಿಯುಗಕ್ಕೆ
ಬಡಿಯುವದು ಕೊಟ್ಟ| ಕಲಿಯುಗಕ್ಕೆ| ಪರಬ್ರಹ್ಮನ|
ಗೊಡವಿಗ್ಹೋಗವನ ಹೆಸರೇನು ॥ಸುವ್ವಿ॥

ತಾತ್ಪರ್ಯ : ಪ್ರಪಂಚದ ಪ್ರತಿಯೊಂದು ವಸ್ತುವಿನಲ್ಲೂ ಆತನೇ ಇದ್ದಾನೆ. ಮಾನವನಿಗೆ ಅವನ್ನು ಬಳಸಿಕೊಂಡು ಬದುಕಲು ಆತನೇ ಎಲ್ಲವನ್ನೂ ಕೊಟ್ಟಿದ್ದಾನೆ. ಹೆಡಿಗಿ ಬುಟ್ಟಿ ಗಡಿಗಿ ಕೋಲು, ಬಡಿಯುವ ಆಯುಧ ಮುಂತಾದುವು ಮಾನವ ನಿರ್ಮಿತವೇ ಆದರೂ ಅವುಗಳನ್ನು ಮಾಡಿಕೊಳ್ಳುವ, ಬಳಸಿಕೊಳ್ಳುವ ತಿಳುವಳಿಕೆ, ಕಲೆ, ಜಾಣ್ಮೆ ಎಲ್ಲವೂ ಆತನು ದಯಪಾಲಿಸಿರುವವೇ. ಆತನ ತಂಟೆಗೆ ಹೋಗುವವ ಮೂರ್ಖ.

೮

ದೇಶಕಧಿಕವಾದ ಕಾಸಿ| ವಲಿ ಮಂಜರದ|
ಗಿರಿದಾಸ ಹಾಕಿದನು| ಮುಂಡಿಗಿಯ ॥ಸುವ್ವಿ॥
ಗಿರಿದಾಸ ಹಾಕಿದನು| ಮುಂಡಿಗಿಯ ಪರಬ್ರಹ್ಮನ|
ದೇಶ ಕೇಳುವವನ ಹೆಸರೇನು ॥ಸುವ್ವಿ॥

ತಾತ್ಪರ್ಯ : ಈತ ಗಿರಿದಾಸ ಮುಂಡಿಗೆಯನ್ನು ಹಾಕಿದವನು. ಮೌನೇಶ್ವರರಲ್ಲದೆ ಬೇರೆ ಯಾರೂ ಆಗಿರಲು ಸಾಧ್ಯವಿಲ್ಲ. ಪರಬ್ರಹ್ಮ ಸರ್ವವ್ಯಾಪಿ, ಸರ್ವಾಂತರ್ಯಾಮಿ; ಸರ್ವದೇಶಗಳು(ಇಡೀ ಬ್ರಹ್ಮಾಂಡವೇ) ಅವನವೇ ಆಗಿರುವಾಗ ಆತನ ಸ್ಥಳ–ದೇಶ ಯಾವುದು ಎಂದು ಕೇಳುವುದು ದಡ್ಡತನ.

ಅನುಬಂಧಗಳು

೧. ವಚನಗಳ ಅಕಾರಾದಿ
೨. ಸಾಂಸ್ಕೃತಿಕ ಪದಕೋಶ
೩. ಪರಾಮರ್ಶನ ಕೃತಿಗಳು

ವಚನಗಳ ಅಕಾರಾದಿ

ಅ

೧.	ಅಂಕುಶವಿಲ್ಲದೆ ಆನೆ ನಡೆಯದು	೨೪೪
೨.	ಅಂಗ ಶೃಂಗಾರವಾದ ಜಂಗಮಕ್ಕೆ ಬಹು ಪ್ರೀತಿ	೫೧೭
೩.	ಅಂಗಡಿಗೆ ಹೋಗಿ ಕೊಂಡು ತಂದು ಲಿಂಗವನು	೫೨೯
೪.	ಅಂಗಡಿ ರಾಜ ಬೀದಿಯೊಳು ಬಂಗಿ ಸುರೆ ಮಾಂಸ	೧೮೯
೫.	ಅಂಗಿ ಅಂಗಕೆ ಲೇಸು ಭಂಗಿ ಕಾಯಕ ಲೇಸು	೫೭೧
೬.	ಅಂಟು ಕಾಚನು ಕರೆದು ಎಂಟು ದಿನದೊಳ ಹೊರಗು	೨೨೦
೭.	ಅಂಡುತುಂಡವ ಕಂಡೆ ದುಂಡಕಿರುವುದು ಕಂಡೆ	೬೯೭
೮.	ಅಂತರದ ಮೇಘಕ್ಕೆ ಎಂಥವರ ಮಾತಿಲ್ಲ	೨೧೨
೯.	ಅಂತರದಲವರೀರ್ವರು ನಿಂತುಳಿಗೆ ಅಷ್ಟಂಜನ	೬೯೪
೧೦.	ಅಂತಸ್ತ ಬಹಿರಂಗ ಸಂತೋಷದ ಹಣವಲ್ಲ	೬೯೫
೧೧.	ಅಂದಕ್ಕೆ ಅದವಾನಿ ಚಂದಕ್ಕೆ ಕಂದನವಳ್ಳಿ	೬೭೯
೧೨.	ಅಂದವಾದಾಭರಣ ಚಂದದ ಭೂಷಣ	೬೯೨
೧೩.	ಅಂದಿನಾ ಸುತ್ತಿಗೆಯಿಂದ ಹಸ್ತದಿ ಪಿಡಿದು	೬೯೬
೧೪.	ಅಂಬಲಿ ಉಣಬೇಕು ಕಂಬಳಿ ಹೊದಿಯಬೇಕು	೧೬೯
೧೫.	ಅಕ್ಕನಾದರೇನು ತಂಗಿಯಾದರೇನು	೩೧೫
೧೬.	ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ	೬೯
೧೭.	ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ	೧೦೩
೧೮.	ಅಕ್ಕನಾಗಲಿಯ ಮಗ ಚಿಕ್ಕ ಚೆನ್ನಬಸವಣ್ಣ	೬೪೧
೧೯.	ಅಕ್ಕಸಾಲೆ ತಾನಾದ ಅಲ್ಲಮಪ್ರಭುದೇವ	೪೬
೨೦.	ಅಕ್ಕಸಾಲೆಯನಾದ ಅಲ್ಲಮಪ್ರಭುರಾಯ	೬೬
೨೧.	ಅಕ್ಕಸಾಲೆನಾದ ಅಲ್ಲಮಪ್ರಭುರಾಯ	೫೧೯
೨೨.	ಅರ್ಕಸಾಲೆಯನಾಗಿ ಚೊಕ್ಕ ಬೆಳ್ಳಿಯ ಕಾಸಿ	೧೨೮

೨೩. ಅಗಣಿತದ ಶರಣರು ಒಂದೆ ವಿಗಡದಿಂದಿಳಿದರು ೬೯೧
೨೪. ಅಗ್ಗವಣಿ ಒಂದಾದ ಮೇಲೆ ಅನ್ನವು ಬ್ಯಾಕ್ಯಾಗುವುದೆ ೫೦೧
೨೫. ಅರ್ಜಿ ಕೇಳುವರಿಲ್ಲ ಮರ್ಜಿ ಮಾನಗಳಿಲ್ಲ ೬೩೩
೨೬. ಅಚ್ಚ ನಿರ್ವಾಣಿಗೆ ಮಕ್ಕಳು ಸಲ್ಲುವವೆ ೪೩
೨೭. ಅಚ್ಚ ಶ್ವಾನನು ಬಂದು ಎಚ್ಚೆತ್ತು ವೇದವನೋದಲು ೩೯
೨೮. ಅಡವಿ ಅಂಗಳಮಾಡಿ ಗಿಡವು ಪಟ್ಟಣಮಾಡಿ ೧೨೬
೨೯. ಅಡವಿಯಲಿ ಮಳೆ ಬಡಿದು ಗಿಡಬಳ್ಳಿ ನಡುಗಿ ೩೮೮
೩೦. ಅತ್ತಿ ಆಲದ ಹಣ್ಣು ಮತ್ತ ಬೋರೆಯ ಹಣ್ಣು ೫೦೨
೩೧. ಅರ್ಥವಿಲ್ಲದ ಮಾತು ನಿರ್ತು ಇಲ್ಲದ ಶೀಲ ೪೩೩
೩೨. ಅದಕ್ಕೆ ಅದೇ ಸಾಕ್ಷಿ ಕದಕ್ಕೆ ನೂಕುವುದೇ ಸಾಕ್ಷಿ ೫೭೦
೩೩. ಅನ್ನ ಪ್ರಸಾದವ ನೀಡಿದೆನೆಂಬ ಬಣ್ಣದ ಹಮ್ಮಿಲಿ ೬೬೦
೩೪. ಅನುಮಾನವಿಲ್ಲದೆ ಘನದೋಷ ಮಾಡಲು ೧೬೨
೩೫. ಅನ್ಯ ಕಳಸಕ್ಕೆ ಹೆಣಗುವ ಕುನ್ನಿಗಳು ೭೦೨
೩೬. ಅನ್ಯಾಯದ ಹಣಕ್ಕೆ ಕಣ್ಣ ದಾನವೇ ಸಾಕ್ಷಿ ೨೨೫
೩೭. ಅಬ್ಬರದ ರೌಸು ಬೊಬ್ಬೆ ಹುಯ್ಯಲಿಗಳು ೧೭೮
೩೮. ಅಯ್ಯಾ ಬೇವಿನ ಕಾಯಿಯಷ್ಟು ಲಿಂಗವ ಧರಿಸಿದರೆ ೫೩೦
೩೯. ಅರವಟ್ಟಿಗೆ ಇಕ್ಕಿಸಿ ಕೆರೆಬಾವಿ ಕಟ್ಟಿಸಿ ೨೪೩
೪೦. ಅರವತ್ತಾರು ಕೋಟಿ ಹರನ ಗಣಂಗಳ ೩೭
೪೧. ಅರವಿ ಕುಂಚಿಗೆಯಲ್ಲ ಶಳದು ಕೌದಿಯ ಹೊಲಿದು ೭೦೧
೪೨. ಅರಿವು ಅತಿಗಳೆದರೆ ಗರುವ ಪರಿಹರಿಸುವ ೫೦
೪೩. ಅರಿವಿಲ್ಲದವನಿಗೆ ಗುರುವಿಲ್ಲ ದೈವವಿಲ್ಲ ೩೬೪
೪೪. ಅಲ್ಲಮನ ಪಡಿಲೆಂಕ ನಿಲ್ಲದೋಲೆಯ ತಂದಾನೆ ೬೮೭
೪೫. ಅಲ್ಲಮುಲ್ಲಾ ಬಾಲ ವಿರಕ್ತನ ಮಾಲೆ ೪೧೦
೪೬. ಅಲ್ಲಿ ಶಿವಶರಣರ ಮನೆಯ ಪಾದರಕ್ಷೆಯ ೧೧೯
೪೭. ಅಳವುಯಿಲ್ಲದ ಕಲ್ಲಿಗೆ ಉಳಿ ಕೊಡತಿಯ ಹಿಡಿದಾನೆ ೭೦೦
೪೮. ಅವಗುಣದ ಅಪೇಕ್ಷೆ ಶಿವಗುಣವ ಮಸಣಿಸಿತು ೩೨೮
೪೯. ಆವತಾರ ಮುಗಿಯಲು ಶಿವ ತಾನು ಒಯ್ವನು ೩೩೮
೫೦. ಅವರಿಗೆ ಅವರಂತಾಗಿ ಇವರಿಗೆ ಇವರಂತಾಗಿ ೯೪
೫೧. ಅಶುಭ ಪಶುವದು ವಿಷಕಾರುತಿದ್ದುದು ೧೬೩
೫೨. ಅಷ್ಟದಿಕ್ಪಾಲಕರು ಮುನ್ನೂರಂಗುಲ ನಾಲ್ಕರ ೫೯೨

೫೩. ಅಷ್ಟು ಹುಳಗಳನೆಲ್ಲ ಮೆಟ್ಟಿ ಗಾಣಕೆ ಹಾಕಿ ೪೯೬
೫೪. ಅಸಭ್ಯ ಪಶುವನು ತಿಂದೆ ವಿಷವು ಖಾರವು ತಿಂದೆ ೬೨೭
೫೫. ಅಸಮಯ ರುದ್ರನು ಕುಶಲ ಸಂಸಾರನು ೪೩೪
೫೬. ಅಸಮಾಯದ ದುರ್ಗಿಯು ವಸುಧಿಯೊಳು ಬ್ಯಾಟಿಯನು ೬೯೯
೫೭. ಅಸ್ತಿ ಮಾಂಸ ನರಕೆ ಸುತ್ತು ಚರ್ಮದ ಹೊದಿಕೆ ೧೬೫
೫೮. ಅಳಿದರೆ ಹೋಗುವುದಲ್ಲ, ಕಳೆದರೆ ಹುಡುಕುವುದಲ್ಲ ೫೫೬
೫೯. ಅಳಿವ ಅಳತಿಯ ಕೊಂಡು ಕೊಳಗವ ಪಿಡಿದುಕೊಂಡು ೭೦೩
೬೦. ಅಕ್ಷತಿಯನಿಟ್ಟ ಮೇಲೆ ಠಕ್ಕೊಂದು ಬಿಡಬೇಕು ೨೯೫
೬೧. ಅಕ್ಷರವೆಂಬಂತಹ ಲೆಕ್ಕ ನಿಮಗೇತಕ್ಕೆ ೩೧೯

ಆ

೬೨. ಆಕಾರ ಅದಕಿಲ್ಲ ಬೇಕಾದರೆ ಇರುವದು ಸಾಕಾದರೆ ೬೦೦
೬೩. ಆಕಾರದಂಗಕ್ಕೆ ನಾಲ್ಕೆಂಟು ಖಿಡ್ಗಗಳು ೬೧೧
೬೪. ಆಕಾಶ ಭೂಕಾಂತಿ ಏಕಲಿಂಗವಾಗಿರಲಿಕ್ಕೆ ೫೧೧
೬೫. ಆಕಾಶ ಭೂಕಾಂತಿ ಏಕ ಮಾಡಿದ ೬೦೧
೬೬. ಆಗಲೆ ನಾ ಬಂದೆ ಅಡವಿ ಅಂಗಳ ಮಾಡಿ ೮೦
೬೭. ಆಚಾರ ಅನುಭಾವ ಸೂಚನೆ ಸೂಕ್ಷ್ಮ ದೀಕ್ಷೆ ೬೬೩
೬೮. ಆಚೆ ಈಚೆಗೆ ಮಾಡಿ ನಾಚಿಕೆಯ ಕೊಂಡನು ೭೦೪
೬೯. ಆಚೆ ಈಚೆಗೆ ತಿರುಗುವ ಕೋತಿಗಳಾಗಬೇಡಿ ೬೭೪
೭೦. ಆಟ ತೋಟವ ಮಾಡಿ ನೇಟಿನ ಬೇಲಿಯ ಹೂಡಿ ೭೦೫
೭೧. ಆಡಿನ ಹಿಕ್ಕಿಯಲ್ಲಿ ಮಾಡಿದರು ಲಿಂಗವನು ೫೩೨
೭೨. ಆಡಿದಂತಾಡಿದರೆ ಕೋಡಗನ ಮುಖ ಪದ್ಮ ೨೭೯
೭೩. ಆಡು ಕಾಯುವವನ ಬುದ್ಧಿ ಅರಸುಗಳಿಗಿದ್ದರೆ ೧೪೮
೭೪. ಆಡು ಕುದುರೆಯ ತಿಂದೆ ಕೋಡಗ ಕೋಣನ ತಿಂದೆ ೧೬೭
೭೫. ಆಡುದಾಸು ಕೇಳಿದಾತ ಅರಸು ತಾನಲ್ಲ ೨೬೫
೭೬. ಆದಿ ಅಲ್ಲಮ ಪ್ರಭುವಿನ ಭೇದವ ತಿಳಿಯದೆ ೬೮೮
೭೭. ಆದಿಯಲಿ ಪರಬ್ರಹ್ಮ ವೇದ ಸಂಪನ್ನ ೫೬
೭೮. ಆದಿಯಲಿ ಅಡಿಗಲ್ಲು ಬಾಧೆಗೆ ಚಮ್ಮಟಿಗಿ ೧೨೭
೭೯. ಆನೆಗೆ ಅಂಕುಶವು ಜ್ಞಾನಿಗೆ ಶಾಸ್ತ್ರವು ೫೬೮
೮೦. ಆನೆ ನೀರಾಟವಾಡಿದರೆ ಮೀನುಗಳು ಅಂಜುವವೆ? ೩೭೦
೮೧. ಆನೆಯ ಒಳನಡುವ ಆಯುಧವ ಮಾಡಿದ ೬೧೪

೮೨. ಆನೆಯನೇರಿದವ ಸ್ವಾನಂಗೆ ಅಂಜುವನೆ ೪೦೬
೮೩. ಆಯವುಳ್ಳ ಮರ ಕಡಿದು ಛಾಯದ ಬೊಂಬೆಯ ಮಾಡಿ ೬೧೬
೮೪. ಆಯವಾದಾಭರಣ ಛಾಯವಾದ ಭೂಷಣ ೬೯೩
೮೫. ಆಯ ಹನ್ನೆರಡರ ರಾಯಬಸವಯ್ಯ ತಾನು ೭೦೭
೮೬. ಆರನಳಿದಂಥವರು ಮಾರಹರ ಮಾದೇವರು ೨೯೧
೮೭. ಆರಾರು ನೋಡಿದರೆ ಆರಂತೆ ಇರುವನು ೩೧೨
೮೮. ಆರು ಚಿಂತೆಗಳೆಲ್ಲ ಧಾರುಣಿಯ ನರರಿಗೆ ೩೧೮
೮೯. ಆರು ಮಣವನೆ ಹೊತ್ತು ಭೂಮಿಗೆ ಚಿಂತಿಸುವದು ೫೩
೯೦. ಆರು ದರುಶನದ ಮಾರಿಯ ಮುರಿದಾನೆ ೬೬೯
೯೧. ಆರು ದರುಶನದವರಿಗೆ ಅಹಂಕಾರವ್ಯಾಕೊ ೪೬೧
೯೨. ಆರು ದರುಶನದಾಟವು ತೀರಿಹೋದ ಮೇಲೆ ೪೬೨
೯೩. ಆರು ದರುಶನದ ಬೆರಕಿಯ ಮಾತು ಕೇಳ ೨೭೬
೯೪. ಆರು ದರುಶನದಳಿಯ ನೂರಾವಂದು ಕುಲದಳಿಯನೆ ೭೦೬
೯೫. ಆರು ಶಾಸ್ತ್ರಕ್ಕೆ ಐನೂರು ಶಾಸ್ತ್ರಕ್ಕೆ ೨೬೨
೯೬. ಆವ ಪ್ರಮಾಣವನರಿಯೆ ದೇವ ಪ್ರಮಾಣವ ಬಲ್ಲರು ೫೫೩
೯೭. ಆವು ಎಮ್ಮಿಯೆ ಲಿಂಗ ವಾಯು ಅಗ್ನಿಯೆ ಲಿಂಗ ೫೩೪
೯೮. ಆಶೆ ಅಳಿಯಲಿ ಬಂದ ಮೋಸ ತಿಳಿಯಲಿ ಬಂದ ೭೦೮
೯೯. ಆಶೆ ಪಾಶೆಯುವಂದೆ ಈಸುವ ಕರುವಂದೆ ೨೭೮
೧೦೦. ಆಸಾದಿ ಗುರುಮೂರ್ತಿ ಪೋತರಾಜನೆ ದೈವ ೪೮೫
೧೦೧. ಆಸೆ ಮಾತಾಡುವ ಹೇಸಿ ಮಾನವನಲ್ಲ ೭೬
೧೦೨. ಆಸೆಯನಳಿದರೇನು, ಸನ್ಯಾಸಿಯಾದರೇನು ೫೪೮
೧೦೩. ಆಸೆಯೆಂಬ ವೇಶ್ಯೆ ಎನ್ನ ಘಾಸಿ ಮಾಡುತ್ತಾಳೆ ೫೪೯
೧೦೪. ಆಳಿನ ಮನೆಯ ಆಳು ನಾನು ಬಹಳ ಬಡವನು ೭

ಇ

೧೦೫. ಇಕ್ಕಳವೆ ಕುಲದೈವ ಸುತ್ತಿಗೆ ಮನಿದೈವ ೬
೧೦೬. ಇಕ್ಕಳ ಸುತ್ತಿಗೆ ಲೆಕ್ಕಕ್ಕೆ ಬರುತಾವೆ ೭೦೯
೧೦೭. ಇಕ್ಕಿದಲ್ಲಿರದು ಠಕ್ಕೊಂದು ಮಾಡುವುದು ೧೯೪
೧೦೮. ಇಚ್ಛೆಗಿಲ್ಲದ ಸತಿಯ ಹುಚ್ಚೆಂದು ಬಿಡಬೇಕು ೨೭೬
೧೦೯. ಇಚ್ಛೆಯಿಚ್ಛೆಗೆ ಮಾತನಾಡುವ ಹುಚ್ಚರ ಮಾತಲ್ಲ ೨೫
೧೧೦. ಇಂಥ ಆಚಾರವನು ವಿಶ್ವನಾಥನೆ ಬಲ್ಲ ೪೧೧

೧೧೧. ಇಂಥ ಆಚಾರವನು ವಿಶ್ವನಾಥನೆ ಬಲ್ಲ ೧೪೦
೧೧೨. ಇಂದ್ರನ ಮೈ ಭಗವಾದದ್ದು ಚಂದ್ರನಿಗೆ ಕ್ಷಯವಾಗಿ ೩೬
೧೧೩. ಇಂದಿನದು ನಾಳಿಲ್ಲ ಹಿಂದಿನದು ಮುಂದಿಲ್ಲ ೫೫೫
೧೧೪. ಇಂದ್ರಿಯ ಸೂತಕದಿಂದ ಅಂದು ನಾ ಜನಿಸಿದೆ ೩
೧೧೫. ಇಂದ್ರಿಯ ಸೂತಕವೊಂದೆ, ಕಂದನ ಜನಿತಗಳೊಂದೆ ೪೬೦
೧೧೬. ಇದ್ದಲ್ಲಿ ಇರುವುದಲ್ಲ ಕದ್ದು ಒಯ್ಯುವುದಲ್ಲ ೬೧೨
೧೧೭. ಇಪ್ಪತ್ತೇಳು ಕೋಟಿ ಮುಕ್ಕಣ್ಣನ ಶರಣರ ೪೨೯
೧೧೮. ಇರಿವೆಯ ಪ್ರಾಣ ಕ್ಷಯವು ಗಿರಿಗಿಂತ ಘನದೋಷ ೨೨೩
೧೧೯. ಇರುವಿ ಮೊದಲು ಆನೆ ಕಡೆಯಾಗಿ ಎಂಭತ್ನಾಲ್ಕು ಲಕ್ಷ ೭೧೦
೧೨೦. ಇರುವುದು ವರವಿ ಮೆರೆವುದು ಲಿಂಗನಬಂಡಿ ೭
೧೨೧. ಇಲಿಯ ತಿಂಬುವ ಬೆಕ್ಕು ಒಲಿಯುತಿದೆ ಮನೆಯೊಳಗೆ ೪೮೨

ಈ

೧೨೨. ಈತ ಹಿಂದು ಮುಸಲ್ಮಾನ ಹೋತೆ ೪೯೭

ಉ

೧೨೩. ಉಂಬಂತೆ ಉಣಬೇಕು ಕೊಂಬಂತೆ ಕೊಳಬೇಕು ೧೫೬
೧೨೪. ಉಂಡ ಗಣಂಗಳ ಕಂಡು ಹಿರಿಹಿರನೆ ಹಿಗ್ಗಿ ೨೦೫
೧೨೫. ಉಂಬೋದು ಹಿಡಿ ಅನ್ನ ಕೊಂಬೋದು ವಕ್ಕುಡತಿ ನೀರು ೨೪೦
೧೨೬. ಉಕ್ಕಳದ ಕಾವಿಗೆ ಮೆಚ್ಚರು ನಮ್ಮವರು ೫೭
೧೨೭. ಉಕ್ಕಿನ ಕೌಪವ ಧರಿಸಿ, ಈರೇಳು ಭುವನ ಚರಿಸಿ ೬೮೬
೧೨೮. ಉಕ್ಕು ಕಬ್ಬಣದ ಮಗನೆಂಬುದು ದಿಕ್ಕೆಲ್ಲ ಬಲ್ಲುದು ಅದರ ೪೪೧
೧೨೯. ಉಕ್ಕು ತಿಳಿದರೆ ಕಾಣಿಸುವದು ಉದಕ ತಿಳಿದರೆ ಕಾಣಿಸುವದು ತನ್ನ ೩೧೩
೧೩೦. ಉಗ್ರದ ಮರುಷರಿಗೆ ನಿಗ್ರಹಗಳಾದರೆ ೧೭೯
೧೩೧. ಉಚ್ಚಿಯ ಕುಣಿಯೊಳು ಉಚ್ಚಿ ಬಿದ್ದದ್ದು ನಾ ಬಲ್ಲೆ ೪೩೯
೧೩೨. ಉಡುಗಿಯ ಉಟ್ಟಾರು ತೊಡುಗಿಯ ತೊಟ್ಟಾರು ೭೧೧
೧೩೩. ಉಣಲಿಕ್ಕೆ ಅನ್ನವಿಲ್ಲ ನೆಣವು ಮೈಯೊಳಗಿಲ್ಲ ೨೩೦
೧೩೪. ಉಣ್ಣದ ದೇವರಿಗೆ ಹಣ್ಣು ಘೃತ ಕ್ಷೀರ ನೈವೇದ್ಯ ೨೦೨
೧೩೫. ಉಣ್ಣುವ ದೇವರಿಗೆ ಟೊಣ್ಣೆಯ ನೈವೇದ್ಯ ೨೦೩
೧೩೬. ಉತ್ತರಕ್ಕೆ ಉತ್ತವ ಕಂಡೆ ಉತ್ತಕ್ಕೆ ಮಾರ ಕಂಡೆ ೬೦೨
೧೩೭. ಉತ್ತರದೇಶದಲಿ ಕಿತ್ತುವ ಮಾರ್ಬಲಗಳು ೭೧೨
೧೩೮. ಉದಯ ಕಾಲದೊಳೆದ್ದು ನದಿಯ ಮುಖದರ್ಶನವು ೨೮೬

೧೩೯. ಉಪ್ಪು ಊಟಕ್ಕೆ ಲೇಸು ಕಪ್ಪು ನೊಸಲಿಗೆ ಲೇಸು ೨೪೬
೧೪೦. ಉದ್ದವಾದುದು ಮುರಿದೀತು ಹಿಗ್ಗಿದುದು ಹರಿದೀತು ೬೬೬
೧೪೧. ಉರಗನ ಭಕ್ಷಕನಿಗೆ ಕ್ಷೀರವ ಎರೆಯಲು ವಿಷವು ತಾ ೬೦೩
೧೪೨. ಉರಿವದು ಮೆರೆವದು ತಿರಿವದು ಸಲ್ಲುವದೆ ೯೩
೧೪೩. ಉಸುರು ನಿಲ್ಲಿಸುವರಿಲ್ಲ ಬಿಸಿಲು ನೆರಳ ಹಿಡಿಯುವರಿಲ್ಲ ೫೫೯
೧೪೪. ಉಳಿಯ ಮುಟ್ಟದ ಲಿಂಗ ಪ್ರಳಯ ಹೊಂದದ ಲಿಂಗ ೮೫
೧೪೫. ಉಳಿಯ ಹಂಗಿಲ್ಲದೆ ಇಳೆಯೊಳು ಲಿಂಗವಾದ ೮೧

ಊ

೧೪೬. ಊರ ಹಿಂದಿನ ಗುಂಡ ಕಂಡವರು ಕಾಲೆದ್ದಿ ೪೭೮
೧೪೭. ಊರ ನಡತೆಗಳು ಎನಗೆ ಸರಿಬಾರವು ೩೭೮
೧೪೮. ಊರುಂಬ ಬಾವಿಯೊಳು ನೂರು ಕೋಟಿ ಹುಳವು ೪೯೮
೧೪೯. ಊರೆಲ್ಲ ನೆಂಟರು ಕೇರೆಲ್ಲ ಬಳಗ ೪೩೫

ಎ

೧೫೦. ಎಚ್ಚಗರ ಆಲಯದ ಇಚ್ಚೆಯ ಆಳಯ್ಯ ಶಿವನು ೩೮೩
೧೫೧. ಎಚ್ಚರವ ತಪ್ಪಿದವರ ಕೊಚ್ಚುವ ಕೈ ಬಾಚಿಯಲಿ ೬೭೮
೧೫೨. ಎಂಜಲು ಮೈಲಿಗಿ ಹೊಂದಿದ ಕಾರಣದಿಂದ ೪೯೨
೧೫೩. ಎಂಟು ಎಸಳಿನ ಪಂಟಿಗೆಯ ಕಮಲದೊಳಗೆ ೫೯೮
೧೫೪. ಎಂಟು ದಿಕ್ಕಿಗೆಲ್ಲ ಕಂಟಕವ ಬಂದೀತು ೭೧೩
೧೫೫. ಎತ್ತನು ಎಳಸುವಿರಿ ಕತ್ತೆಯ ಹೊರಸುವಿರಿ ೫೦೮
೧೫೬. ಎತ್ತನೆ ಹೂಡಿದೆ ಕತ್ತೆಯ ಹೇರಿದೆ ೨೩೮
೧೫೭. ಎತ್ತಿಗೆ ತೊತ್ತಿಗೆ ಕತ್ತೆಗೆ ಕುದುರೆಗೆ ೨೩೬
೧೫೮. ಎತ್ತಿನವರು ಎಮ್ಮೆಯವರು ಕತ್ತೆಯವರು ಕುದುರೆಯವರು ೬೦೪
೧೫೯. ಎತ್ತು ಎಮ್ಮಿಗೆ ಕುಲವು ಕತ್ತೆ ಕುದುರೆಗೆ ಕುಲವು ೪೫೮
೧೬೦. ಎತ್ತು ಎಮ್ಮಿಯನೇರಿದರೆ ಹೆತ್ತ ತಾಯಿಯ ಜರಿದರೆ ೧೫೮
೧೬೧. ಎತ್ತು ಎಮ್ಮಿಯೆ ಲಿಂಗ ಜತ್ತಿಗಿ ಮಿಣಿ ಲಿಂಗ ೫೩೩
೧೬೨. ಎತ್ತು ಮಾರುವವನಿಗೆ ಮುತ್ತಿನಾ ಬೆಲೆಯಿಲ್ಲ ೭೧೪
೧೬೩. ಎತ್ತು ಎಮ್ಮೆ ಸತ್ತರೆ ಹೊರುವವರು ಇವರು ೪೯೩
೧೬೪. ಎದ್ದು ಬಿದ್ದ ಕ್ಷತ್ರಿಯರ ಎತ್ತುವ ಗುರುಬಂದ ೪೯೯
೧೬೫. ಎಲ್ಲ ವಾಹನ ಭಂಗಿಸಲು ಗತಗತವಾದವು ೮೭
೧೬೬. ಎಲವು ಇಲ್ಲದ ನಾಲಿಗೆ ಹಲವು ಶಾಸ್ತ್ರವನೋದಿ ೪೯೪

೧೬೭. ಎಲ್ಲಾ ದೇವರನು ಕಲ್ಲಿನೊಳಗೆ ಮಾಡಿದರು ನಮ್ಮ ೩೦೮
೧೬೮. ಎಲುಬಿನ ಶರೀರವು ತೊಗಲಿನ ಮಡತವು ೪೬೯
೧೬೯. ಎಲೆಗಳಿಲ್ಲದ ವೃಕ್ಷ ತಲೆಯಿಲ್ಲದ ಮೃಗವು ೫೭೮
೧೭೦. ಎಷ್ಟು ಭ್ರಮಿಸಿದರಿಲ್ಲ ದೃಷ್ಟನಾದರಿಲ್ಲ ೯೮

ಏ

೧೭೧. ಏಕಾಂತ ಮಾತಾಡಿ ನೂಕಂತ ಕೊಲ್ಲಿಸುವರು ೫೩೯
೧೭೨. ಏಕಾಂತಕ್ಕೆ ಹೋದರೆ ಭೂಕಾಂತಿ ನೋಡಳೆ ೫೧೬
೧೭೩. ಏನಾದದ್ದು ತನ್ನ ಆನಂದ ತಾನೊಂದನಾಡಿದರೆ ೫೯೯
೧೭೪. ಏಳುನೂರೆಪ್ಪತ್ತುವರಿ ವರುಷದ ಊಳಿಗದ ೬೪೨
೧೭೫. ಏಳೇಳು ಕೋಟಿ ತಪ್ಪು ಮಾಡಿದೆ ಕೀಳು ನಾನಯ್ಯ ೨೧
೧೭೬. ಏಳೇಳು ಕೋಟಿ ಲಕ್ಷ ಭಾಳಾಕ್ಷನ ಶರಣರ ೧೦೫
೧೭೭. ಏಳೇಳು ಯುಗದಲ್ಲಿ ಕಾಳಿಯ ಮಗನಾನು ೯೨
೧೭೮. ಏಳೇಳು ಲೋಕದ ಒಡೆಯಂಗೆ ಕೀಳು ಒಪ್ಪವ ಹಾಕಿದವರುಂಟೆ ೫೨೩
೧೭೯. ಏಳೇಳು ಲೋಕದ ದೇವತೆಗಳು ಉಳಿಯಿಂದಲಾದಾವು ೩೦೯
೧೮೦. ಏಳೇಳು ಲೋಕವ ಗಾಳಿಯ ಮಾಡಿದ ೬೬೮
೧೮೧. ಏಳೇಳು ಲೋಕವನು ಗೂಳಿಯ ಮಾಡಿದ ೭೧೫
೧೮೨. ಏಸೇಸು ಜನ್ಮದಲ್ಲಿ ಕಶ್ಯಪನ ಮಗ ನಾನು ೮

ಐ

೧೮೩. ಐಕ್ಯ ಪರಬ್ರಹ್ಮ ಅನಂತ ಲೋಚನ ೫೩೬
೧೮೪. ಐನೂರು ಕೋಟಿ ಯೋಜನಕೆ ಕೌಲು ಬಂದಾವು ೨೨೬

ಒ

೧೮೫. ಒಡೆಯನು ಬಡವನೆಂದು ಬಡದಂಟನೆ ಮೆದ್ದು ೩೦೧
೧೮೬. ಒಡೆಯರು ಹೇಳಿದ ಮಾತಿಗೆ ನಡೆಯದ ಪಾಪಿಗೆ ೧೭೪
೧೮೭. ಒಡೆಯನಲ್ಲದಲೆ ವಡದಮಾನವನಲ್ಲ ೯೬
೧೮೮. ಒಡಲೊಳು ಇರುವಂಥ ಒಡೆಯರೊಂದೈವರು ೩೩೦
೧೮೯. ಒಂತಿನ ನರನಲ್ಲ ತಂತ್ರಿ ಅನಿಮಿಷಯ್ಯ ೪೩೧
೧೯೦. ಒಂದು ಹೊತ್ತುಗಳ್ಯಾಕೆ ವೃಂದಾವನದ ಮಡಿಯಾಕೆ ೪೩೦
೧೯೧. ಒಂದು ಹೊನ್ನು ಇದ್ದವರಿಗೆ ಕೊಂದಾರು ಬಡಿದಾರು ೭೧೬
೧೯೨. ಒಂದೂ ಅಕ್ಷರದ ಗುರುತ ಎಂದೆಂದು ನಾನರಿಯೆ ೨
೧೯೩. ಒಪ್ಪತ್ತಿನ ಊಟಕ್ಕೆ ಉಪ್ಪಿಲ್ಲದಿದ್ದರೆ ೨೭೫

ಓ

೧೯೪. ಓಜ ಒಕ್ಕಲು ದೊರೆ ಸಹಜದಿಂದಿದ್ದರೆ ೧೮೬
೧೯೫. ಓಜ ಒಕ್ಕಲು ದೊರೆಯು ಸಹಜದಿಂದ ಇದ್ದರೆ ೫೯೩
೧೯೬. ಓಜಿನ ಶರಣೆಂದು ಮೂದಲಿಸಿ ಕುರಿಗಳು ೧೦೦
೧೯೭. ಓದಿ ಹಾಡಿದರೇನು ಸ್ವಾದ ತಿಳಿಯದ ಮೂರ್ಖ ೩೬೭
೧೯೮. ಓದಿ ಹೇಳುವ ಹಾದಿಯ ಮಾತಲ್ಲ ಸಾಧನದಿಂದ ೨೨
೧೯೯. ಓರಂಗಲ್ಲಿನ ಧಣಿಯು ವೀರ ಗಣಪತಿರಾಯ ೬೩೯

ಕ

೨೦೦. ಕಂಚಿನ ಕಳಸಕ್ಕಾಡಿ ಮುಂಚಿನ ವೀಳ್ಯಕ್ಕಾಡಿ ೧೫೩
೨೦೧. ಕಂಚುಗಾರರ ಮನೆಯ ಕಂಚಿನ ತೆರನಂತೆ ೨೫೫
೨೦೨. ಕಂಡವರಿಗೆ ಹುಚ್ಚ ಕಾಣದವರಿಗೆ ಮೆಚ್ಚ ೭೪
೨೦೩. ಕಂಡುಮಾಡಿದ ಅಲ್ಪ ವ್ಯವಹಾರ ಕೊಂಡು ಮುಳುಗುವದು ೭೧೮
೨೦೪. ಕಂದು ಕಾವಿಯವಸ್ತ್ರ ಸರ್ವಾಂಗ ಧೂಳಿತ ೭೧೭
೨೦೫. ಕಂಬವೊಂದರ ಮೇಲೆ ರಂಭೆ ನಾಟ್ಯವನಾಡಿ ೫೬೯
೨೦೬. ಕಚ್ಚಿದರೆ ಹುಳಿಯಿಲ್ಲ ನೆಕ್ಕಿದರೆ ಸವಿಯಿಲ್ಲ ೫೬೩
೨೦೭. ಕಟಕಗಂತಕ್ಕರಣವೆ ಕಟುಕರಿಗೆ ನಿಜವಾಕ್ಯವೆ ೫೭೯
೨೦೮. ಕಟ್ಟಿದ ಗುಡಿ ದೈವ ಮೆಟ್ಟಿ ಮಾಡಿನೆಂಬುವುದು ೧೮೩
೨೦೯. ಕಟ್ಟಲು ಬಿಡಲಿಕ್ಕೆ ದೇವರು ಬಟ್ಟಲುದಕದಲ್ಯೆತೆ? ೩೦೪
೨೧೦. ಕಡಬಿನ ಕಾಳಗವಾಡಿ ತಡೆಯದೆ ಮಳೆಗರೆದ ೧೨೯
೨೧೧. ಕಡಿದ ಅಲಗಿನ ಚಾಜ ಪಡದಂಥವರಿಗೆ ಆಯಿತು ೨೬೩
೨೧೨. ಕಡಲ ಸಮುದ್ರ ನುಡಿಯನೆಲ್ಲವ ತನ್ನ ೬೨೦
೨೧೩. ಕಣ್ಣು ನಾಲಗೆ ಹುಬ್ಬು ಉನ್ನತದ ನಾಶಿಕವು ೩೭೨
೨೧೪. ಕತ್ತಲೆ ಕಾಳಮ್ಮ ಹೊತ್ತದೆ ಪರಬ್ರಹ್ಮ ೪೫೯
೨೧೫. ಕತ್ತೆ ಕುದುರಿಗೆ ಸರಿಯೆ ತೊತ್ತು ಗರ್ತಿಗೆ ಸರಿಯೆ ೨೬೦
೨೧೬. ಕತ್ತಿಯ ಹಿಡಿದುಕೊಂಡು ನೆತ್ತಿಯ ಕೊಯಿಕೊಂಡು ೪೦೧
೨೧೭. ಕದ್ದ ಕಳವು ಒಡೆಯಂಗೆ ಪಾಲನಿಕ್ಕದಿದ್ದರೆ ೪೦೦
೨೧೮. ಕನಸಿನಲ್ಲಿ ಕಂಡದ್ದು ನೆನೆಸಿದರೆ ಬರುವದೆ ೧೮೨
೨೧೯. ಕನ್ಯೆ ಕಾವೇರಿಯು ಹೆಣ್ಣು ಚಾಮಲದೇವಿ ೬೦೭
೨೨೦. ಕರ್ಮಕ್ಕೆ ಕಡಿಯಾಟ ಧರ್ಮಕ್ಕೆ ಚೆಲ್ಲಾಟ ೬೪೪
೨೨೧. ಕರ್ಮವು ಕರಿಗಡಬು ಧರ್ಮವೆ ಶ್ರವಣ ನಿರ್ಣಯ ವಿಷಯವು ೪೦೨

೨೨೨. ಕರಗಿ ಮಾಡಲಿ ಬಲ್ಲ ಒರೆದು ನೋಡಲಿ ಬಲ್ಲ ೧೪
೨೨೩. ಕರಚರಣಗಳಲ್ಲಿ ಕಾರ್ಯವನ್ನು ನಿರ್ಮಿತವ ಮಾಡಿದ ಗುರ್ತರಿಯೆ ೧೬
೨೨೪. ಕರಚರಣ ಮುಗಿಯುತ್ತ ಶಿರಸಾಷ್ಟಾಂಗವೆರಗಲು ೨೮೦
೨೨೫. ಕರದರೆ ವ್ಯಾಪಾರವಲ್ಲ ಕೊರೆದರೆ ಹರವುವದಲ್ಲ ೯೭
೨೨೬. ಕರವಗಲ್ಲಿನ ತೈಲ ಕೆರವಿಗೆ ಉಣಿಸಲುದ್ಭಯ ೪೦೪
೨೨೭. ಕರಿಯ ಕಲ್ಲನೆ ತಂದು ವರ್ಣ ವರ್ಣನೆ ಮಾಡಿ ೬೪
೨೨೮. ಕರುವ ಕಾಯುವವನ ಬುದ್ಧಿ ಹಿರಿಯರಿಗಿದ್ದರೆ ಈ ೧೪೬
೨೨೯. ಕರುವಿನ ಬಾಯಿ ಹೊಡೆದು ಕರದುಂಡೆ ಕೊರೆದುಂಡೆ ೨೩೯
೨೩೦. ಕಲ್ಲು ಕಾಷ್ಟ ಕಂಚು ಬೆಳ್ಳಿ ತಾಮ್ರದ ದೇವರು ೩೫೧
೨೩೧. ಕಲ್ಲು ನೀರೊಳಗಿರಲು ಕೈವಡದವರಿಲ್ಲ ೭೧೯
೨೩೨. ಕಲ್ಲಿನೊಳಗಣ ಕನಕವು ಕಟುಗಿಯೊಳಗಿನ ಬೆಂಕಿಯು ೫೦೩
೨೩೩. ಕಲೆಯು ಮಾಸುವುದಿಲ್ಲ ಕುಲಕೆ ಕುಂದುಗಳಿಲ್ಲ ೫೦೦
೨೩೪. ಕಸಗಾಡ ಹೊಲಹೀನ ದೆಸೆಗೇಡಿ ಹೆಣ್ಣು ಹೀನ ೫೭೩
೨೩೫. ಕಳಗ್ಯಾಡು ಮಳ್ಯಾಡು ಬೋಳಾಡು ಬುಟ್ಟ್ಯಾಡು ನಮ್ಮ ೪೮೬
೨೩೬. ಕಾಗಿ ಮೋತಿಯ ಗುರುವು ಗೂಗಿ ಮೋತಿಯ ಶಿಷ್ಯ ೫೮೭
೨೩೭. ಕಾಡ ಮೃಗಂಗಳು ಎಸೆದು ಉಣಿಸಿತು ೭೨೦
೨೩೮. ಕಾಡಿ ಬೇಡಿ ಉಂಬುವ ನರರು ನಾಡನಾಳುವರು ೭೨೧
೨೩೯. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ೨೫೭
೨೪೦. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ೩೭೧
೨೪೧. ಕಾಮ ದೇವನೆಂಬುದು ಕಾಣರು ಜಗದೊಳಗೆ ೩೫೯
೨೪೨. ಕಾಯ ಕಷ್ಟವ ಮಾಡಿ ಜೀವ ದುಃಖವ ಮಾಡಿ ೧೭೩
೨೪೩. ಕಾಯವನು ಕಡೆಗಿಟ್ಟು ಜೀವವನು ಮರೆಮಾಡಿ ೮೯
೨೪೪. ಕಾಯಕದ ಮರೆಯಲಿ ಕದ್ದು ಒಡಲವ ಹೊರಿದೆ ೪೪೦
೨೪೫. ಕಾಯಕವೆ ಕಮ್ಮಾರ ಕಾಯವೇ ಹೊಲೆ ಮಾದಿಗ ೪೪೪
೨೪೬. ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ ೩೦೭
೨೪೭. ಕಾಯದೊಳು ಕಪಟವು ಜೀವದೊಳು ಕಳವಳವು ೨೮೫
೨೪೮. ಕಾಯದ ಕರ್ಮಾಂತ್ರ ಹೋಗಲಿಬೇಕೆಂದು ೧೦೬
೨೪೯. ಕಾಯವು ಮಾಯೆಯ ನುಂಗಿ ಛಾಯೆ ಮನವ ನುಂಗಿ ೩೪೦
೨೫೦. ಕಾರಿಯ ಸೊಪ್ಪು ತಿಂದು ಅರಣ್ಯಕ್ಕೆ ಹೋಯಿತು ೧೦೨
೨೫೧. ಕಾಲಮಹಿಮೆಗಳಿಂದೆ ಶೀಲ ಶಕುನವು ಸುಳ್ಳು ೭೨೨

೨೫೨. ಕಾಲ ಮೂಲವ ಬಲ್ಲ ಬಾಲ ವಿರಕ್ತನ ೨೯೩
೨೫೩. ಕಾಲಜ್ಞಾನವ ತಂದ ಕಡೆಮೊದಲಿಗೆ ಹಾಸ್ಯದ ಮಾತಲ್ಲ ೬೨೮
೨೫೪. ಕಾಲೆರಡು ರಥಗಳೂ ಕೀಲೆಲ್ಲ ಸೂತ್ರಗಳು ೫೯೧
೨೫೫. ಕಾಸಿ ನೋಡಲಿಬಲ್ಲ ಕೀಸಿ ನೋಡಲಿಬಲ್ಲ ೧೯
೨೫೬. ಕಾಶಿಯ ಪರ್ಯಂತ ತ್ರಾಸಿಕ್ಕಿ ತೂಗಿದೆನು ೨೩
೨೫೭. ಕಾಶಿಗೆ ಹೋಗಬಹುದು ದೇಶ ಪಲ್ಲಟಿಸಬಹುದು ೩೨೫
೨೫೮. ಕಾಳಮ್ಮನೆಂಬಾಕೆ ಏಳೇಳು ಲೋಕದಕರ್ತಿ ೩೦೬
೨೫೯. ಕಿಂಚಿತ್ ಮಾತ್ರದಿ ಹಿಂಚು ಮುಂಚು ಕಾಣದೆ ೩೩೭
೨೬೦. ಕಿಡಿಗಣ್ಣ ಶಿವನಿಂಗೆ ಮಡದಿಯರೀರ್ವರು ೬೨೬
೨೬೧. ಕಿನ್ನರ ವಿರಕ್ತಯ್ಯ ಕವಿಯಲ್ಲಿ ನಾಗರಸುತ್ತು ೩೮೨
೨೬೨. ಕಿನ್ನರ ವಿರಕ್ತಯ್ಯ ರನ್ನದ ಕಂಬದ ಮೇಲೆ ೫೯೭
೨೬೩. ಕ್ರಿಯಾವ್ರತದ ನಚ್ಚಿಗೆಯ ಹೊತ್ತಿಗೆಯ ನಚ್ಚಿ ೩೯೭
೨೬೪. ಕೀಲಿಸಿ ತೆಗೆದಂತೆ ನೀಲವರ್ಣದ ಲಿಂಗ ೧೨೦
೨೬೫. ಕುಂಟಿ ಕೂರಿಗಿಯ ಅಳೆದ ದಾರ ಒಂದಳತೆಯದು ೫೦೫
೨೬೬. ಕುಟ್ಟ ಹೋದವರ ಮನೆಯ ಮತ್ತೆ ಹಾಡುವನಲ್ಲಾ ೭೨೩
೨೬೭. ಕುಂಡಿಯ ಒರೆಸಿಕೊಂಬುವ ದುಂಡಕಲ್ಲಿನ ಮೇಲೆ ೫೨೧
೨೬೮. ಕುಂಬಾರ ಹುಳುವು ತಾನು ಜಂಬರದೊಳು ಸಿಲುಕಿ ೩೪೯
೨೬೯. ಕುಂಭಿಣಿಯಾಕಾಶದ ಮೇಲೆ ಕಂಬ ಸೂತ್ರವ ಹೂಡಿ ೬೦
೨೭೦. ಕುರಿಯ ಆಹಾರಕ್ಕೆಂದು ಕಬ್ಬಿನ ಹೊರೆಯ ಕೆಡುಹಲು ಅದು ೩೩೪
೨೭೧. ಕುರುಬ ಕುಡವಕ್ಕಲಿಗಂಗೆ ಸುರಭಿ ಸಾರಿತವಾಯಿತು ೪೦೭
೨೭೨. ಕುರುಬನಂತಿರಬೇಕು ಕೊರವನಂತಿರಬೇಕು ೩೪೮
೨೭೩. ಕುರುಬರಲ್ಲಿ ಹುಟ್ಟಿದ್ದರೆ ಹಿರಿದಾಗುತ್ತಿದ್ದೆ ಜಗಕೆಲ್ಲ ೮೮
೨೭೪. ಕುಲದ ಉದ್ಯೋಗವ ಮಾಡಿ ಛಲವ ಸಾಗಿಸಿದರು ೬೪೫
೨೭೫. ಕುಲದ ವಾಸಿಗೆ ಆಡಿ ಹೊಲದ ಮೇರೆಗೆ ಅಡಿ ೪೭೦
೨೭೬. ಕುಲುಮಿ ಇಲ್ಲದಿದ್ದರೆ ಕುಲವಿಲ್ಲ ಗೋತ್ರವಿಲ್ಲ ೪೯೫
೨೭೭. ಕುಲುಮಿ ಹುಟ್ಟದ ಮುನ್ನ ಕುಲ ಛಲವೆಲ್ಲೈತಿ ೪೩೬
೨೭೮. ಕುಲವೆಂಬೊ ಕೂತನವು ಹೊಲೆಯಂಬೊ ಹೊಲಿಗೇರಿ ೫೦೭
೨೭೯. ಕುಲಕೋಟಿ ದೈವಾದಿಗಳಿಗೆ ಗುದ್ದಲಿಯ ಹಿಡಿದಾನೆ ೧೩೦
೨೮೦. ಕುಲಕೋಟಿ ಬ್ರಹ್ಮಾಂಡಕೆ ಸಲಕಿಯ ಪಿಡಿದಿರ್ದ ೫೫
೨೮೧. ಕುಲದವರು ಹಿಡಿಯದಿದ್ದರೆ ಹಲವರು ಹಿಡಿಯರೆ ೬೩

೨೮೨. ಕುಲ ಹದಿನೆಂಟಕ್ಕೆ ಕುಲುಮಿಯೇ ಶಿಕ್ಷಾಗುರುವು ೪೩೭
೨೮೩. ಕುಲರತ್ನ ಚಿಂತಾಮಣಿ ಕಲಿಯುಗಕ್ಕೆ ಬಂದಾನು ೬೭೩
೨೮೪. ಕುಲಛಲಗಳ ಬಿಡಿರಿ ಕುಲುಮಿಗೆ ಚಪಟಿ ಬಂದೀತು ೬೮೪
೨೮೫. ಕುಕ್ಷವೆ ಗುರು ತನಗೆ ಭಿಕ್ಷವೇ ಶಿಷ್ಯನು ೪೧೯
೨೮೬. ಕೂಗಿನ ಮಾರಯ್ಯನ ಆಗಮದ ಮಗ ನಾನು ೭೦
೨೮೭. ಕೂಲಿಗೆ ಒಡೆಯನಲ್ಲದೆ ಕುನ್ನಿಗೆ ಒಡೆಯನಲ್ಲ ೧೭೬
೨೮೮. ಕೂಳಿದ್ದ ಕಾಲಕೆ ಕುಲಾಚಾರ ೪೪೮
೨೮೯. ಕೆಟ್ಟದೆನ್ನದು ದಾನ ಕೊಟ್ಟ ಮೂಲಗಳಿಂದ ೧೫೦
೨೯೦. ಕೆತ್ತಿ ಮಾಡುವದಲ್ಲ ಒತ್ತಿ ಕಾಸುವದಲ್ಲ ೧೬೪
೨೯೧. ಕೆರೆ ತುಂಬಿ ತೊರೆ ತುಂಬಿ ವರತಿಗೆ ಬರುವುದು ೨೫೪
೨೯೨. ಕೆರವು ಹಿಡಿದರೆ ಕರವ ತೊಳೆದು ಕೊಂಬುವರು ೪೫೭
೨೯೩. ಕೇಳಿಲೋ ಬಸವಾ ಹೇಳಲದ ಮಾತಲ್ಲ ೨೦೭
೨೯೪. ಕೈಗೆ ಬರುವ ಕಾಯಲ್ಲ ಹೂವಲ್ಲ ೫೬೨
೨೯೫. ಕೈಲಲ್ಲಿ ಕಾರ್ಯವಿಲ್ಲ ಐವರು ದ್ರೌಪದಿಯ ೬೯೫
೨೯೬. ಕೊಟ್ಟು ಕಸಕೊಂಬುವರು ಕೆಟ್ಟ ಗುಣದಲಿ ಶಿವನು ೪೭೨
೨೯೭. ಕೊಟ್ಟ ಕೌಲು ಈಡೇರಿಸದೆ ಖೊಟ್ಟತನವ ೨೨೯
೨೯೮. ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಅನ್ಯರಿಗೆ ೨೭೩
೨೯೯. ಕೊಟ್ಟು ಹುಟ್ಟಲಿಬೇಕು ಹುಟ್ಟ ಪಡೆಯಲಿ ಬೇಕು ೩೦೩
೩೦೦. ಕೊಟ್ಟುದ ಬೇಡ ಬಂದರೆ ಖೊಟ್ಟಿ ಮಾತುಗಳೇಕೆ ೬೭೭
೩೦೧. ಕೋಟಿ ಬದುಕು ಮಾಡಿದರೇನು ತೋಟಿಗರ ಸರಿಯಲ್ಲ ೪೧೫
೩೦೨. ಕೊಂದವರ ಕೊಲೆಯುಂಟು ನೊಂದವರ ನೋವುಂಟು ೧೪೩
೩೦೩. ಕೋಪ ಬೇಡ ಕುಲದೀಪಕನಾದ ಮೇಲೆ ೧೪೯
೩೦೪. ಕೋರಹೆಣ್ಣಿಗೆ ಲೀಲೆ ಕೊಡಗೂಸು ಹೆಣ್ಣಿಗೆ ೭೨೪

ಖ

೩೦೫. ಖಂಡಗಕ್ಕೆ ಇಕ್ಕಳದ ಆಯ ಬಿತ್ತುವ ಬೀಜ ೫೯೬

ಗ

೩೦೬. ಗಂಡರೆಳೆಯ ಪಿಡಕೊಂಡು ಗವಿಯಲ್ಲಿ ಒಯ್ದು ೪೪೧
೩೦೭. ಗಂಧ ಭಂಡಾರದ ಒಡಿಯ ಬಂದಾನೆ ೭೨೫
೩೦೮. ಗಂಧವನಿಟ್ಟ ಮೇಲೆ ಅಂದದಲ್ಲಿರಬೇಕು ೧೯೦
೩೦೯. ಗಂಧಾಕ್ಷತೆಯ ಧರಿಸಿ ೭೯೫

೩೧೦. ಗಂಗೆಯೊಳು ಪುಳವಿರಲು ಘನ ಹೇಸಿಕೆಗಳಿಲ್ಲ ೪೨೧
೩೧೧. ಗಟ್ಟಿ ಕಲ್ಲನೆ ಒಡದು ಬಸವನ ನಾಮವ ಮಾಡಿ ೩೯೬
೩೧೨. ಗಟ್ಟಿ ಹೊನ್ನನೆ ಕೊಟ್ಟು ಹಚ್ಚಡವನೆ ತಂದು ೧೭೧
೩೧೩. ಗತಿಗೆಟ್ಟರೆ ಬಡವನು ಮತಿಗೆಟ್ಟರೆ ಮಂಗನು ೧೩೭
೩೧೪. ಗದಗುನಾಡ ಗಾವುದಿ ಎಲುಬುರಗಿನಾಡ ಹೊಲೆಯ ೨೭೬
೩೧೫. ಗಾಣಿಗೇರ ಪರಪ್ಪಶೆಟ್ಟಿ ಎನಲು ೭೨೮
೩೧೬. ಗಿರಿಯ ನಡೆಸಿದರೇನು ಗುರುವಿನ ಜರಿದರೇನು ೪೦೩
೩೧೭. ಗಿರಿಯ ಬಿಲ್ಲು ಉರಗನ ಹೆಡೆ ಹರಿಯು ಅಂಬು ಇವರ ೧೯೫
೩೧೮. ಗುಗ್ಗರಿ ತಿಂಬುವರು ಅಗ್ಗವಣಿ ಸಲಿಸುವರು ೪೭೪
೩೧೯. ಗುಂಡ ಬ್ರಹ್ಮನ ಮನಗಂಡು ಬಿದ್ದನು ಬೆನ್ನ ೩೦೨
೩೨೦. ಗುದ್ದಯ್ಯನ ಹಾಗೆ ಮುದ್ದಿ ಮಾಡುವಾತನಲ್ಲ ೨೨೯
೩೨೧. ಗುದ್ದಿನಯ್ಯನವರು ಕೂಳರು ೩೧
೩೨೨. ಗುದ್ದಿನಯ್ಯನ ಮಠದಲ್ಲಿ ಆಡಿದ ಮಾತು ೧೯೩
೩೨೩. ಗುದ್ದಿಸಲಕಿಯು ಕಲ್ಲು ವಜ್ರಮಾಣಿಕ ಕಲ್ಲು ೭೩೦
೩೨೪. ಗುರುಗಳು ಎಂಬ ಗರ್ವವು ನಿಮಗ್ಯಾತಕೆ ೩೯೨
೩೨೫. ಗುರು ಲಿಂಗ ಜಂಗಮದ ಗುರುತವ ತಾವು ಅರಿಯದಲೆ ೩೯೧
೩೨೬. ಗುರುಹಸ್ತ ಮುಟ್ಟಲು ಚರ್ಮ ಪಾವನವಾಗೆ ೩೫೪
೩೨೭. ಗುಳೇದ ಗುರುಮನಿಗೆ ದಾಳಿಗಳು ಸಲ್ಲುವವೆ ೭೩೧
೩೨೮. ಗೂಳಿ ಬಸವನು ಬಂದು ಆವುಗಳನೇರಿದರೆ ೩೬೩
೩೨೯. ಗೆಳೆಯನಗಲಿದ ಮೇಲೆ ಅಳುವರೀ ದೇಹಕ್ಕೆ ೩೩೨
೩೩೦. ಗೊಂಬಿಬಲ್ಲುದೆ ದೊಂಬಿಗನ ಗುರುತ ೫೭೪
೩೩೧. ಗೋದಿ ಕಲ್ಲು ಒರಳಿನಿಂದ ಆದ ಪ್ರಸಾದವು ೬೦೮
೩೩೨. ಗೌಡ ಕುಲಕರಣಿಗಳು ತೌಡು ಭಕ್ಷಿಸಲೇನು ೪೨೪

ಘ

೩೩೩. ಘ್ರಾಣದ ಮಂತ್ರ ಈಶ್ವರ ಪರಿಹರಿಸೊ ೧೦೪

ಚ

೩೩೪. ಚಂದಕ್ಕೆ ಲಿಂಗವನು ಮಂದೆಲ್ಲ ಕಟ್ಟಿದರು ನಮ್ಮ ೫೨೨
೩೩೫. ಚೆನ್ನಬಸವಣ್ಣನು ಇನ್ನುತಾ ಬರುವಾಗ ೬೯೦
೩೩೬. ಚಾರಮರಾಯನ ಊಟ ಮೂರುರಾಯರ ಕೂಟ ೧೯೨
೩೩೭. ಚಿನ್ನ ವರ್ಣನು ಬಂದ ಚೆನ್ನಬಸವಣ್ಣನು ಬಂದ ೧೨
೩೩೮. ಚಿಪ್ಪಿನೊಳಗಣ ನೀರು ತೆಗೆದುಕೊಂಡು ೪೯೧

೩೩೯. ಚೆನ್ನಂಗೆ ಕನ್ನಂಗೆ ಮುನ್ನ ಕೊಟ್ಟನು ಶೀಲ ೫೩೮
೩೪೦. ಚೆಂಡಿಕೆಯ ಬಿಟ್ಟೇನು ದಂಡ ಪ್ರಣಾಮ ಎರಗೇನು ೨೯೭
೩೪೧. ಚೊಕ್ಕ ಹೀನದ ಭೇದ ಅರ್ಕಸಾಲೆನೇ ಬಲ್ಲ ೭೩

ಜ

೩೪೨. ಜಕ್ಕಮ್ಮ ಎನುತಲಿ ಜಲಧೀಯ ಪೊಕ್ಕನು ೬೧೫
೩೪೩. ಜಗದ ವೇಷಿಯಕೂಡ ನಗಿಯನಾಡತಿರ್ದು ೭೩೨
೩೪೪. ಜಗವು ಜನಿಸಿದ ಬಗೆಯಲ್ಲ ಬಲ್ಲಿರಿ ೪೮೭
೩೪೫. ಜಡೆಯ ಬೆಳೆಸಿದರೇನು ಕೊಡಿಯ ಹಿಡಿಸಿದರೇನು ೫೫೩
೩೪೬. ಜನನ ನಕ್ಷತ್ರ ಪಿಡಿದು ಅನುಸರಿಸುತ್ತಿರುವ ಜನರು ೩೪೪
೩೪೭. ಜನಹಿತ ಜಂಗಮ ಭಸ್ಮದ ಸನ್ಯಾಸಿ ೨೧೭
೩೪೮. ಜನರಿಂದ ಜಾತ್ರಿಯು ವನದಿಂದ ಕಪಿ ಬಲವು ೪೨೭
೩೪೯. ಜಲ್ಲಿ ಸಾಲವ ಅರಿಯ ಜಗಳಕಂಜದ ಭಂಟ ೨೫೮
೩೫೦. ಜಳಕ ಮಾಡಲು ದೇಹ ಕೊಳಕು ಮೇಲಿನದು ಹೋಯ್ತು ೩೫೩
೩೫೧. ಜೀವ ಜೀವಿಗಳಲ್ಲಿ ಜನಿಸಿದೆನೆಲೆ ಗುರುವೆ ೩೬೮
೩೫೨. ಜೀವಿ ನಾಣ್ಯವ ಬಿಟ್ಟು ಗೋಣೆ ಹೊದಕೆಯ ಹೊದ್ದಿಹರು ೭೩೪
೩೫೩. ಜಾಣ ಜಾಣರಿಗೆಲ್ಲ ಮ್ಯಾಣದ ಶೂಲವ ತಂದ ೭೩೩
೩೫೪. ಜಾಣರಿಗೆ ಜಾತ್ರಿಯು ಕೋಣರಿಗೆ ಕುಸ್ತಿ ಕಲಹ ೫೭೫
೩೫೫. ಜಾಡ ಉಂಕಿಯ ಹೂಡಿ ನಾಡ ಉಗಳನೆ ಹಚ್ಚಿ ೪೮೯
೩೫೬.ಜಾಡ ಜಂಗಮರೆಲ್ಲ ನಾಡಗೌಡಿಕಿಯ ಮಾಡಿ ೨೬೦
೩೫೭. ಜಾತ ಜಾತವನಾಡಿಸುವ ಜಾತಿಗಾರನೆಂಬಂತ ೧೫
೩೫೮. ಜಾಡರ ಬುದ್ದಿ ನಾಡಿಗರಿಗಿದ್ದರೆ ಈ ೧೪೭
೩೫೯. ಜಾಡ ಹಟಕಾರನೆಂದು ಆಡಿ ಕೆಡಬೇಡಿ ೨೩೧
೩೬೦. ಜಾತಿ ಜಾತಿಗೆಲ್ಲ ಪೋತರಾಜನೆ ಗುರುವು ೬೫
೩೬೧. ಜಾತಿ ಸೂತಕವಳಿದು ಮಾತಿನ ಮಾಲೆಯ ಬಿಟ್ಟು ೫
೩೬೨. ಜುಟ್ಟು ಜನಿವಾರ ಕಿತ್ತಿ ಪಟ್ಟದ ಹೆಂಡತಿಯ ಬಿಟ್ಟು ೫೪೧

ಡ

೩೬೩. ಡಂಬಕದ ವೇದವು ಡೊಂಬಿಯಾ ಶಾಸ್ತ್ರವು ೩೬೬

ತ

೩೬೪. ತಂದಿ ಅಲ್ಲಮನ ನಿಂದಿಸಿದ ಕಾರಣದಿಂದ ೬೮೯
೩೬೫. ತನ್ನ ಪಾಪ ಮುಣ್ಯ ಬೆನ್ನುಹತ್ತದೆ ಬಿಡದಯ್ಯ ೭೩೫

೩೬೬. ತನ್ನ ಪಾಪ ಪುಣ್ಯವು ತನ್ನ ಬೆನ್ನು ಹತ್ತದೆ ಬಿಡದು ೧೭೭
೩೬೭. ತಪ್ಪು ಹೊಂದಿತು ಸ್ಥಾವರಗೇರಿಯ ಸ್ಥಳಕೆ ೨೫೦
೩೬೮. ತರುಗಿರಿಗಳೊಳು ತರಗೆಲೆಗಳ ಮೆದ್ದು ೫೪೩
೩೬೯. ತಳಹಾರುವರಿಗಿಂತ ತಲೆಹಾರುವವರುಂಟೆ ೪೫೨
೩೭೦. ತವರ ತಾಮ್ರವನು ವಿವರದಲಿ ಕೂಡಿಸಿ ಮಾಡಿದ ಹರನ ಓಂಕಾರದಿ ೪೭೨
೩೭೧. ತಾ ಎಂದು ಬೇಡಿದರೆ ಕೋ ಎಂದು ಕೊಡುವ ೫೨೪
೩೭೨. ತಾನು ಉಣ್ಣದೆ ಗಳಿಸಿ ದಾನ ಕೊಟ್ಪದನು ಎಣಿಸಿ ೪೦೮
೩೭೩. ತಾಮ್ರವ ಮುಖಪದ್ಮ ಸೀಮಿಗಧಿಪತಿಯಾಗಿ ೩೮೪
೩೭೪. ತಾ ತನ್ನ ಶಿವಶರಣರ ಮನೆಯ ಹಮ್ಮಿನ ಅಂಬಲಿಯ ೧೦೭
೩೭೫. ತಾಯಿ ತಂದೆಗಳು ಉಳ್ಳರೆ ನಾನಿತ್ತ ಬರುವೆನೆ ೨೬
೩೭೬. ತಾಯಿಯಾದರೇನು ದೇವರಾದರೇನು ೩೧೬
೩೭೭. ತಾವರೆಯ ಎಲೆಯು ನೀರೊಳಿಪ್ಪುದು ೩೬೦
೩೭೮. ತಾವೆ ದೇವರೆಂಬುದು ಕಾಣರು ಜಗದೊಳಗೆ ೩೮೭
೩೭೯. ತಿಳಿದಂಥ ಮಹಾತ್ಮರಿಗೆ ಎಳೆಹೂಟಿ ಸಲ್ಲುವದೆ ೧೩೩
೩೮೦. ತಿಳಿದಂಥ ಜ್ಞಾನಿಗೆ ಕೆಳಗೇನು ಮ್ಯಾಲೇನು ೬೧೩
೩೮೧. ತಿಳವಳ್ಳಿ ಸ್ಥಳದಲ್ಲಿ ಇಳಿದಾರು ಶರಣರು ೬೫೮
೩೮೨. ತ್ರಿವಿಧ ನಿಷ್ಠೆಯಿಲ್ಲ ಧರಣಿಯೊಳಗಿರುವ ೩೯೩
೩೮೩. ತುಂಗಭದ್ರೆಗಳತ್ತ ಮಂಗಮರ್ಕಟ ಜನರು ೪೦೯
೩೮೪. ತುತ್ತು ಮಾಡಿ ಉಣಲಿಲ್ಲ ತುತ್ತಲ್ಪಯೆತ್ತಿ ಉಣಲಿಲ್ಲ ೪೨೩
೩೮೫. ತುಂಟದಾತರ ತಂಟೆಯ ಸಂಸಾರ ೨೨೨
೩೮೬. ತುರುಕರ ತಿರುಕರ ಮುರುಕವ ಬಿಡಿಸಿದ ೧೧೦
೩೮೭. ತುಲ್ಲಾಗ ಬಿದ್ದವರಿಗೆ ಎಲ್ಲಿಯ ಕುಲವಯ್ಯ ೪೮೪
೩೮೮. ತೊಗಲಬೊಂಬೆಯ ನೋಡಿ ನೆಗೆನೆಗದು ನಗುವರು ೧೦೧
೩೮೯. ತೊತ್ತಿನ ಮಗನೆಂದು ಉತ್ತರಿಸಿ ನುಡಿದರೆ ೨೧೫
೩೯೦. ತೊತ್ತು ತೊಂಟರಿಗೆ ತುಪ್ಪಾನ್ನ ಉಣಲಿಕ್ಕುವರು ೨೬೬
೩೯೧. ತೋರಲಿಂಗವ ಕಟ್ಟುವ ಪೋರ ಜಂಗಮ ನಾನಲ್ಲ ೫೦೯
೩೯೨. ತೈಲವಿಲ್ಲದ ಜ್ಯೋತಿ ಬೈಲೊಳಗೆ ಉರಿಯುವದು ೩೧೧
ದ
೩೯೩. ದಾನ ದಂಡಕೆ ಅಳತೆಯೆ ಜ್ಞಾನ ಲಕ್ಷ್ಮಿಗೆ ಕುಲವೆ ೩೪೨
೩೯೪. ದಿಕ್ಕಿನ ದೇವರೆಲ್ಲ ಸುತ್ತಿಗೆಯ ಮಕ್ಕಳು ೩೧೭

೩೯೫. ದಿಕ್ಕು ದಿಕ್ಕಿಗೆಲ್ಲ ಅಕ್ಕಸಾಲೆಯರಾದಾರು ೬೫೦
೩೯೬. ದಿನ ಕೆಟ್ಟವೆನಬೇಡ ಜನಕನ ಅತಿಗಳಿಯಬೇಡ ೧೩೮
೩೯೭. ದಿನವೊಂದು ಬೆಳಗಲು ತನಗೆ ಒಂದು ದಿನ ಕಡಿಮೆಯಾಯಿತು ೧೫೧
೩೯೮. ದುಡ್ಡಿಗಿಂತ ಹೆಚ್ಚು ಗುಡ್ಡ ಗಂಹ್ವರವಲ್ಲ ೨೧೭
೩೯೯. ದುಡಿದರೆ ದುಗ್ಗಾಣಿ ಪಡೆದರೆ ಐಶ್ವರ್ಯ ೨೭೩
೪೦೦. ದುಡಿದುಣ್ಣಲಾರದೆ ತುಡುಗು ಮಾಡುವರಯ್ಯ ೧೫೭
೪೦೧. ದೆಸೆಯು ಮುಂದೆ ನಡೆಸುತಿದೆ ಹುಸಿಯು ಮುಂದೆ ಕೆಡಿಸುತಿದೆ ೫೬೭
೪೦೨. ದೇವದೇವರಿಗೆಲ್ಲ ದೇವಚಿಂತಾಮಣಿಯು ೧೩೧
೪೦೩. ದೇಶದೇಶಗಳೆಲ್ಲ ಫಾಸ್ಯಾಗಿ ಪೋಪಾಗ ೭೩೬
೪೦೪. ದೇಶ ದೇಶವ ತಿರುಗಿ ಬೇಸತ್ತೆನೆಲೆ ಗುರುವೆ ೨೪
೪೦೫. ದೇಶ ದೇಶಿಕರಿಗೆ ವಾಸಿ ಪಂಥಗಳಿಂದ ೬೩೫
೪೦೬. ದೇಶವನಾಳುವವರು ನಾಶವಾದಾರು ಜಗ ೬೩೨
೪೦೭. ದೇಹವೇ ದೇವರು ಜೀವವೇ ಶಿಷ್ಯನು ೧೫೯
೪೦೮. ದೈವವೇ ದೇವರೆಂದು ಕೈಮುಗಿದಾತಂಗೆ ೩೨೧
೪೦೯. ದೊರೆತನವ ಕೊಡಬೇಡ ತಿರುವುದನೆ ಕೊಡು ಎನಗೆ ೩೩
೪೧೦. ದೋಷ ತಪ್ಪಿದರೆ ಆ ವಿಷಯಕ್ಕೆ ಒಂದೆ ಮಾತು ೧೮೫

ಧ

೪೧೧. ಧರಣಿಗೆ ಧನಿ ಚೆನ್ನ ಮರಣ ವಿರಹಿತಸ್ವಾಮಿ ೫೮೫
೪೧೨. ಧರಣಿಯ ಕಲ್ಲೊಡದು ಗೋರಿ ಗುಮ್ಮಟಕಟ್ಟಿ ೩೯೯
೪೧೩. ಧರ್ಮಕ್ಕೆ ಬೇಡಿದರೆ ಗುರುಗುಟ್ಟುವರು ೨೨೭
೪೧೪. ಧರೆ ಮೂರು ಲೋಕವೆಲ್ಲ ಉರಿದು ಹೋದೀತೆಂದು ೭೩೭
೪೧೫. ಧೋತ್ರವ ಒಗೆದೇನು ಗೋತ್ರದಲಿ ನಡದೇನು ೩೮

ನ

೪೧೬. ನಂಜಿನ ಊಟವು ನಿರಂಜನರಿಗೆ ಸೇರದು ೨೦೮
೪೧೭. ನಂದಿಯ ಪೌರ್ಣಿಮೆಗೆ ಚಂದ್ರ ಗ್ರಹಣ ಕಾಣಲು ೬೪೬
೪೧೮. ನಂಬಿ ಕೇಳೆಲೋ ಬಸವಾ ಡಂಬಕಂಗಳ ಬಿಟ್ಟು ೧೮
೪೧೯. ನಂಬಿದವರ ಕೂಡ ಡಂಬಗಾರಿಕೆ ಆಡಿದರೆ ೩೮೯
೪೨೦. ನಂಬಿದವರಿಗೆ ಅಂಬಿಗನಯ್ಯ ಶಿವನು ೨೮೧
೪೨೧. ನಂಬಿದವರಿಗೆ ಜಯವು ನಂಬದ್ದೇ ಕುಲಕ್ಷಯವು ೨೮೩
೪೨೨. ನಡಸುವ ವಿನಾಯಕ ಪಿತನು ಕೆಡಿಸಬೇಕಾದರೆ ೧೩೯

೪೨೩. ನಡೆ ಸುಳ್ಳು ನುಡಿ ಸುಳ್ಳು ನುಡಿವ ನಾಲಿಗೆ ಸುಳ್ಳು ೧೪೪
೪೨೪. ನಡೆ ಶುದ್ಧ ನುಡಿ ಶುದ್ಧ ಒಡೆಯನ ಚಾಕರಿ ಶುದ್ಧ ೩೦೦
೪೨೫. ನಮ್ಮದು ನಮಗೆ ಕೊಡಿರಿ ನಿಮ್ಮದು ನೀವು ಉಣ್ಣಿರಿ ೧೮೮
೪೨೬. ನಮ್ಮದು ನಮಗೆ ನೀಡಿರಿ ೭೩೯
೪೨೭. ನಮ್ಮ ನುಡಿಯೆಂದರೆ ನಾಲಗೆ ಹೋದೀತು ೨೦
೪೨೮. ನರಜನ್ಮದಲಿ ಜನಿಸಿ ತಿರಿದು ಉಣಲಾರೆ ೨೩೨
೪೨೯. ನಾಗಲಿಂಗಯ್ಯನ ಭೋಗ ಮಂಟಪದೊಳು ೬೮೨
೪೩೦. ನಾಡದೇಶ ಪಿರೋಜಾಬಾದ ಪಟ್ಟಣ ೪೨೧
೪೩೧. ನಾಡನಾಳುವವರಿಗೆ ಕೋಡಗನ ಬುದ್ಧಿ ಹುಟ್ಟಿ ೬೩೪
೪೩೨. ನಾನಾ ದೇವರೆಲ್ಲ ಸುತ್ತಿಗೆಯ ಮಕ್ಕಳು ೩೧೦
೪೩೩. ನಾಮವ ಧರಿಸಿ ನೇಮ ಸ್ನಾನವ ಮಾಡಿ ೨೯೪
೪೩೪. ನಾಮವನಿಟ್ಟ ಮೇಲೆ ನೇಮದಲ್ಲಿರಬೇಕು ೧೯೧
೪೩೫. ನಾಯಕನಾದ ಮೇಲೆ ನ್ಯಾಯದಲ್ಲಿರಬೇಕು ೧೪೫
೪೩೬. ನಾಯಿದನ ಚಿಪ್ಪಿನೊಳು ನಾಡೆಲ್ಲ ಕೂಡುಂಡ ಮೇಲೆ ೪೯೦
೪೩೭. ನಾಯಿ ನಂಜು ಇಳುಹಿದ ಹಾವಿನ ಕುಂದುಗಳು ಇಳುಹಿದ ೪೧೮
೪೩೮. ನಾಲ್ವತ್ತು ಸಾವಿರ ಜೇನುಹುಳುವ ನಾ ಕೊಂದೆ ೨೨೩
೪೩೯. ನಾಲ್ಕು ದಿಕ್ಕಿಗೆಲ್ಲ ಜಾಲವ ಹಾಕಿದೆನು ೩೬೫
೪೪೦. ನಿಬ್ಬಣ ನೆರೆದೀತು ಹಂಪಿಯ ಹೊಳೆಯಲಿ ೬೫೬
೪೪೧. ನಿಮ್ಮ ಆಸೆಗೆ ಬಂದ ಆಸಾದಿಯ ಮಗನಾನು ೫೯೪
೪೪೨. ನಿರ್ಮಳ ಹೃದಯನು ಹತ್ತು ಹನ್ನೆರಡೆಂದಧಮರ ಕಡಿಯುತ್ತ ೬೧೦
೪೪೩. ನೀನೆ ನುಂಗಬ್ಯಾಡ ಮೋನಯ್ಯನೆನಬೇಡ ೭೪೦
೪೪೪. ನೀರಿನ ಕುಣಿಗಳೆಲ್ಲ ನಿಂದುರಿದು ಹೋದಾವು ೭೪೧
೪೪೫. ನೀರಿನಿಂದ ನಿರ್ಮಿತವ ಮಾಡಿದ ಗುರುತಾ ೨೮೭
೪೪೬. ನೀಲಕಿಂತಲಿ ಮುತ್ತು ಧರಣಿಗೆ ಘನವಲ್ಲ ೬೨೧
೪೪೭. ನೂರು ಖಂಡುಗ ಧಾನ್ಯವ ಬೆಳೆದು ಹೊಲನು ೧೪೨
೪೪೮. ನೂರೊಂದಯ್ಯನ ವೀರ ಸಿಂಹಾಸನ ೫೧೪
೪೪೯. ನೇಮ ನಿತ್ಯಗಳೇಕೆ ಹೋಮ ಜಳಕವು ಏಕೆ ೨೯೯
೪೫೦. ನೋಡಿ ಮಾಡುವ ಶೀಲ ಕಾಡಿ ಬೇಡುವ ಗುರುವು ೫೮೪

ಪ

೪೫೧. ಪಂಚ ಮಹಾ ಪಂಚಾಳರೆಂದು ವಂಚನೆಯ ೪೯
೪೫೨. ಪಂಚಾನನದವರು ಕೆಟ್ಟು ಅಡವಿ ಚಂಚರಾಗಲಿ ೯೧

೪೫೩. ಪಂಚಾನನ ಪರಬ್ರಹ್ಮ ಮುಂಚೆ ಕಲಿಯುಗಕ್ಕಾಧಾರ ೧೨೪
೪೫೪. ಪಕ್ಕ ಮುರಿಯಲು ಪಕ್ಷಿ ಇಕ್ಕಿದಲಿರುವದು ೩೭೫
೪೫೫. ಪಚ್ಚೆದ ಪಲ್ಲಕ್ಕಿ ಮುತ್ತಿನ ತುರಾಯಿ ೭೪೩
೪೫೬. ಪಟ್ಟಕ್ಕೆ ಅರಸಿಲ್ಲ ಕೊಟ್ಟಾರಕ್ಕೆ ಮಾನ್ಯೇರಿಲ್ಲ ೭೪೨
೪೫೭. ಪಟ್ಟದ ದೊರೆ ತಾನು ಕೊಟ್ಟವರನರಿಯನು ೬೪೭
೪೫೮. ಪಣೆಯಲ್ಲಿ ಬರದುದಕ್ಕೆ ಅಣಿಯಿಲ್ಲ ಭುವನದಲ್ಲಿ ೭೪೪
೪೫೯. ಪ್ರಥಮ ಚರಣದೊಳಗೆ ವಿಪರೀತ ಕರ್ಮವು ೭೪೫
೪೬೦. ಪರಮ ಕಲ್ಯಾಣಿ ನಿನ್ನ ಅರುವಿನ ಒಡಲೊಳಗೆ ೩೭೪
೪೬೧. ಪರಮಪಾವನ ಗುರುವೆಂಬುದು ಅರಿಯದೆಲೆ ೧೦೮
೪೬೨. ಪಕ್ಷಿ ವಂಶಾಭಿವೃದ್ಧಿಗೆ ವೃಕ್ಷದ ಆಲಯವು ೩೫೭
೪೬೩. ಪಾಕಯು ಬರಬೇಕು ಪ್ರಜೆಯು ನೆರಿಯಲಿಬೇಕು ೭೪೬
೪೬೪. ಪಾಠದ ಶಾಲೆಯ ಪುಟ್ಟ ಕನ್ನೆಯರು ಕೇಳಿರಿ ೭೪೭
೪೬೫. ಪಾಡು ಪಂಥವನುಳ್ಳ ನಾಡಿಗನಾಗಬೇಕಲ್ಲದೆ ೨೫೩
೪೬೬. ಪಾತಕ ಮನುಜರ ಮೋತಿಯ ಕಾಣಬಾರದೆಂದು ೨೪೮
೪೬೭. ಪಾತಕದ ಪರ್ವತವು ಸೂತಕದ ಸರಮಾಲೆ ೨೯೦
೪೬೮. ಪಾತಾಳಕ್ಕೆ ಗಾಣ ಭೂತಳಕ್ಕೆ ದೋಟಿ ೬೦೫
೪೬೯. ಪಾಪ ಪುಣ್ಯಗಳೆರಡು ರೂಪ ಯೌವನಗಳೆರಡು ೫೬೫
೪೭೦. ಪ್ರಾಣಛೇದನ ಕುರಿಯ ಕಾಣಿಲಿಲ್ಲ ಹಬ್ಬದ ೪೧೪
೪೭೧. ಪ್ಯಾಟಿಯ ಶೃಂಗಾರ ಪೇಳೆನ್ನಳವಲ್ಲ ೭೪೯
೪೭೨. ಪ್ಯಾಟಿ ಸೇರಿಕೊಂಡು ಬೂಟಕರಾಗಬೇಡಿ ೧೪೪
೪೭೩. ಪುಣ್ಯಕ್ಕೆ ಬೇಡಿದರೆ ತುಣ್ಣಿಯ ತೋರುವರು ೨೭೦
೪೭೪. ಪುತ್ರ ಸಂತಾನವು ಹತ್ತಲಿಲ್ಲವೆಂದು ಅತ್ತನೈ ೨೭೧
೪೭೫. ಪುನುಗದ ಕಸ್ತೂರಿಯನು ಹಣೆಗೆ ಧರಿಸಲು ೪೬೩
೪೭೬. ಪುಸಿಯಿಂದಲಿ ನಾನು ದೆಸೆಗೆಟ್ಟಿನೆಲೆ ಗುರುವೆ ೧೧೪
೪೭೭. ಪೊಡವಿಗಧಿಪತಿಯಾಗಿ ಕಡೆಗಾಲ ಭ್ರಮಿಸುವರು ೨೧೧
೪೭೮. ಪೊಡವಿಯನಾಳುವ ಒಡೆಯಂಗೆ ಮುನಿದರೆ ೨೪೯
೪೭೯. ಪೃಥ್ವಿ ಆಕಾಶ ತತ್ವ ಶಿವಲಿಂಗದೊಳು ೫೨೦
೪೮೦. ಪೃಥ್ವಿಗಧಿಪನು ಬಸವ ಪರಶಿವನಹುದವುದು ೭೪೮
೪೮೧. ಫಣಿಯಲ್ಲಿ ಬರೆದುದಕೆ ಅಣಿಯಲ್ಲ ಭುವನದಲ್ಲಿ ೨೧೩

ಬ

೪೮೨. ಬಂದ ಸೂತಕವ್ಯಾಕೆ ನಿಂದ ಸೂತಕವ್ಯಾಕೆ ೪೫೬
೪೮೩. ಬಂದದ್ದನುಂಡು ಬಾರದ್ದು ಬಯಸನು ೧೦೯
೪೮೪. ಬರ್ಚಿ ಹಿಡಿದಿಹನೆಂದು ಅರ್ತಿಯ ಶರಣು ೭೫೦
೪೮೫. ಬಡಗಲ ದೇಶದಿಂದ ದಂಡು ಬೆಡಗಿನಿಂದ ಬರುತೈತೆ ೭೪೯
೪೮೬. ಬಡಿಗ ಕಮ್ಮಾರರಿಗೆ ತುಡುಗತನ ಸಲ್ಲದು ೨೭
೪೮೭. ಬಡಿಗ ಮಾಡಿದನೊಂದು ಬೆಡಗಿನ ಮೂರ್ತಿಯ ೫೯
೪೮೮. ಬಡವನಿಗೆ ಒಡೆಯನಾಗಿರುವುದೇ ಪುಣ್ಯ ೩೭೭
೪೮೯. ಬಡವಿಯ ಅಣುಗಗೆ ಕೊಡುವನು ವರಗಳ ೨೩೪
೪೯೦. ಬಡವನಿಗೆ ಬಡವನು, ದೊರೆಗಳಿಗೆ ದೊರೆಯು ೩೭೬
೪೯೧. ಬಡಗು ದಿಕ್ಕಿನಿಂದ ಬಡಿಗಿ ಬಂದೈದಿದಾನೆ ೬೪೮
೪೯೨. ಬಡಗಲ ದೇಶದಿಂದ ಬಡಿಗನು ಬರುತಾನೆ ೬೩೬
೪೯೩. ಬಡಿಗ ಕಮ್ಮಾರರು ಪೊಡವಿಗಧಿಕರ್ತರು ೧೧೬
೪೯೪. ಬಂಡಾರವುಳ್ಳವರು ಬಳಸಿಕೊಂಡು ಉಣಲಾರದೆ ೩೮೫
೪೯೫. ಬಣಜಿಗ ಭಕ್ತನಲ್ಲ ಹಣಜಿಯ ತೆನೆಯಲ್ಲ ೪೮೮
೪೯೬. ಬಣ್ಣಕ್ಕೆ ಭಸಿತವನಿಟ್ಟನಲ್ಲದೆ ಅನ್ಯಾಯವ ಬಿಡಲಾರೆ ೫೪೦
೪೯೭. ಬರಬಂದು ಕೆಡುವುದಕೆ ಗಂಡನೆಂದೆನಿಸುವನು ೬೦೬
೪೯೮. ಬರಿಯೆ ಭ್ರಾಂತಿ ಹಿರಿದೆಂದುಕೊಂಬುವರು ೧೧೫
೪೯೯. ಬರೆದಿದ್ದ ನೀಲಿಯ ತೊಳೆಯಲು ಅದು ತನ್ನ ೫೭೭
೫೦೦. ಬಲ್ಲಬಲ್ಲವರೆಲ್ಲ ಬಲ್ಲ ಸ್ಥಾನಿಕರಾಗಿ ೭೫
೫೦೧. ಬಸವ ಪಟ್ಟಣದಲ್ಲಿ ಭೈರೂಪ ಕಂಡರೆ ೬೫೭
೫೦೨. ಬಸವನುಂಗುರ ಬೆರಳಲ್ಲಿ ಧರಿಸಿ ಭಸಿತವನಿಟ್ಟ ಮೇಲೆ ೨೯೨
೫೦೩. ಬಾಜಾರ ಬಂದೀತು ಓಜು ಉಂಡ್ಯಾದೀತು ೭೫೨
೫೦೪. ಬಾಡಿಗೆಯ ದೇಹಕ್ಕೆ ಮಾಡಿದೆನು ಉಪಕಾರ ೧೬೧
೫೦೫. ಬಾಧೆ ಬಂದಾನಕ್ಕೆ ಬೀಳುವವರೆಲ್ಲರು ೧೬೦
೫೦೬. ಬಾಲಕರುಗಳಿಗೆಲ್ಲಿ ಕಾಲಮಹಿಮೆಯ ಚಿಂತೆ ೭೫೩
೫೦೭. ಬಾಳೆಯ ಕಡಿಯುವ ಬಸವಿಯ ಮಕ್ಕಳಿಗೆ ೩೫೬
೫೦೮. ಬ್ಯಾಡರಿಗೆ ಪಟ್ಟವನು ರೂಢಿಗೀಶ್ವರ ಕೊಟ್ಟನು ೭೫೭
೫೦೯. ಬ್ಯಾಸಿಗಿ ಬ್ಯಾಸಿಗಿ ಎಷ್ಟೊಂದು ಬ್ಯಾಸಿಗಿ ೬೯೮
೫೧೦. ಬಿಂದುವೆ ತೀರ್ಥ ಕಂದನೇ ಪ್ರಸಾದ ೫೨೮

೫೧೧. ಬಿಜ್ಜಳನ ಕೂಡ ಸಜ್ಜತನವ್ಯಾಕೆ ದುರ್ಜನ ತನವ್ಯಾಕೆ ೭೯೮
೫೧೨. ಬಟ್ಟು ಹೋಗಲು ಜೀವ ಸುಟ್ಟು ಹೋಗುವುದು ದೇಹ ೩೩೩
೫೧೩. ಬಿತ್ತಿದ ರಾಜಾನ್ನ ಕಿತ್ತಿದ ಶಿಲೆಯ ೬೬೪
೫೧೪. ಬೀಜಕ್ಕೆ ಮೊದಲಿಲ್ಲ ಬಿತ್ತಲಿಕ್ಕೆ ಹದವಿಲ್ಲ ೬೨೯
೫೧೫. ಬೀದಿಗಳು ಎರಡೆಂಬೋ ಭೇದವನು ಕೇಳಿರೋ ೪೫೦
೫೧೬. ಬೂದಿಯ ಪೂಸಿಕೊಂಡು ಬೀದಿ ಬೀದಿ ತಿರುಗುವ ೧೭
೫೧೭. ಬೆಟ್ಟ ಘಟ್ಟಿಯ ಕಲ್ಲು ಸೂಜಿ ದಬ್ಬಣ ಕಲ್ಲು ೩೯೮
೫೧೮. ಬೆಳೆಗೆ ಬೆಂಗುಡಿಗಿಕ್ಕಿ ಹುಳುವು ಹತ್ತಿದವೆಂದು ೭೫೪
೫೧೯. ಬೇಡುವ ಜನ ಘನವಾಯಿತು ನೀಡುವ ಜನ ಕಡಿಮೆಯಾಯಿತು ೬೫೧
೫೨೦. ಬೇಡಿದರೆ ಕೊಡದಂಥ ಪಾಪಿಗಳ ಬದುಕನು ೪೧೬
೫೨೧. ಬೇಡಿದರೆ ಭರವಸವಾಗದು ೭೫೫
೫೨೨. ಬೇರಿಗೆ ಬೆಂಕಿಯ ಹಚ್ಚಿ ಮೇಗಣ ತೊಪ್ಪಲ ನೆಚ್ಚಿ ೩೫೦
೫೨೩. ಬೊಬ್ಬಿರಿದು ಕೂಗುವರಂದು ಇಬ್ಬರು ಶರಣರು ೪೧೨
೫೨೪. ಬ್ರಹ್ಮ ವಿಷ್ಣು ಮಹೇಶ್ವರರು ಕಷ್ಟಕರ್ಮಕೆ ಗುರಿಯು ೨೧೯
೫೨೫. ಬ್ರಹ್ಮಂಗೆ ಶಿರವಿಲ್ಲ ಭಾರತಿಗೆ ಮೂಗಿಲ್ಲ ೫೯೫

ಭ

೫೨೬. ಭಂಡಾರವನ್ನು ಧರಿಸಿ ೭೯೪
೫೨೭. ಭಂಡಾರಿ ಬಸವಣ್ಣ ಅಲ್ಲಮ ಪ್ರಭುರಾಯ ೬೫೫
೫೨೮. ಭಕ್ತರ ಭವಿಗಳ ಮಾಡಿ ಕತ್ತೆಯ ಕುದುರೆಯ ಮಾಡಿ ೬೧
೫೨೯. ಭಕ್ತಿ ಭಾವಗಳನು ಕುಯುಕ್ತಿಯಲಿ ಕೆಡಿಸುವರು ೩೨೨
೫೩೦. ಭಕ್ತಿಯೆಲ್ಲ ಭತ್ತದೊಳಗೈತಿ ಭತ್ತಗಳು ಹೋದ ಮರುದಿನ ೪೬೬
೫೩೧. ಭಕ್ತಿವಾಲದಯ್ಯ ಕರ್ತೃ ನಿರ್ವಾಣಯ್ಯ ೬೫೭
೫೩೨. ಭಾರಿ ಶಂಕರನ ಭೂರಿ ಬ್ರಹ್ಮಾಂಡ ಭಾರವ ೭೭
೫೩೩. ಭೂತಳ ಜಲಧಿಗೆ ಓತು ಸಿಂಪಿಲಿ ಮುಗಿದು ೬೮೫
೫೩೪. ಭೂಮಿಯ ಪಾಲಿಪ ಸೋಮ ಸೂರ್ಯರು ೬೫೮
೫೩೫. ಭೂಮಿ ಸ್ವಾಮಿಯ ಒಡವಿ ಹೇಮ ಧನಿಕನ ಒಡವಿ ೫೮೮
೫೩೬. ಭೂಸುರರ ಕುಲವ ನಾಶ ಮಾಡಲಿಬೇಕೆಂದು ೪೭೩

ಮ

೫೩೭. ಮಕ್ಕಳ ಬೇಡಿಕೊಳ್ಳೊ ಮೋನಪ್ಪ ಎಂದರೆ ೬೨
೫೩೮. ಮಕ್ಕಳು ಬೇಡಿದರೆ ಮಕ್ಕಳ ಕೊಡಲಾರೆ ೪೧೩
೫೩೯. ಮಕ್ಕಳೊಂದಿಗನೆಂಬ ಠಕ್ಕೆಯ ಬಿರುದುಂಟು ೬೭

೫೪೦. ಮಂಟುದಾತರ ತಂಟಿಯ ಸಂಸಾರ ೭೬೦
೫೪೧. ಮದವೇರಿದವರಿಗೆ ಕರದೊಮ್ಮಿ ಪಟ್ಟವಕಟ್ಟಿ ೬೧೮
೫೪೨. ಮದಗಜ ವಚನವು ಒದಗಿ ಬಂದವು ಎಂದು ೮೨
೫೪೩. ಮದವಳಿಯದೆ ಮತ್ಸರವಳಿಯದು ೨೮
೫೪೪. ಮದ ಸೊಕ್ಕಿದ ಆನೆಯು ಗುದಕಿಗೆ ಅಂಜುವದೆ ೩೬೯
೫೪೫. ಮಧುರ ಕೀಟಕದ ಹುಳುವು ಮಾಂಸದೊಳಗಿನ ಕ್ಷೀರ ೪೩೮
೫೪೬. ಮದ್ದು ಮಂತ್ರವನಳಿದ ಸಿದ್ಧವಿರಕ್ತನು ೭೬೬
೫೪೭. ಮಂಜು ಮಳೆಯಲ್ಲ ಹುಂಜ ಮಯೂರವಲ್ಲ ೫೭೨
೫೪೮. ಮಂಡಲವ ತಿರುಗಿದೆನು ಪಂಡಿತರೆಂಬುವರ ಕಾಣೆ ೩೪೩
೫೪೯. ಮಂಡಲವನಾಳುವರೆಲ್ಲ ಖಂಡಿತರಾದಾರು ೬೮೦
೫೫೦. ಮನವೆಲ್ಲ ಮೈಲಿಗೆ ತನುವೆಲ್ಲ ಸೂತಕವು ೧೬೬
೫೫೧. ಮನ್ಮಥನ ದೇಹವಿದು ಸನ್ಮತವೆ ಶಾಸ್ತ್ರಗಳು ೫೫೧
೫೫೨. ಮನುಜ ಕೊಟ್ಟಣ್ಣವು ಉಣಲಿಕ್ಕೆ ಆ ಕ್ಷಣವು ೩೭೩
೫೫೩. ಮರೆಹೊಕ್ಕರೆ ಕೊಡೆನೆಂಬ ಗರ್ವನಮಗೇಕೆ ೩೦
೫೫೪. ಮಲಹರನ ಭಕ್ತರು ಹೊಲೆ ಮಾದಿಗರ ಮನೆ ೧೨೨
೫೫೫. ಮಳೆಗೆ ಜೋಯಿಸರಿಲ್ಲ ಇಳೆಗೆ ನಿಷೇಧವಿಲ್ಲ ೪೨೬
೫೫೬. ಮಳೆಗಾಲ ಹೋದೀತು ಹೊಳೆ ಬಾವಿ ಬತ್ಯಾವು ೭೬೧
೫೫೭. ಮಳೆಗೆ ಮಜ್ಜನವುಂಟೆ ಬೆಳೆಗೆ ಪ್ರಸಾದವುಂಟೆ ೪೦
೫೫೮. ಮಳೆಮಾರು ಬೆಳೆಬಿತ್ತು ಪ್ರಳಯಕಾಲಗಳೈದು ೭೬೨
೫೫೯. ಮಳೆಯೆಲ್ಲ ತೀರ್ಥವು ಬೆಳೆಯೆಲ್ಲ ಪ್ರಸಾದವು ೩೪೬
೫೬೦. ಮಾಗಿ ಕಟ್ಟಿದರೇನು ನೇಗಿಲ ಹೊಡೆದರೇನು ೨೧೦
೫೬೧. ಮಾಣಿಂಬುದು ಮಾಣಿಕದ ಲಿಂಗ, ಮೂಣಿಂಬುದು ಬಂಗಾರದ ಸೆಜ್ಜೆ ೫೧೫
೫೬೨. ಮಾತಾ ಪಿತರನು ಬಿಟ್ಟು ನೀತಿ ಮಾರ್ಗವ ಬಿಟ್ಟು ೩೫೬
೫೬೩. ಮಾತು ಮಾಣಿಕ್ಯ ರತ್ನ ಮಾತು ಮಥನದ ರತ್ನ ೧೯೭
೫೬೪. ಮಾತು ಮರಳು ಹಿತ ತಿರಳು ೬೨೨
೫೬೫. ಮಾತು ಮಾಯುವುದಿಲ್ಲ ತೂತು ಮುಚ್ಚುವುದಿಲ್ಲ ೪೫೪
೫೬೬. ಮಾದಿಗರು ಮಾಡಿದ ಮಾಣಿಕದ ಮಡಿಕೆಯೊಳಗೆ ೪೬೮
೫೬೭. ಮಾಡಿಕೊಂಡ ಮನೆಗೆ ಹೂಡಿಕೊಂಡ ವ್ಯವಸಾಯಕ್ಕೆ ೬೫೪
೫೬೮. ವಾರದಾಕಿ ಅಲ್ಲಮನು ಬಂದು ೫೧೮
೬೬೯. ಮಾರಿಮಕ್ಕಮಾರಿ ನೂರೆಂಟು ದುರ್ಗಿಗಳು ೭೬೩

೫೭೦. ಮೊರೆ ಹೊಕ್ಕರೆ ಕೊಡನೆಂಬ ಗರುವ ನಮಗೇಕೆ ೧೧೨
೫೭೧. ಮಾಯೆಯೊಳಗೆ ಹುಟ್ಟಿದೆನು ಮಾಯೆಯೊಳಗೆ ಬೆಳೆದೆನು ೫೫೧
೫೭೨. ಮಾಸ ಹನ್ನೆರಡು ಇಪ್ಪತ್ತೇಳು ನಕ್ಷತ್ರ ರಾಶಿ ಗುಣಿಸಿ ಹೇಳುವರು ೩೯೦
೫೭೩. ಮಿಂಚು ಗದ್ದರಣಿ ಪುಟ್ಟಲು ಮುಂಚಿನ ಮಳೆ ೩೪೭
೫೭೪. ಮುಂಗಾಲ ಮಣ್ಣ ಹಿಂಗಾಲಿಗೆ ಹಾಕುತ ೭೮
೫೭೫. ಮುಗಿಲ ಮಾಳಿಗೆ ಒಡೆದು ಹಗಲೇ ಕನ್ನವ ತೆಗೆದು ೬೪೦
೫೭೬. ಮುಚ್ಚಿ ಮುಚ್ಚಿ ಆಡುವ ಮುಚ್ಚಿಗರ ಮಗನಲ್ಲ ೯
೫೭೭. ಮುಂಜಾನೆ ಏಳುತ್ತ ನಂಜುಗೊರಳನ ನೆನೆದು ೧೩೪
೫೭೮. ಮುತ್ತು ಸಿಂಪೆಯೊಳು ಪುಟ್ಟುವದು ರತ್ನ ಪಾಷಾಣದೊಳು ಪುಟ್ಟುವುದು ೪೪೫
೫೭೯. ಮುದಕನಾದೀತು ದೇಹ ಬದುಕು ಮಾಡಲು ಒಲ್ಲದು ೩೩೧
೫೮೦. ಮುದ್ದು ಮುಖದ ಆಧ್ಯಾತ್ಮ ಪರಬ್ರಹ್ಮ ೩೦೫
೫೮೧. ಮುಂದುಗಾಣದೆ ನೀವು ನಿಂದಿಸಲಿ ಬೇಡಿ ೭೬೪
೫೮೨. ಮುಂದೆ ಮೂರು ಲೋಕವೆಲ್ಲ ಇನ್ನು ತಲೆ ಕೆಳಗಾಗುವಾಗ ೭೬೫
೫೮೩. ಮುಪ್ಪಿನವರು ಬದುಕ್ಯಾರು ಪ್ರಾಯದವರು ಅಳಿದಾರು ೬೩೮
೫೮೪. ಮುಂಡಾಸದೊಳಗೊಂದು ಗಂಧದ ಕೊರಡನಿಟ್ಟು ೫೨೮
೫೮೫. ಮುಂಡಿ ಮುಂಡಿಗಿಯಲ್ಲ ಪೊಡವೆಲ್ಲ ಮಾಡಿತ್ತು ೬೦೯
೫೮೬. ಮೇಘರಾಜನಿಲ್ಲದೆ ಸಾಗಿಸುವರೆ ಹೊಲಗಳ ೧೯೯
೫೮೭. ಮೇದಿನಿಗೊಬ್ಬ ಶಿವನಾದ ಮೇಲೆ ೪೪೩
೫೮೮. ಮೇಟಿ ಮಾನ್ಯವನುಂಡು ನೀಟಾದೆನೆಂದರೆ ೬೨೩
೫೮೯. ಮೆಟ್ಟು ಮಾರುವವನಾದರೊ ಆಗಲಿ ೧೬೮
೫೯೦. ಮೂಡಲನಾಡು ಕುದುರೆಗಳು ಓಡಿ ಬರುತಾವೆ ೭೬೭
೫೯೧. ಮೂರು ಕಾಸಿನ ಲಿಂಗವ ಕೊಳಲಿಕ್ಕೆ ಮಾರಲಾರೆ ೫೧೦
೫೯೨. ಮೂರು ಹೊತ್ತಿನ ಊಟ ಆರು ಹೊತ್ತಿನ ಕೂಟ ೫೫೭
೫೯೩. ಮೂರು ವರುಷಕ್ಕೆ ಮುದ್ದು ಆರು ವರುಷಕ್ಕೆ ೧೩೬
೫೯೪. ಮೂರು ಹೊಲೆಗಳು ಎನಗೆ ಸೇರಿಕೊಂಡಿಪ್ಪವು ೪೫೧
೫೯೫. ಮೂರು ಲೋಕದ ಕರ್ತ್ಯ ಸೂರ್ಯನಿಗೆ ಬೆನ್ನಾದ ೨೦೯
೫೯೬. ಮೋಡೆಲ್ಲ ಮಳೆಯಾಗಿ ನಾಡೆಲ್ಲ ಬೆಳೆಯಾಗಿ ೪೩೨
೫೯೭. ಮೋಸದ ಮಲ ನಾಯಿ ಹೇಸದು ಹೊಲೆ ನಾಯಿ ಯ ೨೮೯
೫೯೮. ಯತ್ನ ತಪ್ಪಲು ಮನದಿ ಮನ್ತಾಪ ಮಹಮೇರು ೭೭೨
೫೯೯. ಯಾವಲ್ಲಿ ನೋಡಿದರೆ ವಾವಿಲ್ಲ ಕುಲವಿಲ್ಲ ೫೦೬

೬೦೦. ಯಾಸಿಗಿಕ್ಕಿದ ಕಲ್ಲು ಅದರ ಆಸರವೇನು ೬೬೫
೬೦೧. ಯಾಸಿ ಮಾತಾಡುವ ವೇಷ ಡಂಬಕನಲ್ಲ ೭೭೩
೬೦೨. ಯೋಗ ಒದಗಲು ಸಿದ್ಧಿ ಭೋಗ ತೀರಲು ಮರಣ ೩೨೯
೬೦೩. ಯೋಗಿ ಜೋಗಿ ಶ್ರವಣ ಸನ್ಯಾಸಿ ಪಶುಪತಿ ೫೬೧
೬೦೪. ಯೋನಿಯ ಮುಖದಿ ಮಾನವ ಚಾಣದ ಮುಖದಿ ದೈವ ೩೨೬
೬೦೫. ಯಜ್ಞೋಪವೀತನೆ ಧರಿಸಿ ಅವಗುಣವನೆ ಕೆತ್ತಿ ೨೯೬

ರ

೬೦೬. ರಂಡೇರು ಮಕ್ಕಳ ಹಡೆದರೆ ೨೫೧
೬೦೭. ರವಿ ಗ್ರಹಣ ಭಯವಾಗಿ ಭುವನದೊಳಗನ ಬಿಡದು ೭೬೮
೬೦೮. ರಕ್ಷಿಸುವ ಶಿವ ತಾನು ಭಿಕ್ಷುಕನಾದಮೆಲೆ ೨೩೫
೬೦೯. ರಾಷ್ಟ್ರ ಆಳುವಂಥಾ ಪಟ್ಟಕರ ಕಂಡೀರ್ಯಾ ೭೭೦
೬೧೦. ರಾಜರಾಜರಿಗೆಲ್ಲ ಗೋಜು ತಡವುವದ್ಯಾಕೆ ೭೬೯
೬೧೧. ರಾಟಾಣಕೆ ದಾರವ ಹಾಕಿದರೆ ರಂಡೇರ ಸಲಹಿತ್ತು ೨೯೮
೬೧೨. ರಾಶಿ ಹೊನ್ನ ಕೊಟ್ಟರೆ ಎನ್ನ ಆಶೆ ಹಿಂಗುವದೆ ೩೨
೬೧೩. ರಾಶಿ ಹೊನ್ನು ಕೊಟ್ಟರೆ ಎನ್ನ ಆಶೆ ಹಿಂಗುವುದೆ ೪೨೦
೬೧೪. ರೂಢಿಗೀಶ್ವರನೊಬ್ಬರೊಡದು ಮಾಡಿದವರುಂಟೆ ೨೪೫
೬೧೫. ರೊಕ್ಕ ಉಳ್ಳವರಿಗೆ ಮಕ್ಕಳಾದಾವು ೭೭೧
೬೧೬. ರೊಕ್ಕುಳ್ಳ ಕಾಲಕೆ ಮುಚ್ಚುವ ಪಾವಡಗಳು ೪೬೫
೬೧೭. ರೊಟ್ಟಿಯ ತಿಂದರೆ ಕುಲ ಕೆಟ್ಟೀತೆಂಬರು ೪೪೭

ಲ

೬೧೮. ಲಂಪಟಕೆ ಸಿಲುಕಿದರೆ ಲಕ್ಷಾಂತರ ದುಶ್ಚಿಂತಿ ೧೫೨
೬೧೯. ಲಳಗಿ ತಂಡಾಸ ಮುಸಿಯ ಇಳೆಯಲ್ಲ ಹಿಡಿದೀತು ೬೪೯
೬೨೦. ಲಕ್ಷ ಗಾವುದ ದಾರಿಯಲ್ಲಿ ಅರ್ಕಮನ್ನೆಯರು ಇರಲು ೩೩೬
೬೨೧. ಲಕ್ಷ ಬದುಕು ಮಾಡಿದರೇನು ಒಕ್ಕಲಿಗನ ಸರಿಯಲ್ಲ ೧೭೫
೬೨೨. ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ ೬೫೯
೬೨೩. ಲಕ್ಷ್ಮೀಯ ಮಗನಾಗಲಿ ಮುಕ್ಕಣ್ಣ ಶಿವನಾಗಲಿ ೨೪೧
೬೨೪. ಲಕ್ಷ್ಮೀಯ ಸುತನಿಗೆ ಸಾಕ್ಷಾತ ಗುರುಕೃಪೆಯು ೪೨೮
೬೨೫. ಲಕ್ಷ್ಮೇಶ್ವರದಲ್ಲಿ ಸಜ್ಜನಯ್ಯನು ೭೯೨
೬೨೬. ಲಕ್ಷ್ಮೇಶ್ವರದಲ್ಲಿ ಜನಪದ ಭಾವಿಗೆ ೭೯೩
೬೨೭. ಲಾಳಿಯಲಿ ಅಂಗವಸ್ತ್ರ ಮಳೆಯಲ್ಲಿ ಪ್ರಸಾದವು ೨೪೨

೬೨೮. ಲಿಂಗವಾದರೇನು ಜಂಗಮವಾದರೇನು ೩೧೪
೬೨೯. ಲೆಂಡ ಪುಂಡರಿಗಿಕ್ಕಿ ಗಂಡಸುಳ್ಳವಳಿಗಿಕ್ಕಿ ೨೬೮

ವ

೬೩೦. ವಜ್ರದ ಬಂಡೆಯಲಿ ಹೆಜ್ಜೆ ಉಂಟು ಗುರುವಿನ ೬೭೩
೬೩೧. ವಸ್ತ್ರದ ಬೆಳಕಿಗೆ ಸುತ್ತಿ ಸುತ್ತಿ ಆಡಿದೆನು ೧೧೩
೬೩೨. ವರಕೃಪೆ ದಯೆ ಪಡಿ ಒರತೆಯ ಅಗ್ಗವಣಿ ೧೮೭
೬೩೩. ವರವಿಯ ಛಬ್ಬಿಯ ಎರಡರ ಮಧ್ಯದಲ್ಲಿ ೮೪
೬೩೪. ವರವಿಯ ಪುರದಲ್ಲಿರುವ ಕಲ್ಲೆಲ್ಲ ದೇವರು ೮೬
೬೩೫. ವರವಿ ಪುರದಲ್ಲಿ ಕುರುಹುಂಟು ಲಿಪಿಯುಂಟು ೮೩
೬೩೬. ವರವಿರಲು ದೈವ ಅರುವಿರಲು ಮನುಜನು ೨೮೮
೬೩೭. ವರವಿಯೊಳು ವಾಸವಾಗಿರುವ ಮೋನಯ್ಯನ ೪೨೫
೬೩೮. ವರಿಕಲ್ಲು ಸರಮಚ್ಚರ ಕರಲಿಂಗ ಜಪಮಾಲೆ ೧೦
೬೩೯. ವರುಷಕ್ಕೆ ಒಂದು ಜನಿಸಿ ಪರುಷವಾಯಿತು ಪ್ರಜೆಯು ೭೭೪
೬೪೦. ವಾಣಿಯೊಳು ಹೊಕ್ಕು ವಾಣಿ ಮಾತಾಡಬಹುದು ೬೩೦
೬೪೧. ವ್ಯಾಪಾರ ಎಡವಟ್ಟು ಭೂಪಾರ ಕನಿಕಪ್ಪ ೧೩೨
೬೪೨. ವಾದಿಗೆ ವೃತವಿಲ್ಲ ಮೇದಿನಿಗೆ ಹೇಸಿಗಿಲ್ಲ ೩೫೫
೬೪೩. ವಾರ ಹುಣ್ಣಿವೆ ಹಬ್ಬ ಊರಕೇರಿಯ ತಿರುಗಿ ೧೭೦
೬೪೪. ವಿಜಾಪುರ ಸುಲ್ತಾನ ಸಾಹೇಬರಿಗೆ ಪಟ್ಟವಕಟ್ಟಿ ೬೪೩
೬೪೫. ವಿಪ್ರರು ತಂದೆಗೆ ನುಚ್ಚು ನೀರು ಹುಯ್ದರು ೧೮೧
೬೪೬. ವಿಭೂತಿಯ ಧರಿಸಿ ಪಂಚಾಕ್ಷರಿ ಮಂತ್ರ ಓದುತ ೭೯೬
೬೪೭. ವಿದ್ಯೆಗೆ ಮೊದಲಾದ ಬುದ್ಧಿವಂತರ ಪಾದ ೧
೬೪೮. ವಿಧಿಗೆ ಈಡಾದವರಿಲ್ಲ ನದಿಗಿಂತ ಶುಚಿಯಿಲ್ಲ ೫೦೯
೬೪೯. ವಿಶ್ವಾಸದಿಂದಲಿ ವಿಶ್ವ ತಾ ಪುಟ್ಟಿಸಿದ ೨೮೪
೬೫೦. ವೇದಶಾಸ್ತ್ರಗಳೇಕೆ ವಾದ ತರ್ಕಗಳೇಕೆ ೪೪೨
೬೫೧. ವೇಷ ಭೂಷಣಕೆ ಈಶ ತಾನೊಲಿವನೆ ೧೫೫
೬೫೨. ವೇಸಿ ದಾಸಿಗಾಡಿ ವಾಸಪಂಥಕ್ಕಾಡಿ ೧೧೧
೬೫೩. ವೃತವ ಸಾಗಿಸಬೇಕು ಮಥನ ಮಾಡಲಿಬೇಕು ೧೩೫

ಶ

೬೫೪. ಶಂಭು ಶಂಕರ ತಾನು ಅಂಬಿಗನಾದ ಮೇಲೆ ೨೮೨
೬೫೫. ಶಾಸ್ತ್ರದ ಪರಾಕ್ರಮವು ಸೂತ್ರ ಆಧಾರಕ್ಕೆ ೭೭೬

೬೫೬. ಶಾಸ್ತ್ರ ಸಂಪನ್ನನು ನೀತಿ ಪರಿಪೂರ್ಣನು ಜ್ಯೋತಿ ಪ್ರಕಾಶ ೧೧
೬೫೭. ಶಾಸ್ತ್ರ ಸಂತೆಯ ಗೋಷ್ಠಿ ಪುರಾಣ ಪುಂಡರ ಗೋಷ್ಠಿ ೩೪೧
೬೫೮. ಶಿರ ಸಾಹೇಬನ ದುರಾಯಿ ಪರಶಿವನಾಣಿ ೪೧೭
೬೫೯. ಶೀಲವು ತಪ್ಪಿದರೆ ಶೂಲವು ತಪ್ಪುವದೆ ೭೭೫
೬೬೦. ಶೀಲವಂತಿಕೆಯೆಂಬ ನೂಲು ಮಾಲೆಗಳೇಕೆ ೪೬೪
೬೬೧. ಶೀಲವಂತಿಕೆಯೆಲ್ಲ ಜೋಳದೊಳಗೈತಿ ೪೬೭
೬೬೨. ಶಿಲೆಯೊಳು ಲೋಹ ನಿರ್ಮಿತವ ಮಾಡಿದ ಗುರುತರಿಯೆ ೧೧೮
೬೬೩. ಶಿವಗಿರಿಯ ಪರ್ವತದ ಗಿರಿಯನಿಳಿದು ಬಂದು ೭೯
೬೬೪. ಶ್ರೀ ಪರಮಭಕ್ತರಿಗೆ ಪರಾಮರಿಕೆ ೩೯೪

ಷ

೬೬೫. ಷಡುದರುಶನದಾಟ ಕಡಿಯಾಗಿ ಹೋದ ಮೇಲೆ ೭೭೭

ಸ

೬೬೬. ಸಕ್ಕರಿ ಬೆಲ್ಲದೊಳು ಸರ್ವರ ಎಂಜಲವು ೪೭೯
೬೬೭. ಸಂಕೋಲಿಯ ಬೀಳಲು ಶಂಕರನ ಕೃಪೆಯಾಯ್ತು ೭೭೯
೬೬೮. ಸಂಗನ ಶರಣರ ಹಂಗಿಸಿ ಭಂಗಿಸಿ ೧೨೧
೬೬೯. ಸಜ್ಜನ ಶರಣರಿಗೆ ಹೆಜ್ಜೆ ಹುಸಿಕನೆಂದರೆ ೬೬೭
೬೭೦. ಸತಿಗೆ ನಾಸಿಕವಿಲ್ಲ ಪತಿಗೆ ಮಸ್ತಕವಿಲ್ಲ ೫೮೩
೬೭೧. ಸತ್ತನೆಂದು ಸ್ವಾಮಿಯನು ಹೊತ್ತವರು ನಾಲ್ವರು ೨೫೬
೬೭೨. ಸತ್ತ ಪಶುವಿನ ತೊಗಲು ಜತ್ತಿಗೆ ಮಿಣಿ ಮಾಡಿ ೪೮೦
೬೭೩. ಸದರ ಸಿಂಹಾಸನದಿ ನಡೆದುದು ಗಣದಿ ಗಂಭೀರ ೧೮೦
೬೭೪. ಸತ್ತು ಹುಟ್ಟುವ ದೇಹಕ್ಕೆ ಮುತ್ತಿನ ಹಾರಗಳ್ಯಾಕೆ ೨೫೯
೬೭೫. ಸತ್ಯದ ಬೀಜವ ಎತ್ತಿನ ಮೇಲೆ ಹೇರಿಕೊಂಡು ೫೧
೬೭೬. ಸತ್ಯರು ಬರುವಾಗ ಅವರ ಹತ್ತಿರ ನಾನಿದ್ದೆ ೬೩೧
೬೭೭. ಸತ್ಯವು ಮುಳಗೀತು ಅಸತ್ಯವು ಬೆಳೆದೀತು ೭೮೦
೬೭೮. ಸದರಿಗೆ ಸಂತೋಷವಾಗಬೇಕು ಉತ್ತಮರ ೩೬೧
೬೭೯. ಸದರಿಗೆ ಸಂತೋಷವಾಗಬೇಕು ನೆದರಿರಬೇಕು ೫೫೮
೬೮೦. ಸದರ ಸಾಹೇಬನ ಕೌಲು ೭೭೮
೬೮೧. ಸಬಕಾರ ಬೆಳಕಿಗೆ ಸರ್ವಜನ ಮನ್ನಣೆ ೧೯೮
೬೮೨. ಸರ್ವರ ಮಲವನ್ನು ಸವಿಯೆಂದು ಮೆಲಿವದು ೨೬೮
೬೮೩. ಸರ್ವರ ಮಲವನ್ನು ಸರಿಯೆಂದು ಸೇವಿಸುವುದು ೨೩೭

೬೮೪. ಸರ್ವೇಶ್ವರನೆನುತಲಿ ಹರಿದು ಗುಡ್ಡವನೇರಿ ೭೮೫
೬೮೫. ಸಸಿಗೆ ಕಸಮೂಲ ಸೊಸಿಗೆ ಅತ್ತೆ ಮೂಲ ೫೬೬
೬೮೬. ಸಹಜ ಬೀಜವ ಕೊಟ್ಟು ಮೂಜಗದೊಡೆಯ ೨೦೦
೬೮೭. ಸಾತ ಮುಡದಾರರಿಗೆ ನೀತಿ ನಿರ್ಣಯಗಳಿಲ್ಲ ೨೦೧
೬೮೮. ಸಾರಿಕೊಲ್ಲಲಿ ಬಂದ ಸಾರಭೂಪತಿಗಳನು ೭೮೧
೬೮೯. ಸಾರಿ ಹೇಳಿದವರಿಗೆ ಸೇರಲರಿಯವು ದೋಷ ೬೭೫
೬೯೦. ಸಾವಿರ ಮಂದಿ ಸತಿಯರ ಭೋಗವ ಮಾಡಿ ೪೪೯
೬೯೧. ಸಾವು ಮರಣಗಳೊಂದೆ ನೋವು ಬ್ಯಾನಿಗಳೊಂದೆ ೪೫೫
೬೯೨. ಸಾಸಿರ ನಾಮದ ಧ್ಯಾಸವ ಪೊಗಳುವರು ೨೦೬
೬೯೩. ಸಾಸಿರನಾಮದ ಧ್ಯಾಸವ ಪೊಗಳುವರು ೨೫೨
೬೯೪. ಸಾಕ್ಷಿ ಉಪದೇಶಕ್ಕೆ ಕೊಕ್ಕಿಯ ಕಳುಹಿದರು ೩೮೬
೬೯೫. ಸಿಂಧು ಬಲ್ಲಾಳನ ಸತಿಗೆ ಸುತನಾಗಿ ಮೊಲೆಕ್ಷೀರ ೧೯೬
೬೯೬. ಸಿಡಿಗಟ್ಟಿದ ದನದಂತೆ ಅಡವಿಯಡವಿ ತಿರುಗುವರು ೫೫೪
೬೯೭. ಸೀತೆಯಿಂದ ಶ್ರೀರಘುನಾಥ ರಾಮಗೆ ಅಳುಕು ೬೨೫
೬೯೮. ಸೃಷ್ಟಿಗೀಶ್ವರನ ಮೆಟ್ಟಿ ಕಟ್ಟಿದವರುಂಟೆ ೫೩೨
೬೯೯. ಸೃಷ್ಟಿ ಬೀಡಾರವು ಸುಟ್ಟು ಹೋದೀತೆಂದು ೭೩೮
೭೦೦. ಸೃಷ್ಟಿಭೂಪರನು ಭಟ್ಟನಾಗಿ ಪೊಗಳಿದೆನು ೧೨೩
೭೦೧. ಸೃಷ್ಟಿ ಭೂಪರೆಲ್ಲ ಹೊಟ್ಟೆಯ ತೋರಿದರೆ ೭೫
೭೦೨. ಸಿದ್ಧಸಾಧುವು ತನ್ನ ಇಂದ್ರಗೃಹದೊಳಗೆ ೭೮೨
೭೦೩. ಸುತ್ತ ಬೇಲಿಯ ಹಚ್ಚಿ ಬಿತ್ತಿ ಬೆಳೆಯುವದೆ ಪುಣ್ಯ ೧೭೨
೭೦೪. ಸುತಾರ ಮಾಡಿದ್ದು ಭೂತಗಳಲ್ಲದೆ ೧೧೭
೭೦೫. ಸೂಜಿ ನುಂಗಿದ ಎಮ್ಮಿ ಆಗಲೆ ಸಾಯುವದೆ ೬೫೨
೭೦೬. ಸೂತಕನಾಸ್ತಿ ಶೂದ್ರ ಗೋತ್ರವನಾಸ್ತಿ ಗೋಳಕ ಶಾಸ್ತ್ರನಾಸ್ತಿ ೬೨೪
೭೦೮. ಸೂಕ್ಷ್ಮದ ಸುತ್ತಿಗೆ ದೀಕ್ಷದ ಇಕ್ಕಳ ೪೭
೭೦೯. ಸೂರ್ಯ ಚಂದ್ರರ ಮಾಡಿದ ದೇವನೆ ನೀನು ೪೧
೭೧೦. ಸೂರ್ಯ ಚಂದ್ರರೆ ಲಿಂಗ ತಾರೆ ಮಂಡಲ ಲಿಂಗ ೫೧೨
೭೧೧. ಸೂರ್ಯನು ಬರುವಾಗ ತಾರೆಗಳು ಅಡಗ್ಯಾವು ೬೭೦
೭೧೨. ಸೂಳೆಯ ಮಕ್ಕಳಿಗೆ ತಾಯಿವುಂಟು ತಂದಿಲ್ಲ ೭೮೩
೭೧೩. ಸೆಟ್ಟಿ ಪಟ್ಟಣವ ಸುಟ್ಟಂಥ ಕಾರಣದಿಂದ ೭೮೪
೭೧೪. ಸೋಗು ವಂಚನೆಯ ಮಾಡಿ ಪಾಗಕ್ಕೆ ಕುದುರಿಯ ಕಟ್ಟಿ ೭೮೬

೭೧೫. ಸೋರುಪ್ಪ ಪಟಕವ ಹಾಕಿ ಮೇಲೆ ಜಾಜವ ತೊಡೆದು ೫೮
೭೧೬. ಸೋಲು ಗೆಲುವುಗಳೇಕೆ ಶೀಲ ಮಾಲೆಗಳೇಕೆ ೩೩೯
೭೧೭. ಸ್ವಾಮಿಯು ಶಿವನು ಬಂದು ಸಾಮವೇದವ ನುಡಿಯೆ ೪೨
೭೧೮. ಸ್ನಾನ ಜಪತಪಗಳು ಜ್ಞಾನ ತತ್ತ್ವಪುರಾಣ ೩೨೦

ಹ

೭೧೯. ಹಡಗು ಹರಿಗೋಲ ಮಾಡಿ ಕಡಲೊಳಗೆ ನಡೆಸಿದನು ೪೫
೭೨೦. ಹಣದ ಆಸೆಗೆ ನೀವು ಆಸೆ ಮಾಡಲಿ ಬೇಡಿ ೨೬೪
೭೨೧. ಹಗಲು ರಾತ್ರಿಯಲಿ ಎದ್ದು ಮುಗಿಲು ನೋಡುವರಯ್ಯ ೩೪೫
೭೨೨. ಹವಣಿಸಿದ ಹವಣಿಕೆಯು ಶಿವನೊಲಿದು ಕೊಟ್ಟರೆ ೪೦೫
೭೨೩. ಹಡೆವುದು ಮುಡಿವುದು ಕೊಡುವದು ಪಡೆವುದು ೧೪೧
೭೨೪. ಹಣಕ್ಕೆ ಹನ್ನೆರಡುಮದ ನೆಣಕ್ಕೆ ಮೂವತ್ತಾರುಮದ ೯೯
೭೨೫. ಹತ್ತು ಸಾವಿರ ಬಿನ್ನಾಯ ಜಂಗಮರಿಗಿಕ್ಕಿ ೨೦೪
೭೨೬. ಹದ್ದು ಕಾಗೆಗೆ ಹಬ್ಬ ಶುದ್ಧ ಸುಖವಾಯಿತು ೨೨೭
೭೨೭. ಹತ್ತು ಬಣ್ಣದ ಹೊನ್ನು ಒಪ್ಪುವರಲ್ಲವೊ ೧೩
೭೨೮. ಹತ್ತೊಂದಯ್ಯನ ಮುತ್ತಿನ ಗದ್ದುಗೆಯ ೫೧೩
೭೨೯. ಹನ್ನೆರಡು ವರುಷದಲಿ ತನ್ನ ಜ್ಞಾನದಲ್ಲಿದ್ದು ೯೦
೭೩೦. ಹರಕಿಗಳು ತಡದರೆ ಖರೆಖರೆಗಳಾದಾವು ೭೮೭
೭೩೧. ಹರನಿಕ್ಕಿದ ಮುಂಡಿಗಿ ಹರಿಯದೊಬ್ಬರ ಕೈಯ್ಯ ೫೯೦
೭೩೨. ಹರನೆ ಕಮ್ಮಾರನಾಗಿ ನರರೂಪ ತಾಳಿ ೭೮೬
೭೩೩. ಹರನೊಬ್ಬ ಗುರುವಾದ ಹರಿಯು ತಾನು ಶಿಷ್ಯ ೩೩೫
೭೩೪. ಹದಿನಾರು ವರುಷ ಒದಗಿದ ಪ್ರಾಯದೊಳಗೆ ೩೫೨
೭೩೫. ಹದಿನೆಂಟು ಮಣವ ಹಿಡಿದು ಕಂಜರವ ಮಾಡಿದ ೬೧೩
೭೩೬. ಹರಕೊಟ್ಟ ಶಾಪದಿಂದ ಉರಿದು ಹೋದ ಮನ್ಮಥ ೬೧೯
೭೩೭. ಹರಗಿ ಬಿತ್ತಿದ ಹೊಲವು ಉರಿದು ಆರಿದ ಮೇಲೆ ೫೮೧
೭೩೮. ಹರನ ಹಡೆದವರಿಲ್ಲ ಹರಿಗಿಂತ ಶ್ರೇಷ್ಠರಿಲ್ಲ ೫೭೬
೭೩೯. ಹರನೆ ಕಮ್ಮಾರನು ವಿಷ್ಣುವೆ ಬಡಿಗನು ೫೨
೭೪೦. ಹರನೆ ಕಮ್ಮಾರನಾಗಿ ತಿರಿದುಂಡ ಮೇಲೆ ೪೪
೭೪೧. ಹರನೆ ಜಂಗಮನಾಗಿ ತಿರಿದುಂಡರೆ ೯೫
೭೪೨. ಹರಿಯು ಹಂದಿಯಾದದ್ದು ಹರನು ತಿರಿದುಂಡದ್ದು ೩೫
೭೪೩. ಹರುಷದ ಬೀಜ ಪರುಷದ ಬೆಳಸು ೨೬೭

೭೪೪. ಹಲವು ಮೂರ್ತಿಯ ಮಾಡಿದ ಉಳಿಯೊಂದೆ ಕೊಡತೊಂದೆ ೩೨೭
೭೪೫. ಹಲವು ಶಾಸ್ತ್ರವನೋದಿ ನೆಲೆಗಾಣನೆಲೆ ಗುರುವೆ ೨೯
೭೪೬. ಹಲ್ಲು ಹದನಿದ್ದರೆ ಕಲ್ಲು ಹರಿಯುವುದುಂಟೆ ೫೮೫
೭೪೭. ಹಸಿವೆಗೆ ಆಹಾರ ಅನ್ನ ಪಶುವಿಗೆ ತೃಣ ಉದಕ ೫೪
೭೪೮. ಹಸಿವು ಊಟಕೆ ಲೇಸು ರಸವು ಕಬ್ಬಿಗೆ ಲೇಸು ೫೮೨
೭೪೯. ಹಸ್ತಪ್ರಸಾದವು ಹರಣ ಸಂತತಿ ಗಣಕೆ ೫೮೬
೭೫೦. ಹಸಿಯ ತೊಗಲೊಳಗಣ ತುಪ್ಪ ಬಸಿ ಬಸಿದು ಉಂಡ ಮೇಲೆ ೪೭೫
೭೫೧. ಹಸ್ತಪರುಷ ಎನಗುಳ್ಳಡೆ ಹಸ್ತು ನಾ ತಿರಿದುಂಬೆನೆ ೨೧೪
೭೫೨. ಹಾಟವೇ ತೀರ್ಥ ಕೂಟವೇ ಪ್ರಸಾದ ೫೨೫
೭೫೩. ಹಾಲು ಸಕ್ಕರಿ ತುಪ್ಪ ಲೋಲ್ಯಾಡಿ ಉಂಬುವರು ೪೫೩
೭೫೪. ಹಾಳೂರನೆ ತುಂಬಿಸಿ ಬೀಳ ಹೊಲವನೆ ಮಾಡಿ ೬೫೩
೭೫೫. ಹಿಂದಿನ ಶೀಲವು ಮುಂದತ್ತ ನಡೆಯವು ೬೭೧
೭೫೬. ಹಿಂದು ತುರುಕರು ಒಂದಾಗಿ ನಡದಾರು ೬೬೨
೭೫೭. ಹಿಂದು ತುರುಕರಿಗೆ ಚಂದ್ರಮನೊಬ್ಬನೆ ೪೪೬
೭೫೮. ಹಿತ್ತಲದೊಳಗೆ ಹತ್ತು ಬಾಳೆಯ ಬಿತ್ತಿ ೫೨೬
೭೫೯. ಹಿತ್ತಲ ಹಿರಿಮನೆ ಪಟ್ಟಶಾಲೆ ದೇವರ ಜಗಲಿ ೨೪೭
೭೬೦. ಹಿಪ್ಪಿ ಹೀರಿದ ಮಿಕ್ಕ ತೊಗಲೊಳಗೆ ೫೦೪
೭೬೧. ಹಿಪ್ಪಿದೆನು ಹೀರಿದೆನು ಅಪ್ಪಿ ಮುದ್ದಾಡಿದೆನು ೫೪೪
೭೬೨. ಹಿರಿಯನೆಂಬೆನೆ ಗಂಗೆಯ ಶಿರದಲ್ಲಿರಿಸಿಕೊಂಡವನ ೧೨೫
೭೬೩. ಹಿರಿಯರ ಮಕ್ಕಳಿಗೆ ಬಿರುನುಡಿಯು ಸಲ್ಲದು ೭೮೮
೭೬೪. ಹಿರೇ ಅಂಕುಶಖಾನ ಸತ್ತಂದಿನ ಮಾತು ೭೧
೭೬೫. ಹುಟ್ಟು ಬಣ್ಣದ ಮಡಿಕೆ ಮುಟ್ಟಿದರೆ ದೋಷಿಲ್ಲ ೨೩೩
೭೬೬. ಹುಣ್ಣು ಹುಗಳು ತದ್ದು ಚನ್ನಾಗಿ ಎಮಗಿರಲಿ ೩೪
೭೬೭. ಹುಟ್ಟಿತು ರಾಜರಲ್ಲಿ ಕೆಟ್ಟಿತು ಪ್ರಜೆಗಳಲ್ಲಿ ೩೨೩
೭೬೮. ಹುಟ್ಟಿದ ಯೋನಿಯ ಹಳಿದು ಕೊಟ್ಟ ಮೊಲೆಗಳ ಹಳಿದು ೫೪೨
೭೬೯. ಹುಲಿಯು ಹುಲ್ಲೆಗೆ ವೈರಿ ಇಲಿಗೆ ಬೆಕ್ಕು ವೈರಿ ೩೮೦
೭೭೦. ಹುಸಿಯ ಮಾತಾಡುವನಲ್ಲ ಹೇಸಿಯ ಮಾತಲ್ಲ ೭೮೯
೭೭೧. ಹೆಂಡಕ್ಕೆ ಖಂಡಕ್ಕೆ ದಂಡೆಲ್ಲ ನೆರೆವುದು ೪೮೩
೭೭೨. ಹೆಂಡಗಾರರು ಬಂದು ಮಿಂಡಿಯರ ಹಿಡಿದರು ೬೮೩
೭೭೩. ಹೆಂಡರು ಮಕ್ಕಳಿಲ್ಲದ ತೊಂಡ ತ್ರೋಟಕನಲ್ಲ ೭೨

೭೭೪. ಹೆಗ್ಗಡೆ ದೇವರ ಕೂಡ ನುಗ್ಗು ಮಾತುಗಳೇಕೆ ೩೬೨
೭೭೫. ಹೆಣ್ಣಿನ ಮೇಲಣ ಆಸೆ ಸುಣ್ಣದ ಕಲ್ಲಿನ ರಾಶಿ ೫೩೬
೭೭೬. ಹೆಣ್ಣು ಗೆದ್ದವರಿಲ್ಲ ಮಣ್ಣು ಮೆದ್ದವರಿಲ ೫೬೦
೭೭೭. ಹೆಣ್ಣು ಬಿಟ್ಟೆನೆಂದು ಮಣ್ಣು ಮೋರೆಗೆ ಪೂಸಿಕೊಂಡು ೫೪೫
೭೭೮. ಹೆಣ್ಣು ಬಿಟ್ಟವರಿಗೆ ಪುಣ್ಯದ ಫಲವಿಲ್ಲ ೫೪೬
೭೭೯. ಹೆಣ್ಣು ಬೊಂಬೆಯ ಮೇಲೆ ಕಣ್ಣು ನಟ್ಟಾಕ್ಷಣದಿ ೫೪೭
೭೮೦. ಹೆಣ್ಣು ನೆಚ್ಚುವರೇನು ಕಣ್ಣು ಕಾಣದ ಮೂಳ ೧೫೪
೭೮೧. ಹೆಣ್ಣು ಹಾದರಗಿತ್ತಿ ಕಣ್ಣು ಕುಂಟಣಿಗಿತ್ತಿ ೨೭೨
೭೮೨. ಹೆಜ್ಜೆಯ ಹಿಡಿದು ಬಂದರೆ ಅಜನೆಂಬರು ಅಜಗಣ್ಣನೆಂಬರು ೩೮೧
೭೮೩. ಹೆತ್ತವರನರಿಯದಾತ ಮುತ್ತ್ಯನ ಬಲ್ಲನೆ ೫೩೭
೭೮೪. ಹೆತ್ತಂಥ ಸುತನಿಗೆ ಎತ್ತಿ ಆಯುಧಗಳು ೧೨೧
೭೮೫. ಹೆಬ್ಬಾವು ಸಿಂಹಕೆ ಗುಬ್ಬಿ ಗುಟುಕಾಕುವುದು ೬೬೧
೭೮೬. ಹೇಮತ್ವವುಳ್ಳವರು ಹೆಮ್ಮೆಯಲಿ ಮೆರೆವರು ೪೮
೭೮೭. ಹೇಲನು ತೊಳೆವಂಥ ಜಾಲಗಾರನು ನಾನು ೭೯೧
೭೮೮. ಹೊಟ್ಟೆ ಹೋರಕನಲ್ಲ ನೆತ್ತಿ ಬೋಳಕನಲ್ಲ ೩೨೪
೭೮೯. ಹೊಲಸು ದೇಹದಿ ಹೊಕ್ಕು ನಿಲಿಸಲಾರೆನು ದೃಢವ ೫೬೪
೭೯೦. ಹೊಲೆ ಮಾದಿಗರ ಹೆಣ್ಣ ಸುಲಭದಲಿ ಮದಿವ್ಯಾಗಿ ೬೮೧
೭೯೧. ಹೋರ ಮೇಲಿನ ಹುಣ್ಣು ಬಾಯಿ ಮೇಲೆ ಮೂಡಿದರೆ ೪೭೬
೭೯೨. ಹೋರಾಗ ಬಿದ್ದವರಿಗೆ ಬೇರೊಂದು ಕುಲವುಂಟೆ ೪೭೭
೭೯೩. ಹೊಯಿಮಾಲಿ ವ್ಯವಹಾರಕ್ಕೆ ಐಮೂಲಿ ಚೌಕಸಿಗೈವ ೩೭೯

ಕ್ಷ

೭೯೪. ಕ್ಷಯನಾಮ ಸಂವತ್ಸರದಲ್ಲಿ ಆಡಿದ ಆಟ ೬೭೨

ಜ್ಞ

೭೯೫. ಜ್ಞಾನಿಗಳು ಹೆಚ್ಚಾಗಿ ಬೋನಗಳು ಮುಂದಾಗಿ ೬೩೭

ಸಾಂಸ್ಕೃತಿಕ ಪದಕೋಶ

ಅ

ಅಂತರ	:	ಅಂಬರ, ಆಕಾಶ
ಅಡವಿಚಂಚ	:	ಅಡವಿ ಸಂಚಾರ ಮಾಡುವ ಸಮುದಾಯ, ಕಾಡಿನ ಜನ
ಅತಿಗಳೆ	:	ತಿರಸ್ಕಾರಮಾಡು
ಅನುವರಿತು	:	ಸಂಧಿ ಸಾಧಿಸಿ, ಸಮಯ ನೋಡಿ
ಅಪ್ಪಾಗಿರಿ	:	ಚಾಮರ
ಅಳಗಾಲ	:	ಕೆಡುಕಾಲ, ಕೇಡುಗಾಲ
ಅಳತೆ	:	ಪ್ರಮಾಣ, ಮಾಪನ
ಅಳವು	:	ಶಕ್ತಿ, ಅಳತೆ, ಎಣಿಕೆಗೆಸಿಗದ
ಅವಗುಣ	:	ಕೆಟ್ಟಗುಣ
ಅಷ್ಟು	:	ಎಲ್ಲವನ್ನೂ(ಅಷ್ಟನ್ನು ಕೊಟ್ಟುಬಿಡು, ಇರುವುದೆಲ್ಲವನ್ನು ನೀಡುವುದು)
ಅಂದಣ	:	ಪಲ್ಲಕ್ಕಿ
ಅಗಣಿತ	:	ಲೆಕ್ಕವಿಲ್ಲದಷ್ಟು
ಅಗ್ಗ	:	ಕಡಿಮೆ ಬೆಲೆ, ಬೆಲೆಯಿಲ್ಲದ, ಸಸ್ತಾ
ಅಗ್ಗವಣಿ	:	ನೀರು
ಅಘಹರ	:	ಪಾಪನಿವಾರಕ
ಅಜ	:	ಬ್ರಹ್ಮ
ಅಜಗಣ್ಣ	:	ಒಳಗಣ್ಣು, ಒಬ್ಬ ಶರಣನ ಹೆಸರು
ಅರ್ಜಿಕೇಳು	:	ಗದರಿಸಿ ಕೇಳು, ಗಟ್ಟಿಯಾಗಿ ಕೇಳು
ಅಚ್ಯುತ	:	ಚ್ಯುತಿ ಇಲ್ಲದ್ದು
ಅಷ್ಟಂಜನ	:	ಅಷ್ಟದಿಕ್ಪಾಲಕರು(ಇಂದ್ರ, ಅಗ್ನಿ, ನೈರುತ್ಯ, ವರುಣ, ವಾಯು, ಕುಬೇರ ಈಶಾನ್ಯ)

ಅಸಮ : ಸಮಾನವಿಲ್ಲದ, ಎಣೆಯಿಲ್ಲದ, ಶ್ರೇಷ್ಠ
ಅಸಮಾಯ ಅಪ್ರತಿಮ, ಅಳತೆಗೆ ಮೀರಿದ್ದು

ಆ

ಆಟ : ಲೀಲೆ
ಆಟ್ಟುಗೋಲು : ಅಡಿಗೆಯಲ್ಲಿ ಬಳಸುವ ಕೋಲು, ಕಟಗೋಲು, ಮುದ್ದೇ ಬೇಳೆ ಹುಗ್ಗಿಯನ್ನು ಮಸೆಯಲು, ತಿರುವಲು ಬಳಸುವ ಕೈ ಕೋಲು
ಆಡದಾಸು : ಅಡಚಣೆ, ತೊಂದರೆ(ಆಡದಾಸು ಕೇಳದವ ಅರಸನಲ್ಲ)
ಅರ್ತಿ : ಪ್ರೀತಿ
ಆಯ : ಕಂಬಾರ, ಬಡಿಗರಂತಹ ವೃತ್ತಿಕಾರರಿಗೆ ವರ್ಷಪೂರ್ತಿ ಅವರು ಮಾಡಿ ಕೊಡುವ ಕೃಷಿ ಕೆಲಸಗಳಿಗೆ ಪ್ರತಿಯಾಗಿ ನೀಡುವ ಧಾನ್ಯ ರೂಪದ ಗಳಿಕೆ, ಉತ್ಪನ್ನ, ಅದಾಯ
ಆರು ಚಿಂತನೆಗಳು : ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ವಿಕಾರರೂಪಿ ಗುಣಗಳು
ಆಸ್ತಿ(ಅಸ್ತಿ) ಎಲುಬು

ಇ

ಇಂಜನ : ಅಡವಿ
ಇಂದ್ರಗೃಹ : ಹೃದಯ ಮಂದಿರ
ಇಂಬು : ವಾಸ್ತವ್ಯ, ಆಶ್ರಯ, ಇಂಬುಗೊಡು
ಇಳೆ : ಭೂಮಿ

ಉ

ಉಕ್ಕಳ : ಸ್ವಲ್ಪ, ಉಕ್ಕು, ಉಗಿ, ಉಕ್ಕು ಬರುವುದು, ಕುದಿಬರುವುದು
ಉಡು : ನೀರು, ನಕ್ಷತ್ರ
ಉಡುವಾಹನ : ಇಂದ್ರ
ಉಡುವಾಹನಪತಿ : ವಿಶ್ವಕರ್ಮ
ಉರಗ : ಹಾವು, ಸರ್ಪ

ಎ

ಎಚ್ಚಿಗ : ಹೆಚ್ಚು, ಪ್ರಯೋಗಿಸು, ಬಾಣ ಹೂಡಿ ಹೊಡೆಯುವವ
ಎಡವಟ್ಟು : ತೊಂದರೆ
ಎಡಿ : ನೈವೇದ್ಯ, ಪ್ರಸಾದ
ಎನಸಲ್ಲ : ಪರಿಗಣಿಸದಿರುವುದು, ಗಣನೆಗೆ ತೆಗೆದುಕೊಳ್ಳದೆ ಇರುವುದು

ಏ

ಏಳಲ : ಅನ್ಯಥಾಭಾವಿಸು, ಅಪಹಾಸ್ಯ

ಏಳಲ : ನಿದ್ರೆ, ತಿರಸ್ಕಾರ

ಏಳಲವ : ಸಣ್ಣವ, ನಿಂದೆಗೆ ಗುರಿಮಾಡು, ಅಪಮಾನಿಸುವುದು

ಐ

ಐಮೂಲಿ : ಆಯವಲ್ಲದ, ಐದು ಮೂಲಿಗಳುಳ್ಳದ್ದು, ಚೌಕಾಕಾರವಲ್ಲದ್ದು

ಒ

ಒಂದು ಯೋಜನ : ಎಂಟು ಮೈಲು

ಒಂಟಿನ : ಬದಲಾವಣೆಯಾಗುವ, ಪ್ರಾಸಂಗಿಕವಾಗಿ ನಡೆಯುವ

ಒಕ್ಕಲು : ಕೃಷಿಕ, ರೈತ

ಒಗತನ : ಸಂಸಾರ, ಬದುಕು

ಒರೆಗಲ್ಲು : ಚಿನ್ನವನ್ನು ಪರೀಕ್ಷಿಸುವ ಕಲ್ಲು

ಓ

ಓಜ : ಗುರು, ಶಿಲ್ಪಿ, ಆಚಾರ್ಯ, ಹಿರಿಯ

ಓಲೆ : ಪತ್ರ, ಸುದ್ದಿ

ಕ

ಕಂಜರ : ಸೂರ್ಯ, ಆನೆ, ಬ್ರಹ್ಮ

ಕಂತಿ : ಕರಿ ಬಣ್ಣದ ಹೊಳಪು, ಒಪ್ಪಿಡುವುದು, ಕಂತಿಲಿಂಗ, ಕಂತಿಮಾಡುವುದು

ಕಂಭ : ಆಧಾರ, ಸ್ಥಂಬ, ಕಂಬ ನಿಲ್ಲಿಸುವುದು

ಕಕ್ಕಸ : ಉಸಿರುಗಟ್ಟುವುದು

ಕಟಗಗೇರಿ : ಪ್ರಾಣಿಗಳನ್ನು ಕಡಿದು ಮಾರುವ ಸ್ಥಳ, ಕಟಗರ ಓಣಿ

ಕಡದು ಬಳದು : ಹೆಚ್ಚು ಕಡಿಮೆ, ಆಯ ತಪ್ಪಿದ, ಸಮವಲ್ಲದ, ಹಿರಿದು ಕಿರಿದಾದ

ಕಡದಾಡಿ : ಬಡಿದಾಡುವುದು, ಜಗಳಾಡುವುದು

ಕನಕ : ಬಂಗಾರ, ಚಿನ್ನ

ಕನಿಕಷ್ಟ : ಹೆಚ್ಚಿನ ಕಷ್ಟ

ಕರಮ : ಕರ್ಮ

ಕರಿ : ತೊಗಲನ್ನು ಹದಗೊಳಿಸುವುದು

ಕಲಕಿ : ಕಲ್ಕಿ

ಕಸಗೊಂಡ	:	ಇಸಗೊಂಡ, ಹಿಂಪಡೆದ, ಒತ್ತಾಯಪೂರ್ವಕವಾಗಿ ವಶಪಡಿಸಿಕೊಂಡಿದ್ದು
ಕಾಟಕ	:	ಬೇಡರವ, ಬೇಡಸಮುದಾಯ, ಅಡವಿಯಲ್ಲಿರುವವ
ಕಾದುಂಡು	:	ತಡೆದು ಉಂಡ, ವ್ಯವದಾನದಿಂದ ವರ್ತಿಸಿದ
ಕಾನನ	:	ಕಾಡು, ಅರಣ್ಯ
ಕಾಸಿನೋಡುವುದು	:	ವರೆಗೆ ಹಚ್ಚುವುದು, ವಿಮರ್ಶಿಸುವುದು, ಪರೀಕ್ಷಿಸುವುದು
ಕಾಸು	:	ಹಣ, ಸಂಪತ್ತು
ಕಾಷ್ಟ	:	ಕಟ್ಟಿಗೆ
ಕಾಳಿಕೆ	:	ಮಾದಿಗರ ಮನೆಯಲ್ಲಿನ ನೀರಿನ ಬಾನಿ, ತೊಗಲು ತೊಳೆಯುವ ಡೋಣಿ, ಇದು ಮಾದಿಗರ ಆರಾಧ್ಯ ದೇವತೆ ಮಾತಂಗಿಯ ಪ್ರತೀಕ, ಮಾತಂಗಿ ನವದುರ್ಗಿ ಯರಲ್ಲಿ ಒಂದು ಅವತಾರ
ಕಿಂಕರ	:	ಆಳು, ಸೇವಕ
ಕೀಲು	:	ಅಗಳಿ, ಚಿಲಕ, ಬೆಣೆ, ತಂತ್ರ
ಕೀಸು	:	ತೆಳ್ಳಗೆ, ಕೆತ್ತು
ಕೀಸಿ	:	ಉಜ್ಜು, ಅಗಲಮಾಡು, ತಿಕ್ಕು
ಕ್ಷಿತಿಜ	:	ಭೂಮಿ ಮುಟ್ಟಿದಂತೆ ಕಾಣುವ ಆಕಾಶಭಾಗ, ದಿಗಂತ
ಕುಂಪಳಿಸು	:	ಹಾರು, ಜಿಗಿ
ಕುಂಬಿ(ಣಿ)	:	ಭೂಮಿ
ಕುಂಭಿನಿನರಕ	:	ಒಂದು ನರಕದ ಹೆಸರು
ಕುಕ್ಕ	:	ನಾಯಿ
ಕುಡುವೊಕ್ಕಲು	:	ಒಂದು ಬುಡಕಟ್ಟು, ಸಮುದಾಯ
ಕುಡವ	:	ಕೊಡುವ
ಕುಣಿತ	:	ಆಟ
ಕೂಟ	:	ಕೂಡುವಿಕೆ, ಸಂಯೋಗ
ಕೆಂಜೆವೆಣ್ಣು	:	ಕೆಂಪಾದ ಸ್ತ್ರೀ, ಸುಂದರ ಹೆಣ್ಣು, ಕೆಂಪು ಮೋರೆಯವಳು
ಕೆರವು	:	ಪಾದರಕ್ಷೆ, ಚಪ್ಪಲಿ
ಕೆರವುಗಾಲು	:	ಚಪ್ಪಲಿ ಹಾಕಿದ ಪಾದ
ಕೆಲದಾಡು	:	ಜಗಳವಾಡು, ದ್ವೇಷಮಾಡು, ಬಡಿದಾಡು
ಕೇಣ	:	ಮತ್ಸರ, ಹೊಟ್ಟೆಕಿಚ್ಚು

ಕೈಬಾಚಿ : ಸಣ್ಣ ಬಾಚಿ, ಕುಳಿತು ಕೆತ್ತುವ ಕೈಬಾಚಿ
ಕೊಟ್ಪಾರ : ಉಗ್ರಾಣ, ವಖಾರ
ಕೊನರು : ಚಿಗಿ, ಚಿಗುರು
ಕೊಬ್ಬು : ಮದ, ಗರ್ವ
ಕೊಳಗ : ನಾಲ್ಕು ಬಳ್ಳಗಳ ಪರಿಮಾಣ
ಕೋಣನ ಬುದ್ಧಿ : ಮಂದಬುದ್ಧಿ
ಕೋಟ : ವಕ್ರತೆ
ಕೋರ : ಅದೇ ಹಲ್ಲುಬಂದ ಕೂಸು, ಹಲ್ಲು
ಕೋರನಿಕ್ಕಿ : ಬೆಳೆಯಪಾಲು, ಭಾಗ, ಭಾಗಶಃ, ಆಂಶಿಕ ಭಾಗ
ಕೋರು : ಭೂಮಿಯ ಒಡೆಯ
ಕೌಲು : ಕರಾರು, ಒಪ್ಪಂದ
ಕೌದಿ : ಹಳೆಯ ಚಿಂದಿ ಬಟ್ಟೆಗಳಿಂದ ಹೊಲಿದ ಚದ್ದರು, ಕೌದಿ

ಖ

ಖಂಡುಗ : ಒಂದು ಪ್ರಮಾಣ
ಖಂಡಿತ : ಮತಿಗೆಟ್ಟ

ಗ

ಗಂಡೆರೆಳೆ : ಗಂಡು ಜಿಂಕೆ
ಗಂಟು : ದೇಹದ ಮೇಲಾಗುವ ಹುಣ್ಣು, ಗುಳ್ಳೆ
ಗಂಟಲಗಾಣ : ಮೀನು ಹಿಡಿಯಲು ಬಳಸುವ ಕೊಂಕಿದ ತಂತಿ, ಗಾಳ
ಗದ್ದರಣಿ : ಗುಡುಗು
ಗಹ್ವರ : ಗುಹೆ
ಗಾಣ : ಎಣ್ಣೆ ತೆಗೆಯುವ ಯಂತ್ರ
ಗಾವಳಿ : ತೊಂದರೆ, ಕಿರಿಕಿರಿ, ಸಮಸ್ಯೆ
ಗಾವಳಿಕೆ : ಮೀನು ಹಿಡಿಯುವ ಕೊಂಕಿ, ಗಾಳ, ವಂಕಿ
ಗಾವುದ : ನಾಲ್ಕು ಹರದಾರಿ
ತಡಾಕಿ : ಅಡ್ಡಗಟ್ಟು, ತಡೆ
ಗಿಂಡಿ : ಸಣ್ಣ ಮಿಳ್ಳಿ, ಚಿಕ್ಕ ಪಾತ್ರೆ, ಸಣ್ಣ ಚರಿಗೆ(ಗಿಂಡಿ ಗಾತ್ರದ ಮಳೆ)
ಗುಗ್ಗರಿ : ಕಡಲಿ, ಹೆಸರು, ಗೋದಿ, ಶೇಂಗಾ ಇತ್ಯಾದಿ ಧಾನ್ಯಗಳನ್ನು ಮಿಶ್ರಣ ಮಾಡಿ ಕುದಿಸಿ ತಿನ್ನುವ ಪದಾರ್ಥ, ಉಸುಳಿ

(ಮಗುವಿನ ನಾಮಕರಣದ ಸಂದರ್ಭದಲ್ಲಿ ವಿವಿಧ ಕಾಳು ಗಳನ್ನು ಕುದಿಸಿ ಮಾಡುವ ಪದಾರ್ಥ)

ಗುಜ್ಜ : ಕಿರಿಯ, ಚಿಕ್ಕದು
ಗುಟುಕು : ಹನಿ
ಗುಡಾರ : ಡೇರೆ, ಸೆಡ್ಡು
ಗುದುಕು : ಒದಿಕೆ, ಹೊಡೆ, ಗುದ್ದು
ಗುಂಡ : ವರತೆ, ನೀರುಗುಂಡಿ, ನೀರಿನ ಹೊಂಡ
ಗುರುಗುಟ್ಟು : ಗುರಾಯಿಸು, ಬೆದರಿಸು
ಗೊಡವಿ : ಉಸಾಬರಿ, ಸಹವಾಸ(ಅವರ ಸಹವಾಸವೇ ಬೇಡ)
ಗೂಳಿ : ದೇವರಿಗೆ ಬಿಟ್ಟ ಹೋರಿ, ಮೀಸಲು ಹೋರಿ
ಗೋಜು : ಗೊಂದಲ
ಗೋರಿ : ಸಮಾಧಿ

ಘ

ಘಸಣಿ : ಘರ್ಷಣೆ, ತಿಕ್ಕಾಟ
ಘಾಸ್ಯಾಗು : ತೊಂದರೆಗೀಡಾಗು, ಹೈರಾಣಾಗು, ಬಳಲು, ಸುಸ್ತಾಗು

ಚ

ಚರಿಗೆ : ತಂಬಿಗೆ
ಚಲೋ : ಒಳ್ಳೆಯ
ಚಾಂಡಾಲ : ಕ್ರೂರ, ಕಟುಕ
ಚಾಜ : ಧಾನ್ಯರೂಪದ ಆಯ, ಬಾಬ, ಖುಷಿ ಕೊಡುವುದು
ಚಾರಮರಾಯ : ಹದಗಾರ, ಸೊಗಸುಗಾರ
ಚಿಂತಾಮಣಿ : ಬೇಡಿದ್ದನ್ನು ಕೊಡುವುದು

ಜ

ಜಂಬರ : ಕೆಲಸ, ಉದ್ಯೋಗ, ಕೆಸರುಮಣ್ಣು
ಜಗಲಿ : ಕಟ್ಟೆ
ಜತನ : ಜಾಗೃತಿ
ಜತ್ತಿಗೆ : ನೊಗವನ್ನು ಎತ್ತಿನ ಹೆಗಲಿನ ಮೇಲಿಟ್ಟು ಕಟ್ಟುವ ಚರ್ಮದ ಪಟ್ಟಿಕೆ, ಹಗ್ಗ
ಜಡತಿ : ಜಪ್ತಿ, ಒತ್ತಾಯದ ವಸೂಲಿ, ತಪಾಸಣೆ
ಜಳಕ : ಸ್ನಾನ

ಜಾಜ : ಕೆಂಪು, ಕಾವಿ

ಜಾಲ : ಬಟ್ಟೆ, ಮುಸುಕು

ಠ

ಠಾವು : ಜಾಗ, ತಾವು

ಡಂಬಗಾರಿಕೆ : ಮೋಸ, ಕಪಟ, ಬಡಿವಾರ

ತ

ತಂಡಾಸ : ಬೆಂಕಿಯಲ್ಲಿನ ವಸ್ತುಗಳನ್ನು ತಗೆಯಲು ಮತ್ತು ಹಾಕಲು ಬಳಸುವ ಚಿಮ್ಮಟ

ತಕ್ಕೈಸು : ತೆಕ್ಕೆಹಾಕಿ ಹಿಡಿದುಕೊಳ್ಳು, ಕೈಗಳನ್ನು ಬಳಸಿ ಬಿಗಿಯಾಗಿ ಹಿಡಿದುಕೊಳ್ಳುವುದು

ತಿರುಕು : ಭಿಕ್ಷುಕ

ತ್ರಿವಿಧಿ : ಕಾಯಾ, ವಾಚಾ, ಮನಸಾ ಎನ್ನುವ ಮೂರು ವಿಧದ ಆಚಾರಗಳು

ತುರುಕ : ಮುಸಲ್ಮಾನ

ತುಡುಗು : ಕಳ್ಳತನ

ತೊಗಲುಬೊಂಬೆ : ಮನುಷ್ಯ

ತೊಗೆಚೆಲ್ಲು : ಸೊಕ್ಕುಮುರಿ

ತೊಂಡ : ಸ್ವಂತ ವಿಚಾರವಿಲ್ಲದವ, ಅರೆತಿಳುವಳಿಕೆಯುಳ್ಳವ, ಮತಿಹೀನ

ತೊಡಕಿದ : ಹತ್ತಿದ, ಅಂಟಿದ, ಗಂಟುಬಿದ್ದ

ತ್ರೋಟಕ : ಮೋಸಗಾರ, ನೀತಿಗೆಟ್ಟವ

ತೌಡು : ಹೊಟ್ಟು, ಜೊಳ್ಳು(ಕಾಳನ್ನು ತೂರಿದ ಮೇಲೆ ಉಳಿಯುವ ಜೊಳ್ಳು)

ದ

ದಂಡು : ಸೈನ್ಯ

ದಿಂಡಿ : ದಪ್ಪದೇಹವುಳ್ಳವ, ಮುಠ್ಠಾಳ

ದಶಭುಜ : ಹತ್ತುಭುಜ ಇರುವ ವಿಶ್ವಕರ್ಮ ಪರಮಾತ್ಮ

ದೀನ್ : ಮುಸಲ್ಮಾನ ಧರ್ಮ

ದುಗ್ಗಾಣಿ : ಎರಡು ಪೈಗಳ ಒಂದು ನಾಣ್ಯ

ದುರಾಯಿ ವಿಶೇಷ

ದುರುಳ ದುಷ್ಟ, ಠಕ್ಕ, ಮೋಸಗಾರ

ದೃಷ್ಟ : ನೋಡಿದ, ಕಂಡ, ತಿಳಿದ
ದೆಸೆಗೆಡು : ದಿಕ್ಕೆಡು, ದಾರಿತಪ್ಪು, ಹಾದಿತಪ್ಪು
ದೇವಬ್ರಾಹ್ಮಣ : ವಿಶ್ವಕರ್ಮ
ದೌಲತ್ತು : ಐಶ್ವರ್ಯ, ಅಧಿಕಾರ, ದರ್ಪ

ಧ

ಧ್ಯಾಸ : ಸತತ ಸ್ಮರಣೆ, ನೆನಪು

ನ

ನಂಜು : ವಿಷ
ನಾಟು : ಪಡಿಯಚ್ಚಿನಲ್ಲಿ ಒತ್ತಿ ತೆಗೆದದ್ದು, ಮೊಳಕೆ, ಊರು, ಒತ್ತು
ನಾಸ್ತಿ : ಇಲ್ಲ, ಸುಳ್ಳು
ನಾನಾ ಜೀವ ಜಂತುಗಳು : ಅಂಡಜ, ಪಿಂಡಜ, ಉದ್ಭಿಜ, ಸ್ವೇದಜ ಜೀವಗಳು
ನಿಕ್ಕರ : ನಿಖರತೆ, ಉಕ್ಕಿನ ಗುಣಮಟ್ಟ
ನಿಗ್ರಹ : ನಿಗ್ಗರ, ತೊಂದರೆ, ಸಂಕಟ
ನೀಟು : ಸರಳ, ನಿಷ್ಕಳಂಕ
ನಿರ್ತು : ಕೊಂಕಿಲ್ಲದ, ಸೀದಾ, ಬಗ್ಗಿರದ
ನಿಬ್ಬಣ : ಮದುವೆ, ಲಗ್ನ
ನೀರವಾಹನ : ಇಂದ್ರ, ಮೇಘವಾಹನ
ನೀಲಲೋಹಿ : ಶಿವ
ನಿರ್ವಾಣಿ : ಸಂಸಾರಮುಕ್ತ
ನೀಳು : ನೇರ, ನೆಟ್ಟಗೆ
ನಿಶ್ಚಿಂತ : ಚಿಂತೆಯಿಲ್ಲದವ
ನುಗ್ಗು : ಬಹಳ, ಅಪಾರವಾದ
ನುಸಿ : ಜೋಳ ಮತ್ತು ಗೋದಿಯಲ್ಲಾಗುವ ಕಪ್ಪು ಹುಳು, ಕ್ರಿಮಿ
ನೆಣ : ಕೊಬ್ಬು, ಸೊಕ್ಕು
ನೇಟು : ನೀಟು, ಸೀದಾ, ಸತ್ಯ
ನೊಸಲ : ಹಣೆ

ಪ

ಪಂಚಮುಖದಯ್ಯ : ವಿಶ್ವಕರ್ಮ
ಪಚ್ಚೆ : ಹಸಿರು ಬಣ್ಣದ ರತ್ನ
ಪಟಿಕ : ಸ್ಫಟಿಕ

ಪಟ್ಟಸಾಲಿ : ಪಡಸಾಲಿ, ನಡುಮನೆ
ಪಟ್ಟಕ : ಪಟ್ಟವ ಏರಿದವ, ಸಿಂಹಾಸನ
ಪಡಿಲೆಂಕ : ಆಳು, ಸೇವಕ
ಪಡಿ : ಪ್ರತಿಬಿಂಬ
ಪಣೆ : ಹಣೆ
ಪದರು : ಒಂದನ್ನು ಎರಡಾಗಿ ಮಡಿಚುವುದು, ಪೊರೆ
ಪನ್ನಿ : ತಲೆ ಬೋಳಿಸುವುದು
ಪರುಷ : ಮುಟ್ಟಿದ್ದೆಲ್ಲ ಚಿನ್ನವಾಗುವ ವಸ್ತು
ಪ್ರಮಾಣ : ನಿಯಮ, ಅಳತೆ
ಪರಾಮರಕಿ : ಪರಾಮರ್ಶನ, ವಿಮರ್ಶೆ, ತಿಳಿಸಿ ಹೇಳುವುದು, ಕಾಳಜಿ ಮಾಡುವುದು
ಪಾಕಿ : ಸಂಪತ್ತು, ಒಂದು ಬಗೆಯ ಹಳೆಯ ಕಾಲದ ನಾಣ್ಯ
ಪ್ಯಾಟಿ : ಪಟ್ಟಣ, ನಗರ
ಪಾಪೋಸು : ಜೋಡು, ಚಪ್ಪಲಿ, ಪಾದರಕ್ಷೆ
ಪಿಸರು : ಹೊಲಸು, ಕೊಳಕು, ರುಧಿರ
ಪೀರ : ಮುಸಲ್ಮಾನ ಅನುಭಾವಿ, ಗುರು
ಪುಳ : ಹುಳು
ಪುಸಿ : ಹುಸಿ, ಸುಳ್ಳು, ಸಟೆ
ಪೊಡವಿ : ಭೂಮಿ
ಪೋತರಾಜ : ದುರ್ಗಿಯ ಪೂಜಾರಿ, ಉಗ್ರದೇವತೆಯ ಆರಾಧಕ, ಉಗ್ರಾವತಾರಿ
ಪೋರ : ಹುಡುಗ

ಬ

ಬಂಡಾರ : ಕೋಶ, ದೇವಿಯ ಅಂಗಾರ, ಅರಿಷಿಣ
ಬಂದಾನ : ಯಾತನೆ, ಸಂಕಟ
ಬರ್ಚಿ : ಚೂಪಾದ ಆಯುಧ, ಭಲ್ಲೆ
ಬಡಗಲ : ಉತ್ತರದಿಕ್ಕು
ಬಡದಂಟು : ಒಣದಂಟು, ರಸಹೀನ, ಸತ್ವಹೀನವಾದ ದಂಟು, ಕಣಕಿ
ಬಡಾಯಿ : ಜಂಬ, ಆಡಂಬರ
ಬಡಾಯಿ : ಒಣ ಹೆಮ್ಮೆ

ಬಣಜಿಗ : ವನಿಕ, ವ್ಯಾಪಾರಿ, ಲಿಂಗಾಯತರಲ್ಲಿನ ಒಂದು ಕುಲ
ಬತ್ತೀಸ : ಮೂವತ್ತೆರಡು
ಒಪ್ಪ : ನುನುಪಾದ, ಚಂದವಾದ
ಬರಿ : ಖಾಲಿ
ಬಲುಮೆ : ಶಕ್ತಿ
ಬಸವಿ : ದೇವರಿಗೆ ಬಿಟ್ಟವಳು
ಬಾಗಿನ : ಕಾಣಿಕೆ, ನೈವೇದ್ಯ, ಎಡೆ
ಬಾಧೆ : ದುಃಖ
ಬಾಬ : ಧಾನ್ಯರೂಪದ ಆಯ
ಬಾಳೆ : ಬಾಳುವೆ, ಬಾಳೇವು, ಸಂಸಾರ
ಬಿಂಕ : ಗರ್ವ
ಬಿಜ್ಜಣಿಗ : ಬೀಸಣಿಗ, ಬೀಸುವವ, ಸೇವಕ
ಬಿನುಗು : ಹೀನ, ಕ್ಷುದ್ರ, ಪಾಮರ, ಅಲ್ಪ
ಬೂಟಕ : ಠಕ್ಕ, ಮೋಸಗಾರ, ಸುಳ್ಳುಗಾರ
ಬೆಂಗುಡಿಗಿ : ಕಾಟ, ಕಿರಿಕಿರಿ, ತೊಂದರೆ
ಬೆದಕು : ಹುಡುಕು, ಕೆದುಕು
ಬೆರಕಿ : ಮಿಶ್ರವಾದುದು, ಸರಿಯಿಲ್ಲದ, ಸಿಟ್ಟಿನವ

ಭ

ಭಗ : ಯೋನಿ, ಸ್ತ್ರೀ ಜನನೇಂದ್ರಿಯ
ಭಗೋರ್ದೇವ : ತೇಜಸ್ಸುಳ್ಳವ, ಕಾಂತಿಯುಳ್ಳವ, ಸೂರ್ಯ
ಭಾಜನ : ಆಸರೆ, ತಕ್ಕಸ್ಥಳ
ಭಸಿತ : ಭಸ್ಮ, ವಿಭೂತಿ
ಭಾರತಿ : ಸರಸ್ವತಿ
ಭಾದೆ : ನೋವು
ಭೂಪಾರ : ಅರಸುತನ
ಭೂಸುರರು : ಗೋಬ್ರಾಹ್ಮಣರು, ಬ್ರಾಹ್ಮಣರು

ಮ

ಮಂಡಲ : ಭೂಮಂಡಲ, ಪ್ರಪಂಚ
ಮಂಟುದಾತ : ಅಡವಿಯಲ್ಲಿರುವವರು
ಮಚ್ಚು : ಗುಡಗೋಲು, ಮರದ ಹಿಡಿಯುಳ್ಳ ಸಾಧನ, ಕೊಡಲಿ, ಕತ್ತಿ

ಮಚ್ಚಿಗ : ಇಟ್ಟಿಗೆ, ಗಾರೆ ಕೆಲಸದವ, ಕೂಲಿಕಾರ
ಮಡತ : ಪದರು, ಹೊದಿಕೆ
ಮದ : ಸೊಕ್ಕು
ಮಧುರ : ಸಿಹಿಯಾದುದು, ಜೇನುತುಪ್ಪ
ಮನಗಂಡು : ತಿಳಿದು ತಿಳಿದು, ಖಾತ್ರಿಯಾಗಿ, ಅರಿತುಕೊಂಡ
ಮನ್ತಾಪ : ಮನದಲ್ಲಿಯ ಶಾಪ
ಮಹಮೇರು : ಪರ್ವತ
ಮಲ : ದೋಷ, ಹೊಲಸು
ಮಲಕು : ಒಗಟು, ಬಾಯಿಮಾತು, ಬೆಡಗಿನ ಮಾತು
ಮಲಹರ : ಶಿವ
ಮಲದೇಶ : ಮಲೆನಾಡು, ಬೆಟ್ಟಪ್ರದೇಶ
ಮಸಣಿಸು : ಅಳಿಸು, ಮಸುಕಾಗಿಸು, ನಾಶಮಾಡು
ಮಸವಂಟಿಗೆ : ಏನು ಇಲ್ಲದ ಬಯಲು
ಮಸವಂಟಿಗೆ : ಸುಡುಗಾಡು, ಸ್ಮಶಾನ
ಮಳಲ : ಉಸುಕು, ಮರಳು
ಮಾಣಿ : ಪುರುಷ ಜನನೇಂದ್ರಿಯ
ಮಾಣು : ಸ್ತ್ರೀ ಜನನೇಂದ್ರಿಯ
ಮಾರಿ : ಮೋರೆ, ಮುಖ, ಮೋತಿ
ಮಾರಿ : ಮಾರಿದೇವತೆ
ಮಾರಹರ : ಶಿವ, ಕಾಮನನ್ನು ಸುಟ್ಟವ
ಮಾಸ : ತಿಂಗಳು
ಮಿಣಿ : ಗಳೆ ಹೊಡೆಯುವಾಗ ಎತ್ತಿನ ಹೆಗಲ ನೊಗಕ್ಕೆ, ಕುಂಟಿ, ಕೂರಿಗೆಗಳನ್ನು ಕಟ್ಟಲು ಬಳಸುವ ತೊಗಲಿನ ಪಟ್ಟಿ, ಹಗ್ಗ
ಮುರುಕ : ವಕ್ರತೆ
ಮುಂಡಾಸ : ರುಮಾಲು, ಪಟಗ
ಮುಸಿ : ಬೆಳ್ಳಿಯನ್ನು ಕಾಯಿಸಿ ಕರಗಿಸುವ ಮಣ್ಣಿನ ಸಣ್ಣ ಕುಡಿಕೆ, ಮುಸಿ
ಮೂಡಲ : ಪೂರ್ವದಿಕ್ಕು
ಮೆಟ್ಟ : ತುಳಿದು
ಮೇರೆ : ಸೀಮೆ
ಮೇರೆ : ಗಡಿ, ಎಲ್ಲೆ, ಬದು, ಹದ್ದು

ಯ

ಯಾಸಿ : ಅಂಕುಡೊಂಕು, ಒಂದು ಕಡೆಗೆ ವಾಲಿದ, ವಕ್ರವಾದ, ಬಗ್ಗಿದ

ಯಾಸೀದಾರ : ಕೂರಿಗೆ ಕುಂಟಿಯಲ್ಲಿದ್ದ ವಕ್ರತೆಯನ್ನು ತೆಗೆಯುವ ನಾರಿನ ದಾರ. ಇದು ಕನಿಷ್ಠ ಆರು ಪೂಟು ಉದ್ದವಿರುತ್ತದೆ. ಕೂರಿಗೆ ಕುಂಟಿಯ ಹೂಟೆಯಲ್ಲಿದ್ದ ಸಮಸ್ಯೆಯನ್ನು ತೆಗೆಯಲು ಬಡಿಗ ಬಳಸುವ ದಾರ

ರ

ರಣ : ಯುದ್ಧ

ರಜತ : ಬೆಳ್ಳಿ

ರಾಟಾಣ : ನೂಲು ತೆಗೆಯುವ ಯಂತ್ರ

ರಾಯತನ : ಶ್ರೇಷ್ಠತೆ

ರಾವುತ : ಕುದುರೆ ಸವಾರ

ರುಮ್ಮಿ : ಹಣ, ಪೈ

ರೂಢಿ : ಭೂಮಿ, ಇಳೆ

ರೌಸು : ಆವೇಶ, ರೋಷ

ರೋಹಿತ : ಕೆಂಪುರಕ್ತ

ಲ

ಲಡಾಯಿ : ಜಗಳ, ಕದನ

ಲಳಗಿ : ಊದುಗೊಳವೆ

ಲೆಂಕ : ಸೇವಕ, ಕೂಲಿಯವ

ಲೆಂಡ : ಹಠಮಾರಿ

ಲೆತ್ತ : ಜೂಜು, ಸ್ಪರ್ಧೆ

ಲೋಹ : ಕಬ್ಬಿಣ

ವ

ವಕ್ಕುಡತಿ : ಬೊಗಸೆ

ವರತಿ : ನೀರಿನ ಕುಣಿ, ತೆಗ್ಗು, ನೀರಿನ ಕುಳಿ

ವಸ್ತಿ : ವಸತಿ, ಬಿಡಾರ, ತಂಗು

ವ್ಯಂಗಿ : ಅಣಕ, ಪರಿಹಾಸ, ಕೊಂಕು

ವೃಕ್ಷ : ಮರ, ಗಿಡ

ವಾಗರ : ಓಗರ, ಹುಳಿಅನ್ನ, ವಗರು ಅನ್ನ, ಹುಳಿ ಮಜ್ಜಿಗೆಯಲ್ಲಿ

ಮಾಡಿದ ಅನ್ನ, ಜೋಳದ ನುಚ್ಚಿನಲ್ಲಿ ಹುಳಿಯಿಟ್ಟು ಮಾಡುವ ಬೋನ, ಬಾನ

ವಾಜಿಮಿ : ಸರಿಯಾದದ್ದು
ವ್ಯಾಜ್ಯ : ಜಗಳ
ವಾಯಿ : ಮಾಯೆ, ಮೋಸ, ಕಪಟತನ
ವಾವಿ : ಪ್ರೀತಿ, ಸೇರಿಕೆ, ಸಂಬಂಧ
ವಾಸ : ನೆಲೆ, ಮನೆ
ವಾಸಿ : ಕೀರ್ತಿ, ಮಾನ್ಯತೆ, ಗೌರವ
ವಾಳಿತನ : ರಚ್ಚೆ, ಬೇಡವಾದ
ವಿಗಡ : ಧೈರ್ಯ, ಸಾಹಸ
ವೀಸ : ಭಾಗ, ಹಣ ೧/೩ನೇ ಭಾಗ
ವೈಯಾಳಿ : ವನವಿಹಾರ

ಶ

ಶಿಖಾಮಣಿ : ರಾಜನ ಕಿರೀಟದಲ್ಲಿರುವ ರತ್ನ
ಶಿಡ್ಲಿ : ತೊಗಲಿನ ಚೀಲ
ಶಿಲೆ : ಕಲ್ಲು
ಶಿವಗುಣ : ಉತ್ತಮಗುಣ
ಶ್ರವಣ : ಜೈನ ಸನ್ಯಾಸಿ
ಶ್ರುತಿಕ : ವೇದ ವೇದಾಂಗಗಳನ್ನು ಬಲ್ಲವ

ಷ

ಷಡುಶಾಸ್ತ್ರ : ಆರು ಶಾಸ್ತ್ರಗಳು
ಷಡುಸ್ಥಲ : ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬಿವು ವೀರಶೈವದ ಆರು ಸಾಧನೆ ಹಂತಗಳು
ಸಜ್ಜೆ : ಆಹಾರಧಾನ್ಯ. ಸಜ್ಜೆಹಬ್ಬ ಹರದಿನಗಳಲ್ಲಿ ಮಾಡುವ ರೊಟ್ಟಿಗೆ ವಿಶೇಷ ವಾದಂತಹ ಧ್ಯಾನ. ಬಡವರಿಗೆ ಅದು ದಿನನಿತ್ಯದ ಆಹಾರ ಧಾನ್ಯವೂ ಹೌದು. ಇದು ಮುಂಗಾರಿ ಬೆಳೆ
ಸಬಕಾರ : ಸಾಬೂನು, ಸೋಮ
ಸಠೆ : ಸುಳ್ಳು
ಸತ್ತಿಕರು : ಸತ್ಯವಂತರು
ಸತ್ತಿಗಿ : ಛತ್ರಿ

ಸನ್ನಿ : ಸನ್ನಿಪಾತ, ವ್ಯಸನ, ವಿಷಮಜ್ವರ
ಸರಮಚ್ಚರ : ಶುದ್ಧ ಚಿನ್ನದ ಚೂರು, ಅಚ್ಚ ಚಿನ್ನ
ಸಲ್ಲು : ಸೇರು, ಹೊಂದಿಕೊ
ಸಾಜ : ಸಹಜ, ಕೃತ್ರಿಮವಲ್ಲದ್ದು
ಸ್ವಾದ : ಸತ್ವ, ರುಚಿ
ಸಾರಿ : ಹತ್ತಿರ, ಸಮೀಪ
ಸಾರೀತ : ಹತ್ತಿರ, ಸಮೀಪ
ಸಾಸಿರ : ಸಾವಿರ
ಸಿಡಿಗಟ್ಟು : ದಾರಿತಪ್ಪು
ಸ್ಥಿತಿ : ಇಳೆ, ಭೂಮಿ
ಸುತಾರ : ಸೂತ್ರಧಾರ, ಬಡಿಗ, ಮಯ ಬ್ರಹ್ಮ
ಸುರಭಿ : ಕಾಮಧೇನು, ಧರೆ, ಭೂಮಿ
ಸೂತ್ರ : ದಾರ, ಅಳತೆ
ಸೂತ್ರದಾರ : ಬಡಿಗ
ಸೂತ್ರದಾರ : ಶಿಲ್ಪ ಹಾಗೂ ಶೈವ ವಾಂಙ್ಮಯಗಳಲ್ಲಿ ಸೂತ್ರಧಾರಿ ಪದ ಬಳಕೆಯಲ್ಲಿದೆ.
ಸೂತ್ರದಾರಿ : ಸ್ಥಪತಿ. ಶಿಲ್ಪಿ, ವಾಸ್ತುತಜ್ಞ, ವಿನ್ಯಾಸಕಾರ ಎಂದರ್ಥ
ಸೊಗಸದೆ : ಆನಂದ ಪಡದೆ
ಸೋಮು : ಚಂದ್ರ
ಸೋರುಪ್ಪ : ಪೋಟ್ಯಾಸಿಯಂ ನೈಟ್ರೆಟ್ ಮದ್ದಿಗೆ ಉಪಯೋಗಿಸುವ ಉಪ್ಪು(ಸವಳ)
ಹಂಚಿ : ಒಡೆದ ಮಡಿಕೆಯ ಚೂರು, ಹಂಚಿ ಬಿಲ್ಲೆ

ಹ

ಹಗರಣ : ಪರಗಣ, ಮಾತು, ಹರಟೆ
ಹಚ್ಚಡ : ಬಟ್ಟೆ, ಬರೆ, ಅರಿವೆ
ಹಣಜಿ : ಕಾಡುಹುಲ್ಲು
ಹವಣಿಸು : ಸಿದ್ಧವಾಗು, ನಿರೀಕ್ಷೆ, ಕಾತರ
ಡಲಕಸ : ನಾಶಹೊಂದು, ಲೇಪಿಸು
ಹಲಾಲಕೋರ : ಮೋಸಗಾರ
ಹಲಗಾಲ : ಸಾಯುವಕಾಲ, ಅವಸಾನ

ಹಸನ : ಸ್ವಚ್ಛ, ನಿರ್ಮಲ
ಹಸ್ತ : ಅಂಗೈ
ಹಸ್ತು : ಹಸಿದು
ಹಾಟ : ಸಂಭೋಗದ ನಂತರ ಯೋನಿಯಿಂದ ವಸರುವ ರಸ, ವೀರ್ಯ, ರುಧಿರ
ಹುಗುಳು : ಬಾಯಲ್ಲಿ ಉಂಟಾಗುವ ಬೇನೆ
ಹುಸಿಕ : ಸುಳ್ಳುಗಾರ
ಹೂಟ : ಯುಕ್ತಿ, ಹಂಚಿಕೆ
ಹೆಗ್ಗಡೆ : ಹಿರಿಯ, ದೊಡ್ಡವ (ಪೆರ್ಗಡೆಯ ತತ್ಸಮರೂಪ)
ಹೊಟ್ಟು : ಜೊಳ್ಳು, ಸತ್ವಹೀನ
ಹೊಯ್ಮಾಲಿ : ಸುಳ್ಳಿನ ಕಂತೆ, ಕಟ್ಟುಕತೆ, ಇಲ್ಲದ್ದನ್ನು ಇದ್ದಂತೆ ಹೇಳುವವಳು
ಹೊಲಬು : ರೀತಿ, ಪರಿ, ಮರ್ಮ
ಹೊಲೆ : ಮುಟ್ಟಿನ ಸಂದರ್ಭ, ಗರ್ಭಾವಸ್ಥೆಯ ಪೂರ್ವಸ್ಥಿತಿ
ಹೋರ : ಯೋನಿ, ತೂತು, ಬಿಲ

ತತ್ತ್ವಕ್ಕೆ ತತ್ತ್ವವಾಗಿ ಬೋಧನೆಗೆ ಬೋಧನೆಯಾಗಿ ಏಕಕಾಲಕ್ಕೆ ಆತ್ಮ ಕಲ್ಯಾಣ ಹಾಗೂ ಸಮಾಜ ಕಲ್ಯಾಣವನ್ನು ಹೇಳುವ ತಿಂತಿಣಿ ಮೌನೇಶ್ವರರ ವಚನಸಾಹಿತ್ಯವನ್ನು ತಡವಾಗಿಯಾದರೂ ಸಮಗ್ರವಾಗಿ ಪ್ರಕಟಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಮೌನೇಶ್ವರ ವಚನಗಳ ಮುಖ್ಯ ಆಶಯವೆಂದರೆ ನೈತಿಕತೆಯ ಪುನರುತ್ಥಾನ, ಸಾಮಾಜಿಕ ಹಾಗೂ ಧಾರ್ಮಿಕ ಅಭ್ಯುದಯ, ಸಾಂಸ್ಥಿಕ ಧರ್ಮಕ್ಕಿಂತ ವ್ಯಕ್ತಿ ಹಾಗೂ ಅವನ ಸರ್ವಾಂಗೀಣ ವಿಕಾಸಕ್ಕಾಗಿ ಅರಿವಿನ ನೆಲೆಗಳನ್ನು ಶೋಧಿಸುವ ಸಾಮುದಾಯಿಕ ಪ್ರಜ್ಞೆ ಪ್ರಮುಖವಾಗಿ ಕಾಣುವ ಸಂಗತಿಯಾಗಿದೆ. ಮೌನೇಶ್ವರ ವಚನಗಳ ದೊಡ್ಡ ಶಕ್ತಿ ಎಂದರೆ ಪ್ರಮಾಣಗಳನ್ನು ನಿರಾಕರಿಸುವುದು. ಬಂಧನ ಹಾಗೂ ನಿಯಮಗಳ ಜಡತ್ವದಿಂದ ಬಿಡಿಸಿಕೊಳ್ಳುವುದು. ಆ ಮೂಲಕ ಮನುಷ್ಯ ಸ್ವಾವಲಂಬಿಯಾಗಬೇಕು ತನ್ನನ್ನು ತಾನು ರೂಪಿಸಿಕೊಳ್ಳಬೇಕು. ಅನುಭವ ಮತ್ತು ಜ್ಞಾನ ಕಾಲ ಹಾಗೂ ಸಂದರ್ಭದ ಶಿಶುಗಳೇ ಹೊರತು ಅವು ಇನ್ಯಾರೋ ಬರೆದಿಟ್ಟವುಗಳಲ್ಲ ಎನ್ನುವುದನ್ನು ಎತ್ತಿ ತೋರಿಸುತ್ತಾರೆ. 'ಕಾಯವೇ ಕಾಳಮ್ಮ ಜೀವವೇ ಪರಬ್ರಹ್ಮ' ಎನ್ನುವ ಮೌನೇಶ್ವರರ ಚಿಂತನೆಯಲ್ಲೂ ದೇಹ ಮತ್ತು ಅದರ ವಿಸ್ಮಯಗಳನ್ನು ನಿರಾಕರಿಸದೆ ನಿಗ್ರಹಿಸಿ ಅವುಗಳನ್ನು ವ್ಯಕ್ತಿಯ ಅರಿವಿಗೆ, ಔನ್ಯತ್ಯಕ್ಕೆ ಬಳಸಬೇಕೆನ್ನುವ ತಾತ್ವರ್ಯವಿದೆ.

ತಿಂತಿಣಿ ಮೌನೇಶ್ವರರ ವಚನಗಳ ಪ್ರಕಟಣೆಯ ಇತಿಹಾಸಕ್ಕೆ ಈಗ ಶತಮಾನದ ಸಂಭ್ರಮ. ಸುಮಾರು ನೂರು ವರ್ಷಗಳ ಹಿಂದೆ(೧೯೧೫) ಕರ್ನಾಟಕ ಬುಕ್ ಡಿಪೋ ಬಳ್ಳಾರಿ ಅವರು ಮೊದಲ ಬಾರಿಗೆ ಮೌನೇಶ್ವರ ವಚನಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ನಂತರ ಜೀವಣ್ಣ ಮಸಳಯಂಥವರ ಪ್ರಯತ್ನದಿಂದಾಗಿ ಮೌನೇಶ್ವರ ವಚನಗಳು ವಿವಿಧ ರೀತಿಯಲ್ಲಿ ಜಿಡಿ ಜಿಡಿಯಾಗಿ ಸಂಪಾದನೆಗೊಂಡು ಪ್ರಕಟವಾಗುತ್ತ ಬಂದವು. ಇದೂವರೆಗೆ ಜಿಡಿ ಜಿಡಿಯಾಗಿ ಪ್ರಕಟಗೊಂಡಿದ್ದ ಮೌನೇಶ್ವರರ ವಚನಗಳನ್ನು ನಮ್ಮ ನಾಡಿನ ಹೆಸರಾಂತ ವಿದ್ವಾಂಸರಾದ ಡಾ. ವೀರೇಶ ಬಡಿಗೇರ ಅವರು ಒಂದೆಡೆ ಸಮಗ್ರವಾಗಿ ಹಾಗೂ ಶಿಸ್ತುಬದ್ಧವಾಗಿ ಸಂಪಾದಿಸಿ ಕೊಟ್ಟಿದಕ್ಕೆ ಕನ್ನಡಿಗರು ಕೃತಜ್ಞರಾಗಿದ್ದಾರೆ. ವೀರೇಶ ಅವರು ತಮ್ಮ ಸುದೀರ್ಘ ಹಾಗೂ ಮೌಲಿಕ ಪ್ರಸ್ತಾವನೆಯಲ್ಲಿ ವಿಶಿಷ್ಟ ಹಾಗೂ ವಿಭಿನ್ನ ದೃಷ್ಟಿಕೋನಗಳಿಂದ ಮೌನೇಶ್ವರ ವಚನಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲೊಂದು ಹೊಸ ದಾರಿಯಿದೆ. ಹೊಸ ನಡೆಯಿದೆ. ಇಂಥ ಅಪರೂಪದ ಕೆಲಸವನ್ನು ಮುತುವರ್ಜಿಯಿಂದ ಪ್ರಕಟಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಬಂಜಗೆರೆ ಜಯಪ್ರಕಾಶ ಅವರಿಗೂ ಹಾಗೂ ಸಂಪಾದಕರಾದ ಡಾ. ವೀರೇಶ ಬಡಿಗೇರ ಅವರಿಗೂ ಅಭಿನಂದನೆಗಳು

ಡಾ. ಚಂದ್ರಶೇಖರ ಕಂಬಾರ